# ಮೈಸೂರು ವಿಶ್ವವಿದ್ಯಾನಿಲಯ

ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

# "ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳು–ಒಂದು ಸಾಂಸ್ಕೃತಿಕ ಅಧ್ಯಯನ"

ಪಿಹೆಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು
**ಮಣಿಕಂಠ ಎಸ್.** ಎಂ.ಎ., ಎಂ.ಫಿಲ್, ಬಿ.ಇಡಿ
ಇತಿಹಾಸ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಮಾರ್ಗದರ್ಶಕರು
**ಡಾ|| ಆರ್. ರಾಜಣ್ಣ** ಎಂ.ಎ., ಪಿಹೆಚ್.ಡಿ.
ಪ್ರಾಧ್ಯಾಪಕರು
ಇತಿಹಾಸ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

2018

# ಪ್ರಮಾಣ ಪತ್ರ

**ಶ್ರೀ ಮಣಿಕಂಠ.ಎಸ್**. ಆದ ನಾನು ಇತಿಹಾಸ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾದ **ಡಾ.ಆರ್.ರಾಜಣ್ಣರವರ** ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ನಡೆಸಿದ ಫಲವಾಗಿ **"ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳ–ಒಂದು ಸಾಂಸ್ಕೃತಿಕ ಅಧ್ಯಯನ"** ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದೇನೆ. ನಾನು ಈ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಷಯದಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು ಪಡೆಯಲು ಮಂಡಿಸುತ್ತಿದ್ದೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಈ ಮಹಾಪ್ರಬಂದವು ಮೊದಲು ಯಾವುದೇ ಪದವಿ ಅಥವಾ ಡಿಪ್ಲೋಮಾ ಪದವಿ ಪಡೆಯಲು ಯಾವುದೇ ವಿಶ್ವವಿದ್ಯಾನಿಲಯಕ್ಕೆ ಮಂಡನೆಯಾಗಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ: ಸಂಶೋಧಕರ ಸಹಿ
ಸ್ಥಳ: **(ಮಣಿಕಂಠ ಎಸ್.)**

ಮಾರ್ಗದರ್ಶಕರ ಸಹಿ
**ಡಾ॥ ಆರ್. ರಾಜಣ್ಣ** ಎಂ.ಎ., ಪಿಹೆಚ್.ಡಿ.
ಪ್ರಾಧ್ಯಾಪಕರು
ಇತಿಹಾಸ ಅಧ್ಯಯನ ವಿಭಾಗ,
ಮಾನಸ ಗಂಗೋತ್ರಿ, ಮೈಸೂರು

**ಮುಖ್ಯಸ್ಥರ ಸಹಿ**
ಇತಿಹಾಸ ಅಧ್ಯಯನ ವಿಭಾಗ,
ಮಾನಸ ಗಂಗೋತ್ರಿ, ಮೈಸೂರು

# ಮಾರ್ಗದರ್ಶಕರ ದೃಢೀಕರಣ ಪತ್ರ

**ಶ್ರೀ ಮಣಿಕಂಠ ಎಸ್.** ಇವರು **"ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳ-ಒಂದು ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ. ಪಿಹೆಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧವನ್ನು ಮತ್ತು ಇದರ ಯಾವುದೇ ಭಾಗವನ್ನು ಈ ಹಿಂದೆ ಯಾವುದೇ ಪದವಿಗಾಗಿ, ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:

ಸ್ಥಳ: ಮೈಸೂರು

ಮಾರ್ಗದರ್ಶಕರು

**ಡಾ॥ ಆರ್. ರಾಜಣ್ಣ** ಎಂ.ಎ., ಪಿಹೆಚ್.ಡಿ.

ಪ್ರಾಧ್ಯಾಪಕರು

ಇತಿಹಾಸ ಅಧ್ಯಯನ ವಿಭಾಗ,

ಮಾನಸಗಂಗೋತ್ರಿ, ಮೈಸೂರು

# ಸಂಶೋಧಕರ ದೃಢೀಕರಣ ಪತ್ರ

**"ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳ–ಒಂದು ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ಪಿಹೆಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು **ಡಾ.ಆರ್.ರಾಜಣ್ಣರವರ** ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಸಂಶೋಧನಾ ಮಹಾಪ್ರಬಂಧವನ್ನು ಮತ್ತು ಇದರ ಯಾವುದೇ ಭಾಗವನ್ನು ಈ ಹಿಂದೆ ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಮಂಡಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: ಸಂಶೋಧಕರು

ಸ್ಥಳ: ಮೈಸೂರು **(ಮಣಿಕಂಠ ಎಸ್.)**

# ಕೃತಜ್ಞತೆಗಳು

ನನ್ನ ಸಂಶೋಧನೆಯನ್ನು ಪ್ರಾರಂಭದಿಂದಲೂ ಗಣಿಯಲ್ಲಿ ಚಿನ್ನವನ್ನು ತೆಗೆದಂತೆ ಸಂಶೋಧನೆಯ ಕಾರ್ಯಭಾರವನ್ನು ನಡೆಸಿರುತ್ತೇನೆ. ಈ ಸಂಶೋಧನಾ ಪ್ರಯತ್ನಕ್ಕೆ ನನ್ನ ವಿದ್ಯಾರ್ಥಿ ಜೀವನದಿಂದಲೇ ಪ್ರೋತ್ಸಾಹಿಸಿ ನನಗೆ ಮಾರ್ಗದರ್ಶನ ನೀಡಿದ ನನ್ನ ಗುರುಗಳಾದ ಪ್ರೊ.ಆರ್.ರಾಜಣ್ಣ, ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ ಅವರಿಗೆ ನನ್ನ ಪ್ರೀತಿ ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ. ಅದೇ ರೀತಿ ಆಗಾಗ ನನ್ನ ಸಂಶೋಧನಾ ಚಟುವಟಿಕೆಗಳನ್ನು ಆಸಕ್ತಿಯಿಂದ ವಿಚಾರಿಸುತ್ತಿದ್ದ ನನ್ನ ಸಂಶೋಧನಾ ಮಾರ್ಗದರ್ಶಕರ ಧರ್ಮಪತ್ನಿ ಶ್ರೀಮತಿ ಪಿ.ಆರ್.ಸುಜಾತ ರವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನಾ ಪ್ರಗತಿಯನ್ನು ಆಗಾಗ್ಗೆ ಆಸಕ್ತಿಯಿಂದ ವಿಭಾಗದ ಮುಖ್ಯಸ್ಥರಾದ ಪ್ರೊ.ವೈ.ಹೆಚ್.ನಾಯಕವಾಡಿರವರು ಹಾಗೂ ಪ್ರಾಧ್ಯಾಪಕರುಗಳಾದ ಪ್ರೊ.ಅಶ್ವಥನಾರಾಯಣ ರವರು, ಪ್ರೊ.ಎನ್.ಸರಸ್ವತಿರವರು, ಪ್ರೊ.ಕೆ.ಸದಾಶಿವರವರು, ಡಾ.ಜಿ.ಟಿ.ಸೋಮಶೇಖರ್‌ರವರು, ಡಾ. ಪುಟ್ಟಯ್ಯರವರು, ಡಾ.ಹೆಚ್.ಎ.ಗಂಗಮ್ಮರವರು, ಡಾ.ಸಿ.ಗುರುಸಿದ್ದಯ್ಯರವರು ಇವರೆಲ್ಲರೂ ಸಹ ಸಂಶೋಧನೆಗೆ ಪೂರಕವಾದ ವಿಚಾರವನ್ನು ತಿಳಿಸಿಕೊಟ್ಟಿದ್ದಾರೆ. ಹಾಗೆಯೇ ಇತಿಹಾಸ ವಿಭಾಗದ ಕಛೇರಿಯ ಆಡಳಿತ ವರ್ಗದವರಾದ ಪದ್ಮಮ್ಮ, ಗೌಸಿಯಾ ಬಾನು, ರೇಣುಕಾ, ರವಿ, ಪ್ರವೀಣ್ ಇವರೆಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನನ್ನ ಅಧ್ಯಯನಕ್ಕೆ ಪ್ರೇರಣೆ ನೀಡಿ, ವಿದ್ಯಾಭ್ಯಾಸ ಮತ್ತು ಭವಿಷ್ಯದ ಜೀವನದ ಬಗ್ಗೆ ಕಾಳಜಿಯನ್ನಿಟ್ಟು ತಮ್ಮ ಜೀವನವನ್ನು ಧಾರೆ ಎರೆಯುವ ಮೂಲಕ ಎಲ್ಲಾ ರೀತಿಯಿಂದಲೂ ಪ್ರೋತ್ಸಾಹ ಮತ್ತು ನೆರವು ನೀಡಿದ ನನ್ನ ಪ್ರೀತಿಯ ಕುಟುಂಬವರ್ಗದವರಾದ, ದಿ.ಜವನನಾಯಕ, ದಿ.ಚಿಕ್ಕಮಾದಮ್ಮ, ದಿ.ಸಿದ್ದನಾಯಕ, ದಿ.ಸವಿತ, ತಾಯಿ ಮಹದೇವಮ್ಮ, ಅಣ್ಣ ಬಸವರಾಜು, ತಮ್ಮ ಸ್ವಾಮಿ, ಅತ್ತಿಗೆ ಲಕ್ಷ್ಮಿ, ಪಾಪು ಸೋನಿಕ ಹಾಗೂ ನನ್ನ ಎಲ್ಲಾ ಕುಟುಂಬ ವರ್ಗದವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನೆಗೆ ನಿರಂತರವಾಗಿ ಪ್ರೋತ್ಸಾಹಿಸಿದ ನನ್ನ ಸ್ನೇಹಿತರಾದ ಶ್ರೀ ಶಿವಶಂಕರಮೂರ್ತಿ ಡಿ.ಆರ್., ಶ್ರೀ ಮಹೇಶ್ ಕೆ., ಶ್ರೀ ವಿಶ್ವನಾಥ್ ಎಂ. ಶ್ರೀ ನವೀನ್ ಕುಮಾರ್ ಆರ್., ಶ್ರೀ ಶ್ರೀಕಾಂತ, ಶ್ರೀ ಬಿಳಿಗಿರಿ, ಶ್ರೀ ಚಂದ್ರಶೇಖರ್ ಎನ್., ಶ್ರೀ ದಿವಾಕರ, ಶ್ರೀ ನಾಗರಾಜನಾಯಕ, ಶ್ರೀ ನರೇಂದ್ರ, ಶ್ರೀ ಸೋಮಶೇಖರ್, ಶ್ರೀ ಸ್ವಾಮಿ ವೈ.ಡಿ.ವಿ., ಶ್ರೀ ಶ್ಯಾಮ್, ಶ್ರೀ ಮಣಿಕಂಠ, ಶ್ರೀ ಅನಿಲ್, ಶ್ರೀ ಸ್ವಾಮಿ ಮತ್ತು ವಸಂತ ಕುಮಾರ್ ದೊಡ್ಡಮಗ್ಗೆ, ಧನುನಾಯಕ್, ಮೂರ್ತಿ ಬಿ., ಉಮೇಶ್, ಸೂರಪ್ಪ, ದುಂಡಯ್ಯ, ರಾಜೇಶ್, ಪ್ರಸಾದ್,

ಚಂದ್ರಮೌಳಿ, ರಂಜಿತ್, ಪ್ರದೀಪ್‌ರವರಿಗೂ ಹಾಗೂ ಸಂಶೋಧನೆಯ ಎಲ್ಲಾ ಸಹ ಸ್ನೇಹಿತರನ್ನು ಈ ಸಮಯದಲ್ಲಿ ನೆನಪಿಸಿಕೊಳ್ಳುತ್ತೇನೆ.

ಕೊನೆಯದಾಗಿ ನನ್ನ ಸಂಶೋಧನೆಗೆ ಅವಕಾಶ ನೀಡಿದ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವರ್ಗಕ್ಕೂ, ವಿಶ್ವವಿದ್ಯಾನಿಲಯದ ಗ್ರಂಥಾಲಯದ ಎಲ್ಲಾ ಆಡಳಿತವರ್ಗಕ್ಕೂ, ಇತಿಹಾಸ ವಿಭಾಗದ ಗ್ರಂಥಾಲಯದ ಆಡಳಿತ ವರ್ಗಕ್ಕೂ, ಮೈಸೂರು ಅರಮನೆ ಆವರಣದಲ್ಲಿರುವ ಪುರಾತತ್ವ ಗ್ರಂಥಾಲಯಕ್ಕೂ, ಅಂದವಾಗಿ ಡಿಟಿಪಿ ಮಾಡಿಕೊಟ್ಟ ಶ್ರೀ ಸಿದ್ದರಾಜುರವರಿಗೂ, ನನ್ನ ಸಂಶೋಧನಾ ಕ್ಷೇತ್ರ ಕಾರ್ಯದಲ್ಲಿ ಹಲವು ದೇವಾಲಯಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಆಯಾ ಊರಿನ ಹಿರಿಯ ನಾಗರೀಕರಿಗೂ ಅತ್ಯಂತ ಹೃದಯಪೂರ್ವಕವಾಗಿ ಕೃತಜ್ಞತೆ ಸಲ್ಲಿಸುತ್ತೇನೆ.

**ಮಣಿಕಂಠ ಎಸ್**.
ಸಂಶೋಧಕರು

# ಪರಿವಿಡಿ


ಪುಟಸಂಖ್ಯೆ

**ಅಧ್ಯಾಯ–1** 1–31

1.1. ಪೀಠಿಕೆ

1.2. ಭೌಗೋಳಿಕ ಲಕ್ಷಣಗಳು

1.3. ಅಧ್ಯಯನದ ಉದ್ದೇಶ

1.4. ಅಧ್ಯಯನದ ವ್ಯಾಪ್ತಿ

1.5. ಅಧ್ಯಯನದ ಸ್ವರೂಪ

1.6. ಅಧ್ಯಯನದ ವಿಧಾನ

1.7. ಅಧ್ಯಯನದ ಮಹತ್ವ

1.8. ಐತಿಹಾಸಿಕ ಹಿನ್ನೆಲೆ

1.9. ಸಾಹಿತ್ಯ ಸಮೀಕ್ಷೆ

**ಅಧ್ಯಾಯ–2** 32–68

**ದೇವಾಲಯಗಳ ಉಗಮ ಮತ್ತು ಬೆಳವಣಿಗೆ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಹಿನ್ನೆಲೆ**

2.1. ದೇವಾಲಯಗಳ ಉಗಮ ಮತ್ತು ಬೆಳವಣಿಗೆ

2.2. ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಹಿನ್ನೆಲೆ

2.3. ಆಯಾ ಭಾಷೆ, ಧರ್ಮಕ್ಕೆ ಸಂಬಂಧಪಟ್ಟಂತೆ ಶಾಸನಗಳ ಸಂಖ್ಯೆ ಮತ್ತು ಪಟ್ಟಿ

**ಅಧ್ಯಾಯ–3** 69–171

**ಗುಂಡ್ಲುಪೇಟೆ ತಾಲ್ಲೂಕಿನ ಶೈವ ದೇವಾಲಯಗಳು**

3.1. ಶೈವಧರ್ಮದ ಬೆಳವಣಿಗೆ

3.2. ಶೈವ ದೇವಾಲಯಗಳು

3.3. ವೀರಶೈವ ಪಂಥದ ಮಠಗಳು

**ಅಧ್ಯಾಯ–4** 172–245

**ಗುಂಡ್ಲುಪೇಟೆ ತಾಲ್ಲೂಕಿನ ವೈಷ್ಣವ ದೇವಾಲಯಗಳು**

4.1. ವೈಷ್ಣವ ಧರ್ಮದ ಬೆಳವಣಿಗೆ

4.2. ವೈಷ್ಣವ ದೇವಾಲಯಗಳು

**ಅಧ್ಯಾಯ-5** 246-264

**ಗುಂಡ್ಲುಪೇಟೆ ತಾಲ್ಲೂಕಿನ ಜೈನ ಬಸದಿಗಳು**

5.1. ಗುಂಡ್ಲುಪೇಟೆ ತಾಲ್ಲೂಕಿನ ಜೈನ ಬಸದಿಗಳ ಹಿನ್ನೆಲೆ.

5.2. ಶಾಸನೋಕ್ತ ಜೈನ ಬಸದಿಗಳು

5.3. ಜೈನರ ಸಲ್ಲೇಖನ ಆಚರಣೆಗಳು

5.4. ಜೈನರ ಹಬ್ಬದ ಆಚರಣೆಗಳು

**ಅಧ್ಯಾಯ-6** 265-309

**ಇತರ ಪಂಥದ ದೇವಾಲಯಗಳು**

6.1. ಶಕ್ತಿ ಪ್ರಧಾನ ದೇವಾಲಯಗಳು

6.2. ನಾಗದೇವತಾರಾಧನೆ

6.3. ಸೂರ್ಯಗ್ರಹಣ

6.4. ಕುಂತಿಪೂಜೆ

6.5. ರಾವಳೇಶ್ವರ ಸಂಸ್ಕೃತಿ

6.6. ರಾಕಸಮ್ಮ ಸಂಸ್ಕೃತಿ

6.7. ತಮಿಳು ಸಂಸ್ಕೃತಿ

6.8. ಕಾಡು ಬುಡಕಟ್ಟು ಜನರ ಧಾರ್ಮಿಕತೆಗಳು

6.9. ಬುಡಕಟ್ಟು ಸೋಲಿಗರ ಹಬ್ಬದ ಆಚರಣೆಗಳು

**ಅಧ್ಯಾಯ-7** 310-368

**ಗುಂಡ್ಲುಪೇಟೆ ತಾಲ್ಲೂಕಿನ ಬೃಹತ್ ಶಿಲಾಯುಗದ ನೆಲೆಗಳು**
**ವೀರಗಲ್ಲು-ಮಾಸ್ತಿಗಲ್ಲು-ಇನ್ನಿತರ ಬಿಡಿಶಿಲ್ಪಗಳು**

7.1. ಗುಂಡ್ಲುಪೇಟೆ ತಾಲ್ಲೂಕಿನ ಬೃಹತ್ ಶಿಲಾಯುಗದ ನೆಲೆಗಳು

7.2. ವೀರಗಲ್ಲುಗಳು,

7.3. ಮಾಸ್ತಿಕಲ್ಲುಗಳು,

7.4. ಇನ್ನಿತರ ಬಿಡಿಶಿಲ್ಪಗಳು

**ಅಧ್ಯಾಯ-8**

**ಉಪಸಂಹಾರ** 369-381

ಗ್ರಂಥಸೂಚಿ 382-390

ನಕ್ಷೆಗಳು 391

ಛಾಯಾಚಿತ್ರಗಳು 392-442

# ಅಧ್ಯಾಯ–1

## 1.1. ಪೀಠಿಕೆ

ಗುಂಡ್ಲುಪೇಟೆ ತಾಲೂಕು ತಮಿಳುನಾಡು, ಕೇರಳ ಮತ್ತು ಕರ್ನಾಟಕ ಈ ಮೂರು ರಾಜ್ಯಗಳು ಸೇರುವ ಭಾಗದಲ್ಲಿದ್ದು. ಕ್ರಿ.ಶ.1887 ರಿಂದಲೂ ಗುಂಡ್ಲುಪೇಟೆ ಒಂದು ತಾಲ್ಲೂಕು ಕೇಂದ್ರವಾಗಿ ಮೈಸೂರು ಜಿಲ್ಲೆಗೆ ಸೇರಿತ್ತು.[1] ನಂತರ 1997ರಲ್ಲಿ ಮೈಸೂರು ಜಿಲ್ಲೆಯಿಂದ ವಿಭಜನೆಗೊಂಡು ಚಾಮರಾಜನಗರ ಜಿಲ್ಲೆಗೆ ಸೇರಿತು.[2] ಈ ತಾಲ್ಲೂಕು ಕಸಬಾ, ಬೇಗೂರು, ತೆರಕಣಾಂಬಿ ಮತ್ತು ಹಂಗಳ ಎಂಬ 4 ಹೋಬಳಿ ಕೇಂದ್ರಗಳನ್ನು[3] ಹಾಗೂ ಒಟ್ಟು 181 ಗ್ರಾಮಗಳನ್ನು ಹೊಂದಿದ್ದು ಅದರಲ್ಲಿ 21 ಗ್ರಾಮಗಳಲ್ಲಿ ಯಾವುದೇ ರೀತಿಯಲ್ಲಿ ಜನವಸತಿ ಇಲ್ಲ.[4] 2011 ರ ಜನಗಣತಿಯ ಪ್ರಕಾರ 2,22932 ಜನಸಂಖ್ಯೆಯನ್ನು ಹೊಂದಿದೆ.[5] ಇದು ಬೆಂಗಳೂರಿನಿಂದ 199 ಕಿ.ಮೀ., ಮೈಸೂರಿನಿಂದ 61 ಕಿ.ಮೀ. ಅಲ್ಲದೆ ಊಟಿಯಿಂದ 104 ಕಿ.ಮೀ., ಸುಲ್ತಾನ್ ಬತ್ತೇರಿಯಿಂದ 54 ಕಿ.ಮೀ., ಜಿಲ್ಲಾ ಕೇಂದ್ರವಾದ ಚಾಮರಾಜನಗರದಿಂದ ಸುಮಾರು 39 ಕಿ.ಮೀ. ದೂರದಲ್ಲಿ ಗುಂಡ್ಲುಪೇಟೆ ಇದೆ.[6] ಈ ತಾಲೂಕಿನಲ್ಲಿ ಅನೇಕ ರಾಜಮನೆತನಗಳು ಆಳ್ವಿಕೆ ನೆಡೆಸಿರುವುದು ಅನೇಕ ಆಧಾರಗಳಿಂದ ತಿಳಿದು ಬರುತ್ತದೆ. ಎಫಿಗ್ರಾಫಿಯ ಕರ್ನಾಟಕ ಸಂಪುಟ ಮೂರರ ಪ್ರಕಾರ ನೋಡುವುದಾರೆ. ಇಲ್ಲಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಉಮ್ಮತ್ತೂರಿನ ಪಾಳೇಗಾರರು, ಮೈಸೂರು ಒಡೆಯರ್, ಟಿಪ್ಪು ಸುಲ್ತಾನ್ ಮತ್ತು ಇನ್ನಿತರರು ಆಡಳಿತ ನೆಡೆಸಿರುವುದು ಶಾಸನಗಳ ಹಿನ್ನಲೆಯಿಂದ ಕಂಡು ಬರುತ್ತದೆ.[7]

ಗುಂಡ್ಲುಪೇಟೆಯನ್ನು 10ನೇ ಶತಮಾನದಲ್ಲಿ 'ಕುಡುಗುನಾಡು', 12–13ನೇ ಶತಮಾನದಲ್ಲಿ 'ಪ್ರಸನ್ನವಿಜಯಪುರ', 17ನೇ ಶತಮಾನದಲ್ಲಿ 'ದೇವನಗರಿ' ಎಂದು ಕರೆಯಲಾಗಿದ್ದು.[8] ಗುಂಡ್ಲುಪೇಟೆ ತಾಲ್ಲೂಕಿನ **'ಮಾದಾಪಟ್ಟಣ ಶಾಸನದಲ್ಲಿ ಮೊದಲಬಾರಿಗೆ 'ಗುಂಡ್ಲುಪೇಟೆ ಎಂಬ ಹೆಸರನ್ನು ಉಲ್ಲೇಖಿಸಲಾಗಿದೆ'**. ಈ ಶಾಸನದ ಕಾಲ ಕ್ರಿ.ಶ.1751,[9] ಗುಂಡಲು (ಕೌಂಡಿನ್ಯ) ನದಿ ತೀರದಲ್ಲಿ ಈ ನೆಲೆ ಬೆಳೆದು ಬಂದಿರುವ ಕಾರಣ ಈ ನೆಲೆಗೆ ಗುಂಡ್ಲುಪೇಟೆ ಎಂಬ ಹೆಸರು ಬಂದಿತು ಎಂಬ ಕಥೆಯು ಸಹ ಇದೆ.

ಪಶ್ಚಿಮಭಾಗ, ದಕ್ಷಿಣಭಾಗ ಮತ್ತು ಪೂರ್ವಭಾಗದಲ್ಲಿ ಈ ಪ್ರದೇಶವು ಹೆಚ್ಚು ಹೆಚ್ಚಾಗಿ ವಿಶಾಲವಾದ ದಟ್ಟ ಅರಣ್ಯಗಳಿಂದಲೂ, ಬೆಟ್ಟಗುಡ್ಡಗಳಿಂದಲೂ ಸುತ್ತುವರಿದ ಪ್ರದೇಶವಾಗಿದ್ದು. ಎರಡು ಸಾವಿರ ವರ್ಷಗಳ ಹಿಂದೆ ಪ್ರಾಯಶಃ ಈ ಭಾಗವು ಹೆಚ್ಚಾಗಿ ದಟ್ಟವಾದ ಅರಣ್ಯದಿಂದ ಕೂಡಿದ್ದು ಹೆಚ್ಚಿನ ಪ್ರಮಾಣದಲ್ಲಿ ಮಳೆಯನ್ನು ಹೊಂದಿತ್ತು. ಈ ಪ್ರದೇಶವು ಮೂರು

ಕಡೆಯಿಂದಲೂ ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ ಹೊರಗಿನ ಜನಸಂಪರ್ಕ ಕಡಿಮೆಯಾಯಿತು. ಆದಕಾರಣ ಯಾವುದೇ ಜನಾಂಗದ ಸಂಸ್ಕೃತಿಯ ಪ್ರವೇಶ ಕೇವಲ ಮಧ್ಯ ಕರ್ನಾಟಕದ ಮುಖಾಂತರವಾಗಿ ದಕ್ಷಿಣಕ್ಕೆ ಬರಬೇಕಾಗಿತ್ತು. ಇಂತಹ ಮೂರು ದಿಕ್ಕುಗಳಲ್ಲಿ ಅಭೇದ್ಯವಾದ ಚೀಲದಂತೆ ಇದ್ದಂತಹ ನಾಡಿಗೆ ಸಂಸ್ಕೃತಿಯ ಪ್ರವೇಶ ಕೇವಲ ಉತ್ತರ ದಿಕ್ಕಿನಿಂದ ಬರಬೇಕಾಗಿರುವುದರಿಂದ ಇಲ್ಲಿಗೆ ರಾಜಕೀಯ ಶಕ್ತಿಗಳ ಪ್ರವೇಶವು ಕಡಿಮೆಯಾಗಿತ್ತು.

ದಕ್ಷಿಣ ಕರ್ನಾಟಕದ ದಕ್ಷಿಣ ಮತ್ತು ಆಗ್ನೇಯ ಭಾಗಗಳು ಮೂಲತಃ ತಮಿಳು ಸಂಸ್ಕೃತಿಯ ಪ್ರಭಾವದಲ್ಲಿದ್ದಂತೆ ಕಂಡುಬರುತ್ತದೆ. ಇದರಿಂದಾಗಿ ಕದಂಬ ಮಯೂರಶರ್ಮನು ಪಲ್ಲವ ರಾಜ್ಯದಿಂದ ಈ ಗಿರಿದುರ್ಗ ಪ್ರದೇಶಗಳನ್ನು ಸುಲಭವಾಗಿ ಅವರಿಂದ ಕಸಿದುಕೊಂಡು ಸ್ವಂತವಾದ ಕದಂಬ ರಾಜ್ಯವನ್ನು ಸ್ಥಾಪಿಸುವುದಕ್ಕೆ ಕಾರಣವಾಗಿತ್ತು. ರಾಜಕೀಯ ಸಂಸ್ಕೃತಿಯಿಂದ ಹಾಗೂ ರಾಜಕೀಯ ಶಕ್ತಿಗಳಿಗೆ ಮತ್ತು ರಾಜಕೀಯ ಹಸ್ತ ಕ್ಷೇತ್ರಕ್ಕೆ ಈ ಕ್ಷೇತ್ರ ದುರ್ಗಮವಾಗಿದ್ದುದರಿಂದಲೇ ಮೌರ್ಯ ಸಾಮ್ರಾಜ್ಯ ಚಿತ್ರದುರ್ಗದವರೆಗೆ ಮಾತ್ರ ಅಂದಿನ ಕಾಲಕ್ಕೆ ವಿಸ್ತರಿಸಿತ್ತು. ಮೌರ್ಯರ ನಂತರ ಬಂದಂತಹ ಶಾತವಾಹನರು ಕೂಡ ದಕ್ಷಿಣ ಕರ್ನಾಟಕದ ದಕ್ಷಿಣ ಭಾಗಗಳಿಗೆ ತಮ್ಮ ರಾಜಕೀಯ ಶಕ್ತಿಯನ್ನು ವಿಸ್ತರಿಸುವುದಕ್ಕೆ ಪ್ರಯತ್ನಿಸಲಿಲ್ಲ. ಹಾಗಾಗಿ ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಜನವಸತಿ ಇದ್ದರೂ ರಾಜಕೀಯ ಬಣಗಳ ಛಾಯೆ ಮತ್ತು ಛಾಪು ಕ್ರಿ.ಶ. ದ ಪ್ರಾರಂಭದ ಶತಮಾನಗಳಲ್ಲಿ ಯಾವುದೇ ಶಾತವಾಹನರ ಶಾಸನವಾಗಲಿ ಕದಂಬರ ಶಾಸನವಾಗಲಿ, ಚಾಲುಕ್ಯರ ಶಾಸನವಾಗಲಿ ಈ ಗುಂಡ್ಲುಪೇಟೆ ಪ್ರಾಂತ್ಯದಲ್ಲಿ ಕಂಡುಬರುವುದಿಲ್ಲ. ಕಾವೇರಿ ನದಿ ತೀರದವರೆಗೆ ಸಾಮ್ರಾಜ್ಯವನ್ನು ವಿಸ್ತರಿಸಿದಂತಹ ಚಾಲುಕ್ಯ ಚಕ್ರವರ್ತಿ ಪುಲಕೇಶಿ ದಕ್ಷಿಣದ ತಮಿಳುನಾಡಿನಲ್ಲಿ ತನ್ನ ಸಾಮ್ರಾಜ್ಯವನ್ನು ಕಾವೇರಿಯವರೆಗೆ ವಿಸ್ತರಿಸಿದವನೇ ಹೊರತು, ಕರ್ನಾಟಕದಲ್ಲಿ ಕಾವೇರಿಯವರೆಗೆ ಈತನ ರಾಜ್ಯ ವಿಸ್ತಾರವಾಗಲಿಲ್ಲ ಎಂಬುದು ಇಲ್ಲಿ ಗಮನಿಸಬೇಕಾದ ವಿಚಾರವಾಗಿದೆ.

ಇಮ್ಮಡಿ ಪುಲಕೇಶಿಯು ಗಂಗರನ್ನು ಯುದ್ಧದಿಂದ ಸೋಲಿಸಿ ಅವರನ್ನು ಮಾಂಡಳೀಕರನ್ನಾಗಿ ಮಾಡಿಕೊಂಡಿದ್ದನೆಂದು ಹೇಳಲಾಗಿದೆ. ಆಗ ಗಂಗರು ಸಹ ಹೆಚ್ಚಾಗಿ ತಮ್ಮ ರಾಜ್ಯವನ್ನು ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳ ಮೇಲೆ ಹೆಚ್ಚು ಪ್ರಧಾನವಾಗಿ ತಮ್ಮ ಆಳ್ವಿಕೆ ಮಾಡಿದವರೇ ಹೊರತು, ಗುಂಡ್ಲುಪೇಟೆಯ ಭಾಗದಲ್ಲಿ ಹೆಚ್ಚು ಅಧಿಕಾರ ನಡೆಸಿಲ್ಲ. ಆದರೆ ಈ ಭಾಗದಲ್ಲಿದ್ದ ಪ್ರಾಂತ್ಯಗಳ ಮೇಲೆ ಕೇವಲ ಸಾಂಕೇತಿಕವಾಗಿ ತಮ್ಮ ಹತೋಟಿಯನ್ನು ಹೊಂದಿದ್ದು ನಂತರ ರಾಷ್ಟ್ರಕೂಟರ ಪ್ರಭಾವ ದಕ್ಷಿಣ ಕರ್ನಾಟಕದ

ಉತ್ತರ ಭಾಗದ ಮೇಲೆ ಹೆಚ್ಚಾಯಿತೋ ಆಗ ತಮ್ಮ ರಾಜಕೀಯ ಕೇಂದ್ರವನ್ನು ದಕ್ಷಿಣದ ತುದಿಯಲ್ಲಿರುವ ತಲಕಾಡಿಗೆ ರಾಜಧಾನಿಯನ್ನು ವರ್ಗಾಯಿಸಿಕೊಂಡರು. ಇದು ನಡೆದದ್ದು, ಕ್ರಿ.ಶ. 7ನೇ ಶತಮಾನದಲ್ಲಿ ಈ ಕಾಲಕ್ಕಾಗಲೇ ದಕ್ಷಿಣ ಕರ್ನಾಟಕದ ದಕ್ಷಿಣ ಭಾಗಗಳಲ್ಲಿ ಜನಜೀವನ ಸಾಕಷ್ಟು ಗಣನೀಯವಾಗಿ ವಿಕಾಸಗೊಂಡಿತ್ತು.

ಆದಿ ಚಾರಿತ್ರಿಕ ಯುಗದಲ್ಲಿ ಉತ್ತರ ಕರ್ನಾಟಕದಲ್ಲಿ ದೊರೆಯುವ ರೀತಿಯಲ್ಲಿ ಜನಜೀವನ ಐತಿಕವಾದ ಭೋಗ ವಸ್ತುಗಳು, ಮಡಿಕೆಗಳು ಇತರ ಮಣ್ಣಿನ ಪಾತ್ರೆಗಳು ಬಳೆಗಳು, ದಂತದ ಮಣಿಗಳು, ಶಂಖದ ಮಣಿಗಳು, ಗಾಜಿನಕಲ್ಲಿನ ಮಣಿಗಳು, ಕಬ್ಬಿಣದ ಉಪಕರಣಗಳು, ಇಟ್ಟಿಗೆಗಳು, ಹೆಂಚಿನ ಚೂರುಗಳು ಮುಂತಾದವುಗಳೆಲ್ಲವೂ ಇಲ್ಲಿಯೂ ಅದೇ ಶತಮಾನಗಳಿಗೆ ಸಂಬಂಧಿಸಿದಂತೆ ದೊರೆಯುತ್ತದೆ. ಇದರಿಂದಾಗಿ ಉತ್ತರದ ಸಂಸ್ಕೃತಿಯಿಂದ ಹಿಡಿದು ದಕ್ಷಿಣ ತುದಿಯ ತಲಕಾಡಿನವರೆಗೆ ಹೆಚ್ಚು ಕಡಿಮೆ ಒಂದೇ ರೀತಿಯಾದ ಸಾಮಾಜಿಕ ಜನಜೀವನ ಕರ್ನಾಟಕದಲ್ಲಿ ನೆಲೆಸಿತ್ತು ಎಂಬ ವಿಷಯ ಸ್ಪಷ್ಟವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಬೌದ್ಧಧರ್ಮ ಹೆಚ್ಚು ವ್ಯಾಪಕವಾಗಿ ಪಸರಿತ್ತು. ದಕ್ಷಿಣ ಕರ್ನಾಟಕದಲ್ಲಿ ಅದಕ್ಕೆ ಸಮನಾಗಿ ಜೈನಧರ್ಮವು ಅಲ್ಲಲ್ಲಿ ತನ್ನ ಪ್ರಭಾವವನ್ನು ಹರಡಿರುವುದರಿಂದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿಯೂ ಜೈನ ನೆಲೆಗಳು ಕಂಡು ಬಂದಿದೆ.

ಜನ ಸಂಸ್ಕೃತಿ ದಕ್ಷಿಣ ಕರ್ನಾಟಕದ ದಕ್ಷಿಣ ಭಾಗದಲ್ಲಿ ಇದ್ದರೂ ರಾಜಕೀಯ ಸಂಸ್ಕೃತಿ ಕಂಡುಬರುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಮೂರು ದಿಕ್ಕುಗಳಲ್ಲಿದ್ದ ಭೌಗೋಳಿಕ ರಕ್ಷಣೆ ಹಾಗೂ ಉತ್ತರ ಭಾಗದಲ್ಲಿ ಇದ್ದ ಗಂಗರಾಜ್ಯ. ಪ್ರಾಚೀನ ಗಂಗರು, ಚಾಲುಕ್ಯರ ಮಾಂಡಳೀಕರೆನಿಸಿಕೊಂಡು ಕೋಲಾರ, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಆಳುತ್ತಿದ್ದರು. ಇದರಿಂದ ದಕ್ಷಿಣ ತುದಿಯ ಭಾಗಗಳು ಸಹಜವಾಗಿಯೇ ಅವರ ಅಧೀನದಲ್ಲಿದ್ದವು. ದಕ್ಷಿಣ ಕರ್ನಾಟಕದಲ್ಲಿ ಗಂಗ–ನೊಳಂಬರ ನಂತರದ ಕಾಲದಲ್ಲಿ ಚೋಳ ಸಂಸ್ಕೃತಿಯ ಪ್ರಭಾವಕ್ಕೆ ತೀವ್ರವಾಗಿ ಒಳಗಾಯಿತು. ಇದಕ್ಕೆ ಕಾರಣ ದಕ್ಷಿಣ ಕರ್ನಾಟಕದ ಪೂರ್ವ ಭಾಗಗಳನ್ನು ಚೋಳರು ಆಕ್ರಮಿಸಿಕೊಂಡರು. ಕ್ರಿ.ಶ.980 ರಿಂದ 1115 ರ ತನಕ ಅಂದರೆ ಸುಮಾರು 130 ರಿಂದ 135 ವರ್ಷಗಳ ಕಾಲ ಚೋಳರು ಈ ಭಾಗದಲ್ಲಿ ಆಡಳಿತ ನಡೆಸಿದರು. ಅವರ ಪ್ರಬಲ ರಾಜಕೀಯ ಛತ್ರದ ಅಡಿಯಲ್ಲಿ ತಮಿಳು ಸಂಸ್ಕೃತಿ ನಿರಂತರವಾಗಿ ಈ ಪ್ರವೇಶಕ್ಕೆ ಹರಿದು ಹರಡಿ ಪ್ರಬಲವಾಗಿ ಬೇರೂರಿತು.

ಚೋಳರ ಸಂಸ್ಕೃತಿಯ ಪ್ರಭಾವದಿಂದಾಗಿ ದಕ್ಷಿಣ ಕರ್ನಾಟಕದ ಅದರಲ್ಲೂ ಆಗ್ನೇಯ ಭಾಗಗಳ ವಾಸ್ತುರೂಪದ ಛಾಯೆಯೇ ಬದಲಾಯಿತು. ಚೋಳರ ರಾಜಕೀಯ ಶಕ್ತಿಯನ್ನು

ಕ್ರಿ.ಶ.1117 ರಲ್ಲಿ ಕರ್ನಾಟಕದಿಂದ ಹೊಡೆದೋಡಿಸಿದ ಹೊಯ್ಸಳರು ದಕ್ಷಿಣ ಕರ್ನಾಟಕದಲ್ಲಿ ಸಂಪೂರ್ಣವಾಗಿ ರಾಜಕೀಯ ಹತೋಟಿಯನ್ನು ಹೊಂದಿದ್ದರೂ, ಅವರು ಸಾಂಸ್ಕೃತಿಕವಾಗಿ ಈ ಪ್ರದೇಶವನ್ನು ಚೋಳ ಸಂಸ್ಕೃತಿಯ ಪ್ರಭಾವದಿಂದ ಹೊರತರಲು ಸಾಧ್ಯವಾಗಲಿಲ್ಲ. ಏಕೆಂದರೆ ಈ ಪ್ರದೇಶದಲ್ಲಿ ತಮಿಳು ಸಂಸ್ಕೃತಿಯು ಅಷ್ಟು ಗಾಢವಾಗಿ ನೆಲೆಯೂರಿತ್ತು. ಹೊಯ್ಸಳರ ಕಾಲದಲ್ಲಿಯೂ ಸಹ ಹೊಯ್ಸಳ ರಾಜರೇ ಈ ಸ್ಥಳದಲ್ಲಿ ತಮಿಳು ಭಾಷೆಯಲ್ಲಿ ಮತ್ತು ಲಿಪಿಯಲ್ಲಿ ಶಾಸನಗಳನ್ನು ಹೊರಡಿಸಿದರು. ಹೊಯ್ಸಳರ ನಂತರ ವಿಜಯನಗರ ಕಾಲದಲ್ಲಿ ವಿಜಯನಗರ ಅರಸರು ಪೋಷಿಸಿದ ದ್ರಾವಿಡ ವಾಸ್ತು ಪರಂಪರೆ, ಸಂಸ್ಕೃತಿಯನ್ನು ಸುಗಮವಾಗಿ ಈ ಭಾಗದಲ್ಲಿ ಬೆಳೆಯುವುದಕ್ಕೆ ಅವಕಾಶವಾಯಿತು. ಇದೇ ಮುಂದೆ ವಿಜಯನಗರ ಮತ್ತು ಮೈಸೂರು ಒಡೆಯರ ಕಾಲದಲ್ಲೂ ಮುಂದುವರೆದು ಇಪ್ಪತ್ತನೇ ಶತಮಾನದವರೆಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು.

ಗುಂಡ್ಲುಪೇಟೆ ಪ್ರದೇಶವು ಪ್ರಾಚೀನ ಕಾಲದಿಂದಲೂ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ತಾಣವಾಗಿದೆ ಎಂಬುದನ್ನು ನಾನು ಪ್ರಸ್ತುತ ಗುರುತಿಸಿರುತ್ತೇನೆ. ಈ ಭಾಗದ ಬಹುತೇಕ ನೆಲೆಗಳಲ್ಲಿ ಆದಿಕಾಲದ ಮಾನವನ ಇರುವಿಕೆಯಿಂದ ಪ್ರಾರಂಭಿಸಿ ನಿರಂತರವಾಗಿ ಬಹುಮುಖಿ ಸಾಂಸ್ಕೃತಿಕ ಕೇಂದ್ರಗಳಾಗಿ ರೂಪುಗೊಂಡಿದ್ದು. ಇಲ್ಲಿ ವಿವಿಧ ಸಾಂಸ್ಕೃತಿಕ ಆಯಾಮಗಳು, ಕಾಲಘಟ್ಟಗಳಲ್ಲಿ ಮಾನವನ ಜೀವನವನ್ನು ಸಾಕಷ್ಟು ಉನ್ನತಾವಸ್ಥೆಗೆ ತೆಗೆದುಕೊಂಡು ಹೋಗಿರುವುದನ್ನು ಕಾಣಬಹುದಾಗಿದೆ. ರಾಜಕೀಯ ಹಿನ್ನೆಲೆಯಿಂದ ನಿರ್ದಿಷ್ಟ ವ್ಯವಸ್ಥೆಗಳು ಪ್ರಾರಂಭವಾದಾಗಿನಿಂದ ಭೌಗೋಳಿಕ ವ್ಯಾಪ್ತಿಯ ಕಲ್ಪನೆಗಳು ಕಂಡುಬರುವುದರಿಂದಲೇ ಪ್ರಾಚೀನ ರಾಜಮನೆತನಗಳು ಸೀಮೆ ಮತ್ತು ವ್ಯಾಪ್ತಿಯನ್ನು ಗುರುತಿಸುವಂತಹ ಹಲವಾರು ದಾಖಲೆ ಪುರಾವೆಗಳನ್ನು ಕಾಣಲಾಗಿದೆ. ಇದರ ಪರಿಣಾಮವಾಗಿಯೇ ಈ ಭಾಗದ ಭೌಗೋಳಿಕ ಕ್ಷೇತ್ರದಲ್ಲಿ ನಡೆದಂತಹ ಅಮೂಲಾಗ್ರ ಚಟುವಟಿಕೆಗಳ ಚಿತ್ರಣ ದೊರಕುವಂತಾಗಿ ಹಲವಾರು ವಿಭಿನ್ನ ಸಂಸ್ಕೃತಿಗಳ ಆಚಾರ, ವಿಚಾರಗಳ ಪ್ರಭಾವ ಬಾಹ್ಯವಾಗಿ ಮತ್ತು ಆಂತರಿಕವಾಗಿ ಆಗಿರುವುದನ್ನು ಅಂದಿನ ಸಾಂಸ್ಕೃತಿಕ ಪುರಾವೆಗಳಿಂದ ತಿಳಿಯಬಹುದಾಗಿದೆ.

ನನ್ನ ಸಂಶೋಧನಾ ವಿಷಯವಾದ "ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳು– ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯಲ್ಲಿ ಸಂಶೋಧನೆಯನ್ನು ನಡೆಸಲಾಗಿರುತ್ತದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದೇವಾಲಯಗಳನ್ನು ಕುರಿತಂತೆ ದೇವಾಲಯಗಳ ವಾಶ್ತುಶಿಲ್ಪದ ಪ್ರಾಮುಖ್ಯತೆಯನ್ನು ಸಹ ನೋಡಬೇಕಾಗುತ್ತದೆ. ಅಧ್ಯಯನಕ್ಕೆ ಪೂರಕವಾಗಿ ಸಂಬಂಧಿಸಿದಂತೆ ಪೂರ್ವಭಾವಿಯಾಗಿ ನಮಗೆ ದೊರಕುವ ಆಕರಗಳು ಕೇವಲ ದೇವಾಲಯಗಳು ಮಾತ್ರವಷ್ಟೇ, ಕಾರಣ ಈ ವಿಷಯದ ಬಗ್ಗೆ ಹೆಚ್ಚಿನ ಸಂಶೋಧನೆಗಳು ಆಗಿಲ್ಲದೆ ಇರುವುದು, ಅಲ್ಲಲ್ಲಿ ಈ ದೇವಾಲಯಗಳ ಬಗ್ಗೆ ಕೆಲವು ವರದಿಗಳು, ವಿವರಣೆಗಳು ಮಾತ್ರ ಕಂಡುಬರುತ್ತವೆ.

ಉದಾಹರಣೆಗೆ ಹೇಳುವುದಾದರೆ, ಡಾ.ಬಿ.ಷೇಕ್ ಆಲಿರವರ 'ದಿ ಗಂಗಾಸ್ ಆಫ್ ತಲಕಾಡ್' ಎಂಬ ಕೃತಿಯಲ್ಲಿ ಗಂಗರ ದೇವಾಲಯಗಳ ಒಂದು ಕಿರುಪರಿಚಯವಾಗಿದೆ. ಇತ್ತೀಚೆಗೆ ಬಂದಂತಹ ಐ.ಕೆ.ಶರ್ಮರವರ ದಿ ಟೆಂಪಲ್ಸ್ ಆಫ್ ದಿ ಗಂಗಾಸ್ ಆಫ್ ಕರ್ನಾಟಕ ಎಂಬ ಕೃತಿಯು ಗಂಗರ ದೇವಾಲಯಗಳ ಬಗ್ಗೆ ವಿವರವಾದ ವಿಚಾರವನ್ನು ತಿಳಿಸುತ್ತದೆ.

ಗುಂಡ್ಲುಪೇಟೆ ಪ್ರದೇಶದಲ್ಲಿ ಈಗ ಇರುವ ದೇವಾಲಯಗಳಲ್ಲದೆ ಇನ್ನೂ ಎಷ್ಟೋ ದೇವಾಲಯಗಳು ಕಣ್ಮರೆಯಾಗಿವೆ. ಕೆಲವು ದೇವಾಲಯಗಳಿಗೆ ಮಾತ್ರ ಶಾಸನೋಕ್ತವಾದ ದಾಖಲೆಗಳಿವೆ. ಈ ಎಲ್ಲಾ ಆಧಾರಗಳನ್ನು ಗಮನಿಸಿದಾಗ ಈ ಭಾಗದಲ್ಲಿ ಆಡಳಿತ ನಡೆಸಿದ ರಾಜರುಗಳು ಅನೇಕ ಧರ್ಮಕ್ಕೆ ಪೂರಕವಾಗಿ ದೇವಾಲಯಗಳನ್ನು ನಿರ್ಮಿಸಿದ್ದು. ಕೆಲವು ದೇವಾಲಯಗಳು ವಿಶಾಲವಾಗಿವೆ. ಕೆಲವು ದೇವಾಲಯಗಳು ಚಿಕ್ಕದಾಗಿವೆ. ಈ ಭಾಗದ ದೇವಾಲಯಗಳು ದ್ರಾವಿಡ ವಾಸ್ತುವಿನ ನಿಯಮ ರೂಢಿ, ಸಂಪ್ರದಾಯ, ಲಕ್ಷಣ ಮುಂತಾದವುಗಳನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಇದರಿಂದಾಗಿ ಕರ್ನಾಟಕದಲ್ಲಿ ಅದರಲ್ಲೂ ಗುಂಡ್ಲುಪೇಟೆಯ ಭಾಗದಲ್ಲಿ ದ್ರಾವಿಡ ವಾಸ್ತು ನಿರಂತರವಾಗಿ ಬೆಳೆಯುವಂತಾಗಿ ವಿಜಯನಗರ ಕಾಲದಲ್ಲಿ ದ್ರಾವಿಡ ವಾಸ್ತುಕಲೆ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಶಕ್ತಿಯುತವಾಗಿ ನಿಲ್ಲುವುದಕ್ಕೆ ಕಾರಣವಾಯಿತು. ದಕ್ಷಿಣ ಕರ್ನಾಟಕದಲ್ಲಿ ಪ್ರಬಲವಾಗಿ ಬೇರೂರಿ ನಿಲ್ಲುವುದಕ್ಕೆ ಗಂಗರ ಹಾಗೂ ಚೋಳರ ಕೊಡುಗೆ ಈ ಭಾಗಕ್ಕೆ ಅಪಾರ ಎಂದರೆ ತಪ್ಪಾಗಲಾರದು. ಇವರುಗಳು ಹಾಕಿದ ಈ ಭದ್ರಬುನಾದಿಯಿಂದಾಗಿ ನಂತರ ಈ ಭಾಗದಲ್ಲಿ ಆಡಳಿತ ನಡೆಸಿದ ವಿಜಯನಗರದ ಅರಸರು ಮೈಸೂರು ಒಡೆಯರ್‌ರವರ ಕಾಲದಲ್ಲಿ ದೇವಾಲಯಗಳ ಬೆಳವಣಿಗೆ, ದ್ರಾವಿಡ ವಾಸ್ತು ಮತ್ತು ಶಿಲ್ಪಕಲೆ ಬೆಳವಣಿಗೆ ಇಡೀ ದಕ್ಷಿಣ ಕರ್ನಾಟಕದಲ್ಲದೆ, ಗುಂಡ್ಲುಪೇಟೆ ಭಾಗದಲ್ಲಿಯೂ ತನ್ನದೇ ಆದ ಸಾಂಸ್ಕೃತಿಕ ಬೆಳವಣಿಗೆಯನ್ನು ಹೊಂದಿದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿಗೆ ಸಂಬಂಧಿಸಿದಂತೆ ದೇವಾಲಯಗಳ ವಾಸ್ತುಶಿಲ್ಪದ ಸಂಶೋಧನೆಯು ಈ ಭಾಗದ ರಾಜಕೀಯ, ಸಾಂಸ್ಕೃತಿಕ

ಇತಿಹಾಸದ ಬೆಳವಣಿಗೆಯ ಒಂದು ವಿವರಪೂರ್ಣ ಅಧ್ಯಯನ ಅಗತ್ಯವಾಗಿದ್ದು. ಆದರೆ ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ನಾವು ಕೇವಲ ಗುಂಡ್ಲುಪೇಟೆ ತಾಲ್ಲೂಕಿಗೆ ಮಾತ್ರ ನಿಗದಿಪಡಿಸುವಂತೆ ಇಲ್ಲ. ಕಾರಣವೇನೆಂದರೆ ಇಡೀ ದಕ್ಷಿಣ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಎಲ್ಲಾ ರಾಜಕೀಯ ಶಕ್ತಿಗಳು ಸಾಮಾನ್ಯವಾಗಿ ಚಾಮರಾಜನಗರ ಜಿಲ್ಲೆಯ ಮೇಲೂ ತಮ್ಮದೇ ಆದ ಹತೋಟಿಯನ್ನು ಹೊಂದಿದ್ದವು. ಕೇವಲ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದೊರಕುವ ಚಾರಿತ್ರಿಕ ಆಧಾರಗಳ ಮೇಲೆ ನಮ್ಮ ಅಧ್ಯಯನಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಹಿನ್ನೆಲೆಯನ್ನು ನೀಡಲು ಹೊರಟರೆ ಅದು ತೀರ ಅಸಂಬದ್ಧ ಎನಿಸುತ್ತದೆ. ಇದರಿಂದ ಸುಸಂಘಟಿತವಾದ ಅಥವಾ ಕ್ರಮಬದ್ಧವಾದ ಚಾರಿತ್ರಿಕ, ಸಾಂಸ್ಕೃತಿಕ ವಿವರಣೆ ಅದಾಗುವುದಿಲ್ಲ. ಆದ ಕಾರಣ ಇಡೀ ದಕ್ಷಿಣ ಕರ್ನಾಟಕದ ಒಂದು ವಿಸ್ತಾರವಾದ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳ ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾಗುವ ರೀತಿಯಲ್ಲಿ ವಿವರಣೆಯನ್ನು ನೀಡಲು ಪ್ರಯತ್ನಿಸಲಾಗಿದೆ. ದಕ್ಷಿಣ ಕರ್ನಾಟಕದ ಕೊನೆಯ ಭಾಗದಲ್ಲಿರುವ ಗುಂಡ್ಲುಪೇಟೆ ತಾಲ್ಲೂಕು ಪ್ರಾಂತ್ಯ ದೇವಾಲಯಗಳು ಸಾಂಸ್ಕೃತಿಕ ಜೀವನವನ್ನು ಅಲ್ಲದೆ ಈ ಭಾಗದ ಸಂಸ್ಕೃತಿ ಬೆಳೆದುಬಂದ ಬಗೆಯನ್ನು ನಿರೂಪಿಸಲಾಗಿರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನ ಇತಿಹಾಸವನ್ನು ಗಮನಿಸಿದರೆ, ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸ ಎಂಬ ಭಾವನೆ ಪ್ರಮುಖವಾಗಿರುತ್ತದೆ. ಇತಿಹಾಸವನ್ನು ಬರೆಯುವಾಗ ಆಕರಗಳಲ್ಲಿ ಸಾಮಾಜಿಕವಿರಬಹುದು, ಆರ್ಥಿಕವಿರಬಹುದು, ಸಾಂಸ್ಕೃತಿಕವಿರಬಹುದು, ಶೈಕ್ಷಣಿಕವಿರಬಹುದು ಅಲ್ಲದೆ ರಾಜಕೀಯವಿರಬಹುದು, ಇವೆಲ್ಲವೂ ಇತಿಹಾಸಕ್ಕೆ ಪ್ರಮುಖವಾದ ಕಾರಣವೇ ಆಗಿರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಆಡಳಿತ ನಡೆಸಿದ ರಾಜಮನೆತನಗಳು, ಇಲ್ಲಿಯ ಜನತೆಯ ಇತಿಹಾಸ ಬದುಕಿನ ರೀತಿ, ಅವರುಗಳು ಅನುಸರಿಸಿದ ಧರ್ಮ, ಕಲೆ, ವಾಸ್ತುಶಿಲ್ಪ ವೀರಗಲ್ಲು, ಮಾಸ್ತಿಕಲ್ಲು, ಬೃಹತ್ ಶಿಲಾಸಂಸ್ಕೃತಿ, ಪರಂಪರೆ ಇವೆಲ್ಲವನ್ನು ಕುರಿತು ಅಧ್ಯಯನವನ್ನು ನಡೆಸಲಾಗಿರುತ್ತದೆ. ಏಕೆಂದರೆ ನನ್ನ ಸಂಶೋಧನಾ ವಿಷಯ ದೇವಾಲಯಗಳು ಆಗಿದ್ದರೂ ಕೂಡ ದೇವಾಲಯಗಳಿಗೆ ಪೂರಕವಾಗಿ ಈ ಮೇಲ್ಕಂಡ ಎಲ್ಲಾ ಅಂಶಗಳು ಇರುವುದರಿಂದ ಇವೆಲ್ಲವನ್ನು ಸಮಗ್ರವಾಗಿ ಚರ್ಚಿಸಲಾಗಿರುತ್ತದೆ. ಈ ತಾಲ್ಲೂಕಿನ ಶಾಸನಗಳನ್ನು ಅಧ್ಯಯನ ಮಾಡುವಾಗ ಒಂದು ನಿಯಮವನ್ನು ಅನುಸರಿಸಲಾಗಿದೆ. ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಬಿಟ್ಟು ಉಳಿದ ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಚಾರಗಳನ್ನು ಇಲ್ಲಿ ತಿಳಿಸಲಾಗಿರುತ್ತದೆ. ಗುಂಡ್ಲುಪೇಟೆ ತಾಲೂಕಿನ ಬಗ್ಗೆ ಹೇಳಬೇಕಾದರೆ ಇದು ಸಹ ಮೈಸೂರಿನ ವ್ಯಾಪ್ತಿಗೆ ಒಳಪಟ್ಟಂತ ಪ್ರದೇಶವಾಗಿದ್ದು. ಇದರ ಇತಿಹಾಸ ಕುರಿತು ಹೇಳುವುದಾದರೆ, ಅಶೋಕನು ಮಹಿಷಮಂಡಲಕ್ಕೆ

ತನ್ನ ಧರ್ಮ ಬೋಧಕರನ್ನು ಕಳುಹಿಸಿದ್ದನೆಂದು ತಿಳಿದುಬರುತ್ತದೆ. ಈ ಮಹಿಷಮಂಡಲವು ಮೈಸೂರಿನ ಸುತ್ತಮುತ್ತಲ ಪ್ರಾಂತ್ಯವಾಗಿದ್ದು. ಈ ಭಾಗವನ್ನು ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಎರುಮೈನಾಡು ಎಂದು ಕರೆಯಲಾಗಿದೆ. ಆದ್ದರಿಂದ ಕ್ರಿ.ಪೂ. ದಿಂದಲೂ ಮೈಸೂರು ಹಾಗೂ ಗುಂಡ್ಲುಪೇಟೆ ಭಾಗ ಬಹು ಪ್ರಾಚೀನತೆಯನ್ನು ಹೊಂದಿತ್ತೆಂದು ತಿಳಿಯಬಹುದಾಗಿದೆ. ಶಾಸನಗಳಲ್ಲಿ ಈ ಭಾಗವನ್ನು ಅಂದರೆ ಮೈಸೂರು ಪ್ರದೇಶವನ್ನು ಮಹಿಷೂರು, ಮಹಿಷಪುರ, ಮಹಿಷಮಂಡಲ, ಮಹಿಪೂರಪುರ, ಮಹಿಷಾಸುರಪುರ ಎಂಬೆಲ್ಲಾ ಹೆಸರುಗಳಿಂದ ಕರೆಯಲಾಗಿರುವುದು ತಿಳಿದುಬರುತ್ತದೆ. ಆದ್ದರಿಂದ ಈ ಭಾಗದ ಇತಿಹಾಸ ಸ್ಪಷ್ಟವಾಗಿ ಪ್ರಾರಂಭವಾಗುವುದು ತಲಕಾಡಿನ ಗಂಗರ ಕಾಲದಿಂದ ಎಂದು ಹೇಳಬಹುದು. ಇವರು ಕ್ರಿ.ಶ.4ನೇ ಶತಮಾನದಿಂದ ಕ್ರಿ.ಶ.10ನೇ ಶತಮಾನದ ಅಂತ್ಯದವರೆಗೆ ಮಹಿಷಮಂಡಲ ಪ್ರಾಂತ್ಯದ ಬಹುತೇಕ ಪ್ರದೇಶಗಳ ಮೇಲೆ ತಮ್ಮ ಒಡೆತನವನ್ನು ಹೊಂದಿದ್ದರು ಎಂಬುದು ಸ್ಪಷ್ಟವಾದ ದಾಖಲೆಗಳಿಂದ ತಿಳಿದುಬರುತ್ತದೆ.

ಸುಮಾರು ಕ್ರಿ.ಶ.1104ರಲ್ಲಿ ಚೋಳ ರಾಜರುಗಳು ಗಂಗರ ಆಳ್ವಿಕೆಯನ್ನು ಕೊನೆಗಾಣಿಸಿ ಗುಂಡ್ಲುಪೇಟೆ ಪ್ರದೇಶದ ಮೇಲೆ ತಮ್ಮದೇ ಆದ ಚೋಳ ಸಾಮ್ರಾಜ್ಯಕ್ಕೆ ಭದ್ರಬುನಾದಿಯನ್ನು ಹಾಕಿದರು. ನಂತರ ಕ್ರಿ.ಶ.1116ರಲ್ಲಿ ದ್ವಾರಸಮುದ್ರದ ಹೊಯ್ಸಳರ ಪ್ರಖ್ಯಾತ ದೊರೆ ವಿಷ್ಣುವರ್ಧನ ತಲಕಾಡನ್ನು ಗೆದ್ದು ಹೊಯ್ಸಳ ಸಾಮ್ರಾಜ್ಯದ ಕಕ್ಷೆಗೆ ಸೇರಿಸಿಕೊಂಡನು. ನಂತರ ಈ ಸಾಮ್ರಾಜ್ಯ ವಿಜಯನಗರ ಅರಸರ ಅಧೀನಕ್ಕೆ ಸೇರಿತು. ಆದರೆ ದಕ್ಷಿಣ ಭಾಗದ ಸ್ವಲ್ಪ ಪ್ರದೇಶದಲ್ಲಿ ಉಮ್ಮತ್ತೂರಿನ ಪಾಳೆಯಗಾರರು ಕೆಲವು ವರ್ಷಗಳ ಕಾಲ ಈ ಪ್ರಾಂತ್ಯವನ್ನು ಆಳುತ್ತಿದ್ದರು. ಕ್ರಿ.ಶ.16ನೇ ಶತಮಾನದ ಆದಿಭಾಗದ ಹೊತ್ತಿಗೆ ಅವರು ಪಾಳೆಯಪಟ್ಟು ವಿಜಯನಗರ ಅರಸರ ಸಾಮ್ರಾಜ್ಯಕ್ಕೆ ಸೇರಿತು. ಕ್ರಿ.ಶ.16ನೇ ಶತಮಾನದ ಉತ್ತರ ಭಾಗದಲ್ಲಿ ಮತ್ತು ಕ್ರಿ.ಶ.17ನೇ ಶತಮಾನದಲ್ಲಿ ರಾಜಪ್ರತಿನಿಧಿ ಶ್ರೀರಂಗಪಟ್ಟಣದಲ್ಲಿ ನೆಲೆಸಿದ್ದ ಅವನ ಆಳ್ವಿಕೆಗೆ ಪಟ್ಟಣದ ಅಷ್ಟಗ್ರಾಮ ಒಳಪಟ್ಟಿದ್ದವು. ಹಳೆಯ ಮೈಸೂರು ಜಿಲ್ಲೆ ಹೊಸದಾಗಿ ಆದ ಚಾಮರಾಜನಗರ ಜಿಲ್ಲೆಯ ಇವೆರಡರಲ್ಲೂ ಗುಂಡ್ಲುಪೇಟೆ ಒಂದು ಪ್ರಮುಖ ತಾಲ್ಲೂಕು ಕೇಂದ್ರವಾಗಿ ಹೆಸರುಗಳಿಸಿದೆ. ಆದ ಕಾರಣ ಹಳೇ ಮೈಸೂರು ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿರುವ ರಾಜಮನೆತನಗಳು ಗುಂಡ್ಲುಪೇಟೆ ಪ್ರದೇಶದ ಮೇಲೂ ಅಧಿಕಾರ ನಡೆಸಿರುವುದು ಅನೇಕ ಆಧಾರಗಳಿಂದ ಸ್ಪಷ್ಟವಾಗಿ ಗೋಚರವಾಗುತ್ತದೆ. ಆದಕಾರಣ ಈ ಭಾಗದ ಮೇಲೆ ಗಂಗರು 8-9ನೇ ಶತಮಾನದಲ್ಲಿ ಕ್ರಿ.ಶ.9, 10ನೇ ಶತಮಾನದಲ್ಲಿ ಚೋಳರು, ಕ್ರಿ.ಶ.10-11ನೇ ಶತಮಾನದಲ್ಲಿ ಹೊಯ್ಸಳರು ನಂತರ ವಿಜಯನಗರ ಅರಸರು, ಮೈಸೂರು ಒಡೆಯರು, ಅಲ್ಲದೆ ಉಮ್ಮತ್ತೂರಿನ ಪಾಳೆಯಗಾರರು, ಮೈಸೂರಿನ ಒಡೆಯರು ನಂತರ ಕಳಲೆ, ಹದಿನಾಡು,

ಮನೆತನದವರು ಆಡಳಿತವನ್ನು ನಡೆಸಿರುತ್ತಾರೆ. ಆಯಾ ಅರಸರು ವೈಯಕ್ತಿಕವಾಗಿ ಶೈವ, ವೈಷ್ಣವ ಧರ್ಮಕ್ಕೆ ಸೇರಿದವರಾಗಿದ್ದರೂ ಕೂಡ ಪರಧರ್ಮಕ್ಕೂ ಪ್ರೋತ್ಸಾಹ ನೀಡಿರುವುದು ತಿಳಿದುಬರುತ್ತದೆ.

ಈ ಹಿನ್ನೆಲೆಯಿಂದ ಗುಂಡ್ಲುಪೇಟೆ ತಾಲ್ಲೂಕಿನ ಬಹುತೇಕ ಊರುಗಳಲ್ಲಿ, ಊರುಗಳ ಹೊರವಲಯದಲ್ಲಿ ಕೂಡ ಶೈವ, ವೈಷ್ಣವ, ಜೈನ ದೇವಾಲಯಗಳು, ಬಸದಿಗಳು, ಶಿಲ್ಪಗಳು ಕಂಡುಬರುತ್ತವೆ. ಇವುಗಳ ಒಂದು ಸಮಗ್ರ ಚಿತ್ರ ಇನ್ನೂ ಕೂಡ ಸಮಗ್ರವಾಗಿ ನಡೆದಿಲ್ಲವೆಂದೇ ಹೇಳಬಹುದು. ಆದಕಾರಣ ನನ್ನ ಸಂಶೋಧನೆಯು ಗುಂಡ್ಲುಪೇಟೆ ತಾಲ್ಲೂಕಿನ ಕುರಿತು ಹೊಸ ಹೊಸ ವಿಚಾರಗಳನ್ನು ಸೇರಿಸುವ ಹಿನ್ನೆಲೆಯಲ್ಲಿ ಸಂಶೋಧನೆಯನ್ನು ಕೈಗೊಂಡು ಗುಂಡ್ಲುಪೇಟೆ ತಾಲ್ಲೂಕಿನ ಸಮಗ್ರ ಪರಿಚಯವನ್ನು ಪ್ರಸ್ತುತಪಡಿಸುತ್ತಿದ್ದೇನೆ.

## 1.2. ಭೌಗೋಳಿಕ ಲಕ್ಷಣಗಳು

ಚಾಮರಾಜನಗರ ಜಿಲ್ಲೆಯ ಪಶ್ಚಿಮ ದಿಕ್ಕಿಗೆ ಗುಂಡ್ಲುಪೇಟೆ ಇದ್ದು. ತಾಲ್ಲೂಕು ಪೂರ್ವ ಪಶ್ಚಿಮಾಭಿಮುಖವಾಗಿ $78^{\circ}$-$24^{\circ}$, ಪೂರ್ವದಿಂದ $76^{\circ}$-$50^{\circ}$, ಪೂರ್ವ ರೇಖಾಂಶಗಳವರೆಗೆ ಮತ್ತು $11^{\circ}$-$32^{\circ}$ ಉತ್ತರದಿಂದ $11^{\circ}$-58 ಉತ್ತರ ಅಕ್ಷಾಂಶದವರೆಗೆ ವಿಸ್ತರಣೆಗೊಂಡಿದೆ. ಗುಂಡ್ಲುಪೇಟೆ ತಾಲ್ಲೂಕು 1406.3 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು. ಗುಂಡ್ಲುಪೇಟೆ ತಾಲ್ಲೂಕಿನ ಸ್ಥಳೀಯ ಕಾಲಮಾನ ಗ್ರೀನ್‌ವಿಚ್ ಕಾಲಮಾನಕ್ಕಿಂತ 5 ಗಂಟೆ 6 ನಿಮಿಷ 14 ಸೆಕೆಂಡ್ ಮುಂದೆ ಇರುತ್ತದೆ. ಅಂದರೆ ಲಂಡನ್ನಿನಲ್ಲಿ ಬೆಳಗ್ಗೆ 7 ಗಂಟೆಯಾಗಿದ್ದರೆ ಗುಂಡ್ಲುಪೇಟೆಯ ಸ್ಥಳೀಯ ಕಾಲಮಾನ ಪ್ರಕಾರ ಇಲ್ಲಿ 12 ಗಂಟೆ 6 ನಿಮಿಷ 14 ಸೆಕೆಂಡ್ ಆಗಿರುತ್ತದೆ. ಆದರೆ ಭಾರತದ ಕಾಲಮಾನ ರೇಖೆ 82½ ಪೂರ್ವ ರೇಖಾಂಶದ ಸಮಯವನ್ನು ಇಡೀ ದೇಶಕ್ಕೆ ಅಳವಡಿಸಿರುವುದರಿಂದ ಇಲ್ಲಿ ಸಮಯ 7 ಗಂಟೆ 30 ನಿಮಿಷ ಮುಂದೆ ಇರುತ್ತದೆ.[10]

ಗುಂಡ್ಲುಪೇಟೆ ತಾಲ್ಲೂಕಿನ ಶಿಲೆಗಳು, ಖನಿಜಗಳು, ಮಣ್ಣುಗಳು, ಭೂಜಲಗಳು, ಸಾರಿಗೆ ಸಂಪತ್ತು ಹಾಗೂ ಅರಣ್ಯಗಳ ವೀಕ್ಷಣೆಯನ್ನು ನೋಡಿದರೆ ಅವುಗಳ ಅಧ್ಯಯನ ಇನ್ನೂ ಮಹತ್ವದಾಗಿದೆ. ಆದಕಾರಣ ಈ ಭಾಗದ ಭೂವೈಜ್ಞಾನಿಕ ಅಂಶವನ್ನು ಸಹ ನೋಡಬೇಕಾಗುತ್ತದೆ.

ಭೂ ಇತಿಹಾಸವನ್ನು ತಿಳಿಯಬೇಕಾದರೆ, ಮೊದಲಿಗೆ ಭೂವಿಜ್ಞಾನಿ ಬಳಸುವ ಕೆಲವೊಂದು ವೈಜ್ಞಾನಿಕ ಪದ ಸಮುಚ್ಛಯಗಳು ಯಾವ ರೀತಿ ಇವೆ ಎಂಬುದನ್ನು ಸಹ

ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಂಡುಬರುವ ಶಿಲೆಗಳನ್ನು ಗಮನಿಸಿದರೆ 220 ರಿಂದ 280 ಕೋಟಿ ವರ್ಷ ಹಳೆಯವು ಎಂಬುದಾಗಿ ಭೂವಿಜ್ಞಾನಿಗಳ ಅಭಿಪ್ರಾಯವಾಗಿದೆ.[11] ಈ ಶಿಲೆಗಳ ಪೂರ್ವತಿಹಾಸ ಹೀಗಿದೆ. ದಖ್ಖನ್ ಪ್ರಸ್ಥಭೂಮಿ ಅಥವಾ ಭರತ ಖಂಡ ಪರ್ಯಾಯ ದ್ವೀಪವು ಉದ್ಭಾವಿಸಿದ ರೀತಿ ಹಾಗೂ ಇಲ್ಲಿ ಕಂಡುಬರುವ ವಿಭಿನ್ನ ರೀತಿಯ ಶಿಲಾ ಮಾದರಿಗಳನ್ನು ಕಾಣಬಹುದು. ಅಲ್ಲದೆ ಇವುಗಳಿಂದ ಉಂಟಾದ ಮಣ್ಣು, ನೆಲ, ಜಲ, ಸಸ್ಯವರ್ಗ, ಸಸ್ಯವರ್ಗಕ್ಕೆ ತಕ್ಕಂತೆ ಪ್ರಾಣಿ ಸಂಪತ್ತು ಇರುವುದು ಪ್ರಾಚೀನ ಕಾಲದಿಂದ ಕಂಡುಬರುತ್ತದೆ. ದಖ್ಖನ್ ಪ್ರಸ್ಥಭೂಮಿಯು ಲಕ್ಷಾಂತರ ವರ್ಷಗಳ ಹಿಂದೆ ದಕ್ಷಿಣ ಆಫ್ರಿಕದ ಭೂ ಪ್ರದೇಶವಾಗಿತ್ತೆಂದು ವಿದ್ವಾಂಸರ ಅಭಿಪ್ರಾಯ. ದಕ್ಷಿಣ ಭಾರತದ ಕನ್ಯಾಕುಮಾರಿಯಿಂದ ಅರಾವಳಿ ಮತ್ತು ವಿಂಧ್ಯಪರ್ವತಗಳನ್ನೊಳಗೊಂಡಂತೆ ಇದ್ದ ಭೂಖಂಡ ಪ್ರದೇಶವೇ ಭರತಖಂಡದ ಪರ್ಯಾಯ ದ್ವೀಪ ಅಥವಾ ದಕ್ಷಿಣ ಭಾರತ ಈ ಮಾದರಿಯ ಭೂಭಾಗದ ತುಣುಕು ದಕ್ಷಿಣ ಆಫ್ರಿಕಾದ ಭೂಶಿಖರಕ್ಕೆ ಹೊಂದಿಕೊಂಡಂತೆ ಇರುವ ಮಡಗಾಸ್ಕರ್ ದ್ವೀಪದೊಂದಿಗೆ ಹೊಂದಿರುವ ಭೂಭಾಗವಾಗಿತ್ತೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.[12]

ಗುಂಡ್ಲುಪೇಟೆಯ ಸುತ್ತಮುತ್ತಲೂ ಬೆಟ್ಟಗುಡ್ಡಗಳಿವೆ ಗುಂಡ್ಲುಪೇಟೆಯ ಪೂರ್ವದಿಕ್ಕಿಗೆ ಪ್ರಾಚೀನ ನೆಲೆಯಾದ ತೆರಕಣಾಂಬಿ ಇದೆ. ಅದಕ್ಕೆ ಪೂರಕವಾಗಿ ಸಮೀಪದಲ್ಲಿಯೇ ವೆಂಕಟರಮಣಸ್ವಾಮಿ ಬೆಟ್ಟ, ಪಾರ್ವತಿ ಬೆಟ್ಟ, ಪಶ್ಚಿಮಕ್ಕೆ ಹಿಮವತ್ ಗೋಪಾಲಸ್ವಾಮಿ ಬೆಟ್ಟ, ಕರಸ್ಥಲದ ನಾಗಲಿಂಗನ ಬೆಟ್ಟ, ಬೇಗೂರು, ಹಿರೀಕಾಟಿಗಳಲ್ಲಿರುವ ಗುಡ್ಡಗಳು, ಹೀಗೆ ಬೆಟ್ಟಗುಡ್ಡಗಳಿಂದ ಸುತ್ತುವರೆದ ಬೆಂಗಾಡಾಗಿರುವ ಭೌಗೋಳಿಕ ಹಿನ್ನೆಲೆಯನ್ನು ಹೊಂದಿದೆ. ಈ ಮೇಲೆ ತಿಳಿಸಲಾಗಿರುವ ಸುಮಾರು 100 ವರ್ಷಗಳಿಂದ ಇಲ್ಲಿಯವರೆಗೆ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಭೂವಿಜ್ಞಾನಿಗಳು ಈ ಭಾಗದ ಹಾಗೂ ಇನ್ನಿತರ ಭಾಗಗಳ ಮೇಲೆ ಸಮೀಕ್ಷೆಯನ್ನು ಮಾಡಿಸಿದ್ದಾರೆ. ಅದರ ಸಂಶೋಧನೆಯ ಹಿನ್ನೆಲೆಯಿಂದಲೇ ಈ ಭಾಗದ ಒಳ್ಳೆಯ ರೀತಿಯ ವೈಜ್ಞಾನಿಕ ವಿಚಾರಗಳು ತಿಳಿದುಬಂದಿದೆ.

## ಭೂ ಜಲ ಸಂಪತ್ತು

ಗುಂಡ್ಲುಪೇಟೆ ತಾಲ್ಲೂಕಿನ ನೆಲ ಜಲ ಸಂಪತ್ತು ಅಷ್ಟೇನು ಸರಿಯಾಗಿಲ್ಲ. ಕೆರೆಕಟ್ಟೆಗಳ ನೀರನ್ನು ನಂಬಿಕೊಂಡು ವ್ಯವಸಾಯ ಮಾಡುವಂತೆಯೂ ಇಲ್ಲ. ಈ ರೀತಿಯ ಪರಿಸ್ಥಿತಿಯಲ್ಲಿ ಇಲ್ಲಿಯ ಜನರು ಬರಗಾಲವನ್ನು ಎದುರಿಸಬೇಕಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಎಲ್ಲೆಲ್ಲಿಯೂ ಕಣಶಿಲೆಗಳು, ಪಟ್ಟಶಿಲೆಗಳಿವೆಯೋ ಅಲ್ಲಿ ಕೆಂಪು ಮೊರಜು ಮಿಶ್ರಿತ ಮಣ್ಣು ಸಹ

ಇರುವುದು. ಡಾಲರೈಟ್ ಶಿಲೆಗಳಿರುವ ಕಡೆ ಎರೆಮಣ್ಣು ಅಥವಾ ಕಪ್ಪುಮಣ್ಣು ಸ್ಯಾಗ್‌ವಾನ್ ಡೈಟ್‌ಗಳಿರುವ ಕಡೆ ಉದಾ: ಕಪ್ಪುಬಣ್ಣದ ಮಣ್ಣು, ಪೆಗ್ಗಟೈಟ್ ಶಿಲೆಗಳಿರುವ ಕಡೆ ಬೆಣಚು ಮಿಶ್ರಿತ ರಂಗೋಲಿ ಮಣ್ಣು, ಕಬ್ಬಿಣದ ಅದಿರುಳ್ಳ ಪ್ರದೇಶಗಳಲ್ಲಿ ಕೆಮ್ಮಣ್ಣು ಕಂಡುಬರುತ್ತದೆ. ಇವುಗಳಲ್ಲಿ ಎರೆಮಣ್ಣು, ಉದಾಕಪ್ಪುಮಣ್ಣು ಮತ್ತು ಕೆಂಪುಮಣ್ಣು ಫಲವತ್ತಾದ ಮಣ್ಣುಗಳು, ಜೋಳ, ರಾಗಿ ಬೆಳೆ ತೆಗೆಯಲು ಪ್ರಮುಖವಾದ ಮಣ್ಣುಗಳಾಗಿವೆ. ನೊರಜು ಕೆಂಪು ಮಣ್ಣು ತೆಂಗಿನ ಬೆಳೆ ತೆಗೆಯುವುದಕ್ಕೆ ಸಹಕಾರಿಯಾಗಿದೆ. ಗುಂಡ್ಲುಪೇಟೆಯ ಜಲ ಸಮಸ್ಯೆಯು ಅಗಾಧವಾದುದು. ಮಳೆಯನ್ನಂತೂ ನಂಬುವಂತಿಲ್ಲ. ಬಂದ ಅಲ್ಪಸ್ವಲ್ಪ ಮಳೆಯ ನೀರನ್ನು ಕೆರೆಕಟ್ಟೆಗಳಲ್ಲಿ ಶೇಖರಿಸಿ ಬೇಸಾಯ ಮಾಡಬೇಕಾಗುತ್ತದೆ. ಆದುದರಿಂದ ಗುಂಡ್ಲುಪೇಟೆ ತಾಲ್ಲೂಕಿನ ಹತ್ತಾರು ಮೈಲಿ ದೂರಕ್ಕೂ ಸರಪಳಿಯ ಮಾದರಿಯಲ್ಲಿ ಕೆರೆ ಕಟ್ಟೆಗಳು ಕಂಡುಬರುತ್ತವೆ. ಕೋಡಹಳ್ಳಿಕೆರೆ, ನಳೂರು ಅಮಾನಿಕೆರೆ, ಕೂತನೂರು, ಮಲ್ಲಯ್ಯನಪುರ, ಹಂಗಳದ ಹಿರಿಕೆರೆ, ಗುಂಡ್ಲುಪೇಟೆ, ಅಣ್ಣೂರು ಹೀಗೆ ಉದ್ದಕ್ಕೂ ಇರುವ ಕೆರೆಗಳ ಸಾಲು ಸಕಾಲಕ್ಕೆ ಮಳೆ ಬಂದಲ್ಲಿ ಈ ಕೆರೆಗಳೆಲ್ಲವೂ ತುಂಬಿ ಕೋಡಿ ಬೀಳುತ್ತವೆ. ಇಲ್ಲವಾದರೆ ಕೆರೆಕಟ್ಟೆಗಳು ಒಣಗಿ ಬೀಟೆ ಹೊಡೆದು ಮಳೆಯ ನಿರೀಕ್ಷೆಯಲ್ಲಿ ಇರುತ್ತವೆ. ಆದಕಾರಣ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬರಗಾಲ ಎಂಬುದು ಸರ್ವಸಾಮಾನ್ಯವಾಗಿದ್ದು ಅಂದಿನಿಂದ ಪ್ರಸ್ತುತ ಈಗಲೂ ಬಡತನವೂ ಇದೆ ಎಂಬುದು ಈ ಭಾಗದ ಭೌಗೋಳಿಕ ಲಕ್ಷಣಗಳಿಂದ ತಿಳಿದುಬರುತ್ತದೆ.

**ವಾಯುಗುಣ**

ಗುಂಡ್ಲುಪೇಟೆ ತಾಲ್ಲೂಕು ಮಳೆಯ ನೆರಳಿನ ಪ್ರದೇಶವಾಗಿದ್ದು ತಿಳಿಸಲಾಗಿದೆ. ಇದು ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. ನೈರುತ್ಯ ಮಾನ್ಸೂನ್ ಮಾರುತವು ಮಾರ್ಚ್‌ನಿಂದ ಪ್ರಾರಂಭವಾಗುವ ಬೇಸಿಗೆಯು ಮೇ ತಿಂಗಳ ಹೊತ್ತಿಗೆ ಕೊನೆಯಾಗುತ್ತದೆ. ಈ ಕಾಲದಲ್ಲಿ ಉಷ್ಣಾಂಶವು ಹೆಚ್ಚಾಗಿರುತ್ತದೆ. ಇದು ಪಶ್ಚಿಮದಿಂದ ಪೂರ್ವದ ದಿಕ್ಕಿಗೆ ಹೋದಂತೆ ಹೆಚ್ಚಾಗುತ್ತದೆ. ಅಲ್ಲದೆ ಮೇ ತಿಂಗಳ ಕೊನೆಯ ವಾರದಿಂದ ಸೆಪ್ಟೆಂಬರ್ ಕೊನೆಯವರೆಗೆ ಮಳೆಗಾಲ ಇರುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳ ಮಧ್ಯದವರೆಗೆ ಹಿಂದಿರುಗುವ ಮಾನ್ಸೂನ್ ಮಾರುತದ ಪ್ರಭಾವದಿಂದ ಅಪರೂಪಕ್ಕೆ ಒಂದು ಸಾರಿ ಚಂಡಮಾರುತಗಳು ಸಹ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಡಿಸೆಂಬರ್ ಮೊದಲ ವಾರದಿಂದ ಫೆಬ್ರವರಿ ಮಧ್ಯದವರೆಗೆ ಚಳಿಗಾಲವಿರುತ್ತದೆ. ಈ ಅವಧಿಯಲ್ಲಿ ಉಷ್ಣಾಂಶವು ಪಶ್ಚಿಮದಿಂದ ಪೂರ್ವದ ಕಡೆಗೆ ಹೋದಂತೆ ಹೆಚ್ಚಾಗುತ್ತದೆ. ಇದೇ ವೇಳೆಯಲ್ಲಿ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಅತಿಕಡಿಮೆ ತಾಪಮಾನವನ್ನು ಕಾಣಬಹುದು. ಈ ನೆಲೆ

ತಮಿಳುನಾಡಿನ ಉದಕ ಮಂಡಲ (ಊಟಿ) ಯ ರೀತಿಯ ಅನುಭವವನ್ನು ನೀಡುತ್ತದೆ. ಅಂದರೆ ಈ ನೆಲೆ ಅಷ್ಟು ಚಳಿಯಾಗಿರುತ್ತದೆ. ಅಲ್ಲದೆ ಅಷ್ಟೇ ಪ್ರಮಾಣದಲ್ಲಿ ಮಂಜುಗೆಡ್ಡೆ ಉದುರುತ್ತದೆ ಎಂಬ ಅಂಶವು ಸಹ ಈ ಭಾಗದ ವಾಯುಗುಣದಿಂದ ತಿಳಿಯಬಹುದಾಗಿದೆ.

## ಮಳೆ

ಗುಂಡ್ಲುಪೇಟೆ ತಾಲ್ಲೂಕು ಮಾನ್ಸೂನ್ ಮಾರುತದ ಪ್ರಭಾವದಿಂದ ಅಕಾಲಿಕ ಹಾಗೂ ಅನಿಶ್ಚಿತ ಮಳೆಯು ಬೀಳುತ್ತದೆ. ಈ ಹಿನ್ನೆಲೆಯಿಂದ ಈ ಭಾಗಕ್ಕೆ ಬರಪರಿಸ್ಥಿತಿ ಇದ್ದೇ ಇರುತ್ತದೆ.[13] ಇಲ್ಲಿನ ಸರಾಸರಿ ವಾರ್ಷಿಕ ವಾಡಿಕೆ ಮಳೆಯ ಪ್ರಮಾಣ 747.8 ಮಿಲಿ ಮೀಟರ್‌ನಷ್ಟು ವರ್ಷದಿಂದ ವರ್ಷಕ್ಕೆ ವ್ಯತ್ಯಾಸದಿಂದ ಇರುತ್ತದೆ ಎಂಬುದು ವಾರ್ಷಿಕ ಹವಾಮಾನ ವರದಿಯಿಂದ ತಿಳಿಯಬಹುದಾಗಿದೆ.

## ನದಿಗಳು

ಅನಿಶ್ಚಿತ ಮತ್ತು ಅಕಾಲಿಕ ಮಳೆಯ ಪರಿಣಾಮದಿಂದಾಗಿ ತಾಲ್ಲೂಕಿನಾದ್ಯಂತ ಯಾವುದೇ ಶಾಶ್ವತ ಮತ್ತು ದೊಡ್ಡ ಪ್ರಮಾಣದ ನದಿಗಳು ಹರಿಯುವುದಿಲ್ಲ. ಕೆಲವು ಋತುಕಾಲಿಕಾ ಸಣ್ಣಪುಟ್ಟ ನದಿ, ಹಳ್ಳ, ಝರಿ, ಹೊಳೆ ಮುಂತಾದವುಗಳನ್ನು ಕಾಣಬಹುದಾಗಿದೆ. ಈ ತಾಲ್ಲೂಕಿನ ಮುಖ್ಯ ನದಿ ಗುಂಡ್ಲುಹೊಳೆಯಾಗಿದ್ದು ಇದಕ್ಕೆ ಮತ್ತೊಂದು ಹೆಸರು ಕೌಂಡಿನ್ಯ ವಾಗಿದ್ದು ಶ್ರೀ ಗೋಪಾಲಸ್ವಾಮಿ ಬೆಟ್ಟ ಇದರ ಉಗಮ ಸ್ಥಾನ. ದಕ್ಷಿಣದಿಂದ ಉತ್ತರಕ್ಕೆ ಹರಿಯುವ ಈ ನದಿ ನಂಜನಗೂಡಿನಲ್ಲಿ ಕಪಿಲಾ ನದಿಯನ್ನು ಸೇರುತ್ತದೆ. ತಾಲ್ಲೂಕಿನ ದಕ್ಷಿಣದ ಗಡಿಯಲ್ಲಿ ಮಾಯರ್ ನದಿ ಹರಿಯುತ್ತದೆ. ಇದು ಕರ್ನಾಟಕ ಮತ್ತು ತಮಿಳುನಾಡಿನ ಗಡಿ ರೇಖೆಯಾಗಿದೆ.

## ಸಸ್ಯವರ್ಗ

ಗುಂಡ್ಲುಪೇಟೆ ತಾಲ್ಲೂಕಿನ ಒಟ್ಟು ಭೌಗೋಳಿಕ ವ್ಯಾಪ್ತಿಯ ವಿಸ್ತೀರ್ಣ ಸರಾಸರಿ 44.859 ಹೆಕ್ಟೇರ್‌ಗಳಷ್ಟು ಅರಣ್ಯ ಪ್ರದೇಶದಿಂದ ಕೂಡಿದೆ. ಇದು ಶೇ.31.9 ರಷ್ಟು ತಾಲ್ಲೂಕಿನ ದಕ್ಷಿಣದಲ್ಲಿ 60 ಚದರ ಕಿ.ಮೀ. ಪಸರಿಸಿರುವ ಬಂಡೀಪುರ ಅಭಯಾರಣ್ಯ ಇದೆ. ಇಲ್ಲಿ ಬೆಲೆಬಾಳುವ ಶ್ರೀಗಂಧ, ತೇಗ, ಹೊನ್ನೆ, ನಂದಿ, ಹಲಸು, ಸಂಪಿಗೆ, ಮರಗಳು ಅಲ್ಲದೆ ನೇರಳೆ, ಸುರಗೊ, ಸುರ, ಹೊನ್ನೆ ಹಾಗೂ ಅನೇಕ ರೀತಿಯ ಗಿಡಮೂಲಿಕೆಗಳು ಕಾಣಬರುತ್ತವೆ.

ತಾಲ್ಲೂಕಿನಲ್ಲಿ ಪ್ರಧಾನವಾಗಿ ಒಣ ಎಲೆಯುದುರುವ ಮಾದರಿಯ ಸಸ್ಯವರ್ಗ ಕಂಡುಬರುತ್ತದೆ. ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ದಟ್ಟವಾದ ಅರಣ್ಯ ಭಾಗಗಳಿದ್ದು, ಇಲ್ಲಿ

ತೇವಯುತವಾದ ಎಲೆಯುದುರುವ ಸಸ್ಯವರ್ಗ ಮತ್ತು ಪೊದೆ ಹಾಗೂ ಹುಲ್ಲುಗಾವಲುಗಳನ್ನು ಕಾಣಬಹುದಾಗಿದೆ.

**ನೀರಾವರಿ**

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಜಲಸಂಪತ್ತು ತುಂಬಾ ಕೊರತೆ ಇದೆ. ಕೋಡಹಳ್ಳಿ, ಹಕ್ಕಲಪುರಗಳಲ್ಲಿ, ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳಿವೆ. ನಳೂರು ಅಮಾನಿ ಕೆರೆಯೋಜನೆಯಿಂದ ಸುಮಾರು 4463 ಹೆಕ್ಟೇರ್ ಪ್ರದೇಶ ನೀರಾವರಿ ಸೌಲಭ್ಯ ಪಡೆದುಕೊಂಡಿದೆ. ಆದರೆ ಮಳೆಯ ಅಭಾವದಿಂದಾಗಿ ಇವು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. 2009-10ನೇ ಸಾಲಿನ ಅಂಕಿಅಂಶಗಳ ಪ್ರಕಾರ ತಾಲ್ಲೂಕಿನಲ್ಲಿ 960 ಪ್ರದೇಶದಲ್ಲಿ ಕೊಳವೆ ಬಾವಿಯಿಂದ 768 ಹೆಕ್ಟೇರ್ ಪ್ರದೇಶ ಕೊಳವೆ ಬಾಯಿಯಿಂದ 768 ಹೆಕ್ಟೇರ್ ಪ್ರದೇಶ ಬಾವಿಯಿಂದಲೂ ನೀರಾವರಿಗೊಳಪಟ್ಟಿದೆ. ಒಟ್ಟಾರೆ ಸುಮಾರು 10376 ಹೆಕ್ಟೇರ್ ಪ್ರದೇಶ ನೀರಾವರಿಗೊಳಪಟ್ಟಿದೆ. ಇದು ಶೇ.7.39 ರಷ್ಟು ಈ ಭಾಗದ ರೈತರು ಬಹುಮುಖವಾಗಿ ಮಳೆಯ ನೀರಿನ ಆಶ್ರಯದಲ್ಲಿಯೇ ವಿವಿಧ ರೀತಿಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕಬಿನಿ ಎರಡನೇ ಹಂತದ ಯೋಜನೆ ಕಾರ್ಯಗತವಾದರೆ ಈ ಭಾಗದ ಮತ್ತಷ್ಟು ಭೂಮಿ ನೀರಾವರಿ ವ್ಯವಸ್ಥೆಗೆ ಪೂರಕವಾಗುತ್ತದೆ.

**ವ್ಯವಸಾಯ** – ಈ ಭಾಗದಲ್ಲಿ ಬೆಳೆಯುವ ಬೆಳೆಗಳನ್ನು ಎರಡು ರೀತಿಯಲ್ಲಿ ಮಾಡಲಾಗಿದೆ. 1) ಆಹಾರದ ಬೆಳೆಗಳು 2) ವಾಣಿಜ್ಯ ಬೆಳೆಗಳು

**ಆಹಾರದ ಬೆಳೆಗಳು**

ಗುಂಡ್ಲುಪೇಟೆಯ ಭಾಗದ **ಆಹಾರದ ಬೆಳೆಗಳೆಂದರೆ,** ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ ಮತ್ತು ಏಕದಳ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಅಲ್ಲದೆ **ವಾಣಿಜ್ಯ ಬೆಳೆಗಳಾದ** ಸೂರ್ಯಕಾಂತಿ, ಶೇಂಗಾ, ಕಬ್ಬು, ರೇಷ್ಮೆ, ಹತ್ತಿ, ತಂಬಾಕು, ತೇಗ ಇನ್ನೂ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತದೆ.

**ಜಾನುವಾರುಗಳು ಮತ್ತು ವನ್ಯಜೀವಿಗಳು**

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಜಾನುವಾರುಗಳಿವೆ. ಅವುಗಳಲ್ಲಿ ದನಕರುಗಳು, ಎಮ್ಮೆಗಳು, ಕುರಿಗಳು, ಮೇಕೆಗಳು, ಹಂದಿಗಳು ಇನ್ನಿತರ ಪ್ರಾಣಿಗಳು ಅಲ್ಲದೆ ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಭಾಗದಲ್ಲಿ ಹರಡಿರುವ ದಟ್ಟವಾದ ಕಾಡಿನಲ್ಲಿ ಅನೇಕ ವನ್ಯಮೃಗಗಳನ್ನು

ಕಾಣಬಹುದು. ಹುಲಿ, ಚಿರತೆ, ಆನೆ, ಕಾಡೆಮ್ಮೆ, ಚುಕ್ಕಿಜಿಂಕೆ, ನವಿಲು ಮೊದಲಾದ ವನ್ಯಜೀವಿಗಳನ್ನು ಸಹ ಕಾಣಬಹುದಾಗಿದೆ. ಬಂಡೀಪುರ ರಾಷ್ಟ್ರೀಯ ಉದ್ಯಾನವು ಹುಲಿ ಮತ್ತು ಆನೆಗಳಿಗೆ ಹೆಸರುವಾಸಿಯಾಗಿದೆ. ಬಂಡೀಪುರ ಗುಂಡ್ಲುಪೇಟೆಗೆ ಕೇವಲ 19 ಕಿ.ಮೀ. ದೂರದಲ್ಲಿರುವ ಪ್ರಸಿದ್ಧ ಅಭಯಾರಣ್ಯವಾಗಿದ್ದು ಮೊದಲಿಗೆ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾದ ವೇಣುಗೋಪಾಲ ರಾಷ್ಟ್ರೀಯ ಉದ್ಯಾನವನದ ಕೇಂದ್ರವಾಗಿತ್ತು. ಇದು ಸಮುದ್ರ ಮಟ್ಟದಿಂದ 1022 ರಿಂದ 1454 ಮೀಟರ್ ಎತ್ತರದಲ್ಲಿದೆ. ತಮಿಳುನಾಡಿನ ಮಧುಮಲೈ ಅಭಯಾರಣ್ಯಕ್ಕೆ ಹೊಂದಿಕೊಂಡಿದೆ. ಕಾಟಿ, ಕಾಡಾನೆ, ಕಾಡುಹಂದಿ, ಕಡವೆ, ಚುಕ್ಕೆ ಜಿಂಕೆ, ಕಾಡುನಾಯಿ, ಚಿರತೆ, ಹುಲಿ, ಮುಳ್ಳುಹಂದಿ, ಮೊಲ, ಮುಂಗೂಸಿ ಇನ್ನೂ ಮೊದಲಾದ ಪ್ರಾಣಿಗಳಿವೆ. ನವಿಲು, ಕಾಡುಕೋಳಿ, ಬಿಳಿಗೌಜಗ, ಗಿಳಿ, ಕೋಗಿಲೆ, ರಣಹದ್ದು ಮೊದಲಾದವುಗಳಿವೆ. ಅಲ್ಲದೆ ನಾಗರಹಾವು, ಕಟ್ಟುಹಾವು, ಮಂಡಲದ ಹಾವು, ಹೆಬ್ಬಾವು ಇನ್ನೂ ಮೊದಲ ಹಾವುಗಳಿವೆ. ಹುಲಿ ಸಂತತಿ ಕ್ಷೀಣವಾಗುತ್ತಿರುವುದನ್ನು ಯೋಚಿಸಿ ಇತ್ತೀಚೆಗೆ ಭಾರತ ಸರ್ಕಾರ 1973 ರಲ್ಲಿ ಹುಲಿ ಸಂರಕ್ಷಣಾ ಯೋಜನೆಯನ್ನು ಆರಂಭ ಮಾಡಲಾಗಿದೆ.[14]

## 1.3. ಅಧ್ಯಯನದ ಉದ್ದೇಶ

ದೇವಾಲಯಗಳು ಈ ನಾಡಿನ ಸಾಂಸ್ಕೃತಿಕ ಕೇಂದ್ರಗಳಾಗಿವೆ. ಯಾವುದೇ ಒಂದು ಸಂಸ್ಕೃತಿಯನ್ನು ನೋಡಿದರೆ ಅವು ಇತಿಹಾಸ ಪುಟಗಳಲ್ಲಿ ತನ್ನದೇ ಆದ ಪಾತ್ರವನ್ನು ಹೊಂದಿರುತ್ತದೆ. ಆದಕಾರಣ ಚರಿತ್ರೆಯಲ್ಲಿ ದೇವಾಲಯಗಳ ಪಾತ್ರ ಅತ್ಯಂತ ಮಹತ್ವಪೂರ್ವಕವಾಗಿದೆ. ಪ್ರಾಚೀನ ಕಾಲದಲ್ಲಿಯೇ ಮನುಷ್ಯರು ತಮ್ಮ ಬದುಕಿನ ಕೆಲವೊಂದು ವಿಚಾರಗಳಲ್ಲಿ ದೇವರ ಮೇಲೆ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಪ್ರಾಚೀನ ಕಾಲದಿಂದಲೂ ದೇವರು ಇರುವ ಧಾರ್ಮಿಕ ಕಟ್ಟಡವನ್ನು ದೇವಸ್ಥಾನವೆಂದೂ ಕರೆದುಕೊಂಡಿದ್ದಾರೆ. ಭಾರತ ದೇಶದ ಇತಿಹಾಸವನ್ನು ತೆರೆದು ನೋಡಿದರೆ ವಿಶಿಷ್ಟವಾದ ಹಾಗೂ ವೈವಿಧ್ಯಮಯವಾದ ಜನ ಸಮುದಾಯಗಳಿರುವ ಬಗ್ಗೆ ನಮ್ಮ ಭೌಗೋಳಿಕ ಪರಿಸರದಲ್ಲಿ ಅನೇಕ ಧರ್ಮಗಳಿರುವುದು ಕಂಡುಬರುತ್ತವೆ. ಅಂತೆಯೇ ಆಯಾ ಧರ್ಮಗಳಿಗೆ ದೇವಾಲಯಗಳಿವೆ. ಆದಕಾರಣ ದೇವಸ್ಥಾನಗಳಿಗೆ ಅತ್ಯಂತ ಮಹತ್ವವಿದೆ, ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರಲಿಲ್ಲ. ಅದಕ್ಕೆ ಬದಲಾಗಿ ಅವು ಸಾಮಾಜಿಕ ಜೀವನದ ಅಂಗಗಳಾಗಿ ಕಾರ್ಯನಿರ್ವಹಿಸಿರುವುದನ್ನು ಕಾಣಬಹುದು. ದೇವಾಲಯಗಳಲ್ಲಿ ಕಲೆಯನ್ನು ಉನ್ನತ ಮಟ್ಟದಲ್ಲಿ ಬೆಳೆಸಿರುವುದಕ್ಕೆ ಅನೇಕ ಶಾಸನಗಳು ಗ್ರಂಥಗಳು ಆಧಾರಗಳನ್ನು ಒದಗಿಸುತ್ತದೆ. ದೇವಾಲಯಗಳಲ್ಲಿ ಸಂಗೀತ, ನೃತ್ಯ ಮೊದಲಾದವುಗಳು ಕಲೆಗಳು ಜನ್ಮ ಪಡೆದಿವೆ. ಅದೇ

ಮಾದರಿಯಲ್ಲಿ ದೇವಸ್ಥಾನಗಳು, ವಾಸ್ತುಶಾಸ್ತ್ರ, ಮೂರ್ತಿಶಿಲ್ಪಗಳ ಬೆಳವಣಿಗೆಯ ಕೇಂದ್ರಗಳಾಗಿ ಕಾರ್ಯ ನಿರ್ವಹಿಸಿರುವುದನ್ನು ಸಹ ತಿಳಿಯಬಹುದಾಗಿದೆ.

ದೇವಸ್ಥಾನಗಳು ಕೇವಲ ಕಟ್ಟಡಗಳಾಗಿರದೇ ಅವುಗಳು ಅಧಿಷ್ಠಾನ, ಪ್ರಾಂಗಣ, ಶಿಖರ, ಗೋಪುರ ಇನ್ನೂ ಮೊದಲಾದ ಅಂಗಗಳನ್ನು ದೇವಾಲಯಗಳಲ್ಲಿ ಕಾಣಬಹುದಾಗಿದೆ. ದೇವಸ್ಥಾನದ ಸುತ್ತಲೂ ವ್ಯಾಪ್ತಿ ಕಲಾತ್ಮಕತೆಯ ಕೇಂದ್ರವಾಗಿರುತ್ತದೆ. ವಾಸ್ತುಶಿಲ್ಪ, ಮೂರ್ತಿಶಿಲ್ಪಗಳಂದ ಸೂಕ್ಷ್ಮವಾಗಿ ಕೆತ್ತನೆಗೊಂಡಿರುತ್ತವೆ. ಇಂತಹ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪವನ್ನು ಕುರಿತಾದ ಅಧ್ಯಯನಗಳೇ ಹೆಚ್ಚಾಗಿ ಇಲ್ಲಿಯ ತನಕ ನಡೆದುಬಂದಿವೆ. ಆದರೆ ಅವುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಂಗ್ಲಭಾಷೆಯಲ್ಲಿಯೇ ಕಂಡುಬರುತ್ತದೆ.

ಈ ದೃಷ್ಟಿಯಿಂದ ದೇವಸ್ಥಾನಗಳ ವಾಸ್ತು ಮತ್ತು ಮೂರ್ತಿಶಿಲ್ಪಗಳ ಅಧ್ಯಯನಕ್ಕೆ ಹೊರತಾದ ಸಾಂಸ್ಕೃತಿಕ ಅಧ್ಯಯನವನ್ನು ಈಗ ಪ್ರಸ್ತುತ ನಡೆಸಲಾಗಿರುತ್ತದೆ. ಸಮಕಾಲೀನ ಸಂದರ್ಭದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ವ್ಯವಸ್ಥೆ, ಧಾರ್ಮಿಕತೆಯ ವಿವಿಧ ರೂಪಗಳನ್ನು ಒಂದಲ್ಲ ಒಂದು ರೀತಿಯಲ್ಲಿ ದೇವಸ್ಥಾನಗಳಲ್ಲಿ ಚಿತ್ರಿಸಲಾಗುತ್ತದೆ. ಆದ ಕಾರಣ ಈ ರೀತಿಯ ಅಧ್ಯಯನ ಈಗ ಅವಶ್ಯಕತೆ ಇದೆ. ಅಲ್ಲದೆ ಅಗತ್ಯವೂ ಸಹ ಇದೆ. ಇದನ್ನು ಗಮನಿಸಿಕೊಂಡು ಅಂತಹ ಕೊರತೆಯನ್ನು ನೀಗಿಸುವ ಸಲುವಾಗಿ ಒಂದು ಸ್ವಪ್ರಯತ್ನವನ್ನು ಗುಂಡ್ಲುಪೇಟೆಯ ತಾಲ್ಲೂಕಿನ ದೇವಾಲಯಗಳ ಕುರಿತು ಅಧ್ಯಯನ ನಡೆಸಲಾಗಿದೆ.

ಅಧ್ಯಯನದ ಉದ್ದೇಶವು ದೇವಾಲಯಗಳ ಪ್ರಮುಖ ಅಂಶಗಳನ್ನು ಗಮನಿಸಿಕೊಂಡು, ಪ್ರಸ್ತುತ ಅಧ್ಯಯನದ ವಿಶ್ಲೇಷಣೆಯು ನಡೆಯುತ್ತದೆ. ದೇವಾಲಯಗಳ ಸಮಸ್ತ ನಾಗರೀಕರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕೇಂದ್ರಗಳಾಗಿ ನಿರ್ವಹಿಸಿದ ಪಾತ್ರ ಎಂತದ್ದು, ಎಂಬ ಪ್ರಶ್ನೆಗಳಗೆ ಇಲ್ಲಿ ಚರ್ಚಿಸಲಾಗಿರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಆಯಾ ಮತ ಧರ್ಮ ಹಾಗೂ ಅದು ಪಡೆದುಕೊಂಡ ಸ್ಥಾನ ಆ ಮೂಲಕ ಆ ಧರ್ಮಕ್ಕೆ ಪೂರಕವಾಗಿ ದೇವಸ್ಥಾನಗಳು, ಬಸದಿಗಳು ನಿರ್ಮಾಣವಾಗಿರುವುದು ಮುಖ್ಯ. ಈ ನಾಡಿನ ಸಂಸ್ಕೃತಿಗೆ ಯಾವುದೇ ಒಂದು ನಿರ್ದಿಷ್ಟ ಧರ್ಮವೇ ಮುಖ್ಯವೆಂದೆನಿಸಲಾರದು. ಇದಕ್ಕೆ ಬದಲಾಗಿ ಈ ಪ್ರಾಂತ್ಯಕ್ಕೆ ಒಳ್ಳೆಯದನ್ನು ಬಯಸುವ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಯಾವುದೇ ಧರ್ಮ ಜನಜೀವನದಲ್ಲಿ ಬೆಳೆಯುತ್ತದೆ. ಅದರಂತೆ ಈ ಭಾಗದ ಎಲ್ಲಾ ಧರ್ಮಕ್ಕೆ ಸೇರಿದ ದೇವಾಲಯಗಳು ಸಹ ಬೆಳೆದಿವೆ ಎನ್ನಬಹುದು. ಇವುಗಳನ್ನು ಗಮನಿಸಿದರೆ ರಾಜಾಶ್ರಯದಲ್ಲಿಯೇ ಧರ್ಮ ಮತ್ತು ಧರ್ಮಕ್ಕೆ ಪೂರಕವಾದ ಇನ್ನಿತರೆ ಸಂಗತಿಗಳು ಬೆಳೆದಿವೆ ಎಂಬುದನ್ನು ಇತಿಹಾಸ ಕಾಲದಿಂದಲೂ ತಿಳಿದುಬರುತ್ತದೆ. ಆಯಾ ರಾಜಾಶ್ರಯದಿಂದ ಆಯಾ ಕಾಲದ ರಾಜರ ಮನೋಧರ್ಮ,

ಅಭಿರುಚಿಯನ್ನುಧರಿಸಿ ದೇವಸ್ಥಾನಗಳು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬೆಳೆದಿವೆ. ರಾಜರುಗಳ ಕೊಡುಗೆಯಿಂದ ಕಲಾ ಪ್ರೋತ್ಸಾಹದಿಂದ ನಾಡಿನ ಸಂಸ್ಕೃತಿಯೂ ಶ್ರೀಮಂತವಾಗಿದೆ ಎಂದು ಹೇಳಬಹುದಾಗಿದೆ. ಗುಂಡ್ಲುಪೇಟೆ ತಾಲ್ಲೂಕು ಪ್ರಾಚೀನ ಕಾಲದಿಂದಲೂ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ರೀತಿಯ ಸ್ಥಿತ್ಯಂತರಗಳುಂಟಾದವು. ಈ ಸ್ಥಿತ್ಯಂತರಗಳ ನಡುವೆಯೇ ಆಯಾಧರ್ಮಗಳು ತಮ್ಮ ತಮ್ಮ ಕಾರ್ಯಚಟುವಟಿಕೆಯಿಂದ ನಡೆಯುತ್ತಿತ್ತು.

ಅಲ್ಲದೆ ರಾಜರುಗಳ ಕಾಲದಲ್ಲಿ ವಿಜಯೋತ್ಸವ, ಕೌಟುಂಬಿಕ ಕಾರಣಗಳು, ವ್ಯಕ್ತಿಗತ ಮನೋಭಿಲಾಷೆ, ರಾಜಪರಿವಾರದವರ, ಅಧಿಕಾರವರ್ಗದವರ, ಅಲ್ಲದೆ ಇನ್ನಿತರ ಸಮಯದಲ್ಲಿ ವಿಸ್ತಾರದಂತಹ ವಿಶೇಷ ಸಂದರ್ಭಗಳಲ್ಲಿಯೂ ದೇವಾಲಯಗಳು ನಿರ್ಮಾಣಗೊಂಡಿರುವುದು ಕಂಡುಬರುತ್ತದೆ. ಈ ಎಲ್ಲಾ ಬೆಳವಣಿಗೆಯಿಂದ ಈ ಗುಂಡ್ಲುಪೇಟೆ ತಾಲ್ಲೂಕಿನ ಎಲ್ಲಾ ದೇವಾಲಯಗಳ ಬಗೆಗೆ ಒಂದು ಸಾಂಸ್ಕೃತಿಕ ಹಿನ್ನೆಲೆಯ ನೋಟವನ್ನು ಪ್ರಸ್ತುತ ನೀಡುವುದು ನನ್ನ ಸಂಶೋಧನೆಯ ಮೂಲ ಉದ್ದೇಶವಾಗಿದೆ.

## 1.4. ಅಧ್ಯಯನದ ವ್ಯಾಪ್ತಿ

ಈ ಮಹಾಪ್ರಬಂಧದ ಅಧ್ಯಯನದ ವ್ಯಾಪ್ತಿಯು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿಗೆ ಮಾತ್ರ ಸೀಮಿತವಾಗಿರುತ್ತದೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ನಿರ್ಮಾಣವಾದ ದೇವಾಲಯಗಳಲ್ಲದೇ ದೇವಾಲಯಗಳಿಗೆ ದಾನದತ್ತಿ ಪಡೆದ ದೇವಾಲಯಗಳು, ಜೀರ್ಣೋದ್ಧಾರಗೊಂಡ ದೇವಾಲಯಗಳನ್ನು ಸಹ ಗಮನಿಸಲಾಗಿದೆ. ಈ ಅಧ್ಯಯನವು ಗುಂಡ್ಲುಪೇಟೆ ದೇವಾಲಯಗಳಿಗೆ ಅಷ್ಟೆ ಅಲ್ಲದೆ ಕೆಲವು ಶಾಸನ ಉಲ್ಲೇಖ ಹಾಗೂ ಮಾಹಿತಿ ನಿರ್ದೇಶನದಂತೆ ಈ ಭಾಗದ ಎಲ್ಲಾ ದೇವಾಲಯಗಳನ್ನು ಗ್ರಾಮಗಳನ್ನು ಸಂದರ್ಶಿಸಿ ಕ್ಷೇತ್ರ ಕಾರ್ಯದ ಮೂಲಕ ವಿವರಗಳನ್ನು ಪಡೆದು ಇಲ್ಲಿಯ ದೇವಾಲಯಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಅಲ್ಲದೆ ಸಾಂಸ್ಕೃತಿಕ ವಿವರಗಳನ್ನು ದಾನದತ್ತಿಗಳನ್ನು ಆಯಾ ಸಂದರ್ಭಗಳನ್ನು ವಿವರಿಸುವಾಗ ಶಾಸನಗಳ ಉಲ್ಲೇಖ ನೀಡಲಾಗಿರುತ್ತದೆ. ಅವುಗಳನ್ನು ಆಯಾ ಅಧ್ಯಯನದಲ್ಲಿ ಉದಾಹರಿಸಲಾಗಿದೆ. ಪ್ರಾಗೈತಿಹಾಸಿಕ ಮಾನವನ ನೆಲೆಗಳಿಂದ ಹಿಡಿದು ಇಲ್ಲಿಯ ತನಕ ದೇವಾಲಯಗಳು, ಶಾಸನಗಳು, ಮೂರ್ತಿಶಿಲ್ಪಗಳು, ಸ್ಮಾರಕ ಶಿಲ್ಪಗಳು ಈ ಮಾರ್ಗದ ಮತಮಾನ್ಯಗಳನ್ನು ಸೇರಿಸಲಾಗುತ್ತದೆ. ಅಲ್ಲದೆ ಅನೇಕ ಚಾರಿತ್ರಿಕ ಐತಿಹಾಸಿಕ ಗ್ರಂಥಗಳ ಸಹಾಯದಿಂದ ಅಧ್ಯಯನವನ್ನು ನಡೆಸಲಾಗಿರುತ್ತದೆ. ಅಲ್ಲದೆ ಭೌಗೋಳಿಕ ಪರಿಸರದ ವ್ಯಾಪ್ತಿ ಕಾಲದ ಮಿತಿ ಅಧ್ಯಯನದ ವಿಸ್ತಾರವನ್ನು ಗಮನಿಸಿಕೊಂಡು ಸಮಗ್ರ ದೇವಾಲಯಗಳನ್ನು ವೀರಗಲ್ಲುಗಳನ್ನು ಮಾಸ್ತಿಕಲ್ಲುಗಳ ಸಹಿತ ಅಧ್ಯಯನವನ್ನು ನಡೆಸಲಾಗಿರುತ್ತದೆ.

## 1.5. ಅಧ್ಯಯನದ ಸ್ವರೂಪ

ಯಾವುದೇ ಸಮಾಜದ ಅಲ್ಲದೆ ಯಾವುದೇ ಒಂದು ಕಾಲಮಾನದಲ್ಲಿ ಇತಿಹಾಸದ ಅಧ್ಯಯನವೆಂದರೆ ಅದು ಸಮಾಜದ ಇನ್ನಿತರ ಕಲಾ ಚಟುವಟಿಕೆಗಳ ವಿಚಾರಗಳು ತಿಳಿದುಬರುತ್ತದೆ. ಅದು ಅಲ್ಲದೆ ಕಾಲಮಾನದ ಮತ್ತು ಆಯಾ ಪ್ರಾಂತ್ಯದ ಪ್ರಮುಖ ಪ್ರವೃತ್ತಿಗಳಿಂದ ರೂಪಿತವಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಿಂದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಪ್ರದೇಶದಲ್ಲಿ ಹಲವಾರು ಶತಮಾನಗಳಿಂದ ಈ ಭಾಗದ ಪ್ರದೇಶದಲ್ಲಿ ದೇವಾಲಯಗಳು ಪ್ರಭಾವ ಬೀರಿರುವುದನ್ನು ಕಂಡುಬರುತ್ತದೆ. ಈ ಭಾಗದ ದೇವಾಲಯಗಳ ಸಂಶೋಧನೆಯಿಂದ ಶೈವ, ವೈಷ್ಣವ, ಜೈನ, ಇತರ ಪಂಥಗಳ, ಧರ್ಮಗಳ ದೇವಾಲಯಗಳು ಕಂಡುಬರುತ್ತದೆ. ಆದಕಾರಣ ಈ ಸಂಶೋಧನಾ ವಿಧಾನವು ತನ್ನ ಮೂಲ ಧ್ಯೇಯವನ್ನು ಕಾಲಾನುಕ್ರಮದಂತೆ ವಿಶಿಷ್ಟ ಮಾದರಿಯಲ್ಲಿ ಕಂಡುಬರುತ್ತದೆ. ಗುಂಡ್ಲುಪೇಟೆ ಪ್ರದೇಶದ ಈ ಭಾಗದ ಚರಿತ್ರೆ ಎಂದರೆ ಒಂದು ಪ್ರಾಂತ್ಯದ ಜನರು ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಯಾವ ರೀತಿ ಬೆಳವಣಿಗೆಯನ್ನು ಸಾಧಿಸಿದ್ದಾರೆ ಎಂಬುದು ತಿಳಿದುಬರುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನ ಪ್ರಾಂತೀಯ ಸಮುದಾಯಗಳ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಭೌತಿಕ ಇನ್ನಿತರ ವಿಚಾರಗಳು ವಿಪುಲವಾದ ವಿವರಗಳನ್ನು ಇತಿಹಾಸಕಾರರಿಗೆ ಅಲ್ಲದೆ ಸಂಶೋಧಕರಿಗೆ ನೆರವು ನೀಡುತ್ತದೆ. ಈ ಭಾಗದ ಮೇಲೆ ಪ್ರಾಚೀನ ಕಾಲದಿಂದಲೂ ರಾಜ್ಯವ್ಯವಸ್ಥೆ ಅಲ್ಲದೆ ಆಡಳಿತ ವ್ಯವಸ್ಥೆಯಲ್ಲಿ ಕೇಂದ್ರೀಕೃತ ಪ್ರಭುತ್ವಕ್ಕೆ ಹೆಚ್ಚು ಪ್ರಾಶಸ್ತ್ಯವಿದ್ದಿತು. ಅಂದಿನ ಕಾಲದ ರಾಜರಿಂದ ಹಿಡಿದು ಇಂದಿನ ಕಾಲದ ಜನಸಾಮಾನ್ಯರು ಸಹ ಪ್ರಾದೇಶಿಕವಾಗಿ ಧರ್ಮ, ಸಂಸ್ಕೃತಿ, ಸಾಹಿತ್ಯ ಮತ್ತು ಕಲೆಗಳನ್ನು ಪ್ರೋತ್ಸಾಹಿಸಿರುವುದು ಬೆಳೆಸಿರುವುದು ಕಂಡುಬರುತ್ತದೆ. ಇಂತಹ ವಿಶಿಷ್ಟವಾದ ಹಾಗೂ ಚಾರಿತ್ರಿಕವಾದ, ಸಾಂಸ್ಕೃತಿಕವಾದ ದೃಷ್ಟಿಯಿಂದ ಶೈವ ಪರಂಪರೆಯ ವೈಷ್ಣವ ಪರಂಪರೆ, ಜೈನ ಪರಂಪರೆ, ಇತರ ಪಂಥಗಳು (ಶಕ್ತಿಪಂಥ) ದೇವಾಲಯಗಳ ಬೆಳವಣಿಗೆಯನ್ನು ಗುಂಡ್ಲುಪೇಟೆಯ ಪ್ರಾಂತ್ಯದಲ್ಲಿ ಕಾಣಬಹುದಾಗಿದೆ.

## 1.6. ಅಧ್ಯಯನದ ವಿಧಾನ

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಪ್ರದೇಶಕ್ಕೆ ಪೂರಕವಾಗಿ ಈ ಸಂಶೋಧನಾ ಪ್ರೌಢಪ್ರಬಂಧವನ್ನು ತಯಾರಿಸಲು ಈ ಕೆಳಕಂಡ ರೀತಿಯ ವಿಧಾನಗಳನ್ನು ಅನುಸರಿಸಲಾಗಿದೆ. "ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳು–ಒಂದು ಸಾಂಸ್ಕೃತಿಕ

ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧದ ರಚನೆಯಲ್ಲಿ ಕೆಲವು ಹೊಸ ಹೊಸ ಮಾಹಿತಿಗಳನ್ನು ಪಡೆದುಕೊಂಡು ಅಧ್ಯಯನ ನಡೆಸಲಾಗಿದೆ. ಮುಖ್ಯವಾಗಿ ಶಾಸನಗಳು, ಕೆಲವು ಸಂದರ್ಭದಲ್ಲಿ ಕೆಲವೊಂದು ಗ್ರಂಥಗಳು ಹಾಗೂ ಪ್ರಮುಖವಾಗಿ ಕ್ಷೇತ್ರಕಾರ್ಯವನ್ನು ಅವಲಂಬಿಸಿ ಅಧ್ಯಯನ ಮಾಡಲಾಗಿದೆ. ಶಾಸನಗಳಲ್ಲಿ ಐತಿಹಾಸಿಕವಾಗಿ ಅತ್ಯಮೂಲ್ಯ ಲಿಖಿತ ದಾಖಲೆಗಳಾಗಿವೆ. ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಲ್ಲದೆ ಇತ್ಯಾದಿ ಯಾವುದೇ ವಿಷಯಕ್ಕೆ ಲಿಖಿತ ದಾಖಲೆಗಳೇ ಪ್ರಧಾನವಾಗಿರುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಶಾಸನಗಳೇ ಮೂಲ ಆಕರಗಳಾಗಿವೆ. ಶಾಸನಗಳು ಆ ಕಾಲದ ಪ್ರಮುಖ ದಾಖಲೆಗಳು ಅವುಗಳಿಂದ ತಿಳಿದುಬರುವ ಮಾಹಿತಿಯು ಬಹಳಷ್ಟು ಚದುರಿದ ಹಾಗೂ ಬಿಡಿ ಮಾಹಿತಿಗಳೇ ಆದರೂ ಅವುಗಳನ್ನು ಒಂದು ಚೌಕಟ್ಟಿನಲ್ಲಿ ಪರಿಶೀಲಿಸಿದಾಗ ವಾಸ್ತು ಮತ್ತು ಅಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳನ್ನು ವಿಶ್ಲೇಷಿಸಲು ನೆರವಾಗುತ್ತದೆ. ಈ ಭಾಗದ ಶಾಸನಗಳ ಹಿನ್ನೆಲೆಯಲ್ಲಿ ನಿರ್ಮಾಣವಾದ ದೇವಾಲಯಗಳು ಜೀರ್ಣೋದ್ಧಾರ ಹೊಂದಿದೆ. ದೇವಾಲಯಗಳು, ದಾನದತ್ತಿಗಳನ್ನು ಪಡೆದ ದೇವಾಲಯಗಳು, ಅಲ್ಲದೆ ಅವುಗಳೆಲ್ಲವುಗಳಿಗೆ ದೊರೆತ ದಾನದತ್ತಿಗಳ ಪರಿಚಯ ಮಾಡಿಕೊಳ್ಳುವಾಗ ತಿಳಿದುಬರುವ ಸಾಂಸ್ಕೃತಿಕ ಮಹತ್ವವನ್ನು ತಿಳಿಸಲಾಗಿರುತ್ತದೆ.

ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಯಿಂದ ದೇವಾಲಯಗಳ ಬಗ್ಗೆ ಮಾಹಿತಿಯನ್ನು ಪಡೆದು ಕ್ಷೇತ್ರಕಾರ್ಯ ಮಾಡಬೇಕಾದ ಸ್ಥಳಗಳನ್ನು ಖಚಿತ ಪಡಿಸಿಕೊಳ್ಳಲಾಗುವುದು. ದೇವಾಲಯದ ಹೆಸರು, ಸ್ಥಳ, ನಿವೇಶನ, ದಿಕ್ಕು, ಕಾಲಮಾನ, ರಾಜವಂಶ, ಶೈಲಿ, ಸ್ಮಾರಕದ ವಿವರ, ಮೂರ್ತಿಶಿಲ್ಪಗಳು, ಛಾಯಾಚಿತ್ರ ವಿವರ, ಶಾಸನಗಳು, ಶಾಸನೋಕ್ತ ವಿಷಯ, ನಕ್ಷೆ ಇತರ ವಿವರಗಳನ್ನೊಳಗೊಂಡ ಪತ್ರವೊಂದನ್ನು ಸಿದ್ದಪಡಿಸಿಕೊಂಡು ದೇವಾಲಯವಿರುವ ಸ್ಥಳಕ್ಕೆ ಹೋಗಿ ಅದನ್ನು ಭರ್ತಿ ಮಾಡಿಕೊಂಡು ಜೊತೆಗೆ ಛಾಯಾಚಿತ್ರಗಳನ್ನು ತೆಗೆದು ಅಧ್ಯಯನವನ್ನು ಮಾಡಲಾಗಿರುತ್ತದೆ.

ಅಲ್ಲದೆ ಈ ಹಿಂದೆ ಇದ್ದ ಪ್ರಾಚೀನ ದೇವಾಲಯಗಳ ರೇಖಾಚಿತ್ರಗಳನ್ನು ಬಳಸಿಕೊಂಡು ಇನ್ನೂ ಕೆಲವು ದೇವಾಲಯಗಳ ರೇಖಾಚಿತ್ರಗಳನ್ನು ತಯಾರಿಸಲಾಗಿರುತ್ತದೆ. ಈಗಾಗಲೇ ಮೊದಲು ಪ್ರಕಟಿತ ಗ್ರಂಥಗಳಿಂದ ಸಂಗ್ರಹಿಸಲಾದ ಟಿಪ್ಪಣಿ ಇತ್ಯಾದಿ ಮಾಹಿತಿಗಳನ್ನು ತಾತ್ವಿಕವಾಗಿ ವಿಶ್ಲೇಷಿಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಕ್ಷೇತ್ರ ಪರಿವೀಕ್ಷಣಾ ಕಾಲದಲ್ಲಿ ತೆಗೆದ ಛಾಯಾಚಿತ್ರಗಳು ಈ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು

ಒದಗಿಸಲಾಗಿರುತ್ತದೆ. ಹೀಗೆ ಈ ಭಾಗದ ಶಾಸನಗಳ ಆಧಾರದ ಮೇಲೆ ದೇವಾಲಯಗಳನ್ನು ಗುರುತಿಸಲು ಪ್ರಯತ್ನಿಸಲಾಗಿ ಅವುಗಳ ವಿಷಯವು ವಿಸ್ತಾರವಾಗಿರುತ್ತದೆ.

ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪೂರಕ ಸಾಮಾಗ್ರಿಯೆಂದು ಪರಿಗಣಿಸಿ ರಾಜ, ರಾಜವಂಶ ಮತ್ತು ಸಾಮ್ರಾಜ್ಯದ ಮೇಲೆ ಬರೆದಿರಬಹುದಾದ ಚಾರಿತ್ರಿಕ ಗ್ರಂಥಗಳಲ್ಲದೆ ವಾಸ್ತು ಮತ್ತು ಶಿಲ್ಪ, ಮೂರ್ತಿಶಿಲ್ಪಗಳನ್ನು ಆಧಾರವಾಗಿಟ್ಟುಕೊಂಡು ರಚಿತವಾದ ಗ್ರಂಥಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಬಂಧದಲ್ಲಿ ಆಯಾಯ ದೇವಾಲಯಗಳ ವಿಶ್ಲೇಷಣೆಯ ನಂತರ ಅದಕ್ಕೆ ಸಂಬಂಧಿಸಿದಂತೆ ಛಾಯಾಚಿತ್ರಗಳನ್ನು ನೀಡಲಾಗಿರುತ್ತದೆ. ಹಾಗೆಯೇ ಅನುಬಂಧದಲ್ಲಿ ಅಧ್ಯಯಯನಕ್ಕೆ ನೆರವಾದ ಮೂಲ ಮತ್ತು ಪೂರಕ ಆಕರ ಗ್ರಂಥಗಳ ಪಟ್ಟಿಯನ್ನು ಸಹ ನೀಡಲಾಗಿರುತ್ತದೆ. ಅಲ್ಲದೆ ವಾರ್ಷಿಕ ಗೆಜೆಟಿಯರ್‌ಗಳ ವಿಚಾರವನ್ನು ಗಮನಿಸಲಾಗಿರುತ್ತದೆ. ಇವುಗಳೆಲ್ಲದರ ಜೊತೆಗೆ ಕೆಲವು ವಿಚಾರಗಳಿಗೆ ಪೂರಕವಾಗಿ ಆಯಾ ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಿ ಅಧ್ಯಯನವನ್ನು ನಡೆಸಲಾಗಿರುತ್ತದೆ.

## 1.7. ಅಧ್ಯಯನದ ಮಹತ್ವ

ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಇತಿಹಾಸವನ್ನು ಗಮನಿಸಿದರೆ ವಿಶೇಷತೆಯನ್ನು ಪಡೆದಿದೆ ಎಂದು ಹೇಳಬಹುದು. ಈ ಭಾಗದ ಶಿಲ್ಪಗಳು ದೇವಾಲಯಗಳು ಆಯಾ ಧರ್ಮದ ಪರಂಪರೆಗೆ ಪೂರಕವಾಗಿದ್ದು. ದೇವಾಲಯಗಳು ಬೆಳೆದಂತೆ ಧರ್ಮದ ಪರಿಕಲ್ಪನೆ ಬೆಳೆದಿರುವುದರ ಪ್ರಕಾರ ಆಯಾ ಶಿಲ್ಪಗಳು ದೇವಾಲಯಗಳಲ್ಲಿ ಕಂಡುಬರುತ್ತದೆ. ಅತ್ಯಂತ ಹಳೆಯ ಕಾಲದ ದೇವಾಲಯಗಳನ್ನು ಗಮನಿಸಿದರೆ ಅಂದಿನ ಕಾಲದ ವೈಶಿಷ್ಟ್ಯತೆಗಳನ್ನು ಕಾಣಬಹುದಾಗಿದ್ದು, ಈ ಪ್ರಾಂತ್ಯದ ಆಯಾ ಧರ್ಮದ ದೇವಾಲಯಗಳ ಕುರಿತು ಸರಿಯಾದ ಪ್ರಮಾಣದಲ್ಲಿ ಚರ್ಚೆಯಾಗಿಲ್ಲ. ಈ ಹಿನ್ನೆಲೆಯಿಂದ ಗುಂಡ್ಲುಪೇಟೆಯ ಭಾಗದ ದೇವಾಲಯಗಳನ್ನು ಗಮನಿಸಿದರೆ ಮಾನವನು ನಿರ್ಮಿಸಿದ ಶಿಶು ಎಂಬ ಪರಿಕಲ್ಪನೆಯೂ ಸಹ ಬರುತ್ತದೆ. ಭೂಮಿಯೇ ಇತಿಹಾಸದ ಮಾತೃಗರ್ಭ, ಮಾನವನು ಈ ಇತಿಹಾಸದ ಆಯಾ ಪ್ರಾಂತ್ಯಗಳ ಸ್ವಾಭಾವಿಕ ಭೌಗೋಳಿಕ ವಾತಾವರಣವನ್ನು ಅವಲಂಬಿಸಿರುತ್ತಾನೆ. ಅಲ್ಲದೆ ಇತಿಹಾಸವನ್ನು ರೂಪಿಸುತ್ತಾನೆ ಎಂಬ ಅಭಿಪ್ರಾಯ ಇಂದಿಗೂ ಪ್ರಸ್ತುತ ಅನೇಕ ಹಿರಿಯ ವಿದ್ವಾಂಸರು ಇದನ್ನು ಸಮ್ಮತಿಸಿದ್ದಾರೆ. ಆದಕಾರಣ ಗುಂಡ್ಲುಪೇಟೆ ಪ್ರದೇಶದ ಪ್ರಾಕೃತಿಕ ಹಿನ್ನೆಲೆಯಲ್ಲಿ ದೇವಾಲಯಗಳಿಂದ ಅನೇಕ ರೀತಿಯ ರೂಢಿಸಂಪ್ರದಾಯಗಳು ಬೆಳೆದಿವೆ. ಅದರ ಬಗ್ಗೆ ಚರ್ಚಿಸಿರುವುದು ಅಧ್ಯಯನದ ಮಹತ್ವದ್ದಾಗಿದೆ.

## 1.8. ಐತಿಹಾಸಿಕ ಹಿನ್ನೆಲೆ

ಕರ್ನಾಟಕ ನಮ್ಮ (ಕನ್ನಡ) ನಾಡಿನ ಇತಿಹಾಸದಲ್ಲಿ ಅನೇಕ ಪ್ರಾದೇಶಿಕ ಇತಿಹಾಸಗಳು ಅಂತರ್ಗತವಾಗಿವೆ ಎಂಬುದು ಸರ್ವವಿಧಿತ ಸಂಗತಿ. ಒಂದು ಪ್ರದೇಶದ ಇತಿಹಾಸವನ್ನು ಪುನಃರಚಿಸಲು ಇರುವ ಅಧಾರಗಳನ್ನು ಸ್ಥೂಲವಾಗಿ ಲಿಖಿತ ಆಧಾರಗಳು ಮತ್ತು ಅಲಿಖಿತ ಆಧಾರಗಳು ಎಂದು ವರ್ಗೀಕರಿಸಬಹುದಾಗಿದೆ. ಲಿಖಿತ ಆಧಾರದಲ್ಲಿ ಅಗ್ರಸ್ಥಾನ ಸಲ್ಲುವುದು ಶಾಸನಗಳಿಗೆ ಅಲಿಖಿತ ಆಧಾರಗಳು ಎಷ್ಟೇ ಮಹತ್ವದ್ದಾದರೂ ಕಾಲನಿರ್ಣಯದ ವಿಚಾರದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವನ್ನು ಕಾಣುತ್ತೇವೆ. ಶಾಸನಗಳು ಈ ನಾಡಿನ ಸಂಪತ್ತು, ಯಾವುದೇ ವಿಚಾರವನ್ನು ತಿಳಿಯಬೇಕಾದರೆ, ಶಾಸನಗಳ ಮಹತ್ವ ಇದ್ದೇ ಇರುತ್ತದೆ. ಈ ಹಿನ್ನೆಲೆಯಿಂದ ಗುಂಡ್ಲುಪೇಟೆ ಐತಿಹಾಸಿಕ ಹಿನ್ನೆಲೆಯನ್ನು ಶಾಸನಗಳ ಜೊತೆಗೆ ಇನ್ನಿತರ ಆಕಾರಗಳೊಂದಿಗೆ ಗುರುತಿಸುವಂತಹ ಪ್ರಯತ್ನವಾಗಿದೆ.

ನನ್ನ ಸಂಶೋಧನ ಶೀರ್ಷಿಕೆ “ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳು–ಒಂದು ಸಾಂಸ್ಕೃತಿಕ ಅಧ್ಯಯನ” ಎಂಬುದಾಗಿರುತ್ತದೆ. ಆದರೆ ಈ ದೇವಾಲಯಗಳ ಹಿನ್ನೆಲೆ–ಬೆಳವಣಿಗೆಯಲ್ಲಿ ನಾಡಿನ ಹಾಗೂ ಈ ಪ್ರಾಂತ್ಯದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಇತಿಹಾಸವನ್ನು ಕಟ್ಟುವಲ್ಲಿ ತುಂಬಾ ನೆರವಾಗಿವೆ. ಅಲ್ಲದೆ ಭಾಷೆ, ಧರ್ಮ, ಸಮಾಜ, ಸಂಸ್ಕೃತಿ, ಆಚಾರ–ವಿಚಾರ ಇತ್ಯಾದಿ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಅದು ಅಲ್ಲದೆ ಈ ಭಾಗದ ರಾಜಮನೆತನಗಳ ಕೊಡುಗೆಯು ಸಹ ಅಷ್ಟೇ ಪ್ರಮುಖವಾಗಿರುತ್ತದೆ.

ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬಂತಹ ಭಾವನೆ ಬಹುಪ್ರಚಲಿತದಲ್ಲಿದೆ. ಯಾವುದೇ ಒಂದು ಇತಿಹಾಸವನ್ನು ಬರೆಯಬೇಕಾದರೆ ಗ್ರಂಥಗಳಲ್ಲಿ ರಾಜಕೀಯ ಇತಿಹಾಸವೇ ಪ್ರಧಾನವಾಗಿರುತ್ತದೆ. ಆಯಾ ಪ್ರಾಂತ್ಯವನ್ನು ಆಳಿದ ರಾಜರು ಅಲ್ಲಿ ಬದುಕಿದ ಜನರ ಒಂದು ಗಣನೀಯವಾದ ಭಾಗವಾಗಿದ್ದು, ಅಲ್ಲಿನ ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ ಅವರ ಜೀವನ ಮೌಲ್ಯಗಳು ಇತ್ಯಾದಿ ವಿಚಾರಗಳು ಆಯಾ ಪ್ರಾಂತ್ಯದ ಇತಿಹಾಸವಾಗಿರುತ್ತದೆ. ಕರ್ನಾಟಕದ ಇತಿಹಾಸ ಪ್ರಾಗೈತಿಹಾಸಿಕ ಕಾಲದಿಂದ ಇಲ್ಲಿಯ ತನಕ ತನ್ನದೇ ಆದ ಸಾಂಸ್ಕೃತಿಕ ಬೆಳವಣಿಗೆಯ ಎಲ್ಲಾ ಘಟ್ಟಗಳನ್ನು ಒಳಗೊಂಡಿದೆ. ಅದೇ ಮಾದರಿಯಲ್ಲಿ ಪ್ರಸ್ತುತ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಗೆ ಸೇರಿದ ಗುಂಡ್ಲುಪೇಟೆಯು ಸಹ ತನ್ನದೇ ಆದ ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪ್ರದೇಶವು ಪುರಾತತ್ವ ಅಧ್ಯಯನದ ದೃಷ್ಟಿಯಿಂದ ಅಲ್ಲದೆ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ ದೃಷ್ಟಿಯಿಂದ

ಹಿಂದುಳಿದಿರುವ ಪ್ರದೇಶವಾಗಿದೆ. ಗುಂಡ್ಲುಪೇಟೆ ತಾಲ್ಲೂಕು ಪ್ರಾಗೈತಿಹಾಸಿಕ ಕಾಲದಿಂದ ಇತಿಹಾಸ ಕಾಲದವರೆವಿಗೂ ಐತಿಹಾಸಿಕ ದೃಷ್ಟಿಯಿಂದ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಐತಿಹಾಸಿಕ ಇರಬಹುದು ಅಥವಾ ರಾಜಕೀಯ ಇರಬಹುದು. ಅದನ್ನು ನಾವು ಗುಂಡ್ಲುಪೇಟೆ ತಾಲ್ಲೂಕಿಗೆ ಮಾತ್ರ ಸೀಮಿತಪಡಿಸುವಂತಿಲ್ಲ. ಅದು ಇಡೀ ದಕ್ಷಿಣ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದಂತಹ ಎಲ್ಲಾ ರಾಜಮನೆತನಗಳು, ಅಂದಿನ ಮಹಿಷಮಂಡಲ ಪ್ರಾಂತ್ಯಕ್ಕೆ ಸೇರಿದ ಗುಂಡ್ಲುಪೇಟೆ ಭಾಗದಲ್ಲಿಯೂ ತಮ್ಮ ಹತೋಟಿಯನ್ನು ಹೊಂದಿದ್ದರು. ಇದರಿಂದ ಈ ಭಾಗದಲ್ಲಿ ದೊರೆತಿರುವ ಚಾರಿತ್ರಿಕ ಹಿನ್ನೆಲೆಯ ಆಧಾರಗಳಿಂದ ಮೇಲೆ ಅಧ್ಯಯನಕ್ಕೆ ಪೂರಕವಾಗಿ ಐತಿಹಾಸಿಕ ಹಿನ್ನೆಲೆಯನ್ನು ನೀಡಲು ಹೊರಟರೆ, ದಕ್ಷಿಣ ಕರ್ನಾಟಕದಲ್ಲಿ ಮಾನವನ ಜೀವನ ಪ್ರಾರಂಭವಾಗುವುದು ಶಿಲಾಯುಗದ ಕಾಲದಿಂದ ಅಂದರೆ ತಪ್ಪಾಗಲಾರದು, ಇದರಿಂದ ದಕ್ಷಿಣ ಕರ್ನಾಟಕದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಿಲಾಯುಗದ ನೆಲೆಗಳು ಪತ್ತೆಯಾಗಿವೆ. ಈ ಭಾಗದ ಕಾವೇರಿ ಮತ್ತು ಕಪಿಲಾ ನದಿಗಳ ಪಾತ್ರದ ಉದ್ದಗಲಕ್ಕೂ ಆದಿ ಶಿಲಾಯುಗದಿಂದ ಹಿಡಿದು ನವಶಿಲಾಯುಗದವರೆವಿಗೂ ಮಾನವ ಸಂಸ್ಕೃತಿ ನೆಲೆಸಿತ್ತೆಂಬುದು ಅನೇಕ ಕಡೆ ನಡೆಸಲಾಗಿರುವ ಉತ್ಖನನಗಳ ವರದಿಗಳಿಂದ ತಿಳಿದುಬರುತ್ತದೆ.[15] ಕರ್ನಾಟಕದ ಇತಿಹಾಸ ಪ್ರಾರಂಭವಾಗುವುದು ಕ್ರಿ.ಶ.ಪೂರ್ವ 3ನೆಯ ಶತಮಾನದ ನಂತರ ಅದಕ್ಕಿಂತ ಮೊದಲಿನ ಯಾವುದೇ ರೀತಿಯ ಇತಿಹಾಸ ಆಧಾರಗಳು ಕಂಡುಬರುವುದಿಲ್ಲ. ಆದರೆ ಉತ್ತರ ಭಾರತದಿಂದ ಚಂದ್ರಗುಪ್ತ ಮೌರ್ಯರವರು ತನ್ನ ಗುರುವಾದ ಭದ್ರಬಾಹುವಿನೊಂದಿಗೆ ದಕ್ಷಿಣ ಭಾರತಕ್ಕೆ ಬಂದು ಶ್ರವಣ ಬೆಳಗೊಳದಲ್ಲಿ ನೆಲೆಸಿದ್ದನೆಂದು ಸಹ ತಿಳಿದುಬರುತ್ತದೆ ಹಾಗೂ ಚಂದ್ರಗುಪ್ತ ಮೌರ್ಯ ಮೊಮ್ಮಗನಾದ ಅಶೋಕ ಚಕ್ರವರ್ತಿಯ ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. ಅಶೋಕನು ಬೌದ್ಧ ಧರ್ಮದ ಪ್ರಚಾರಕ್ಕಾಗಿ ಬೌದ್ಧ ಅನುಯಾಯಿಗಳನ್ನು ಮಹಿಷಮಂಡಲ ಪ್ರಾಂತ್ಯಕ್ಕೆ ಅಂದರೆ ಇಂದಿನ ದಕ್ಷಿಣ ಕರ್ನಾಟಕಕ್ಕೆ ಕಳುಹಿಸಿದನೆಂದು ತಿಳಿದು ಬರುತ್ತದೆ. ಗುಂಡ್ಲುಪೇಟೆಯು ಸಹ ಮಹಿಷಮಂಡಲ ಪ್ರಾಂತ್ಯಕ್ಕೆ ಸೇರಿತ್ತು.[16] ಕರ್ನಾಟಕದಲ್ಲಿ ಶಾತವಾಹನರು, ಕದಂಬರು, ಗಂಗರು, ರಾಷ್ಟ್ರಕೂಟರು, ಬಾದಾಮಿ ಚಾಲುಕ್ಯರು, ಕಲ್ಯಾಣಿಚಾಲುಕ್ಯರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರ್ ಇನ್ನೂ ಮೊದಲಾದ ರಾಜಮನೆತನಗಳು ಆಡಳಿತ ನಡೆಸಿರುತ್ತಾರೆ.

ಆಡಳಿತ ನಡೆಸಿದಂತಹ ರಾಜಮನೆತನಗಳು, ಶ್ರೀಮಂತವರ್ಗದವರು ಅಲ್ಲದೆ ಸಾಮಾನ್ಯವರ್ಗದ ಜನರುಗಳು ಸಹ ಶಾಸನವನ್ನು ಹಾಕಿಸಿದ್ದಾರೆ. ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದಂತೆ ಸುಮಾರು 76 ಗ್ರಾಮಗಳಲ್ಲಿ 224 ಶಾಸನಗಳನ್ನು ಹಾಕಿಸಿದ್ದಾರೆ.[17] ಅಲ್ಲದೆ ಇತ್ತೀಚೆಗೆ ಕೆಲವೊಂದು ಊರುಗಳಲ್ಲಿ ಶಾಸನಗಳು ಪತ್ತೆಯಾಗಿದೆ. ಇವುಗಳ ಬಗ್ಗೆ ನಿಖರವಾದ

ಆಧಾರಗಳಲ್ಲ. ಆದರೂ ಸಹ ಈ ಶಾಸನಗಳು ಅಂದಿನ ಕಾಲದ ಐತಿಹಾಸಿಕ ಪರಂಪರೆಯ ದಾಖಲೆಗಳನ್ನು ನಿರ್ಧರಿಸುವ ಅಮೂಲ್ಯ ಆಕರಗಳಾಗಿವೆ. ಶಾಸನಗಳು ದೇವಾಲಯಗಳನ್ನು ನಿರ್ಮಿಸಿರುವ ಬಗ್ಗೆ, ದತ್ತಿ ನೀಡಿರುವ ಬಗ್ಗೆ, ದಾನ ನೀಡಿರುವ ಬಗ್ಗೆ ಯುದ್ಧ ನಡೆಸಿರುವ ಬಗ್ಗೆ, ಕೆರೆ ಕಟ್ಟಿ, ಕೋಟೆ ನಿರ್ಮಿಸಿರುವ ವಿಚಾರ, ಆಚಾರ-ವಿಚಾರ, ಪೂಜಾ ವಿಧಿ-ವಿಧಾನ, ರಾಜಮನೆತನ, ಬಿರುದುಬಾವಲಿ, ವೀರರ ಬಗ್ಗೆ ಶಿಲ್ಪಗಳನ್ನು ಮಾಡಿಸಿರುವ ಬಗ್ಗೆ ಗ್ರಾಮಾಡಳಿತ, ನಾಡುಗಳು, ಉಪನಾಡುಗಳು, ದಂಡನಾಯಕರು, ರಾಜಕುಮಾರರು, ರಾಣಿಯರು ಧರ್ಮಗಳ ಬಗ್ಗೆ, ವೀರಗಲ್ಲು, ಮಾಸ್ತಿಕಲ್ಲು ಮೊದಲಾದ ವಿಚಾರಗಳನ್ನು ಶಾಸನಗಳ ಹಿನ್ನೆಲೆಯಿಂದ ಪಡೆದುಕೊಳ್ಳಬಹುದಾಗಿದೆ.

ಪ್ರಸ್ತುತ ಸಂಶೋಧನ ವಿಷಯ ಗುಂಡ್ಲುಪೇಟೆಯ ದೇವಾಲಯಗಳು-ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ವಿಚಾರಕ್ಕೆ ಪೂರಕವಾಗಿರುವುದರಿಂದ ದೇವಾಲಯಗಳ ಜೊತೆಯಲ್ಲಿಯೇ ಅದಕ್ಕೆ ಸಂಬಂಧಿಸಿದ ಶಾಸನದ ಬಳಕೆಯನ್ನು ತಿಳಿಸಲಾಗಿರುತ್ತದೆ. ಗುಂಡ್ಲುಪೇಟೆಯ ತಾಲ್ಲೂಕಿನ ದೇವಾಲಯಗಳ ಕುರಿತು ವಾಸ್ತುಶಿಲ್ಪ ಕಲೆಯ ವಿಚಾರಕ್ಕೆ ಬರುವುದಾದರೆ, ಈ ಭಾಗದ ದೇವಾಲಯಗಳ ಬೆಳವಣಿಗೆ ವಿಶೇಷ ಕ್ಷೇತ್ರವಾಗಿದೆ. ಈ ಭಾಗದಲ್ಲಿ ಎಲ್ಲಾ ಧರ್ಮಕ್ಕೂ ಸೇರಿದ ದೇವಾಲಯಗಳಿವೆ.

ಗಂಗರ ಕಾಲಕ್ಕೆ ಸೇರಿದ ಕೆಲಸೂರಿನಲ್ಲಿ ಮೂರು ದೇವಾಲಯಗಳಿವೆ. ಮೂರು ದೇವಾಲಯಗಳ ಬೇರೆ ಬೇರೆ ಧರ್ಮಕ್ಕೆ ಸೇರಿದೆ. ಮಹಾಲಿಂಗೇಶ್ವರ (ಮಲ್ಲೇಶ್ವರ) ಶೈವ ಪರಂಪರೆಗೆ ಸೇರಿದರೆ, ಚಂದ್ರನಾಥ ಬಸದಿ ಜೈನ ಪರಂಪರೆಗೆ ಸೇರಿದೆ. ಹಾಗೆಯೇ ಶಕ್ತಿ ಪ್ರಧಾನವಾದ ಚೌಡೇಶ್ವರಿ ದೇವಾಲಯ ಸಹ ಇದೆ. ತೊಂಡವಾಡಿಯಲ್ಲಿ ಗಂಗರ ಕಾಲಕ್ಕೆ ಸೇರಿದ ಶಂಕರ ದೇವಾಲಯವಿದೆ. ಪಡಗೂರಿನಲ್ಲಿ ಶೈವಧರ್ಮಕ್ಕೆ ಸೇರಿದ ಮಹಾಲಿಂಗೇಶ್ವರ ದೇವಾಲಯವಿದೆ. ಪಾರ್ವತಿ ಬೆಟ್ಟದ ಮೇಲೆ ಶಿವನ ದೇವಾಲಯವಿದೆ. ಇದು ಕಂದೇಗಾಲಕ್ಕೆ ಸೇರಿದೆ. ಸಂಪಿಗೆಪುರದಲ್ಲಿ ಅರ್ಕೇಶ್ವರ ದೇವಾಲಯವಿದೆ. ಹಳ್ಳದ ಮಾದಹಳ್ಳಿ ಪ್ರಾಚೀನ ಕಾಲದ ದೇವಾಲಯವಿದೆ. ಚಿಕ್ಕಾಟಿ ಚಂದ್ರಶೇಖರ ದೇವಾಲಯಕ್ಕೆ ಗಂಗರ ಚೋಳರ ಶಾಸನಗಳಿವೆ. ಚೋಳರ ಕಾಲಕ್ಕೆ ಬರುವುದಾದರೆ ಅನೇಕ ದ್ರಾವಿಡ ಶೈಲಿಯ ಚೋಳ ಮಾದರಿಯ ದೇವಾಲಯಗಳು ನಿರ್ಮಿತವಾದವು.[18]

ಹೊಯ್ಸಳರ ಕಾಲಕ್ಕೆ ಬರುವುದಾದರೆ, ಹೊಯ್ಸಳರ ಪೋಷಣೆಯಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕೆಲವೊಂದು ದೇವಾಲಯಗಳು ನಿರ್ಮಾಣಗೊಂಡಿದೆ. ಆದರೆ ಈ ದೇವಾಲಯದಲ್ಲಿ ಶುದ್ಧ ಹೊಯ್ಸಳ ಶೈಲಿಯಲ್ಲಿ ಮತ್ತು

ದ್ರಾವಿಡ ಶೈಲಿಯಲ್ಲಿ ಹಾಗೂ ಚೋಳ ದ್ರಾವಿಡ ಶೈಲಿಯಲ್ಲಿ ದೇವಾಲಯಗಳು ನಿರ್ಮಾಣಗೊಂಡಿದೆ. ಈ ಭಾಗದಲ್ಲಿ ಶೈವ, ವೈಷ್ಣವ, ಜೈನ ಧರ್ಮಗಳು ಪರಸ್ಪರ ಮೈತ್ರಿಯಿಂದ ಸಹಬಾಳ್ವೆ ನಡೆಸಿರುವುದು ಕೂಡ ದೃಢಪಡುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನ ಸಾಂಸ್ಕೃತಿಕ ಇತಿಹಾಸದಲ್ಲೇ ಅಪರೂಪವೆನಿಸುವಂತಹ ಒಂದು ವಾತಾವರಣವೂ ಇಲ್ಲಿ ಸೃಷ್ಠಿಯಾಗಿದೆ. ಅದೇನೆಂದರೆ ಕನ್ನಡ ನಾಡಿನಲ್ಲಿ ಕನ್ನಡ ರಾಜವಂಶದ ನೆರಳಿನಲ್ಲಿ ಸಂಪೂರ್ಣ ತಮಿಳು ಸಂಸ್ಕೃತಿಯನ್ನು ತಮಿಳು ವಾಸ್ತುಶೈಲಿಯನ್ನು ತಮಿಳು ಶಿಲ್ಪಿಗಳಿಂದ ಕಟ್ಟಲ್ಪಟ್ಟ ದೇವಾಲಯಗಳು ಈ ಭಾಗದಲ್ಲಿ ಕಂಡುಬರುತ್ತದೆ.[19]

ಅಲ್ಲದೆ ತಮಿಳುನಾಡಿನ ಪೋಷಕರನ್ನು, ತಮಿಳು ಪೂಜಾ ವಿಧಾನಗಳ ಆಚರಣೆಯನ್ನೂ, ತಮಿಳುಶಾಸನಗಳನ್ನೂ, ತಮಿಳು ಜನರನ್ನೂ ಹೊಂದಿರುವ ಭಾಗವು ಸಹ ಆಗಿದೆ. ಈ ಭಾಗದ ಕೆಲವೊಂದು ದೇವಾಲಯಗಳ ಕುರಿತು ವಾಸ್ತುಶಿಲ್ಪ, ಮೂರ್ತಿಶಿಲ್ಪ, ಧರ್ಮ ಮತ್ತು ಆಚರಣೆ ಇತ್ಯಾದಿ ಸಂಸ್ಕೃತಿಯನ್ನು ಇದುವರೆಗೆ ಕೇವಲ ವರ್ಣನಾತ್ಮಕ ದೃಷ್ಠಿಯಿಂದ ಸಂಶೋಧನೆ ನಡೆಸಿದವರೇ ಹೊರತು, ವಿಚಾರಾತ್ಮಕವಾಗಿ ಸಂಶೋಧನೆ ಮಾಡಿಲ್ಲ.

ದೇವಾಲಯ ವಾಸ್ತುನಿರ್ಮಾಣದ ಮೂಲದ ಬೆಳವಣಿಗೆ, ಪರಸ್ಪರ ಶೈಲಿಗಳ ಪ್ರಭಾವ ಕಾಲ ಕಾಲಕ್ಕೆ ಆದ ಬದಲಾವಣೆ, ಸಂಪ್ರದಾಯ, ಬದ್ಧತೆ ವಾಸ್ತು ರಚನೆಗಳಿಗೂ ವಾಸ್ತುಶಾಸ್ತ್ರಗಳಿಗೂ ಇರುವ ಇದ್ದ ಬದ್ಧತೆಗಳು, ಶಿಲ್ಪಿಗಳಿಗೂ ವಾಸ್ತುಕೃತಿಗೂ ಇರುವ ಸಂಬಂಧ, ತಂತ್ರಜ್ಞಾನದ ಬಳಕೆ, ಅವರ ಸಂಪಾದನೆ, ಖರ್ಚು, ವೆಚ್ಚ, ಅವರ ಸಾಮಾಜಿಕ ಸ್ಥಾನಮಾನ, ಧರ್ಮ ಇನ್ನಿತರ ಪಂಥಗಳ ಬೆಳವಣಿಗೆ, ಆಚರಣೆ, ಸಂಪ್ರದಾಯ ಹೀಗೆ ಹತ್ತು ಹಲವಾರು ವಿಚಾರಗಳು ಹಾಗೆಯೇ ಉಳಿದಿವೆ. ಇವೆಲ್ಲವೂ ಸಹ ಐತಿಹಾಸಿಕ ಹಿನ್ನೆಲೆಗಳೇ ಆಗಿವೆ.

ಸ್ಥಳೀಯ ಅರಸರಾದ ಬೆಟ್ಟದ ಕೋಟೆ ಅರಸರು ಮತ್ತು ಕಮ್ಮರಹಳ್ಳಿಯ ಒಡೆಯರ್ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಆಡಳಿತ ನಡೆಸಿರುತ್ತಾರೆ. ಇವರು ಗೋಪಾಲಸ್ವಾಮಿ ಬೆಟ್ಟವನ್ನು ಆಡಳಿತ ಹಿನ್ನೆಲೆಯಿಂದ ಒಂದು ಪ್ರಮುಖ ನೆಲೆಯನ್ನಾಗಿ ಮಾಡಿಕೊಂಡಿದ್ದರು. ಕಮ್ಮರಹಳ್ಳಿಯ ಒಡೆಯರನ್ನು ಅರೇಪುರದ ಅರಸರೆಂದು ಕರೆಯುತ್ತಿದ್ದರು. ಆ ಅರಸರ ಹೆಸರಿನಿಂದಲೇ ಅರೇಪುರವಾಗಿದೆ. ವಿಜಯನಗರ ಅರಸರ ಸಂಗಮವಂಶದ ದೊರೆ ಕಂಪಣ್ಣನವರ ಮಗನು ತೆರಕಣಾಂಬಿಯಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ, ಆತನ ಹೆಸರಿನಲ್ಲಿಯೇ ದೇವಪುರ ಎಂಬ ಊರನ್ನು ನಿರ್ಮಿಸಲಾಗಿದೆ. ಬೆಟ್ಟದ ಕೋಟೆಯ ಅರಸು ಚನ್ನಡಯರವರ ಹೆಸರಿನಿಂದ ಚನ್ನವಡೆಯನಪುರ ಎಂಬ ಗ್ರಾಮವನ್ನು ನಿರ್ಮಿಸಲಾಯಿತು. ಮೈಸೂರಿನ ರಾಜ ಚಿಕ್ಕ ದೇವರಾಜ ಒಡೆಯ ಚಿಕ್ಕವನಿರುವಾಗ ಹಂಗಳ ಗ್ರಾಮದಲ್ಲಿ ನೆಲೆಸಿದ್ದ. ಈತನ ತಂದೆ ದೊಡ್ಡದೇವರಾಜ

ಒಡೆಯರ್‌ರವರು ಮರಣ ಹೊಂದಿದಾಗ, ಅವರನ್ನು ಗುಂಡ್ಲುಪೇಟೆಯ ಹತ್ತಿರವಿರುವ ಗುಂಡ್ಲು ನದಿಯ ತೀರದಲ್ಲಿ ಸಮಾಧಿ ಮಾಡಲಾಗಿದ್ದು, ನಂತರ ಗುಂಡ್ಲುಪೇಟೆಯ ಪರವಾಸು ದೇವಾಲಯವನ್ನು ಕಟ್ಟಲಾಗಿದೆ. ರಣಧೀರ ಕಂಠೀರವ ನರಸರಾಜ ಒಡೆಯರ್‌ರವರು ತಮ್ಮ ಬಾಲ್ಯ ಜೀವನವನ್ನು ತೆರಕಣಾಂಬಿಯಲ್ಲಿ ಕಳೆದಿರುವುದು ತಿಳಿದು ಬರುತ್ತದೆ.

ಹೊಯ್ಸಳ ವಿಷ್ಣುವರ್ಧನನು ಚೋಳರ ಸೋಲಿಸಿದ ನೆನಪಿಗಾಗಿ ವಿಜಯಪುರದಲ್ಲಿ ಅಂದರೆ ಗುಂಡ್ಲುಪೇಟೆಯಲ್ಲಿ ವಿಜಯನಾರಾಯಣಸ್ವಾಮಿಯನ್ನು ಪ್ರತಿಷ್ಠಾಪಿಸಿರುವುದಾಗಿ ಇತಿಹಾಸ ಪುಟಗಳಿಂದ ತಿಳಿದು ಬರುತ್ತದೆ. ಹೀಗೆ ಒಂದೊಂದು ರೀತಿಯ ಬೆಳವಣಿಗೆಯನ್ನು ಗುಂಡ್ಲುಪೇಟೆ ಹೊಂದಿದ್ದು. ಇವೆಲ್ಲವುದರ ಒಂದು ವಿವರಣಾತ್ಮಕ ಅಧ್ಯಯನವನ್ನು ನಡೆಸಲಾಗಿರುತ್ತದೆ.[20]

## 1.9. ಸಾಹಿತ್ಯ ಸಮೀಕ್ಷೆ

1. **ಎಪಿಗ್ರಾಫಿಯ ಕರ್ನಾಟಕ ಸಂಪುಟ-3,** ಪ್ರಕಟಣೆ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974 ಈ ಕೃತಿಯಿಂದ ಗುಂಡ್ಲುಪೇಟೆ ತಾಲ್ಲೂಕಿಗೆ ಸಂಬಂಧಿಸಿದಂತೆ ಸುಮಾರು 224 ಶಾಸನಗಳಿವೆ. ಪುಟಸಂಖ್ಯೆ 1 ರಿಂದ 161 ಪುಟಗಳಲ್ಲಿ ಮಾತ್ರ ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳನ್ನು ಮಾತ್ರ ತಿಳಿಸುತ್ತದೆ. ಈ ಶಾಸನಗಳ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಆಳ್ವಿಕೆ ನಡೆಸಿದ ರಾಜ ಮಹಾರಾಜರುಗಳು, ಸಾಮಂತರು, ಗಾವುಂಡರು, ಸ್ಥಳೀಯ ನಾಯಕರುಗಳ ಬಗ್ಗೆ ಚರ್ಚಿಸಲಾಗಿದೆ. ಆರ್ಥಿಕ, ಸಾಮಾಜಿಕ ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. ಆಯಾ ಕಾಲದ ದೇವಾಲಯಗಳನ್ನು ತಿಳಿದುಕೊಳ್ಳಲು ಶಾಸನಗಳು ತುಂಬಾ ಉಪಯುಕ್ತವಾಗಿದೆ. ಈ ಶಾಸನಗಳನ್ನು ಶೇಖರಿಸಲು ಮೊದಲಿಗೆ 1884 ರಲ್ಲಿ ಮೈಸೂರಿನಲ್ಲಿ ಪುರಾತತ್ವ ಇಲಾಖೆ ಸ್ಥಾಪನೆಯಾದಾಗ ಅದರ ನಿರ್ದೇಶಕರಾಗಿ ಬಿ.ಎಲ್.ರೈಸ್‌ರವರು 1906ರವರೆಗೂ ಮುಂದುವರೆದು ಈ ಭಾಗದ ಹಾಗೂ ಕೊಡಗಿನ ಶಾಸನಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದರು. ನಂತರ ಆರ್. ನರಸಿಂಹಾಚಾರ್, ಡಾ.ಶಾಮಾಶಾಸ್ತ್ರಿ, ಡಾ.ಎಂ.ಎಚ್.ಕೃಷ್ಣರವರು ಮೊದಲಿಗೆ ಬಿ.ಎಲ್. ರೈಸ್‌ರವರು ಪ್ರಕಟಿಸಿದ್ದ ಕೆಲವು ಶಾಸನಗಳನ್ನು ಪರಿಷ್ಕರಿಸಿದುದಲ್ಲದೆ ಅನೇಕ ಹೊಸ ಹೊಸ ಶಾಸನಗಳನ್ನು ಸಂಗ್ರಹಿಸಿದರು. ಅದರ ಫಲವೇ ಪ್ರಸ್ತುತ ಸಾಕಷ್ಟು ಸಂಪುಟಗಳನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿದೆ. ಈ ಶಾಸನಗಳ ಹಿನ್ನೆಲೆಯನ್ನು ಆಧರಿಸಿ ಸಂಶೋಧನೆಯ ಕಾರ್ಯವನ್ನು ನಡೆಸಲಾಗಿರುತ್ತದೆ.[21]

2. **ಡಾ.ಎಂ.ಚಿದಾನಂದಮೂರ್ತಿ** – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150) ಚಿದಾನಂದ ಸಮಗ್ರ ಸಂಪುಟ–1, ಪ್ರಕಟಣೆ ಸಪ್ನ ಬುಕ್‌ಹೌಸ್, ಬೆಂಗಳೂರು, ಪ್ರಥಮ ಪ್ರಕಟಣೆ 1966 ರಿಂದ ಎಂಟನೆಯ ಪ್ರಕಟಣೆ 2015ರವರೆಗೂ ನಿರಂತರವಾಗಿ ನಡೆದಿದೆ. ವಿಷಯಾನುಕ್ರಮಣಿಕೆಯಲ್ಲಿ 1 ರಿಂದ 14 ಅಧ್ಯಾಯಗಳನ್ನು ಹೊಂದಿದೆ. ಸುಮಾರು 1 ರಿಂದ 548 ಪುಟಗಳಿವೆ.

ಒಂದನೇ ಅಧ್ಯಾಯದಲ್ಲಿ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತು ತಿಳಿಸಿದ್ದಾರೆ. ಈ ಹಿನ್ನೆಲೆಯಿಂದ ಈ ಭಾಗದಲ್ಲಿ ಯಾವ ರೀತಿ ಅಧ್ಯಯನ ನಡೆಸಬಹುದು ಎಂಬ ಹಿನ್ನೆಲೆಯಿಂದ ನಾನು ಸಹಿತ ಅಧ್ಯಯನವನ್ನು ನಡೆಸಿರುತ್ತೇನೆ. ಎರಡನೆಯ ಅಧ್ಯಯನದಲ್ಲಿ ಶಾಸನಗಳು ಮತ್ತು ಅವುಗಳ ಅಧ್ಯಯನವನ್ನು ಚರ್ಚಿಸಿದ್ದಾರೆ. ಆದಕಾರಣ ಈ ಭಾಗದಲ್ಲಿ ಶಾಸನಗಳ ಕೊಡುಗೆ ಏನು ಎಂಬುದನ್ನು ಅಲ್ಲದೆ ದೇವಾಲಯಗಳಿಗೆ ಸಹಕರಿಸಿದೋ ಎಂಬುದನ್ನು ಸಹ ಚರ್ಚಿಸಿದ್ದೇನೆ. ಶಾಸನಗಳಲ್ಲಿ ವಿಷಯಾನುಪೂರ್ವಿ, ಜೈನಧರ್ಮದಲ್ಲಿ ಅನೇಕ ಪಂಥಗಳ ಕುರಿತು ವಿಚಾರವನ್ನು ತಿಳಿಸಲಾಗಿದೆ. ಈ ಮಾಹಿತಿಯನ್ನು ಆಧರಿಸಿ ಈ ಭಾಗದಲ್ಲಿ ಜೈನಪರಂಪರೆಯನ್ನು ಚರ್ಚಿಸಿದ್ದೇನೆ. ಬೌದ್ಧ ಧರ್ಮದ ಬಗ್ಗೆ ಈ ಪುಸ್ತಕದಲ್ಲಿ ಮಾಹಿತಿ ಇದೆ. ಆದರೆ ನನ್ನ ಕ್ಷೇತ್ರ ಕಾರ್ಯದಲ್ಲಿ ದೊರೆತಿಲ್ಲ.

ಶೈವ ಧರ್ಮದ ಕುರಿತು ಶೈವದೇವಾಲಯಗಳನ್ನು ಕುರಿತು ಅನೇಕ ಪಂಗಡಗಳನ್ನು ಕುರಿತು ಆಯಾ ಅಧ್ಯಾಯದಲ್ಲಿ ತಿಳಿಸಿರುತ್ತೇನೆ. ವೈಷ್ಣವ ಧರ್ಮ ಈ ಭಾಗದಲ್ಲಿ ತಮಿಳುನಾಡಿನ ಪ್ರಭಾವ, ಅಲ್ಲದೆ ಈ ಭಾಗಕ್ಕೆ ಶ್ರೀ ರಾಮಾನುಜಾಚಾರ್ಯರ ಕೊಡುಗೆಯನ್ನು ತಿಳಿಸಿರುತ್ತೇನೆ. ದೇವಾಲಯಗಳಿಗೆ ಸಾಮಾಜಿಕ ಚಿತ್ರಣವನ್ನು ನೀಡಲಾಗಿರುತ್ತದೆ. ಮಠಗಳ ಕುರಿತು, ಹಬ್ಬಗಳನ್ನು ಕುರಿತು ತಿಳಿಸಲಾಗಿದೆ. ಅದೇ ಮಾದರಿಯಲ್ಲಿ ಈ ಭಾಗದಲ್ಲಿ ವೀರಗಲ್ಲು ಮಾಸ್ತಿಕಲ್ಲು ಇನ್ನಿತರ ಶಿಲ್ಪಗಳನ್ನು ಕುರಿತು ಚರ್ಚಿಸಿರುತ್ತೇನೆ.

ಆಡಳಿತ ವ್ಯವಸ್ಥೆಯನ್ನು ಕುರಿತು ಮಾಹಿತಿ ನೀಡಿರುತ್ತೇನೆ. ಆರ್ಥಿಕ ವ್ಯವಸ್ಥೆಯಲ್ಲಿ ನಾನಾ ಪ್ರಕಾರಗಳು ಆರ್ಥಿಕ ವ್ಯವಸ್ಥೆಯನ್ನು ತಿಳಿಸಿರುತ್ತೇನೆ. ಸಾಮಾಜಿಕ ವ್ಯವಸ್ಥೆಯಲ್ಲಿ ಈ ಭಾಗದ ಜನರ ಒಂದು ಪ್ರಾಚೀನ ಪರಂಪರೆಯಿಂದ ಯಾವ ರೀತಿ ಬೆಳೆದುಬಂದಿದ್ದಾರೆ. ಇನ್ನೂ ಮೊದಲಾದ ವಿಚಾರಗಳನ್ನು ತಿಳಿಸಿರುತ್ತೇನೆ.

ಒಟ್ಟಾರೆ ಎಂ.ಚಿದಾನಂದಮೂರ್ತಿರವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯಲ್ಲಿ ರಚಿಸಲಾಗಿರುವ ಗ್ರಂಥದ ಸಹಾಯದಿಂದ ಈ

ಭಾಗದ ನನ್ನ ಸಂಶೋಧನೆಗೆ ಉಪಯುಕ್ತ ಮಾಹಿತಿಯನ್ನು ನೀಡುವಂತಹ ಒಂದು ಉತ್ತಮ ಕೃತಿಯಾಗಿದ್ದು, ಈ ಕೃತಿಯ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಸಂಶೋಧನಾ ಕಾರ್ಯಗಳನ್ನು ನಡೆಸಿರುತ್ತೇನೆ.[22]

೩. **ಡಾ.ಎಚ್.ತಿಪ್ಪೇರುದ್ರಸ್ವಾಮಿ** – ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪ್ರಕಾಶಕರು ಡಿವಿಕೆ ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ಮೊದಲನೆಯ ಪ್ರಕಟಣೆ ೧೯೬೮ ರಿಂದ ೨೦೧೦ರ ತನಕ ಸಾಕಷ್ಟು ಬಾರಿ ಮುದ್ರಣವಾಗಿದೆ. ಇದು ಸಂಶೋಧಕರಿಗೆ ಉಪಯುಕ್ತ ಕೃತಿಯಾಗಿದೆ. ಈ ಕೃತಿಯು ೧ ರಿಂದ ೭೮೩ ಪುಟಗಳನ್ನು ಹೊಂದಿದೆ. ಈ ಕೃತಿಯ ಪರಿವಿಡಿಯಲ್ಲಿ ಸುಮಾರು ೧೦ ಅಧ್ಯಾಯಗಳಾಗಿದ್ದು ೧೧ನೇ ಅಧ್ಯಾಯವು ಅನುಬಂಧವಾಗಿದೆ. ಈ ಕೃತಿಯನ್ನು ಗಮನಿಸಿದರೆ ಸಂಶೋಧನೆಗೆ ಸೂಕ್ತ ಕೃತಿಯಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಸಂಸ್ಕೃತಿ ಮತ್ತು ನಾಗರೀಕತೆ, ಸಿಂಧು ಸಂಸ್ಕೃತಿ, ವೇದಯುಗ, ಉಪನಿಷತ್ತುಗಳು, ಇತಿಹಾಸ, ಪುರಾಣಗಳು, ಸ್ಮೃತಿಗಳು ಸಮನ್ವಯ ಸಂಸ್ಕೃತಿಯನ್ನು ತಿಳಿಸಿದ್ದಾರೆ. ಈ ಕೃತಿಯ ಆಧಾರದಿಂದ ಈ ಭಾಗದಲ್ಲಿ ಯಾವ ಸಂಸ್ಕೃತಿ ಪರಂಪರೆಯನ್ನು ಹೊಂದಿದೆ ಎಂಬುದನ್ನು ತಿಳಿಸಲು ಸಹಾಯಕವಾಗಿದೆ.

ಎರಡನೆಯ ಅಧ್ಯಾಯದಲ್ಲಿ ಪ್ರಾಚೀನತೆ, ಕದಂಬರು, ಗಂಗರು, ಚಾಳುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಕೆಳದಿ ಮತ್ತು ಮೈಸೂರು ಒಡೆಯರ್ ಕುರಿತು ತಿಳಿಸಿದ್ದಾರೆ. ಆದರೆ ತಾನು ಈ ಭಾಗದಲ್ಲಿ ಆಡಳಿತ ನಡೆಸಿದವರ ಎಲ್ಲರ ಕುರಿತು ಚರ್ಚಿಸಿದ್ದೇನೆ. ಅಲ್ಲದೆ ನೆರೆಯ ತಮಿಳುನಾಡಿನ ಚೋಳರ ಕೊಡುಗೆ ಈ ಭಾಗಕ್ಕೆ ಅಪಾರವಾಗಿದೆ ಎಂಬುದನ್ನು ಸಹ ತಿಳಿಸಿದ್ದೇನೆ.

ಮೂರನೇ ಅಧ್ಯಾಯವು ಕನ್ನಡ ಜನಪದವನ್ನು ತಿಳಿಸಿದ್ದಾರೆ. ಅದರಲ್ಲಿ ಆಡಳಿತ ಕ್ರಮ, ಧಾರ್ಮಿಕ ಪರಿಸ್ಥಿತಿ, ಸಾಮಾಜಿಕ ಜೀವನ, ವಿದ್ಯಾಭ್ಯಾಸವನ್ನು ಕುರಿತು ತಿಳಿದುಬರುತ್ತದೆ. ನಾನು ಸಹಿತ ಈ ಭಾಗದ ಒಂದು ಚಿತ್ರಣವನ್ನು ತೆರೆದು ಇಟ್ಟಿದ್ದೇನೆ. ನಾಲ್ಕನೆಯ ಅಧ್ಯಾಯದಲ್ಲಿ ಶಾಸನಗಳಲ್ಲಿ ಸಂಸ್ಕೃತಿ ಬಗ್ಗೆ ತಿಳಿಸುತ್ತಾ ಶಾಸನಗಳ ಸಂಪತ್ತು ವೀರಗಲ್ಲು, ದಾನಶಾಸನಗಳು, ಧರ್ಮ ಸಮನ್ವಯ, ಸಾಮಾಜಿಕ ಜೀವನ, ಸಾಹಿತ್ಯ ಸೌಂದರ್ಯವನ್ನು ತಿಳಿಸಿದ್ದಾರೆ. ಐದನೆಯ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯ ವಾಹಿನಿ ಕಾವ್ಯಗಳ ಕಮನೀಯತೆ, ಶರಣರ ವಚನಗಳು, ದಾಸರ ಕೀರ್ತನೆಗಳು, ತತ್ವಸಾಹಿತ್ಯ, ಸರ್ವಜ್ಞ ಕವಿಯನ್ನು ಕುರಿತು ತಿಳಿದುಬರುತ್ತದೆ. ಆದರೆ ನಾನು ಈ ಭಾಗದ ಶರಣರ ಮಠಗಳ ಕುರಿತು ತಿಳಿದುಕೊಳ್ಳಲು ಸಹಾಯಕವಾಗಿದೆ. ಆರನೆಯ

ಅಧ್ಯಾಯವು ಜಾನಪದ ಸಾಹಿತ್ಯ ಅದರಲ್ಲಿ ಮೊದಲ ಮಾತು ಧಾರ್ಮಿಕ ಪರಿಭಾವನೆ, ಸಂಸಾರ, ಸಮಾಜ, ಸಾಹಿತ್ಯದ ಸೊಗಸು, ಗಾದೆಗಳನ್ನು ತಿಳಿಸುತ್ತದೆ. ಆದಕಾರಣ ಈ ಭಾಗದ ಧಾರ್ಮಿಕ ಪರಿಭಾವನೆಗಳು ಯಾವ ರೀತಿ ಇದೆ ಎಂಬುದನ್ನು ತಿಳಿಸಲಾಗಿದೆ. ಏಳನೆಯ ಅಧ್ಯಾಯವು ವಾಸ್ತು ಮತ್ತು ಶಿಲ್ಪ ಎಂಬ ವಿಚಾರವನ್ನು ತಿಳಿಸುತ್ತದೆ. ಈ ಕೃತಿಯು ದೇವಾಲಯಗಳ ಉಗಮ ಮತ್ತು ಬೆಳವಣಿಗೆ, ಚಾಳುಕ್ಯ ಯುಗ, ಹೊಯ್ಸಳ ಯುಗ, ವಿಜಯನಗರ ವಾಸ್ತುಶಿಲ್ಪ, ಮುಸ್ಲಿಂ ಶಿಲ್ಪಕಲೆ, ಮೂರ್ತಿಶಿಲ್ಪಗಳನ್ನು ಕುರಿತು ಉದಾಹರಣೆ ಸಹಿತ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಕಂಡುಬರುವ ಆಯಾ ರಾಜರ ರಾಜವಂಶಸ್ಥರ ಕಾಲಕ್ಕೆ ಸೇರಿದ ದೇವಾಲಯಗಳ ಮೂರ್ತಿಶಿಲ್ಪಗಳನ್ನು ಕುರಿತು ಚರ್ಚಿಸಿರುತ್ತೇನೆ. ಎಂಟನೆಯ ಅಧ್ಯಾಯದಲ್ಲಿ ಸಂಗೀತ ಮತ್ತು ನೃತ್ಯವನ್ನು ತಿಳಿಸುತ್ತಾ ಸಂಗೀತ ಕಲೆ, ಕೊಡುಗೆ, ಭರತನಾಟ್ಯ, ಯಕ್ಷಗಾನ, ದೊಡ್ಡಾಟ ಮೊದಲಾದವುಗಳ ಬಗ್ಗೆ ತಿಳಿಸಿದ್ದಾರೆ. ಆದರೆ ಈ ಭಾಗದಲ್ಲಿ ಅನೇಕ ದೇವಾಲಯಗಳಲ್ಲಿ ಉಬ್ಬುಶಿಲ್ಪಗಳನ್ನು ಗಮನಿಸಿದರೆ, ಸಂಗೀತದ ಹಿನ್ನೆಲೆಯನ್ನು ನೃತ್ಯದ ಹಿನ್ನೆಲೆಯನ್ನು ತಿಳಿಸುವಂತಹ ವಿಚಾರ ತಿಳಿದುಬರುತ್ತದೆ. ಈ ಎಲ್ಲಾ ಬೆಳವಣಿಗೆಯಿಂದ ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಕೃತಿಯು ಒಂದು ಉತ್ತಮವಾದ ಕೃತಿಯಾಗಿದ್ದು, ಇದರ ಸದುಪಯೋಗದಿಂದ ನನ್ನ ಸಂಶೋಧನೆಗೆ ಉಪಯುಕ್ತ ಮಾಹಿತಿಯನ್ನು ನೀಡುವಂತಹ ಕೃತಿಯಾಗಿದೆ.[23]

4. **ಡಾ.ಸಿ.ಯು. ಮಂಜುನಾಥ್ – ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ (ಕ್ರಿ.ಶ.1150–1340)** ಚಿತ್ಕಲಾ ಪ್ರಕಾಶನ, ಕುಪ್ಪಂ, ಪ್ರಕಟಣೆ 2012 ರಲ್ಲಿ ಆಗಿದೆ. ಸುಮಾರು 1 ರಿಂದ 547 ಪುಟಗಳಿವೆ. ಪರಿವಿಡಿಯಲ್ಲಿ 20 ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಅಗತ್ಯ, ಉದ್ದೇಶ ಮತ್ತು ಆಕರ. ಎರಡನೆಯ ಅಧ್ಯಾಯದಲ್ಲಿ ಶೈವಧರ್ಮ ಇತರ ಶಾಖೆಗಳು ಅದರಲ್ಲಿ ಪಾಶುಪತ, ಕಾಳಾಮುಖ, ಶುದ್ಧಶೈವ, ಕಾಶ್ಮೀರಶೈವ, ತಾಂತ್ರಿಕ ಶೈವ, ಕಾಪಾಲಿಕರು, ಭೈರವರು. ಮೂರನೆಯ ಅಧ್ಯಾಯದಲ್ಲಿ ಕೊಂಡಗುಳಿ ದೇಶಿರಾಜ, ದೇವರ ದಾಸಿಮಯ್ಯ, ಜೇಡರ ದಾಸಿಮಯ್ಯ, ರೇವಣಸಿದ್ಧ, ಬಸವಯುಗ, ಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಿದೇವ, ಹುಳಿಯಮೇಶ್ವರ ಚಿಕ್ಕಯ್ಯ, ಏಕಾಂತದ ರಾಮಯ್ಯ, ಬಸವೋತ್ತರ ಯುಗ, ಮೂರು ಜಾವಿದೇವ, ಗುಂಡಬ್ರಹ್ಮಯ್ಯಗಳು, ಚೌಡದಾನಪುರದ ಶಿವದೇವ, ವೀರಶೈವ ಧರ್ಮದ ಪ್ರಸಾರ ಕುರಿತು ತಿಳಿಸಿದ್ದಾರೆ. ಈ ಬೆಳವಣಿಗೆಯಿಂದ ಈ ಭಾಗದ ವೀರಶೈವ ಪರಂಪರೆಯನ್ನು ತಿಳಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಜೈನಧರ್ಮ, ಅದರಲ್ಲಿ ಶ್ವೇತಾಂಬರ,

ದಿಗಂಬರ, ಯಾಪನೀಯ, ಜೈನಮುನಿಗಳ ವಿದ್ವತ್ತು ಮತ್ತು ತಪಸ್ಸು, ಸನ್ಯಾಸಿಯರು, ಚತುರ್ವರ್ಣ ಶ್ರವಣ ಸಂಘ, ಚೈತ್ಯಾಲಯ, ಬಸದಿ, ಆಚಾರ್ಯರು, ಸಂಘ ಗಣ, ಗಚ್ಛ ಅನ್ವಯ ಬಳ, ಸಮಾಧಿ ಮರಣ, ನಿಷಧಿ, ಹಬ್ಬಗಳು ನೋಂಪಿಗಳು ರಾಜಾಶ್ರಯ ಕೆಲವು ಕೇಂದ್ರಗಳು, ಯಕ್ಷಿ ಆರಾಧನೆ, ಏಕ್ಕೋಟಿ ಜಿನಾಲಯಗಳು ಎಂಬ ವಿಚಾರಗಳು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಗುಂಡ್ಲುಪೇಟೆಯ ಪ್ರದೇಶದ ಜೈನರ ಕುರಿತು ತಿಳಿಸಲಾಗಿದೆ. ಐದನೆಯ ಅಧ್ಯಾಯವು ವೈಷ್ಣವ ಧರ್ಮ ಅವರಲ್ಲಿ ಕರ್ನಾಟಕದಲ್ಲಿ ವೈಷ್ಣವ ಧರ್ಮ, ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ, ತೊಣ್ಣೂರು, ಮೇಲುಕೋಟೆ, ಶ್ರೀ ವೈಷ್ಣವ ಧರ್ಮದ ಪ್ರಭಾವ ಮಧ್ವಾಚಾರ್ಯ, ದ್ವೈತ ಸಿದ್ಧಾಂತ, ಮಹಾನುಭಾವ ಪಂಥಗಳ ಬಗ್ಗೆ ತಿಳಿಸಿದ್ದಾರೆ. ಈ ಕೃತಿಯಿಂದ ಈ ಭಾಗದ ಅನೇಕ ವೈಷ್ಣವ ನೆಲೆಗಳನ್ನು ಸಂದರ್ಶಿಸಿ ಕ್ಷೇತ್ರಕಾರ್ಯ ಮಾಡಿ ವೈಷ್ಣವ ಧರ್ಮದ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಆರನೆಯ ಅಧ್ಯಾಯದಲ್ಲಿ ಬೌದ್ಧಧರ್ಮ ಹೀನಾಯಾನ, ಮಹಾಯಾನ, ವಜ್ರಯಾನ, ಬೌದ್ಧ ಕೇಂದ್ರಗಳು ಇನ್ನಿತರ ವಿಚಾರ ಕುರಿತು ತಿಳಿಸಿದ್ದಾರೆ. ಆದರೆ ಈ ಭಾಗದಲ್ಲಿ ಬೌದ್ಧ ನೆಲೆಗಳಿಲ್ಲ. ಏಳನೆಯ ಅಧ್ಯಾಯದಲ್ಲಿ ತಾಂತ್ರಿಕ ಮತಗಳನ್ನು ಕುರಿತು ತಿಳಿಸಿದ್ದಾರೆ. ಸಾರ, ಗಾಣಪತ್ಯ, ಕಾಳ, ನೀಲಪಟ, ಶಾಕ್ತ, ಸಪ್ತಮಾತೃಕೆಯರ ಬಗ್ಗೆ ತಿಳಿದುಬರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೆಲಸೂರು ಇನ್ನೂ ಮೊದಲಾದ ಕಡೆ ಸಪ್ತಮಾತೃಕೆಯರ ಹಿನ್ನೆಲೆಯನ್ನು ತಿಳಿಸಲಾಗಿದೆ. ಎಂಟನೆಯ ಅಧ್ಯಾಯವು ಜನಪ್ರಿಯ ಆರಾಧನೆಗಳು ಮತ್ತು ಗ್ರಾಮದೇವತೆಗಳನ್ನು ಕುರಿತು ತಿಳಿಸಲಾಗಿದೆ. ಈ ಹಿನ್ನೆಲೆಯಿಂದ ಈ ಭಾಗದ ಗ್ರಾಮದೇವತೆಗಳನ್ನು ಕುರಿತು ಮಾಹಿತಿಯನ್ನು ನೀಡಿದ್ದೇನೆ. ಒಂಭತ್ತನೆಯ ಅಧ್ಯಾಯವು ಧಾರ್ಮಿಕ ಸಾಮರಸ್ಯ ಮತ್ತು ಸಂಘರ್ಷ ಕುರಿತು ತಿಳಿಸುತ್ತದೆ. ಅಗ್ರಹಾರ ಶೈವ, ವೈಷ್ಣವ, ಜೈನ, ಅದ್ವೈತ, ದ್ವೈತ, ಇಸ್ಲಾಂ ಧರ್ಮ ಇನ್ನೂ ಮೊದಲಾದ ಧಾರ್ಮಿಕ ಸಂಘರ್ಷವನ್ನು ತಿಳಿಸಿದ್ದಾರೆ. ಅದು ಇಲ್ಲಿ ಯಾವ ರೀತಿ ಇದೆ ಎಂಬುದನ್ನು ತಿಳಿಸಲಾಗಿದೆ. ಹತ್ತನೆಯ ಅಧ್ಯಾಯದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ತಿಳಿಸಲಾಗಿದೆ. ಹನ್ನೊಂದನೆಯ ಅಧ್ಯಾಯವು ಆರ್ಥಿಕ ವಿಚಾರವನ್ನು ಹನ್ನೆರಡನೆಯ ಅಧ್ಯಾಯವು ಆಡಳಿತ ವ್ಯವಸ್ಥೆಯನ್ನು, ಹದಿಮೂರನೆಯ ಅಧ್ಯಾಯವು ವಿದ್ಯಾಭ್ಯಾಸ ಕುರಿತು, ಹದಿನಾಲ್ಕನೆಯ ಅಧ್ಯಾಯವು ಮಠಗಳು ಮತ್ತು ದೇವಾಲಯಗಳನ್ನು, ಹದಿನೈದನೆಯ ಅಧ್ಯಾಯವು ಯುದ್ಧಪದ್ಧತಿ, ಹದಿನಾರನೆಯ ಅಧ್ಯಾಯವು ಆತ್ಮಬಲಿ ಬೇರೆ ಬೇರೆ ಪ್ರಕಾರಗಳು, ಹದಿನೇಳನೆಯ ಅಧ್ಯಾಯವು ಕಲೆ ಸಾಹಿತ್ಯ ಮನರಂಜನೆ ಕುರಿತು, ಹದಿನೆಂಟನೆಯ ಅಧ್ಯಾಯವು ಉಡುಪು, ಆಭರಣ,

ಆಹಾರ ಪಾನೀಯಗಳ ಕುರಿತು, ಹತ್ತೊಂಭತ್ತನೆಯ ಅಧ್ಯಾಯವು ಅಧ್ಯಯನ ಕಾಲದ ಶಾಸನಗಳ ವೈಶಿಷ್ಟ್ಯ, ಇಪ್ಪತ್ತನೆಯ ಅಧ್ಯಾಯವು ಉಪಸಂಹಾರವಾಗಿದೆ. ಈ ಕೃತಿಯು ಸಂಶೋಧನೆಯ ದೃಷ್ಟಿಯಿಂದ ಒಂದು ಉತ್ತಮವಾದ ಕೃತಿಯಾಗಿದೆ. ಈ ಕೃತಿಯ ಸಹಾಯದಿಂದಲೂ ಕೂಡ ಆಯಾ ಊರಿನ ಕ್ಷೇತ್ರಕಾರ್ಯ ಮಾಡಿ ಸಂಶೋಧನೆಯನ್ನು ನಡೆಸಲಾಗಿದೆ.[24]

5. **ಡಾ.ಚಂದ್ರು ಕಾಳೇನಹಳ್ಳಿ** – ಸೋಲಿಗರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು, ಚಿನ್ನದ ಹಬ್ಬದ ವರ್ಷ, 2011, ಈ ಕೃತಿಯು ಪರಿವಿಡಿಯಲ್ಲಿ 8 ಅಧ್ಯಾಯಗಳಿವೆ. 1 ರಿಂದ 203 ಪುಟಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಪ್ರದೇಶದಿಂದ ಪ್ರಾರಂಭವಾಗಿ ಮಾನವನ ಜೀವನವು ಸಾಮಾಜಿಕ, ಸಾಂಸ್ಕೃತಿಕವಾಗಿ ನಡೆದುಬಂದ ದಾರಿಯನ್ನು ತಿಳಿಸಲಾಗಿದೆ. ಭಾರತೀಯ ಸಂಸ್ಕೃತಿ, ಸೋಲಿಗರ ಪೂರ್ವಭಾವಿ ಅಧ್ಯಯನ ಪ್ರದೇಶ ಮತ್ತು ಜನರು ಸೋಲಿಗ ಹೆಸರಿನ ವೈಶಿಷ್ಟ್ಯ, ಎರಡನೆಯ ಅಧ್ಯಾಯದಲ್ಲಿ ಸೋಲಿಗರ ಸಾಮಾಜಿಕ ಜೀವನ ಕುಟುಂಬ ಮತ್ತು ವಿವಾಹ, ವೈವಾಹಿಕ ಜೀವನ, ಮೂರನೇ ಅಧ್ಯಾಯದಲ್ಲಿ ಸೋಲಿಗರ ಆರ್ಥಿಕ ಜೀವನ, ಕೃಷಿ, ಬೇಟೆ, ಆಹಾರ ಸಂಗ್ರಹಣೆ ಹಾಗೂ ಪೂರಕ ವೃತ್ತಿಗಳು, ನಾಲ್ಕನೆಯ ಅಧ್ಯಾಯದಲ್ಲಿ ಸೋಲಿಗರ ಸಾಮಾಜಿಕ ಜನಪದ ಆಚರಣೆಗಳು, ಹುಟ್ಟಿನಿಂದ ಸಾವಿನ ತನಕ, ಸೋಲಿಗರ ಧರ್ಮ ಹಾಗೂ ಮಂತ್ರವಿದ್ಯೆ, ಹಬ್ಬಗಳು ಮತ್ತು ಜಾತ್ರೆಗಳು, ಜನಪದ ವೈದ್ಯ, ಐದನೆಯ ಅಧ್ಯಾಯದಲ್ಲಿ ಸೋಲಿಗರ ವಾಚಿಕ ಸಾಹಿತ್ಯ ಪುರಾಣ ಕಥೆಗಳು, ಐತಿಹ್ಯಗಳು, ಸೋಲಿಗರ ಜನಪದ ಕಥೆಗಳು, ಜನಪದ ಗೀತೆ, ಗಾದೆಗಳು, ಒಗಟುಗಳು, ಆರನೆಯ ಅಧ್ಯಾಯದಲ್ಲಿ ಸೋಲಿಗರ ಭೌತಿಕ ಸಂಸ್ಕೃತಿ, ಅಡಿಗೆ, ಉಡುಪು ಹಾಗೂ ತೊಡಪು, ಗೃಹ ವ್ಯವಸ್ಥೆ, ಏಳನೆಯ ಅಧ್ಯಾಯದಲ್ಲಿ ಸೋಲಿಗರ ಪ್ರದರ್ಶಕ ಕಲೆಗಳು, ಜನಪದ ನೃತ್ಯಗಳು, ರಂಗಭೂಮಿಗಳ ಬಗ್ಗೆ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಬೆಟ್ಟಗಾಡು ಬುಡಕಟ್ಟು ಸಂಸ್ಕೃತಿಯನ್ನು ಹೊಂದಿದ ನೆಲೆಯಾಗಿದ್ದು, ಈ ನೆಲೆಯಲ್ಲಿ ಸೋಲಿಗರ ಹಾಗೂ ಬುಡಕಟ್ಟು ಜನರ ಸಂಸ್ಕೃತಿ ಮತ್ತು ಪರಂಪರೆಯನ್ನು ತಿಳಿಸಲಾಗಿದೆ. [26]

6. **ಡಾ.ಕೋ.ವೆಂ.ರಾಮಕೃಷ್ಣೇಗೌಡ** – ಕರ್ನಾಟಕ ಕಾವೇರಿ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ಪ್ರಕಟಣೆ 2011, ಈ ಕೃತಿಯು 1 ರಿಂದ 185 ಪುಟಗಳನ್ನು ಹೊಂದಿದೆ. ಪರಿವಿಡಿಯಲ್ಲಿ ಸುಮಾರು ಏಳು ಅಧ್ಯಾಯಗಳಿವೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಹಿನ್ನೆಲೆ, ಉದ್ದೇಶ,

ವ್ಯಾಪ್ತಿಯನ್ನು, ಎರಡನೆಯ ಅಧ್ಯಾಯವು ಕಾವೇರಿ ಪ್ರದೇಶದ ಪೌರಾಣಿಕ ನೆಲೆ, ಮೂರನೆಯ ಅಧ್ಯಾಯವು ಪ್ರಾಗೈತಿಹಾಸಿಕ ಮತ್ತು ಚಾರಿತ್ರಿಕ ನೆಲೆ ಮುಖ್ಯ ಪ್ರಭುತ್ವಗಳ ಹಿನ್ನೆಲೆಯಲ್ಲಿ, ನಾಲ್ಕನೇ ಅಧ್ಯಾಯವು ಧಾರ್ಮಿಕ ನೆಲೆ, ದೇವಾಲಯ ಹಬ್ಬ ಜಾತ್ರೆ, ಐದನೆಯ ಅಧ್ಯಾಯವು ಸಾಮಾಜಿಕ ನೆಲೆ, ವರ್ಣ ಜಾತಿ, ಸ್ತ್ರೀ ಸ್ಥಾನಮಾನ, ಆತ್ಮಬಲಿ, ವೀರಗಲ್ಲು, ಮಾಸ್ತಿಗಲ್ಲು, ಕೃಷಿ ವ್ಯಾಪಾರ, ವಾಣಿಜ್ಯವನ್ನು ಕುರಿತು ತಿಳಿಸುತ್ತದೆ. ಆರನೆಯ ಅಧ್ಯಾಯವು ಶಿಕ್ಷಣ, ಅಗ್ರಹಾರಗಳು, ಮಠಗಳು, ಗುರುಶಿಷ್ಯ, ಬೋಧನೆಯ ವಿಷಯ ದಾನದತ್ತಿಗಳನ್ನು ಕುರಿತು, ಏಳನೆಯ ಅಧ್ಯಾಯವು ಸಮಾರೋಪ, ಆಧಾರ ಗ್ರಂಥಸೂಚಿಯನ್ನು ತಿಳಿಸಲಾಗಿದೆ. ಈ ಕೃತಿಯ ಹಿನ್ನೆಲೆಯಿಂದ ಈ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಂಡುಬರುವ ದೇವಾಲಯಗಳು, ಶಾಸನಗಳ ಹಿನ್ನೆಲೆಯಲ್ಲಿ ಈ ಮೇಲೆ ತಿಳಿಸಲಾಗಿರುವ ಪ್ರತಿಯೊಂದು ಅಧ್ಯಾಯನಕ್ಕೂ ಸಂಬಂಧಿಸಿದಂತೆ ನನ್ನದೇ ಆದ ಸಂಶೋಧನಾತ್ಮಕ ರೀತಿಯಲ್ಲಿ ಮಹಾಪ್ರಬಂಧವನ್ನು ರಚಿಸಲಾಗಿದೆ.[26]

7. **ಡಾ.ದೇವರಕೊಂಡಾರೆಡ್ಡಿ** – ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ಪ್ರಕಟಣೆ 1994 ಈ ಕೃತಿಯು 1 ರಿಂದ 242 ಪುಟಗಳನ್ನು ಹೊಂದಿದ್ದು, ಪರಿವಿಡಿಯಲ್ಲಿ ಏಳು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಎರಡನೆಯ ಅಧ್ಯಾಯದಲ್ಲಿ ಗಂಗರ ಕಾಲದಲ್ಲಿ ದೇವಾಲಯಗಳ ರಚನೆಯ ಉಲ್ಲೇಖಗಳು, ಮೂರನೇ ಅಧ್ಯಾಯದಲ್ಲಿ ಶಿಲ್ಪ ಶೈಲಿ ಮತ್ತು ಲಕ್ಷಣಗಳು, ವಾಸ್ತುಶಿಲ್ಪ, ಅಧಿಷ್ಠಾನ ರಹಿತ ದೇವಾಲಯಗಳು, ಅಧಿಷ್ಠಾನ ಸಹಿತ ದೇವಾಲಯಗಳು, ಸ್ತಂಭಗಳು, ಜೈನವಾಸ್ತು ಶಿಲ್ಪವನ್ನು ಕುರಿತು ತಿಳಿಸಿದ್ದಾರೆ. ನಾಲ್ಕನೆಯ ಅಧ್ಯಾಯದಲ್ಲಿ ಗಂಗರ ಮೂರ್ತಿಶಿಲ್ಪ, ಶಿವಲಿಂಗ, ವಿಷ್ಣು, ಸೂರ್ಯ, ಸ್ಕಂದ, ವಿನಾಯಕ, ನಂದಿ, ದುರ್ಗಾ, ಮಹಿಷಮರ್ದಿನಿ, ಸಪ್ತಮಾತೃಕೆಯರು, ಜೈನಮೂರ್ತಿ ಶಿಲ್ಪ, ಶಾಸನ ಶಿಲ್ಪ, ಐದನೆಯ ಅಧ್ಯಾಯದಲ್ಲಿ ಗಂಗರ ತೊಡು, ಕೊಳುಗಗಳು, ಆರನೆಯ ಅಧ್ಯಾಯದಲ್ಲಿ ಗಂಗರ ದೇವಾಲಯಗಳಿದ್ದ, ಇರುವ ಸ್ಥಳಗಳ ಸಮೀಕ್ಷೆ, ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಆಧಾರ ಸೂಚಿ, ಆಯ್ದ ಪದಸೂಚಿಯನ್ನು ನೀಡಿದ್ದಾರೆ. ಈ ಹಿನ್ನೆಲೆಯನ್ನು ಈ ಭಾಗದಲ್ಲಿ ಅನೇಕ ಗಂಗರ ಶಾಸನಗಳು, ದೇವಾಲಯಗಳು, ಜೈನ ಬಸದಿಗಳ ಕುರಿತು ಉಲ್ಲೇಖಗಳಿವೆ. ಈ ಉಲ್ಲೇಖನಗಳ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಅಧ್ಯಯನವನ್ನು ನಡೆಸಲಾಗಿದೆ.[27]

## ಅಡಿಟಿಪ್ಪಣಿಗಳು


1. ಇತೇಶ್‌ಮುಲ್ ಹಕ್ – ಚಾಮರಾಜನಗರ ಜಿಲ್ಲಾ ಗ್ಯಾಜೇಟಿಯರ್,–2015 ಪುಟ –1043
2. ಅದೇ – ಪುಟ– 2
3. ಅದೇ – ಪುಟ –4
4. ಅದೇ – ಪುಟ –9
5. ಅದೇ – ಪುಟ –133
6. ನಾಗಮಲ್ಲಪ್ಪ – ವಿಜಯಸಿರಿ ಸ್ಮರಣೆ ಸಂಚಿಕೆ– 2011–ಪುಟ–1
7. ಎಪಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು (1974) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.–ಪುಟ– 23,24,25,26,27,28,29.
8. ನಾಗಮಲ್ಲಪ್ಪ –ವಿಜಯಸಿರಿ ಸ್ಮರಣೆ ಸಂಚಿಕೆ– 2011 ಸಂಚಿಕೆ ಮುನ್ನುಡಿ ಪುಟ
9. ಎಪಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು (1974) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.–ಪುಟ –63 ಶಾಸನ ಸಂಖ್ಯೆ–80
10. ಶಿವರುದ್ರಪ್ಪ, ಟಿ.ವಿ. ಮತ್ತು ರಾಜಶೇಖರಯ್ಯ ಬಿ.ಎಲ್.ರವರು ರಚಿಸಿರುವ ಭೂಗರ್ಭ ಸಂಪತ್ತು–ಹೊನ್ನುಹೊಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ–2007, ಪು.400–401.
11. ಅದೇ ಪು.402.
12. ಭಟ್ಟ್,ಜಿ.ಎಸ್. ಗುಂಡ್ಲುಪೇಟೆ ತಾಲ್ಲೂಕು ದರ್ಶನ, ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು, ಪು.3, 4, 6, 9, 20, 39.
13. ಮಲ್ಲಪ್ಪ ಪಿ. –ಕರ್ನಾಟಕದ ಭೂಗೋಳಶಾಸ್ತ್ರ –ಪ್ರಕಾಶಕರು, ಲಕ್ಷ್ಮಿ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್–2015, –ಪುಟ–55
14. ಕನ್ನಡ ವಿಷಯ ವಿಶ್ವಕೋಶ– ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–1979
15. ಶೇಷಾದ್ರಿ ಎಂ. – ತಿ.ನರಸೀಪುರ ಉತ್ಖನನ –1956–62ರ ವರದಿಗಳು
16. ತಿಪ್ಪೇರುದ್ರಸ್ವಾಮಿ,ಎಚ್. – ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಪ್ರಕಾಶಕರು, ಮೈಸೂರು–1968–2010
17. ಎಪಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು (1974) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

18. ಡಾ.ದೇವರಕೊಂಡಾರೆಡ್ಡಿ – ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1994, ಈ ಕೃತಿಯಿಂದ ಸಾಕಷ್ಟು ವಿಚಾರವನ್ನು ತಿಳಿದುಕೊಳ್ಳಲಾಗಿದೆ.

19. ಡಾ.ಮೈಸೂರು ನಾಗರಾಜ ಶರ್ಮಾ – ಹೊಯ್ಸಳಶಿಲ್ಪದಲ್ಲಿ ಶಿವ (ಪುರಾತತ್ವ ಇತಿಹಾಸ ಮತ್ತು ಕಲೆ) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2010, 1 ರಿಂದ 408 ಪುಟಗಳಿವೆ. ಈ ಕೃತಿಯಿಂದ ಕೆಲವೊಂದು ವಿಚಾರಗಳನ್ನು ತಿಳಿಸಲಾಗಿದೆ.

20. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು, ಶಾಸನ (4,6,8)

21. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974 ಗ್ರಂಥವನ್ನು ನೋಡಲಾಗಿದೆ.

22. ಡಾ.ಎಂ.ಚಿದಾನಂದಮೂರ್ತಿ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150) ಚಿದಾನಂದ ಸಮಗ್ರ ಸಂಪುಟ–1, ಪ್ರಕಟಣೆ ಸಪ್ನ ಬುಕ್‌ಹೌಸ್, ಬೆಂಗಳೂರು,

23. ಡಾ.ಎಚ್.ತಿಪ್ಪೇರುದ್ರಸ್ವಾಮಿ – ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪ್ರಕಾಶಕರು ಡಿವಿಕೆ ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ಪ್ರಕಟಣೆ, 2010.

24. ಡಾ.ಸಿ.ಯು.ಮಂಜುನಾಥ – ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ (ಕ್ರಿ.ಶ.1150–1340) ಚಿತ್ಕಲಾ ಪ್ರಕಾಶನ, ಕುಪ್ಪಂ, ಪ್ರಕಟಣೆ 2012.

25. ಡಾ.ಚಂದ್ರು ಕಾಳೇನಹಳ್ಳಿ – ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು, ಚಿನ್ನದ ಹಬ್ಬದ ವರ್ಷ 2011.

26. ಡಾ.ಕೋ.ವೆಂ.ರಾಮಕೃಷ್ಣೇಗೌಡ – ಕರ್ನಾಟಕ ಕಾವೇರಿ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ಪ್ರಕಟಣೆ 2011.

27. ಡಾ.ದೇವರ ಕೊಂಡಾರೆಡ್ಡಿ – ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ಪ್ರಕಟಣೆ 1994.

# ಅಧ್ಯಾಯ-2

# ದೇವಾಲಯಗಳ ಉಗಮ ಮತ್ತು ಬೆಳವಣಿಗೆ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಹಿನ್ನೆಲೆ

## 2.1. ದೇವಾಲಯಗಳ ಉಗಮ ಮತ್ತು ಬೆಳವಣಿಗೆ

ಮಾನವನು ಅನಾದಿ ಕಾಲದಿಂದಲೂ ದೈವೀ ಶಕ್ತಿಯೊಂದನ್ನು ರೂಪಿಸಿಕೊಂಡು, ಅದರಲ್ಲಿ ನಂಬಿಕೆ ಭಕ್ತಿ, ಭಯ ಹೀಗೆ ಹಲವು ಭಾವನೆಗಳನ್ನು ಉಳ್ಳವರಾಗಿ ಬದುಕುತ್ತಾ ಜೀವನ ಸಾಗಿಸುತ್ತಿದ್ದಾರೆ. ವೇದಗಳ ಪ್ರಾಚೀನತೆ ಕ್ರಿ.ಪೂ.4ನೇ ಸಹಸ್ರಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಇದರಲ್ಲಿ ಮೂರ್ತಿ ಪೂಜೆಯ ಕುರುಹುಗಳು ಸಹ ಇರುತ್ತವೆ. ಕ್ರಿ.ಶ.2ನೇ ಶತಮಾನದಿಂದ ದೇವಾಲಯಗಳ ಉಗಮಗೊಂಡು ಕಾಲಕ್ರಮೇಣ ಬೆಳೆದು ಹಲವಾರು ಪ್ರಯೋಗಗಳಿಗೆ ಒಳಪಟ್ಟು ಮಾರ್ಪಾಡುಗಳನ್ನು ಹೊಂದಿ ಅಂದಿನ ಸಮಾಜದ ಎಲ್ಲಾ ಚಟುವಟಿಕೆಗಳಿಗೂ ಕೇಂದ್ರವಾಗಿ ರೂಪುಗೊಂಡಿದೆ.

ಭಾರತದಲ್ಲಿ ಮೊದಲಿಗೆ ದೇವಾಲಯಗಳ ಉಗಮ ಮತ್ತು ಬೆಳವಣಿಗೆಯನ್ನು ಕಾಣುವುದು ಕಷ್ಟ ಸಾಧ್ಯ. ಏಕೆಂದರೆ ಮೊದಲಿಗೆ ಎಲ್ಲಿಂದ ಯಾವ ಕಾಲದಿಂದ ದೇವಾಲಯಗಳ ಬೆಳವಣಿಗೆಯಾಗಿದೆ ಎಂಬುದನ್ನು ನಿಖರವಾಗಿ ವಾದವನ್ನು ವಿದ್ವಾಂಸರು ಸಹ ಸ್ಪಷ್ಟವಾಗಿ ಹೇಳಿಲ್ಲ. ಬಹುಶಃ ನಮಗೆ ಸಿಂಧೂ ಬಯಲಿನ ನಾಗರೀಕತೆಯ ಕಾಲದಲ್ಲಿಯೇ ದೇವಾಲಯಗಳ ಪರಿಕಲ್ಪನೆ ಇರಬಹುದು ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ.[1]

ಭಾರತೀಯ ಪ್ರಾಚೀನ ಕಾಲದ ದೇವಾಲಯಗಳ ಕಲಾ ಇತಿಹಾಸದಲ್ಲಿ ಬಹಳ ಪ್ರಮುಖವಾದ ಅಂಶವೆಂದರೆ ಸಿಂಧೂ ಬಯಲಿನ ಕಲೆ ಎಂದರೆ ತಪ್ಪಾಗಲಾರದು. ಈ ನಾಗರೀಕತೆಯಲ್ಲಿ ದೇವಾಲಯಗಳ ಅಥವಾ ಶಿಲ್ಪಗಳ ಕುರಿತು ಎಲ್ಲಿಯೂ ವಿಚಾರ ತಿಳಿದುಬರುವುದಿಲ್ಲ. ಆದರೆ ಸಿಂಧೂಬಯಲಿನ ನಾಗರೀಕತೆಯ ಜನರು ಮೂರ್ತಿ ಪೂಜೆ ಮಾಡುತ್ತಿದ್ದರು ಎಂಬ ವಿಚಾರಗಳು ಸಹ ಇಲ್ಲ. ಆದರೂ ಕೂಡ ಸೂರ್ಯ, ಚಂದ್ರ, ನೀರು, ಭೂಮಿ, ವೃಕ್ಷಗಳನ್ನು ಪೂಜಿಸುತ್ತಿದ್ದರು ಎಂಬ ಪರಿಕಲ್ಪನೆ ಇರುವುದರಿಂದ ಇವರಿಗೆ ದೇವರ ಬಗ್ಗೆ ದೇವಾಲಯಗಳ ಬಗ್ಗೆ ಜ್ಞಾನವಿತ್ತು ಎಂಬುದು ಸಹ ಗೊತ್ತಾಗುತ್ತದೆ. ಸಿಂಧೂನಾಗರೀಕತೆಯ ಕಾಲದಲ್ಲೇ ಕಲ್ಲಿನ ಬಳಕೆಯನ್ನು ಕಾಣುತ್ತೇವೆ. ಸಿಂಧೂ ಸಂಸ್ಕೃತಿಯಲ್ಲಿ ಕಲ್ಲಿನ ಶಿಲ್ಪಗಳು, ಕಲ್ಲಿನ ಮುದ್ರೆಗಳು, ಕೋಟೆಗಳು ಹಾಗೂ ಮೊದಲಾದ ಅವಶೇಷಗಳು ಉತ್ಖನನದ ಮೂಲಕ ಬೆಳಕಿಗೆ ಬಂದಿವೆ. ಸಿಂಧೂನಾಗರೀಕತೆಯಲ್ಲಿ ಲೌಕಿಕ ಕಟ್ಟಡಗಳನ್ನು ಕಾಣುತ್ತೇವೆ. ಅದರಲ್ಲಿ ದೊಡ್ಡ

ದೊಡ್ಡ ಕಟ್ಟಡಗಳು, ಹಜಾರಗಳು, ಮಾರುಕಟ್ಟೆಗಳು, ಉಗ್ರಾಣ, ಸ್ನಾನದ ಕೊಳ, ಕಣಜ ಇನ್ನಿತರ ಉದ್ದೇಶ ತಿಳಿಯುವ ಕಟ್ಟಡಗಳು ಕಂಡುಬಂದಿವೆ. ನಗರೀಕರಣ ಇತ್ತು ಎಂಬುದಾಗಿ ತಿಳಿದುಬರುತ್ತದೆ.[2]

ರುದ್ರನ ಆರಾಧನೆಗಳು ಇರುವ ಬಗ್ಗೆ ಅಲ್ಲದೆ ನಮಸ್ಕಾರ ಹಾಗೂ ಯೋಗ ಮುದ್ರೆಯ ಅವಶೇಷಗಳು ದೊರೆತಿರುವುದರಿಂದ ಪೂಜಾ ಕಲ್ಪನೆ ಇದೆ. ಅಲ್ಲದೆ ಸಮಾಧಿಗಳನ್ನು ಪೂಜಿಸುತ್ತಿದ್ದರು ಎಂಬುದು ತಿಳಿದುಬರುವುದರಿಂದ ಇವರಿಗೆ ದೇವರ ಕಲ್ಪನೆ ಇತ್ತು. ಇದರ ಮೂಲಕ ದೇವಾಲಯಗಳ ಬೆಳವಣಿಗೆಯಾಗಿದೆ ಎನ್ನಬಹುದಾಗಿದೆ.

ಭಾರತದಲ್ಲಿ ಮಾನವ ಮೊದಲು ನೈಸರ್ಗಿಕ ತಾಣಗಳನ್ನು ಆಧರಿಸಿದ ಕಾಲಕ್ರಮೇಣ ಗುಡಿಸಲುಗಳ ರಚನೆ ಆರಂಭವಾಯಿತು. ಆದರೆ ತುಂಬಾ ಪ್ರಾಚೀನ ದೇವಾಲಯಗಳೆಂದರೆ, ಗುಹೆಗಳೇ ಆಗಿವೆ. ಬಂಡೆಗಳನ್ನು ಕೊರೆದು ಸಿದ್ಧ ಮಾಡಿದ ಗುಹೆಗಳೊಂದಿಗೆ ಬಿದಿರು ಮರ ಮಣ್ಣುಗಳಿಂದ ಮಾಡಿದ ದೇವ ಮಂದಿರಗಳನ್ನು ನಿರ್ಮಿಸುತ್ತಿದ್ದುದುಂಟು. ಇದು ದೇವಾಲಯಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಉಳಿದುಬಂದಿರುವ ಪ್ರಾಚೀನ ಕಟ್ಟಡಗಳೆಂದರೆ, ಸ್ತೂಪಗಳು ಹಾಗೂ ಚೈತ್ಯಾಲಯಗಳು. ಭಾರತದಲ್ಲಿ ವಾಸ್ತುಶಿಲ್ಪದ ಮೂಲದ ಬಗ್ಗೆ ಖಚಿತವಾದ ಆಧಾರಗಳು ದೊರೆತಿಲ್ಲ. ಅತೀ ಪ್ರಾಚೀನ ಮೂಲಾಧಾರಗಳೆಂದು ನಂಬಲಾಗಿರುವ ಸಾಹಿತಿಕ ಅಥವಾ ಸ್ಮಾರಕಗಳ ಆಧಾರಗಳಿವೆ.[3]

ಕುಷಾಣರ ಕಾಲದಲ್ಲಿ ಅದರಲ್ಲೂ ಕಾನಿಷ್ಕನ ಕಾಲದಲ್ಲಿ ಮಥುರ ಮತ್ತು ಗಾಂಧಾರ ಕಲೆಯ ಶಿಲ್ಪಕಲೆಗಳು ಬಳಕೆಗೆ ಬಂದವು. ಇವರ ಕಾಲದಲ್ಲಿ ಅನೇಕ ರೀತಿಯ ಬೌದ್ಧ ಸೂಪ್ತಗಳು ನಿರ್ಮಾಣಗೊಂಡವು. ಇವರ ಕಾಲದ ದೇವಾಲಯಗಳಲ್ಲಿ ಸುಂದರವಾದ ಸ್ತ್ರೀ ಶಿಲ್ಪಗಳು ಯುವತಿಯರು, ಜೈನ ತೀರ್ಥಂಕರರು, ಬುದ್ಧ ಹಾಗೂ ಬೋಧಿಸತ್ವರನ್ನು ಮಥುರ ಶಿಲ್ಪದಲ್ಲಿ ಕಾಣಬಹುದು. ನಿಂತಿರುವ ಬುದ್ಧನ ವಿಗ್ರಹಗಳು ಕಾನಿಷ್ಕನ ಕಾಲಕ್ಕೆ ಸೇರಿರುವುದು ತಿಳಿದುಬರುತ್ತದೆ. ವೈದಿಕ ಧರ್ಮಕ್ಕೆ ಸೇರಿದಂತೆ ಬ್ರಹ್ಮ, ಸೂರ್ಯ, ವಿಷ್ಣು, ಶಿವ, ಮಹಿಷಾಮರ್ಧಿನಿ ಮೊದಲದ ಮೂರ್ತಿ ಶಿಲ್ಪಗಳು ಕುಷಾಣರ ಕಾಲಕ್ಕೆ ಮಥುರದಲ್ಲಿ ಕಂಡುಬಂದಿವೆ.

ಗಾಂಧಾರ ಕಲೆಯು ತಕ್ಷಶಿಲೆ, ಪುಷ್ಕಲಾವತಿ, ಪೇಷಾವರ್ ಮತ್ತು ಕಪಿಲಾ ಇವುಗಳಲ್ಲಿ ಕಂಡುಬಂದಿದೆ.[4] ನಂತರ ಗುಪ್ತರು ಆಡಳಿತ ನಡೆಸಿರುತ್ತಾರೆ ಇವರ ಕಾಲ ಕ್ರಿ.ಶ.4 ರಿಂದ 6ನೇ ಶತಮಾನ. ಗುಪ್ತರ ಕಾಲವನ್ನು ಭಾರತದಲ್ಲಿ ಸುವರ್ಣಯುಗ ಎಂದು ಕರೆಯುತ್ತಾರೆ. ಗುಪ್ತರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾಗಿವೆ. ಇವರ ಕಾಲದ ದೇವಾಲಯದ ವಾಸ್ತು

ಉದಾಹರಣೆಗಳು ಉತ್ತರ ಭಾರತದ ಕೆಲವು ಕಡೆ ಉಳಿದುಬಂದಿದೆ. ಇವರ ಕಾಲಕ್ಕೆ ಇಟ್ಟಿಗೆ ಮತ್ತು ಶಿಲೆಯಿಂದ ನಿರ್ಮಾಣವಾಗಿವೆ. ಮಧ್ಯಪ್ರದೇಶದಲ್ಲಿ ಇಟ್ಟಿಗೆ ದೇವಾಲಯಗಳು ನಿರ್ಮಿತಗೊಂಡಿವೆ. ಗುಪ್ತರ ಕಾಲದಲ್ಲಿ ಹಿಂದೂ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆದಿವೆ. ಸಾಂಚಿಯ ಶಿವಾಲಯ, ಭೂಮರಾದ ಶಿವಾಲಯ, ಅಲ್ಲದೆ, ಬೋಧಗಯದ ಮೂಲ ಮಹಾಬೋಧಿ ದೇವಾಲಯ, ಬಿದರ್‌ಗಾಂವ್ ಇಟ್ಟಿಗೆ ದೇವಾಲಯವನ್ನು ಇರುವುದು ತಿಳಿದುಬರುತ್ತದೆ. ಉದಯಗಿರಿಯಲ್ಲಿ ವಿಷ್ಣುದೇವಾಲಯವನ್ನು ಕಾಣಬಹುದು. ಗುಪ್ತರ ಕಾಲದಿಂದ ಮೊಟ್ಟಮೊದಲ ಬಾರಿಗೆ ಭಾರತೀಯ ಕಲೆಯಲ್ಲಿ ನವಚೇತನ ಉಂಟಾಯಿತು. ಗುಪ್ತರ ಕಾಲವೂ ಕಲಾ ವಾಸ್ತುಶಿಲ್ಪ, ಚಿತ್ರಕಲೆ ಬೆಳವಣಿಗೆಯಲ್ಲಿ ಪರಕಾಷ್ಠತೆಯನ್ನು ಹೊಂದಿದ ಕಾಲವಾಗಿತ್ತು. ಗುಪ್ತರ ಬೆಳವಣಿಗೆ ಅಖಂಡ ಭಾರತದಲ್ಲೆಲ್ಲಾ ತನ್ನ ಪ್ರಭಾವವನ್ನು ಬೀರಿದೆ. ಪರಿಪೂರ್ಣವಾಗಿ ಭಾರತೀಯ ಶಿಲ್ಪ ಕಲೆ ಬೆಳವಣಿಗೆ ಸೃಜನಾತ್ಮಕ ವಾಸ್ತುಶಿಲ್ಪಾಕೃತಿಗಳು ಉಂಟಾದುದರಿಂದ ಹಿಂದೂ ಧರ್ಮದ ಪುನಶ್ಚೇತನದ ಕಾಲವಾಗಿತ್ತೆಂಬ ಅಂಶ ಆಗಿನ ಕಾಲದ ಕಲೆಯಲ್ಲಿ ಪ್ರತಿಬಿಂಬಿತವಾಗಿದೆ. ಗುಪ್ತರ ಕಾಲದಲ್ಲಿ ಕುಳಿತ ಮತ್ತು ನಿಂತ ಬುದ್ಧನ ಶಿಲ್ಪಗಳಿವೆ. ಆದಕಾರಣ ಈ ಪರಂಪರೆ ಈ ಭಾಗದಲ್ಲಿಯೂ ಮುಂದುವರೆದಿರಬೇಕೆಂದು ನನ್ನ ಅಭಿಪ್ರಾಯ. ಗುಪ್ತರ ಕಾಲದ ಕೆಲವೊಂದು ಪ್ರಮುಖ ದೇವಾಲಯಗಳನ್ನು ಪ್ರಸ್ತುತ ಹೆಸರಿಸಲಾಗಿದೆ.

ಉದಾಹರಣೆಗೆ 1) ಸಾಂಚಿಯ ಶಿವ ದೇವಾಲಯ, 2) ತಿವಾಗಡ್ ವಿಷ್ಣು ದೇವಾಲಯ, 3) ಭೂಮಾರದ ಶಿವ ದೇವಾಲಯ, 4) ನಾಚನ ಕುತಾರದ ಪಾರ್ವತಿ ದೇವಾಲಯ, 5) ದೇವಘರನ ವಿಷ್ಣು (ದಶಾವತಾರ) ದೇವಾಲಯ, 6) ಬೀದರ್‌ಗಾಂವ್‌ನ ಇಟ್ಟಿಗೆ ದೇವಾಲಯ, 7) ಚಾದ್‌ದಲ್ಲಿರುವ ಏಕಮುಖ ಶಿವಲಿಂಗ ದೇವಾಲಯ, 8) ಉದಯಗಿರಿ ಅರೆಗುಹಾ/ ನಿರ್ಮಾಣ ದೇವಾಲಯಗಳು

ಈ ಮೇಲಿನ ದೇವಾಲಯಗಳನ್ನು ಅಧ್ಯಯನ ಮಾಡಿದ್ದಾಗ ಗುಪ್ತರ ಕಾಲದಲ್ಲಿ ಕಲೆಯು ಯಾವ ರೀತಿ ಹಂತ ಹಂತವಾಗಿ ಬೆಳೆದಿತ್ತು ಎಂಬುದು ತಿಳಿದುಬರುತ್ತದೆ. ಈ ಕಾಲದಲ್ಲಿ ಅಲೌಕಿಕ ಮತ್ತು ಆಧ್ಯಾತ್ಮಿಕ ದೃಷ್ಟಿಯನ್ನಲ್ಲದೆ ಲೌಕಿಕ ಮತ್ತು ಭೌತಿಕ ಜೀವನದ ದೃಷ್ಟಿಯನ್ನು ಸೇರಿಸಲಾಗಿದೆ ಎಂಬುದು ತಿಳಿದುಬರುತ್ತದೆ. ಈ ಪರಂಪರೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪ್ರದೇಶದಲ್ಲಿಯೂ ಮುಂದುವರೆದಿದೆ. ಕರ್ನಾಟಕಕ್ಕೆ ಬಂದರೆ ಮೊದಲಿಗೆ ದೇವಾಲಯಗಳ ಬೆಳವಣಿಗೆಯನ್ನು ನಾವು ಶಾತವಾಹನರ ಕಾಲಕ್ಕೆ ನೋಡುತ್ತೇವೆ. ಅದಕ್ಕೂ ಮೊದಲಿಗೆ ಶಾತವಾಹನರ ಕಲೆಯನ್ನು ನಾವು ಗಮನಿಸಬಹುದಾದರೆ, ಮೌರ್ಯರ ನಂತರ ದಖನ್ ಪ್ರದೇಶದ ಮೇಲೆ ಆಡಳಿತ ನಡೆಸಿದ್ದಾರೆ. ಇವರು ದಕ್ಷಿಣ ಭಾರತದಲ್ಲಿ

ದೇವಾಲಯಗಳನ್ನು ನಿರ್ಮಿಸಿದ್ದಾರೆ. ಆಂಧ್ರಪ್ರದೇಶ, ಮಹಾರಾಷ್ಟ್ರ, ಕರ್ನಾಟಕದಲ್ಲಿ ಇವರ ಕಾಲದ ದೇವಾಲಯಗಳು ಕಂಡುಬಂದಿವೆ. ಇವರ ಕಾಲದಲ್ಲಿ ಜೈನ ಧರ್ಮ ಮತ್ತು ಬೌದ್ಧ ಧರ್ಮ ಪ್ರಮುಖವಾಗಿತ್ತು. ಶಾತವಾಹನರ ಕಾಲಕ್ಕೆ ಕಾರ್ಲೆ, ಹನ್ವೇರಿ, ಅಜಂತಾ, ನಾಸಿಕ್ ಮೊದಲಾದ ಕಡೆ ಬಂಡೆಗಳನ್ನು ಕೊರೆದು ಚೈತ್ಯಾಲಯ ಮತ್ತು ವಿಹಾರಗಳನ್ನು ನಿರ್ಮಿಸಿದ್ದಾರೆ.

ಕರ್ನಾಟಕದಲ್ಲಿಯೂ ಶಾತವಾಹನರ ಕಲೆಯ ಅವಶೇಷಗಳು ದೊರೆತಿವೆ. ಗುಲ್ಬರ್ಗ ಜಿಲ್ಲೆಯ ಸನ್ನತಿ ಮತ್ತು ಅದರ ಸುತ್ತಮುತ್ತ 1986 ರಿಂದ ನಡೆದ ಉತ್ಖನನದಿಂದ ಶಾತವಾಹನರ ಕಾಲದ ಅನೇಕ ಬೌದ್ಧ ಸೂಪ್ತಗಳು ಬೆಳಕಿಗೆ ಬಂದಿವೆ. ತುಗಾರದಲ್ಲಿ ಬೌದ್ಧ ಸೂಪ್ತಗಳು, ಬೆಳಗಾವಿಯಲ್ಲಿ ತಾರಾಭಗವತಿಯ ಶಾತವಾಹನರ ಪ್ರತಿಮೆಗಳು ದೊರೆತಿವೆ. ಹಾಗೆಯೇ ಚಂದ್ರವಳ್ಳಿಯಲ್ಲಿಯೂ ಶಾತವಾಹನರ ಸ್ಮಾರಕಗಳು ದೊರೆತಿವೆ. ಕರ್ನಾಟಕದಲ್ಲಿ ಬೌದ್ಧ ಧರ್ಮದ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ಬನವಾಸಿ ಮತ್ತು ಐಹೊಳೆಗಳಲ್ಲೂ ಶಾತವಾಹನರ ಕಲೆಯ ಅವಶೇಷಗಳು ಕಂಡುಬರುತ್ತದೆ. ಶಾತವಾಹನರ ಕಾಲದಲ್ಲಿ ಬೌದ್ಧ ಧರ್ಮಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿರುತ್ತಾರೆಂದು ಹಿರಿಯ ಸಂಶೋಧಕರ ಮಾಹಿತಿಯಿಂದ ವ್ಯಕ್ತವಾಗುತ್ತದೆ. ಅಲ್ಲದೆ ಜೈನ ಧರ್ಮಕ್ಕೂ ಪ್ರೋತ್ಸಾಹ ನೀಡಿದ್ದರು. ದಕ್ಷಿಣ ಭಾರತದ ಅದರಲ್ಲಿಯೂ ಕರ್ನಾಟಕದ ಪರಿಸ್ಥಿತಿಯನ್ನು ಗಮನಿಸಿದಾಗ ತಾಳಗುಂದ ಶಾಸನದ ಪ್ರಕಾರ ಪ್ರಸಿದ್ಧವಾದ ಪ್ರಣವೇಶ್ವರ ದೇವಾಲಯವು ಎರಡನೆಯ ಶತಮಾನದಲ್ಲೇ ಇತ್ತು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ತಾಳಗುಂದದ ಶಾಸನವು ತಾಳಗುಂದದ ಪ್ರಣವೇಶ್ವರ ದೇವಾಲಯದಲ್ಲಿ ಶಾತಕರ್ಣಿ ೮ ಪೂಜೆ ಸಲ್ಲಿಸಿದ್ದರೆಂದು ಶಾಸನದಿಂದ ತಿಳಿದುಬರುತ್ತದೆ. ಇದರಿಂದಾಗಿ ಈ ದೇವಾಲಯದ ಇತಿಹಾಸ ಕ್ರಿಸ್ತಪೂರ್ವದ ಶತಮಾನಕ್ಕೆ ಹೋಗಲು ಸಾಧ್ಯವೆನಿಸುತ್ತದೆ [5]

ಕದಂಬರ ಕಾಲಕ್ಕೆ ಸೇರಿದ ವಾಸ್ತುಶಿಲ್ಪಕಲೆಯು ಕರ್ನಾಟಕದಲ್ಲಿ ಕಂಡುಬರುತ್ತದೆ. ವಾಯುವ್ಯ ಕರ್ನಾಟಕದಲ್ಲಿ ಕ್ರಿ.ಶ.4–7ನೇ ಶತಮಾನದ ಅವಧಿಯಲ್ಲಿ ಬನವಾಸಿಯ ಕದಂಬರು ಬನವಾಸಿ, ಹಾನಗಲ್ಲು ಮತ್ತು ಗೋವಾ ಪ್ರಾಂತ್ಯದಲ್ಲಿ ಆಡಳಿತ ನಡೆಸಿದ್ದಾರೆ. ಇವರ ಕಾಲದಲ್ಲಿ ಜೈನ ಮತ್ತು ಹಿಂದೂ ಧರ್ಮ ಪ್ರಬಲಗೊಂಡಿತು. ಕಾಕುತ್ಸವರ್ಮನ ತಾಳಗುಂದ ಶಾಸನದ ಮಹದೇವ ದೇವಾಲಯದ ಉಲ್ಲೇಖ, ಹಲಗಿ ತಾಮ್ರ ಪಟಶಾಸನದಲ್ಲಿ ಪಲಾಶಿಕಾ ಎಂಬ ಸ್ಥಳದಲ್ಲಿ ಮೃಗೇಶ ಕಟ್ಟಿಸಿದ ಜೈನ ಬಸದಿಯ ಪ್ರಸ್ತಾಪ ಆ ಕಾಲದ ದೇವಾಲಯದ ರಚನೆ ಬಗ್ಗೆ ತಿಳಿದುಬರುತ್ತದೆ. ಬನವಾಸಿಯಲ್ಲಿ ಕುಲದೈವ ಮಧುಕೇಶ್ವರನ ದೇವಾಲಯವಿದೆ. ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಹಲಗಿಯಲ್ಲಿ ಕೆಲವು ಪ್ರಾಚೀನ ದೇವಾಲಯಗಳಿವೆ. ಇಲ್ಲಿಯ

ಜೈನ ಬಸದಿ ಅತ್ಯಂತ ಹಳೆಯದು, ಸೊರಬ ತಾಲ್ಲೂಕಿನ ಓಂಬಹಳ್ಳಿಯಲ್ಲಿರುವ ದೇವಿ ದೇವಾಲಯದ ಮುಂದಿರುವ ಶಾಸನವೊಂದರಿಂದ ಆ ಗುಡಿ ಮೂಲತಃ ಕದಂಬರ ಶಾಂತಿವರ್ಮನ ಕಾಲದಲ್ಲಿ ಕಟ್ಟಿದ್ದೆಂದು ತಿಳಿಯುತ್ತದೆ. ಈ ಗುಡಿ ಹಾಳುಬಿದ್ದರೂ ಅಲ್ಲಿ ದೊರೆತಿರುವ ದುರ್ಗಾಶಿಲ್ಪ ದೇವಾಲಯದ ಮೂಲ ಶಿಲ್ಪವನ್ನು ನೋಡಬಹುದು. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಶಿವಮೊಗ್ಗ ಜಿಲ್ಲೆಯ ಮಳವಳ್ಳಿ ಮತ್ತು ತಾಳಗುಂದ ಉತ್ತರ ಕನ್ನಡ ಜಿಲ್ಲೆಯ ಬನವಾಸಿ, ಗುಡ್ನಾಪುರ ಹಾಸನ ಜಿಲ್ಲೆಯ ಹಲ್ಮಿಡಿ ಮೊದಲಾದ ಕಡೆ ಇದರ ಕಾಲದ ಪ್ರಮುಖ ಶಾಸನಗಳಿವೆ. ಇವರ ಕಾಲದ ಶಿಲ್ಪ ಕಲೆಯನ್ನು ಗಮನಿಸಿದರೆ, ಕದಂಬರ ಪ್ರಭಾವ ಈ ಭಾಗದಲ್ಲಿಯೂ ಇತ್ತು ಎಂಬುದು ನನ್ನ ಅಭಿಪ್ರಾಯ.[6]

ತದನಂತರ ಕಾಲದಲ್ಲಿ ಬಾದಾಮಿ ಚಾಲುಕ್ಯರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಬೆಳವಣಿಗೆಯನ್ನು ಕಾಣುತ್ತೇವೆ. ಬಾದಾಮಿ ಚಾಲುಕ್ಯರು ಕ್ರಿ.ಶ.6ನೇ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ರಾಜ್ಯಭಾರ ನಡೆಸಿರುತ್ತಾರೆ. ಇವರ ಕಾಲದ ಪ್ರಮುಖ ಪಟ್ಟಣಗಳಾದ ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಇವರ ಕಾಲದ ದೇವಾಲಯಗಳನ್ನು ಕಾಣಬಹುದಾಗಿದೆ. ಬಾದಾಮಿ ಚಾಲುಕ್ಯರು ಕರ್ನಾಟಕದಲ್ಲಿ ಮೊಟ್ಟ ಮೊದಲಿಗೆ ಕಲ್ಲಿನ ದೇವಾಲಯಗಳನ್ನು ನಿರ್ಮಿಸಿದರು. ಅಲ್ಲದೆ ಕರ್ನಾಟಕದಲ್ಲಿ ಮೊಟ್ಟ ಮೊದಲಿಗೆ ಗುಹಾಂತರ ದೇವಾಲಯಗಳನ್ನು, ಹಿಂದೂ, ಜೈನ ಹಾಗೂ ಬೌದ್ಧ ಶಿಲ್ಪಗಳನ್ನು ತಯಾರಿಸಿರುವುದು,ದೇವಾಲಯ ವಾಸ್ತುಶಿಲ್ಪಗಳನ್ನು ಪ್ರಚುರಪಡಿಸಿದ್ದಾರೆ. ಈ ಮೇಲಿನ ಎಲ್ಲಾ ಉದಾಹರಣೆಗಳಿಂದ ಬಾದಾಮಿ ಚಾಲುಕ್ಯರ ಕಾಲದಲ್ಲಿ ದೇವಾಲಯಗಳು ಕರ್ನಾಟಕದಲ್ಲಿ ಪ್ರಾರಂಭವಾದವು. ಬಾದಾಮಿ ಚಾಲುಕ್ಯರ ಕಾಲದ ದೇವಾಲಯ ನಿರ್ಮಾಣ ಕಾರ್ಯ ಗುಪ್ತರ ಕಾಲಕ್ಕಿಂತ ತಡವಾಗಿ ಪ್ರಾರಂಭವಾದ ಕಾರಣ ಉತ್ತರ ಭಾರತದಲ್ಲಿ ಅಂದಿನ ಕಾಲಕ್ಕೆ ಆಗಿದ್ದ ದೇವಾಲಯಗಳ ವಾಸ್ತು ಪರಂಪರೆಯು ಉತ್ತರ ಮತ್ತು ದಕ್ಷಿಣ ಭಾಗದ ಸಾಂಸ್ಕೃತಿಕ ಸಂಬಂಧಗಳಿಂದಾಗಿ ಬಾದಾಮಿ ಚಾಲುಕ್ಯರ ದೇವಾಲಯ ವಾಸ್ತುಶಿಲ್ಪ ಕಲೆ ಪ್ರಕಟವಾಗಿರುವುದನ್ನು ಕಾಣಬಹುದು. ಆದಕಾರಣ ಬಾದಾಮಿ ಚಾಲುಕ್ಯರ ದೇವಾಲಯಗಳಲ್ಲಿ ಗಂಗೆ, ಯಮುನೆಯರ ಶಿಲ್ಪಗಳು, ಪೂರ್ಣ ಕಳಶದ ಕೆತ್ತನೆಗಳಲ್ಲಿ ಹಿಂದೂ ದೇವ ದೇವತೆಗಳ ಮೂರ್ತಿ ಶಿಲ್ಪಗಳು ಎಲ್ಲವೂ ಒಂದೇ ಕಾಲದಲ್ಲಿ ನಿರ್ಮಾಣಗೊಂಡಿರುವುದನ್ನು ನಾವು ಬಾದಾಮಿ ಚಾಲುಕ್ಯರ ದೇವಾಲಯಗಳಲ್ಲಿ ಕಾಣುತ್ತೇವೆ. ಆದರೆ ಉತ್ತರ ಭಾರತದ ಔತ್ತರೀಯ ಶೈಲಿ ಅಥವಾ ನಾಗರಶೈಲಿಯ ರೂಪುಗೊಂಡ ಶಿಖರಗಳು ಬಾದಾಮಿ ಚಾಲುಕ್ಯರ ದೇವಾಲಯಗಳಲ್ಲಿ ಕಾಣುತ್ತೇವೆ. ದ್ರಾವಿಡ ಮಾದರಿಯ ಶಿಖರಗಳು ಕಂಡುಬರುವುದಿಲ್ಲ. ಆದರೆ ಇವರ ವಾಸ್ತುಶೈಲಿಯ ಪ್ರಭಾವದಿಂದ ಗುಂಡ್ಲುಪೇಟೆಯ ಪ್ರದೇಶದಲ್ಲಿ

ಗಂಗರ, ಚೋಳರ, ಹೊಯ್ಸಳರ, ವಿಜಯನಗರ ಅರಸರ ಹಾಗೂ ಮೈಸೂರು ಒಡೆಯರ ಕಾಲಕ್ಕೆ ಅನೇಕ ಕಲ್ಲಿನ ದೇವಾಲಯಗಳು ನಿರ್ಮಾಣಗೊಂಡಿವೆ ಎಂದು ಹೇಳಬಹುದಾಗಿದೆ.

ಗಂಗರು ಕ್ರಿ.ಶ. 4ನೇ ಶತಮಾನದಿಂದ ಕ್ರಿ.ಶ.10ನೇ ಶತಮಾನದ ಕೊನೆಯವರೆಗೂ ದಕ್ಷಿಣ ಕರ್ನಾಟಕದಲ್ಲಿ ಆಡಳಿತ ನಡೆಸಿದ್ದಾರೆ. ಇವರು ದಕ್ಷಿಣ ಕರ್ನಾಟಕ ಮತ್ತು ಅದಕ್ಕೆ ಹೊಂದಿಕೊಂಡಂತೆ ತಮಿಳುನಾಡಿನ ಹಾಗೂ ಕೇರಳ ಭಾಗದಲ್ಲಿಯೂ ಆಡಳಿತ ನಡೆಸಿರುವುದು ತಿಳಿದುಬರುತ್ತದೆ. ಆ ಸಮಯದಲ್ಲಿ ಉತ್ತರ ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಪ್ರಭಾವದಿಂದ ನಡೆದ ದ್ರಾವಿಡ ವಾಸ್ತುವಿನ ಪ್ರಗತಿಯಲ್ಲಿ ಗಂಗರ ವಾಸ್ತುವಿನ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದೆ. ಇವರಿಂದಾಗಿ ಗಂಗರ ಕಾಲಕ್ಕೆ ಅನೇಕ ದೇವಾಲಯಗಳಲ್ಲಿ ಕರ್ನಾಟಕ ಮತ್ತು ತಮಿಳುನಾಡಿನ ಪ್ರಭಾವ ಬೀರಿದೆ.

ಗಂಗರ ಕಾಲಕ್ಕೆ ಅನೇಕ ಇಟ್ಟಿಗೆ ದೇವಾಲಯಗಳು ಇದ್ದವೆಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಚಾಮರಾಜನಗರ ಜಿಲ್ಲೆಯಲ್ಲಿ ಅನೇಕ ಗ್ರಾಮಗಳಲ್ಲಿ ಇಟ್ಟಿಗೆ ದೇವಾಲಯಗಳನ್ನು ಗುರುತಿಸಬಹುದಾಗಿದೆ. ಗಂಗರ ರಾಜಧಾನಿಯಾದ ತಲಕಾಡಿನಲ್ಲಿ ಒಂದು ಜೈನ ಬಸದಿಯ ಅಧಿಷ್ಠಾನವನ್ನು ಉತ್ಖನನಗಳ ಮೂಲಕ ಬೆಳಕಿಗೆ ತರಲಾಗಿದೆ. [7] ಗಂಗರ ಕಾಲಕ್ಕೆ ಮುಖ್ಯ ದೇವಾಲಯಗಳು ಬೆಂಗಳೂರು ಜಿಲ್ಲೆಯ ಬೇಗೂರಿನಲ್ಲಿ ನಾಗೇಶ್ವರ ದೇವಾಲಯ, ಕೋಲಾರದ ಕೋಲಾರಮ್ಮ ನಂದಿಬೆಟ್ಟ ಪಕ್ಕದಲ್ಲಿ ನಂದಿಗ್ರಾಮದ ಭೋಗೇಶ್ವರ ದೇವಾಲಯ, ಮೈಸೂರು ಜಿಲ್ಲೆಯ ವರುಣ, ಚಾಮರಾಜನಗರ ಜಿಲ್ಲೆಯ ನರಸಮಂಗಲ, ಆಲೂರು ಮೊದಲಾದ ಕಡೆ ಗಂಗರ ಕಾಲಕ್ಕೆ ಸೇರಿದ ದೇವಾಲಯಗಳಿವೆ. ಗಂಗರ ಕಾಲಕ್ಕೆ ದ್ರಾವಿಡ ಶೈಲಿಯ ದೇವಾಲಯಗಳು ಹಾಗೂ ಗಜಪೃಷ್ಠಾಕಾರದ ದೇವಾಲಯಗಳು ಕಂಡುಬಂದಿಲ್ಲ. ಆದರೆ ಚಾಲುಕ್ಯರ ಕಾಲದಲ್ಲಿ ಮತ್ತು ಚೋಳರ ಕಾಲದಲ್ಲಿ ಗಜಪೃಷ್ಠಾಕಾರದಲ್ಲಿ ಕಂಡುಬಂದಿದೆ. ಚಾಮರಾಜನಗರ ಜಿಲ್ಲೆಯ ನರಸಮಂಗಲದ ರಾಮೇಶ್ವರ ದೇವಾಲಯದ ವಿಮಾನ ಗಾರೆಗಚ್ಚಿನಲ್ಲಿ ನಿರ್ಮಿಸಲ್ಪಟ್ಟ ಸಾವಿರ ವರ್ಷವಾದರೂ ಇಂದಿಗೂ ಸಹ ಈ ವಿಮಾನದ ಬಹುತೇಕ ಅಲಂಕರಣೆಗಳು ಶಿಲ್ಪಗಳು ಚೆನ್ನಾಗಿ ಮೂಡಿಬಂದಿವೆ. ಆದರೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಈ ರೀತಿ ದೇವಾಲಯವೇ ಇಲ್ಲ.

ಗಂಗರ ಕಾಲದ ದೇವಾಲಯಗಳಿಗೆ ಪ್ರತ್ಯೇಕವಾದ ವಾಸ್ತುಶೈಲಿ ಇಲ್ಲ. ಗಂಗರು ದ್ರಾವಿಡ ಶೈಲಿಯನ್ನೇ ಮುಂದುವರಿಸಿದ್ದು, ಸಣ್ಣಪುಟ್ಟ ಬದಲಾವಣೆಯೊಂದಿಗೆ ಬದಲಾಯಿಸಿಕೊಂಡು ಚಿಕ್ಕದಾದ ಗರ್ಭಗುಡಿ ತೆರೆದ ಸುಕನಾಸ, ಸಣ್ಣ ಪ್ರಮಾಣದಲ್ಲಿ ನವರಂಗ ಪೀಠದ ಮೇಲೆ ಗುಂಡಾಗಿರುವ ತಲಗಂಭಗಳು ಅವುಗಳ ತುದಿಯಲ್ಲಿ ಕಳಸಕೃತಿ, ನವರಂಗದ ಮಧ್ಯೆ ದೊಡ್ಡ

ಅಂಕಣ ಅದರ ಮೇಲೆ ಮಧ್ಯದಲ್ಲಿ ಅಷ್ಟದಿಕ್ಪಾಲಕರ ಮಧ್ಯಶಿವ, ನಟರಾಜ ಇಲ್ಲವೇ ಜಿನ ಮೂರ್ತಿಗಳು ಕೆಲವೊಂದು ದೇವಾಲಯಗಳಲ್ಲಿ ಅಗಲವಾದ ಹಾಗೂ ತೆಳುಕಲ್ಲಿನ ಚಪ್ಪಡಿಗಲನ್ನು ಗೋಡೆಗೆ ಹಾಗೂ ಛಾವಣಿಗೆ ಹಾಕಿರುವುದು ಕಂಡುಬರುತ್ತದೆ.

ಗಂಗರ ಕಾಲದ ಕೆಲವು ದೇವಾಲಯಗಳಲ್ಲಿ ಅಧಿಷ್ಠಾನ ರಹಿತವಾದ ದೇವಾಲಯಗಳು ಸಹ ಇವೆ. ಉದಾಹರಣೆಗೆ ಗುಂಡ್ಲುಪೇಟೆ ತಾಲ್ಲೂಕಿನ ಹಳ್ಳದಮಾದಹಳ್ಳಿ, ತೊಂಡವಾಡಿ, ಹಿರಿಕಾಟಿ, ಸಂಪಿಗೆಪುರ, ಚಿಕ್ಕಾಟಿ, ಬೆಂಗಳೂರು ಜಿಲ್ಲೆಯ ಬಾಣೆ ಹೊಸಹಳ್ಳಿ, ತೋಟಗೆರೆ, ಶಿವಗಂಗೆ, ಮುತ್ತನಲ್ಲೂರು ಕೋಲಾರ ಜಿಲ್ಲೆಯ ದೊಡ್ಡಶಿವಾರ್, ಮಡಿವಾಳ, ಹಾಸನ ಜಿಲ್ಲೆಯ ನೇರ್ಲಿಗೆ ಇನ್ನೂ ಮೊದಲಾದ ಕಡೆ ಗಂಗರ ಕಾಲದ ದೇವಾಲಯಗಳಿದ್ದು ಇದಕ್ಕೆ ಪೂರಕವಾಗಿ ವಾಸ್ತುಶಿಲ್ಪ ಶೈಲಿಯನ್ನು ಗುರುತಿಸಬಹುದಾಗಿದೆ. ಇವೆಲ್ಲವನ್ನು ಗಮನಿಸಿದರೆ, ಗಂಗರ ಕಾಲದಲ್ಲಿ ದ್ರಾವಿಡ ಶೈಲಿಯ ದೇವಾಲಯಗಳನ್ನು ನಿರ್ಮಿರುವುದು ಈ ಹಿನ್ನೆಲೆಯಿಂದ ಹಾಗೂ ಶಾಸನಗಳ ಆಧಾರದಿಂದ ಗಂಗರ ಕಾಲದ ದೇವಾಲಯಗಳನ್ನು ಗುರುತಿಸಬಹುದಾಗಿದೆ.[8]

ಚೋಳರ ಕಾಲದ ದೇವಾಲಯಗಳ ವಾಸ್ತುಶೈಲಿಯನ್ನು ಗಮನಿಸಿದರೆ, ದ್ರಾವಿಡ ಶೈಲಿಯನ್ನು ಮುಂದುವರೆಸಿದರು. ಚೋಳರ ಕಾಲದ ದೇವಾಲಯಗಳು ಮೂಲತಃ ದ್ರಾವಿಡ ಶೈಲಿಯಾದರೂ ಕೂಡ ಅಲ್ಪಸ್ವಲ್ಪ ಪ್ರಾಂತೀಯ ಪ್ರಭೇದಗಳಿಂದಾಗಿ ಇದನ್ನು ಪ್ರತ್ಯೇಕ ಹೆಸರಿನಿಂದ ಚೋಳರ ಶೈಲಿಯಂದೇ ಕರೆಯುವ ವಾಡಿಕೆ ಇದೆ.

ಚೋಳರ ಕಾಲದಲ್ಲಿ ಆದಂತಹ ವಾಸ್ತುಶಿಲ್ಪ ಆವಿಷ್ಕಾರ ಮತ್ತು ವಾಸ್ತು ಬದಲಾವಣೆಗಳಿಂದ ಗುರುತಿಸಬೇಕಾದರೆ ಮೊದಲಿಗೆ ನಾವು ಪಲ್ಲವರ ವಾಸ್ತು ಸಂಪ್ರದಾಯವನ್ನು ಗುರುತಿಸಬೇಕು. ಚೋಳರು ತಮ್ಮ ಪೂಜಾವಿಧಿಗಳಿಗೆ ಪೂರಕವಾಗಿ ಅನುಕೂಲಕರವಾದ ರೀತಿಯಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಗರ್ಭಗೃಹ, ಶುಕನಾಸಿ, ನವರಂಗ, ಮುಖಮಂಟಪ, ಪ್ರಾಂಗಣ, ಪ್ರಾಕಾರ, ಮಹಾದ್ವಾರ, ಹೀಗೆ ಅಭಿವೃದ್ಧಿಪಡಿಸಿದರು. ಏರುವಿನ್ಯಾಸದಲ್ಲಿ ಅಲಂಕೃತವಾದ ದಿಂಡುಗಳಿಂದ ಕೂಡಿರುವ ಅಧಿಷ್ಠಾನ ಭಿತ್ತಿಯಲ್ಲಿ ಅಲಂಕಾರಿಕ ಸ್ತಂಭಗಳು, ದೇವಕೋಷ್ಠಗಳು, ಕೋಷ್ಠ ಜಾಲೇಂದ್ರಗಳು, ಕಪೋತರ, ಹಾರ ಇವೆಲ್ಲವೂ ಕಂಡುಬರುತ್ತದೆ. ಚೋಳರ ಕಾಲದ ದೇವಾಲಯಗಳಲ್ಲಿ ಪಿರಮಿಡ್ಡಿನಾಕಾರದ ವಿಮಾನವೂ ಸಹ ಇರುತ್ತದೆ. ಆದರೆ ಚಾಮರಾಜನಗರ ಜಿಲ್ಲೆಯಲ್ಲಿರುವ ಚೋಳರ ಕಾಲದ ದೇವಾಲಯಗಳಲ್ಲಿ ಈ ರೀತಿ ಕಂಡುಬರುವುದಿಲ್ಲ. ಚೋಳರ ಕಾಲದ ದೇವಾಲಯಗಳಲ್ಲಿ ಕೋಷ್ಠಗಳು ನಿರೂಪಣೆ, ಚಾಚುಪೀಠಗಳ ಅಲಂಕರಣೆ, ಕೂಡುಗಳ ನಿರೂಪಣೆ, ಸ್ತಂಭಗಳ

ವಿನ್ಯಾಸ ಇವುಗಳು ವಿಶೇಷವಾಗಿರುತ್ತದೆ. [9] ಗುಂಡ್ಲುಪೇಟೆ ತಾಲೂಕಿನ ಹಸಗೂಳಿ ಗ್ರಾಮದಲ್ಲಿ ಕಂಡು ಬರುವ ಸಿದ್ಧರಾಮೇಶ್ವರ ದೇವಾಲಯ ಚೋಳರ ಕಾಲಕ್ಕೆ ಸೇರಿದೆ.

ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯಗಳು ಸಹ ಕಂಡುಬರುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ವಾಸ್ತುಶಿಲ್ಪ ಇತಿಹಾಸದಲ್ಲಿ ಒಂದು ಸ್ಮರಣಾರ್ಥ ಸುವರ್ಣಯುಗವೆಂದೇ ಹೇಳಬಹುದು. ಇವರ ಕಾಲಕ್ಕೆ ಪೂರಕವಾಗಿ ಕ್ರಿ.ಶ.9ನೇ ಶತಮಾನದಿಂದ 12ನೇ ಶತಮಾನದವರೆವಿಗೂ ದೇವಾಲಯಗಳು ಕಂಡುಬರುತ್ತದೆ. ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯ ಉತ್ತರ ಕರ್ನಾಟಕ, ಉತ್ತರ ಕನ್ನಡ, ಶಿವಮೊಗ್ಗ ಮಹಾರಾಷ್ಟ್ರ ದಕ್ಷಿಣ ಭಾಗ, ಆಂಧ್ರ ಪ್ರದೇಶದ ಪಶ್ಚಿಮ ಭಾಗಗಳಲ್ಲಿ ಇರುವುದು ತಿಳಿದುಬರುತ್ತದೆ. [10] ಇವರು ಬಾದಾಮಿ ಚಾಲುಕ್ಯರ ವಾಸ್ತುಶೈಲಿಯ ಜೊತೆಗೆ ತಮ್ಮದೇ ಆದ ನಾಗರ ಮತ್ತು ದ್ರಾವಿಡ ಶೈಲಿಯನ್ನು ನಿರ್ಮಿಸಿದರು. ಆದ ಕಾರಣ ಕಲ್ಯಾಣ ಚಾಲುಕ್ಯರ ಶೈಲಿ ಎಂದೇ ಕರೆಯುವ ವಾಡಿಕೆ ಇದೆ. ಇವರು ವಾಸ್ತು ಸಂಪ್ರದಾಯದಿಂದ ಬಾದಾಮಿ ಚಾಲುಕ್ಯ ಶೈಲಿಯಿಂದ ವಿಕಾಸಗೊಂಡಿದರೂ ಪ್ರಬುದ್ಧ ವ್ಯವಸ್ಥೆಗೆ ಬರುವ ಹೊತ್ತಿಗೆ ಕಲ್ಯಾಣಿ ಚಾಲುಕ್ಯ ಶೈಲಿಯಲ್ಲಿ ಅನೇಕ ಬದಲಾವಣೆಗೆ ಒಳಗಾಗಿ ಸ್ವಂತಿಕೆಯನ್ನು ಸ್ಥಾಪಿಸಿಕೊಂಡರು. ಇವರು ಕಲ್ಲುಗಳನ್ನು ಸುಲಭವಾಗಿ ಕೊರೆಯಲು ಹಾಗೂ ಉಜ್ಜಿ ನಯಗೊಳಿಸಲು ಹೊಳಪನ್ನು ಪಡೆಯಲು ಕರಿಕಲ್ಲು ಮತ್ತು ಸಾಬೂನುಗಳನ್ನು ಬಳಸಿದ್ದಾರೆ. ಕಲ್ಯಾಣ ಚಾಲುಕ್ಯರ ಕಾಲದಿಂದ ತಳವಿನ್ಯಾಸದಲ್ಲಿ ಚೌಕಾಕಾರ– ಆಯತಾಕಾರ ಹಾಗೂ ನಕ್ಷತ್ರಾಕಾರದ ಮಾದರಿಯನ್ನು ಅನುಸರಿಸಿದ್ದಾರೆ. ಧಾರವಾಡ ಜಿಲ್ಲೆಯ ಡಂಬಲದ ಬಸಪ್ಪ ದೇವಾಲಯ, ಕುಕ್ಕನೂರಿನ ಮಹಾಮಯಾ ಕಲ್ಲೇಶ್ವರ ಲಕ್ಕುಂಡಿಯ ಕಾಶಿವಿಶ್ವೇಶ್ವರ ಕೇದಾರೇಶ್ವರ, ಕಲ್ಲೇಶ್ವರ, ಗದಗದ ತ್ರಿಕೋಟೇಶ್ವರ, ತ್ರಿಪುರಾಂತಕೇಶ್ವರ, ಇಟಗಿ ಮಹಾದೇವ ದೇವಾಲಯ ಇನ್ನೂ ಮೊದಲಾದವು ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಲಿಗೆ ಉತ್ತಮ ಉದಾಹರಣೆಯಾಗಿದೆ. ಆದರೆ ಚಾಮರಾಜನಗರ ಜಿಲ್ಲೆಗೆ ಪೂರಕವಾಗಿ ಕೆಲವೊಂದು ಶಾಸನಗಳಿವೆ. ಆದರೆ ದೇವಾಲಯಗಳ ಬಗ್ಗೆ ತಿಳಿದುಬರುವುದಿಲ್ಲ. ಆದಕಾರಣ ಗುಂಡ್ಲುಪೇಟೆ ತಾಲ್ಲೂಕಿಗೆ ಇವರ ಕೊಡುಗೆ ಏನು ಎಂಬುದನ್ನು ಆಯಾ ಗ್ರಾಮದ ದೇವಾಲಯಗಳ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಹೊಯ್ಸಳರ ಕಾಲಕ್ಕೆ ಪೂರಕವಾಗಿ ದೇವಾಲಯಗಳ ಬೆಳವಣಿಗೆಯಲ್ಲಿ ತನ್ನದೇ ಆದ ವಿಶೇಷ ವಾಸ್ತು ಲಕ್ಷಣಗಳನ್ನು ಹೊಂದಿದೆ. ಹೊಯ್ಸಳರ ಕಾಲದ ದೇವಾಲಯಗಳು ಕ್ರಿ.ಶ.10ನೇ–11ನೇ ಶತಮಾನದಿಂದ ಕ್ರಿ.ಶ.13–14ನೇ ಶತಮಾನದವರೆವಿಗೂ ಕರ್ನಾಟಕ ತಮಿಳುನಾಡು ಪ್ರದೇಶಗಳಲ್ಲಿ ಕಂಡುಬರುತ್ತದೆ. ಹೊಯ್ಸಳರ ಕಾಲಕ್ಕೆ ವಾಸ್ತುಶೈಲಿಯು ವಿಶೇಷ ಲಕ್ಷಣಗಳನ್ನು

ಹೊಂದಿದೆ. ಹೊಯ್ಸಳರ ದೇವಾಲಯಗಳನ್ನು ಭೂಮಟ್ಟದಿಂದ ಸುಮಾರು 5 ಅಡಿಯಿಂದ 6 ಅಡಿ ಎತ್ತರದ ಜಗತಿಯ ಮೇಲೆ ಅಥವಾ ಜಗುಲಿಯ ಮೇಲೆ ಕಟ್ಟಲಾಗಿರುತ್ತದೆ.

ಹೊಯ್ಸಳರ ಕಾಲದ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ನಕ್ಷತ್ರಾಕಾರವಾಗಿ ತಲವಿನ್ಯಾಸ ಹೊಂದಿದೆ. ಹೊಯ್ಸಳರು ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದ ಕಾರಣ ಕಲ್ಯಾಣಿ ಚಾಲುಕ್ಯರ ವಾಸ್ತುಶೈಲಿಯನ್ನು ಅನುಸರಿಸಿರುತ್ತಾರೆ. ಹೊಯ್ಸಳರು ದೇವಾಲಯದ ನಿರ್ಮಾಣಕ್ಕೆ ಸ್ವಲ್ಪ ಹಸಿರು ಅಥವಾ ಕಪ್ಪು ನೀಲಿ ಛಾಯೆಯ ಬಳಪದ ಕಲ್ಲನ್ನು ಬಳಸಿದ್ದಾರೆ, ಇದು ಶಿಲ್ಪಗಳನ್ನು ಕೆತ್ತುವಾಗ ಮೃದುವಾಗಿ, ಸೂಕ್ಷ್ಮಕಲಾಕೃತಿಗಳನ್ನು ಕೆತ್ತಲು ಸಹಾಯವಾಗಿರುತ್ತದೆ. ಕೆತ್ತಿದ ನಂತರ ಬೆಳಕು ಮತ್ತು ಹವಾಮಾನಕ್ಕೆ ಗಟ್ಟಿಯಾಗಿರುವ ಲಕ್ಷಣಗಳನ್ನು ಹೊಂದಿರುತ್ತದೆ. ಹೊಯ್ಸಳರ ದೇವಾಲಯದ ಮುಂಭಾಗ ಗರ್ಭಗುಡಿಗೆ ಎದುರಾಗಿ ಇವರ ಲಾಂಛನವಾದ ಗರುಡ ಅಥವಾ ನಂದಿಪೀಠ ಧ್ವಜಸ್ತಂಭ ಬಲಿಪೀಠವನ್ನು ದೇವಾಲಯದ ಪ್ರಾಂಗಣದಲ್ಲಿ ನಿರ್ಮಿಸಲಾಗಿರುತ್ತದೆ. ತಲಾವಿನ್ಯಾಸದಲ್ಲಿ ಜಗತಿಯು ದೇವಾಲಯಕ್ಕಿಂತ ಹೆಚ್ಚು ವಿಸ್ತಾರವಾಗಿರುತ್ತದೆ. ಪ್ರದಕ್ಷಿಣಾಪಥವು ದೇವಾಲಯಗಳ ಹೊರಭಾಗದಲ್ಲಿ ಅಂದರೆ ಜಗಲಿಯ ಅಂಚಿನ ಮೇಲಿರುತ್ತದೆ. ಹೊಯ್ಸಳರ ದೇವಾಲಯಗಳಲ್ಲಿ ಗರ್ಭಗೃಹ, ಶುಕನಾಸ, ನವರಂಗ, ಮುಖಮಂಟಪ, ವಿಮಾನಗಳು ಮುಖ್ಯ ಭಾಗಗಳಾಗಿರುತ್ತವೆ. ಈ ಶೈಲಿಯ ಮತ್ತೊಂದು ವೈಶಿಷ್ಟ್ಯವೆಂದರೆ ರಾಟೆ ಅಥವಾ ಲೇಡ್ ಯಂತ್ರದಿಂದ ತಯಾರಿಸಿದ ನಯವಾದ ಮತ್ತು ಮೊನಚಾದ ಕಂಬಗಳು ಕೆಲವು ಕಂಬಗಳು ವೃತ್ತಾಕಾರವಾಗಿದ್ದರೆ ಕೆಲವು ಕಂಬಗಳು ಗಂಟೆಯ ಆಕಾರವನ್ನು ಹೊಂದಿರುತ್ತದೆ. ಹೊಯ್ಸಳರ ಕಾಲದ ಕಂಬಗಳು ವೈವಿಧ್ಯತೆಯನ್ನು ಹೊಂದಿದೆ. ದೇವಾಲಯಗಳಲ್ಲಿ ಬೆಳಕನ್ನು ಒದಗಿಸಲು ಕಲ್ಲಿನಲ್ಲಿ ಸುಂದರವಾಗಿ ಕೆತ್ತಿದ ಜಾಲಂಧ್ರಗಳು ಅಥವಾ ಕಿಟಕಿಗಳು ಇರುತ್ತವೆ.

ದೇವಾಲಯಗಳ ನಿರ್ಮಾಣದಲ್ಲಿ ಗಾರೆಯನ್ನು ಬಳಸಿರುವುದು ಮತ್ತೊಂದು ವೈಶಿಷ್ಟ್ಯ ಕೆತ್ತಿದ ಕಲ್ಲುಗಳನ್ನು ರಂಧ್ರಗಳ ಮೂಲಕ ಒಂದನ್ನು ಇನ್ನೊಂದರಲ್ಲಿ ಜೋಡಿಸಿದೆ. ಮಹಾದ್ವಾರ ಹಾಗೂ ಗರ್ಭಗೃಹದ ಎರಡು ಕಡೆಯಲ್ಲಿಯೂ ದ್ವಾರಪಾಲಕರನ್ನು ಕೆತ್ತಿ ನಿಲ್ಲಿಸಿದ್ದಾರೆ. ದ್ರಾವಿಡ ಶೈಲಿಯಲ್ಲಿರುವಂತೆ ಹೊಯ್ಸಳ ಶೈಲಿಯಲ್ಲಿ ಬೃಹದಾಕಾರದ ಎತ್ತರದ ಶಿಖರ ಮತ್ತು ಗೋಪುರಗಳು ಗರ್ಭಗೃಹದ ಮೇಲ್ಭಾಗದಲ್ಲಿ ಪಿರಮಿಡ್ಡಿನಾಕಾರವಾಗಿ, ಹಂತಹಂತವಾಗಿ ಮೇಲಕ್ಕೆ ಹೆಚ್ಚು ಎತ್ತರವಿಲ್ಲದ ಗೋಪುರವನ್ನು ನಿರ್ಮಿಸಿ ಗೋಪುರವನ್ನು ಅನೇಕ ರೀತಿಯ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಹೊಯ್ಸಳರು ಸಾಕಷ್ಟು ದೇವಾಲಯಗಳಲ್ಲಿ ಹುಲಿಯನ್ನು ಕೊಲ್ಲುತ್ತಿರುವ ಸಳನ ಚಿತ್ರ ಅಥವಾ ಪ್ರತಿಮೆ ಇದ್ದು ಬಹಳ ಸುಲಭವಾಗಿ ಇದು ಹೊಯ್ಸಳರ

ಕಾಲದಲ್ಲಿಯೇ ನಿರ್ಮಾಣವಾಗಿದೆ ಎಂಬುದು ತಿಳಿದುಬರುತ್ತದೆ. ದೇವಾಲಯದ ಸುತ್ತಲೂ ಜಗಲಿಯನ್ನು ನಿರ್ಮಿಸಿದ್ದು, ಇದು ದೇವಾಲಯದ ಪ್ರದಕ್ಷಿಣಾ ಪಥವಾಗಿದೆ. ಹೊಯ್ಸಳರು ಬೃಹತ್ತಾದ ದೇವಾಲಯಗಳಿಗೆ ಬದಲಾಗಿ ಚಿಕ್ಕದಾದ ಸುಂದರವಾದ ಸ್ಮಾರಕ ನಿರ್ಮಿಸಿರುವುದು ಮತ್ತೊಂದು ಲಕ್ಷಣ ಎಂದರೆ ತಪ್ಪಾಗಲಾರದು.

ಹೊಯ್ಸಳರ ಕಾಲದ ದೇವಾಲಯಗಳ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಹಾಗೂ ಲಲಾಟಬಿಂಬದ ಮೇಲ್ಭಾಗದಲ್ಲಿ ಮಕರ ತೋರಣದಿಂದ ಅಲಂಕೃತಗೊಂಡಿದೆ. ಹೊಯ್ಸಳರ ದೇವಾಲಯಗಳ ಹೊರಗೋಡೆಯನ್ನು ಮೂರು ಶಿಲಾಪಟ್ಟಿಕೆಗಳನ್ನಾಗಿ ವಿಭಜಿಸಲಾಗಿದೆ. ಎರಡನೆಯ ಸಾಲಿನಲ್ಲಿ ಆನೆಗಳನ್ನು ಕೆತ್ತಲಾಗಿದ್ದು, ಇದು ದೃಢತೆಯ ಪ್ರತೀಕವಾಗಿದೆ. ನಂತರ ಅಶ್ವಾರೋಹಿಗಳ ಸಾಲು, ಮೂರನೆಯ ಸಾಲಿನಲ್ಲಿ ಲತೆಗಳು, ಹೂಬಳ್ಳಿ ಸುರಳಿಗಳು, ಹಂಸಗಳನ್ನು ಕೆತ್ತಲಾಗಿದೆ. ರಾಮಾಯಣ, ಮಹಾಭಾರತಕ್ಕೆ ಸಂಬಂಧಿಸಿದ ಘಟನಾವಳಿಗಳನ್ನು ಕೆತ್ತಲಾಗಿದೆ. ಅನೇಕ ರೀತಿಯ ವಿವಿಧ ಹಾವಭಾವ ಭಂಗಿಗಳನ್ನು ಪ್ರದರ್ಶಿಸುವ ಮಧುನಿಕ ಶಿಲಾಬಾಲಿಕೆಯರ ಶಿಲ್ಪಗಳನ್ನು ಕೆತ್ತಲಾಗಿರುವುದು ಕಂಡುಬರುತ್ತದೆ. ಹೊಯ್ಸಳ ಕಾಲಕ್ಕೆ ಸೇರಿದ ಪ್ರಮುಖ ದೇವಾಲಯಗಳ ಹಾಸನ, ಚಿಕ್ಕಮಗಳೂರು, ಮೈಸೂರು, ಮಂಡ್ಯ, ತುಮಕೂರು, ಕೋಲಾರ ಇನ್ನೂ ಮೊದಲಾದ ಜಿಲ್ಲೆಗಳನ್ನು ಹಾಗೂ ತಮಿಳುನಾಡು, ಆಂಧ್ರಪ್ರದೇಶದ ಕೆಲವೊಂದು ಭಾಗಗಳಲ್ಲಿ ಹೊಯ್ಸಳರ ಕಾಲಕ್ಕೆ ಸೇರಿದ ದೇವಾಲಯಗಳು ಕಂಡುಬರುತ್ತವೆ. ಆದರೆ ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿಯೂ ಹೊಯ್ಸಳರ ಕಾಲಕ್ಕೆ ಸೇರಿದ ದೇವಾಲಯಗಳಿವೆ. ಆದರೆ ಈ ಭಾಗದಲ್ಲಿರುವ ವಾಸ್ತುಶೈಲಿಯೇ ವಿಶೇಷತೆಯನ್ನು ಹೊಂದಿದೆ. ಆದಕಾರಣ ಗುಂಡ್ಲುಪೇಟೆಯ ತಾಲ್ಲೂಕಿನಲ್ಲಿರುವ ಹೊಯ್ಸಳರ ಕಾಲಕ್ಕೆ ಸೇರಿದ ದೇವಾಲಯವನ್ನು ಶಾಸನಗಳ ಆಧಾರದಿಂದ ನಿರ್ಧರಿಸಿದ್ದು, ಅವುಗಳ ವಾಸ್ತುಶೈಲಿಯನ್ನು ನೀಡಲಾಗಿರುತ್ತದೆ.[11]

ವಿಜಯನಗರ ಅರಸರ ವಾಸ್ತುಶಿಲ್ಪ ಬೆಳವಣಿಗೆಯನ್ನು ಸಹ ಕಾಣಬಹುದಾಗಿದೆ. ಸೇವುಣರ ಪತನಾನಂತರ ಕರ್ನಾಟಕವು ವಿಜಯನಗರ ಅರಸರ ಅಧಿಪತ್ಯಕ್ಕೆ ಒಳಪಟ್ಟಿತು ದಕ್ಷಿಣ ಭಾರತದಲ್ಲಿಯೇ ವಿಜಯನಗರ ಅರಸರ ಕಾಲವನ್ನು ಸುವರ್ಣಯುಗ ಎಂದು ಕರೆಯುತ್ತಾರೆ. ಅರಸರ ಕಾಲಕ್ಕೆ ವಾಸ್ತುಶಿಲ್ಪ ಬೆಳವಣಿಗೆಯಲ್ಲಿ ಕಠಿಣ ಕಲ್ಲಿನಿಂದ ಮಾಡಿದ ದೇವಾಲಯಗಳನ್ನು ನಿರ್ಮಿಸಿದ್ದಾರೆ. ವಿಜಯನಗರ ಅರಸರ ಕಾಲ ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಕಾಲ. ಇವರು ಹೆಚ್ಚು ವಿಸ್ತಾರವಾದ ಗಾತ್ರದಲ್ಲಿ ದೊಡ್ಡದಾದ ದೇವಾಲಯಗಳನ್ನು ನಿರ್ಮಿಸಿದರು. ಕಟ್ಟಡದ ಗಾತ್ರ, ವಿಸ್ತೀರ್ಣ, ದೃಢತೆ, ಶಕ್ತಿ ಇವುಗಳಿಂದ ಕೂಡಿದ ದ್ರಾವಿಡ ಶೈಲಿಯ

ದೇವಾಲಯಗಳನ್ನು ನಿರ್ಮಿಸಿದರು. ಹೆಚ್ಚಾಗಿ ಸುಣ್ಣದ ಗಾರೆಯ ಗಚ್ಚು ಶಿಲ್ಪಗಳು ಬಳಕೆಗೆ ಬಂದವು. ದೇವಾಲಯದ ತಾರಸಿಯ ಮೇಲಿನ ಹಾರ ಇಟ್ಟಿಗೆ ಗಾರೆಗಳಿಂದ ನಿರ್ಮಾಣಗೊಂಡು ಅದರಲ್ಲಿ ಶಿಲ್ಪಕಲಾ ಮಾದರಿಯಲ್ಲಿ ಗಾರೆಗಚ್ಚಿನಲ್ಲಿ ನಿರ್ಮಿತಗೊಂಡವು. ದೇವಾಲಯದ ಪ್ರಾಕಾರದ ಮಹಾದ್ವಾರದ ಮೇಲಿನ ಗೋಪುರಗಳು ಸಹ ಬೆಳವಣಿಗೆಯಾದವು.

ವಿಜಯನಗರ ಅರಸರ ಕಾಲದಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳೆರಡು ಬಹಳ ಶಕ್ತಿಯುತವಾಗಿತ್ತು. ಆದಕಾರಣ ಈ ಧರ್ಮಗಳಿಗೆ ಪೂರಕವಾಗಿ ಹೆಚ್ಚು ಹೆಚ್ಚು ದೇವಾಲಯಗಳು ನಿರ್ಮಾಣಗೊಂಡವು. ಕರ್ನಾಟಕದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವಿಜಯನಗರ ಅರಸರ ಕಾಲಕ್ಕೆ ಸಬಂಧಪಟ್ಟಂತೆ ದೇವಾಲಯಗಳಿವೆ. ಅವು ಗುಂಡ್ಲುಪೇಟೆಯ ತಾಲ್ಲೂಕಿನಲ್ಲಿಯೂ ಸಹ ಇವೆ. ಈ ದೇವಾಲಯಗಳನ್ನು ನೋಡಿದರೆ ಶುದ್ಧ ದ್ರಾವಿಡ ಶೈಲಿಯ ದೇವಾಲಯಗಳಾಗಿವೆ.

ವಿಜಯನಗರ ಅರಸರ ಕಾಲದ ಶಿಲ್ಪಗಳ ಒಂದು ವಿಶೇಷತೆ ಏನೆಂದರೆ ಶಿಲ್ಪಗಳು ಸಮಕಾಲೀನ ಸಮಾಜದ ಸ್ಥಿತಿಗತಿಗಳನ್ನು, ನಂಬಿಕೆಗಳನ್ನು, ಆಚರಣೆಗಳನ್ನು, ಹಬ್ಬ ಹರಿದಿನಗಳನ್ನು, ಮನರಂಜನೆಗಳನ್ನು ಹಾಗೂ ರಾಜನ ಆಸ್ಥಾನ, ಸಂಗೀತಗಾರರು, ವಾದ್ಯಗಳು, ನರ್ತನಕಾರರು, ಬೇಟೆಗಾರರು, ಯಕ್ಷಿಣಿಗಾರರು, ದೊಂಬರಾಟ, ಕೋಲಾಟ, ರಂಗಿನಾಟ, ವ್ಯಾಪಾರ, ವ್ಯವಹಾರ, ವಾಣಿಜ್ಯ ಮೊದಲಾದವುಗಳನ್ನು ಉಬ್ಬುಶಿಲ್ಪದ ರೂಪಗಳಲ್ಲಿ ದೇವಾಲಯಗಳ ಭಿತ್ತಿಯ ಮೇಲೆ, ಪ್ರಾಕಾರದ ಗೋಡೆಯ ಮೇಲೆ ಕಂಬಗಳ ಮೇಲೆ ಕೆತ್ತಲಾಗಿರುವುದು ತಿಳಿದುಬರುತ್ತದೆ.

ವಿಜಯನಗರ ಅರಸರ ಕಾಲಕ್ಕೆ ಗಾರೆಗಚ್ಚು ಶಿಲ್ಪಗಳು, ದೇವತಾಮೂರ್ತಿ ಶಿಲ್ಪಗಳು ವಿವಿಧ ಬಗೆಯ ಉಬ್ಬುಶಿಲ್ಪಗಳು, ಬೃಹತ್ತಾದ ನಂದಿಶಿಲ್ಪಗಳು, ಆಂಜನೇಯ ಶಿಲ್ಪಗಳು ಕಂಬುಶಿಲ್ಪಗಳು ಇವೆಲ್ಲವೂ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬಂದಿದೆ. ಈ ಹಿನ್ನೆಲೆಯಿಂದ ಈ ಸಂಶೋಧನಾ ವ್ಯಾಪ್ತಿಗೆ ಬರುವ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ವಿಜಯನಗರ ಕಾಲದ ದೇವಾಲಯಗಳನ್ನು ಕುರಿತು ಅಧ್ಯಯನವನ್ನು ನಡೆಸಲಾಗಿರುತ್ತದೆ. [12]

ಮೈಸೂರು ಒಡೆಯರ ಕಾಲಕ್ಕೆ ದ್ರಾವಿಡ ವಾಸ್ತುಶಿಲ್ಪ ಬೆಳವಣಿಗೆ ಸಂಪ್ರದಾಯ ಉತ್ತುಂಗಕ್ಕೆ ಏರಿತ್ತೆಂದು ತಿಳಿದುಬರುತ್ತದೆ. ಮೈಸೂರು ಒಡೆಯರ ಕಾಲದ ವಾಸ್ತುರಚನೆಯ ನಿರ್ಮಾಣಗೊಂಡ ದೇವಾಲಯಗಳು ಮೈಸೂರು, ಶ್ರೀರಂಗಪಟ್ಟಣ, ಮೇಲುಕೋಟೆ, ಬೆಂಗಳೂರು, ಚಾಮರಾಜನಗರ, ಕೋಲಾರ, ಹಾಸನ, ಚಿಕ್ಕಮಗಳೂರು, ತುಮಕೂರು, ಮಂಡ್ಯ, ಚಿತ್ರದುರ್ಗ ಜಿಲ್ಲೆ ಇನ್ನೂ ಮೊದಲಾದ ಜಿಲ್ಲೆಗಳಲ್ಲಿ ಮೈಸೂರು ಒಡೆಯರ ಕಾಲಕ್ಕೆ

ಸೇರಿದ ದೇವಾಲಯಗಳು ಕಂಡುಬರುತ್ತದೆ. ಇವರು ವಿಜಯನಗರ ಅರಸರ ಶೈಲಿಯನ್ನು ಮುಂದುವರೆಸಿದರು. ಇವರು ಚಿಕ್ಕ ದೇವಾಲಯಗಳಿಂದ ಹಿಡಿದು ದೊಡ್ಡ ದೊಡ್ಡ ದ್ರಾವಿಡ ಶೈಲಿಯ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಮೈಸೂರು ಒಡೆಯರ ಕಾಲಕ್ಕೆ ದೇವಾಲಯಗಳಲ್ಲಿ ದ್ವಾರಮಂಟಪ, ದ್ವಾರಗೋಪುರ, ಪಡಸಾಲೆಗಳು, ರಂಗಮಂಟಪಗಳು ಮತ್ತು ಕಲ್ಯಾಣಿಗಳು ನಿರ್ಮಾಣಗೊಂಡಿದೆ. ವಿಜಯನಗರದ ಅರಸರ ಕಾಲದಲ್ಲಿ ಇರುವಂತಹ ಕಂಬಗಳ ಮಾದರಿಯನ್ನು ಸೇರಿಸಿರುತ್ತಾರೆ. ದ್ವಾರಬಂಧದಲ್ಲಿ ವಿಶೇಷತೆ ಕಾಣುವುದಿಲ್ಲ. ದ್ವಾರದ ನಿಲುವು ಕಂಬದ ಪಟ್ಟಿಯಲ್ಲಿ ಸಾಮಾನ್ಯವಾದ ಅರಳಿದ ಕಮಲದ ಪುಷ್ಪದ ಕೆತ್ತನೆ ಇರುತ್ತದೆ. ಮಣಿಸರಗಳ ಮಾಲೆ, ಕೆಲವು ಕಡೆ ಲಲಾಟ ಬಿಂಬವೂ ಸಹ ಸರಳವಾಗಿ ಖಾಲಿ ಇರುತ್ತದೆ. ಕೆಲವು ಕಡೆ ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು ಮತ್ತೊಂದು ಕಡೆ ಗಣೇಶನ ಉಬ್ಬುಶಿಲ್ಪವನ್ನು ಕೆತ್ತುವ ವಾಡಿಕೆಯೂ ಇದೆ. ಮೈಸೂರು ಒಡೆಯರ್ ವೈವಿಧ್ಯಮಯ ವಿನ್ಯಾಸಗಳಲ್ಲಿ ಶಿಲ್ಪಕಲೆಯನ್ನು ಚಿನ್ನ, ಬೆಳ್ಳಿ, ತಾಮ್ರ, ಮರ, ಗೋಡೆ ಮೊದಲಾದ ವಿನ್ಯಾಸಗಳ ಶಿಲ್ಪಕಲೆಯನ್ನು ಮಾಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯನ್ನು ಗಮನಿಸಿ ಗುಂಡ್ಲುಪೇಟೆಯ ತಾಲ್ಲೂಕಿನಲ್ಲಿಯೂ ಸಹ ಮೈಸೂರು ಒಡೆಯರ ಕಾಲಕ್ಕೆ ಸೇರಿದ ದೇವಾಲಯಗಳನ್ನು ಕುರಿತು ಅಧ್ಯಯನವನ್ನು ನಡೆಸಲಾಗಿರುತ್ತದೆ.

ಕರ್ನಾಟಕದಲ್ಲಿ ದೇವಾಲಯಗಳ ಉಗಮದ ಬಗ್ಗೆ ನೋಡುವುದಾದರೆ ಕ್ರಿ.ಶ.1–2ನೇ ಶತಮಾನದಲ್ಲಿಯೇ ನಿರ್ದಿಷ್ಟ ಸಂಪ್ರದಾಯದ ಬಗ್ಗೆ ತಿಳಿದುಬರುತ್ತದೆ. ಕ್ರಿ.ಶ.4ನೇ ಶತಮಾನದ ವೇಳೆಗೆ ಕರ್ನಾಟಕದಲ್ಲಿ ಕದಂಬರು ದೇವಾಲಯಗಳನ್ನು ನಿರ್ಮಿಸಿರುವುದಕ್ಕೆ ಶಾಸನಾಧಾರಗಳಿವೆ. ಆದರೆ ಸುಸ್ಥಿತಿಯಲ್ಲಿ ಕದಂಬರದೆಂದು ಗುರುತಿಸಬಹುದಾದ ದೇವಾಲಯಗಳು ನಮಗೆ ಕಂಡುಬರುವುದಿಲ್ಲ. ತಾಳಗುಂದದ ಪ್ರಣವೇಶ್ವರ ಬನವಾಸಿಯ ಮಧುಕೇಶ್ವರ, ಗುಡ್ನಾಪುರದ ಕಾಮಜಿನಾಲಯದ ಅವಶೇಷಗಳು ಮಾತ್ರ ಕದಂಬರ ಕಾಲಕ್ಕೆ ಉದಾಹರಣೆಯಾಗಿದೆ.

ಕರ್ನಾಟಕದಲ್ಲಿ ಕಲ್ಲಿನ ದೇವಾಲಯಗಳನ್ನು ನಿರ್ಮಿಸಿದ ಮೊದಲಿಗರು ಎಂದರೆ ಬಾದಾಮಿ ಚಾಲುಕ್ಯರು, ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಒಂದೊಂದು ದೇವಾಲಯವು ಸಹ ತನ್ನದೇ ಆದ ವೈಶಿಷ್ಠ್ಯತೆಯನ್ನು ಹೊಂದಿದೆ. ಕ್ರಿ.ಶ.5ನೇ ಶತಮಾನ ಕಾಲಕ್ಕೆ ಸೇರಿದ ಬಸದಿಯೊಂದರ ತಳಪಾಯವು ಉತ್ಖನನದಲ್ಲಿ ಬೆಳಕಿಗೆ ಬಂದಿದ್ದು, ಸಾಲಾಗಿ ಮೂರು ಗರ್ಭಗೃಹವನ್ನು ಹೊಂದಿರುವ ತ್ರಿಕೂಟ ದೇವಾಲಯವಾಗಿದೆ. ಇದಲ್ಲದೆ ಪ್ರಾರಂಭಿಕ ಹಂತದಲ್ಲಿ ಕಲ್ಲು, ಇಟ್ಟಿಗೆ, ಗಾರೆ ಮತ್ತು ಮರಗಳನ್ನು ಬಳಸಿ ಮಿಶ್ರ ಮಾಧ್ಯಮದಲ್ಲಿ

ದೇವಾಲಯಗಳನ್ನು ನಿರ್ಮಿಸಿದ್ದಾರೆ. ರಾಷ್ಟ್ರಕೂಟರ ಸಮಕಾಲೀನರಾಗಿದ್ದ ಗಂಗ ಮತ್ತು ನೊಳಂಬ ವಾಂಶೀಯರು ಸಾಮಂತ ಅರಸರೇ ಆಗಿದ್ದರೂ ಕೂಡ ತಮ್ಮದೇ ಆದ ವಾಸ್ತುಶೈಲಿಯ ದೇವಾಲಯಗಳನ್ನು ನಿರ್ಮಿಸಿದ್ದಾರೆ ಎಂಬುದು ತಿಳಿದುಬರುತ್ತದೆ. ನಂತರ ಕಾಲದಲ್ಲಿ ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರ್ ಇವರುಗಳು ದೇವಾಲಯಗಳನ್ನು ನಿರ್ಮಿಸಿರುವುದನ್ನು ಈಗಾಗಲೇ ಚರ್ಚಿಸಲಾಗಿದೆ. ಆದರೆ ಸಂಶೋಧನ ವ್ಯಾಪ್ತಿಗೆ ಪೂರಕವಾಗಿ ಗುಂಡ್ಲುಪೇಟೆ ತಾಲ್ಲೂಕಿನ ಆಯಾ ಊರಿನಲ್ಲಿ ಕಂಡುಬರುವ ಆಯಾ ರಾಜವಂಶಸ್ಥರು ಯಾವ ರೀತಿಯಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ ಎಂಬುದನ್ನು ಸಹ ಆಯಾ ದೇವಾಲಯಗಳ ವಾಸ್ತು ಹಿನ್ನೆಲೆಯನ್ನು ಆಧರಿಸಿ ಅಧ್ಯಯನವನ್ನು ನಡೆಸಲಾಗಿರುತ್ತದೆ.[13]

ದಕ್ಷಿಣ ಭಾರತದಲ್ಲಿ ಸಾಮ್ರಾಟರಾಗಿ ಆಡಳಿತ ನಡೆಸಿದ ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ಪಲ್ಲವರು, ರಾಷ್ಟ್ರಕೂಟರು, ಗಂಗರು, ಕಲ್ಯಾಣದ ಚಾಲುಕ್ಯರು, ನೊಳಂಬ, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರ್ ಇವರುಗಳ ದೇವಾಲಯಗಳು ವಾಸ್ತು ಪರಂಪರೆಯಿಂದ ಉಚ್ಛ್ರಾಯಸ್ಥಿತಿಯಲ್ಲಿ ಬೆಳೆದವು. ದೇವಾಲಯದ ಸ್ವರೂಪವನ್ನು ತಳವಿನ್ಯಾಸ ಮತ್ತು ಏರುವಿನ್ಯಾಸಗಳ ಪ್ರತ್ಯೇಕ ಅಧ್ಯಯನದಿಂದ ಅಭ್ಯಾಸ ಮಾಡಲು ಸಾಧ್ಯವಾಗಿದೆ. ಗರ್ಭಗೃಹ, ಸುಕನಾಸ ಅಥವಾ ಅಂತರಾಳ, ಅರ್ಧಮಂಟಪ, ನವರಂಗ, ಮುಖಮಂಟಪ, ದ್ವಾರಮಂಟಪ, ಅಮ್ಮನವರ ಗುಡಿ, ವಾಹನ ಮಂಟಪ, ಧ್ವಜಸ್ತಂಭ, ಬಲಿಪೀಠ, ಮಂಟಪಗಳು, ಮಹಾಮಂಟಪ, ಪಾತಾಳಾಂಕಣ, ರಂಗಮಂಟಪ, ಕಲ್ಯಾಣ ಮಂಟಪ, ವಸಂತ ಮಂಟಪ, ಡೋಲೋತ್ಸವ ಮಂಟಪ ಸ್ನಪನ ಮಂಟಪ, ಈ ರೀತಿ ನಾವು ದೇವಾಲಯಗಳಲ್ಲಿ ಕಾಣುತ್ತೇವೆ. ದೇವಾಲಯಗಳ ಏರುವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತಾರ, ಗ್ರೀವ, ಶಿಖರ, ಸ್ತೂಪಿ ಈ ರೀತಿ ಇರುತ್ತವೆ. ದೇವಾಲಯಗಳಲ್ಲಿ ಪ್ರಮುಖ ಅಂಗಗಳಲ್ಲಿ ಸ್ತಂಭಗಳು (ಕಂಬಗಳು) ಮುಖ್ಯವಾಗಿದೆ. ಅಧಿಷ್ಠಾನವು ದೇವಾಲಯದ ಭಾರವನ್ನು ಹೊರತ್ತದೆಯೋ ಹಾಗೆಯೇ ಸ್ತಂಭಗಳು ನವರಂಗದ ಮತ್ತು ಇತರೆ ಮಂಟಪಗಳ ಮೇಲ್ಛಾವಣಿಯನ್ನು ಹೊರುತ್ತವೆ. ಕಂಬಗಳು, ಕಂಬಗಳನ್ನು 4 ರೀತಿಯಲ್ಲಿ ಗುರುತಿಸಲಾಗಿದೆ. 1) ಬ್ರಹ್ಮಕಾಂಡ ಕಂಬ 2) ವಿಷ್ಣುಕಾಂತ ಕಂಬ 3) ರುದ್ರಕಾಂತ ಕಂಬ 4) ಸೌಮ್ಯಕಾಂತ ಕಂಬ ಅಂದರೆ ದಿಂಡಿನ ಆಕಾರವು ಚತುರಸ್ರವಾಗಿದ್ದರೆ ಬ್ರಹ್ಮ ಕಾಂತ ಎಂದು, ಅಷ್ಟಾಶ್ರವಾಗಿದ್ದರೆ ವಿಷ್ಣುಕಾಂತ ಎಂದೂ, ವೃತ್ತಾಕಾರವಾಗಿದ್ದರೆ ರುದ್ರಕಾಂತ ಮತ್ತು ಹದಿನಾರು ಮುಖವುಳ್ಳದ್ದಾಗಿದ್ದರೆ ಸೌಮ್ಯಕಾಂತ ಕಂಬವೆಂತಲೂ ಕರೆಯುತ್ತಾರೆ. ಈ ಮಾದರಿಯಲ್ಲಿ ದಿಂಡಿನ ಆಕಾರವೆ ಅಲ್ಲದೆ ಅಲಂಕರಣವನ್ನು ಆಧರಿಸಿ ಹಲವು ಪ್ರಕಾರಗಳಾಗಿ

ಕಂಬಗಳನ್ನು ವಿಭಜಿಸಲಾಗಿದೆ. ಈ ಮಾದರಿಯ ಕಂಬಗಳನ್ನು ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳಲ್ಲಿ ಗುರುತಿಸಲಾಗಿದೆ.

**ಸಾಂಸ್ಕೃತಿಕ ಇತಿಹಾಸ**

ಗುಂಡ್ಲುಪೇಟೆ ತಾಲ್ಲೂಕಿನ ಇತಿಹಾಸದೊಂದಿಗೆ ಅಲ್ಲಿನ ಸಂಸ್ಕೃತಿಯು ಕೂಡ ಅತ್ಯಂತ ಮಹತ್ವದ್ದಾಗಿದೆ. ದೇವಾಲಯಗಳು ಎಂಬುದು ಈ ನಾಡಿನ ಸಾಂಸ್ಕೃತಿಕ ಕೇಂದ್ರಗಳು. ಯಾವುದೇ ಕ್ಷೇತ್ರವನ್ನು ತೆಗೆದುಕೊಂಡರು ಕೂಡ, ಒಂದು ಸಂಸ್ಕೃತಿಯ ಚರಿತ್ರೆಯಲ್ಲಿ ದೇವಾಲಯಗಳ ಪಾತ್ರ ಅತ್ಯಂತ ಪ್ರಮುಖವಾದ ಸ್ಥಾನಮಾನವನ್ನು ಹೊಂದಿದೆ. ಪ್ರಾಚೀನ ಕಾಲದಿಂದಲೂ ಬದುಕಿದ ಮಾನವರು ತಮ್ಮ ಕೆಲವು ಆಯಾಮಗಳಲ್ಲಿ ದೈವ ನಂಬಿಕೆಯನ್ನು ನಂಬಿದ್ದರು. ಅಲ್ಲದೆ ಒಂದು ಅವಿಭಾಜ್ಯ ಅಂಗವೆಂದು ಪರಿಗಣಿಸಿದ್ದರು. ದೇವರು ಇರುವ ಧಾರ್ಮಿಕ ಕಟ್ಟಡವನ್ನು ದೇವಸ್ಥಾನವೆಂದು ಆಯಾ ಸಮುದಾಯಗಳು ಕರೆದುಕೊಂಡು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ಭಾರತ ದೇಶದಂತಹ ವೈವಿಧ್ಯಮಯ ಸಮುದಾಯಗಳಿರುವ ಭೌಗೋಳಿಕ ಪರಿಸರದಲ್ಲಿ ಹಲವಾರು ರೀತಿಯ ಧರ್ಮಗಳಿವೆ. ಅಂತೆಯೇ ಆಯಾ ಧರ್ಮಗಳಿಗೆ ಪೂರಕವಾಗಿ ದೇವಸ್ಥಾನಗಳಿವೆ. ಇದರಿಂದ ದೇವಸ್ಥಾನಗಳಿಗೆ ಅತ್ಯಂತ ಮಹತ್ವದ ಸ್ಥಾನಮಾನವಿದೆ. ಪ್ರಾಚೀನ ಕಾಲದಲ್ಲಿ ದೇವಸ್ಥಾನಗಳು ಕೇವಲ ಧಾರ್ಮಿಕ ಕೇಂದ್ರವಾಗಿರಲಿಲ್ಲ. ಬದಲಾಗಿ ಅವು ಸಾಮಾಜಿಕ ಜೀವನದ ಭಾಗಗಳಾಗಿ ಕೆಲಸ ಕಾರ್ಯನಿರ್ವಹಿಸಿರುವುದನ್ನು ಅನೇಕ ಆಧಾರಗಳಿಂದ ತಿಳಿದುಬರುತ್ತದೆ.

ಮೊದಲಿಗೆ ದೇವಸ್ಥಾನಗಳು ಸಾಮಾಜಿಕ ಸಂಸ್ಥೆಗಳಾಗಿ ಜನಸಾಮಾನ್ಯರಿಗೆ ಶಿಕ್ಷಣವನ್ನು ನೀಡುವಲ್ಲಿ ಮಹತ್ತರವಾದ ಪಾತ್ರ ವಹಿಸಿದ್ದವು. ಈ ಮೂಲಕ ಜನತೆಯನ್ನು ಒಂದು ಕಡೆ ಸೇರಿಸಿ ಧರ್ಮ ಪ್ರಸಾರ ಮಾಡುತ್ತಿದ್ದುದನ್ನು ತಿಳಿಯಬಹುದಾಗಿದೆ. ದೇವಸ್ಥಾನಗಳಲ್ಲಿ ಕಲೆಯನ್ನು ಉನ್ನತ ಮಟ್ಟಕ್ಕೆ ಬೆಳೆಸಿರುವುದನ್ನು ಅನೇಕ ಶಾಸನಗಳು ಗ್ರಂಥಗಳು ಮಾಹಿತಿಗಳನ್ನು ಒದಗಿಸುತ್ತವೆ.

ದೇವಸ್ಥಾನಗಳು ಸಂಗೀತ, ನೃತ್ಯ, ಯುದ್ಧ ಸನ್ನಿವೇಶ, ರಾಮಾಯಣ, ಮಹಾಭಾರತ ಸನ್ನಿವೇಶಗಳನ್ನು ದೇವಾನುದೇವತೆಗಳ ಶಿಲ್ಪಗಳು, ಪ್ರಾಣಿ ಪಕ್ಷಿಗಳು, ಲತೆ, ಬಳ್ಳಿ, ಸುರುಳಿ ಕೆತ್ತನೆಗಳು ಇನ್ನೂ ಮೊದಲಾದ ಕಲೆಗಳು ಜನ್ಮ ತಾಳಿವೆ. ಅದೇ ರೀತಿ ದೇವಸ್ಥಾನಗಳು ವಾಸ್ತುಶಾಸ್ತ್ರ, ಮೂರ್ತಿಶಿಲ್ಪಗಳ ಬೆಳವಣಿಗೆಗೆ ಪ್ರಮುಖ ಕೇಂದ್ರಗಳಾಗಿ ಕಾರ್ಯನಿರ್ವಹಿಸಿರುವುದನ್ನು ಕಾಣಬಹುದಾಗಿದೆ.

ಪ್ರಾಚೀನ ಸಂಸ್ಕೃತಿಯನ್ನು, ತಿಳಿಸುವ ದೇವಸ್ಥಾನಗಳು ಪುರಾತನ ಚರಿತ್ರೆಯ ಮೂಲ ಮಾತೃಕೆಗಳಾಗಿವೆ. ಈ ಪಳೆಯುಳಿಕೆಗಳಿಂದ ನಮ್ಮ ಪ್ರಾಚೀನ ಸಂಸ್ಕೃತಿಯು ವೈವಿಧ್ಯತೆಯ ಆಯಾಮಗಳನ್ನು ತಿಳಿಯಲು ಸಾಧ್ಯವಾಗಿದೆ. ಮಾನವರು ಈ ಪ್ರಕೃತಿಯಲ್ಲಿ ಕಂಡುಬಂದ ಹಲವಾರು ವಿಸ್ಮಯಗಳಿಗೆ ಭಯಪಟ್ಟರು. ಭಯದಿಂದಲೇ ಆತಂಕವನ್ನು ಎದುರಿಸಬೇಕಾಯಿತು. ಅವರ ಕಲ್ಪನೆಗೆ ಭಯ ಮತ್ತು ಭಕ್ತಿಗಳ ನೆಲೆಯು ಪ್ರಾರಂಭವಾಯಿತು. ಈ ಭಯ ಮತ್ತು ಭಕ್ತಿಯ ನೆಲೆಯಲ್ಲಿ ರೂಪುಗೊಂಡು ದೇವರು ಹಾಗೂ ಅದಕ್ಕೆ ಬೇಕಾದ ಒಂದು ನೆಲೆಯನ್ನು ಪಡೆದುಕೊಂಡರು. ಈ ನೆಲೆಗಳೇ ಇಂದು ದೇವಸ್ಥಾನಗಳೆನಿಸಿಕೊಂಡಿದೆ. ಹೀಗೆ ಹುಟ್ಟಿ ಬೆಳೆದ ದೇವಸ್ಥಾನಗಳು ಕಾಲಕ್ರಮೇಣ ಬಗೆಬಗೆಯ ವಿನ್ಯಾಸಗಳಿಂದ ವೈವಿಧ್ಯಮಯವಾದ ಆಕಾರ ಪಡೆದುಕೊಂಡು ನಮ್ಮ ಸಂಸ್ಕೃತಿಯ ವಿಕಾಸವೆಂದು ಕರೆಯಲಾಗುತ್ತಿದೆ. ಇಂತಹ ಸಾಂಸ್ಕೃತಿಕ ವಿಚಾರಗಳಿಗೆ ವಿಶ್ಲೇಷಣೆಗೆ ತೊಡಗಿದಾಗ ದೇವಸ್ಥಾನಗಳು ಮೂಲ ಆಕಾರಗಳಾಗಿ ಅಂದಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಚಾರಗಳನ್ನು ನೀಡುವುದರಲ್ಲಿ ಬಹು ಮಹತ್ವದ ಪಾತ್ರವನ್ನು ವಹಿಸಿವೆ ಎನ್ನಬಹುದು.

ಧರ್ಮ ಮತ್ತು ದೇವಸ್ಥಾನಗಳ ಸಂಬಂಧವು ಅವಿನಾಭಾವವಾದುದು. ಇವೆರಡರ ಸಂಬಂಧ ಬೆಳೆದಂತೆ ದೇವಸ್ಥಾನಗಳು ಬೆಳೆದಿವೆ ಎಂಬುದನ್ನು ಗಮನಿಸಬಹುದಾಗಿದೆ. ಭಾರತ ದೇಶದ ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಪರಿಸರದಲ್ಲಿ ಧರ್ಮ ಮತ್ತು ದೇವಾಲಯಗಳ ಬೆಳವಣಿಗೆಯ ಇತಿಹಾಸವನ್ನು ಗಮನಿಸಿದರೆ ಈ ಮೇಲಿನ ಅಂಶ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬೆಳೆದ ಶೈವ, ವೈಷ್ಣವ, ಜೈನ, ವೀರಶೈವ, ಇತರ ಪಂಥಗಳ ಜೊತೆಗೆ ಇನ್ನಿತರ ಧರ್ಮಗಳಿಗೆ ಭದ್ರವಾದ ನೆಲೆಗಳು ಎಂಬಂತೆ ದೇವಸ್ಥಾನಗಳು ನಿರ್ಮಾಣಗೊಂಡಿದೆ. ಆಯಾ ದೇವಸ್ಥಾನಗಳು ತಮ್ಮದೇ ಆದಂತಹ ಧರ್ಮದ ದೇವರು ಹಾಗೂ ಸಮುದಾಯ (ಜನಾಂಗ) ಇರುವುದು ಇತಿಹಾಸ ಕಾಲದಿಂದಲೂ ಕಂಡುಬರುತ್ತದೆ. ಈ ಹಿನ್ನೆಲೆಯಿಂದ ದೇವಸ್ಥಾನಗಳ ಚಾರಿತ್ರಿಕ, ಸಾಂಸ್ಕೃತಿಕ ವಿಚಾರಗಳನ್ನು ಅಧ್ಯಯನ ಮಾಡುವಲ್ಲಿ ಒಂದು ನಾಡಿನ ಸಂಸ್ಕೃತಿಯನ್ನು ತಿಳಿಯಬಹುದಾಗಿದೆ.

ದೇವಸ್ಥಾನಗಳು ಪ್ರಾಚೀನ ಕಾಲದಿಂದಲೂ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಅಂದಿನ ಸಮಾಜದ ಸಾಂಸ್ಕೃತಿಕ ಪರಿಸರದ ಪ್ರತಿನಿಧಿಯಾಗಿ ದೇವಸ್ಥಾನಗಳು ಗೋಚರಿಸುತ್ತವೆ. ಕಾರಣ ಆಯಾ ಕಾಲದ ಜನಜೀವನದ ಧಾರ್ಮಿಕತೆ ಗೋಚರಿಸುತ್ತಿರುವ ದೇವಸ್ಥಾನಗಳು ಅಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ

ಇತಿಹಾಸವನ್ನು ಹೊರಚೆಲ್ಲುತ್ತದೆ. ಹೀಗಾಗಿ ಗತಕಾಲದ ಚರಿತ್ರೆಯನ್ನು ತಿಳಿಯುವಲ್ಲಿ ಮೂಲ ಆಕರವಾಗಿರುವ ಈ ಭಾಗದ ದೇವಾಲಯಗಳು ಪ್ರಮುಖ ವಸ್ತು ವಿಷಯವಾಗಿದೆ.

ಜೊತೆ ಜೊತೆಯಲ್ಲಿ ವಾಸ್ತುಶೈಲಿ, ದೇವಸ್ಥಾನಗಳ ರಾಜರುಗಳ ಆಳ್ವಿಕೆ, ಆಯಾಧರ್ಮಗಳು ಸಾಮಾಜಿಕ ಸ್ಥಿತಿಗತಿಗಳು, ಉಗ್ರಾಣ ವೆಚ್ಚ, ಸಾಂಸ್ಕೃತಿಕ ಸ್ಥಿತಿಗಳು, ಪಕ್ಷ, ಮಾಸೋತ್ಸವ, ಸಂವತ್ಸರೋತ್ಸವ, ಮಹಾಕಾರ್ತಿಕ ದೀಪೋತ್ಸವ, ಪಂಚಪರ್ವ, ವೈಶಾಖ, ಮಾರ್ಗಶಿರ, ಪಾಲ್ಗುಣ, ಮಾಸಗಳಲ್ಲಿ ನಡೆಯುವ ರಥೋತ್ಸವಗಳು ದೇವಸ್ಥಾನಗಳಲ್ಲಿ ಆಡಳಿತ ವ್ಯವಸ್ಥೆ, ಸ್ಥಾನಿಕ ಕಾರ್ಯನಿರ್ವಹಣೆ ಮಂಡಳಿ, ಅರ್ಚಕ, ಪರಿಚಾರಕರು, ಆರ್ಥಿಕ  ಪರಿಸ್ಥಿತಿ, ಆದಾಯ, ಭೂದಾನ ಆದಾಯ, ತೆರಿಗೆ ಹಣ, ಸುಂಕ, ಖರ್ಚು ವೆಚ್ಚ, ಧಾರ್ಮಿಕ ವಿಧಿ ವಿಧಾನ ಪರಿಚಾರಕರ ವೆಚ್ಚ, ಧಾರ್ಮಿಕ ಸ್ಥಿತಿಗತಿಗಳಲ್ಲಿ ಪೂಜೆ, ನಿತ್ಯಪೂಜೆ, ನೈವೇದ್ಯ, ನೈಮಿತ್ತಿಕ, ಶ್ರೀಕಾರ್ಯ, ಧ್ವಜಾರೋಹಣ, ಮಹಾವಾದ್ಯ ಅಂಗರಂಗ ವೈಭೋಗ, ರಂಗಪೂಜೆ, ಧಾರ್ಮಿಕ ಹಿನ್ನೆಲೆಯಲ್ಲಿ ಹಬ್ಬಗಳಿಗೆ ಸಂಬಂಧವಿದೆ. ಮಕರ ಸಂಕ್ರಾಂತಿ, ಗೋಕುಲಾಷ್ಠಮಿ ಮೊದಲಾದ ಪರ್ವ ದಿನಗಳಲ್ಲಿ ಉತ್ಸವಗಳು ನಡೆಯುತ್ತವೆ. ತೆಪ್ಪೋತ್ಸವ, ಬ್ರಹ್ಮೋತ್ಸವ, ನೈವೇದ್ಯದ ತಿನಿಸುಗಳು, ಹಬ್ಬಗಳು, ಮಕರ ಸಂಕ್ರಾಂತಿ, ಏಕಾದಶಿ, ದ್ವಾದಶಿ, ರಥಸಪ್ತಮಿ, ವಸಂತೋತ್ಸವ, ಮಹಾನವಮಿ, ಜನ್ಮಾಷ್ಠಮಿ ಹೀಗೆ ಅನೇಕ ಹಬ್ಬಗಳು ಪ್ರಾಚೀನ ಕಾಲದಿಂದಲೂ ನಡೆದುಬಂದಿವೆ.

ಒಟ್ಟಾರೆ ಹೇಳುವುದಾದರೆ, ಶಾಸನಗಳು, ನಾಣ್ಯಗಳು, ಸ್ಮಾರಕಗಳು, ಶಿಲ್ಪಗಳು, ನೆಲೆಗಳು, ಬೃಹತ್ ಶಿಲಾ ಸಂಸ್ಕೃತಿಯ ಸಮಾಧಿಗಳು, ಧಾರ್ಮಿಕ ಮನೋಧರ್ಮ ಆಚರಣೆ, ಹಬ್ಬ ಹರಿದಿನಗಳು, ರಾಜರ ಆಳ್ವಿಕೆ ಹೀಗೆ ನಾನಾ ಬಗೆಯ ವಿಚಾರ ಕುರಿತು ಅಧ್ಯಯನವನ್ನು ನಡೆಸುವುದಕ್ಕೆ ಸಾಂಸ್ಕೃತಿಕ ಇತಿಹಾಸ ಎಂಬುದಾಗಿ ಕರೆಯಲಾಗಿದೆ.

ಈ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳ ಬೆಳವಣಿಗೆಯಲ್ಲಿ ಪ್ರತಿಯೊಂದು ಕಾರ್ಯವನ್ನು ಜನಸಮುದಾಯ ನಡೆಸುವ ಒಂದು ಚಿತ್ರಣವನ್ನು ಸಾಂಸ್ಕೃತಿಕ ಅಧ್ಯಯನವನ್ನಾಗಿ ತೆಗೆದುಕೊಂಡು ಅಧ್ಯಯನ ನಡೆಸಲಾಗಿದೆ.

ಈ ಸಂಶೋಧನೆಯ ಮುಖ್ಯ ಉದ್ದೇಶವೇನೆಂದರೆ, ಗುಂಡ್ಲುಪೇಟೆ ತಾಲ್ಲೂಕಿನ ಸಮಗ್ರ ದೇವಾಲಯಗಳ ಒಂದು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಚಟುವಟಿಕೆಗಳ ಕುರಿತಾದಂತೆ ಪ್ರಾಚೀನ ದಾಖಲೆಗಳ ಹಾಗೂ ಇತ್ತೀಚಿನ ದಾಖಲೆಗಳ ಹಾಗೂ ವಿವಿಧ ಹಿರಿಯರ ಹೇಳಿಕೆಗಳನ್ನು ಆಧರಿಸಿ ಒಂದು ಸಾಂಸ್ಕೃತಿಕ ಇತಿಹಾಸವನ್ನು ನೀಡಲಾಗುತ್ತದೆ.

### 2.2. ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಹಿನ್ನೆಲೆ

ಯಾವುದೇ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ ಇತಿಹಾಸಗಳ ಅಧ್ಯಯನಕ್ಕೆ ಶಾಸನಗಳು ಪ್ರಮುಖವಾಗಿವೆ. ಒಂದು ನಾಡಿನ ಇತಿಹಾಸಕ್ಕೆ, ಇತಿಹಾಸದ ಅಧ್ಯಯನಕ್ಕೆ ಇರುವ ಲಿಖಿತ ಆಕರಗಳಲ್ಲಿ ಅಗ್ರಸ್ಥಾನ ದೊರೆಯುವುದು ಶಾಸನಗಳಿಗೆ ಮಾತ್ರ. ಹಲವು ಪ್ರಾದೇಶಿಕ ಇತಿಹಾಸಗಳು ಅಂತರ್ಗತವಾಗಿ ಒಂದು ನಾಡಿನ ಇತಿಹಾಸ ರೂಪುಗೊಳ್ಳುತ್ತದೆ ಎಂಬುದು ತಿಳಿದ ಸಂಗತಿ. ಅದೇ ರೀತಿ ಗುಂಡ್ಲುಪೇಟೆಯ ಇತಿಹಾಸವೂ ಕೂಡ ಹಾಗೆಯೇ ಮುಂದುವರೆಯುತ್ತದೆ. ಶಾಸನಗಳು ಒಂದು ಜನಾಂಗದ ಆಸ್ತಿ, ಸುದೈವದಿಂದ ಈ ನಾಡಿನ ಸಂಪತ್ತು ಹೇರಳವಾಗಿದೆ. ತಮಿಳರನ್ನು ಬಿಟ್ಟರೆ ಕನ್ನಡದಲ್ಲೇ ಹೆಚ್ಚು ಸಂಖ್ಯೆಯಲ್ಲಿ ಶಾಸನಗಳಿವೆ. ಆದರೆ ಇಲ್ಲಿಯ ತನಕ ಶಾಸನಗಳನ್ನು ಅಧ್ಯಯನ ಮಾಡಿ ನಮ್ಮ ನಾಡಿನ ಸಮಗ್ರ ಇತಿಹಾಸವನ್ನು ವ್ಯವಸ್ಥಿತವಾಗಿ ವೈಜ್ಞಾನಿಕವಾಗಿ ಕ್ರೋಢೀಕರಿಸುವ ಕಾರ್ಯವು ಸಹ ಇನ್ನೂ ನಡೆದಿಲ್ಲವೆಂದೇ ಹೇಳಬಹುದಾಗಿದೆ. ಹಾಗೆಯೇ ಈ ಭಾಗದ ಪ್ರಾದೇಶಿಕ ಅಧ್ಯಯನ ಸಹ ಆಗಬೇಕಾಗಿದೆ. ಪ್ರಾದೇಶಿಕ ಅಧ್ಯಯನ ತಮ್ಮ ಗಮನಕ್ಕೆ ಬಂದಂತೆ ಹೆಚ್ಚಾಗಿ ನಡೆಯುತ್ತಿಲ್ಲ. ಪ್ರಸ್ತುತ ಈಗ ಕರ್ನಾಟಕದ ಸಮಗ್ರ ಇತಿಹಾಸಕ್ಕೆ ಪ್ರಾದೇಶಿಕ ಅಧ್ಯಯನ ಕೂಡ ಅನಿವಾರ್ಯವಾಗಿದೆ. ಈಗಿನ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಪ್ರಾಚೀನ ಇತಿಹಾಸವನ್ನು ಹೊಂದಿರುವ ಪ್ರದೇಶ. ಇಲ್ಲಿ ನೂರಾರು ಗುಡಿಗೋಪುರಗಳಿವೆ. ಇವುಗಳು ಪ್ರಾದೇಶಿಕ ಇತಿಹಾಸ ಕಥೆಯ ಮೂಲ ಆಕರಗಳಾಗಿ ದೊರೆಯುತ್ತವೆ. ಪ್ರಸ್ತುತ ಈ ಅಧ್ಯಾಯದಲ್ಲಿ ಈ ತಾಲ್ಲೂಕಿನಲ್ಲಿ ದೊರೆತಿರುವ ಪ್ರಮುಖ ಶಾಸನಗಳ ಬಗ್ಗೆ ಚರ್ಚಿಸಲಾಗಿರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇಲ್ಲಿಯ ತನಕ ಒಟ್ಟು 224 ಶಾಸನಗಳು ದೊರೆತಿವೆ. ಇವುಗಳನ್ನು ಎಪಿಗ್ರಾಫಿಯ ಕರ್ನಾಟಕ ಸಂಪುಟ 3 ರಲ್ಲಿ ಕಾಣಬಹುದಾಗಿದೆ. ಇವುಗಳಲ್ಲಿ ಈ ಪ್ರಾಂತ್ಯವನ್ನಾಳಿದ ಗಂಗ, ಚೋಳ, ಹೊಯ್ಸಳ, ವಿಜಯನಗರದ ಅರಸರು, ಉಮ್ಮತ್ತೂರು ಪಾಳೆಯಗಾರರು, ಮೈಸೂರು ಒಡೆಯರಿಗೆ ಸೇರಿದ ಶಾಸನಗಳು ದೊರೆತಿವೆ. ಹಾಗೆಯೇ ಇತರ ಅನೇಕ ಖಾಸಗಿ ವ್ಯಕ್ತಿಗಳಿಗೆ ಸೇರಿರುವ ದಾನ ಶಾಸನಗಳಿವೆ.

### ಶಾಸನದ ಅರ್ಥ ಮತ್ತು ಸ್ವರೂಪ

ಶಾಸನ ಎಂಬ ಪದವು ಕಾನೂನು (ಆಜ್ಞೆ) ಎಂಬ ಅರ್ಥವನ್ನು ನೀಡುತ್ತದೆ. ಪ್ರಾಚೀನ ಕಾಲದಲ್ಲಿ ಶಾಸನವನ್ನು ರಾಜನ ಆಜ್ಞೆಗೆ ಸಮಾನವಾಗಿರುತ್ತದೆ. ಸರ್ವಾಧಿಕಾರಿಯಾದ ರಾಜನೇ ಶಾಸನಗಳನ್ನು ಹೊರಡಿಸುತ್ತಿದ್ದನು. ಹೀಗೆ ರಾಜನು ಹೊರಡಿಸುತ್ತಿದ್ದ ರಾಜಾಜ್ಞೆಗಳು ಶಾಸನ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಶಾಸನದ ಅರ್ಥ ಸ್ವರೂಪವು ವಿಶಾಲವಾಗಿದೆ.

ಶಾಸನಗಳನ್ನು ರಚಿಸಲು ಬೇಕಾದ ಸಾಮಗ್ರಿಯ ಹರಿವು ಬೆಳೆದುದನ್ನು ಅರಿಯಬೇಕು, ಶಾಸನ ಪರಿಚಯವನ್ನು ಎದುರು ಇರಿಸಿಕೊಂಡು ನೋಡಿದರೆ ಲೋಹಗಳನ್ನೊಳಗೊಂಡಂತೆ ಹಲವಾರು ಸಾಮಾಗ್ರಿಗಳು ಕಾಣುತ್ತದೆ.

ಶಾಸನ ಶಾಸ್ತ್ರವು ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡುವವರಿಗೆ ಸಂಸ್ಕೃತ ಸಾಹಿತ್ಯದಂತೆಯೇ ಶಾಸನ ಸಾಹಿತ್ಯವು ವಿಷಯದ ಗಣಿಯಾಗಿದೆ. ಹಿರಿಯ ವಿದ್ವಾಂಸರು ಪ್ರಾಚೀನ ಭಾರತೀಯ ಇತಿಹಾಸವನ್ನು ತಿಳಿಯಬೇಕಾದರೆ, ಶಾಸನಗಳು ಪ್ರಮುಖವಾಗಿದೆ. ಶಾಸನಗಳಿಂದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಬಹುದಾಗಿದೆ. ಶಾಸನಗಳ ಬಗ್ಗೆ ಡಾ.ಪಿ.ಬಿ.ದೇಸಾಯಿ, ಡಾ.ಎಂ.ಎಂ.ಕಲಬುರ್ಗಿ, ಕರ್ನಲ್ ಮೆಕೆಂಜಿ, ಸರ್ ವಾಲ್ಟರ್ ಇಲಿಯಟ್, ಡಾ.ಫ್ಲೀಟ್, ಬಿ.ಎಲ್.ರೈಸ್, ಡಾ.ಆರ್.ಎಸ್.ಪಂಚ ಮುಖಿ, ಡಾ.ಕೆ.ವಿ. ರಮೇಶ್ ಇನ್ನೂ ಮೊದಲಾದವರು ಶಾಸನಗಳ ಬಗ್ಗೆ ಆ ಗ್ರಂಥಗಳನ್ನು ರಚಿಸಿದ್ದಾರೆ. ಜಿ.ಎಫ್.ಫ್ಲೀಟ್‌ರವರು ಶಾಸನಗಳನ್ನು ಈ ರೀತಿ ವಿಂಗಡಿಸಿದ್ದಾರೆ. ಕೇವಲ ಘಟನೆಗಳನ್ನು ನಿರೂಪಿಸುವ ಶಾಸನಗಳು, ಧಾರ್ಮಿಕ ಉದ್ದೇಶವನ್ನುಳ್ಳ ಶಾಸನಗಳು, ಧಾರ್ಮಿಕ ದತ್ತಿ ಹೇಳುವ ಶಾಸನಗಳು, ಲೌಕಿಕ ದಾನಗಳನ್ನು ಹೇಳುವ ಶಾಸನಗಳು, ಅದೇ ರೀತಿ ಡಾ.ಆರ್.ಎಸ್.ಪಂಚಮುಖಿ ಹಾಗೂ ಆರ್.ನರಸಿಂಹಾಚಾರ್‌ರವರು ತಮ್ಮದೇ ಆದ ವಿಭಾಗ ಕ್ರಮಗಳನ್ನು ತಿಳಿಸಿರುತ್ತಾರೆ. ದಾನಶಾಸನಗಳು, ವೀರಗಲ್ಲು ಶಾಸನ, ಮಾಸ್ತಿಕಲ್ಲು ಶಾಸನ, ನಿಷಧಿಕಲ್ಲು ಶಾಸನ, ಜಯಪತ್ರಗಳು, ರಾಜಾಜ್ಞೆಗಳು, ಅಂಕಿತನಾಮ ಶಾಸನಗಳು, ಗಡಿಕಲ್ಲುಗಳು, ಪ್ರಶಸ್ತಿ ಶಾಸನಗಳು, ಗರುಡ ಕಲ್ಲುಗಳು, ಭೂ ಶಾಸನಗಳು, ಯಂತ್ರದ ಶಾಸನಗಳು ಇತರೆ ಶಾಸನಗಳು.[14]

ಈಗ ಚಾಮರಾಜನಗರ ಜಿಲ್ಲೆಯಲ್ಲಿರುವ ಗುಂಡ್ಲುಪೇಟೆ ಮೊದಲಿಗೆ ಗಂಗವಾಡಿ (96000) ಸಾವಿರ ಪ್ರಾಂತ್ಯಕ್ಕೆ ಸೇರಿತ್ತು. ತಲಕಾಡನ್ನು ಆಳಿದ ಗಂಗರ ಕಾಲಕ್ಕೆ ಸೇರಿಸಬಹುದಾದ ಸುಮಾರು 10 ಶಾಸನಗಳು ಕಂಡುಬಂದಿವೆ. ವೀರನಪುರಕ್ಕೆ ಸೇರಿದಂತಿರುವ ನಳೂರು ಎಂಬ ಪಾಳುಬಿದ್ದಿರುವ ಊರಿನ ಹೊಲವೊಂದರಲ್ಲಿ ಬಿದ್ದಿರುವ ಶಾಸನ ಇದೆ.[15] ಕಡ್ಡಾಣೆ ಎಂಬ ಅರಸನ ಆಡಳಿತದ ಕಾಲದ್ದು, ಇದರಿಂದ ಸಿಂಗವಮ್ಮರಸ ಕಾಡಿದ ವಿಚಾರವನ್ನು ತಿಳಿಸುತ್ತದೆ. ಕಡ್ಡಾಣೆ ಶ್ರೀಪುರುಷನ ಬಿರುದಾಗಿತ್ತೆಂದು ತಿಳಿದುಬರುತ್ತದೆ.

ಶಾಸನೋಕ್ತ ಸಿಂಗವೆಮ್ಮರಸ ಪ್ರಾಯಶಃ ಪಲ್ಲವ ಇಮ್ಮಡಿ ನರಸಿಂಹವರ್ಮ ರಾಜಸಿಂಹ (700-728) ಇರಬೇಕೆಂದು ತಿಳಿಯಬಹುದಾಗಿದೆ. ಈ ಕಡ್ಡಾಣೆ ತಮಿಳು ಶಾಸನಗಳಲ್ಲಿ ಕಡ್ಡಾಣೈ ಎಂದು ಉಲ್ಲೇಖಿತನಾಗಿದ್ದಾನೆ. ಇದೇ ಶ್ರೀಪುರುಷನ ಕಾಲಕ್ಕೆ ಸೇರುವ ಎರಡು ಕಡೆ ಈ

ಶಾಸನಗಳನ್ನು ಕೆತ್ತಲಾಗಿದೆ. ಎರಡೂ ಶಾಸನಗಳಲ್ಲಿ, ಗುಣಸಾಗರ ತಮ್ಮಡಿ ಎಂಬುವನು ಉಕ್ತನಾಗಿದ್ದಾನೆ. ಆತನಿಗೆ ಅರಿಉರ್ಪ್ಪನನ್ನಿವ್ವರು ಭೂಮಿ ಕಾಣಿಕೆಗಳನ್ನು ದಾನ ನೀಡಿರುವುದನ್ನು ತಿಳಿಸುತ್ತದೆ. ಇವೆರಡೂ ಶಾಸನಗಳು ಕ್ರಿ.ಶ.8ನೆಯ ಶತಮಾನಕ್ಕೆ ಸೇರಿದ ಶಾಸನಗಳಿವೆ. ಈ ಶಾಸನದ ಭಾಷೆ ಪೂರ್ವದ ಹಳೆಗನ್ನಡ, ಈ ರೀತಿ ಶಾಸನವನ್ನು ದಾನ ಶಾಸನವೆಂದೂ ಕರೆಯುವ ಪರಂಪರೆ ಹಾಗೂ ಪರಿಪಾಠವಿದೆ.

ದೇವರಹಳ್ಳಿಯ ಶಾಸನ ಗಂಗ ಮನೆತನದ ಅರಸರ ವಂಶಾವಳಿಯನ್ನು ನಿರೂಪಿಸುವ ಅತ್ಯಂತ ಪ್ರಾಚೀನವಾದ ಶಾಸನವಾಗಿದೆ.[16] ಈ ಶಾಸನದಿಂದ ವಂಶಾವಳಿ ಸಂಸ್ಕೃತ ಭಾಷೆಯಲ್ಲಿದ್ದು ಅರೆಬರೆಯಾಗಿ ದೊರೆತಿದೆ. ಸ್ವಸ್ತಿ ಶ್ರೀಮತು ಕೊಗ್ಗುಣಿ ಮಾಧವಶ್ಚೈವ – ವಿಷ್ಣುಗೋತ್ತಮಃ ಮಾಧವೋರವಿನೀತಸ್ಥ ದುರ್ವ್ವಿನೀ ವಿಕ್ರವಶ್ಥ ದುಗ್ಗಶ್ಚ ಶಿವಮಾರಸ್ತ ದೈವಚ ಕೊಂಗುಣಿ ಈ ಪಟ್ಟಿಯಲ್ಲಿ ಹರಿವರ್ಮ ಹಾಗೂ ಮುಷ್ಕರರ ಹೆಸರು ಕಂಡುಬಂದಿಲ್ಲ. ದುರ್ವಿನೀತನ ಅನಂತರ ಉಲ್ಲೇಖಗೊಂಡಿರುವ ವಿಕ್ರಮ ಶ್ರೀ ವಿಕ್ರಮನಿರಬೇಕೆಂದು ಊಹಿಸಬಹುದಾಗಿದೆ. ಅನಂತರದ ದುಗ್ಗ ಭೂವಿಕ್ರಮನಿರಬಹುದು. ಶ್ಲೋಕ ರೂಪದಲ್ಲಿರುವ ಈ ವಂಶಾವಳಿಯನ್ನು ಸ್ವಲ್ಪ ವ್ಯತ್ಯಸ್ತರೂಪದಲ್ಲಿ ಗಂಜಾಂಲೇಖ ಇತ್ಯಾದಿ ತಾಮ್ರಶಾಸನಗಳೊಂದಿಗೆ ಹೋಲಿಸಿ ನೋಡಬಹುದಾಗಿದೆ. ಗಂಗ ಯುವರಾಜ ದುರ್ವಿನೀತ ಎರೆಯಪ್ಪನು ಕೊಸರುಮಳ್ಳಿಯನ್ನು ಮುತ್ತಿದಾಗ ಉಪಗೋತ್ರಕ್ಕೆ ಸೇರಿದ ಅವನ ಎಪ್ಪತ್ತು ಯೋಧರು ಶೌರ್ಯದಿಂದ ಹೋರಾಡಿ ಶತೃರಾಜರನ್ನು ದಮನ ಮಾಡಿದ ವಿಚಾರವನ್ನು ಈ ಶಾಸನ ತಿಳಿಸುತ್ತದೆ. ಅವರ ಪರಾಕ್ರಮಕ್ಕೆ ಮೆಚ್ಚಿದ ಅರಸ ಪುಣಿಸೂರೆಂಬ ಗ್ರಾಮವನ್ನು ದಾನವನ್ನಾಗಿ ನೀಡುತ್ತಾನೆ. ಚಿಕ್ಕಾಟಿ ಎಂಬ ಗ್ರಾಮದಲ್ಲಿ ಪಾಳುಚಂದ್ರಶೇಖರ ದೇವಾಲಯದ ಬಳಿ ಹೊಲದಲ್ಲಿರುವ ಎರಡು ಶಾಸನಗಳಲ್ಲಿ ಒಂದು ಗಂಗ ಅರಸನ ಕಾಲಕ್ಕೆ ಸೇರಿದ ಸತ್ಯವಾಕ್ಯ ಪೆರ್ಮಾನಡಿಯ ಕಾಲಕ್ಕೆ ಸೇರಿದೆ.[17] ಈ ಕಾಲದಲ್ಲಿ ಬೂತರಸ ದಾನ ನೀಡಿದ ವಿಚಾರ ತಿಳಿದುಬರುತ್ತದೆ. ಈ ಶಾಸನದ ಕಾಲ ಕ್ರಿ.ಶ.9ನೇ ಶತಮಾನದೆಂದೂ ಹೇಳಬಹುದಾಗಿದೆ.

ಬೇರಂಬಾಡಿಯಲ್ಲಿ ದೊರೆತ ಸುಮಾರು 10ನೆಯ ಶತಮಾನಕ್ಕೆ ಸೇರಿರುವ ವೀರಗಲ್ಲು ಶಾಸನ ಒಂದರ ಪ್ರಕಾರ ಚಾವುಂಡ ಪೆರ್ಮಾನಡಿಯ ಆಡಳಿತದ 7ನೇ ವರ್ಷವನ್ನು ವ್ಯಕ್ತಪಡಿಸುತ್ತದೆ. ಈ ಕಾಲದಲ್ಲಿ ಬಯಲ್ನಾಡ ಬನ್ದು ಅಲತೊರನಿರದು ಪೆಣ್ಣಿರುಡೆಯಹಿಲ್ ಅಳಗೆಯರ ಲಕ್ಕಣಯ್ಯ ಕದಿ ಸತ್ತಂ ಎಂದು ಶಾಸನ ತಿಳಿಸುತ್ತದೆ. [18] [19]

ಸಮಕಾಲೀನ ಸಾಮಾಜಿಕ ಪರಿಸ್ಥಿತಿಗೆ ಇದೊಂದು ನಿದರ್ಶನವಾಗಬಲ್ಲದು. ಸಾಮಾನ್ಯವಾಗಿ ವೀರಗಲ್ಲು ಶಾಸನಗಳಲ್ಲಿ ಗೋಗ್ರಹಣ ಹಾಗೂ ಸ್ತ್ರೀಯರ ಮೇಲೆ ಆದ

ಆಕ್ರಮಣದ ವಿಷಯ ತಿಳಿದುಬರುತ್ತದೆ. ಪ್ರಸ್ತುತ ಈ ಶಾಸನದಲ್ಲಿ ಕಂಡುಬರುವ ಚಾವುಂಡ ಪೆರ್ಮಾನಡಿ ತಿರುಮಕೂಡಲು ನರಸೀಪುರದ ಶಾಸನ ಸಂಖ್ಯೆ 69 ರಲ್ಲಿ ಉಕ್ತವಾಗಿರುವ ಚಾವುಂಡಯ್ಯನಿರಬಹುದೆಂದು ತಿಳಿಯಬಹುದಾಗಿದೆ. ಅಲ್ಲದೆ ಯೋಚಿಸಲಾಗುತ್ತಿದೆ. ಆದರೆ ಈ ಊಹೆ ಆಧಾರ ಸಾಲದು ಬೆಳಚಲವಾಡಿ ಗ್ರಾಮದ ಉತ್ತರಕ್ಕೆ ಹೊಲದಲ್ಲಿ ನಿಂತಿರುವ ಶಾಸನವನ್ನು ತುಂಬಾ ಸುಂದರವಾಗಿ ಕೆತ್ತಲಾಗಿದೆ.[20] ಶಾಸನದ ಕಾಲ ಶಕವರ್ಷ–935 ಅಂದರೆ ಕ್ರಿ.ಶ.1013 ಎಂದು ತಿಳಿದುಬರುತ್ತದೆ. [21] ನೀತಿಮಾರ್ಗ ಎರ್ಮಾನಡಿಯ 37ನೆಯ ಆಡಳಿತ ವರ್ಷ ಉತ್ತರಾಯಣ ಅದು ಭಾನುವಾರವಲ್ಲ. ಈ ಕಾಲದಲ್ಲಿ ಅಯ್ಯಮರೊಡೆಯ ಮೊಮ್ಮಗ ಶಿವಮಾರೊಡೆಯನ ಮಗನಾದ ಮೇಲಾರೊಡೆಯ ಮಾರಯ್ಯ ಎಂಬುವನಿಗೆ ಜೇಡವರ ಎರೆಯಂಗ ಗಾವುಂಡ ಹಾಗೂ ದಹಾಯದ ಕುರುವತ್ತಿ ಬೇಡಗಾವುಂಡರು ನಾರಣಗಾಲ ಎಂಬ ಹಳ್ಳಿಯನ್ನು ದಾನವಾಗಿ ನೀಡಿದರು. ಪೆರ್ಮಾಡಿಗಾವುಂಡ ನಾಳ್ಗಾವುಂಡನಾಗಿದ್ದ ಖಾಸಗಿ ವ್ಯಕ್ತಿಗಳು ಹೆಸರಿನಲ್ಲಿ ಗಂಗರಸರನ್ನು ಅನುಕರಿಸುತ್ತಿದ್ದರೆಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ತಲಕಾಡಿನ ಗಂಗರು ಸ್ವಲ್ಪ ದುರ್ಬಲರಾದಾಗ ಗಂಗವಾಡಿಯ ಬಹುಭಾಗ ಚೋಳರ ಅಧೀನಕ್ಕೆ ಆಡಳಿತಕ್ಕೆ ಸೇರುತ್ತದೆ. ತಮಿಳುನಾಡಿನ ಚೋಳರ ಕಾಲಕ್ಕೆ ಈ ಭಾಗದಲ್ಲಿ ಅನೇಕ ಅಗ್ರಹಾರಗಳು, ಚತುರ್ವೇದಿ ಮಂಗಲಗಳು ಆದವು. ಕನ್ನಡ ಹಾಗೂ ತಮಿಳು ಭಾಷೆಗಳೆರಡರಲ್ಲೂ ಚೋಳರ ಆಡಳಿತ ಕಾಲಕ್ಕೆ ಸೇರಿದ ಶಾಸನಗಳಿವೆ. ಈ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಶಾಸನವಿದೆ. ಚಿಕ್ಕಾಟಿ ಗ್ರಾಮದ ಪಾಳು ಚಂದ್ರಶೇಖರ ದೇವಾಲಯದ ಬಳಿ ಹೊಲದಲ್ಲಿ ಎರಡು ಶಾಸನಗಳಿವೆ. ಇವುಗಳಲ್ಲೊಂದು ಚೋಳ ಒಂದನೇ ರಾಜಾಧಿರಾಜನ 33ನೆಯ ಆಳ್ವಿಕೆಯ ವರ್ಷದಲ್ಲಿ ತೊರೆ ಕಾಡಾಟ್ಟಿಯ ಅಚಯ್ಯನ ಮಗ ಕೇಶವ ಭಟ್ಟನೆಂಬುವವನು ತನ್ನ ಪೂರ್ವಿಕರ ನೆನಪಿಗಾಗಿ ದೇವಾಲಯವನ್ನು ನಿರ್ಮಿಸಿದ್ದಾನೆ.[22] ಮಾದೇವ ಮತ್ತು ಎಕ್ಕಗೊಂಡದೇವರ ನಂದಾದೀಪಕ್ಕಾಗಿ ಭೂಮಿ ಹಾಗೂ ಹಸುಗಳನ್ನು ದಾನವಿತ್ತ ವಿಚಾರವನ್ನು ತಿಳಿಸುತ್ತದೆ. ಈ ಊರಿನ 1049ರ ಶಾಸನ ಪ್ರಕಾರ ಫೆಬ್ರವರಿ 5 ಎಂದು ತಿಳಿದುಬರುತ್ತದೆ. ಕೆಲಸೂರು ಗ್ರಾಮದ ಬಸದಿಯ ತಳಪಾದಿ ಕಲ್ಲಿನ ಮೇಲಿರುವ ತಮಿಳು ಶಾಸನ ಚೋಳ ಗಂಗದೇವನ 14ನೆಯ ಆಳ್ವಿಕೆಯ ವರ್ಷವನ್ನು ಉಲ್ಲೇಖಿಸುತ್ತದೆ. ಇದೂ ಕೂಡ ದಾನ ಶಾಸನವೇ ಆಗಿದೆ.[23] ಕೆಲಸೂರು ಮುಡಿಗೊಂಡಗೋಳ ಮಂಡಲದ ಗಂಗೈಕೊಂಡ ಚೋಳವಳನಾಡಿನ ಕುಡುಗೂರು ನಾಡಿಗೆ ಸೇರಿತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಕೆಲಸೂರು ಶಾಸನ 12ನೆಯ ಶತಮಾನಕ್ಕೆ ಸೇರುತ್ತದೆ.[24] ಗಂಗವಾಡಿಯಿಂದ ಚೋಳರನ್ನು ಓಡಿಸಿ ನಂತರ ಹೊಯ್ಸಳರು ಅಧಿಕಾರಕ್ಕೆ ಬಂದರು ಹೊಯ್ಸಳರ ಕಾಲಕ್ಕೆ ಸೇರುವ ಅನೇಕ ಶಾಸನಗಳು ಗುಂಡ್ಲುಪೇಟೆ ತಾಲ್ಲೂಕಿನಲ್ಲಿವೆ. ಕ್ರಿ.ಶ.1157ಕ್ಕೆ

ಅಂದರೆ ಹೊಯ್ಸಳ ಒಂದನೇ ನರಸಿಂಹನ ಕಾಲಕ್ಕೆ ಸೇರಿರುವ ವೀರಗಲ್ಲೊಂದು ಗೋಪಾಲಪುರದಲ್ಲಿ ದೊರೆತಿದೆ.[25] ಮಹಾಪಸಾಯಿತನಾದ ವಾಮಣ ಮಲ್ಲಣ್ಣ ಕೊಂಗಿಗೆ ದಾಳಿಇಟ್ಟ ವಿಚಾರವನ್ನು ತಿಳಿಸುತ್ತದೆ. ಕೊಂಗು ಈ ಮೊದಲೇ ವಿಷ್ಣುವರ್ಧನನ ವಶವಾಗಿತ್ತು. ಆದರೂ ತೊಂದರೆ ಆಗಿರಬಹುದೆಂದು ಈ ಶಾಸನದಿಂದ ತಿಳಿದುಬರುತ್ತದೆ. ಇಲ್ಲಿ ನಡೆದ ಹೋರಾಟದಲ್ಲಿ ರನಮಂಚಿಗನೆಂಬುವನು ಮರಣ ಹೊಂದಿದ. ಇವನನ್ನು ಅವಲಂಬಿಸಿದವರಿಗೆ ಕುಡಗನಾಡ ಮಹಾಪ್ರಭು ಚೋಳಗವುಂಡನ ಮಗ ಮಾರತಮ್ಮ ಭೂಮಿ ಕಾಣಿಕೆಗಳನ್ನು ದಾನವಿತ್ತ ಎಂಬುದು ತಿಳಿದುಬರುತ್ತದೆ.[26] ಕ್ರಿ.ಶ.1162–63 ರ ನಿಟ್ರೆ ಶಾಸನ ಹೊಯ್ಸಳ ನರಸಿಂಹನ ಸೇನಾಧಿಪತಿ ಮಹಾಪ್ರಧಾನ ಸರ್ವಾಧಿಕಾರಿ ಮಲ್ಲಿಕಾರ್ಜುನ ದಣ್ಣಾಯಕನನ್ನು ಉಲ್ಲೇಖಿಸುತ್ತದೆ.[27] ಕುಲಗಾಣದ ವಾಸುದೇವರಿಗೆ ಭೂದಾನ ನೀಡಿರುವುದನ್ನು ತಿಳಿಸುತ್ತದೆ. ಈ ಶಾಸನ ತಮಿಳು ಭಾಷೆಯಲ್ಲಿದೆ. ಇದೇ ರಾಜನ ಮತ್ತೊಬ್ಬ ಮಹಾಪ್ರಧಾನ ಸರ್ವಾಧಿಕಾರಿ, ಹೆಗ್ಗವಾಡಿ ಕಲ್ಲಯ್ಯನೆಂಬುವನು ಬೆಳಚಲವಾಡಿ ಗ್ರಾಮದ ರಾಮಲಿಂಗ ದೇವಾಲಯಕ್ಕೆ ದಕ್ಷಿಣಕ್ಕೆ ಇರುವ ಶಾಸನವೊಂದರಿಂದ ಮೇಲಿನ ವಿಚಾರ ತಿಳಿದುಬರುತ್ತದೆ. ಗುಂಡ್ಲುಪೇಟೆಯ ಕೋಟೆ ಒಳಗೆ ಬಸ್ತಿಮಾಳದಲ್ಲಿ ನಿಂತಿರುವ ಶಾಸನದ ಕಾಲ ಕ್ರಿ.ಶ.1196. ಈ ಜೈನ ಶಾಸನ ಇಮ್ಮಡಿ ಬಲ್ಲಾಳನ ಆಳ್ವಿಕೆಯ ಕಾಲಕ್ಕೆ ಸೇರುತ್ತದೆ.[28] ಹೊಯ್ಸಳ ಶಾಸನಗಳಲ್ಲಿ ಕಂಡುಬರುವ ಸಾಮಾನ್ಯ ಬಿರುದುಗಳೆಲ್ಲ ಇಲ್ಲಿವೆ. ವೀರಬಲ್ಲಾಳ ದೇವ, ಬಡಗಹೆದ್ದೊಣಿ, ಪರ್ಯಂತ ಸಾಧಿಸಿದ ಸಂಗತಿಯನ್ನು ಇದು ತಿಳಿಸುತ್ತದೆ. ಈ ರಾಜ ದೋರಸಮುದ್ರ ಈಗಿನ (ಹಳೇಬೀಡು) ದಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ಆತನ ಅಧಿಕಾರಿಯಾದ ಕುಮಾರ ಲಕ್ಷ್ಮಣದಣ್ಣಾಯಕ ಕುಡುಗನಾಡು 300 ಪ್ರದೇಶವನ್ನು ಆಳುತ್ತಿದ್ದ.

ತುಪ್ಪೂರಿನಲ್ಲಿ ಹೊರಲಾಧಿಕುಲದ ಬಿಟ್ಟಗಾವುಂಡನೆಂಬುವನು ಕಟ್ಟಿಸಿದ ಜಿನಾಲಯಕ್ಕೆ ಮಡಹಳ್ಳಿ ಗ್ರಾಮವನ್ನು ಕುಡುಗನಾಡ ಸಮಸ್ತ ಪ್ರಭುಗಾವುಂಡಗಳು ಕನಕನಂದಿ ಪಂಡಿತರಿಗೆ ಧಾರಾಪೂರ್ವಕವಾಗಿ ಕೊಟ್ಟರು. ಕಲ್ಲಹಳ್ಳಿ ಶಾಸನ ಹೊಯ್ಸಳ ಮಹಾಪ್ರಧಾನ ಮಹತ್ತರ ನಿಯೋಣಾಧಿಪತಿ ಶ್ರೀರಂಗದಣ್ಣಾಯಕ ಹಾಗೂ ಹಿರಿಯನಾದ ಮಹಾಪ್ರಭು ಕೊಲುಗಣದ ಶಂಕರಗ ಉಂಡರಸ ಎಂಬುವವರು ದಾನ ನೀಡಿದ ವಿಚಾರವನ್ನು ವ್ಯಕ್ತಪಡಿಸುತ್ತದೆ. ಇವರ ಕಾಲ ಕ್ರಿ.ಶ.1221. ಈ ಶಂಕರನ ಉಂಡರಸ ಕೆಲಸೂರಿನ ಶಾಸನಗಳೊಂದರಲ್ಲೂ ಕಂಡುಬರುತ್ತದೆ.[29] ಬಂಡೀಪುರದ ಕಾಡಿನಲ್ಲಿ ದೊರೆತ ತಮಿಳು ಶಾಸನ ಒಂದನ್ನು ಈಗ ಪ್ರವಾಸಿ ಮಂದಿರದ ಬಳಿ ತಂದಿಡಲಾಗಿದೆ. ಹೊಯ್ಸಳ ಸೊಮೇಶ್ವರನ ಆಡಳಿತದ ಕಾಲಕ್ಕೆ ಈ ಶಾಸನ ಸೇರುತ್ತದೆ. 500 ಪೊನ್ (ಹೊನ್ನು)ಗಳ ದಾನವೊಂದನ್ನು ತಿಳಿಸುತ್ತದೆ. ಧರ್ಮಚಿತ್ತನ್ ಕೊಲ್ಲಗಾಮುಂಡನು ಕೆರೆಯನ್ನು ನಿರ್ಮಿಸಿದ ವಿಚಾರವನ್ನು ತಿಳಿಸುತ್ತದೆ. ಹಂಗಳದ

ವರದರಾಜಸ್ವಾಮಿ ದೇವಾಲಯದ ಉತ್ತರ ದಿಕ್ಕಿನ ತಳಪಾದಿ ಕಲ್ಲಿನಲ್ಲಿ ಕೆತ್ತಿರುವ ತಮಿಳು ಶಾಸನ ಹೊಯ್ಸಳ ದೊರೆ ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದೆ.[30] ಈ ಊರಿನ ತಿರುನಾರಾಯಣ ದೇವರಿಗೆ ತ್ರೈಮಾಸದಲ್ಲಿ ತ್ರಿಸಂಧಿ ಬೆಳಕಿನ ಸೇವೆಸಲ್ಲಿಸಲು ಕುರಿಪಟ್ಟಿಯ ಮಾರಿಸೆಟ್ಟಿ ಎಂಬುವನು ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ.[31] ಆಲತ್ತೂರು ಗ್ರಾಮದಲ್ಲಿರುವ ಶಾಸನದಲ್ಲಿ ಮಹಾಪ್ರಧಾನ ಪೆರುಮಾಳ ದೇವರ ವಿಚಾರ ತಿಳಿದುಬರುತ್ತದೆ.

ಈತನು ತೆರಕಣಾಂಬಿಯಿಂದ ಈ ಪ್ರದೇಶವನ್ನಾಳುತ್ತಿದ್ದ ಸಮಯದಲ್ಲಿ ಕುಡುಗನಾಡು ಆಲತ್ತೂರ ಕೆಂಪಗ ಉಂಡನ ಮಗ ಸಿಂಗ(ಗ) ಉಂಡನ ವೊಲೆಯ ಕಾಲ ಮಾಣಿಯು ಹುಲಿಯ ನಿಂತಿದು ಕೊಂದು ಸ್ವರ್ಗಕ್ಕೆ ಸಂದ ವಿಚಾರವನ್ನು ಹಾಗೂ ಈ ವೀರನಿಗೆ ಭೂಮಿಯನ್ನು ದತ್ತಿಬಿಟ್ಟ ಸಂಗತಿಯನ್ನು ಶಾಸನ ತಿಳಿಸುತ್ತದೆ. ಈ ಪೆರುಮಾಳನ ಮಗ ಮಾಧವದಣ್ಣಾಯಕ ತೆರಕಣಾಂಬಿಯಿಂದ ಆಳುತ್ತಿದ್ದನೆಂದು ತ್ರಿಯಂಬಕಪುರದ ಶಾಸನ ಒಂದರಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ಈತನು ಪಡೆದಿರುವ ಬಿರುದುಗಳಲ್ಲಿ ಕೆಲವನ್ನು ಗಮನಿಸಬಹುದು. ಮೊಡಕುಲಯಕುಲ ಕಮಳ ಮಾರ್ತಾಂಡ, ಸಿತಗರಗಂಡ, ಕೊಂಗಮಾರಿ, ಕೊಂಗದಿಶಾಪಟ್ಟ, ನೀಲಗಿರಿಸಾಧಾರ, ಹೊಯ್ಸಳ, ರಾಜ್ಯಲಕ್ಷ್ಮೀ ರಕ್ಷಾಪ್ರಕಾರ, ಅಭಿನವಮದ ನಾವತಾರ್, ಪಾಂಡ್ಯಬಲಕ ಮಲವನಕುಂಜರ, ಅರಸುಗಂಡ, ರಾಮನ ಬೆಂಕೊಂಡಗಂಡ ಸ್ವಸ್ತಿಪುರವ ರಾಧೀಶ್ವರ, ಇಂಮಡಿರಾ ಉತ್ತರಾಯ ಇತ್ಯಾದಿ ಬಿರುದುಗಳಿವೆ.[32]

ಮಾಧವದಣ್ಣಾಯಕ ಹದಿನಾಲ್ಕು ನಾಡನ್ನು ಆಳುತ್ತಿದ್ದನೆಂದೂ ತಿಳಿದುಬರುತ್ತದೆ. ಈ ಶಾಸನದ ಕಾಲ ಕ್ರಿ.ಶ.1310 ಈ ಮಾದವ ದಣ್ಣಾಯಕ ಕ್ರಿ.ಶ.'1310ರಲ್ಲಿ ಗೋವರ್ಧನಗಿರಿಯಲ್ಲಿ ಪ್ರತಿಷ್ಠೆ ಮಾಡಿಸಿದ ಗೋಪಿನಾಥದೇವರ ಅಂಗರಂಗಭೋಗ ಮತ್ತಿತರ ಸೇವೆಗೆಂದು ಕಣ್ಣವಗಾಲ ಎಂಬ ಗ್ರಾಮವನ್ನು ನೀಡಿದ, ಗೋವರ್ಧನಗಿರಿ ಈಗಿನ ಹಿಮವದ್ಗೋಪಾಲ ಸ್ವಾಮಿ ಬೆಟ್ಟ ಶಾಸನವಿರುವ ಕಣ್ಣೇಗಾಲ ಈ ಬೆಟ್ಟಕ್ಕೆ ಹತ್ತಿರದಲ್ಲೇ ಇದೆ. ಈ ಮಾಧವದಣ್ಣಾಯಕ ಬೊಮ್ಮಲಾಪುರ ಶಾಸನದಲ್ಲೂ ಕಾಣಬರುತ್ತಾನೆ.[33] ಈತನ ಮಗ ಭರತಜೀಯ ದಣ್ಣಾಯಕ ಇದೇ ಪ್ರದೇಶವನ್ನಾಳುತ್ತಿದ್ದ, ಇವನ ಸೋದರ ಮಹಾಪ್ರಧಾನ ಕೇತಯದಣ್ಣಾಯಕ ಹೊಯ್ಸಳ ಮುಮ್ಮಡಿ ಬಲ್ಲಾಳನಿಂದ ಕುಡುಗನಾಡಿನ ಗೊಮ್ಮಟಹಳ್ಳಿ ಹಾಗೂ ಕಾಚಗವುಡನ ಮಾದಹಳ್ಳಿ ಎಂಬೆರಡು ಗ್ರಾಮಗಳನ್ನು ಪಡೆದು ಅರಮನೆಯ ಶ್ರೀಕರಣದ ರಾಘವದೇವನ ಮಗ ನಾರಣದೇವಣ್ಣನಿಗೆ ತನ್ನ ತಂದೆಯ ಹೆಸರಿನಲ್ಲಿ ಅಗ್ರಹಾರವಾಗಿ ಪರಿವರ್ತಿಸಲು ನೀಡಿದ ಶಾಸನವಿರುವ ಗ್ರಾಮದ ಹೆಸರು ಈಗಲೂ ರಾಘವಾಪುರ ಎಂದಿರುವುದು ಗಮನಿಸಬೇಕಾದ ವಿಚಾರವಾಗಿದೆ.

ಈ ಶಾಸನ ವಿಷ್ಣುವಿನ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ. ಶಾಸನದ ಬಗ್ಗೆಯೇ ಹೀಗೆ ಹೇಳಿದೆ. ಗಂಭೀರಂ ರುಚಿರಂ ಹೃದ್ಯಂ ಬ್ರುಕ್ತಾರ್ತ್ಯಂ ಸುಮನೋಹರಂ ಶ್ರೀ ರಾಘವಪುರಕ್ಕೇದಂ ಶಾಸನಂ ಧರ್ಮ್ಮಸಾಶನಂ ಹೊಯ್ಸಳ ಬಲ್ಲಾಳ ಅರುಣಸಮುದ್ರ ಅಥವಾ ಅಣ್ಣಾಮಲೆಯಿಂದ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಈ ಶಾಸನದ ಕಾಲ ಕ್ರಿ.ಶ.1320 ಮಾಧವನ ಮಗನಾದ ಕೇತನ ದಣ್ಣಾಯಕ ರಾಜ್ಯವಾಳುತ್ತಿದ್ದುದನ್ನು ಕಂದಾಗಾಲ, ಎಲೆಯೂರು ಹಾಗೂ ಹೆಗ್ಗವಾಡಿ ಗ್ರಾಮಗಳಲ್ಲಿರುವ ಶಾಸನಗಳು ಉಲ್ಲೇಖಿಸುತ್ತವೆ. ಹೊಯ್ಸಳರ ಆಡಳಿತ ಈ ತಾಲ್ಲೂಕಿನಲ್ಲಿ ಗಮನಾರ್ಹವಾದುದು. ಚೋಳರ ಪ್ರಾಬಲ್ಯ ಎಷ್ಟು ಬೇರೂರಿತ್ತೆಂದರೆ ಕೆಲವು ಕಡೆ ಹೊಯ್ಸಳರು ಈ ಭಾಗದ ಭಾಷೆಯಾಗಿದ್ದ ತಮಿಳಿನಲ್ಲೇ ಶಾಸನಗಳನ್ನು ಬರೆಸಬೇಕಾಯಿತು. ಹೊಯ್ಸಳರ ನಂತರ ವಿಜಯನಗರದ ಅರಸರು ಅಧಿಕಾರಕ್ಕೆ ಬಂದರು. ಈ ಕಾಲದಲ್ಲಿ ಇಡೀ ದಕ್ಷಿಣ ಭಾರತ ವಿಜಯನಗರ ಅರಸರ ಆಡಳಿತಕ್ಕೆ ಒಳಪಟ್ಟಿತ್ತು. ವಿಜಯನಗರ ಅರಸರಿಗೆ ಪೂರಕವಾಗಿ ಸುಮಾರು ನಲವತ್ತು ಶಾಸನಗಳು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದೊರೆತಿವೆ. ಇವುಗಳಲ್ಲಿ ಹೆಚ್ಚಿನವು ದಾನಶಾಸನಗಳೇ ಆಗಿವೆ. ಕ್ರಿ.ಶ.1368–69ರಲ್ಲಿ ಬೆಟ್ಟಹಳ್ಳಿ ಶಾಸನವು ತುಂಬಾ ಸವೆದುಹೋಗಿದೆ. ಬುಕ್ಕರಾಯ ಹಾಗೂ ಚಿಕ್ಕಕಂಪಣರ ಹೆಸರುಗಳು ಕಂಡುಬರುತ್ತವೆ. ಕುಮಾರ ನಂಜಂಣನೂ ಉಲ್ಲೇಖಿತನಾಗಿದ್ದಾನೆ. ಗುಂಡ್ಲುಪೇಟೆಯ ರಾಮೇಶ್ವರ ದೇವಾಲಯದ ಗರ್ಭಗೃಹ ದಕ್ಷಿಣ ಕಡೆ ತಳಪಾದಿ ಕಲ್ಲಿನ ಮೇಲಿರುವ ಶಾಸನ ರಾಮನಾಥದೇವರ ಪಾತ್ರ ಭೋಗಕ್ಕೆ ಪ್ರಸನ್ನ ವಿಜಯಪುರ ಅಗ್ರಹಾರದ ಮಹಾಜನರೆಲ್ಲ ಪ್ರತಿವರ್ಷ ಮೂವತ್ತು ಗದ್ಯಾಣಗಳನ್ನು ನೀಡಿದರೆಂದು ತಿಳಿದುಬರುತ್ತದೆ. ಗುಂಡ್ಲುಪೇಟೆಯ ಹಿಂದಿನ ಹೆಸರು ವಿಜಯಪುರ ಅಥವಾ ವಿಜಯಪುರವೆಂಬುದು ಗಮನಾರ್ಹ ಅಂಶ. ವೀರಬುಕ್ಕರಾಯನ ಮಗ ಚಿಕ್ಕಕಂಪಣ್ಣವೊಡೇಯನು ಈ ಪ್ರದೇಶವನ್ನಾಳುತ್ತಿದ್ದ ಈ ಶಾಸನದ ಕಾಲ ಕ್ರಿ.ಶ.1372 ಕ್ರಿ.ಶ.1374ರ ಸಮಯಕ್ಕೆ ಈತನು ಮರಣ ಹೊಂದಿ, ಈತನ ಮಗ ನಂಜುಂಣವೊಡೆಯ ಅಧಿಕಾರಕ್ಕೆ ಬಂದಿದ್ದನೆಂಬುದು ಮಡಹಳ್ಳಿ ಶಾಸನದಿಂದ ತಿಳಿದುಬರುತ್ತದೆ.[34] ಶಾಸನದ ಪಾಠ ಈ ರೀತಿ ಇದೆ. ಶ್ರೀವೀರಬುಕ್ಕರಾಯನ ಕುಮಾರ ಚಿಕ್ಕಕಂಪಣ ಒಡೆರ ಕುಮಾರ ನಂಜಂಣ ಒಡೆಯರು ತಮ್ಮ ತಂದೆ ಕಂಪ್ಪರಾಯರು ಸ್ವರ್ಗಸ್ತರಾದಲ್ಲಿ ವಿಜಯಪುರದ ರಾಮನಾಥ ದೇವರಿಗೆ ಅಮೃತಪಡಿಗೆ ಕುಡುಗನಾಡ ಮಡೆಹಳ್ಳಿಯ ಧಾರೆಯೆರೆದು ಕಲ್ಲ ನೆಡಿಸಿ ಕೊಟ್ಟ ಶಾಸನ,[35] ಈ ಶಾಸನಕ್ಕೆ ಶ್ರೀ ವಿಶ್ವೇಶ್ವರ ಎಂದು ನಂಜುಂಣ ಒಡೆಯರ ಸ್ವಹಸ್ತದ ಒಪ್ಪವಿದೆ. ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯದ ಅರ್ಚಕರಲ್ಲಿ ತಾಮ್ರ ಶಾಸನಗಳಲ್ಲೊಂದು ಕುತೂಹಲಕರವಾಗಿದೆ. ಈ ಶಾಸನದಲ್ಲಿ ವಿಜಯನಗರದ ಅರಸರ ವಂಶಾವಳಿ ಹೀಗಿದೆ. ಸಂಗಮ, ಅವನ ಮಗ ಬುಕ್ಕ ಮತ್ತು ಹರಿಹರ, ಹರಿಹರನ ಮಗ ಬುಕ್ಕಣ್ಣ, ಬುಕ್ಕಣನ ಮಗ

ಹರಿಹರ, ತ್ರಿಯಂಬಕ ದೇವರಿಗೆ ಕೆಲವು ಭೂ ಪ್ರದೇಶವನ್ನು ಈತ ದಾನ ನೀಡಿದನೆಂದು ತಿಳಿದುಬರುತ್ತದೆ. ಆದರೆ ಇಮ್ಮಡಿ ಬುಕ್ಕನಿಗೆ ಹರಿಹರನೆಂಬ ಹೆಸರಿನ ಮಗ ಇರಲಿಲ್ಲ. ಬುಕ್ಕನ ಸೋದರ ಒಂದನೆಯ ದೇವರಾಯನಿಗೆ ಹರಿಹರನೆಂಬ ಮಗನಿದ್ದ, ಸೋದರನ ಮಕ್ಕಳನ್ನು ಮಗನೆಂದು ಶಾಸನಗಳನ್ನು ಮಗನೆಂದು ಶಾಸನಗಳಲ್ಲಿ ತಿಳಿಸುವುದು ಅಪರೂಪವೇನಲ್ಲ, ತ್ರಿಯಂಬಕೇಶ್ವರ ತೆರಕಣಾಂಬಿ ಸ್ಥಳಕ್ಕೆ ಸೇರಿತ್ತು. ಈ ತಾಮ್ರಶಾಸನ ನೈಜತೆಯ ಬಗ್ಗೆ ಸಂದೇಹ ಮೂಡುತ್ತದೆ. ಈ ಶಾಸನ ಮೂರು ಹಲಗೆಗಳನ್ನು ಹೊಂದಿದೆ. ವರಾಹ ಚಿಹ್ನೆಯನ್ನು ಸಹ ಹೊಂದಿದೆ. ನಾಗರಾಕ್ಷರಗಳಲ್ಲಿ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಶಾಸನವನ್ನು ಬರೆಯಲಾಗಿದೆ. ಸೋಮನಹಳ್ಳಿ ತಾಮ್ರಶಾಸನ ಶ್ರೀಮನ್ಮಹಾರಾಜಾಧಿರಾಜ ಪರಮೇಶ್ವರ, ಶ್ರೀವೀರ ಪ್ರತಾಪ, ದೇವರಾಯ ಮಹಾರಾಯರ ತಂದೆ ದೇವರಾಯ ಮಹಾರಾಯರಿಗೆ ಶಾಶ್ವತ ಪುಣ್ಯಲೋಕ ಪಿತೃರ್ಥವಾಗಿ ತೆರಕಣಾಂಬಿ ರಾಜ್ಯಕ್ಕೆ ಸಲ್ಲುವ ಕುಲಗಾಣದ ಸ್ಥಳದ ಭಾಗ ಸೋಮಹಳ್ಳಿಯೆಂಬ ಗ್ರಾಮವೆಂದು, ದೇವರಾಯ ವಡೆಯರು ತಂನಾಮಧೇಯವಾಗಿ ದೇವರಾಜಪುರವೆಂಬ ಅಗ್ರಹಾರವನ್ನು ಮಾಡಿ ಸಹಿರಣ್ಯೋದಕ ದಾನಧಾರಾಪೂರ್ವಕವಾಗಿ ನಾನಾಗೋತ್ರದ ನಾನಾ ನಾಮಧೇಯದ ಮಹಾಜನಂಗಳಿಗೆ ಹನ್ನೆರಡು ವೃತ್ತಿ ಮಾಡಿ ಧಾರೆಯನೆರೆದು ಕೊಟ್ಟು ಧರ್ಮ ಶಾಸನವಾಗಿದೆ. ಈ ಶಾಸನದ ಕಾಲ ಕ್ರಿ.ಶ.1422 ಭೀಮನ ಬೀಡು ಊರಬಾಗಿಲ ಬಳಿ ನಿಂತಿರುವ ಶಾಸನ ನಾಗರಾಕ್ಷರ ಹಾಗೂ ಕನ್ನಡ ಭಾಷೆಯಲ್ಲಿದ್ದು ಶ್ರೀಮನ್ಮಾಹಾಮಂಡಲೇಶ್ವರ ಶ್ರೀಕೃಷ್ಣರಾಯರಿಗೆ ವ್ರತೋತ್ಸವವಾದ ಸಮಯದಲ್ಲಿ ಅವರ ನಿರೂಪದಿಂದ ಗೋವಿಂದರಾಜನು ಶ್ರೀನಿವಾಸ ಪಂಡಿತ ಹಾಗೂ ತಿರುಮಲ ಪಂಡಿತರಿಗೆ ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ.[36] ಈ ಗೋವಿಂದರಾಜ ವಿಜಯನಗರದ ಕೃಷ್ಣರಾಯನ ಪ್ರಧಾನಿಯರಾದ ಸಾಳುವ ಗೋವಿಂದರಾಜನೆಂದು ಊಹಿಸಬಹುದಾಗಿದೆ.

ಗುಂಡ್ಲುಪೇಟೆಯಲ್ಲಿರುವ ತಾಮ್ರಶಾಸನ ವಿಜಯನಗರದ ಅರಸರ ವಂಶಾವಳಿಯನ್ನು ತಿಳಿಸುತ್ತದೆ. ತುಂಗಾಭದ್ರ ವಿಠಲೇಶ್ವರನ ಸನ್ನಿಧಿಯಲ್ಲಿ ಕೃಷ್ಣರಾಯನು ತೆರಕಣಾಂಬಿ ಮಹಾರಾಜ್ಯದಲ್ಲಿ ಮಾದಲವಾಡಿ ಎಂಬ ಗ್ರಾಮವನ್ನು ಕೃಷ್ಣಸಾಗರ ಎಂಬ ಪ್ರತಿನಾಮಧೇಯವಾಗಿ ಶೌರಿರಾಜರ ಪೂಜೆ-ಪುನಸ್ಕಾರ ನೀಡಿ ಶ್ರೀನಿವಾಸ ಎಂಬುವವರಿಗೆ ನೀಡಿದ್ದನೆಂದು ಶಾಸನದಿಂದ ತಿಳಿದುಬರುತ್ತದೆ.[37] ಶಾಸನದ ಭಾಷೆ ಸಂಸ್ಕೃತ, ಲಿಪಿನಾಗರಿ ಕಾಲ ಕ್ರಿ.ಶ.1517, ಶಾಸನವನ್ನು ಬರೆದವರು ಸಭಾಪತಿ ಕಂಡರಿಸಿದವನು ಮಲ್ಲಣನ ಮಗ ವೀರಣಾಚಾರ್ಯ, ದಾನವಿತ್ತ ಗ್ರಾಮದ ಎಲ್ಲಾ ವಿವರಗಳು ಕನ್ನಡ ಭಾಷೆಯಲ್ಲಿದೆ.

ತೆರಕಣಾಂಬಿಯ ರಾಮಭದ್ರ ದೇವಾಲಯದಲ್ಲಿರುವ ಶಾಸನ ಮಹಾಪ್ರಧಾನ ಸಾಳುವ ಗೋವಿಂದರಾಜ ಕೃಷ್ಣರಾಯನಿಗೆ ಪುಣ್ಯವಾಗಬೇಕೆಂದು ಆಳ್ವಾರು ದೇವರ ರಥೋತ್ಸವಕ್ಕೆ ದಾನ ನೀಡಿದನೆಂಬುದನ್ನು ನಿರೂಪಿಸುತ್ತದೆ.[38] ಈ ಗೋವಿಂದರಾಜು ಕೌಂಡಿನ್ಯಗೋತ್ರದ ಯಜುಬ್ಯಾಖೆಯ ಅಪಸ್ತಂಬಸೂತ್ರದ ರಾಚಿರಾಜನ ಮಗನೆಂದು ತ್ರಿಯಂಬಕಪುರದ ಶಾಸನವೊಂದು ತಿಳಿಸುತ್ತದೆ. ಈ ಶಾಸನದಲ್ಲಿ ಕಾಣಬರುವ ಬೆಟ್ಟದಕಾವಲು, ಬೋಗಾರಿವಣಿ, ಗಣಾಕಾರ, ತಡಿಗೆ, ವೋಜಗಳ ತಡಿಗೆ, ಕುಂಬಾರ ತಡಿಗೆ, ದಾಸುಗಳ ತಡಿಗೆ, ಆ ಹಳದವಿಗೆ, ಅಸಗರ ತಡಿಗೆ, ನಾಯಿಂದ ತಡಿಗೆ, ಗಾಣದ ತಡಿಗೆ, ಮಾದಾಣಿಕೆ ಇತ್ಯಾದಿ ತೆರಿಗೆಗಳನ್ನು ಶಾಸನದಲ್ಲಿ ಕಾಣಬಹುದಾಗಿದೆ. ಈ ರೀತಿಯ ಶಾಸನಗಳು ಸಮಕಾಲೀನ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಯ ಬಗೆಗೆ ಬೆಳಕು ಚೆಲ್ಲುತ್ತದೆ. ಗೋಪಾಲಪುರದ ಶಾಸನವು ಅಚ್ಯುತರಾಯ ವೀರಪ್ಪವೊಡೆಯರು ತಮ್ಮ ನಾಯಕತನಕ್ಕೆ ವಿಜಯನಗರದ ಅರಸ ಅಚ್ಯುತರಾಯರು ಪಾಲಿಸಿದ ಕುಡುಗನಾಡ ವೊಳಗಣ ತೆರಕಣಾಂಬಿಯ ಸೀಮೆಯ ಕುಣಿಗಹಳ್ಳಿಯ ಸ್ಥಳದ ಇಂಗಳವಾಡಿಯು ಗ್ರಾಮವನ್ನು ಗೋವರ್ಧನಗಿರಿಯ ಗೋಪಿನಾಥ ದೇವರಿಗೆ ಸೇವೆಗೆ ಕೊಟ್ಟ ವಿಚಾರಗಳು ತಿಳಿದುಬರುತ್ತದೆ. ಮಸಹಳ್ಳಿ ಶಾಸನದಿಂದ ವಿಜಯನಗರ ಅರಸರಾದ ಸದಾಶಿವರಾಯರ ಕಾಲದಲ್ಲಿ ಅಧಿಕಾರಿಯಾಗಿದ್ದ ರುಸ್ತಂಜಖಾನೆ ವೊಡೆಯರು ಕೊಡತಿಯ ಹೊಂನ ಹಲಗೆವೊಡೆಯರಿಗೆ ಮಸಹಳ್ಳಿ ಗ್ರಾಮ ಹಾಗೂ ಅದರ ಕಾಲುವಳಿಗಳನ್ನು ಸುತ್ತಿಗೆ ಗುತ್ತಿಗೆಯಾಗಿ ನೀಡಿದನೆಂದು ತಿಳಿದುಬರುತ್ತದೆ.[39] ಸದಾಶಿವರಾಯನ ಕಾಲದಲ್ಲಿ ವಿದ್ಯಾಪುರ ಮಹಾಪಾತ್ರೆ ಅರಸು ಲಕ್ಷ್ಮೀಪತಿ ಅಯ್ಯ ಎಂಬುವವನಿಗೆ ಅಗ್ರಹಾರವೊಂದನ್ನು ಮಾಡಿಸಿ ದಾನವಾಗಿತ್ತುದನ್ನು ಹಳ್ಳದಪುರ ಎಂಬ ಪಾಳುಗ್ರಾಮದಲ್ಲಿರುವ ಶಾಸನದಿಂದ ತಿಳಿದುಬರುತ್ತದೆ.[40] ಇದೇ ಅರಸನ ಕಾಲದಲ್ಲಿ ಮಹಾಮಂಡಲೇಶ್ವರ ಅವುಭಲರಾಜಯ್ಯದೇವ ಮಹಾರಾಜ ತೆರಕಣಾಂಬಿಯ ಗೋಪಾಲಕೃಷ್ಣ ದೇವರಿಗೆ ಹುರದಹಳ್ಳಿ ಗ್ರಾಮವನ್ನು ದಾನ ನೀಡಿದನೆಂದು ತಿಳಿದುಬರುತ್ತದೆ. ಗುಂಡ್ಲುಪೇಟೆ ವಿಜಯನಾರಾಯಣ ದೇವಾಲಯದ ಮುಂದೆ ನಿಂತಿರುವ ಶಾಸನಳಾಲವಂದ ಖಾನೆಯ ರುಸ್ತುಂ ಮಖಾನೊಡೆಯರು ವಿಜಯಪುರದ ವಿಜಯನಾರಾಯಣ ದೇವರ ದೀಪ ನೈವೇದ್ಯಕ್ಕೆ ನೀಡಿದ್ದ ದಾನವನ್ನು ತಿಳಿಸುತ್ತದೆ.

ವಿಜಯನಗರ ಅರಸರ ಶ್ರೀರಂಗರಾಯ ಮಹಾರಾಯನ ಕಾಲದಲ್ಲಿ ಮಹಾಮಂಡಲೇಶ್ವರ ರಾಮರಾಜು ರಾಮಾಜ್ಯೆಯ್ಯದೇವ ಮಹಾರಾಯರು ನಂಜನಗೂಡು ಹಿರಿಯ ಮಠದ ಪಟ್ಟದ ಗಂಗಾಧರ ದೇವರಾಯಗಳಾದ ಮಹಾಮಹತ್ತಿರ ಆರೋಗಣೆಗೆ ದಾನವಿತ್ತುದನ್ನು ಸೋಮಹಳ್ಳಿ ಶಾಸನದಿಂದ ತಿಳಿದುಬರುತ್ತದೆ.[41] ವೆಂಕಟಪತಿ ಮಹಾರಾಯನ ಕಾಲದಲ್ಲಿ ಮೈಸೂರು ಅಧಿಪ ನರಸುರಾಜಯ್ಯನು ತೆರಕಣಾಂಬಿ ಸೀಮೆಯ ಹಂಗಳ ಸ್ಥಳದ

ಪುತ್ತನಪುರವೆಂಬ ಗ್ರಾಮವನ್ನು ತೆರಕಣಾಂಬಿಯ ಹನುಮಂತದೇವರ ಪೂಜೆ ಹಾಗೂ ಅನ್ನದಾನ ನಡೆಸುವ ಪತ್ರಕ್ಕೂ ನೀಡಿದ ವಿಚಾರ ತೆರಕಣಾಂಬಿಯ ಶಾಸನವೊಂದರಿಂದ ತಿಳಿದುಬರುತ್ತದೆ. ಇದೇ ಶಾಸನದ ಪ್ರತಿ ಪುತ್ತನಪುರದಲ್ಲೂ ಇದೆ.[42] ದೇಶೀಪುರದಲ್ಲಿರುವ ಶಾಸನವೊಂದರಲ್ಲಿ ವೀರವೆಂಕಟಪತಿರಾಯನ ಕಾಲದಲ್ಲಿ ಮೈಸೂರು ಒಡೆಯರ್ ದೇವರಾಜ ವೊಡೆಯರವರು ನಂಜನಗೂಡಿನ ನಂಜುಂಡೇಶ್ವರ ದೇವಾಲಯಕ್ಕೆ ಉತ್ತರಮಲ್ಲನ ಮೂಲೆಗಳಲ್ಲಿ ವಿರಕ್ತಮಠವೊಂದನ್ನು ಹೊಸದಾಗಿ ನಿರ್ಮಿಸಿ ವಿರಕ್ತಸ್ವಾಮಿಯಾದ ಪ್ರಣಮಪ್ಪ ಚನ್ನವೀರ ದೇವರಾಯ ವೊಡೆಯರವರಿಗೆ ದೇಶಿಪುರ ಹಾಗೂ ಹೂಕುಂದ ಗ್ರಾಮಗಳನ್ನು ನೀಡಿದರೆಂದು ತಿಳಿದುಬರುತ್ತದೆ.[43]

ಉಮ್ಮತ್ತೂರು ಅರಸರು ವಿಜಯನಗರದ ಅರಸರ ಸಾಮಂತರಾಗಿ ಈ ಪ್ರದೇಶವನ್ನು ಆಳ್ವಿಕೆ ನಡೆಸಿರುತ್ತಾರೆ. ಚಾಮರಾಜನಗರ, ನಂಜನಗೂಡು ಹಾಗೂ ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಇವರ ಶಾಸನಗಳು ಅಪಾರ ಸಂಖ್ಯೆಯಲ್ಲಿ ಕಂಡುಬರುತ್ತವೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹದಿನೈದು ಇಪ್ಪತ್ತು ಶಾಸನಗಳು ಅವರ ಕಾಲಕ್ಕೆ ಸೇರಿದೆ. ಚನ್ನಮಲ್ಲಾಪುರದ ನಂಜುಂಡೇಶ್ವರನ ಗುಡಿಯಲ್ಲಿರುವ ಶಾಸನವು ಮಹಾಮಂಡಲೇಶ್ವರ ವೀರ ಸೋಮಣ್ಣ ವೊಡೆಯರ ಮಗ ಚಿಕ್ಕಣ್ಣ ವೊಡೆಯರು ತೆರಕಣಾಂಬಿ ರಾಜ್ಯವನ್ನು ಆಳುತ್ತಿದ್ದು ನಂಜನಗೂಡಿನ ನಂಜುಂಡೇಶ್ವರ ದೇವರಿಗೆ ಕುಡುಗನಾಡ ಆಲತ್ತೂರು ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.[44] ತ್ರಿಯಂಬಕಪುರದ ದೇವಸ್ಥಾನದ ಅರ್ಚಕರಲ್ಲಿದ್ದ ತಾಮ್ರಶಾಸನವೊಂದು ವೀರಸೋಮರಾಯನೆಂಬ ಅರಸನೊಬ್ಬನನ್ನು ತಿಳಿಸುತ್ತದೆ.[45] ಆತ ರುದ್ರಾಕ್ಷಿ ಒಡೆಯನಿಗೆ ತೋಟವೊಂದನ್ನು ದಾನ ನೀಡಿರುವುದನ್ನು ವ್ಯಕ್ತಪಡಿಸುತ್ತದೆ. ವೀರಸೋಮರಾಯನ ಮಗ ದೇವರಾಜಒಡೆಯ ಉಮ್ಮತ್ತೂರು ಅರಸರ ಅನೇಕ ಬಿರುದುಗಳಲ್ಲಿ ಗಜಬೇಟೆಕಾರ ಎಂಬುದು ಸಹ ಒಂದಾಗಿದೆ. ಈ ಶಾಸನದ ಗದ್ಯಭಾಗ ಈ ರೀತಿ ಕಾಣಬರುತ್ತದೆ. ಶ್ರೀಮನ್ಮಹಾಮಂಡಲೇಶ್ವರಂ ಶ್ರೀ ಗಜಬೇಟೆಕಾರ ಸೋಮರಾಯ ವಡೆಯರ ಕುಮಾರ ದೇವರಾಜ ಒಡೆಯರು ಸುಜನ ಸುದ್ಧ ಶಿವಾಚಾರ ಸಂಪಂನಮಪ್ಪ ನೆಂದು ಶ್ರೀ ಗುರು ಶ್ರೀರುದ್ರಾಕ್ಷಿ ಒಡೆಯರ ದಿವ್ಯ ಶ್ರೀಪಾದಪದ್ಮಂಗಳಿಗೆ ಶರಣಾರ್ತಿ ಮಾಡಿ ನಮಗೆ ರಾಯರ ಊರ ಬಳಿಯಲ್ಲಿ ಕೊಟ್ಟ ಕುಡುಗನಾಡ ತೆರಕಣಾಂಬಿಯ ಸ್ಥಳದ ಗೊಂದಿಗನಹಳ್ಳಿಯ ಗ್ರಾಮದ ಚತುಸ್ಸೀಮೆಯನ್ನು ದಾನ ಧಾರಾಪೂರ್ವಕಂ ಮಾಡಿ ಆ ಗ್ರಾಮಕ್ಕೆ ಸಲ್ಲುವ ಗದ್ದೆ ಬೆದ್ದಲು ಕಾವಲು ಸುಂಕ ಅನಾವು ಅಂದಜಾವಿಕೆ ಮಾದುರುಕೆ ಗಣಾಚಾರ ಏನುಳಿ ಸರ್ವಸ್ವಾಮ್ಯವನ್ನು ಆ ಚಂದ್ರಾರ್ಕ ಸ್ಥಾ (ಯಿ) ಯಾಗಿ ಅನುಭವಿಸುವಿರಿ ಎಂದು ಕೊಟ್ಟ ಶ್ರೀಲಿಂಗ ಮುದ್ರೆ

ಶಿಲಾಶಾಸನ ಇವುಗಳಲ್ಲಿ ಕೆಲವು ತೆರಿಗೆಗಳು ಏನೆಂಬುದನ್ನು ಇನ್ನೂ ಸಹ ನಿಖರವಾಗಿ ತಿಳಿಯುವುದಕ್ಕೆ ಸಾಧ್ಯವಾಗಿಲ್ಲ.

ಶೆಟ್ಟಿಹಳ್ಳಿಯಲ್ಲಿರುವ 1488ರ ಶಾಸನವು ಕುತೂಹಲಕರವಾಗಿದೆ. ಮಹಾಮಂಡಲೇಶ್ವರ, ಫೇಣಂಕಚಕ್ರೇಶ್ವರ, ಅರಸಂಕಸೂನೆಗಾರ, ಪೆಸಾಳಿಯನುಮ, ಜವಾದಿಕೋಳಾಹಳ, ಗಜಬೇಟೆಗಾರ ಎಂಬ ಬಿರುದುಗಳನ್ನು ಕಾಣಬಹುದಾಗಿದೆ.[46]

ಹೊಯ್ಸಳ ದೇಶದ ಕೊಮಾರ ಮಠದ ತೆರಕಣಾಂಬಿ ಪಟ್ಟಣದ ಆಗ್ನೇಯ ಭಾಗದಲ್ಲಿ ಪ್ರಸಿದ್ಧವಾಗಿದ್ದ ಸೋಮಯ್ಯದೇವರ ಪೂಜೆಪುನಸ್ಕಾರಕ್ಕೆ ಕೇತೆದಣ್ಣಾಯಕರು ಶೆಟ್ಟಿಹಳ್ಳಿ ಗ್ರಾಮವನ್ನು ದಾನ ನೀಡಿದ್ದುದನ್ನು ತಿಳಿಸುವ ಶಾಸನ ಕಲ್ಲು ಶಿಥಿಲವಾಗಿರುವುದನ್ನು ಮತ್ತೆ ಶಾಸನ ಬರೆಯಿಸಿ ಊರ ಮುಂದೆ ನಿಲ್ಲಿಸಿದೆ. ಪೂರ್ವದ ದತ್ತಿಯನ್ನು ಪುನರೂರ್ಜಿತಗೊಳಿಸಿರುವುದನ್ನು ಈ ಶಾಸನ ತಿಳಿಸುತ್ತದೆ. ವೀರನಂಜರಾಯರನ ಮನೆಯ ಮಹಾಪ್ರಧಾನ ದೇವರಾಯನವರ ಮಕ್ಕಳು ಪಾರ್ವತಮ್ಮ ತ್ರಿಯಂಬಕ ದೇವರಿಗೆ ದಾನ ನೀಡಿದ ವಿಚಾರ ತಿಳಿದುಬರುತ್ತದೆ.

ಕರಕಲಮಾದಹಳ್ಳಿಯ ಊರ ಮುಂದೆ ಇರುವ ಶಾಸನವು ಉಮ್ಮತ್ತೂರು ಚಂನನಂಜರಾಯ ಒಡೆಯರು ಶಿವನಸಮುದ್ರ ಉಭಯ ಕಾವೇರಿ ಮಧ್ಯದಲ್ಲಿ ನೆಲೆಸಿದ ತಮ್ಮ ಕುಲಸ್ವಾಮಿ ಸೋಮೇಶ್ವರ ಸನ್ನಿಧಿಯಲ್ಲಿ ಯಜುಃಶಾಖೆಯ ಆಪಸ್ತಂಭ ಸೂತ್ರದ ಕಾಶ್ಯಪಗೋತ್ರದ ಕಾಂಚಿಯ ಸಿಂಗಾವರ್ಯರ ಮಗ ನರಸಿಂಹಭಟ್ಟ ಉಪಾಧ್ಯಾಯರಿಗೆ ಮಾದಹಳ್ಳಿಯನ್ನು ಅಗ್ರಹಾರವಾಗಿ ಮಾಡಿ ಚಂನನಂಜರಾಯಪುರವೆಂದು ಹೆಸರಿಟ್ಟು, ಧಾರಾಪೂರ್ವಕವಾಗಿ ನೀಡಿದ ವಿಚಾರವನ್ನು ತಿಳಿಸುತ್ತದೆ.

ಉಮ್ಮತ್ತೂರು ವೀರರಾಜರ ಪಿಲ್ಲಹಳ್ಳಿ ದಾನಶಾಸನ ತಾಮ್ರದ ಒಂದು ಹಲಗೆಯ ಎರಡೂ ಕಡೆಗಳಲ್ಲಿ ಬರೆಸಲಾಗಿದೆ. ಮೇಲ್ಭಾಗದಲ್ಲಿ ಶ್ರೀ ವೈಷ್ಣವರ ಚಿಹ್ನೆಯಾದ ವಡಗಲೈ ನಾಮವಿದೆ. ಅಕ್ಕಪಕ್ಕಗಳಲ್ಲಿ ಶಂಖ ಚಕ್ರಗಳನ್ನು ಚಿತ್ರಿಸಿದೆ. ನಾಗರಾಕ್ಷರದ ಈ ಕನ್ನಡ ಶಾಸನದಲ್ಲಿ ಸಂಖ್ಯೆಗಳು ಮಾತ್ರ ಕನ್ನಡದಲ್ಲಿದೆ. ಅಲ್ಲಲ್ಲಿ ಸಂಸ್ಕೃತ ಭಾಷೆಯ ವೃತ್ತಗಳೂ ಇವೆ. ಮೈಸೂರು ಒಡೆಯರ್‌ರವರು ಮೊದಲು ವಿಜಯನಗರದ ಸಾಮಂತರಾಗಿ ಈ ಭಾಗವನ್ನು ಆಡಳಿತ ನಡೆಸಿರುತ್ತಾರೆ. ವಿಜಯನಗರದ ಪತನಾನಂತರ ಸ್ವತಂತ್ರರಾಗಿ ಆಳಿದರು. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮೈಸೂರು ಒಡೆಯರಿಗೆ ಸಂಬಂಧಿಸಿದ ಹಾಗೆ ಕೆಲವೇ ಕೆಲವು ಶಾಸನಗಳು ಇವೆ. ಗುಂಡ್ಲುಪೇಟೆಯ ವಿಜಯನಾರಾಯಣಸ್ವಾಮಿ ದೇವಾಲಯದ ಪರವಾಸುದೇವರ ಭಿನ್ನವಾಗಿರುವ ಉತ್ಸವಮೂರ್ತಿ ಶಿಲ್ಪದ ಪೀಠದ ಮೇಲೆ ಶ್ರೀ ದೊಡ್ಡದೇವರಾಜವರದ ಎಂಬ

ಶಾಸನವಿದೆ. ಮಾದಾಪಟ್ಟಣದಲ್ಲಿ ಮಲ್ಲಾಜಮ್ಮನ ವಶದಲ್ಲಿದ್ದ ತಾಮ್ರಶಾಸನ ಗಮನಾರ್ಹವಾದುದು. ಒಂದು ಹಲಗೆಯ ಒಂದು ಮುಖದಲ್ಲಿ ಕನ್ನಡ ಭಾಷೆಯ ಶಾಸನವಿದೆ. ಅದರ ತಮಿಳು ಭಾಷಾಂತರ ಇನ್ನೊಂದು ಮುಖದಲ್ಲಿ ಕೆತ್ತಿದೆ. ಮೈಸೂರು ಒಡೆಯರ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸೇರಿರುವ ಈ ಶಾಸನವು ಹಲವಾರು ಪದಾರ್ಥಗಳ ಮೇಲೆ ವಿಧಿಸಿದ ಮಗಮ ಸುಂಕವನ್ನು ಅನ್ನಸತ್ರವೊಂದರ ನಿರ್ವಹಣೆಗೆ ಐವತ್ತಾರು ದೇಶಗಳ ಪಲರು ಪಟ್ಟಕಾರರು ನೀಡಿದುದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಗುಂಡ್ಲುಪೇಟೆ ಎಂಬ ಹೆಸರು ಕಂಡುಬರುತ್ತದೆ. ಉಳಿದೆಲ್ಲ ಶಾಸನಗಳಲ್ಲಿ ವಿಜಯಪುರ ಅಥವಾ ಪ್ರಸನ್ನ ವಿಜಯಪುರ ಅಗ್ರಹಾರ ಎಂಬುದಾಗಿ ಈ ಸ್ಥಳ ಉಲ್ಲೇಖಗೊಂಡಿದೆ. ಕೆಲಸೂರಿನ ಬಸದಿಯ ಗೋಡೆಯ ಮೇಲಿರುವ ಸಂಸ್ಕೃತ ಶಾಸನ ಮುಮ್ಮಡಿ ಕೃಷ್ಣರಾಜ ವೊಡೆಯರ ಕಾಲಕ್ಕೆ ಸೇರುತ್ತದೆ. ಈ ಅರಸ ಕೆಲಸೂರಿನ ಚೈತ್ಯಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಅಲ್ಲಿ ಚಂದ್ರಪ್ರಭ ತೀರ್ಥಂಕರ, ವಿಜಯ ಹಾಗೂ ಜ್ವಾಲಿನೀ ದೇವತೆಗಳ ಶಿಲ್ಪಗಳನ್ನು ಹೊಸದಾಗಿ ಪ್ರತಿಷ್ಠಾಪಿಸಲಾಗಿದೆ. ಈಗ ಈ ಜಿನಾಲಯ ಸುಸ್ಥಿತಿಯಲ್ಲಿದೆ.

.ಕ್ರಿ.ಶ.1448ರ ತ್ರಿಯಂಬಕಪುರದ ಶಾಸನ ಕವಿ ಯರ್ಜುವೇದದ ಕಾಶ್ಯಪಗೋತ್ರದ ವೇದಕೇಸರಿ ಭಟ್ಟನ ಮಗನಾದ ನರಸಿಂಹ ಶಾಸನವನ್ನು ರಚಿಸಿದುದಕ್ಕಾಗಿ ಈತನಿಗೆ ಒಂದು ವೃತ್ತಿ ಭೂಮಿಯನ್ನು ಕೊಡಲಾಯಿತು.

ಶಾಸನಾಚಾರ್ಯ, ವರದಾಚಾರ್ಯರ ಮಗನಾದ ಶ್ರೀಗಿರಿ ಸಕಲಾಚಾರ್ಯನ ವಿಚಾರ ಇದೆ.[47] ಕ್ರಿ.ಶ.1521ರ ತಾಮ್ರಶಾಸನಗಳ ಕರ್ತ ಸಭಾಪತಿ, ಈತನು ವಿಜಯನಗರದ ರಾಜ ಕೃಷ್ಣದೇವರಾಯನ ಆಸ್ಥಾನ ಕವಿಯಾಗಿದ್ದು, ಅಚ್ಯುತರಾಯನ ಕಾಲದಲ್ಲೂ ಅದೇ ಸ್ಥಾನದಲ್ಲಿ ಮುಂದುವರೆದಂತೆ ಕಂಡುಬರುತ್ತದೆ.[48]

ಕ್ರಿ.ಶ.1540 ಲೊಕ್ಕರೆ ಶಿಲಾಶಾಸನದ ಪ್ರಕಾರ ಅಪ್ಪಾಜಿ ಚೋವೀಸನ ಬರಪ ಎಂದಿದೆ.[49] ಅನೇಕ ತೆರಿಗೆಗಳ ವಿಚಾರಗಳು ಕೆಲವೊಂದು ಶಾಸನಗಳಲ್ಲಿ ಕಂಡುಬರುತ್ತವೆ. ಕೆಲವು ತೆರಿಗೆಗಳ ಅರ್ಥಸರಿಯಾಗಿ ತಿಳಿಯುವುದಿಲ್ಲ. ಕೋಜುಗಳ ತೆರಿಗೆ ಏನು ಎಂಬುದು ಸ್ಪಷ್ಟವಾಗಿಲ್ಲ. ಇದನ್ನು ತ್ರಿಯಂಬಕಪುರದ ಶಾಸನದಲ್ಲಿ ಕಾಣಬಹುದಾಗಿದೆ. ಗಣಾಚಾರಿದೇವಿಗೆ ಎಂಬುದು ವೀರಶೈವ ಯತಿಗಳು ಕೊಡಬೇಕಾದ ತೆರಿಗೆಯೇ ಕ್ರಿ.ಶ.1574ರ ವಿಜಯಪುರದ ವಿಜಯನಾರಾಯಣ ದೇವಾಲಯದ ಪಾರುಪತ್ಯಗಾರನು ಅಕ್ರಮವಾಗಿ ತೆರಿಗೆಯನ್ನು ಪಡೆಯುತ್ತಿದ್ದನೆಂದು ತಿಳಿದುಬರುತ್ತದೆ. ಇದನ್ನು ತಿಳಿದ ವಿಜಯಪುರದ ಸೀಮೆಯ ಅಧಿಕಾರಿ ಈ ಅಕ್ರಮವನ್ನು ಸರಿಪಡಿಸಿದನೆಂದೂ ಸಹ ತಿಳಿದುಬರುತ್ತದೆ. ಮಸಹಳ್ಳಿ ಶಾಸನದಲ್ಲಿ ಹಲಗೆ ವೊಡೆಯನಿಗೆ

ಮಸಹಳ್ಳಿ ಮತ್ತು ಅದರ ಎರಡು ಉಪಗ್ರಾಮಗಳನ್ನು ಸುತ್ತಿ ಗುತ್ತಗೆಯಾಗಿ ನೀಡಿದ ವಿಚಾರ ತಿಳಿದುಬರುತ್ತದೆ.[50] ಇದರ ಕಾಲ ಕ್ರಿ.ಶ.1546[51] ಬೆಳಚಲವಾಡಿ ಶಾಸನದಲ್ಲಿ ಕ್ರಿ.ಶ.1549ರಲ್ಲಿ ಇದೇ ಹಲಗೆವೊಡೆಯನಿಗೆ ಗೋವಿಂದರಾಜ ಭೂಮಿಯನ್ನು ಗುತ್ತಿಗೆಗೆ ಕೊಟ್ಟಿದ್ದನೆಂದು ತಿಳಿದುಬರುತ್ತದೆ.[52] ವೀರನಪುರದ ಶಾಸನದಲ್ಲಿ ಕೊಣನೂರಿನ ಬಸವೈಯನ ಮಗನಾದ ವೀರೈಯನಿಗೆ ಪುರ ಗ್ರಾಮವನ್ನು ಗುತ್ತಿಗೆಗೆ ಕೊಡಲಾಯಿತೆಂದು ತಿಳಿದುಬರುತ್ತದೆ. ಕ್ರಿ.ಶ.1535ರ ತ್ರಿಯಂಬಕಪುರದ ಶಾಸನವನ್ನು ಕ್ರಮಶಾಸನವೆಂದು ಕರೆಯಲಾಗಿದೆ.[53] ಗುಂಡ್ಲುಪೇಟೆಯ ಶಾಸನದಲ್ಲಿ ರಾಮನಾಥ ದೇವಾಲಯದ ಭಂಡಾರದ ಹಣವನ್ನು ಬಡ್ಡಿಯ ಮೇಲೆ ಸಾಲವಾಗಿ ಕೊಡುವುದರ ಮೂಲಕ ಆ ಭಂಡಾರವನ್ನು ಲಾಭಕರವಾಗಿ ಉಪಯೋಗಿಸುವ ಅಧಿಕಾರ ಮಹಾಜನರಿಗೆ ಇದ್ದಿತೆಂದು ತಿಳಿದುಬರುತ್ತದೆ. ಕ್ರಿ.ಶ.1338ರ ಬಲ್ಲಹಳ್ಳಿ ಶಾಸನ ಕೇತೆಯದಣಾಯಕನ ಮಗನ ನಾಮಕರಣವನ್ನು ನಡೆಸಿಕೊಟ್ಟಿರುವುದಾಗಿ ನಂಬಿ (ಅರ್ಚಕ)ನೊಬ್ಬನು ಭೂಮಿಯನ್ನು ಪಡೆದ ವಿಚಾರ ಇದೆ.

ಕ್ರಿ.ಶ.1372ರ ಗುಂಡ್ಲುಪೇಟೆಯ ಶಾಸನದಲ್ಲಿ ಪ್ರಸನ್ನ ವಿಜಯಪುರದ ಅಗ್ರಹಾರದ ಮಹಾಜನಗಳು ರಾಮನಾಥ ದೇವಾಲಯದ ಪಾತ್ರ ಭೋಗಕ್ಕಾಗಿ 30 ಗದ್ಯಾಣಗಳನ್ನು ದಾನ ನೀಡಿದ ವಿಚಾರ ತಿಳಿದುಬರುತ್ತದೆ.[54] ಇದೇ ಊರಿನ ಇದೇ ಕಾಲದ ಮತ್ತೊಂದು ಶಾಸನವು ನಾಗವೈಯ ಮಗನಾದ ಹಿರಿಯ ರಾಮಣ್ಣನು ಕೇತವ್ವೆಯನ್ನು ದೇವಾಲಯದ ಪಾತ್ರವೆಂದು ರಾಮನಾಥ ದೇವರಿಗೆ ಪಾತ್ರಭೋಗಕ್ಕಾಗಿ ಒಪ್ಪಿಸಿದ ವಿಚಾರ ತಿಳಿದುಬರುತ್ತದೆ.

1. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಒಟ್ಟು 224 ಶಾಸನಗಳಿವೆ. (ಕೆಲವೊಂದು ಶಾಸನಗಳು ಇತ್ತೀಚೆಗೆ ಪತ್ತೆಯಾಗಿದೆ. ಅದರೆ ಎ.ಕ.ಸಂಪುಟ-3 ರ ಪ್ರಕಾರ 224 ಶಾಸನ)[55]
2. ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದಂತೆ ಗಂಗರ ಕಾಲದ ಶಾಸನಗಳ ಸಂಖ್ಯೆ ಒಟ್ಟು 10 ಶಾಸನಗಳಿವೆ.

    ಶ್ರೀಪುರುಷನ ಕಾಲಕ್ಕೆ 6 ಶಾಸನ

    2ನೇ ರಾಚಮಲ್ಲನ ಕಾಲಕ್ಕೆ 1

    ಪೆರ್ಮಾಡಿ – 1

    4ನೇ ರಾಚಮಲ್ಲ ಕಾಲಕ್ಕೆ –2

3. ಗುಂಡ್ಲುಪೇಟೆಯಲ್ಲಿ ಚೋಳರ ಕಾಲದ ಶಾಸನಗಳು 2 ಇವೆ.

    1ನೇ ರಾಜಾಧಿರಾಜ – 1

    2ನೇ ಕುಲೋತ್ತುಂಗ ಚೋಳ – 1

4. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹೊಯ್ಸಳರ ಕಾಲಕ್ಕೆ ಸೇರಿದ ಶಾಸನಗಳು 21 ಇದೆ.

1ನೇ ನರಸಿಂಹ – 3

2ನೇ ಬಲ್ಲಾಳ – 2

2ನೇ ನರಸಿಂಹ – 3

ಸೋಮೇಶ್ವರ – 4

3ನೇ ನರಸಿಂಹ – 1

3ನೇ ಬಲ್ಲಾಳ – 8

5. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವಿಜಯನಗರ ಅರಸರ ಕಾಲಕ್ಕೆ ಸೇರಿದ ಶಾಸನಗಳು 32 ಇದೆ.

1ನೇ ಬುಕ್ಕರಾಯ – 5

3ನೇ ಹರಿಹರ – 2

ಮಲ್ಲಿಕಾರ್ಜುನ – 1

ವೀರನರಸಿಂಹ – 1

ಕೃಷ್ಣದೇವರಾಯ – 7

ಅಚ್ಚುತರಾಯ – 2

ಸದಾಶಿವರಾಯ – 9

2ನೇ ವೆಂಕಟಪತಿ – 1

4ನೇ ಶ್ರೀರಂಗರಾಯ – 1

ವೀರವೆಂಕಟಪತಿ ರಾಯ – 3

6. ಉಮ್ಮತ್ತೂರು ಪಾಳೇಗಾರ ಕಾಲದ ಶಾಸನಗಳು 17 ಇವೆ.

ವೀರ ಚಿಕ್ಕಣ್ಣ – 1

ವೀರಸೋಮರಾಯ – 1

ದೇವರಾಯ ವೊಡೆಯ –2

ವೀರನಂಜರಾಯ ವೊಡೆಯ – 8

ವೀರ ಚಿಕ್ಕರಾಯ – 1

ಚಿಕ್ಕಮಲೆಯ ವೊಡೆಯ –1

ವೀರ ದೇವರಾಜವೊಡೆಯ – 2

ವೀರರಾಜ ವೊಡೆಯ – 1

7. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮೈಸೂರು ಒಡೆಯರ ಕಾಲದ ಶಾಸನಗಳು 7 ಇವೆ.

ಕಂಠೀರವ ನರಸರಾಜ – 1

ಚಿಕ್ಕದೇವರಾಜ – 3

2ನೇ ಕೃಷ್ಣರಾಜ – 1

3ನೇ ಕೃಷ್ಣರಾಜ – 2

ಗುಂಡ್ಲುಪೇಟೆ ತಾಲ್ಲೂಕಿನ 224 ಶಾಸನಗಳಲ್ಲಿ ಸುಮಾರು 89 ಶಾಸನಗಳು ನೇರ ರಾಜವಂಶ ಹಾಗೂ ರಾಜರ ಹೆಸರಿನಿಂದ ವ್ಯಕ್ತವಾಗುತ್ತದೆ. ಉಳಿದ 135 ಶಾಸನಗಳು ನೇರವಾಗಿ ರಾಜರನ್ನು ವ್ಯಕ್ತಪಡಿಸಿಲ್ಲ.[55]

ಹೀಗೆ ಗುಂಡ್ಲುಪೇಟೆಯ ಕೆಲವೊಂದು ಪ್ರಮುಖ ಶಾಸನಗಳ ಹಿನ್ನೆಲೆಯಲ್ಲಿ ಅನೇಕ ರೀತಿಯ ಕೊಡುಗೆಗಳನ್ನು ನೀಡಿರುವುದು ತಿಳಿದುಬಂದಿದೆ.

ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದಂತೆ ಎಫಿಗ್ರಾಫಿಯ ಕರ್ನಾಟಕ ಸಂಪುಟ–3 ರಲ್ಲಿ ಸುಮಾರು 224 ಶಾಸನಗಳಿವೆ. ಅವುಗಳಲ್ಲಿ ಈ ಕೆಳಕಂಡಂತೆ ಆಯಾ ಧರ್ಮಕ್ಕೆ ಪೂರಕವಾಗಿ ಶಾಸನಗಳನ್ನು ಪಟ್ಟಿ ಮಾಡಲಾಗಿದೆ.

1. ಶೈವಧರ್ಮಕ್ಕೆ ಸೇರಿದಂತೆ 29 ಶಾಸನಗಳಿವೆ.
2. ವೈಷ್ಣವ ಧರ್ಮಕ್ಕೆ ಪೂರಕವಾಗಿ 36 ಶಾಸನಗಳಿವೆ.
3. ಜೈನ ಧರ್ಮಕ್ಕೆ ಪೂರಕವಾಗಿ 12 ಶಾಸನಗಳಿವೆ.
4. ವೀರಶೈವ ಧರ್ಮಕ್ಕೆ ಪೂರಕವಾಗಿ 14 ಶಾಸನಗಳಿವೆ.
5. ಬಸವೇಶ್ವರ ವೀರಶೈವ ಧರ್ಮಕ್ಕೆ ಪೂರಕವಾಗಿ 13 ಶಾಸನಗಳಿವೆ.
6. ಮಾರಿಗುಡಿ ಮುಂದೆ ಹಾಗೂ ಶಕ್ತಿ ಪ್ರಧಾನವಾದ ಸ್ತ್ರೀ ದೇವತೆ ಪೂರಕವಾಗಿ 17 ಶಾಸನಗಳಿವೆ.
7. ವೀರಗಲ್ಲು ಶಾಸನಗಳಿಗೆ ಪೂರಕವಾಗಿ 13 ಶಾಸನಗಳಿವೆ.
8. ಬಿರುದು ಬಾವಲಿಗಳನ್ನು ಕುರಿತು ತಿಳಿಸುವ ಶಾಸನ ಸಂಖ್ಯೆ–26.

9. ತಾಮ್ರ ಶಾಸನಗಳು 10 ಇವೆ.

10. ದಾನಕ್ಕೆ ಪೂರಕವಾಗಿ 27 ಶಾಸನಗಳಿವೆ.

11. ಧಾರ್ಮಿಕ ಹಿನ್ನೆಲೆಯನ್ನು ಹೊಂದಿರುವ 67 ಶಾಸನಗಳಿವೆ.

12. ತಮಿಳು ಲಿಪಿಯನ್ನು ಹೊಂದಿರುವ 9 ಶಾಸನಗಳಿವೆ.

13. ಸಂಸ್ಕೃತಿ ವಿಧಿಶಾಸನಗಳು 15 ಇವೆ.

14. ನಾಗರಿ ಲಿಪಿಶಾಸನಗಳು 4 ಇವೆ.

15. ಕನ್ನಡ ಲಿಪಿ ಶಾಸನಗಳು 214 ಇವೆ.

**ಶೈವ ದೇವಾಲಯಗಳ ಶಾಸನಗಳು**

ಶಾಸನ ಸಂಖ್ಯೆ – 9,10,11,12,13,14,15,16,30,31,32,39,47,55,56,57,62,75,81,82, 83,95,114,125,128,153,155,181,200

**ವೈಷ್ಣವ ಶಾಸನಗಳು**

ಶಾಸನಗಳ ಸಂಖ್ಯೆ- 5,6,7,8,35,52,53,72,89,93,94,113,115,116,117,117,118,119, 121,161,162,163,164,165,166,167,174,193,194,195,196,197,198,199,213,223.

**ಜೈನಧರ್ಮ**

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದಂತೆ,

ಶಾಸನಗಳ ಸಂಖ್ಯೆ – 3,4,92,100,101,102,103,203,204,205,218,123

**ವೀರಶೈವ ಶಾಸನ**

ಶಾಸನ ಸಂಖ್ಯೆ-33,75,76,77,87,151,169,176,177,182,185,186,187,202.

**ಬಸವನಗುಡಿ**

ಶಾಸನ ಸಂಖ್ಯೆ-27,69,77,79,84,85,97,98,130,176,177,190,216

**ಮಾರಿ ದೇವಾಲಯ ಮುಂದೆ**

ಶಾಸನ ಸಂಖ್ಯೆ- 24,29,54,58,67,86,93,105,106,107,112,156,172,178,191, 217,224

**ವೀರಗಲ್ಲು ಶಾಸನ**

ಶಾಸನ ಸಂಖ್ಯೆ-36,37,59,88,90,91,108,109,188,206,209,219,220

**ಬಿರುದು ಬಾವಲಿ ಶಾಸನಗಳು**

ಶಾಸನ ಸಂಖ್ಯೆ-2,3,18,25,27,28,33,34,49,70,75,80,93,109,111,115,119,120,121, 127,134,135,146,157,168,178

**ತಾಮ್ರ ಶಾಸನಗಳು**

ಶಾಸನ ಸಂಖ್ಯೆ-1,2,61,78,80,113,15,147,149,150,151

**ದಾನಶಾಸನಗಳು**

ಶಾಸನ ಸಂಖ್ಯೆ-3,4,18,19,20,22,23,24,25,26,28,34,51,55,85,86,90,113,114, 115,129,136,137,158,159,160,168

**ಧಾರ್ಮಿಕ ಶಾಸನ**

ಶಾಸನ ಸಂಖ್ಯೆ-38,40,41,42,43,44,45,46,48,50,60,63,64,65,66,68,74,79, 92,99,113,115,119,120,121,122,124,125,126,127,129,131,133,134,135,136, 137, 146,147,148,149,150,151,152,154,156,157,170,171,172,173,174,175,178, 179,181,183,184,201,202,207,210,211,212,214,215

**ತಮಿಳು ಲಿಪಿ ಶಾಸನಗಳು**

ಶಾಸನ ಸಂಖ್ಯೆ-70,73,102,111,153,154,187,188,198

**ಸಂಸ್ಕೃತ ಶಾಸನಗಳು**

ಶಾಸನ ಸಂಖ್ಯೆ- 1,11,20,100,150

**ನಾಗರ ಲಿಪಿಯನ್ನು ಹೊಂದಿರುವ ಶಾಸನಗಳು**

ಶಾಸನ ಸಂಖ್ಯೆ- 19,20,147,150

**ಕನ್ನಡ ಲಿಪಿ ಶಾಸನಗಳು**

ಶಾಸನ ಸಂಖ್ಯೆ- 1,2,3,4,5,6,7,8,9,10,11,12,13,14,15,16,17,18,19,20,21,22,23,24, 25,26,27,28,29,30,31,33,34,35,36,37,38,40,41,42,43,44,45,46,47,48, 49,50,51,52,53,54,55,56,57,58,59,60,61,62,63,64,65,66,67,68,69,70, 71,72,74,75,76,77,78,79,80,81,82,83,84,85,86,87,89,90,91,92,93,94, 95,96,97,98,99,100,101,103,104,105,106,107,108,109,110,112,113,114,115,116, 117,118,119,120,121,122,123,124,125,126,127,128,129,130,131,132,133,134,135,1 36,137,138,139,140,141,142,143,144,145,146,147,148,149,151,152,155,156, 157,158,159,160,161,162,163,164,165,166,167,168,169,170,171,172,173,174, 175,176,177,178,179,180,181,182,183,184,185,186,188,189,190,191,192,193, 194,195,196,197,198,199,200,201,202,203,204,205,206,207,208,209, 210,211,212,213,214,215,216,217,218,219,220,221,222,223,224.

## ಅಡಿ ಟಿಪ್ಪಣಿಗಳು


1. Percy Brown – Indian Architecture – D.B.Taraporevala Sons & Co. Private Ltd. 210. Dr. Dadabhai Naoroji Road, Fort, Bombay, 1959, Pg No.1-4.
2. ಅದೇ
3. ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ವಿವಿ 2009, ಪು.1071–1093.
4. ಅದೇ ಪುಟ ಸಂಖ್ಯೆ–257.
5. ಎಫಿಗ್ರಾಫಿಯ ಕರ್ನಾಟಕ ಸಂಪುಟ–8, ಶಾಸನ ಸಂಖ್ಯೆ–176.
6. ಕನ್ನಡ ವಿಷಯ ವಿಶ್ವಕೋಶ, – ಇತಿಹಾಸ ಮತ್ತು ಪುರಾತತ್ವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ 2009, ಪು.193–194.
7. ಕೃಷ್ಣಮೂರ್ತಿ,ಎಂ.ಎಸ್. – ತಲಕಾಡ್ ಎಕ್ಸ್‌ವೇಷನ್ಸ್– ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮೈಸೂರು ವಿವಿ, ಮೈಸೂರು 1996, ಪು.71.
8. ಐ.ಕೆ.ಶರ್ಮ – ದಿ ಟೆಂಪಲ್ಸ್ ಆಪ್ ದಿ ಗಂಗಾಸ್ ಆಫ್ ಕರ್ನಾಟಕ– ನವದೆಹಲಿ–1992.
9. ಟಿ.ವಿ.ಮಹಾಲಿಂಗಂ, – ದಿ ಸೌತ್ ಇಂಡಿಯನ್ ಟೆಂಪಲ್ ಕಾಂಪ್ಲೆಕ್ಸ್, ಪ್ರಕಟಣೆ ಧಾರವಾಡ–1970, ಪು.50.
10. ಡಾ.ಜಿ.ಮನೋಜ್, – ದೇವಾಲಯ ವಾಸ್ತು ವಿಜ್ಞಾನ, – ಸುಭೋಧಿನಿ ಬುಕ್ ಪಬ್ಲಿಷರ್ಸ್ ಮತ್ತು ನಾಲೆಡ್ಜ್ ಅಕಾಡೆಮಿ, ಚಿತ್ರದುರ್ಗ 2015, ಪು.3.
11. ಎಸ್.ಶೆಟ್ಟರ್– ಹೊಯ್ಸಳರ ದೇವಾಲಯಗಳು, ಸಂಪುಟ–1, ಮತ್ತು 2.
12. ಬಾಲಸುಬ್ರಹ್ಮಣ್ಯಂ ಮತ್ತು ವಾಸುದೇವನ್ ಸಿ.ಎಸ್., – ಕರ್ನಾಟಕದ ದೇವಾಲಯಗಳ ಕೋಶ, ಪ್ರಸಾರಾಂಗ, ಕನ್ನಡ ವಿವಿ ಹಂಪಿ, 2007.
13. ಎಚ್ಚೆಸ್ಕೆ (ಸಂ) (ಸಂಪಾದಕರು) – ಅವಲೋಕನ ಕರ್ನಾಟಕ ಪರಂಪರೆಯ ಸಮೀಕ್ಷೆ, ಪ್ರಕಾಶನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು, 1985, ಪು.142.
14. ಡಾ.ಚಿ.ಸಿ.ನಿಂಗಣ್ಣ – ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾವರಿ, ಗುಲಬರ್ಗಾ–2008, ಪು.324–330
15. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–88

16. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–207

17. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–57

18. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–219

19. ಎಂ.ಎ.ಆರ್.–1930, ಪು.31

20. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–48

21. ಎಂ.ಎ.ಆರ್.–1935, ಪು.17

22. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–56

23. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–102

24. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–103

25. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–215

26. ಎಂ.ಎ.ಆರ್.–1930, ಪು.34

27. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–64

28. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–3

29. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–89

30. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–198

31. ಎಂ.ಎ.ಆರ್.–1930, ಪು.26

32. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–34

33. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–174

34. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–18

35. ಎಂ.ಎ.ಆರ್.–1930, ಪು.20

36. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–19

37. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–1

38. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–119

39. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–23

40. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–85

41. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–77

42. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–157, 158

43. ಎ.ಕ.ಸಂಪುಟ–3 ಗುಂಡ್ಲುಪೇಟೆ ಶಾಸನ ಸಂಖ್ಯೆ–33

44. ಎ.ಕ.ಸಂಪುಟ-3 ಗುಂಡ್ಲುಪೇಟೆ ಶಾಸನ ಸಂಖ್ಯೆ-24

45. ಎಂ.ಎ.ಆರ್.-1930, ಪು.29

46. ಎ.ಕ.ಸಂಪುಟ-3 ಗುಂಡ್ಲುಪೇಟೆ ಶಾಸನ ಸಂಖ್ಯೆ-178

47. ಎ.ಕ.ಸಂಪುಟ-3 ಗುಂಡ್ಲುಪೇಟೆ ಶಾಸನ ಸಂಖ್ಯೆ-147

48. ಎ.ಕ.ಸಂಪುಟ-3 ಗುಂಡ್ಲುಪೇಟೆ ಶಾಸನ ಸಂಖ್ಯೆ-150

49. ಎ.ಕ.ಸಂಪುಟ-3 ಗುಂಡ್ಲುಪೇಟೆ ಶಾಸನ ಸಂಖ್ಯೆ-186

50. ಎ.ಕ.ಸಂಪುಟ-3 ಗುಂಡ್ಲುಪೇಟೆ ಶಾಸನ ಸಂಖ್ಯೆ-23

51. ಎಂ.ಎ.ಆರ್.-1930, ಪು.21

52. ಎ.ಕ.ಸಂಪುಟ-3 ಗುಂಡ್ಲುಪೇಟೆ ಶಾಸನ ಸಂಖ್ಯೆ-46

53. ಎ.ಕ.ಸಂಪುಟ-3 ಗುಂಡ್ಲುಪೇಟೆ ಶಾಸನ ಸಂಖ್ಯೆ-137

54. ಎ.ಕ.ಸಂಪುಟ-3 ಗುಂಡ್ಲುಪೇಟೆ ಶಾಸನ ಸಂಖ್ಯೆ-17

55. ಎ.ಕ.ಸಂಪುಟ-3 ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-1974

# ಅಧ್ಯಾಯ–3

# ಗುಂಡ್ಲುಪೇಟೆ ತಾಲ್ಲೂಕಿನ ಶೈವ ದೇವಾಲಯಗಳು

## 3.1. ಶೈವಧರ್ಮದ ಬೆಳವಣಿಗೆ

ಶೈವ ಪರಂಪರೆಯ ಉಗಮ ಮತ್ತು ಬೆಳವಣಿಗೆಯೂ ಕೂಡ ಶ್ರುತಿ, ಸ್ಮೃತಿ, ಪುರಾಣ, ಆಗಮ, ಉಪನಿಷತ್ತುಗಳ, ಆಧಾರದ ಮೇಲೆಯೇ ಆದುದಾಗಿದೆ ಎಂಬುದನ್ನು ಮರೆಯಬಾರದು. ವೇದಗಳಲ್ಲಿ ಒಂದಾದ ಯಜುರ್ವೇದದಲ್ಲಿ ಬರುವ ರುದ್ರಾಧ್ಯಾಯ ಪ್ರಕರಣವು ಶಿವಾರಾಧನೆಯನ್ನು ಪ್ರತಿಪಾದಿಸಿರುವುದಲ್ಲದೆ, ಮುಂದೆ ಬಂದ ಆಗಮ ( 28 ಶೈವಾಗಮಗಳು) ಉಪನಿಷತ್ತು (ಶ್ವೇತಾಶ್ವತರ, ಕೈವಲ್ಯ, ಮಹಾನಾರಾಯಣಾಥರ್ವಶಿರಸ್ಸು) ಹಾಗೂ ಇತ್ಯಾದಿಗಳ ಜೊತೆಗೆ ಅನೇಕ ಶಿವ ಪುರಾಣಗಳೂ ಸಹ ಶೈವಧರ್ಮ ಪ್ರತಿಪಾದನೆಗೆ ಆಧಾರವಾಗುತ್ತವೆ. ಶೈವ ಧರ್ಮದ ಆರಂಭದಲ್ಲಿ ಲಾಕುಳ, ಪಾಶುಪತ, ಕಾಳಾಮುಖ, ಕಾಪಾಲಿಕ, ಕಾಶ್ಮೀರ ಶೈವ, ಶ್ರೀಕಂಠ ಮತ ಮತ್ತು ನಾಥ–ಪಂಥಗಳು ಅಸ್ತಿತ್ವದಲ್ಲಿದ್ದು, ಹನ್ನೆರಡನೆಯ ಶತಮಾನದವರೆವಿಗೂ ಉಳಿದು ಬಂದದ್ದನ್ನು ನಾವು ಗುರುತಿಸಬಹುದಾಗಿದೆ. ಇವರಲ್ಲಿ ನ್ಯಾಯ ವೈಶೇಷಿಕಗಳ ಸೂತ್ರಧಾರರಾದ ಅಕ್ಷಪಾದಕಣಾಡರು, ಪಾಸುಪತರೆನಿಸಿಕೊಂಡವರು. ಈ ಪಾಶುಪತರು ರಕ್ತವಸ್ತ್ರಧಾರಿಗಳೆಂದು ಬಾಣಕವಿ ವರ್ಣಿಸಿದ್ದಾನೆ. ಉಜ್ಜಯಿನಿ ಮಹಾಕಾಳ, ಪೂಜಿಕರು, ಕಾಳಾಮುಖ, ಪಾಶುಪತರು, ಇವರು ಲಕುಳೇಶ್ವರ ಸಂಪ್ರದಾಯದವರಾದ್ದರಿಂದ ಲಾಕುಳರೆಂದು ಹೆಸರು ಪಡೆದವರಾಗಿದ್ದಾರೆ. ಈ ಕಾಳಾಮುಖ ಪಾಶುಪತ (ಲಾಕುಳ) ರು ಕೇವಲ ಭಾರತದಲ್ಲೇ ಅಲ್ಲದೆ, ಇನ್ನಿತರ ರಾಷ್ಟ್ರಗಳಲ್ಲಿಯೂ ಇದ್ದರೆಂದು ತಿಳಿದುಬಂದಿದೆ.

ಅಗಸ್ತ್ಯ ಮಹರ್ಷಿಗಳಿಗೆ ರೇಣುಕಾಚಾರ್ಯರು ಬೋಧಿಸಿದ ಶಿವಾದ್ವೈತ ಸಿದ್ಧಾಂತವು 'ಸಿದ್ಧಾಂತ ಶಿಖಾಮಣಿ' ಎಂಬ ಗ್ರಂಥದಲ್ಲಿ ಕಂಡುಬರುತ್ತದೆ. ಅಷ್ಟಾವರಣ (ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ, ಮಂತ್ರ) ತತ್ವಗಳನ್ನು ಕ್ರಮವಾಗಿ ಆತ್ಮ–ಪ್ರಾಣ ಸಾಧನ ಭಾಗಗಳಾಗಿ ಪರಿಗಣಿಸುವುದರ ಜೊತೆಗೆ ಪಂಚಾಚಾರ್ಯರು ಶಿವಸೂತ್ರ ಬ್ರಹ್ಮಸೂತ್ರ ಮತ್ತು ಉಪನಿಷಾದಿಗಳ ಮೇಲೆ ಬರೆದಿರುವ ಭಾಷ್ಯ ವೃತ್ತಿಗಳನ್ನು ಕೂಡ ಅನುಸರಿಸುತ್ತಾ, ಈ ಎಲ್ಲಾ ಶೈವ ಪ್ರಭೇದಗಳು ತಾತ್ವಿಕ, ನೈತಿಕ, ಸಾಮಾಜಿಕ ವಿಭಾಗದ ವಿಚಾರಗಳನ್ನಾಗಿ ತಮ್ಮ ಧರ್ಮಕ್ಕೆ ಅಳವಡಿಸಿಕೊಂಡು ಒಂದು ತನವನ್ನು ಪ್ರದರ್ಶಿಸಿದವರಾಗಿದ್ದಾರೆ. ಧರ್ಮದ ಪರಿಕಲ್ಪನೆ ಪ್ರಾಚೀನದ್ದಾದರೂ ಯಾವುದೇ ನಿರ್ದಿಷ್ಟ ವ್ಯಾಖ್ಯೆ ಅಥವಾ ವಿವರಣೆ ಬಗ್ಗೆ ನೋಡಬೇಕಾಗುತ್ತದೆ. ಧರ್ಮವು ಮಾನವನ ಜೀವನದ ಅವಿಭಾಜ್ಯ

ಅಂಗ. ಆದ್ದರಿಂದ ಕಾಲಮಾನ ಹಾಗೂ ಜನಜೀವನ ಕ್ರಮದ ಹಿನ್ನೆಲೆಯಲ್ಲಿಯೇ ಪ್ರಸ್ತುತ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಧರ್ಮದ ಬೆಳವಣಿಗೆಯನ್ನು ನೋಡಬೇಕಾಗುತ್ತದೆ.

ಶಿಷ್ಟ ಸಂಪ್ರದಾಯದ ಜೊತೆಗೆ ಭಿನ್ನವಾದ ಪ್ರಾದೇಶಿಕ ಸಂಸ್ಕೃತಿಗಳಿಗೆ ಹೆಚ್ಚು ಹೊತ್ತು ನೀಡಿರುವುದು ಕಂಡುಬರುತ್ತದೆ. ಧಾರ್ಮಿಕ ಹಿನ್ನೆಲೆಯನ್ನು ತಿಳಿದುಕೊಳ್ಳಲು ನಮಗಿರುವ ಪ್ರಮುಖ ಆಧಾರಗಳೆಂದರೆ, ದೇವಾಲಯಗಳು, ಮಠಮಾನ್ಯಗಳು, ಧಾರ್ಮಿಕ ಕೃತಿಗಳು ಮತ್ತು ರೂಢಿ ಸಂಪ್ರದಾಯದ ಆಚರಣೆಗಳು ಸಹಾಯಕವಾಗಿದೆ.

### ಶೈವಧರ್ಮ ಅಥವಾ ಪಂಥ

ಶೈವಧರ್ಮ ಅತ್ಯಂತ ಪ್ರಾಚೀನವಾದ ಧರ್ಮ. ಶೈವರಲ್ಲಿ ಲಕುಲೀಶ, ಪಾಶುಪತ, ಕಾಳಾಮುಖ, ವೀರಶೈವ, ಅದ್ವೈತ, ಶ್ರೀಕಾಂತ ಶೈವಾಗಮ, ಶೈವ ಸಿದ್ಧಾಂತ ಇನ್ನೂ ಮೊದಲಾದ ಉಪಶಾಖೆಗಳಿವೆ.

ಭಾರತೀಯ ಶೈವ ಪರಂಪರೆಯು ತುಂಬಾ ವಿಸ್ತಾರವಾದುದು ಅದರ ಶಾಖೋಪಶಾಖೆಗಳಾದ ಪಾಶುಪತ, ಲಾಕುಳ, ಕಾಳಾಮುಖ, ಕಾಶ್ಮೀರ ಶೈವ, ತಮಿಳು ಶೈವ, ವೀರಶೈವ ಇವುಗಳು ಶುದ್ಧ ಶೈವ ಪರಂಪರೆಗಳಾಗಿವೆ. ಕರ್ನಾಟಕದಲ್ಲಿ ಅತ್ಯಂತ ಪ್ರಭಾವಶಾಲಿಯಾದ ಏಕೈಕ ಶೈವ ಪಂಥ ಕಾಳಾಮುಖ, ಕರ್ನಾಟಕದಲ್ಲಿ ಕ್ರಿ.ಶ.9ನೇ ಶತಮಾನದಿಂದ 13ನೇ ಶತಮಾನದವರೆಗೆ ಕಾಳಾಮುಖ ಉಲ್ಲೇಖಗಳು, ಕರ್ನಾಟಕದ ಶಾಸನಗಳಲ್ಲಿ ಇತ್ತು. ಈ ಹಿನ್ನೆಲೆಯಿಂದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಸಹ ಇದೆ ಎಂದು ಹೇಳಬಯಸುತ್ತೇನೆ. ಬಹುಶಃ ಎಲ್ಲಾ ಶೈವ ಪಂಥಗಳು ಕರ್ನಾಟಕದಲ್ಲಿ ಪ್ರಾಚೀನ ಕಾಲದಲ್ಲಿ ರೂಢಿಯಲ್ಲಿದ್ದವೆಂದೂ ಹೇಳುವುದಕ್ಕೆ ವಿಶೇಷವಾದ ಪರಿಶ್ರಮವೇನೂ ಬೇಕಾಗಿಲ್ಲ. ರಾವಣನು ಈಶ್ವರನ ಪ್ರಾಣಲಿಂಗವನ್ನು ತಂದು ಗೋಕರ್ಣದಲ್ಲಿ ಸ್ಥಾಪಿಸಿದನೆಂದು ಪುರಾಣದಲ್ಲಿ ತಿಳಿದುಬರುತ್ತದೆ. ರಾಮಾಯಣದಲ್ಲಿ ಬರುವ ಲಿಂಗ ಸ್ಥಾಪನೆಯ ಎರಡು ಸಂದರ್ಭಗಳಲ್ಲಿ (ರಾಮನು ರಾಮೇಶ್ವರದಲ್ಲಿ ಸ್ಥಾಪಿಸಿದ ಮರಲ ಲಿಂಗ ಇನ್ನೊಂದು ಗೋಕರ್ಣದ ಜ್ಯೋತಿರ್ಲಿಂಗವೇ ಹಿಂದಿನದು ಮತ್ತು ಮಹತ್ವದ್ದು. ಇದು ಕರ್ನಾಟಕಕ್ಕೂ ಹರಡಿಕೊಂಡು ನಂತರ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲೂ ಇದೆ ಎಂಬುದು ತಿಳಿದುಬಂದಿದೆ.

ಶೈವರು ಪಾಶುಪತ ಮತಕ್ಕೆ ವ್ಯತಿರಿಕ್ತವಾಗಿ ವೇದ ಪ್ರಾಮಾಣ್ಯವನ್ನು ಒಪ್ಪುತ್ತಾನೆ. ದೇವಾಲಯಗಳಲ್ಲಿ ಸಾಮಾನ್ಯವಾಗಿ ವೇದ, ಮಂತ್ರ, ಘೋಷ, ಉತ್ಸವ, ಸಂಗೀತ, ನೃತ್ಯ

ಇನ್ನೂ ಮೊದಲಾದವುಗಳಿಂದ ಕೂಡಿದ ಸಾರ್ವಜನಿಕ ಪೂಜೆಯ ಪರಂಪರೆಯನ್ನು ಪ್ರಾರಂಭಿಸಿದ್ದು ಶೈವರಿಗೆ ಸೇರುತ್ತದೆ. ದಕ್ಷಿಣದಲ್ಲಿ ಚೋಳರು ಈ ಧರ್ಮಕ್ಕೆ ಹೆಚ್ಚು ಆಶ್ರಯ ನೀಡಿ ಗಂಗರ ಮತ್ತು ಚೋಳರ ಕಾಲಕ್ಕೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಶೈವ ಧರ್ಮ ಚೆನ್ನಾಗಿ ಬೆಳೆದಿದೆ ಎಂಬುದು ತಿಳಿದುಬರುತ್ತದೆ. ಶೈವರು ಪತಿ, ಪಶು, ಪಾಶಗಳೆಂದು ಮೂರು ಪಂಥಗಳನ್ನು ಒಪ್ಪುತ್ತಾರೆ. ಶಿವನೇ ಪ್ರತಿ ಜೀವಾತ್ಮವೇ ಪಶು, ಜಗತ್ತು ಅಥವಾ ಸಂಸಾರವೇ ಪಾಶ ಇವು ಮೂರು ನಿತ್ಯವಾದವುಗಳು. ಋಗ್ವೇದದಲ್ಲಿ ಕಾಣಿಸಿಕೊಳ್ಳುವ ರುದ್ರ ಕ್ರಮೇಣ ಶಿವನಾಗಿ ಶೈವ ಧರ್ಮೀಯರಿಗೆ ಆರಾಧ್ಯದೈವನಾಗಿ ಬೆಳೆದಿದೆ. ಶಿವನನ್ನು ಲಿಂಗರೂಪವಾಗಿಯೂ, ಸಾಕಾರ ಮತ್ತು ನಿರಾಕಾರವಾಗಿಯೂ ಆರಾಧಿಸುವ ಪರಿಪಾಠ ರೂಢಿ ಸಂಪ್ರದಾಯಗಳು ಬೆಳೆದುಬಂದಿದೆ. ಶೈವ ದೇವಾಲಯಗಳಲ್ಲಿ ಶಿವನನ್ನು ಅತ್ಯಂತ ಶ್ರೇಷ್ಠ ದೇವರೆಂದು ನಂಬಿದ್ದಾರೆ. ಶಿವನನ್ನು ಹಲವಾರು ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ಅಮರಕೋಶವು ಶಿವನ 48 ಹೆಸರುಗಳನ್ನು ಹೇಳಿದರೆ, ವಾಜಸೇನೆಯು ಸಂಹತವು ಸಹ ಶಿವನನ್ನು ಅಗ್ನಿ, ಅವನಿ, ಪಶುಪತಿ, ಭಾವಸರ್ವ, ಈಶಾನ್ಯ, ಮಹಾದೇವ, ಉಗ್ರದೇವ, ಅರ್ಕೇಶ್ವರ, ದೇಸೇಶ್ವರ, ಮಲ್ಲಿಕಾರ್ಜುನ, ನೀಲಕಂಠ, ಸೋಮೇಶ್ವರ, ಗಂಗಾಧರ, ಅಂಕಾಳೇಶ್ವರ, ಕಾವಿ ಬಸವೇಶ್ವರ ಇನ್ನೂ ಮೊದಲಾದ ಹೆಸರುಗಳಿಂದ ಕರೆಯುವ ವಾಡಿಕೆ ಇದೆ.

**ಪಾಶುಪತ (ಲಕುಲೀಶ)**

ಶೈವ ಪಂಥಗಳಲ್ಲಿ ಪಾಶುಪತ ದರ್ಶನವೇ ತುಂಬಾ ಹಳೆಯದು. ಅಲ್ಲದೆ ತನ್ನದೇ ಆದ ತತ್ವ ವಿಚಾರಗಳನ್ನು ಒಳಗೊಂಡಿದೆ. ಪಾಶುಪತ ಸ್ಥಾಪಕರಾದ ಭಟ್ಟಾರಕ ಲಕುಲೀಶನ ಉಲ್ಲೇಖ ವಾಯುಪುರಾಣ, ಲಿಂಗಪುರಾಣ ಮತ್ತು ಸೂತ ಸಂಹಿತೆಗಳಲ್ಲಿ ಬರುತ್ತದೆ. ಇವನನ್ನು ರುದ್ರನ ಅವತಾರವೆಂದು ನಂಬಲಾಗಿದೆ. ಲಕುಲೀಶ ಪಂಥವು ಕರ್ನಾಟಕದಲ್ಲಿ ಅದರಲ್ಲೂ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಇತ್ತು.

ಲಕುಲೀಶ ಶೈವರನ್ನು ಮಹದೇಶ್ವರರೆಂದು ಕರೆಯುತ್ತಿದ್ದರು. ಅವರಿಗೆ ತಮ್ಮದೇ ಆದ ತತ್ವಶಾಸ್ತ್ರವಿದೆ. ತತ್ವಗಳನ್ನು ಭಟ್ಟಾರಕ ಲಕುಲೀಶನು ಪಾಶುಪತ ಸೂತ್ರಗಳಲ್ಲಿ ಸಂಗ್ರಹಿಸಿ ನಿರೂಪಿಸಿದ್ದಾನೆ. ಪಶುಪತಿ ಎಂಬ ಹೆಸರಿನ ಶಿವ ಇವರ ಆರಾಧ್ಯದೇವತೆ. ಕಾರ್ಯ, ಕಾರಣ, ವಿಧಿ, ಯೋಗ, ದುಃಖಾಂತ ಎಂದು ಕರೆಯಲಾಗಿದೆ.

## ಕಾಳಾಮುಖರು

ಅಲ್ಪಸಂಖ್ಯಾತ ಮತಗಳಲ್ಲಿ ಕಾಳಾಮುಖ ಎಂಬುದು ಕೂಡ ಒಂದು ಶೈವಪಂಥದ ಶಾಖೆಯಾಗಿದೆ. ಮುಖ್ಯವಾಗಿ ಪಾಶುಪತ ಆಚರಣೆಗಳುಳ್ಳ ಸನ್ಯಾಸ ಧರ್ಮವಾಗಿದ್ದ ಇದು ಲಕುಲೀಶನ ಉಪದೇಶದಿಂದ ಹುಟ್ಟಿ ಬೆಳೆಯಿತೆಂದು ತಿಳಿದುಬಂದಿದೆ. ದಕ್ಷಿಣ ಭಾರತಕ್ಕೆ ಅದರಲ್ಲೂ ಆಂಧ್ರಪ್ರದೇಶ ಕರ್ನಾಟಕ ಪ್ರದೇಶಕ್ಕೆ ಸೀಮಿತವಾಗಿತ್ತು. ಅಲ್ಲದೆ ಶೈವ ಜೊತೆಗೆ ಒಂದು ರೀತಿಯ ಸಂಬಂಧವನ್ನು ಪಡೆದಿತ್ತೆಂಬುದಕ್ಕೆ ಸೂಚನೆಗಳಿವೆ. ಬನವಾಸಿ, ನೊಳಂಬವಾಡಿ, ಗಂಗವಾಡಿ ಪ್ರಾಂತ್ಯದಲ್ಲಿ ಕಾಳಾಮುಖರ ಬಗ್ಗೆ ತಿಳಿದುಬಂದಿದೆ. ಕಾಳಾಮುಖ ಪಂಥವು ಕರ್ನಾಟಕದಲ್ಲಿ ಸುಮಾರು 500 ವರ್ಷಗಳ ಕಾಲ ಬೆಳೆದು ಧಾರ್ಮಿಕ ಮತ್ತು ಸಾಮಾಜಿಕ ಭಾವನೆಗಳ ಬೆಳವಣಿಗೆಗೆ ಕಾರಣವಾಗಿ 14–15ನೇ ಶತಮಾನದ ಅಂತ್ಯದ ಹೊತ್ತಿಗೆ ಇದ್ದಕ್ಕಿದ್ದಂತೆ ಮಾಯವಾಯಿತೆಂದು ಪ್ರೊ.ಎಸ್.ಕೆ.ರಾಮಚಂದ್ರರಾವ್ ಮತ್ತು ಡಾ.ಎಂ.ಚಿದಾನಂದಮೂರ್ತಿ ರವರು ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯನ್ನು ಗಮನಿಸಿದರೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಸಹ ಇತ್ತೆಂದು ತಿಳಿಯಬಹುದಾಗಿದೆ.

ಪಾಶುಪತರಿಗೆ ಕಾಳಾಮುಖರೆಂಬ ಹೆಸರೂ ಇದೆ. ಕಾಳಾಮುಖರು ಕಾಪಾಲಿಕ ಗುಂಪಿಗೆ ಸೇರಿದಂತೆ ರಾಮಾನುಜಾಚಾರ್ಯರು ನಿರೂಪಿಸುವುದನ್ನು ಆಧಾರವಾಗಿಟ್ಟುಕೊಂಡು ಡಾ.ಆರ್.ಜಿ.ಭಂಡಾರ್ಕರ್‌ರವರು ಕಾಳಾಮುಖರೂ, ಕಾಪಾಲಿಕರೂ ಒಂದೇ ಎಂದು ಹೇಳುತ್ತಾರೆ. ಇದಕ್ಕೆ ಯಾವುದೇ ತರಹದ ಆಧಾರಗಳಿಲ್ಲ. ಕಾಪಾಲಿಕರರು ಸಂಪೂರ್ಣವಾಗಿ ವಾಮಾಚಾರಗಳ ಪಂಥವಾದರೆ ಕಾಳಾಮುಖರರು ಶುದ್ಧ ಸಾತ್ವಿಕಾಚರಣೆಗಳ ಪಂಥವಾಗಿದೆ. ಕಾಳಾಮುಖ ಎಂಬುದು ಆರು ಜ್ಯೋತಿರ್ಲಿಂಗಗಳಲ್ಲಿ ಒಂದಾಗಿದೆ. ಕಾಳಾಮುಖರು ಕಾಶ್ಮೀರದಿಂದ ಕರ್ನಾಟಕಕ್ಕೆ ಬಂದವರು ಎಂದು ಡಾ.ಎಂ.ಎಚ್.ಕೃಷ್ಣರವರು ಅಭಿಪ್ರಾಯಪಟ್ಟಿದ್ದಾರೆ, ಇದಕ್ಕೆ ಆಧಾರ ಸಾಲದು.

ಕ್ರಿ.ಶ.10ನೇ ಶತಮಾನದಿಂದ ಕ್ರಿ.ಶ.12ನೇ ಶತಮಾನದವರೆಗೆ ಯುಗವು ದಕ್ಷಿಣ ಭಾರತದ ಇತಿಹಾಸದಲ್ಲದೇ ಕರ್ನಾಟಕದ ಇತಿಹಾಸದ ಮೇಲೂ ನಂತರ ಈ ಭಾಗದ ಗುಂಡ್ಲುಪೇಟೆ ತಾಲ್ಲೂಕಿನ ಮೇಲೂ ಗಣನೀಯ ಪ್ರಭಾವವನ್ನು ಬೀರಿದೆ. ಕನ್ನಡ, ತಮಿಳು ಎರಡು ಭಾಷೆಗಳ ಬಳಕೆಯ ಕಾರಣದಿಂದ ಅವರು ತಾವು ಗೆದ್ದ ಪ್ರದೇಶಗಳ ಮೇಲೆ ಸ್ಥಳೀಯರ ವಿಶ್ವಾಸ ಗಳಿಸುವಲ್ಲಿ ಸಫಲರಾದರು. ಅಲ್ಲದೇ ಕನ್ನಡ ತಮಿಳು ಸಂಸ್ಕೃತಿಯನ್ನು ಬೆಸೆದು ಐಕ್ಯತೆಯನ್ನು ಮೂಡಿಸುವಲ್ಲಿ ಕಾರಣಕರ್ತರಾಗಿದ್ದಾರೆ. ಶಾಸನಗಳ ಸಹಾಯದಿಂದ ಈ ಭಾಗದ ಚಿತ್ರಣವನ್ನು ಅದರಲ್ಲೂ ವಿಶೇಷವಾಗಿ ಕಾಳಾಮುಖರ ಪಾತ್ರವನ್ನು ತಿಳಿಸುವ ಪ್ರಯತ್ನ

ಮಾಡಲಾಗಿದೆ. ಶೈವ ಧರ್ಮವು ಈ ಭಾಗದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಗಳಿಸುವಲ್ಲಿ ಕಾರಣವಾಗಿದೆ. ಈ ಭಾಗದ ಶ್ರೀಮಂತರು, ಸಾಮಂತರು, ಗಾವುಂಡರು ಸಣ್ಣ ಭೂಮಾಲೀಕರು, ಭೂಹಿಡುವಳಿದಾರರ ಒಕ್ಕೂಟ, ವ್ಯಾಪಾರ ಸಂಘಗಳು ಹಾಗೂ ಅಗ್ರಹಾರಗಳು ನೀಡಿದ ದೊಡ್ಡ ಮಟ್ಟದ ದಾನದತ್ತಿಗಳು, ದೇವಸ್ಥಾನದ ನಿರ್ಮಾಣ ಹಾಗೂ ಸಂರಕ್ಷಣೆಯ ಸಲುವಾಗಿ ಇಲ್ಲಿನ ದೇವಸ್ಥಾನಗಳು ತೋರಿದ ಆಸಕ್ತಿ, ಶೈವಧರ್ಮದ ಇತರ ಧರ್ಮಗಳಿಗಿಂತ ಪ್ರಾಮುಖ್ಯತೆ ಹೊಂದಲು ಕಾರಣವಾಗಿದೆ. ಮಲ್ಲಗಾವುಂಡನ ಹೆಸರಿನಲ್ಲಿ ನಿರ್ಮಾಣವಾಗಿರುವ ಮಲ್ಲೇಶ್ವರ ದೇವಾಲಯದ ಆಚಾರ್ಯರಿಗೆ ನೀಡಿದ ಭೂದಾನ ಕೈಗಾಣ ಹಾಗೂ ನಿತ್ಯ ನೈವೇದ್ಯಕ್ಕೆ ನಂದಾದೀವಿಗೆಗೆ ಕೊಟ್ಟ ದಾನವನ್ನು ವಿವರಿಸುತ್ತದೆ. ಆದ್ದರಿಂದ ಗಾವುಂಡರು ಕೂಡ ಭಾಗಿಯಾಗಿದ್ದರು ಎಂದು ತಿಳಿದುಬರುತ್ತದೆ. (ಎಪಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು, ಶಾಸನ ಸಂಖ್ಯೆ-56) ಮತ್ತು ದಂಡನಾಯಕರು ಶೈವ ಧರ್ಮವನ್ನು ಬೆಂಬಲಿಸಿ ಶೈವ ಮುನಿಗಳ ಮಾರ್ಗದರ್ಶನದಲ್ಲಿ ಶೈವ ದೇವಾಲಯಗಳ ನಿರ್ಮಾಣಕ್ಕೆ ಎಲ್ಲರ ಬೆಂಬಲವನ್ನು ಒಟ್ಟುಗೂಡಿಸುವ ಪ್ರಯತ್ನ ನಡೆಯಿತು. (ಶಾಸನ ಸಂಖ್ಯೆ-56) ಚೋಳರ ಮೇಲೆ ಕಾಳಾಮುಖರ ಸಾಕಷ್ಟು ಪ್ರಭಾವದಿಂದ ಶೈವ ದೇವಾಲಯಗಳ ನಿರ್ಮಾಣಕ್ಕೆ ಕಾರಣವಾಗಿದೆ. ಉದಾಹರಣೆಗೆ ಮೂಲಸ್ಥಾನ ಮುಡೆಯಾರ್ ಮಹಾದೇವ ಏಕ್ಕೆಗೊಂಡದೇವ, ಚಂದ್ರಶೇಖರದೇವ ಎಂಬುದಾಗಿದೆ. (ಶಾಸನಸಂಖ್ಯೆ-56) ಶೈವಧರ್ಮದ ಮೇಲಿನ ಒಲವನ್ನು ನಿರೂಪಿಸುವುದರ ಜೊತೆಗೆ ಲಿಂಗಾರಾಧನೆಯು ಶೈವಧರ್ಮದ ಮುಖ್ಯ ಅಂಶವಾಗಿದೆ ಎಂದು ತಿಳಿಯುತ್ತದೆ. ಪೂರ್ವಿಕರ ನೆನಪಿಗಾಗಿ ದೇವಾಲಯಗಳ ನಿರ್ಮಾಣ ಮಾಡಿದ ವಿಷಯವು ಚಿಕ್ಕಾಟಿ ಶಾಸನದಲ್ಲಿ ಉಲ್ಲೇಖಿತವಾಗಿದೆ. ಶಾಸನದಲ್ಲಿ ಆಚಾರ್ಯ ರಾಜಮ್ಮ ಹಾಗೂ ಬೆಲಬ್ಬೆ ಮಗನಾದ ಕೇಶವಭಟ್ಟ ತನ್ನ ಪೂರ್ವಿಕರ ನೆನಪಿಗಾಗಿ ದೇವಸ್ಥಾನ ನಿರ್ಮಾಣ ಮಾಡಿದನೆಂದು ತಿಳಿದುಬರುತ್ತದೆ.

ಒಟ್ಟಾರೆ ಶೈವಧರ್ಮದ ಪ್ರಮುಖ ಪಂಥವಾದ ಪಾಶುಪತ ಕಾಳಾಮುಖ ಶೈವವು ಈ ಪ್ರದೇಶದ ಜನಗಳ ಧಾರ್ಮಿಕ ನಂಬಿಕೆಯ ಮೇಲೆ ಮಹತ್ತರವಾದ ಪಾತ್ರವಹಿಸಿದೆ. ಧಾರ್ಮಿಕ ವಲಯದಲ್ಲಿ ಶೈವ ಪಂಥವು ಹೆಚ್ಚಿನ ಪ್ರಭಾವ ಬೀರಲು ಕಾರಣ ಅರಸರುಗಳು, ಅಧಿಕಾರಿಗಳು ಶೈವ ಧರ್ಮದ ಅನುಯಾಯಿಗಳಾಗಿದ್ದರು.

ಧಾರ್ಮಿಕ ಹಿನ್ನೆಲೆಯನ್ನು ಅಲ್ಲದೆ ಗುಂಡ್ಲುಪೇಟೆ ತಾಲ್ಲೂಕಿನ ಜನಜೀವನವನ್ನು ನಾವು ಗಮನಿಸಿದಾಗ ಹಿಂದಿನಿಂದಲೂ ಹಲವಾರು ಧರ್ಮಗಳು ಬೆಳೆದಿರುವುದು ಇಲ್ಲಿರುವ ದೇವಾಲಯಗಳ ಹಿನ್ನೆಲೆಯಿಂದ ತಿಳಿದುಬರುತ್ತದೆ.[1] ಯಾವುದೇ ಒಂದು ಪ್ರಾಂತ್ಯದ

ದೇವಾಲಯಗಳ ಹಿನ್ನೆಲೆಯನ್ನು ಗಮನಿಸಿದರೆ ಭಕ್ತಿ, ದೇವತೋಪಾಸನೆ, ನೃತ್ಯ, ಸಂಗೀತ, ಶಿಲ್ಪಕಲೆ, ಚಿತ್ರಕಲೆ, ನಾಟಕ, ಸಾಹಿತ್ಯ ಇನ್ನು ಮೊದಲಾದವುಗಳು ಕೂಡ ಮೊದಲಿಗೆ ಉಗಮವಾಗಿರುವುದನ್ನು ನೋಡಿದರೆ ಧರ್ಮದ ಸಂಕೇತವೇ ಆಗಿದೆ. ಧರ್ಮ ಎಂಬುದು ಸಂಸ್ಕೃತಿಯ ಪರಂಪರೆಯಲ್ಲಿ ಅಡಗಿಕೊಂಡಿದೆ. ಅದರ ಮೂಲಕವಾಗಿ ಜನ ಧಾರ್ಮಿಕ ಜೀವನಕ್ಕೆ ಒಂದು ಆಶಾದಾಯಕ ಅಲ್ಲದೆ ಸುಸಂಬದ್ಧವಾದ ಸಾಮಾಜಿಕ ಪರಿಸರವನ್ನು ನೀಡುತ್ತದೆ ಎಂದರೆ ತಪ್ಪಾಗಲಾರದು.

ಧರ್ಮದ ಜಾಡನ್ನು ಹುಡುಕುತ್ತಾ ಹೋದರೆ, ನಮಗೆ ಕ್ರಿಸ್ತಪೂರ್ವ ಶಿಲಾಯುಗದ ಜನರ ತನಕ ನೋಡಬೇಕಾಗುತ್ತದೆ. ಏಕೆಂದರೆ ಶಿಲಾಯುಗದ ಜನರಲ್ಲಿ ಧಾರ್ಮಿಕ ಆಲೋಚನೆಗಳು ಇದ್ದವು ಎಂಬುದಕ್ಕೆ ನಡೆದಿರುವಂತಹ ಪ್ರಾಚೀನ ಭೂಉತ್ಖನನದಲ್ಲಿ ಅನೇಕ ಬಗೆಯ ಮೂರ್ತಿಶಿಲ್ಪಗಳು ದೊರೆತಿವೆ. ಸಿಂಧೂ, ಕಾಲಿಬಂಗನ್, ಹರಪ್ಪ ನಾಗರೀಕತೆಯ ಮಣ್ಣಿನ ಪ್ರಣಾಳ ಪೀಠ ಸಹಿತ ಶಿವಲಿಂಗ ದೊರೆತಿರುವುದು ತಿಳಿದುಬಂದಿದೆ. ಕ್ರಿಸ್ತಪೂರ್ವ 2000 ಹೊತ್ತಿಗೆ ಶಿವನ ಆರಾಧನೆ ವ್ಯಾಪಕವಾಗಿ ಬೆಳೆದಿರುವ ಸಾಧ್ಯತೆ ಇದೆ.[2] ಸಿಂಧೂ ನದಿ ತೀರದ ಜನರ ಸಂಸ್ಕೃತಿ, ಸಾಂಸ್ಕೃತಿಕ ಚಿತ್ರಣವನ್ನು ನೋಡಿದರೆ, ಅಲ್ಲಿಯ ಜನರು ವೃಕ್ಷ, ಪ್ರಾಣಿ, ನದಿ, ಸೂರ್ಯ, ಚಂದ್ರನನ್ನು ಪೂಜಿಸುತ್ತಿದ್ದುದು ಪ್ರಚಲಿತದಲ್ಲಿತ್ತೆಂದು ತಿಳಿದುಬಂದಿದೆ.[3]

ಸಿಂಧೂ ಬಯಲಿನ ನಾಗರೀಕತೆಯ ಉತ್ಖನನದಲ್ಲಿ ದೊರೆತಿರುವ ಒಂದು ಮುದ್ರೆಯಲ್ಲಿ ಕೊಂಬುಗಳುಳ್ಳ ಮನುಷ್ಯನ ಮುದ್ರೆಯನ್ನು ಚಿತ್ರಿಸಲಾಗಿದ್ದು, ಮುದ್ರೆಯ ಮೇಲೆ ಹಲವು ಪ್ರಾಣಿಗಳು ಚಿತ್ರಿತವಾಗಿವೆ. ಅವುಗಳಲ್ಲಿ ನಂದಿ ಶಿಲ್ಪವೂ ಸಹ ಒಂದಾಗಿದ್ದು, ಇದನ್ನು ದೈವನೆಂದೂ ಅಲ್ಲದೆ ಪಶುಪತಿಯ ರೂಪದಲ್ಲಿ ಈ ಶಿಲ್ಪವನ್ನು ಪೂಜಿಸುತ್ತಿದ್ದರೆಂದೂ ತಿಳಿದುಬರುತ್ತದೆ.[4]

ಶೈವ ಧರ್ಮವು ಗುಂಡ್ಲುಪೇಟೆ ತಾಲ್ಲೂಕಿನ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದ್ದು, ಅಲ್ಲದೆ ಅತ್ಯಂತ ಪ್ರಮುಖವಾದಂತಹ ಧರ್ಮವೂ ಸಹ ಆಗಿದೆ. ಈ ಭಾಗದಲ್ಲಿ ಕ್ರಿ.ಶ.7-8ನೇ ಶತಮಾನದಲ್ಲಿ ನಡೆದಿದೆ ಎನ್ನಬಹುದಾಗಿದೆ. ಇತಿಹಾಸ ಪೂರ್ವಕಾಲದಲ್ಲಿ ಅಂದರೆ ಹರಪ್ಪ ಸಂಸ್ಕೃತಿಯಲ್ಲಿ ಸಿಂಧೂ ಬಯಲಿನ ನಾಗರೀಕತೆಯ ಉತ್ಖನನದಲ್ಲಿ ದೊರೆತಿರುವ ಒಂದು ಮುದ್ರೆಯಲ್ಲಿ ಕೊಂಬುಗಳುಳ್ಳ ಮನುಷ್ಯನ ಮುದ್ರೆಯನ್ನು ಚಿತ್ರಿಸಲಾಗಿದ್ದು, ಮುದ್ರೆಯ ಮೇಲೆ ಹಲವು ಪ್ರಾಣಿಗಳ ಚಿತ್ರಗಳಿವೆ. ಅವುಗಳಲ್ಲಿ ನಂದಿಶಿಲ್ಪವೂ ಸಹ ಒಂದಾಗಿದ್ದು, ಇದನ್ನು ದೈವವೆಂದೂ ಅಲ್ಲದೆ ಪಶುಪತಿಯ ರೂಪದಲ್ಲಿ ಈ ಶಿಲ್ಪವನ್ನು ಪೂಜಿಸುತ್ತಿದ್ದರೆಂದೂ ತಿಳಿದುಬರುತ್ತದೆ.[5] ಇತಿಹಾಸ ಪೂರ್ವಕಾಲದಲ್ಲಿ ಅಂದರೆ ಹರಪ್ಪ ಸಂಸ್ಕೃತಿಯಲ್ಲಿ ಕಂಡುಬರುವ

ಪಶುಪತಿಯ ಸುಟ್ಟ ಮಣ್ಣಿನ ಮುದ್ರಿಕೆಗಳು ದೊರೆತಿವೆ. ಆದರೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕ್ರಿ.ಶ.7–8ನೇ ಶತಮಾನಕ್ಕೆ ಪೂರಕವಾದ ಶೈವ ದೇವಾಲಯಗಳನ್ನು, ಶೈವ ನೆಲೆಗಳನ್ನು, ಶೈವ ಶಿಲ್ಪಗಳನ್ನು, ಶೈವ ಶಾಸನಗಳನ್ನು ಗುರುತಿಸಬಹುದಾಗಿದೆ. ಅವುಗಳನ್ನು ಆಯಾ ಶೈವ ದೇವಾಲಯಗಳ ವಿವರಣೆಯನ್ನು ನೀಡುವ ಸಂದರ್ಭಕ್ಕೆ ಪೂರಕವಾಗಿ ಚರ್ಚಿಸಲಾಗಿರುತ್ತದೆ.

ಶೈವ ಧರ್ಮ ಬಹು ಪುರಾತನವಾದ ಧರ್ಮ ಅದರ ಮೂಲ ಯಾವುದೆಂದು ಗುರುತಿಸುವುದು ಕಷ್ಟ. ಅದು ವೈದಿಕ ಪೂರ್ವ ಕಾಲದ್ದೆಂದೂ, ಆರ್ಯೇತರವೆಂದೂ, ಕೆಲವು ವಿದ್ವಾಂಸರು ಪ್ರತಿಪಾದಿಸಿದ್ದಾರೆ. ಅವರ ವಾದಗಳನ್ನು ಒಪ್ಪಲಾಗಿಲ್ಲ. ಅದಕ್ಕೆ ನಿಖರವಾದ ಯಾವುದೇ ಪುರಾವೆಗಳಿಲ್ಲ. ಮೊಹೆಂಜೋದಾರೋದಲ್ಲಿ ದೊರೆತ ಕೆಲವು ಮುದ್ರಿಕೆಗಳಲ್ಲಿ ಪ್ರಾಣಿಗಳಿಂದ ಸುತ್ತುವರಿಯಲ್ಪಟ್ಟ ಮೂರು ತಲೆಗಳುಳ್ಳ ಒಂದು ಆಕೃತಿ ಕಂಡುಬರುತ್ತದೆ. ಆ ಆಕೃತಿ ಪಶುಪತಿಯ ಮೂರ್ತಿಯೆಂದು ಸರ್ ಜಾನ್ ಮಾರ್ಷಲ್ ಅಭಿಪ್ರಾಯಪಡುತ್ತಾರೆ. ಆದರೆ ಮೊದಲಿಗೆ ಈ ಅಭಿಪ್ರಾಯವನ್ನು ಅಲ್ಲಗಳೆದಿದ್ದರೂ ತದನಂತರ ಆ ಮುದ್ರಿಕೆಗಳ ಅರ್ಥ ಏನೆಂಬುದರ ಬಗ್ಗೆ ಕಟ್ಟ ಕಡೆಯ ನಿರ್ಣಾಯಕ ಅಭಿಪ್ರಾಯವನ್ನು ಹೇಳುವುದಕ್ಕೆ ಆ ಮುದ್ರಿಕೆಗಳ ಮೇಲಿನ ಬರಹವನ್ನು ಸರಿಯಾಗಿ ಅರಿತು ಓದಿದ ಮೇಲೆ ಮಾತ್ರವೇ ಸಾಧ್ಯವಾಗುತ್ತವೆ. ಈ ಹಿನ್ನೆಲೆಯಿಂದ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಪ್ರಾಚೀನ ಕಾಲಕ್ಕೆ ಸೇರಿದ ಶಿವಾಲಯಗಳು ಶಿವಲಿಂಗ ಅಲ್ಲಲ್ಲಿ ಕಾಣಬರುತ್ತವೆ. ಆದರೆ ಕೆಲವೊಂದನ್ನು ನಿಖರವಾಗಿ ಕಾಲವನ್ನು ಗುರುತಿಸುವುದಕ್ಕೆ ಸಾಧ್ಯವಾಗಿಲ್ಲ.[6] ಆದರೂ ಕೂಡ ಈ ತಾಲ್ಲೂಕಿನಲ್ಲಿ ಕ್ರಿ.ಶ.6–7ನೇ ಶತಮಾನದಿಂದಲೇ ಈ ಬೆಳವಣಿಗೆಯನ್ನು ಕಾಣಬಹುದಾಗಿದೆ. ಆದರೆ ಕೆಲವೊಂದು ಬೃಹತ್ ಶಿಲಾಸಂಸ್ಕೃತಿಯ ಅವಶೇಷಗಳು ದೊರೆತಿರುವುದರಿಂದ ಅದರ ಸಂಸ್ಕೃತಿಯ ಅವಶೇಷಗಳು ದೊರೆತಿರುವುದರಿಂದ ಅದರ ಸಂಸ್ಕೃತಿಯನ್ನು ಗಮನಿಸಿದರೆ ಕ್ರಿಸ್ತಪೂರ್ವ ಕಾಲಕ್ಕೆ ಅಥವಾ ಸುಮಾರು 3 ಸಾವಿರ ವರ್ಷಗಳ ಹಿಂದಕ್ಕೆ ಹೋಗಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ.

ಶೈವ ಸಾಹಿತ್ಯದಲ್ಲಿ ಲಿಂಗವನ್ನು ಬೆಳಕಿನ ಕಂಬವೆಂದು ಕರೆಯಲಾಗಿದೆ. ಬ್ರಹ್ಮ, ವಿಷ್ಣುಗಳಿಬ್ಬರೂ ಜ್ಯೋತಿರ್ಲಿಂಗ ತುದಿ ಬುಡಗಳನ್ನು ಕಾಣಲು ಹೊರಟು ಪ್ರಯತ್ನ ಮಾಡಿ ಕಾಣಲಾರದೆ ಸೋತು ಹೋದರೆಂಬ ಪುರಾಣ ಕಥೆ ಇದೆ. ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಲಿಂಗವು ಪರಶಿವನ ಪ್ರತ್ಯಕ್ಷರೂಪ, ಪರಬ್ರಹ್ಮ, ಜ್ಯೋತಿಗೇ ಜ್ಯೋತಿಯಾದ ಪರಂಜ್ಯೋತಿ ನಿರಂತರವಾದ ಪರಮಾನಂದ ಇತ್ಯಾದಿ ಹೃದಯಾಂತರಾಳದಲ್ಲಿ ನೆಲೆಸಿರುವ ಪರಂಜ್ಯೋತಿಯನ್ನು ಗುರು ಹೊರತೆಗೆದು ರೂಪುಕೊಟ್ಟಿದ್ದು, ಆ ಲಿಂಗ ಎಂದು

ಜನಸಾಮಾನ್ಯರು ನಂಬುತ್ತಾರೆ. ವಚನಶಾಸ್ತ್ರದಲ್ಲಿಯೂ ಅನೇಕ ಕಡೆಗಳಲ್ಲಿ ಇವುಗಳನ್ನು ಅಗ್ನಿ ಸ್ತಂಭವೆಂದು ವರ್ಣಿತವಾಗಿದೆ.

ಲಿಂಗವು ಜಗಜಗಿಸುತ್ತಿರುವ ಬೆಳಕಿನ ರಾಶಿಯೆಂದೂ ಪರಬ್ರಹ್ಮವೆಂದೂ ಭಾವಿಸುತ್ತಾರೆ. ತೆರಕಣಾಂಬಿಯ ತ್ರಿಯಂಭಕೇಶ್ವರ ದೇವಾಲಯದ ಗರ್ಭಗುಡಿಯ ದೇವರ ಮೇಲೆ ಸೂರ್ಯನ ಕಿರಣ ಬೀಳುತ್ತದೆ. ಆದಕಾರಣ ಇದೊಂದು ಅತ್ಯಂತ ಪ್ರಮುಖವಾದ ದೇವಾಲಯವೆಂದು ಪರಿಗಣಿಸುತ್ತಾರೆ. ಗುಂಡ್ಲುಪೇಟೆ ತಾಲ್ಲೂಕಿನ ನಾನಾ ಗ್ರಾಮಗಳಲ್ಲಿ ಶೈವ ಪರಂಪರೆಗೆ ಸೇರಿದ ಆರಾಧಕರು ಜಾನಪದ ಗುಡ್ಡರು, ಕಂಸಾಳೆಗಾರರು ಇದ್ದಾರೆ. ಇವರೆಲ್ಲರೂ ಕೂಡ ಶೈವ ಧರ್ಮಕ್ಕೆ ಪೂರಕವಾಗಿ ಬಸವೇಶ್ವರ ದೇವಾಲಯ, ಮಹದೇಶ್ವರ ದೇವಾಲಯ, ಸಿದ್ದಪ್ಪಾಜಿ ದೇವಾಲಯ, ರಾಚಪ್ಪಾಜಿ ದೇವಾಲಯ ಆಯಾ ಪರಂಪರೆಗೆ ಪೂರಕವಾಗಿ ಹಬ್ಬಗಳು, ಜಾತ್ರೆಗಳು ನಡೆಯುತ್ತವೆ. ಉದಾಹರಣೆಗೆ ವಣಕನಪುರ ಶ್ರೀ ಓಂಕಾರೇಶ್ವರ, ಸಿದ್ದೇಶ್ವರಸ್ವಾಮಿ ಜಾತ್ರೆ, ಇಂಗಲವಾಡಿ ಶ್ರೀ ಮಹದೇಶ್ವರ ಜಾತ್ರೆ, ಚಿಡಕನಹಳ್ಳಿ ಶ್ರೀ ಬಸವೇಶ್ವರ ಜಾತ್ರೆ, ಕಂದೇಗಾಲ ಶ್ರೀ ಸೋಮೇಶ್ವರಸ್ವಾಮಿ ಜಾತ್ರೆ, ಕೋಡಹಳ್ಳಿ ಶ್ರೀ ಮಹದೇಶ್ವರ ಜಾತ್ರೆ ಹೀಗೆ ಅನೇಕ ಧಾರ್ಮಿಕ ಹಿನ್ನೆಲೆಯಲ್ಲಿ ಶೈವ ಧರ್ಮದ ಆಚರಣೆಯಲ್ಲಿ ಹಬ್ಬಗಳು, ಜಾತ್ರೆಗಳು ನಡೆಯುತ್ತದೆ.[7]

ಶಿವಪೂಜೆಯು ಲಿಂಗರೂಪದಲ್ಲಿ ಮತ್ತು ಮೂರ್ತಿರೂಪದಲ್ಲಿಯೂ ಸಹ ಕ್ರಿಸ್ತಪೂರ್ವ ಕಾಲದಿಂದಲೂ ಭಾರತ ದೇಶದಲ್ಲಿ ಜನಪ್ರಿಯವಾಗಿತ್ತೆಂದು ತಿಳಿದುಬರುತ್ತದೆ. ಶಿವನ ಜೊತೆಯಲ್ಲಿಯೇ ಸ್ಕಂದ, ಶಕ್ತಿ, ವೈಷ್ಣವ, ಗಣಪತಿ ಇವರಿಗೂ ಸಹ ಪೂಜೆ ಸಲ್ಲುತ್ತಿತ್ತು. ಕ್ರಿ.ಶ.2ನೇ ಶತಮಾನದಿಂದ 5ನೇ ಶತಮಾನದವರೆಗೂ ಭಾರತದ ಇತಿಹಾಸದಲ್ಲಿ ಆಯಾ ಪ್ರದೇಶಗಳನ್ನು ಆಳ್ವಿಕೆ ನಡೆಸುತ್ತಿದ್ದ ಗುಪ್ತರು, ವಕಾಟಕರು, ತ್ರೈಕೂಟರು ಈ ಆದಿಕಾಲದ ರಾಜವಂಶದವರು ಶೈವ ಧರ್ಮಕ್ಕೆ ಆಶ್ರಯ ನೀಡಿದ್ದರು ಎಂಬುದು ಕೂಡ ತಿಳಿದು ಬರುತ್ತದೆ. ದಕ್ಷಿಣ ಭಾರತ–ಕರ್ನಾಟಕದಲ್ಲಿಯೂ ಚರಿತ್ರೆ ಪೂರ್ವಕಾಲದಿಂದಲೂ ಶೈವಧರ್ಮ ಪ್ರಚಾರದಲ್ಲಿತ್ತೆಂದು ಸಂಪ್ರದಾಯ ಪರಂಪರೆ ತಿಳಿಸುತ್ತದೆ.

ದಕ್ಷಿಣ ಕರ್ನಾಟಕದಲ್ಲಿಯೂ ಅದರಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಶೈವ ಧರ್ಮದ ಪ್ರಚಾರದಲ್ಲಿತ್ತೆಂದು ಸಂಪ್ರದಾಯ ಪರಂಪರೆ ತಿಳಿಸುತ್ತದೆ. ಕರ್ನಾಟಕದ ಮೊದಲ ಕನ್ನಡ ರಾಜವಂಶದವರೆಂದರೆ ಕದಂಬರು, ಮೊದಲಿಗೆ ತ್ರಿಣೇತ್ರ ಅಥವಾ ಮುಕ್ಕಣ್ಣ ಕದಂಬನಿಂದ ತಮ್ಮ ವಂಶ ಆರಂಭವಾಯಿತು ಎನ್ನುತ್ತಾರೆ. ಈ ಮುಕ್ಕಣ್ಣ ಕದಂಬನೂ ತಾಳಗುಂದ ಶಾಸನದ ಪ್ರಕಾರ ಮಯೂರಶರ್ಮನು ಒಬ್ಬನೇ ಎಂದು ಗೊತ್ತಾಗಿದೆ. ತ್ರಿಪುರಗಳನ್ನು ನಾಶಮಾಡಿದ

ಮೇಲೆ ಶಿವನ ಬೆವರ ಹನಿಯೊಂದು ಕದಂಬ ವೃಕ್ಷದ ಕೆಳಗೆ ಬಿತ್ತೆಂದೂ ಅದರಿಂದ ಈ ವಂಶದ ಮೂಲಪುರುಷನು ಹುಟ್ಟಿಬಂದನೆಂದೂ ಐತಿಹ್ಯ ಕಥೆ ಇದೆ.

ತಾಳಗುಂದ ಶಾಸನವು 'ನಮಃ ಶಿವಾಯ' ಎಂಬ ಪ್ರಾರ್ಥನೆಯಿಂದ ಪ್ರಾರಂಭವಾಗುತ್ತದೆ. ನಂತರ ಬಾದಾಮಿ ಚಾಲುಕ್ಯರು ಶೈವ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಬಾದಾಮಿಯ ಮೊದಲ ಗವಿಗಳಲ್ಲಿ ನಟರಾಜ, ಹರಿಹರ, ಅರ್ಧನಾರೀಶ್ವರ, ಮಹಿಷಾಸುರ ಮರ್ದಿನಿ ಶಿಲ್ಪಗಳಿವೆ. ಅಲ್ಲದೆ ಬಾದಾಮಿ ಮಹಾಕೂಟ, ಪಟ್ಟದಕಲ್ಲು ಇವುಗಳಲ್ಲಿ ಶೈವ ಮತ ವಿಶೇಷ ಜನಪ್ರಿಯವಾಗಿತ್ತೆಂಬುದಕ್ಕೆ ಸಾಕಷ್ಟು ದಾಖಲೆಗಳಿವೆ. ಅದೇ ಕಾಲಕ್ಕೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಪ್ರದೇಶಗಳಲ್ಲಿಯೂ ಶೈವ ಧರ್ಮ ಪ್ರಭಾವವನ್ನು ಹೊಂದಿತ್ತೆಂದು ತಿಳಿದುಬರುತ್ತದೆ.[8]

ಕರ್ನಾಟಕದ ಕಟ್ಟ ಕಡೆಯ ದಕ್ಷಿಣ ಭಾಗವಾದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ತಲಕಾಡಿನ ಗಂಗರ ಕಾಲದಿಂದ ಹಿಡಿದು ಮೈಸೂರು ಒಡೆಯರ್ ಹಾಗೂ ಸ್ಥಳೀಯ ಪಾಳೇಗಾರರ ಕಾಲದಲ್ಲಿಯೂ ರಾಜಾಶ್ರಯದಲ್ಲಿ ಬೆಳೆದಿತ್ತು.

ಕಾಪಾಲಿಕರು ಶಿವನ ಘೋರರೂಪವಾದ ಭೈರವನನ್ನು ತಮ್ಮ ಪರಮದೇವತೆಯೆಂದೂ ಅಂಗೀಕರಿಸುತ್ತಾರೆ. ಆದಕಾರಣ ಗುಂಡ್ಲುಪೇಟೆಯ ಶೈವ ದೇವಾಲಯಗಳಲ್ಲಿ ಭೈರವನ ಶಿಲ್ಪಗಳನ್ನು ಕಾಣಬಹುದು. ಶೈವಧರ್ಮದ ತತ್ವಗಳು ವೇದ, ಆಗಮಗಳಲ್ಲಿ ಉಲ್ಲೇಖ ಇದೆ. ಶೈವ ಆಗಮ, ಶೈವ ಉಪನಿಷತ್, ಲಿಂಗಪುರಾಣ, ಸ್ಕಂದಪುರಾಣ, ಮತ್ಸ್ಯಪುರಾಣ, ಕೂರ್ಮಪುರಾಣ ಮುಂತಾದವುಗಳಲ್ಲಿ ಶೈವ ಧರ್ಮದ ಉಲ್ಲೇಖಗಳಿವೆ. ಈ ಗ್ರಂಥಗಳಲ್ಲಿ ಶಿವನನ್ನು ಆರಾಧ್ಯ ದೈವನಾಗಿ ಭಾವಿಸುವ ಆಗಮಗಳು ಶೈವಾಗಮಗಳೆಂದು ಕರೆಯುತ್ತಾರೆ. ಶಿವನನ್ನು ಮೇಲೆ ತಿಳಿಸಿರುವ ಹಾಗೆ ರುದ್ರನಿಗೆ ಹೋಲಿಕೆ ಮಾಡಲಾಗಿದೆ. ರುದ್ರ ಎಂದರೆ ಭಯಂಕರವಾಗಿ ಗರ್ಜಿಸುವವನು ಎಂದರ್ಥ.[9] ಈತನು ನೆಲೆಸಿರುವನೆಂದು ಪರ್ವತಗಳಲ್ಲಿ ಈತನು ಜಡೆಯನ್ನು ಎತ್ತಿಕಟ್ಟಿ ಧರ್ಮವನ್ನು ವಸ್ತ್ರವನ್ನಾಗಿ ಧರಿಸಿರುತ್ತಾನೆ. ಸ್ವಭಾವತಃ ಭಯಂಕರನಾದ ಈತನನ್ನು ಶೈವ ಧರ್ಮದವರು ಶಿವನೆಂದು ನಂಬಿದ್ದಾರೆ.[10] ಚಾಮರಾಜನಗರ ಜಿಲ್ಲೆಯ ನಾನಾ ಭಾಗಗಳಲ್ಲಿ ಅಲ್ಲದೆ ಗುಂಡ್ಲುಪೇಟೆ ತಾಲ್ಲೂಕಿನ ಉಪ್ಪಾರರು ಈ ರೀತಿಯ ಫೋಟೋಗಳನ್ನು ಮಾಡಿಸಿಕೊಂಡು ಪೂಜಿಸುವ ಪರಿಪಾಠವಿದೆ. ಹೀಗೆ ಹತ್ತು ಹಲವಾರು ವಿಚಾರಗಳನ್ನು ಹೊಂದಿಕೊಂಡಿರುವ ಶೈವ ಧರ್ಮದ ಬೆಳವಣಿಗೆಯ ದೇವಾಲಯಗಳು ಗುಂಡ್ಲುಪೇಟೆ ಪ್ರಾಂತ್ಯದಲ್ಲಿ ಗಂಗರ ಕಾಲದಿಂದ ಮೈಸೂರು ಒಡೆಯರ್ ಕಾಲದವರೆವಿಗೂ ಅನೇಕ ದೇವಾಲಯಗಳು ನಿರ್ಮಾಣವಾಗಿವೆ. ಇಂತಹ ಶೈವದೇವಾಲಯಗಳ ಜೀರ್ಣೋದ್ಧಾರವಾಗಿದೆ.

ಅಷ್ಟೇ ಅಲ್ಲದೆ ಕೆಲವೊಂದು ದೇವಾಲಯಗಳು ಕೇವಲ ಶಾಸನೋಕ್ತವಾದ ದಾಖಲೆಯಿಂದ ಕೂಡಿದೆ. ಲಭ್ಯವಿರುವ ಕೆಲವೊಂದನ್ನು ಸ್ಥಳೀಯರ ಮಾಹಿತಿಗಳ ಆಧಾರದಿಂದ ಕ್ಷೇತ್ರಕಾರ್ಯ ಕೈಗೊಂಡು ಸ್ಥಳದಲ್ಲಿಯೇ ವಾಸ್ತುಶಿಲ್ಪದ, ಸಾಂಸ್ಕೃತಿಕ ಹಿನ್ನೆಲೆಯ ಬಗ್ಗೆ, ಹಬ್ಬಹರಿದಿನಗಳ ಬಗ್ಗೆ, ಸ್ಥಳೀಯ ಜಾತ್ರೆಯ ಬಗ್ಗೆ, ಒಟ್ಟಾರೆ ಸಾಮಾಜಿಕ ಜನಜೀವನದ ಒಂದು ಸಾಂಸ್ಕೃತಿಕ ಚಿತ್ರಣವನ್ನು ನೀಡಲಾಗಿದೆ. ಚಿಕ್ಕಾಟಿ, ತೊಂಡವಾಡಿ, ಹಳ್ಳದಮಾದಹಳ್ಳಿ, ಸಂಪಿಗೆಪುರದಲ್ಲಿರುವ ಶಿವದೇವಾಲಯಗಳು (ಶೈವ) ಒಂದೇ ಮಾದರಿಯಲ್ಲಿದ್ದು, ಪ್ರಸ್ತುತದಲ್ಲಿ ಅವನತಿಯ ಸ್ಥಿತಿಯಲ್ಲಿದೆ. ಇವುಗಳು ಅತ್ಯಂತ ಪ್ರಾಚೀನ ದೇವಾಲಯಗಳಾಗಿವೆ. ಇವುಗಳು ತಮ್ಮದೇ ಆದ ಇತಿಹಾಸವನ್ನು ಹೊಂದಿವೆ. ಆದಕಾರಣ ಆಯಾ ಗ್ರಾಮದ ಸ್ಥಳೀಯರು ಅಲ್ಲದೆ ಮುಜರಾಯಿ ಇಲಾಖೆಯವರು ಈ ದೇವಾಲಯಗಳನ್ನು ಮುಂದಿನ ಪೀಳಿಗೆಗೆ ತಿಳಿಸುವುದಕ್ಕಾಗಿ ಉಳಿಸಿಕೊಳ್ಳಬೇಕಾಗಿದೆ. ಆ ಒಂದು ಕೆಲಸವನ್ನು ಸ್ಥಳೀಯರು ಸರ್ಕಾರದ ಮೇಲೆ ಒತ್ತಡ ತಂದು ಅಂದಿನ ಕಾಲದ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಬೇಕಾಗಿದೆ.

## ೩.೨. ಶೈವ ದೇವಾಲಯಗಳು

### ತ್ರಿಯಂಬಕಪುರ

ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ಒಂದು ಪ್ರಮುಖವಾದ ಗ್ರಾಮವಾಗಿದೆ. ತೆರಣಕಾಂಬಿಯಿಂದ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿ ನೈಋತ್ಯ ದಿಕ್ಕಿಗಿದೆ. ಹದಿನಾಡು, ಕೇರಳ, ತಮಿಳುನಾಡುಗಳು ಸೇರುವ ನೆಲೆಯಾಗಿದ್ದು, ಕೂಡುಗಲ್ಲೂರು ಅಲ್ಲಿ ಒಬ್ಬ ಕರ್ಣರಾಯನೆಂಬುವವನು ತ್ರಿಕಂದಬೇಶ್ವರನನ್ನು ಪ್ರತಿಷ್ಠಾಪಿಸಿದನೆಂದು ತಿಳಿದುಬರುತ್ತದೆ.[11] ಅಲ್ಲದೆ ಇಲ್ಲಿರುವ ದೇವರನ್ನು ಮೂರು ಕಣ್ಣುಳ್ಳವನಪುರ ಅಥವಾ ಈಶ್ವರನಪುರ ಎಂದು ಕರೆಯುವ ವಾಡಿಕೆ ಇದೆ.[12]

### ತ್ರಿಯಂಬಕೇಶ್ವರ ದೇವಾಲಯ

ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯದ ಅರ್ಚಕರಲ್ಲಿದ್ದ ತಾಮ್ರ ಶಾಸನದಲ್ಲೊಂದು ಅತ್ಯಂತ ವಿಶೇಷವಾದ ಆಶ್ಚರ್ಯವನ್ನು ಸೃಷ್ಟಿಸುವ ಕುತೂಹಲಕರವಾದ ಶಾಸನವಾಗಿದೆ.[13] ಈ ಶಾಸನದಲ್ಲಿ ವಿಜಯನಗರ ಅರಸರ ವಂಶಾವಳಿಯನ್ನು ತಿಳಿಸುತ್ತದೆ. ಆದರೆ ಇಮ್ಮಡಿ ಬುಕ್ಕನಿಗೆ ಹರಿಹರನೆಂಬ ಹೆಸರಿನ ಮಗ ಇರಲಿಲ್ಲ. ಬುಕ್ಕನ ಸಹೋದರ ಒಂದನೇ ದೇವರಾಯನಿಗೆ ಹರಿಹರನೆಂಬ ಮಗನಿದ್ದ, ಸೋದರನ ಮಕ್ಕಳನ್ನು ಮಗನೆಂದು ಶಾಸನಗಳಲ್ಲಿ ಹೇಳಿರುವುದು ಅಪರೂಪವೇನಲ್ಲ.[14] ಈ ಶಾಸನದ ಕಾಲವು ಕ್ರಿ.ಶ.1417[15] ಇದೇ ಊರಿನಲ್ಲಿರುವ

ಅರ್ಚಕನ ವಶದಲ್ಲಿದ್ದ ಒಂದನೆಯ ತಾಮ್ರಶಾಸನದ ಪ್ರಕಾರ ವಿಜಯನಗರ ಅರಸ ಮಲ್ಲಿಕಾರ್ಜುನನ ವಿಚಾರದ ಬಗ್ಗೆ ತಿಳಿದುಬರುತ್ತದೆ. ಒಟ್ಟಾರೆಯಾಗಿ ಶಾಸನಗಳನ್ನು ಗಮನಿಸಿದರೆ ವಿಜಯನಗರ ಅರಸರ ಕಾಲಕ್ಕೆ ತ್ರಿಯಂಬಕಪುರ ಎಂಬ ಹೆಸರು ಗಳಿಸಿತ್ತು.

ತ್ರಿಯಂಬಕೇಶ್ವರ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗುಡಿ, ಶುಕನಾಸ, ನವರಂಗ, ಮುಖಮಂಟಪ, ನಂದಿಮಂಟಪ, ಮಹಾದ್ವಾರ ಮಂಟಪವನ್ನು ಹೊಂದಿದೆ. ಅಲ್ಲದೆ ದೇವಾಲಯದ ದಕ್ಷಿಣ ದಿಕ್ಕಿಗೂ ಒಂದು ದ್ವಾರಮಂಟಪ ಇದೆ. ತ್ರಿಯಂಬಕಪುರ ವಿಜಯನಗರ ಅರಸರ ಕಾಲಕ್ಕೆ ಬಹಳವಾಗಿ ಪ್ರಸಿದ್ಧಿಗೆ ಬಂದಿತ್ತು. ಇಲ್ಲಿರುವ ಬಹುದೊಡ್ಡದಾದ ಸುಂದರವಾದ ದೇವಾಲಯವನ್ನು ವಿಜಯನಗರ ಅರಸನಾದ ಎರಡನೇ ಬುಕ್ಕನ ಕಾಲಕ್ಕೆ ಆಗಿದೆ. (ಚಿತ್ರಸಂಖ್ಯೆ–1)

ತ್ರಿಯಂಬಕಪುರ ಗ್ರಾಮದಲ್ಲಿ ದೇವಾಲಯಕ್ಕೆ ಪೂರಕವಾಗಿ ಸುಮಾರು 19 ಶಾಸನಗಳಿವೆ. ತ್ರಿಯಂಬಕೇಶ್ವರ ದೇವಸ್ಥಾನದ ಪ್ರಾಕಾರದಲ್ಲಿರುವ ಶಾಸನವು ಕ್ರಿ.ಶ.1521ರ ಕಾಲಕ್ಕೆ ಸೇರಿದ್ದು, ಕೃಷ್ಣದೇವರಾಯನ ಆಳ್ವಿಕೆಯನ್ನು ತಿಳಿಸುತ್ತದೆ. ತ್ರಿಯಂಬಕ ದೇವರ ಅಮೃತಪಡಿ ಅಂಗರಂಗ ವೈಭವ ನಡೆಯಬೇಕೆಂದು ದಾನ ನೀಡಿರುವುದಾಗಿ ತಿಳಿದುಬರುತ್ತದೆ.[16] (ಚಿತ್ರಸಂಖ್ಯೆ–2)

ತ್ರಿಯಂಬಕೇಶ್ವರ ದೇವಸ್ಥಾನದ ಪ್ರಾಕಾರದಲ್ಲಿರುವ ಶಾಸನವು ಕ್ರಿ.ಶ.1492ರಲ್ಲಿ ರಚಿಸಲಾಗಿದೆ. ಇದು ಸುಮಾರು 42 ಸಾಲುಗಳಿಂದ ಕೂಡಿದ್ದು, ತ್ರಿಯಂಬಕ ದೇವರ ಭಂಡಾರಕೆ ವರುಷಪೂರ್ತಿ ಪೂಜೆಗಾಗಿ ಅನೇಕ ಬಗೆಯ ಕೊಡುಗೆಯನ್ನು ನೀಡಿರುವುದು ತಿಳಿದುಬರುತ್ತದೆ. ಗದ್ದೆಬೆದ್ದಲು, ಅಡಿಕೆತೋಟ, ಗದ್ದೆ ಹೊಲವನ್ನು ದಾನವಾಗಿ ನೀಡಿದ್ದಾರೆ.[17]

ಶ್ರೀ ಗುರುಮೂರ್ತಿ ತ್ರಿಯಂಬಕದೇವರ ಭಂಡಾರಕ್ಕೆ ರಾಮಾಭಟ್ಟನವರ ಕಾರ್ಯಕ್ಕೆ ಕರ್ತರಾದ ಭಾಸ್ಕರಯ್ಯರವರ ಪಾರುಪತ್ಯದಲ್ಲಿ ತ್ರಿಯಂಬಕದೇವರ ಸ್ಥಾನಿಕ ವಶಿಷ್ಠಗೋತ್ರದ ದ್ರಾವ್ಯಾಯಣಸೂತ್ರದ ಶಾಮಶಾಖಾಧ್ಯಾಯರಾದ ನಂಜಿನಾಥ ಜೋಯಿಸರ ಮಕ್ಕಳು ಸ್ಥಾನಿಕ ಅಯ್ಯಪಗಳು ಭೂದಾನ ನೀಡಿರುವುದು ತಿಳಿದುಬರುತ್ತದೆ.[18] ಮೈಲಾರಯ್ಯನ ಮಗ ಲಿಂಗಣ,[19] ರಾಯಸದ ತಿಂಬರಸರು,[20] ವಿರೂಪಾಕ್ಷ[21] ಇವರೆಲ್ಲರೂ ಬಹುಶಃ ದೇವಾಲಯಕ್ಕೆ ಕೊಡುಗೆಯನ್ನು ನೀಡಿದ್ದಾರೆಂದು ತಿಳಿಯಬಹುದಾಗಿದೆ. ತ್ರಿಯಂಬಕೇಶ್ವರ ದೇವಸ್ಥಾನದ ಅರ್ಚಕನ ವಶದಲ್ಲಿದ್ದ ಐದನೆಯ ತಾಮ್ರಶಾಸನವು ಕ್ರಿ.ಶ.15ನೇ ಶತಮಾನಕ್ಕೆ ಸೇರಿದ್ದು, ಈ ಭಾಗದ ತೋಟವನ್ನು ದೇವರ ಕಾರ್ಯಕ್ಕೆ ದಾನ ನೀಡಿರುವುದು ತಿಳಿದುಬರುತ್ತದೆ.[22] ಉಮ್ಮತ್ತೂರು ಪಾಳೆಯಗಾರರು ಸಹ ದೇವಾಲಯಕ್ಕೆ ದಾನ ನೀಡಿರುವುದಾಗಿ ತಿಳಿದುಬರುತ್ತದೆ.[23]

ಈ ದೇವಾಲಯವನ್ನು ಚೌಕಾಕಾರ ಮತ್ತು ಆಯತಾಕಾರದಲ್ಲಿ ನಿರ್ಮಿಸಲಾಗಿದೆ. ಪ್ರಾಕಾರದ ಪೂರ್ವ ಮತ್ತು ದಕ್ಷಿಣ ದಿಕ್ಕಿನ ಭಾಗಗಳಲ್ಲಿ ಮಹಾದ್ವಾರಗಳಿವೆ. ಅದರಲ್ಲಿ ಪೂರ್ವ ದಿಕ್ಕಿಗೆ ಇರುವ ದ್ವಾರವು ಸುಂದರವಾಗಿ ಕಟ್ಟಲಾಗಿದೆ. ದೇವಾಲಯದ ಎದುರಿಗೆ ದೀಪಸ್ತಂಭ, ಬಲಿಪೀಠ ಮತ್ತು ನಂದಿ ಮಂಟಪಗಳಿವೆ. ಈ ದೇವಾಲಯದ ಉತ್ತರ ದಿಕ್ಕಿಗೆ ಪಾರ್ವತಿ ಗುಡಿಯು, ಪಶ್ಚಿಮಕ್ಕೆ ಪಂಚಲಿಂಗೇಶ್ವರ ಗುಡಿಗಳಿವೆ. ಪಂಚಲಿಂಗಗಳನ್ನು ಐದು ಗೂಡುಗಳಲ್ಲಿ ಪ್ರತ್ಯೇಕವಾಗಿ ಪ್ರತಿಷ್ಠಾಪಿಸಲಾಗಿದೆ. ಪ್ರಧಾನ ದೇವಾಲಯದ ನೈಋತ್ಯ ದಿಕ್ಕಿನಲ್ಲಿ 54 ಕಂಬಗಳುಳ್ಳ ಕಲ್ಯಾಣ ಮಂಟಪವಿದೆ. ಪ್ರಾಕಾರದ ಆಗ್ನೇಯ ಮೂಲೆಗೆ ಎರಡು ಗರ್ಭಗುಡಿಗಳಿವೆ. ಅವುಗಳಲ್ಲಿ ಕ್ರಮವಾಗಿ ಮಹಿಷಾಸುರ ಮರ್ದಿನಿ ಮತ್ತು ಸಪ್ತ ಮಾತೃಕೆಯರ ಶಿಲ್ಪಗಳಿವೆ ಮತ್ತು ಪೂರ್ವಾರ್ಧ ಗುಡಿಯು ಯೋಗಶಾಲೆಯಾಗಿದೆ. ಪ್ರಾಕಾರದ ಈಶಾನ್ಯ ಮೂಲೆಯಲ್ಲಿ ಕಂಬಗಳಿಂದ ಕೂಡಿದ ಮಂಟಪಗಳ ಅವಶೇಷಗಳು ಕಂಡುಬರುತ್ತದೆ. ದೇವಾಲಯದ ಮೂಲಗರ್ಭಗುಡಿಯಲ್ಲಿ ಕಲ್ಲುಪೀಠದ ಮೇಲೆ ತ್ರಿಯಂಬಕೇಶ್ವರ ಮೂರ್ತಿಯ ಶಿಲ್ಪ ಇದೆ. (ಚಿತ್ರಸಂಖ್ಯೆ-3) ಈ ದೇವಾಲಯದ ಗರ್ಭಗುಡಿಗೆ ಬೆಳಕಿನ ಮೂಲವೆಂದರೆ, ಸೂರ್ಯನ ಬೆಳಕು, ಸೂರ್ಯನ ಕಿರಣ ನೇರವಾಗಿ ತ್ರಿಯಂಬಕೇಶ್ವರ ಮೂರ್ತಿಗೆ ಬೆಳಕನ್ನು ಬೀರುವುದು ಇಲ್ಲಿಯ ವಿಶೇಷವಾಗಿದೆ. ಚೌಕಾಕಾರದ ಗರ್ಭಗುಡಿಗೆ ಚೌಕಾಕಾರದ ಅಂತರಾಳವನ್ನು ಪೂರ್ವದಿಕ್ಕಿಗೆ ಇರುವ ಬಾಗಿಲಿನ ಮೂಲಕ ಸೇರಿಸಲಾಗಿದೆ. ಅಂತರಾಳವು ಚೌಕಾಕಾರದ ರಂಗಮಂಟಪಕ್ಕೆ ತೆರೆದುಕೊಂಡಿದೆ. ರಂಗಮಂಟಪದ ಪಶ್ಚಿಮಕ್ಕೆ ಅಂತರಾಳವನ್ನು ಸುತ್ತುವರೆದಿರುವ ಎರಡು ತೆರೆದ ದಾರಿಗಳಿದ್ದು, ಅವು ಗರ್ಭಗೃಹ ಹಾಗೂ ಅಂತರಾಳವನ್ನು ಸುತ್ತುವರೆದಿರುವ ಪ್ರದಕ್ಷಿಣಾ ಪಥಗಳನ್ನು ಸೇರುತ್ತದೆ. ರಂಗಮಂಟಪಕ್ಕೆ ಅಥವಾ ನವರಂಗಕ್ಕೆ ಪೂರ್ವ ಮತ್ತು ದಕ್ಷಿಣದ ದಿಕ್ಕಿಗೆ ಎರಡು ಬಾಗಿಲುಗಳಿದ್ದು, ಅವು ಮುಖಮಂಟಪಗಳಿಗೆ ಕೊಂಡೊಯ್ಯುತ್ತವೆ. ನವರಂಗದ ಮಧ್ಯದಲ್ಲಿ ಎರಡು ಸಾಲುಗಳ ಕಂಬಗಳಿದ್ದು, ಒಂದೊಂದು ಸಾಲಿನಲ್ಲಿ ಐದರಂತೆ ಒಟ್ಟು ಹತ್ತು ಕಂಬಗಳಿವೆ. ಈ ಕಂಬಗಳ ಮಧ್ಯದಲ್ಲಿ ಒಂದು ನಂದಿಶಿಲ್ಪ ಇದೆ. ಮೇಲ್ಭಾಗದಲ್ಲಿ ಭುವನೇಶ್ವರಿಯನ್ನು ಕೆತ್ತಲಾಗಿದೆ. ನವರಂಗದ ಅಧಿಷ್ಠಾನವು ಕೆಳಗಿನಿಂದ ಉಪಾನ, ಜಗತಿ, ತ್ರಿಪಟ್ಟ, ಕುಮುದ, ಕಾಂತ, ಪಟ್ಟಿಕಾ, ಕಾಂತ ಮತ್ತು ಪ್ರತಿಗಳ ರಚನೆಯಿಂದ ಕೂಡಿದೆ. ಗೋಡೆಗಳಲ್ಲಿ ನಿಯತವಾದ ಅಂತರಕ್ಕೊಂದರಂತೆ ಗೋಡೆಗಂಬಗಳನ್ನು ಕೆತ್ತಲಾಗಿದೆ. ಉತ್ತರ ಗೋಡೆಯ ಮಧ್ಯದಲ್ಲಿ ಒಂದು ಗೂಡು ಇದೆ. ಪೂರ್ವದ ದಿಕ್ಕಿನ ಮುಖಮಂಟಪದಲ್ಲಿ ದಕ್ಷಿಣ ಮತ್ತು ಉತ್ತರದ ಕಡೆಗೆ ಮೆಟ್ಟಿಲುಗಳ ಹಂತಗಳನ್ನು ಮಾಡಲಾಗಿದೆ.

ರಂಗಮಂಟಪದ ಪಶ್ಚಿಮ ಗೋಡೆಗಳು ಪ್ರದಕ್ಷಿಣಪಥದ ಗೋಡೆಗಳನ್ನು ಸೇರಿದ್ದು ದಕ್ಷಿಣ ಗೋಡೆಯಲ್ಲಿ ಸಣ್ಣ ಜಾಲೇಂದ್ರವುಳ್ಳ ಕಿಟಕಿ ಇದೆ. ನವರಂಗದ ಗೋಡೆಯ ತುದಿ ಮೇಲ್ಭಾಗದಲ್ಲಿ ವ್ಯಾಸಗಳಿಂದ ಕೂಡಿದ ಕಲ್ಲಿನ ಕೈಪಿಡಿ ಇದೆ. ಅದು ದೇವಾಲಯದ ಸುತ್ತಲೂ ಬಂದಿದೆ.

ಪೂರ್ವದ ಮುಖಮಂಟಪದ ಛಾವಣಿಯ ಮೂಲೆಯಲ್ಲಿ ಎರಡು ದುಂಡಾದ ಕಾರ್ನಿಸ್ ಇದ್ದು, ದಕ್ಷಿಣದ ಮುಖಮಂಟಪದಲ್ಲಿ ಕೋನಾಕೃತಿಯ ಚಜ್ಜ ಇದೆ. ಈ ಮುಖಮಂಟಪಗಳ ಮೇಲೆ ಸುಣ್ಣಗಾರೆಯಲ್ಲಿ ಮಾಡಿದ ಗೂಡುಗಳ ಸರಣಿಗಳು ಕಂಡುಬರುತ್ತದೆ.

ಮೂಲಗರ್ಭಗುಡಿಯಲ್ಲಿ ತ್ರಿಯಂಬಿಕ ದೇವರ ಶಿವಲಿಂಗ ಇದೆ. ಈ ದೇವಾಲಯದಲ್ಲಿ ಗಣಪತಿ, ಕಾರ್ತಿಕೇಯರ ಷಣ್ಮುಖ (ಕುಮಾರ) (ಚಿತ್ರಸಂಖ್ಯೆ-4) ಶಿಲ್ಪಗಳಿವೆ. ಅಲ್ಲದೆ ರಾಮ, ಸೀತೆ, ಆಂಜನೇಯರ ಶಿಲ್ಪಗಳಿವೆ. ಸುಮಾರು 15 ಮೀಟರ್ ಎತ್ತರವಿರುವ ಒಂದೇ ಕಲ್ಲಿನ ದೀಪಸ್ತಂಭವಿದೆ. (ಚಿತ್ರಸಂಖ್ಯೆ-5) ಪ್ರಾಕಾರದಲ್ಲಿ ಒಂದು ಚಿಕ್ಕ ಚಂಡಿಕೇಶ್ವರನ ಗುಡಿ ಇದೆ. ಈ ತ್ರಿಯಂಬಕೇಶ್ವರ ದೇವಾಲಯದಲ್ಲಿ ವಿಜಯನಗರದ ವಾಸ್ತುಶೈಲಿಯ ಪ್ರಧಾನ ವಾಸ್ತು ಶೈಲಿಯ ಕಲಾ ವೈಶಿಷ್ಟ್ಯಗಳಿಂದ ಕೂಡಿದ ಹಲವಾರು ಸ್ತಂಭ ಪಂಕ್ತಿಗಳಿಂದ ಕೂಡಿದೆ. ಮಂಟಪಗಳು ಮುಖ್ಯವಾಗಿ ದ್ರಾವಿಡ ಶೈಲಿಯ ನಿರ್ಮಿತಿಗಳನ್ನು ಕಾಣಬಹುದಾಗಿದೆ. ವಿಜಯನಗರ ಅರಸರ ಸ್ಥಾಪತಿಗಳು ದೇವಾಲಯ ನಿರ್ಮಾಣವೆಂದರೆ ಅದೊಂದು ಬಗೆಯ ದೇವಕಾರ್ಯವೆಂದೆ ಬಗೆದಿದ್ದರೂ ಅವರ ಶೈಲಿಯೂ ಕೇವಲ ಶುಷ್ಕ ನಿಯಮ ನಿಷ್ಠೆಯಿಂದ ಪ್ರೇರಿತವಾದ ನೀರಸ ಶೈಲಿಯಾಗಿರಲಿಲ್ಲ. ಪೋಷಕ ರಾಜರುಗಳ ಧರ್ಮ ಶ್ರದ್ಧೆಗೂ ಸ್ಪೂರ್ತಿ, ವಿಶೇಷಕ್ಕೂ ಅನುಗುಣವಾಗಿ ಅವರು ತಮ್ಮ ಶೈಲಿಯ ವಿಶೇಷತೆಯನ್ನು ರೂಪಿಸಿಕೊಂಡವರಾಗಿದ್ದರು, ಆದಕಾರಣ ನಾವು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯ ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯದಲ್ಲಿ ಕಾಣಬಹುದಾಗಿದೆ.

ಪ್ರತಿ ಸೋಮವಾರ ವಿಶೇಷ ಪೂಜೆ ನಡೆಯುತ್ತದೆ. ಅಲ್ಲದೆ ಅಮವಾಸ್ಯೆ, ಹುಣ್ಣಿಮೆ, ಶಿವರಾತ್ರಿ ಹಬ್ಬದ ಸಂದರ್ಭದಲ್ಲಿಯೂ ಕೂಡ ವಿಶೇಷ ಪೂಜೆ ಪುನಸ್ಕಾರ ಕಾರ್ಯಗಳು ನಡೆಯುತ್ತವೆ. ಗುಂಡ್ಲುಪೇಟೆ ತಾಲ್ಲೂಕಿನ ನಾನಾ ಕಡೆಯ ಜನರು ದೇವಿಯ ದರ್ಶನಕ್ಕೆ ಆಗಮಿಸುತ್ತಾರೆ. ದೇವಾಲಯದ ಪರಿಸರದಲ್ಲಿ ಒಂದು ದೊಡ್ಡ ಮಂಟಪ ಇದೆ. ಈ ಮಂಟಪದಲ್ಲಿ ಸುಮಾರು 50ಕ್ಕೂ ಹೆಚ್ಚು ಕಂಬಗಳಿವೆ. ಆದಕಾರಣ ಈ ಮಂಟಪವನ್ನು ಗಮನಿಸಿದರೆ ಹಿಂದೆ ಈ ಮಂಟಪದಲ್ಲಿ ಹಲವಾರು ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು ಎಂಬುದರಲ್ಲಿ ಯಾವುದೇ ರೀತಿಯ ಅನುಮಾನವಿಲ್ಲ. ನವರಾತ್ರಿಯ ಸಂದರ್ಭದಲ್ಲಿಯೂ ಸಹ ಈ ದೇವಾಲಯದಲ್ಲಿ ವಿಶೇಷ ಪೂಜೆ, ಪುನಸ್ಕಾರಗಳು ನಡೆಯುತ್ತವೆ. (ಚಿತ್ರಸಂಖ್ಯೆ-6)

## ಪಾರ್ವತಿ ದೇವಾಲಯ–ತ್ರಿಯಂಬಕಪುರ

ತ್ರಿಯಂಬಕಪುರದಲ್ಲಿ ಇನ್ನೊಂದು ಪಾರ್ವತಿ ಅಮ್ಮರವರ ದೇವಾಲಯ ಇದೆ. ಈ ದೇವಾಲಯವು ಸಹ ಪೂರ್ವಾಭಿಮುಖವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ ಮತ್ತು ದ್ವಾರಮಂಟಪವನ್ನು ಒಳಗೊಂಡಿದೆ. ಮೂಲಗರ್ಭಗುಡಿಯಲ್ಲಿ ಕಲ್ಲುಪೀಠದ ಮೇಲೆ ಸುಮಾರು 5 ಅಡಿ ಎತ್ತರವಿರುವ ಪಾರ್ವತಿ ಅಮ್ಮರವರ ಶಿಲ್ಪ ಇದೆ. ಗರ್ಭಗೃಹದ ಲಲಾಟ ಬಿಂಬದಲ್ಲಿ ಕಮಲದ ಕೆತ್ತನೆ ಇದೆ. ಶುಕನಾಸದಲ್ಲಿ ಯಾವುದೇ ಶಿಲ್ಪವಾಗಲಿ ಕಂಡುಬರುವುದಿಲ್ಲ. ಆದರೆ ಲಲಾಟ ಬಿಂಬದಲ್ಲಿ ನಂದಿ ಶಿಲ್ಪ ಇದೆ. ಇದನ್ನು ಸೂರ್ಯ, ಚಂದ್ರರ ಸಾಕ್ಷಿಯಾಗಿ ಕೆತ್ತಿರುವುದು ತಿಳಿದುಬರುತ್ತದೆ.

ನವರಂಗದಲ್ಲಿ ನಾಲ್ಕು ಕಂಬಗಳಿವೆ. ನವರಂಗದ ಮುಖ್ಯದ್ವಾರದ ಇಕ್ಕೆಲಗಳಲ್ಲಿ ವಿಜಯನಗರ ಶೈಲಿಯ ಕಂಬಗಳಿವೆ. ಅದರಲ್ಲಿ ವ್ಯಾಳವಾರಿ ಶಿಲ್ಪಗಳನ್ನು ಸಹ ಕಡೆಯಲಾಗಿದೆ. ದ್ವಾರದ ಲಲಾಟ ಬಿಂಬದಲ್ಲಿ ನಂದಿ ಶಿಲ್ಪ ಇದೆ. ಅದರ ಮುಂದೆ ಒಂದು ಸಾಲು ನಾಲ್ಕು ಕಂಬಗಳಿದ್ದು, ಅದರ ಮಧ್ಯದಲ್ಲಿ ದ್ವಾರವಿದೆ. ಮೂಲ ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ವಿಮಾನ ಇದೆ. ಇದರಲ್ಲಿ ಸಿಂಹಮುಖ ಮತ್ತು ವ್ಯಾಳವಾರಿ ಮುಖಗಳನ್ನು ಮಾಡಲಾಗಿದೆ. ಒಟ್ಟಾರೆ ನೋಡುವುದಾದರೆ, ತ್ರಿಯಂಬಕಪುರ ವಿಜಯನಗರದ ಅರಸರ ಕಾಲದಲ್ಲಿ ಒಂದು ಧಾರ್ಮಿಕ ಕೇಂದ್ರವಾಗಿತ್ತೆಂದು ತಿಳಿಯಬಹುದಾಗಿದೆ. (ಚಿತ್ರಸಂಖ್ಯೆ–7) ಈ ಗ್ರಾಮದಲ್ಲಿ ಯುಗಾದಿ, ಸಂಕ್ರಾಂತಿ, ಮಹಾಶಿವರಾತ್ರಿ, ರಾಮನವಮಿ, ಕಾರ್ತಿಕ ಮಾಸಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಸಾವಿರಾರು ಸಂಖ್ಯೆಯಲ್ಲಿ ಜನರು ಇಲ್ಲಿಗೆ ಬಂದು ಶಿವನ ದರ್ಶನದ ಜೊತೆಗೆ ಪಾರ್ವತಮ್ಮನ ದರ್ಶನವನ್ನು ಪಡೆಯುತ್ತಾರೆ.

## ಸಿದ್ಧರಾಮೇಶ್ವರ ದೇವಾಲಯ–ಹಸುಗೂಲಿ

ಹಸುಗೂಲಿ ಗ್ರಾಮವು ಗುಂಡ್ಲುಪೇಟೆಯಿಂದ ಸುಮಾರು 12 ಕಿಲೋಮೀಟರ್ ದೂರದಲ್ಲಿದ್ದು, ಇದು ಬೇಗೂರು ಹೋಬಳಿಗೆ ಸೇರಿದೆ. ಸ್ಥಳೀಯರ ಪ್ರಕಾರ ನೋಡುವುದಾದರೆ, ಈ ಊರಿಗೆ ಪಶು ಎಂದರೆ ಹಸು ಅಥವಾ ಸಾಕುಪ್ರಾಣಿಗಳಿಗೆ ಸೇರಿರುತ್ತದೆ. ಹಸುಗೂಲಿಗೆ ಕ್ರಿ.ಶ.10ನೇ ಶತಮಾನದಲ್ಲಿ 'ಪುಸುಗೂಲಿ' ಎಂದು ಕರೆಯಲಾಗಿದೆ.[24] ನಂತರ ಕ್ರಿ.ಶ.12ನೇ ಶತಮಾನದಲ್ಲಿ ಹಾಗೂ ಕ್ರಿ.ಶ.13ನೇ ಶತಮಾನದಲ್ಲಿ ಹಸುಕಲಿ ಎಂದೂ ಈಗ 'ಹಸುಗೂಲಿ' ಎಂದು ಕರೆಯುವ ವಾಡಿಕೆ ಇದೆ. ಇನ್ನೊಂದು ಮಾಹಿತಿಯ ಪ್ರಕಾರ ಎಮ್ಮೆ ಮತ್ತು (ಪಶು) ಯ ಕೊಲ್ಲುವ ಎನ್ನುವ ಅರ್ಥವಿದೆ. ಅಲ್ಲಿನ ಹಸುಗೂಲಿ ಮಾರಮ್ಮನಿಗೆ ಎಮ್ಮೆಗಳನ್ನು ಬಲಿಕೊಡುವ

ಪದ್ಧತಿ ಇತ್ತು. ಆದ್ದರಿಂದ ಹಸುಕೊಲೆ, ಹಸುಕೂಲಿ, ಹಸುಗೂಲಿಯಾಗಿರಬಹುದು ಎಂಬ ಅಭಿಪ್ರಾಯವಿದೆ.

ಸಿದ್ಧರಾಮೇಶ್ವರ ದೇವಾಲಯದ ಮುಂದೆ ನಿಂತಿರುವ ಕಲ್ಲು ಶಾಸನದ ಪ್ರಕಾರ ಕ್ರಿ.ಶ.18ನೇ ಶತಮಾನಕ್ಕೆ ಸೇರಿದ ಶಾಸನವಾಗಿದ್ದು, ಹೂಂನಪ್ಪನಾಯಕರು ರಾಮೇಶ್ವರ ದೇವರಿಗೆ ನಂದಾದೀವಿಗೆ ದಾನವನ್ನು ನೀಡಿರುವ ವಿಚಾರ ತಿಳಿದುಬರುತ್ತದೆ.[25] ಮತ್ತೊಂದು ಶಾಸನವು ಸಿದ್ಧರಾಮೇಶ್ವರ ದೇವಾಲಯದ ದಿಕ್ಕಿನ ಹೊರಭಾಗದ ಗೋಡೆಯ ಮೇಲೆ ಮೊದಲನೆಯ ಶಾಸನ ಪ್ರಕಾರ ಹಸುಕಲಿಯ ಮಂಚಮರಡಿಯ ಮಗ ಕಲಿ ರಾಮನಾಥ ದೇವರ ಗುಡಿಯ ಶ್ರೀ ಹೊರತರದ ಕಲುಗೆಲಸಕ್ಕೆ ದಾನವನ್ನು ನೀಡಿರುವ ಬಗ್ಗೆ ತಿಳಿದುಬರುತ್ತದೆ.[26] ಇದೇ ದೇವಾಲಯದ ಇನ್ನೊಂದು ಶಾಸನ ಪ್ರಕಾರ ಈ ಸೀಮೆಯ ಶ್ರೀ ಹಸುಕಲಿಯ ರಾಮಯದೇವರ ಕಾರ್ಯಕ್ಕೆ ಶ್ರೀ ಮುಂದುಹರಾಜಾಡಿಯ ಆ ಮಹದೇವನು ಸರ್ವೇಸಾಮಾನ್ಯವಾಗಿ ಬಿಟ್ಟ ದಾನವನ್ನು ಕುರಿತು ತಿಳಿಸುತ್ತದೆ.[27] (ಚಿತ್ರಸಂಖ್ಯೆ–8)

ಆದಕಾರಣ ಈ ದೇವಾಲಯಕ್ಕೆ ಕ್ರಿ.ಶ.12ನೇ ಶತಮಾನದಿಂದ 18ನೇ ಶತಮಾನದವರೆಗೂ ನಿರಂತರವಾಗಿ ದಾನದತ್ತಿಗಳನ್ನು ನೀಡಿರುವ ಬಗ್ಗೆ ತಿಳಿದುಬರುತ್ತದೆ.

ಹಸುಗೂಲಿಯ ಸಿದ್ಧರಾಮೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ದ್ರಾವಿಡ ಶೈಲಿಯ ದೇವಾಲಯವಾಗಿದೆ. ಮೂಲಗರ್ಭಗುಡಿಯಲ್ಲಿ ಶಿವಲಿಂಗ ಇದೆ. ತೆರೆದ ಅಂತರಾಳ ಅಥವಾ ಶುಕನಾಸಿ ಇದೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಸುತ್ತಲೂ 12 ಗೋಡೆ ಕಂಬಗಳಿವೆ. (ಚಿತ್ರಸಂಖ್ಯೆ–9) ನವರಂಗದಲ್ಲಿ ಶಿವಲಿಂಗಕ್ಕೆ ಎದುರಾಗಿ ಒಂದು ನಂದಿ ಶಿಲ್ಪ ಇದೆ. ಈ ರಾಮೇಶ್ವರ ದೇವಾಲಯ ಕೆಲವು ಭಾಗ ದುಃಸ್ಥಿತಿ ಹೊಂದಿದೆ. ನವರಂಗದಲ್ಲಿರುವ ಕಂಬಗಳನ್ನು ನೋಡಿದರೆ, ತಿರುಮಕೂಡಲು ನರಸೀಪುರ ತಾಲ್ಲೂಕಿನ ತಡಿಮಾಲಂಗಿಯಲ್ಲಿರುವ ಮಹಾಲಿಂಗೇಶ್ವರ ದೇವಾಲಯದ ಮಾದರಿಯಲ್ಲಿಯೇ ಕಂಬಗಳಿವೆ. (ಚಿತ್ರಸಂಖ್ಯೆ–10)

ಈ ದೇವಾಲಯವು ಚೋಳರ ಕಾಲದಲ್ಲಿಯೇ ನಿರ್ಮಿತವಾಗಿರುವ ದೇವಾಲಯವಾಗಿದೆ. ದೇವಾಲಯದ ಸುತ್ತಲೂ ಚೋಳ ಶೈಲಿಯಲ್ಲಿಯೇ ಅರೆಕಂಬಗಳು ಕೋಷ್ಠಮಂಟಪಗಳನ್ನು ಕಾಣಬಹುದಾಗಿದೆ. ಈ ದೇವಾಲಯವು ಅಧಿಷ್ಠಾನ, ತ್ರಿಪಟ್ಟಕುಮುದ ಪತಿ, ಹಾರಗಳನ್ನು ಹೊಂದಿದೆ. ನವರಂಗದಲ್ಲಿ ಮಹಿಷಮರ್ದಿನಿ ಶಿಲ್ಪ (ಚಿತ್ರಸಂಖ್ಯೆ–11), ಉಮಾಮಹೇಶ್ವರ (ಚಿತ್ರಸಂಖ್ಯೆ–12), ಸೂರ್ಯ (ಚಿತ್ರಸಂಖ್ಯೆ–13), ಶಂಕರನಾರಾಯಣ (ಚಿತ್ರಸಂಖ್ಯೆ–14), ನಂದಿ, ಗಣಪತಿ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ವಿಮಾನ ಇದೆ. ಇದೊಂದು ಶೈವ ಪರಂಪರೆಗೆ ಪೂರಕವಾದ ದೇವಾಲಯವಾಗಿದೆ. ಈ ದೇವಾಲಯದಲ್ಲಿ

ಸೋಮವಾರ, ಶುಕ್ರವಾರ ಹಾಗೂ ಶಿವರಾತ್ರಿ, ಅಮವಾಸ್ಯೆ, ಹುಣ್ಣಿಮೆ ಸಂದರ್ಭದಲ್ಲಿ ವಿಶೇಷ ಪೂಜಾಕಾರ್ಯ ನಡೆಯುತ್ತದೆ.

## ಮಳವಳ್ಳಿಯಲ್ಲಿರುವ ದೇವಾಲಯಗಳು

ಗುಂಡ್ಲುಪೇಟೆ ತಾಲ್ಲೂಕು ಮಳವಳ್ಳಿ ಗ್ರಾಮದಲ್ಲಿ ಬಸವೇಶ್ವರ ದೇವಾಲಯ (ಚಿತ್ರಸಂಖ್ಯೆ-15), ಸಿದ್ದಪ್ಪಾಜಿ ದೇವಾಲಯ ಮತ್ತು ಮಲ್ಲೈ ಮಹದೇಶ್ವರ ದೇವಾಲಯಗಳಿವೆ. ಈ ದೇವಾಲಯಗಳೆಲ್ಲವು ಕ್ರಿ.ಶ.16-17ನೇ ಶತಮಾನದ ನಂತರ ಕಾಲದ ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಮಲ್ಲೈಮಹದೇಶ್ವರ ಗದ್ದಿಗೆ ಬಸವೇಶ್ವರ ದೇವಾಲಯ, ಸಿದ್ದಪ್ಪಾಜಿ ದೇವಾಲಯ, ಅಲ್ಲದೆ ಊರಿನ ಒಳಗೆ ಮತ್ತೊಂದು ಬಸವೇಶ್ವರ ದೇವಾಲಯವಿದೆ. ಊರಿನ ಉಪ್ಪರಿಗೆ ಬಸವನಗುಡಿಗೆ ಪಶ್ಚಿಮಕ್ಕೆ ನೆಟ್ಟ ಶಾಸನದಲ್ಲಿ ವಿಜಯನಗರದ ಅರಸರಾದ ವೀರಪ್ರತಾಪ ಸದಾಶಿವರಾಯರವರೆ ಆಡಳಿತದ ಬಗ್ಗೆ ಅಂದರೆ ಕ್ರಿ.ಶ.1559 ರಲ್ಲಿ ಆಳ್ವಿಕೆ ನಡೆಸಿರುವುದು ತಿಳಿದುಬರುವುದಲ್ಲದೆ, ತೆರಕಣಾಂಬಿ ರಾಜ್ಯದಲ್ಲಿ ಸಂತೆ ನಡೆಯುತ್ತಿರುವ ಬಗ್ಗೆ ಶಾಸನದಿಂದ ಉಲ್ಲೇಖಿತಗೊಂಡಿದೆ.[28] (ಚಿತ್ರಸಂಖ್ಯೆ-16)

ಮಳವಳ್ಳಿಯ ಒಂದು ಚಿಕ್ಕದಾದ ಬೆಟ್ಟದ ಮೇಲೆ ಮಹದೇಶ್ವರ ಮತ್ತು ಸಿದ್ದಪ್ಪಾಜಿ ಗದ್ದಿಗೆ ಇದೆ. ಸಿದ್ದಪ್ಪಾಜಿ ಗದ್ದಿಗೆಯು ಪೂರ್ವಾಭಿಮುಖವಾಗಿದ್ದು, ಇಲ್ಲಿ ಶಿವಲಿಂಗ ಇದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಈ ಚೌಕಾಕಾರವಾಗಿದ್ದು ನಂತರ ಎಂಟು ಮುಖಗಳನ್ನು ಹೊಂದಿರುವ ಮಾದರಿಯಲ್ಲಿವೆ. ದ್ವಾರದ ಲಲಾಟಬಿಂಬದಲ್ಲಿ ಗಣಪತಿ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ.

ಮಹದೇಶ್ವರ ದೇವಾಲಯವು ಗರ್ಭಗೃಹ, ಶುಕನಾಸ, ನವರಂಗಳನ್ನು ಹೊಂದಿದೆ. ಮೂಲಗರ್ಭಗುಡಿ ಮಹದೇಶ್ವರನ ಲಿಂಗವನ್ನು ಇರಿಸಲಾಗಿದೆ. ಇದೊಂದು ಹೊಸದಾಗಿ ನಿರ್ಮಾಣಗೊಂಡಿದೆ. ಆದಕಾರಣ ಇಲ್ಲಿ ಯಾವುದೇ ತರದ ವಾಸ್ತು ಲಕ್ಷಣಗಳು ಕಾಣಬರುವುದಿಲ್ಲ. ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ವಿಮಾನವನ್ನು ಮಾಡಲಾಗಿದೆ. ಇಲ್ಲಿ ರಥವೂ ಸಹ ಇದೆ.

## ಜಾತ್ರೆ ವಿಶೇಷತೆ

ಮಳವಳ್ಳಿಯ ಮಹದೇಶ್ವರ ಸ್ವಾಮಿ ಜಾತ್ರೆಯು ಸಹ ಪ್ರತಿವರ್ಷ ತುಂಬಾ ಸೊಗಸಾಗಿ, ವಿಜೃಂಭಣೆಯಿಂದ ನಡೆಯುತ್ತದೆ. ಮಹದೇಶ್ವರ ದೇವಾಲಯವನ್ನು ನೋಡಿದರೆ ಅದು ಪ್ರಾಚೀನತೆಯನ್ನು ಹೊಂದಿದೆ. ಆದರೆ ಇಲ್ಲಿಯ ಹೊಸ ಶಾಸನದ ಪ್ರಕಾರ ಕ್ರಿ.ಶ.1957 ರಲ್ಲಿ

ನಿರ್ಮಾಣವಾಗಿದೆ ಎಂದು ತಿಳಿದುಬರುತ್ತದೆ. ಇಲ್ಲವೇ ಸಾಲೂರು ಮಠಕ್ಕೆ ಸೇರಿದ ಗದ್ದಿಗೆಯೂ ಸಹ ಇದೆ. ಆದಕಾರಣ ಪ್ರತಿವರ್ಷವೂ ಇಲ್ಲಿ ಜಾತ್ರೆ ಕಾರ್ಯಕ್ರಮ ಜರುಗುತ್ತದೆ. ಸಾಲೂರು ಮಠ ಕಟ್ಟಲು ಶಿವಪ್ಪನವರು ಒಂದು ಎಕರೆ ಜಮೀನು ದಾನ ನೀಡಿದ್ದಾರೆ ಎಂಬ ಹೇಳಿಕೆಗಳಿವೆ. ಇಲ್ಲಿಯ ಸಾಲೂರು ಮಠದ ನಿರ್ಮಾಣ ಕಾರ್ಯ 1971 ರಲ್ಲಿ ಪ್ರಾರಂಭವಾಯಿತು. ಮೊದಲಿಗೆ 10 ಅಂಕಣ ಕಲ್ಲು ಮಠವನ್ನು ಸ್ಥಾಪಿಸಿದರು. ಈ ಮಠಕ್ಕೆ ಗುಂಡ್ಲುಪೇಟೆ ತಾಲ್ಲೂಕಿನ ಹಮ್ಮೀಪುರ, ಮಡುವಿನಹಳ್ಳಿ, ಹೊಸವೀಡು, ರಂಗೋಪುರ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಸುತ್ತ ಮುತ್ತಲಿನ ಗ್ರಾಮದ ಭಕ್ತರು ಜಾತ್ರೆ ಮತ್ತು ಸಾಲೂರು ಮಠಕ್ಕೆ ಬರುತ್ತಿದ್ದಾರೆ.

ಪ್ರತಿ ವರ್ಷವು ಜಾತ್ರೆಯು ಫಾಲ್ಗುಣ ಮಾಸದಲ್ಲಿ ಶಿವರಾತ್ರಿ ಹಬ್ಬವಾದ 9ನೇ ದಿನಕ್ಕೆ ಇಲ್ಲಿ ಜಾತ್ರೆಯು ನಡೆಯುತ್ತದೆ. ಮೊದಲಬಾರಿಗೆ ಇಲ್ಲಿಯ ಜಾತ್ರೆಯ ರಥೋತ್ಸವ ದಿನಾಂಕ: 05-3-1981 ರಲ್ಲಿ ಆಯಿತು. ಈ ಊರಿನ ಐದು ಮನೆತನದವರಾದ ಗೌಡರ ಬಸಪ್ಪ, ಶಿವನಮ್ಮನ ಬಸಪ್ಪ, ಚನ್ನಮಲ್ಲಪ್ಪನ ಮನೆ (ಶಿವಪ್ಪನ ಮಹದೇವಪ್ಪ) ಹಾಗೂ ಕುರುಬರ ವೀರೇಗೌಡನ ಮನೆಯಿಂದ ಹಲರವಿ ಕನ್ನಕನ್ನಡಿ, ವೀರಗಾಸೆ, ವಾದ್ಯ ಸಮೇತ ಬಿರುದು ಬಾವಲಿಗಳೊಂದಿಗೆ ದೇವಾಲಯಕ್ಕೆ ಬರುತ್ತಾರೆ. ತದನಂತರ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ದೇವಾಲಯದ ಪಕ್ಕದಲ್ಲಿ ಕೊಂಡಕ್ಕೆ ಸಿದ್ಧತೆ ಮಾಡಿಕೊಂಡಿರುತ್ತಾರೆ. ಕೊಂಡಕ್ಕೆ ಕಗ್ಗಲಿ ಮರಗಳನ್ನು ಹಾಕುತ್ತಾರೆ. ಈ ಗ್ರಾಮದ ಹಾಗೂ ದೇವಾಲಯದ ಪ್ರಮುಖ ಅರ್ಚಕರಾದ ಶಿವಪ್ಪರವರ ಮಕ್ಕಳಾದ ನಂದೀಶ್ ಎಂಬುವವರಿಗೆ ಮಂಡೆ ಕ್ಷೌರ ಮಾಡಿಸಿ ಸ್ನಾನ ಮಾಡಿಸಿ, ಹಾಲರವಿಯಿಂದ ತಂದ ಹಾಲನ್ನು ದೇವರಿಗೆ ಅಭಿಷೇಕ ಮಾಡುತ್ತಾರೆ. ಈ ಊರಿನ ಪ್ರತಿಯೊಂದು ಮನೆಯವರಿಂದ ಕೊಂಡಕ್ಕೆ ಕಗ್ಗಲಿ ಮರಗಳನ್ನು ಸಂಗ್ರಹಿಸುತ್ತಾರೆ. ಹೀಗೆ ಗೌಡರ ಬಸಪ್ಪರವರ ಮನೆತನದವರು ಕೊಂಡಕ್ಕೆ ಮುಂಗೋಡೆ ಪೂಜೆ ಮಾಡುತ್ತಾರೆ. ನಂತರ ನೀರಗಾಸೆ, ಛತ್ರಿ, ಚಾಮರ, ಬಿರುದು ಬಾವಲಿಗಳೊಡನೆ ಸತ್ತಿಗೆ ಸುರಪಾನಿಗಳೊಂದಿಗೆ ಮಳವಳ್ಳಿ ಗ್ರಾಮದ ದೇವಾನುದೇವತೆಗಳಾದ ಶ್ರೀ ಸಿದ್ದಪ್ಪಾಜಿ, ಶ್ರೀ ಬಸವೇಶ್ವರ, ಸತ್ತಿಗೆ ಸಮೇತ ವಾದ್ಯ ನಗಾರಿಗಳೊಂದಿಗೆ ದೇವಾಲಯದಿಂದ ಹೊರಟು ಶ್ರೀ ಬಸವೇಶ್ವರ ದೇವಾಲಯ ಅರ್ಚಕರಿಗೆ ಕಂಕಣಧಾರಣೆ ಮಾಡಿ ಊರಿನ ಪ್ರಮುಖ ಬೀದಿಗಳಲ್ಲಿ ಉತ್ಸವ ನಡೆಯುತ್ತವೆ. ಹಿಂದಿನ ದಿವಸವೇ ದೇವಾಲಯಕ್ಕೆ ಬಿಟ್ಟ ಬಸವ (ಗೂಳಿ) ಕೊಂಡವನ್ನು ಮೊದಲಿಗೆ ಹಾಯುತ್ತದೆ. ಇದು ಇಲ್ಲಿಯ ವಿಶೇಷತೆ. ತದನಂತರ ದೇವಾಲಯದಲ್ಲಿ ಪೂಜಾ ಕಾರ್ಯಕ್ರಮಗಳು ನಡೆಯುತ್ತದೆ. ಹೀಗೆ ಮಳವಳ್ಳಿ ಗ್ರಾಮದಲ್ಲಿ ಮಹದೇಶ್ವರ, ಬಸವೇಶ್ವರ ಜಾತ್ರೆಯು ನಡೆಯುತ್ತಾ ಬಂದಿದೆ. ಈ ದೇವಾಲಯವನ್ನು ಪ್ರತಿ ಅಮವಾಸ್ಯೆ ದಿನ ವಿಶೇಷ ಪೂಜೆ ನಡೆಯುತ್ತದೆ. ಸೋಮವಾರ ಮತ್ತು ಶುಕ್ರವಾರ ಪ್ರಸಾದ ಕೊಡುವ ಪರಿಪಾಠ ಇದೆ. ಅಭಿಷೇಕ ಪೂಜಾಕಾರ್ಯಕ್ರಮವು ನಡೆಯುತ್ತದೆ.

ಈ ಎಲ್ಲಾ ಬೆಳವಣಿಗೆಯಿಂದ ಇದೊಂದು ಸಾಮಾಜಿಕ ಸಾಂಸ್ಕೃತಿಕ ಹಾಗೂ ಧಾರ್ಮಿಕ ಹಿನ್ನೆಲೆಯನ್ನು ಹೊಂದಿರುವ ಗ್ರಾಮವಾಗಿದೆ ಮಳವಳ್ಳಿ.[29] ಇಲ್ಲಿ ಪ್ರತಿ ಅಮವಾಸ್ಯೆ, ಹುಣ್ಣಿಮೆ, ಕಾರ್ತಿಕಮಾಸ, ಧನುರ್ಮಾಸ, ಅಲ್ಲದೆ ಪ್ರತಿಯೊಂದು ಹಬ್ಬದಲ್ಲಿ ವಿಶೇಷವಾದ ಪೂಜೆ ನಡೆಯುತ್ತದೆ. ಈ ಭಾಗದ ಹಲವಾರು ಗ್ರಾಮಗಳಂದ ಜನರುಗಳು ಬಂದು ದೇವರ ದರ್ಶನವನ್ನು ಪಡೆಯುತ್ತಾರೆ.

## ಮಲ್ಲಿದೇವರಗುಡಿ – ಮಂಚನಹಳ್ಳಿ

ಗುಂಡ್ಲುಪೇಟೆ ತಾಲ್ಲೂಕಿನ ಮಂಚನಹಳ್ಳಿಯು ಒಂದು ಪ್ರಾಚೀನ ಗ್ರಾಮ. ಈ ಗ್ರಾಮದಲ್ಲಿ ಇತಿಹಾಸಕ್ಕೆ ಪೂರಕವಾಗಿ ಹಲವಾರು ರೀತಿಯ ದಾಖಲೆಗಳವೆ. ಅಲ್ಲದೆ, ಮಲೈಮಹದೇಶ್ವರ ಮಲ್ಲಿದೇವರ ದೇವಾಲಯಗಳವೆ. ಈ ಗ್ರಾಮ ಬೇಗೂರು ಹೋಬಳಗೆ ಸೇರಿದೆ. ಅಲ್ಲದೆ ಇಲ್ಲಿಂದ ಪಶ್ಚಿಮ ದಿಕ್ಕಿಗೆ ಸುಮಾರು ಒಂದೂವರೆ ಕಿಲೋಮೀಟರ್ ದೂರದಲ್ಲಿದೆ. ಇದೊಂದು ಬಂಡೀಪುರ ಅರಣ್ಯದ ಪಕ್ಕದಲ್ಲಿದೆ. ಈ ಊರಿನ ಮಲ್ಲೇದೇವರ ಗುಡಿಯ ಮುಂದೆ ಒಂದು ಶಾಸನ ಇದೆ.[30] ಈ ಶಾಸನವು ಕ್ರಿ.ಶ.16ನೇ ಶತಮಾನಕ್ಕೆ ಸೇರಿದ್ದು, ಇದೊಂದು ದಾನ ಶಾಸನವಾಗಿದೆ.

ಗುಂಡ್ಲುಪೇಟೆ ತಾಲ್ಲೂಕಿನ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಪ್ರೇಕ್ಷಣೀಯ ಪ್ರಸಿದ್ಧಿ ಪಡೆದ ಧಾರ್ಮಿಕ ಕ್ಷೇತ್ರವಾಗಿದೆ. ಈ ಕ್ಷೇತ್ರಕ್ಕೆ ಕರಸ್ಥಳ ನಾಗಲಿಂಗಸ್ವಾಮಿ ಗವಿ ಕ್ಷೇತ್ರ ಎನ್ನುತ್ತಾರೆ. ವಿಜಯನಗರದಲ್ಲಿ ಪ್ರಸಿದ್ಧರಾಗಿದ್ದ ನೂರೊಂದು ಜನ ವಿರಕ್ತರಲ್ಲಿ ಕರಸ್ಥಲದ ನಾಗಲಿಂಗ ಸ್ವಾಮಿಗಳು ಒಬ್ಬರು. ಅವರು ಇಲ್ಲಿ ಐಕ್ಯರಾದ ಐತಿಹ್ಯ ಇದೆ. ಚಾಮರಾಜನಗರ ತಾಲ್ಲೂಕಿನ ಹರದನಹಳ್ಳಿ ಪೀಠದ ಗುರು ಶ್ರೀಗೋಪಾಲ ಸಿದ್ದೇಶ್ವರಸ್ವಾಮಿರವರಿಂದ ದೀಕ್ಷೆ ಪಡೆದಿದ್ದ ಕರಸ್ಥಲ ನಾಗಲಿಂಗಸ್ವಾಮಿ ಮತ್ತು ಈ ಭಾಗದ ಮುದ್ದಾನೇಶ್ವರೊಂದಿಗೆ ಈ ಪ್ರಾಂತ್ಯದಲ್ಲಿ ಧರ್ಮ ಪ್ರಚಾರ ಕೈಗೊಳ್ಳುತ್ತಾರೆ. ಈ ನಿಮಿತ್ತ ಮಂಚನಹಳ್ಳಿ ಗುಡ್ಡಕ್ಕೆ ಬಂದಾಗ ಕರಡಿಯು ಕಣ್ಣು ಬೇನೆ ಮತ್ತು ಹುಲಿ ಹೊಟ್ಟೆ ನೋವಿನಿಂದ ಸಂಕಟ ಪಡುತ್ತಿರುವುದನ್ನು ಕಂಡ ಈ ಇಬ್ಬರು ಸೂಕ್ತ ಚಿಕಿತ್ಸೆ ನೀಡಿ ಅವುಗಳ ಸಂಕಟ ಪರಿಹರಿಸಿದರು ಎನ್ನುವುದು ಪ್ರಚಲಿತದಲ್ಲಿದೆ. ಹೀಗೆ ನಿತ್ಯಹರಿದ್ವರ್ಣದ ಕಾಡಾಗಿದ್ದ ಮಂಚಹಳ್ಳಿ ಗವಿ ಬಳಿ ಬಂದ ಶರಣರು ವಿಶ್ರಾಂತಿ ಪಡೆಯುತ್ತಿದ್ದಾಗ ಅವರಿಂದ ಚಿಕಿತ್ಸೆ ಪಡೆದಿದ್ದ ಹುಲಿ ಮತ್ತು ಕರಡಿ ಅವರ ಹತ್ತಿರವೇ ಬಂದು ಸಾಕು ಮಕ್ಕಳ ರೀತಿ ಅವರಲ್ಲಿ ಬೆರೆಯತೊಡಗಿದವು. ಇಂತಹ ಹಚ್ಚಹಸಿರಿನ ಪರಿಸರ ಹಾಗೂ ಇಳವಯಸ್ಸಿನ ಕಾರಣದಿಂದ ಕರಸ್ಥಲ ನಾಗಲಿಂಗದೇವರು ಧರ್ಮ ಪ್ರಚಾರವನ್ನು ಅಲ್ಲಿಯೇ ಮುಂದುವರೆಸಿದರು. ಹೀಗೆಯೇ ಲಿಂಗ ಬೇರೂರಿರುವುದನ್ನು ಅಲ್ಲಿ ನೆರೆದಿದ್ದವರಿಗೆಲ್ಲ ಪ್ರದರ್ಶಿಸಿದ ಎಂದು ರುದ್ರಕವಿಯ ಕರಸ್ಥಲ ನಾಗಲಿಂಗನ ಚರಿತ್ರೆಯಲ್ಲಿ ಉಲ್ಲೇಖಿತವಾಗಿದೆ.

ಅದಕ್ಕಾಗಿ ಕರಸ್ಥಲ ನಾಗಲಿಂಗದೇವ ಎನ್ನುವ ಪ್ರತೀತಿಯು ಇದೆ. ಈ ಕ್ಷೇತ್ರದಲ್ಲಿ ಒಟ್ಟು 27 ಗವಿ ಸ್ಥಳಗಳಿವೆ. ಇಲ್ಲಿನ ಸುಮಾರು 35 ಅಡಿಗೂ ಹೆಚ್ಚು ಎತ್ತರದ ಬಂಡೆ ಮೇಲೆ ತಪಸ್ಸು ಮಾಡಿದ ಕರಸ್ಥಲ ನಾಗಲಿಂಗದೇವರು ಶಿವಪಾರ್ವತಿಯಿಂದ ಆಶೀರ್ವಾದ ಪಡೆದರು ಎಂಬುದು ಮಂಚಹಳ್ಳಿ ಜನರ ನಂಬಿಕೆ. ಈ ಊರಿನ ಮಂಗಳಾಂಬಿಕೆ ದೇವಾಲಯದ ಕೂಗಳತೆ ದೂರದಲ್ಲಿರುವ ಮಂಚಹಳ್ಳಿ ಗವಿಕ್ಷೇತ್ರ ತನ್ನದೇ ಆದ ಭಕ್ತಾದಿಗಳನ್ನು ಪಡೆದುಕೊಂಡಿದೆ. ಕರಸ್ಥಲ ನಾಗಲಿಂಗದೇವರು ಐಕ್ಯರಾದ ಬಂಡೆಯನ್ನು ಕೊರೆದು ಮಾಡಿರುವ ಗವಿ ಕ್ಷೇತ್ರಕ್ಕೆ ಭಕ್ತಾದಿಗಳು 20ಕ್ಕೂ ಹೆಚ್ಚು ಹೆಜ್ಜೆಗಳಷ್ಟು ದೂರ ಮಂಡಿಯೂರಿ ಗವಿಯೊಳಗೆ ತೆರಳಕೊಂಡು ಹೋಗಬೇಕು. ಇದೊಂದು ಉತ್ತಮ ಅನುಭವ ಹಾಗೂ ಭಕ್ತಿ ಮೇರು ಈಗಾಗಲೇ ದೇವಾಲಯದ ಅಭಿವೃದ್ಧಿಗಾಗಿ "ಶ್ರೀ ಜಗದ್ಗುರು ಕರಸ್ಥಲ ನಾಗಲಿಂಗಸ್ವಾಮಿ ಸೇವಾ ಟ್ರಸ್ಟ್" ಎಂಬ ಸಮಿತಿ ಮಾಡಿಕೊಂಡು ಭಕ್ತವೃಂದ ದೇವಸ್ಥಾನದ ಮೆಟ್ಟಿಲು, ಗರ್ಭಗುಡಿಯ ಒಳಭಾಗದಲ್ಲಿ ಅಲಂಕಾರಿಕ ಟೈಲ್ಸ್ ಮತ್ತು ಗ್ರಾನೈಟ್ ಮೊಸಾಯಿ, ಯುಪಿಎಸ್ ಸಂಪರ್ಕ ಸೇರಿದಂತೆ ಹತ್ತು ಹಲವು ಅಭಿವೃದ್ಧಿ ಕಾರ್ಯ ಕೈಗೊಂಡಿದೆ. (ಚಿತ್ರಸಂಖ್ಯೆ-17)

ಇಲ್ಲಿ ಪ್ರತಿನಿತ್ಯ ಪೂಜೆ, ಗ್ರಾಮದ ಪುಟ್ಟಸ್ವಾಮಾಚಾರ್ ಪುತ್ರ ನಾಗರಾಜಾಚಾರ್ ತಂದೆಯ ನಂತರ ತಾವೇ ಪೂಜಾ ಕೈಂಕರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಅವರ ಪ್ರಕಾರ ಕ್ಷೇತ್ರದಲ್ಲಿ ಕಾರ್ತಿಕ ಮತ್ತು ಆರಾಧನಾ ಮಹೋತ್ಸವ ಮದುವೆ ಸಮಾರಂಭ ಕಾರ್ಯಕ್ರಮಗಳು ನಡೆಯುತ್ತವೆ. ಕರಸ್ಥಲ ನಾಗಲಿಂಗದೇವರ ಗವಿ ಪಕ್ಕದಲ್ಲಿ 3 ಅಂಕಣಗಳ ಒಂದು ಮಂಟಪ ಗಣೇಶ ದೇವಾಲಯಗಳಿವೆ. ಅದರ ಪಕ್ಕದಲ್ಲಿ ಒಂದು ಕೊಳ ಇದೆ. ಇದರಿಂದಲೇ ಪೂಜಾ ಕೈಂಕರ್ಯಕ್ಕೆ ಗಂಗೋಧಕ ಬಳಸಲಾಗುತ್ತದೆ. ಅರ್ಚಕ ನಾಗಾರಾಜಾಚಾರ್ ಮಾತಿನಂತೆ ಕ್ಷೇತ್ರದಲ್ಲಿ ಕರಸ್ಥಲ ನಾಗಲಿಂಗದೇವರನ್ನು ಪ್ರಾರ್ಥಿಸಿ ಹರಕೆ ಹೊತ್ತುಕೊಂಡರೆ ನೂರಕ್ಕೆ ನೂರರಷ್ಟು ಫಲ ಪ್ರಾಪ್ತಿಯಾಗುತ್ತದೆ. ಆ ಕಾರಣಕ್ಕಾಗಿ ಹಲವು ಭಕ್ತಾದಿಗಳು ಸಂಕಲ್ಪ ಈಡೇರಿದ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ಅಭಿವೃದ್ಧಿಪಡಿಸಿರುತ್ತಾರೆ. ಈಗಲೂ ಕರಸ್ಥಲ ನಾಗಲಿಂಗ ದೇವರ ಪಾದುಕೆ ಸವೆಯುತ್ತಿದೆ. ಶ್ರೀಗಳು ಈ ಭಾಗದಲ್ಲಿ ದೈವಶಕ್ತಿ ಸ್ವರೂಪದಲ್ಲಿ ಸುತ್ತಾಡುತ್ತಾರೆ ಎಂಬ ಪ್ರತೀತಿ ಇದೆ. ಇಲ್ಲಿನ ಪರಿಸರ ಅತ್ಯಂತ ಸೊಗಸಾಗಿದೆ. ಮಂಚನಹಳ್ಳಿಯ ಹೊರವಲಯದಲ್ಲಿನ ಈ ಗವಿಕ್ಷೇತ್ರ ಅತ್ಯಂತ ಸುಂದರ ಹಾಗೂ ಪ್ರೇಕ್ಷಣೀಯ, ಬಂಡೀಪುರ ಅಭಯಾರಣ್ಯ ವ್ಯಾಪ್ತಿಯಲ್ಲೇ ಈ ಬೆಟ್ಟವೂ ಇರುವುದರಿಂದ ಹಸಿರು ರಾಶಿ ಕಣ್ಣಾಡಿಸಿದಷ್ಟು ದೂರವೂ ಕಾಣಿಸುತ್ತದೆ. ಇಲ್ಲಿನ ಬೆಟ್ಟ ಹತ್ತಿ ನಿಂತರೆ ದೊಡ್ಡ ದೊಡ್ಡ ಬಂಡೆಗಳು, ಗವಿಗಳನ್ನು ಕಣ್ತುಂಬಿಸಿಕೊಳ್ಳಬಹುದು. ಒಂದು ದಿನದ ಟ್ರಿಪ್‌ಗೆ ಹೇಳಿ ಮಾಡಿಸಿದ ಜಾಗವಿದು, ಈ ಕ್ಷೇತ್ರದಲ್ಲಿರುವ ಕೊಳದಲ್ಲಿ ಸದಾ ಕಾಲ ನೀರಿರುತ್ತದೆ ಎಂಬ ಪ್ರತೀತಿ ಇದೆ. ಅಂದಿನ

ಕಾಲದಿಂದಲೂ ಬೇಸಿಗೆಯಲ್ಲಿಯೂ ಈ ಕೊಳ ಬತ್ತದೇ ವಿಸ್ಮಯ ಮೂಡಿಸಿದೆ. ಈ ಕೊಳ ಹಾಗೂ ಗವಿಗಳು ಇಲ್ಲಿನ ಮುಖ್ಯ ಆಕರ್ಷಣೆಯಾಗಿವೆ. ಇನ್ನು ಮಂಚಹಳ್ಳಿಯ ಮಂಗಳಾಂಬಿಕೆ ದೇವಾಲಯವು ಇಲ್ಲಿಂದ ಸ್ವಲ್ಪ ದೂರದಲ್ಲಿದೆ. ನಾಗಲಿಂಗದೇವರು ಐಕ್ಯವಾದ ಗುಹೆಗೆ ಹೋಗಬೇಕಾದರೆ ತೆವಳಿಕೊಂಡು ಹೋಗಬೇಕು. ಅರಣ್ಯದ ಒಳಗೆ ಸುಮಾರು '66' ಗವಿಗಳಿವೆಯೆಂದು ಹಿರಿಯರ ಹೇಳಿಕೆಗಳಿವೆ.

ಈ ನೆಲೆ ಸಂರಕ್ಷಿತ ಪ್ರದೇಶವಾಗಿರುವುದರಿಂದ ಅರಣ್ಯದೊಳಗೆ ಪ್ರವೇಶವನ್ನು ನಿಷೇಧಿಸಲಾಗಿದೆ.[31] ಮಂಚಹಳ್ಳಿಯ ಗವಿ ಕ್ಷೇತ್ರದಲ್ಲಿ ಇನ್ನೊಂದು ಮಂಟಪ ಇದೆ. ಈ ಮಂಟಪದ ಒಳಗೆ ಎರಡು ಕಂಬಗಳಿವೆ. ಇದು ಮೈಸೂರು ಒಡೆಯರ ಕಾಲಕ್ಕೆ ಆಗಿದೆ ಎನ್ನಬಹುದು. ಇಲ್ಲಿ ಮಹಿಷಮರ್ದಿನಿ ಶಿಲ್ಪ, ಎರಡು ಗಣಪತಿ ಶಿಲ್ಪಗಳು ನಾಲ್ಕು ಶಿವಲಿಂಗಗಳಿವೆ. ಎರಡು ನಂದಿಶಿಲ್ಪಗಳಿವೆ. (ಚಿತ್ರಸಂಖ್ಯೆ-18) ಮಂಚಹಳ್ಳಿ ಮಂಗಳಾಂಬೆ ದೇವಸ್ಥಾನಕ್ಕೆ ಒಂದು ಐತಿಹಾಸಿಕವಾದ ಹಿನ್ನೆಲೆಯು ಸಹ ಇದೆ. ಸುಮಾರು 800 ವರ್ಷಗಳ ಹಿಂದೆ ಮಂಚಹಳ್ಳಿಯಲ್ಲಿ ರಾಜನಾಗಿದ್ದ ಮಂಚಣ್ಣ ಒಡೆಯರು ಮತ್ತು ಮಂಗಳೂರಿನ ರಾಜರಿಗೂ ಸಂಬಂಧವಿತ್ತು. ಆಗಾಗ್ಗೆ ಮಂಚಣ್ಣ ಒಡೆಯರು ಮಂಗಳಾಂಬೆ ಪೂಜೆಗೆ ಮಂಗಳೂರಿಗೆ ಹೋಗುತ್ತಿದ್ದರು. ಬಹಳ ಭಕ್ತಿಯಿಂದ ಸರ್ವ ಮಂಗಳಾಂಬೆಯನ್ನು ಪೂಜಿಸುತ್ತಿದ್ದರು. ದೇವತೆ ಇವರ ಭಕ್ತಿ ಮೆಚ್ಚಿಕೊಳ್ಳುತ್ತಾರೆ ಪ್ರತಿವರ್ಷ ಇಲ್ಲಿ ಜಾತ್ರೆ ನಡೆಯುತ್ತದೆ. ಅಂದು ವಾದ್ಯ, ಸತ್ತಿಗೆ, ಸುರಪಾಣಿ, ಬಿರುದು ಬಾವಲಿಗಳೊಂದಿಗೆ ವಿಜೃಂಭಣೆಯಿಂದ ರಥೋತ್ಸವ ನಡೆಯುತ್ತದೆ. ಈ ತೇರಿನ ಜೊತೆಗೆ ಶ್ರೀ ನಾಗಲಿಂಗೇಶ್ವರಸ್ವಾಮಿ ಚೆನ್ನೂರ್ದೇವರು ಮಹಾದೇಶ್ವರ, ಸಿದ್ಧಪ್ಪಾಜಿ, ಶನಿದೇವರ ಫೋಟೋಗಳನ್ನು ಮೆರವಣಿಗೆ ಮಾಡುತ್ತಾರೆ. ಪುನಃ ಬೆಳಗ್ಗೆ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವ ಮಾಡಿ ಪಂಚ ಕಜ್ಜಾಯದ ಹರವೆಯನ್ನು ದೇವರಿಗೆ ಒಪ್ಪಿಸುವ ಪರಿಪಾಠ ಇದೆ. ಮದುವೆ ಕಾರ್ಯಗಳು ಸಾಕಷ್ಟು ಸಂಖ್ಯೆಯಲ್ಲಿ ನಡೆಯುತ್ತದೆ. ಆದಕಾರಣ ಇದೊಂದು ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗಿದೆ. ಮಂಚಹಳ್ಳಿಯ ಈ ಕ್ಷೇತ್ರ ಒಂದಲ್ಲ ನಾನಾ ಬಗೆಯ ಕಾರ್ಯಕ್ರಮಗಳು ಇಲ್ಲಿ ಜರುಗುವುದರಿಂದ ಸಾಂಸ್ಕೃತಿಕ ನೆಲೆಯಾಗಿಯೂ ಸಹ ಹೆಸರುವಾಸಿಯಾಗಿದೆ.[32]

ಮಂಚಹಳ್ಳಿ ಕೆರೆಯ ದಡ್ಡದಲ್ಲಿ ಬೀರೇಶ್ವರ ದೇವಾಲಯ ಇದೆ. ಈಗ ಇದು ಜೀರ್ಣೋದ್ಧಾರವಾಗಿದೆ. (ಚಿತ್ರಸಂಖ್ಯೆ-19) ಇದನ್ನು ನೋಡಿದರೆ ಮೈಸೂರು ಒಡೆಯರ್ ಕಾಲಕ್ಕೆ ಸೇರಿಸಬಹುದಾಗಿದೆ. ಹಾಗೆಯೇ ಇದರ ಪಕ್ಕದಲ್ಲಿಯೇ ಮತ್ತೊಂದು ಮಾರಮ್ಮ

ದೇವಾಲಯವು ಇದೆ. ಇದು ಸಹ ಜೀರ್ಣೋದ್ಧಾರವಾಗಿದೆ. ಇದನ್ನು ಕಾಳಮ್ಮನ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯವನ್ನು ಕುರುಬರು ಪೂಜಿಸುತ್ತಾರೆ.[6]

## ರಾಮಲಿಂಗೇಶ್ವರ ದೇವಾಲಯ–ರಾಘವಪುರ

ಗುಂಡ್ಲುಪೇಟೆಯಿಂದ ಸುಮಾರು 6 ಮೈಲಿ ದೂರದಲ್ಲಿ ರಾಮಲಿಂಗೇಶ್ವರ ದೇವಾಲಯ ಇದೆ. ಈ ದೇವಾಲಯವು ಪೂರ್ವ ಮುಖವಾಗಿದೆ. ಈ ದೇವಾಲಯ ತಳವಿನ್ಯಾಸದಲ್ಲಿ ಗರ್ಭಗೃಹ ನವರಂಗ ಮತ್ತು ತೆರೆದ ಮುಖಮಂಟಪ ಅಥವಾ ದ್ವಾರಮಂಟಪವನ್ನು ಹೊಂದಿದೆ. ರಾಮೇಶ್ವರ ದೇವಾಲಯದ ಬಳಿ ನೆಟ್ಟ ಕಲ್ಲು ಶಾಸನದ ಪ್ರಕಾರ ಕ್ರಿ.ಶ.1507 ರ ವೀರ ಚಿಕ್ಕರಾಯ ಒಡೆಯರು ಶಾಸನವನ್ನು ಹಾಕಿಸಿದ್ದಾರೆ. ಶ್ರೀ ನಂಜುಂಡೇಶ್ವರ ದೇವರ ಅಮೃತ್ವಾಡಿಗೆ ಈ ಭಾಗದ ಚತುಸ್ಸೀಮೆವೊಳಗುಳ್ಳ ಗದ್ದೆಬೆದ್ದಲು ತೋಟ ತುಡಿಕೆ ಸುಂಕ ಮೊದಲಾದ ವಿಚಾರಗಳನ್ನು ಕುರಿತು ಶಾಸನದಲ್ಲಿ ತಿಳಿಸಲಾಗಿದೆ.[33] (ಚಿತ್ರಸಂಖ್ಯೆ–20)

ಮೂಲಗರ್ಭಗುಡಿಯಲ್ಲಿ ರಾಮಲಿಂಗೇಶ್ವರ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದಲ್ಲಿ ಸೂರ್ಯ ಹಾಗೂ ಲಕ್ಷ್ಮೀ ಶಿಲ್ಪವನ್ನು ಇಡಲಾಗಿದೆ. ನವರಂಗದಲ್ಲಿ ಎರಡು ಕೋಷ್ಠಗುಡಿಗಳಿದ್ದು, ದಕ್ಷಿಣ ದಿಕ್ಕಿನ ಕೋಷ್ಠಗುಡಿಯಲ್ಲಿ ನಾಗದೇವತೆಯನ್ನು ಉತ್ತರ ದಿಕ್ಕಿನ ಕೋಷ್ಠ ಗುಡಿಯಲ್ಲಿ ಚಂಡಿಕೇಶ್ವರ ಶಿಲ್ಪವನ್ನು ಇಡಲಾಗಿದೆ. ಮುಖಮಂಟಪ ಅಥವಾ ದ್ವಾರಮಂಟಪಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳಿವೆ ಹಾಗೂ ಮುಂಭಾಗದಲ್ಲಿ ಎರಡು ಕಂಬಗಳಿವೆ. ದ್ವಾರಕ್ಕೆ ಹೊಂದಿಕೊಂಡಂತೆ ಮೆಟ್ಟಿಲುಗಳನ್ನು ಮಾಡಿದ್ದು, ಇಕ್ಕೆಲಗಳಲ್ಲಿ ಆನೆಮುಖವನ್ನು ಕಾಣಬಹುದಾಗಿದೆ. ಕಂಬವು ಪೀಠದಲ್ಲಿ ಚೌಕಾಕಾರವಾಗಿದ್ದು, ದಿಂಡು ವೃತ್ತಾಕಾರವಾಗಿದೆ. ಈ ದೇವಾಲಯ ಈಗ ಜೀರ್ಣೋದ್ಧಾರವಾಗಿದೆ. (ಚಿತ್ರಸಂಖ್ಯೆ–21) ದೇವಾಲಯದ ಗರ್ಭಗುಡಿಯ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ಇತ್ತೀಚಿನ ಕಾಲದ ವಿಮಾನವನ್ನು ಸಹ ಕಾಣಬರುತ್ತದೆ. ಈ ದೇವಾಲಯದಲ್ಲಿ ಪ್ರತಿದಿನ ಪೂಜೆಗಳು ನಡೆಯುತ್ತಿರುತ್ತವೆ. ಶಿವರಾತ್ರಿ, ಕಾರ್ತಿಕ ಮಾಸ, ಸೋಮವಾರ, ಅಮವಾಸ್ಯೆ, ಹುಣ್ಣಿಮೆ ಸಂದರ್ಭದಲ್ಲಿ ವಿಶೇಷ ಪೂಜೆಗಳನ್ನು ಮಾಡಲಾಗುತ್ತದೆ.[34]

## ಚಂದ್ರಮೌಳೇಶ್ವರ ದೇವಾಲಯ–ಕೋಟೆಕೆರೆ

ಕೋಟೆಕೆರೆ ಗ್ರಾಮವು ಬೇಗೂರಿನಿಂದ ಪಶ್ಚಿಮ ದಿಕ್ಕಿಗೆ ಸುಮಾರು ಮೂರು ಮೈಲಿ ದೂರದಲ್ಲಿದೆ. ಇದು ಅತ್ಯಂತ ಪ್ರಾಚೀನತೆಯನ್ನು ಹೊಂದಿದ ಗ್ರಾಮವಾಗಿದೆ. ಏಕೆಂದರೆ ಬೃಹತ್ ಶಿಲಾಸಂಸ್ಕೃತಿಗೆ ಸೇರಿದ ಸಾಕಷ್ಟು ಅವಶೇಷಗಳು ಕಂಡು ಬರುತ್ತವೆ. ಅಲ್ಲದೆ ಶೈವ ಸಂಸ್ಕೃತಿಗೆ

ಸೇರಿದ ಚಂದ್ರಮೌಳೇಶ್ವರ, ಮಹದೇಶ್ವರ ದೇವಾಲಯಗಳಿವೆ. ಅಲ್ಲದೆ ಕ್ರಿ.ಶ.1548 ರ ಕಾಲಕ್ಕೆ ಸೇರಿದ ವಿಜಯನಗರ ಅರಸರಾದ ಸದಾಶಿವರಾಯರ ವಿಚಾರ ತಿಳಿದುಬರುತ್ತದೆ. ಅನೇಕ ಗ್ರಾಮಗಳಲ್ಲಿ ಗದ್ದೆ ಬೆದ್ದಲು ಭೂಮಿಯನ್ನು ನೀಡಿರುವುದಾಗಿ ಒಂದು ಗದ್ದೆಯಲ್ಲಿ ಸುವರ್ಣಾರಾಧನೆ ಇಟ್ಟಿರುವ ಬಗ್ಗೆ ತಿಳಿದುಬರುತ್ತದೆ.[35] ಅಲ್ಲದೆ ಕ್ರಿ.ಶ.10ನೇ ಶತಮಾನಕ್ಕೆ ಸೇರಿದ ವೀರಗಲ್ಲು ಶಾಸನ ಸಹ ಇದೆ. ಅಂದರೆ ಕ್ರಿ.ಶ.10ನೇ ಶತಮಾನದಲ್ಲಿ ಸ್ಥಳೀಯ ವೀರನು ಊರಿನ ಹಿತಕ್ಕಾಗಿ ವೀರ ಮರಣ ಹೊಂದಿರುವ ಬಗ್ಗೆ ತಿಳಿಸುತ್ತದೆ.[36] ಕೋಟೆಕೆರೆಯಲ್ಲಿರುವ ಈಶ್ವರ ದೇವಾಲಯವು ಪ್ರಾಚೀನತೆಯನ್ನು ಹೊಂದಿದ್ದರೂ ಕೂಡ ಈಗ ಸಂಪೂರ್ಣ ಹೊಸದಾಗಿ ಜೀರ್ಣೋದ್ಧಾರವಾಗಿದೆ. ಆದಕಾರಣ ಪ್ರಸ್ತುತ ವಾಸ್ತುಕಲೆಯನ್ನು ನೋಡುವುದಾದರೆ, ಇದು ಮೈಸೂರು ಒಡೆಯರ ಕಾಲಕ್ಕೆ ಸೇರಿಸಬಹುದಾಗಿದೆ. ಈ ದೇವಾಲಯವು ಗರ್ಭಗುಡಿ, ಶುಕನಾಸಿ, ನವರಂಗವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಶಿವಲಿಂಗವನ್ನು ಶುಕನಾಸದ ಅಂಕಣದಲ್ಲಿ ನಂದಿಶಿಲ್ಪವನ್ನು ಇರಿಸಲಾಗಿದೆ. ಆದರೆ ಇದರ ಸ್ವಲ್ಪ ಭಾಗವು ದುಃಸ್ಥಿತಿಯಾಗಿದೆ. ಶಿವರಾತ್ರಿ ಹಬ್ಬದ ಸಂದರ್ಭದಲ್ಲಿ ವಿಶೇಷವಾಗಿ ಪೂಜೆ ಪುನಸ್ಕಾರಗಳು ದೇವಾಲಯದಲ್ಲಿ ನಡೆಯುತ್ತದೆ.

## ಚಂದ್ರಮೌಳೇಶ್ವರ ದೇವಾಲಯ–ಹಿರೀಕಾಟಿ

ಚಂದ್ರಶೇಖರ ಅಥವಾ ಚಂದ್ರಮೌಳೆಶ್ವರ ದೇವಾಲಯವು ಹಿರೀಕಾಟಿ ಊರಿನ ವಾಯುವ್ಯಕ್ಕೆ ಒಂದು ಚಿಕ್ಕದಾದ ಬೆಟ್ಟದ ಮೇಲೆ ನಿರ್ಮಿಸಲಾಗಿತ್ತು. ಈ ಊರಿಗೆ ಅಂದರೆ ಗ್ರಾಮಕ್ಕೆ ಉತ್ತರ ಸರ್ಕಾರದ ಬೀಡು ಭೂಮಿಯಲ್ಲಿ ನೀಡಿರುವ ಶಾಸನದ ಪ್ರಕಾರ ಕ್ರಿ.ಶ.1533ರಲ್ಲಿ ತಗಡೂರು ನಾಡಪ್ರಭುಗಳಾದ ಚಿಕ್ಕ ಮಲೆಯ ವೊಡೆಯರು ಹಿರಿಕಾಟಿ ಮಲ್ಲಯ್ಯ ದೇವರಿಗೆ ಕೊಟ್ಟ ಗ್ರಾಮಗಳು ಎಂಬುದಾಗಿ ತಿಳಿಸಲಾಗಿದೆ. ಆದರೆ ಯಾವ ಗ್ರಾಮ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ.[37] ಪ್ರಸ್ತುತ ಈ ದೇವಾಲಯವು ಜೀರ್ಣೋದ್ಧಾರವಾಗಿದೆ. ಈಗ ಗರ್ಭಗುಡಿ ಮತ್ತು ನವರಂಗವನ್ನು ಮಾತ್ರ ಕಾಣಬಹುದಾಗಿದೆ. ಚಂದ್ರಮೌಳೇಶ್ವರ ದೇವಾಲಯದ ಮುಂದೆ ವೀರಗಲ್ಲು ಮತ್ತು ರಾಜರಾಣಿಯ ಶಿಲ್ಪವು ಇದೆ. (ಚಿತ್ರಸಂಖ್ಯೆ–2)

ದೇವರಕೊಂಡಾರೆಡ್ಡಿರವರು ಸಂಶೋಧನೆಯ ಸಂದರ್ಭದಲ್ಲಿ ದೇವಾಲಯ ನಾಶವಾಗುವ ರೀತಿಯಲ್ಲಿದೆ ಎಂಬುದನ್ನು ತಿಳಿಸಿದ್ದಾರೆ. ಈ ದೇವಾಲಯವು ನಾಲ್ಕನೇ ರಾಚಮಲ್ಲನ ಕಾಲಕ್ಕೆ ಇತ್ತೆಂಬುದು ಅಲ್ಲಿ ಇತ್ತೀಚಿಗೆ ದೊರೆತ ಶಾಸನದಿಂದ ತಿಳಿದುಬರುತ್ತದೆ.[38] ಅವರ ಪ್ರಕಾರವು ಸಹ ಗರ್ಭಗೃಹ ಮತ್ತು ನವರಂಗ ಮಂಟಪವನ್ನು ಮಾತ್ರ ಹೊಂದಿದೆ ಎಂದು ತಿಳಿಸಿದ್ದಾರೆ. ಈ ದೇವಾಲಯದ ಕಂಬಗಳು ಚೌಕ, ಅಷ್ಟ, ಮತ್ತು ಚೌಕ ಮೂಲೆಯುಳ್ಳವಾಗಿದೆ.

ನವರಂಗದಲ್ಲಿ ಗಣಪತಿ, ಚಾಮುಂಡಿ, ನಾರಾಯಣ, ನಾಗರಕಲ್ಲು ಮತ್ತು ಎರಡು ಬಸವನ ಶಿಲ್ಪಗಳಿವೆ. ಈ ದೇವಾಲಯವು ಕಾಲಾಂತರದಲ್ಲಿ ಶಿಥಿಲವಾಗಿ ಜೀರ್ಣೋದ್ಧಾರವಾಗಿದೆ. ಹಳೆಯ ಶಿವಲಿಂಗ ದೇವಾಲಯದ ಹೊರಗಡೆ ಇದೆ. ದೇವಾಲಯದ ಪೌಳಿಯ ಎಡಭಾಗದಲ್ಲಿ ಹೊರಗಡೆ ಗಂಗರ ನಾಲ್ಕನೆಯ ರಾಚಮಲ್ಲನ ಶಾಸನ ಇದೆ. ಒಟ್ಟಿನಲ್ಲಿ ಈ ದೇವಸ್ಥಾನ ಸುಮಾರು ಕ್ರಿ.ಶ.೯೮೦ ರ ನಂತರದ ಕಟ್ಟಡವಾಗಿದ್ದು, ಸಾಧಾರಣವಾದ ಕಟ್ಟಡವಾಗಿದೆ ಎಂದು ಡಾ.ದೇವರ ಕೊಂಡಾರೆಡ್ಡಿರವರು ತಿಳಿಸಿದ್ದಾರೆ. ಆದರೆ ಈಗ ಅದು ಮತ್ತೆ ಜೀರ್ಣೋದ್ಧಾರವಾಗಿ ಈಗ ಕಲ್ಲು ಗಣಿಯಿಂದ ಮತ್ತೆ ಅಪಾಯದಿಂದ ಕೂಡಿದೆ.[39] ಇದೇ ಸ್ಥಳದಲ್ಲಿ ಮತ್ತೊಂದು ದೇವಾಲಯವು ಇದೆ. ಇದು ದಕ್ಷಿಣಾಭಿಮುಖವಾಗಿದೆ. ಈ ದೇವಾಲಯದಲ್ಲಿ ಭೈರವನ ಶಿಲ್ಪ, ವೀರಗಲ್ಲುಗಳನ್ನು ಇಡಲಾಗಿದೆ. ಆದರೆ ಇದು ಕೂಡ ಅಪಾಯದ ಸುಳಿಯಲ್ಲಿದೆ. (ಚಿತ್ರಸಂಖ್ಯೆ-23)

## ಚಂದ್ರಶೇಖರ ದೇವಾಲಯ – ಚಿಕ್ಕಾಟಿ

ಚಿಕ್ಕಾಟಿ ಗ್ರಾಮದ ಕ್ರಿ.ಶ.1049 ರ ಕಾಲಕ್ಕೆ ಸೇರಿದ ಚೋಳ ದೊರೆ ಒಂದನೇ ರಾಜಾಧಿರಾಜ ಚೋಳನ ಆಳ್ವಿಕೆಯ ಕಾಲಕ್ಕೆ ಸೇರಿದ ಶಾಸನವಾಗಿದೆ. ಆದಕಾರಣ ಚೋಳರ ರಾಜಾಧಿರಾಜನ ದೇವಾಲಯಕ್ಕೆ ದಾನಧರ್ಮ ನೀಡಿರಬಹುದೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ.[40]

ಇನ್ನೊಂದು ಶಾಸನದ ಪ್ರಕಾರ ಈ ಗ್ರಾಮವನ್ನು ತೊರೆಕಾಟಿ ಆಟ್ಟ ಎಂದು ಕರೆದಿರುತ್ತಾರೆ.[41] ಈ ಗ್ರಾಮದ ಪೂರ್ವ ದಿಕ್ಕಿನಲ್ಲಿ ಪಾಳುಬಿದ್ದಿರುವ ಚಂದ್ರಶೇಖರ ದೇವಾಲಯವಿದ್ದು, ಅದರ ಬಳಿಯಲ್ಲಿಯೇ ಮೇಲೆ ತಿಳಿಸಲಾಗಿರುವ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಶಾಸನ ಇದೆ. ಈ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ತೆರೆದ ಶುಕನಾಸ, ನವರಂಗವನ್ನು ಹೊಂದಿದೆ. ಈ ದೇವಾಲಯವು ಕಲ್ಲು ಚಪ್ಪಡಿಗಳಿಂದ ಆವೃತವಾಗಿದೆ. ಈ ತಾಲ್ಲೂಕಿನ ವಿಶೇಷವೇನೆಂದರೆ, ಗಂಗರ ಮತ್ತು ಚೋಳರ ಕಾಲಕ್ಕೆ ಸೇರಿದ ಶಿವ ದೇವಾಲಯಗಳು ಅಂದರೆ ತೊಂಡವಾಡಿ, ಹಳ್ಳದಮಾದನಹಳ್ಳಿ, ಸಂಪಿಗೆಪುರ ಮತ್ತು ಚಿಕ್ಕಾಟಿಯಲ್ಲಿ ಒಂದೇ ಮಾದರಿಯಲ್ಲಿವೆ. ಆದಕಾರಣ ಇವುಗಳ ವಿಶೇಷತೆಯನ್ನು ಹೊಂದಿವೆ ಎನ್ನಬಹುದು. ಗರ್ಭಗುಡಿಯಲ್ಲಿ ಸರಳವಾದ ಶಿವಲಿಂಗ, ನವರಂಗದಲ್ಲಿ ಎರಡು ನಂದಿಶಿಲ್ಪಗಳಿದ್ದು, ಇವು ಒಂದೇ ಮಾದರಿಯಲ್ಲಿದೆ.

ಈ ದೇವಾಲಯದ ರಚನೆಯಲ್ಲಿ ಮೇಲೆ ತಿಳಿಸಿರುವಂತೆ ತೊಂಡವಾಡಿಯ ಶಂಕರೇಶ್ವರ ದೇವಾಲಯವನ್ನು ಹೋಲುತ್ತದೆ. ದೊಡ್ಡ ಚಪ್ಪಡಿಗಳನ್ನು ನಿಲ್ಲಿಸಿ ಅವುಗಳ ಮೇಲೆ ಅಗಲವಾದ

ಚಪ್ಪಡಿಗಳನ್ನು ಹಾಸಿ ಸಿದ್ಧಪಡಿಸಿರುವ ಈ ದೇವಾಲಯವು ಅಧಿಷ್ಠಾನ ರಹಿತವಾಗಿದ್ದು, ಮೇಲೆ ತಿಳಿಸಿರುವ ಹಾಗೆ ಚಿಕ್ಕದಾದ ಗರ್ಭಗುಡಿ ಇನ್ನೂ ಸ್ವಲ್ಪ ಚೂರು ಹೆಚ್ಚಾಗಿರುವ ಅಂತರಾಳ, ಸ್ವಲ್ಪ ಅಗಲವಾದ ನವರಂಗವನ್ನು ಹೊಂದಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಈ ಕಂಬಗಳು ಚತುರಸ್ರ, ಅಷ್ಠಾಸ್ರ, ಚತುರಸ್ರ, ಅಷ್ಟಾಸ್ರವಾಗಿದ್ದು, ಅಲಂಕಾರ ರಹಿತವಾಗಿದೆ. ಕಂಬಗಳ ಮೇಲೆ ನೇರವಾಗಿ ಬೋದಿಗೆ ಬರುತ್ತದೆ. (ಚಿತ್ರಸಂಖ್ಯೆ-24, 25)

ಈ ದೇವಾಲಯದ ಪಕ್ಕದಲ್ಲಿ ನಾಲ್ಕು ವೀರಗಲ್ಲುಗಳಿವೆ. ಈಗ ಈ ಚಂದ್ರಮೌಳೇಶ್ವರ ದೇವಾಲಯ ದುಃಸ್ಥಿತಿಯಾಗಿದೆ. ಇದೇ ಮಾದರಿಯ ಕಂಬಗಳನ್ನು ತಿರುಮಕೂಡಲು ನರಸೀಪುರ ತಾಲ್ಲೂಕಿನ ತಡಿಮಾಲಂಗಿಯಲ್ಲಿರುವ ಜನಾರ್ಧನ ದೇವಾಲಯದಲ್ಲಿ ಕಾಣಬಹುದಾಗಿದೆ. ಈ ಮೇಲೆ ತಿಳಿಸಲಾಗಿರುವ ಚಿಕ್ಕಾಟಿಯ ಶಾಸನವು ಗಂಗರ ದೊರೆಯಾದ ಸತ್ಯವಾಕ್ಯ ಪೆರ್ಮಾನಡಿಯ ಕಾಲಕ್ಕೆ ಸೇರಿದೆ. ಇದು ಚಂದ್ರಶೇಖರ ದೇವಾಲಯಕ್ಕೆ ದಾನ ನೀಡಿರುವುದನ್ನು ತಿಳಿಸುತ್ತದೆ.[42] ಆದಕಾರಣ ಗಂಗರ ಮತ್ತು ಚೋಳರ ಕಾಲದಲ್ಲಿ ಈ ದೇವಾಲಯಕ್ಕೆ ಧಾರ್ಮಿಕ ಹಿನ್ನೆಲೆಯಿಂದ ದಾನ ಧರ್ಮ ನೀಡಿರುವುದು ತಿಳಿದುಬರುತ್ತದೆ.

ಈ ದೇವಾಲಯವು ಕೂಡ ದುಃಸ್ಥಿತಿಯ ಹಂತವನ್ನು ತಲುಪಿದೆ. ಇಲ್ಲಿ ಸರಿಯಾದ ರೀತಿಯಲ್ಲಿ ಪೂಜಾಕಾರ್ಯಗಳು ನಡೆಯುತ್ತಿಲ್ಲ. ಇದೊಂದು ಅತ್ಯಂತ ಪ್ರಾಚೀನ ಕಾಲದ ಶೈವ ದೇವಾಲಯವಾಗಿರುವುದರಿಂದ, ಈ ಭಾಗದ ಸ್ಥಳೀಯರು ಹಾಗೂ ಸಂಬಂಧಪಟ್ಟ ಮುಜರಾಯಿ ಇಲಾಖೆಯವರು ಗಮನಹರಿಸಿದರೆ, ಈ ದೇವಾಲಯವನ್ನು ರಕ್ಷಣೆ ಮಾಡಬಹುದಾಗಿದೆ. ಇದರ ಇತಿಹಾಸವನ್ನು ಮುಂದಿನ ಪೀಳಿಗೆಗೂ ಸಹ ತಿಳಿಸುವಂತಹ ಕೆಲಸವಾಗುತ್ತದೆ. ಇದರಿಂದ ಈ ಭಾಗದ ಆಯಾ ಗ್ರಾಮದ ಇತಿಹಾಸವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

### ಶಂಕರೇಶ್ವರ ದೇವಾಲಯ-ತೊಂಡವಾಡಿ

ಶಂಕರೇಶ್ವರ ದೇವಾಲಯವು ತೊಂಡವಾಡಿಯ ಗ್ರಾಮದಿಂದ ಹೊರಗೆ ದಕ್ಷಿಣ ದಿಕ್ಕಿಗೆ ಸುಮಾರು ಒಂದೂವರೆ ಕಿಲೋಮೀಟರ್ ದೂರದಲ್ಲಿದೆ. ಈ ದೇವಾಲಯವು ಸಹ ಚಿಕ್ಕಾಟಿ ಮಾದರಿಯ ದೇವಾಲಯದಂತೆ ಇದೆ. ತೊಂಡವಾಡಿ ಗ್ರಾಮದಲ್ಲಿ ಮೂರು ಶಾಸನಗಳಿವೆ. ಈ ಗ್ರಾಮದ ಹೊಲವೊಂದರಲ್ಲಿರುವ ವೀರಗಲ್ಲು ಶಾಸನದ ಪ್ರಕಾರ ಕ್ರಿ.ಶ.975 ರಲ್ಲಿಯೇ ರಚಿಸಲಾಗಿರುವುದು ತಿಳಿದುಬರುತ್ತದೆ.[43] (ಚಿತ್ರಸಂಖ್ಯೆ-26)ಈ ಕಾಲದಲ್ಲಿ 19ನೇ ವರ್ಷದ ಜೇಷ್ಠಮಾಸದಲ್ಲಿ ತೊಂಡವಾಡಿಯ ಹಳ್ಳಿಯ ಮಳೆ ಮುತ್ತಯ್ಯನ ಮಗನಾದ ಅಯ್ಯಪ್ಪಯ್ಯನು

ವೀರಮರಣ ಹೊಂದಿದ ನೆನಪಿಗಾಗಿ ದಾನ ನೀಡಿದ ವಿಚಾರವು ತಿಳಿದು ಬರುತ್ತದೆ. ಅಲ್ಲದೆ ಹೊರೆಯಾಲ ದೇವರಿಗೆ ದಾನ ನೀಡಿರುವುದಾಗಿ ತಿಳಿದು ಬರುತ್ತದೆ ಮತ್ತು ಊರ ಬಾಗಿಲ ಬಳಿ ಇರುವ ಶಾಸನದ ಪ್ರಕಾರ ಶುಭಮಸ್ತು ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷ 1423ನೆಯ ಸಂವತ್ಸರದ ಅ ಎಂಬುದಾಗಿ ತಿಳಿದುಬರುತ್ತದೆ.[44] ಮತ್ತೊಂದು ತೊಟ್ಟಿಹಟ್ಟಿ ಸ್ವಾಮಿಗಳಿದ್ದ ತಾಮ್ರಶಾಸನವು ಎರಡು ಹಲಗೆಗಳಿದ್ದು, ಮುಂಭಾಗ ಮತ್ತು ಹಿಂಭಾಗ ಸೇರಿ ಒಟ್ಟು 105 ಸಾಲುಗಳುಳ್ಳ ಶಾಸನವಾಗಿದೆ. [45]

ಇದರ ಕಾಲ ಶಕವರುಷ 1009 ಮತ್ತು ಶಕವರುಷ 1048 ಎಂದು ತಿಳಿದು ಬಂದಿದ್ದು, ಅನೇಕ ಗ್ರಾಮಗಳ ಕುಲದೇವರನ್ನು ಕುರಿತು ತಿಳಿಸಲಾಗಿದೆ. ತೊಂಡವಾಡಿಯ ಈ ದೇವಾಲಯವು ಗರ್ಭಗೃಹ ಅರ್ಧಮಂಟಪ (ತೆರೆದ ಶುಕನಾಸ) ನವರಂಗವನ್ನು ಹೊಂದಿದೆ. ಇದು ಪೂರ್ವಾಭಿಮುಖವಾಗಿದ್ದು, ಗೋಡೆಗಳು ಸೇರಿದಂತೆ ದೊಡ್ಡ ದೊಡ್ಡ ಮತ್ತು ಅಗಲವಾದ ಚಪ್ಪಡಿಗಳನ್ನು ನಿಲ್ಲಿಸಿ ಮಲಗಿ ದೇವಾಲಯವನ್ನು ರಚಿಸಿದ್ದಾರೆ. ಗರ್ಭಗೃಹದಲ್ಲಿ ಚೌಕಾಕಾರದ ಶಿವಲಿಂಗ ಇದೆ. ತೆರೆದ ಅಂತರಾಳ ಅಥವಾ ಶುಕನಾಸ ಗರ್ಭಗೃಹಕ್ಕಿಂತಲೂ ಸ್ವಲ್ಪ ಚಿಕ್ಕದಾಗಿದೆ. ನವರಂಗದಲ್ಲಿ ಚೌಕಾಕಾರದ ನಾಲ್ಕು ಕಂಬಗಳಿವೆ. ಈ ಕಂಬಗಳು ಚೌಕಾಕಾರದ ಎಂಟು ಮೂಲೆ, ಚೌಕಾಕಾರವಾಗಿದ್ದು, ಇವುಗಳ ಮೇಲೆ ಸರಳ ಬೋದಿಗೆ ಇದೆ. ಚಿಕ್ಕಾಟಿಯಲ್ಲೂ ಇದೇ ಮಾದರಿಯ ಕಂಬಗಳು ಮತ್ತು ಬೋದಿಗೆಗಳು ಕಾಣಬರುತ್ತದೆ.

ಬೋದಿಗೆಯ ಮೇಲಿಂದ ತೊಲೆಗಳು ಚಪ್ಪಡಿಗಳ ಬಲಿ ಕಂಬಗಳಿಲ್ಲ. ಚಪ್ಪಡಿಗಳಿಗೆ ರಂಧ್ರ ಕೊರೆದು ತೊಲೆಗಳನ್ನು ಸೇರಿಸಿದೆ. ನಾಲ್ಕು ಕಂಬಗಳ ಮಧ್ಯ ಕಮಲಪುಷ್ಪವಿದೆ. ನವರಂಗದಲ್ಲಿ ವಿಷ್ಣು, ಮಹಿಷಮರ್ದಿನಿ ಮತ್ತು ನಂದಿಯ ಶಿಲ್ಪಗಳಿವೆ. ಇವುಗಳೆಲ್ಲ ವಿಷ್ಣು ಶಿಲ್ಪವು ಗಮನಾರ್ಹವಾದುದು. (ಚಿತ್ರಸಂಖ್ಯೆ-27) ನಾಲ್ಕು ಕೈಗಳನ್ನು ಹೊಂದಿರುವ ಈ ಶಿಲ್ಪವು ಉಬ್ಬುಶಿಲ್ಪವಾಗಿದ್ದು, ಕೈಗಳಲ್ಲಿ ಧಾರಕ ಮುದ್ರೆಯಲ್ಲಿರುವ ಪ್ರಯೋಗ ಚಕ್ರ, ಅಭಯ, ಶಂಖ ಮತ್ತು ಕಟೀಹಸ್ತಗಳನ್ನು ಕಾಣಬಹುದು. ಬಲಗೈಯ ಬಳಿಯಲ್ಲಿ ಸೋರೆಬುರುಡೆಯಂತಹ ನೀಳವಾದ ಗಧೆಯನ್ನು ನೇತಾಡುತ್ತಿರುವಂತೆ ಬಿಡಿಸಿದೆ. ಕಿವಿಯಲ್ಲಿ ಉದ್ದವಾದ ಮಕರ ಕುಂಡಲಗಳಿವೆ. ಈ ಶಿಲ್ಪವು ಸುಮಾರು ಒಂದೂವರೆ ಅಡಿ ಎತ್ತರವಿದೆ. ಸುಮಾರು ಒಂದು ಅಡಿ ಎತ್ತರದ ದುರ್ಗಿಯ ಶಿಲ್ಪವು ಶಿಥಿಲವಾಗಿದ್ದು, ಅಲ್ಪಸ್ವಲ್ಪ ನೋಟದಿಂದ ಚೋಳರ ಕಾಲಕ್ಕೆ ಸೇರಿಸಬಹುದಾಗಿದೆ.

ಅಲ್ಲದೆ ಈ ಶಿಲ್ಪವನ್ನು ಮಹಿಷಮರ್ದಿನಿಶಿಲ್ಪ ಎಂತಲೂ ಕರೆಯಬಹುದಾಗಿದೆ. ನವರಂಗದ ಮಧ್ಯದಲ್ಲಿ ಒಂದು ನಂದಿಶಿಲ್ಪವನ್ನು ಕೂಡ ಇರಿಸಲಾಗಿದೆ. ಈ ದೇವಾಲಯವನ್ನು

ಈಗ ನೋಡಿದರೆ ಭೂಮಟ್ಟಕ್ಕಿಂತ ತಗ್ಗಿನಲ್ಲಿದೆ (ಕೆಳಗಿದೆ). ದೇವಾಲಯವು ಗದ್ದೆಗಳ ಮಧ್ಯದಲ್ಲಿ ಗುಂಡ್ಲುನದಿಯ ಪಾತ್ರದಲ್ಲಿರುವುದರಿಂದ ಮಣ್ಣು ಬೀಳುತ್ತಾ ನೆಲದೊಳಗೆ ಸೇರುತ್ತಿದ್ದು, ಶಿಥಿಲವಾಗುತ್ತಿದೆ.[46] ಈ ದೇವಾಲಯವನ್ನು ಸ್ಥಳೀಯರಿಂದ ಮತ್ತು ಮುಜರಾಯಿ ಇಲಾಖೆಯು ಮುಂದಿನ ಪೀಳಿಗೆಗೆ ಉಳಿಸಲು ಕ್ರಮಕೈಗೊಳ್ಳಬೇಕಾಗಿದೆ. ಇಲ್ಲಿ ಸರಿಯಾದ ರೀತಿಯಲ್ಲಿ ಪೂಜೆ, ಪುನಸ್ಕಾರಗಳು ನಡೆಯುತ್ತಿಲ್ಲ.

## ಸೋಮೇಶ್ವರ ದೇವಾಲಯ ಸ್ಕಂದಗಿರಿ (ಕಂದೇಗಾಲದ (ಶ್ರೀ ಪಾರ್ವತಾಂಭ) ಬೆಟ್ಟ

### ಸ್ಕಂದಗಿರಿಯ ಚಾರಿತ್ರಿಕ ಹಿನ್ನೆಲೆ

ಪಾರ್ವತಿ ಬೆಟ್ಟ (ಸ್ಕಂದಗಿರಿ) ತೆರಕಣಾಂಬಿ ರಸ್ತೆಯಲ್ಲಿ ಶಿಂಡನಪುರದ ಕ್ರಾಸ್‌ನಿಂದ ಸುಮಾರು ಮೂರು ಕಿಲೋಮೀಟರ್ ಹೋದರೆ ಸ್ಕಂದಗಿರಿ ಅಥವಾ ಪಾರ್ವತಿ ಬೆಟ್ಟ ಇದೆ. ಈ ಬೆಟ್ಟಕ್ಕೆ ಎಲ್ಲಾ ದಿಕ್ಕುಗಳಿಂದಲೂ ಪರ್ವತ ಶ್ರೇಣಿಗಳಿವೆ. ದಕ್ಷಿಣ ದಿಕ್ಕಿಗೆ ನೀಲಾದ್ರಿ ಬೆಟ್ಟ, ಆಗ್ನೇಯಕ್ಕೆ ಕೊಂಗಹಳ್ಳಿ ಬೆಟ್ಟ ಮತ್ತು ಮಲ್ಲಿಕಾರ್ಜುನ ಬೆಟ್ಟವು, ಪೂರ್ವಕ್ಕೆ ಹುಲಗನಮರಡಿ ನಾಮಾಂಕಿತ ವ್ಯಾಘ್ರಾಚಲ ಗಿರಿಯೂ, ನೈಋತ್ಯದಲ್ಲಿ ಕಮಲಾಚಲ ನಾಮಾಂಕಿತ ದಕ್ಷಿಣ ಗೋವರ್ಧನ ಬೆಟ್ಟವೂ, ಪಶ್ಚಿಮಕ್ಕೆ ಮಂಚಹಳ್ಳಿ ಅಹಿಷಾಚಲ ನಾಮದೆ ನಾಗಲಿಂಗ ಬೆಟ್ಟವು, ವಾಯುವ್ಯಕ್ಕೆ ಹೂಣಕಾರ (ಓಂಕಾರ) ಸಿದ್ದೇಶ್ವರ ಬೆಟ್ಟವು, ಉತ್ತರ ದಿಕ್ಕಿಗೆ ಭೂಕೈಲಾಸ ಮತ್ತು ಮಹಾಬಲೇಶ್ವರ ಬೆಟ್ಟವು, ಈಶಾನ್ಯ ದಿಕ್ಕಿಗೆ ಕನಕಾಚಲಬೆಟ್ಟ, ಉದುಗಿರಿ, ವೃಷಭಾದ್ರಿ ಬೆಟ್ಟವೂ ಇದೆ. ಈ ರೀತಿಯ ಅಷ್ಟದಳ ಪರ್ವತಗಲ ಮಧ್ಯದಲ್ಲಿ ಪ್ರಕಾಶಿಸುತ್ತಿರುವುದು, ವನಗಿರಿ ನದಿಗಳಿಂದ ಕೂಡಿದ ಈ ಐತಿಹಾಸಿಕ ನೆಲೆಯಲ್ಲಿ ಉಮಾಸ್ಕಂದ ಲೀಲೆಯಲ್ಲಿ ಉತ್ಪನ್ನವಾದ ಷಣ್ಮುಖಸ್ವಾಮಿಯು ತಾರಕಾಸುರನನ್ನು ಸಂಹರಿಸಿ ಬಳಿಕ ಶಿವನನ್ನು ಕುರಿತು ತಪಸ್ಸನ್ನು ಮಾಡಿದ್ದರಿಂದ ಸ್ಕಂದಗಿರಿಯೆಂದು ಈ ಬೆಟ್ಟಕ್ಕೆ ನಾಮಕರಣವಾಗಿದೆ. ಈ ನೆಲೆಯಲ್ಲಿ ಸೋಮೇಶ್ವರ ಕುಮಾರಸ್ವಾಮಿಗೆ ಪ್ರಸನ್ನವಾಗಿ ಪಾರ್ವತಿ ಸಹಿತವಾಗಿ ಸ್ಕಂದಗಿರಿಯಲ್ಲಿ ಉದ್ಭವಿಸಿದಳು ಎಂಬ ನಂಬಿಕೆ ಈ ಭಾಗದ ಜನರಲ್ಲಿದೆ. ಆದಕಾರಣವೇ ಒಂದು ಪ್ರಾಕಾರದಲ್ಲಿ ಸೋಮೇಶ್ವರ ಮತ್ತು ಪಾರ್ವತಿ ದೇವಾಲಯಗಳನ್ನು ಸ್ಕಂದಗಿರಿ ಬೆಟ್ಟದಲ್ಲಿ ಕಾಣುತ್ತೇವೆ. ಈ ದೇವಾಲಯ ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆಗೆ ಸೇರಿಸಿದೆ.

ಸ್ಥಳೀಯ ಇತಿಹಾಸದ ಪ್ರಕಾರ:- ಈ ಕ್ಷೇತ್ರದ ಎದುರು ಭುಕ್ತಮುನಿಗಳಾಶ್ರಮವು ಹಿಂಭಾಗದಲ್ಲಿದೆ. ಸ್ಕಂದಾಶ್ರಮವು ಬಲಭಾಗದಲ್ಲಿ ಸಿದ್ಧಾಶ್ರಮವು ವಾಮ ಭಾಗದಲ್ಲಿ ವನಮಾಲೆಯಿಂದ ಶೋಭಾಯಮಾನವಾದ ಋಷ್ಯಾಶ್ರಮಗಳಿಂದ ಕೂಡಿ ನವವಿಧ

ಭಕ್ತಿಯನ್ನುಂಟು ಮಾಡುತ್ತಾ ನೋಡುಗರ ಕಣ್ಮನಗಳನ್ನು ಸೆಳೆಯುತ್ತಾ, ಈ ಚತುರಾಶ್ರಮಗಳ ಮಧ್ಯೆ ಇಂದುಧರನ ವಾಮಭಾಗದಲ್ಲಿ (ಷಣ್ಮುಖ) ಕುಮಾರಸ್ವಾಮಿಯಾದ ಸ್ಕಂದನನ್ನು ಸಂತೈಸಲು ಜಗಜ್ಜನನಿಯಾದ ಪಾರ್ವತಿದೇವಿಯು ದಕ್ಷಿಣ ಪಾದವನ್ನು ಮುಂದಕ್ಕೆ ಚಾಚಿ ವರದ ಹಸ್ತವನ್ನು ಕಠಾರಿಯನ್ನು ಹಿಡಿದು ಜಳಪಿಸುತ್ತಾ ಬಲಗಣ್ಣಿನಲ್ಲಿ ಕಿಡಿಯನ್ನೆದುರಿಸುತ್ತಾ, ಝೇಂಕರಿಸುತ್ತಾ, ಉಗ್ರರೂಪಿಣಿಯಾಗಿ, ಸೌಮ್ಯ ದೃಷ್ಟಿಯಿಂದ ಬೇಡಿದವರ ಇಷ್ಟಾರ್ಥಗಳನ್ನು ನೀಡುತ್ತಾ, ಮೇನಕೆ, ಗಿರಿಜೆ, ತ್ರಿಪುರ ಸುಂದರಿ ಮೊದಲಾದ ಅನಂತ ನಾಮಗಳುಳ್ಳವಳಾಗಿ ಪ್ರಕಾಶಮಾನಳಾಗಿರುವಳು. ಮಹಾಮಹಿಮನಾದ ವಿಂಧ್ಯಪರ್ವತದ ಗರ್ವವನ್ನು ನಾಶಗೊಳಿಸಿದ ಸಮುದ್ರವನ್ನು ದಾನ ಮಾಡಿದ ಮಹರ್ಷಿಯಾದ ಅಗಸ್ತ್ಯ ಮಹಾಮುನಿಯು ಈಗ ಪ್ರೇರಣೆಯಿಂದ ಈ ಸೋಮೇಶ್ವರನನ್ನು ಪವಿತ್ರಗೊಳಿಸಲು ಈ ಸ್ಕಂದಗಿರಿಗೆ ಬಂದು ಉಗ್ರವಾದ ತಪಸ್ಸಿನಿಂದ ಸೋಮೇಶ್ವರನನ್ನು ಮೆಚ್ಚಿಸಿ ಇಷ್ಟಾರ್ಥಗಳನ್ನು ಪಡೆದು ಆ ಸೋಮೇಶ ಲಿಂಗದ ವಾಮಾ ಭಾಗದಲ್ಲಿ ಜಗಜ್ಜನನಿಯಾದ ಪಾರ್ವತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಜಗನ್ಮಾತೆಯ ಪ್ರಸನ್ನತೆಯನ್ನು ಹೊಂದಿ ಗುಹಾಮಾರ್ಗದಿಂದ ಗೋವರ್ಧನಗಿರಿಗೆ ಹೋಗಿ ಅಲ್ಲಿ ಕೆಲವು ಕಾಲ ತಪಸ್ಸನ್ನಾಚರಿಸಿ ಶ್ರೀ ಕಮಲಾಕ್ಷಿ ಶ್ರೀ ವೇಣುಗೋಪಾಲಕೃಷ್ಣ ಸ್ವಾಮಿಯವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ದಕ್ಷಿಣ ಕಾಶಿಯೆನಿಸಿದ ತ್ರಿಮುಕುಟ ಕ್ಷೇತ್ರಕ್ಕೆ ದಯಾ ಮಾಡಿಸಿದರು. ಹೀಗೆ ಈ ಕ್ಷೇತ್ರದ ಇತಿಹಾಸವು ಕಾಣಬರುತ್ತದೆ.[47]

ಕಂದಾಗಾಲ (ಸ್ಕಂದಗಾಲ) ಸೇರಿದಂತೆ ಮೂರು ಶಾಸನಗಳಿವೆ. ಗ್ರಾಮದ ಕೆರೆಗೆ ಪಶ್ಚಿಮ ಹೊಲವೊಂದರ ಪಕ್ಕದಲ್ಲಿ ಬಿದ್ದಿರುವ ಕಲ್ಲು ಶಾಸನದ ಪ್ರಕಾರ ಕ್ರಿ.ಶ.12ನೇ ಶತಮಾನದ ಶಾಸನವಾಗಿದ್ದು, ಇದು ತಮಿಳು ಭಾಷೆಯಲ್ಲಿದ್ದು, ಗಂಗೈಕೊಂಡ ಒಳನಾಡನ್ನು ತಿಳಿಸುವ ಶಾಸನವಾಗಿದೆ.[48]

153ನೇ ಶಾಸನದ ಸಮೀಪದಲ್ಲಿರುವ ಕಲ್ಲು ಶಾಸನವು ಕ್ರಿ.ಶ.11ನೇ ಶತಮಾನಕ್ಕೆ ಸೇರಿದ್ದು ಇದು 15 ಸಾಲುಗಳನ್ನು ಹೊಂದಿದ್ದು, ತಮಿಳು ಲಿಪಿಯನ್ನು ಹೊಂದಿದೆ. ಇದು ಸ್ಥಳೀಯ ಪತಿಯನ್ನು ಉಲ್ಲೇಖಿಸುತ್ತದೆ.[49]

154ನೆಯ ಶಾಸನದ ಸಮೀಪದಲ್ಲಿ ನಿಂತಿರುವ ಗಾಣದ ಮೇಲೆ ಸುಮಾರು 8 ಸಾಲುಗಳಿರುವ ಗಾಣ ಶಾಸನದಲ್ಲಿ ಹೊಯ್ಸಳ ರಾಜ ಮೂರನೇ ವೀರಬಲ್ಲಾಳನ ಕಾಲಕ್ಕೆ ಸೇರಿದ ಶಾಸನ ಇದಾಗಿದೆ. ಈ ಶಾಸನವನ್ನು ಕ್ರಿ.ಶ.1334 ರಲ್ಲಿ ಬರೆಯಿಸಲಾಗಿದೆ. ಆದರೆ ಈ ಶಾಸನವು ಇಲ್ಲಿಯ ಸೋಮೇಶ್ವರ ದೇವರಿಗೆ ಪೂರಕವಾಗಿದೆ. ಸ್ವಸ್ತಿ ಶ್ರೀ ಶಕವರುಷ 1256 ಭಾವಸಂವತ್ಸರದಂದು ಮಾರ್ಗಸಿರ ಸು 10 ಮಂ ಶ್ರೀ ಮನುಮಹಾಪ್ರಧಾನರಿಮ್ಮಡಿರಾ

ಉತ್ತರಾಯ ಕೇತೆಯ ದಂಣ್ಣಾಯಕರು ರಾಜ್ಯಂಗೆಯುತ್ತಿರಲು ಕಂದವಂಗಲದ ಬಮ್ಮಗೌಡನ ಮಕ್ಕಳು ರಾಮಗೌಡ, ರಾಯಗೌಡ, ಕೇತಗೌಡ, ಕರಿಗೌಡನವರು ತಂದು ಅಪ್ಪನ ಧರ್ಮ್ಮಕ್ಕೆ ಸೋಮನಾಥದೇವರ ನಂದಾದೀವಿಗೆಗೆ ಗಾಣ 1ಕ್ಕೆ ಸೊಲ್ಲಿಗೆ ಎಣ್ಣೆ ಮಂಗಳ ಮಹಾ ಶ್ರೀ ಶ್ರೀ ಶ್ರೀ ಎಂದು ಬರೆಯಿಸಲಾಗಿದೆ. ಈ ಶಾಸನದಲ್ಲಿ ಇಲ್ಲಿಯ ಸೋಮೇಶ್ವರನನ್ನು ಕುರಿತು ತಿಳಿಸಲಾಗಿದೆ.[50]

## ಸೋಮೇಶ್ವರ ದೇವಾಲಯ

ಸ್ಕಂದಗಿರಿಯ ಸೋಮೇಶ್ವರ ದೇವಾಲಯವಿದ್ದು, ಅಂದರೆ ದ್ವಾರವು ಪೂರ್ವಾಭಿಮುಖ ಹಾಗೂ ಉತ್ತರಾಭಿಮುಖವಾಗಿದೆ. ತಳವಿನ್ಯಾಸದಲ್ಲಿ ದೇವಾಲಯವು ಗರ್ಭಗೃಹ, ಶುಕನಾಸ, ನವರಂಗ, ಮುಖಮಂಟಪವನ್ನು ಹೊಂದಿದೆ. ಮೂಲಗರ್ಭಗುಡಿಯಲ್ಲಿ ಸೋಮೇಶ್ವರ ಸಮೇತ ಶಿವಲಿಂಗವನ್ನು ಹೊಂದಿದೆ. ಅಲ್ಲದೆ ಈ ಸೋಮೇಶ್ವರ ಲಿಂಗಕ್ಕೆ ಒಂದು ಕೊಳಗವನ್ನು ಮಾಡಿಸಿ ಧರಿಸಿರುವರು. ಸ್ಥಳೀಯರ ಹೇಳಿಕೆಯ ಪ್ರಕಾರ ಸೋಮೇಶ್ವರ ಲಿಂಗವು ದಿನೇ ದಿನೇ ಬೆಳೆಯುತ್ತಾ ಬಂದಿದೆ ಎಂಬ ಹೇಳಿಕೆಗಳಿವೆ. (ಚಿತ್ರಸಂಖ್ಯೆ-28) ಆದರೆ ತನ್ನ ದೃಷ್ಠಿಯಲ್ಲಿ ಇದು ತಪ್ಪು ಹೇಳಿಕೆಯಾಗಿದೆ. ಸ್ಥಳೀಯರ ಹೇಳಿಕೆ ಪ್ರಕಾರ ಲಿಂಗಕ್ಕೆ ಧರಿಸುತ್ತಿದ್ದ ಕೊಳಗವು ನಾಲ್ಕು ಅಂಗುಲ ತಳದಲ್ಲಿ ಬಿಡುತ್ತಿರುವುದು ಈ ಮಹತ್ವವನ್ನು ನೋಡಿ ಭಕ್ತಾದಿಗಳು ಆಶ್ಚರ್ಯವನ್ನು ಪಡುತ್ತಾರೆ.

ಶುಕನಾಸಿ ಅಂಕಣದಲ್ಲಿ ಯಾವುದೇ ಶಿಲ್ಪಗಳಿಲ್ಲ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ನವರಂಗದಲ್ಲಿ ಉತ್ತರ ಬಾಗಿಲು ಇದಕ್ಕೆ ಸೇರಿದ ಹಾಗೆ ನಂದಿಕೇಶ್ವರನ ಮಂಟಪವು ಇದೆ. ನವರಂಗದಲ್ಲಿ ಸಪ್ತಮಾತೃಕೆಯರು, ಪ್ರಸನ್ನ ಗಣಪತಿ, ಭೈರವಮೂರ್ತಿ, ಮಹೇಶ್ವರಮೂರ್ತಿ, ಕಾಳಿಕಾಂಬೆ, ವೀರಭದ್ರಮೂರ್ತಿಗಳು, ಸೋಮೇಶ್ವರನ ಎದುರು ವೃಷಭಮೂರ್ತಿಯ ಮುಂದೆ ಕಾಳಿಕಾದೇವಿ, ಚಾಮುಂಡೇಶ್ವರಿ, ನಂದೀಶ್ವರಮೂರ್ತಿ, ಭಿಕ್ಷಾಟನ ಮೂರ್ತಿ, ಪಾರ್ವತಿ ಸಹಿತ ಸೋಮೇಶ್ವರ ಉತ್ಸವಮೂರ್ತಿ ಶಿಲ್ಪಗಳಿವೆ. ಕಾಲಭೈರವ, ಗಣಪತಿ, ನಾಗಸರ್ಪ ಕಲ್ಲು, ಸಪ್ತಮಾತೃಕೆಯರ ಶಿಲ್ಪಗಳು, (ಚಿತ್ರಸಂಖ್ಯೆ-29) ಮಹಿಷಮರ್ದಿನಿ ಶಿಲ್ಪ, ವೀರಭದ್ರ, ಸೂರ್ಯ ಇನ್ನೂ ಮೊದಲಾದ ಬಿಡಿ ಶಿಲ್ಪಗಳು ಸೋಮೇಶ್ವರ ದೇವಾಲಯದ ನವರಂಗದಲ್ಲಿ ಕಾಣಬರುತ್ತದೆ. (ಚಿತ್ರಸಂಖ್ಯೆ-30)

ನವರಂಗದ ಮುಂದೆ ಮುಖಮಂಟಪ ಇದೆ. ಈ ಮುಖಮಂಟಪದಲ್ಲಿಯೂ ನಾಲ್ಕು ಕಂಬಗಳಿವೆ. (ಚಿತ್ರಸಂಖ್ಯೆ-31) ದೇವಾಲಯದ ಮುಂದೆ ಬಲಿಪೀಠ ಇದೆ. ದೇವಾಲಯದ

ಮೇಲೆ ದ್ರಾವಿಡ ಶೈಲಿಯ ವಿಮಾನ ಇದೆ. ದ್ವಾರಮಂಟಪವು ಸಹ ಇದೆ. ಒಂದು ಕೊಳ ಇದೆ (ಪುಷ್ಕರಣಿ). ಈ ಎಲ್ಲಾ ಬೆಳವಣಿಗೆಯಿಂದ ಇದೊಂದು ಅತ್ಯಂತ ಪ್ರಮುಖವಾದ ನೆಲೆಯಾಗಿದೆ.

**ಪಾರ್ವತಿ ದೇವಾಲಯ-ಸ್ಕಂದಗಿರಿ**

ಸ್ಕಂದಗಿರಿಯಲ್ಲಿ ಸೋಮೇಶ್ವರ ದೇವಾಲಯ ಪಕ್ಕದಲ್ಲಿಯೇ ಪಾರ್ವತಿ ದೇವಾಲಯ ಅಥವಾ ಗುಡಿ ಇದೆ. ಇದು ಸಹ ಉತ್ತರಾಭಿಮುಖವಾಗಿದೆ. ಪಾರ್ವತಿ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ ಮತ್ತು ಮುಖಮಂಟಪ ಇದೆ. ಮೂಲಗರ್ಭಗುಡಿಯಲ್ಲಿ ತಾಯಿ ಪಾರ್ವತಿ ದೇವಿ ಅಮ್ಮರವರ ಶಿಲ್ಪವನ್ನು ಇಡಲಾಗಿದೆ. ಈ ಶಿಲ್ಪವು 4 ಅಡಿಗಳಷ್ಟು ಎತ್ತರವಾಗಿದೆ. ಶುಕನಾಸದ ಅಂಕಣವು ಖಾಲಿ ಇದೆ. ನವರಂಗದಲ್ಲಿ ಎರಡು ಕಂಬಗಳಿವೆ. ಈ ಕಂಬಗಳು ಚೌಕಾಕಾರವಾಗಿ, ಆಯತಾಕಾರವಾಗಿ ಮೇಲ್ಭಾಗದಲ್ಲಿ ಆಯತಾಕಾರದ ಚಾಚು ಬೋದಿಗೆಯನ್ನು ಹೊಂದಿದೆ. ಮುಖಮಂಟಪದಲ್ಲಿಯೂ ಎರಡು ಕಂಬಗಳಿವೆ. ಈ ಕಂಬಗಳನ್ನು ನೋಡಿದರೆ ಪ್ರಾಯಶಃ ವಿಜಯನಗರ ಅರಸರ ಕಾಲಕ್ಕೆ ಹಾಗೂ ಮೈಸೂರು ಒಡೆಯರ್ ಕಾಲಕ್ಕೆ ಸೇರಿಸಬಹುದಾಗಿದೆ.

ಈ ಸೋಮೇಶ್ವರ ದೇವಾಲಯದ ಮಾದರಿಯಲ್ಲಿಯೇ ಪಾರ್ವತಿ ದೇವಾಲಯದಲ್ಲಿಯೂ ಸಹ ಗರ್ಭಗೃಹ ಮೇಲ್ಭಾಗದಲ್ಲಿ ವಿಮಾನವನ್ನು ಕಾಣಬಹುದಾಗಿದೆ. ನವರಂಗದಲ್ಲಿರುವ ನಾಲ್ಕು ಕಂಬಗಳಲ್ಲಿಯೂ ರಾಜ ಒಡೆಯರ್, ರಾಣಿಯರ ಉಬ್ಬುಶಿಲ್ಪಗಳಿವೆ ಹಾಗೂ ಇನ್ನಿತರ ಉಬ್ಬುಶಿಲ್ಪಗಳಿವೆ. ಆದಕಾರಣ ಈ ದೇವಾಲಯವು ಮೈಸೂರು ಒಡೆಯರ ಕಾಲಕ್ಕೆ ಸೇರಿದೆ ಎಂದು ನಿಖರವಾಗಿ ಹೇಳಬಹುದಾಗಿದೆ. ಈ ದೇವಾಲಯದಲ್ಲಿ ಅನೇಕ ರೀತಿಯ ಧಾರ್ಮಿಕ ಕಾರ್ಯಗಳು ನಡೆಯುತ್ತವೆ. ಮದುವೆಗಳು ಸಹ ಸಾಕಷ್ಟು ಸಂಖ್ಯೆಯಲ್ಲಿ ನಡೆಯುತ್ತವೆ. ಅನೇಕ ರೀತಿಯ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳು ಇಲ್ಲಿ ಜರುಗುವುದರಿಂದ ಸಮಾಜದ ದೃಷ್ಟಿಕೋನದಿಂದ ಇದೊಂದು ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗಿದೆ. ಸ್ಕಂದಗಿರಿ ಬೆಟ್ಟದ ತಪ್ಪಲಿನಲ್ಲಿಯೂ ಒಂದು ಕಲ್ಲಿನ ಮಂಟಪ ಇದೆ. (ಚಿತ್ರಸಂಖ್ಯೆ-32) ಈಗ ಅದು ದುಃಸ್ಥಿತಿಯ ಹಂತದಲ್ಲಿದೆ. ಪ್ರಾಯಶಃ ಅಂದಿನ ಕಾಲಕ್ಕೆ ಇದು ದ್ವಾರವು ಸಹ ಆಗಿರಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ. ತಪ್ಪಲಿನಲ್ಲಿ ಒಂದು ರಥ ಸಹ ಇದೆ. ಪ್ರತಿವರ್ಷ ಸಾವಿರಕ್ಕೂ ಅಧಿಕ ಮದುವೆಗಳು ನಡೆಯುತ್ತವೆ. ಎಲ್ಲಾವರ್ಗದ ಜನರು ಈ ಸ್ಥಳಕ್ಕೆ ಬಂದು ಮದುವೆ ಮಾಡುತ್ತಾರೆ. ಅದರಲ್ಲೂ ಉಪ್ಪಾರ, ನಾಯಕ ಸಮುದಾಯದವರ ಮದುವೆಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗುತ್ತದೆ ಹಾಗೂ ಅಂತರ್ಜಾತಿ ವಿವಾಹಗಳು ಸಹ ಈ ಸ್ಥಳದಲ್ಲಿ ನಡೆಯುತ್ತವೆ.

ಈ ಬೆಟ್ಟದಲ್ಲಿ ಸಿದ್ದಪ್ಪಾಜಿಯ ಗದ್ದಿಗೆಯು ಸಹ ಇದೆ. ಅಂದಿನ ಕಾಲಕ್ಕೆ ರಾಚಪ್ಪಾಜಿಯವರು ಮತ್ತು ಸಿದ್ದಪ್ಪಾಜಿಯವರು ಇಲ್ಲಿ ಅನುಷ್ಠಾನ ಮಾಡುತ್ತಿದ್ದ ನೆಲೆಯೆಂದು ಕರೆಯುತ್ತಾರೆ ಹಾಗೂ ಇಲ್ಲೊಂದು ಗವಿಯು ಸಹ ಇದೆ.

ಇಲ್ಲಿಯ ಐತಿಹ್ಯದ ಪ್ರಕಾರ ಈ ಪ್ರಾಂತ್ಯದಲ್ಲಿ ಮಳೆ ಬಾರದೆ ಇದ್ದರೆ, ಭಕ್ತಾದಿಗಳಿಂದ ಭಿಕ್ಷೆ ಬೇಡಿ ತಂದು ಇಲ್ಲಿಯ ಭಕ್ತಮುನಿಗಳ ಆಶ್ರಮದಲ್ಲಿ ಅವರ ಹೆಸರಿನ ಮೇಲೆ ಆರಾಧನೆ ಮಾಡಿ, ಮಾಹೇಶ್ವರ ಪಾದಪೂಜೆ ಮಾಡಿ ಮಾಹೇಶ್ವರರಿಗೂ, ಭಕ್ತರಿಗೂ ಅನ್ನ ನೀಡಿದರೆ ಆ ದಿವಸ ಮಳೆ ಬರುತ್ತದೆ ಎಂಬ ನಂಬಿಕೆಯು ಈ ನೆಲೆಯಲ್ಲಿದೆ. ಇಲ್ಲಿಯ ಸೋಮೇಶ್ವರ ಮತ್ತು ಪಾರ್ವತಿ ದೇವಾಲಯಗಳಿರುವುದರಿಂದಲೇ ಹೆಸರುವಾಸಿಯಾಗಿದೆ. ಈ ದೇವಾಲಯಗಳು ಕಂದಗಾಲಕ್ಕೆ (ಸ್ಕಂದಗಾಲಕ್ಕೆ) ಸೇರಿದ ಆಲಯಗಳಿವೆ. ಸುತ್ತ ದೊಡ್ಡ ಬೆಟ್ಟಗಳಿದ್ದು, ಅವುಗಳ ಮಧ್ಯದಲ್ಲಿ ನೀರಿನ ಸೆಲೆಯೊಂದಿದ್ದು, ಸಣ್ಣದಾಗಿ ಹರಿಯುತ್ತದೆ. ಇಂತಹ ಸೆಲೆಯ ಬಳಿ ಇರುವುದರಿಂದಲೇ ಈ ದೇವಾಲಯಗಳು ಪ್ರಸಿದ್ಧವಾಗಿವೆ. ದೇವಾಲಯದ ಹಿಂಭಾಗದಲ್ಲಿ ಗಂಗರ ಕಾಲದ ಬಿಡಿಶಿಲ್ಪಗಳಿವೆ. ಇದೇ ಬೆಟ್ಟದ ಕೆಳಭಾಗದಲ್ಲಿ ಇನ್ನೊಂದು ಶಿವಲಿಂಗ ಇದೆ. ಅದರ ಬಳಿ ಮಹಿಷಮರ್ದಿನಿ ಶಿಲ್ಪ ಇದೆ. ಬಹುಶಃ ಮೊದಲು ಇನ್ನೊಂದು ಶಿವಾಲಯವಿದ್ದಿರಬೇಕು. ಅದು ಶಿಥಿಲವಾಗಿ ಕೆಲವೊಂದು ಶಿಲ್ಪಗಳನ್ನು ಇಲ್ಲಿಗೆ ತೆಗೆದುಕೊಂಡು ಬಂದಿರಬೇಕು. ಸೋಮೇಶ್ವರ ದೇವಾಲಯ ವಿಜಯನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರವಾಗಿರುವುದರಿಂದ ಅದರ ಮೂಲ ರಚನೆ ಬದಲಾಗಿದೆ. ಇಲ್ಲಿನ ಬಿಡಿ ಶಿಲ್ಪಗಳು ಇತರೆಡೆ ದೊರಕುವ ಗಂಗರ ಶಿಲ್ಪಗಳನ್ನು ಹೋಲುವುದರಿಂದ ಮೊದಲು ಇಲ್ಲಿ ಗಂಗರ ದೇವಾಲಯವಿತ್ತೆಂಬುದರಲ್ಲಿ ಸಂಶಯವಿಲ್ಲ. ಗುಂಡ್ಲುಪೇಟೆ ತಾಲ್ಲೂಕು ಹಸುಗೂಲಿಯ ಶಾಸನದಲ್ಲಿ ಉಲ್ಲೇಖಗೊಂಡಿರುವ ಕಂದಮಂಗಲ ಇದೇ ಸ್ಥಳವಾಗಿರಬೇಕು.[51] ಇಲ್ಲಿ ಪ್ರತಿದಿನ ಪೂಜಾ ಕಾರ್ಯ ನಡೆಯುತ್ತದೆ. ಅಮಾವಾಸ್ಯೆ, ಹುಣ್ಣಿಮೆ, ಶಿವರಾತ್ರಿ ಇನ್ನಿತರ ಹಬ್ಬದ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ದೇವರ ದರ್ಶನ ನಡೆಯುತ್ತಾರೆ.

ಇಲ್ಲಿಯ ರಥೋತ್ಸವ: ಪಾರ್ವತಾಂಬೆ ಮತ್ತು ಶ್ರೀ ಸೋಮೇಶ್ವರಸ್ವಾಮಿ ಸಹಿತ ರಥೋತ್ಸವ ಜಾತ್ರೆ ನಡೆಯುತ್ತದೆ. ಇದೊಂದು ಪ್ರವಾಸಿಗರ ನೆಲೆಯೂ ಸಹ ಆಗಿದೆ. ಪ್ರತಿದಿನ ಬೆಳಗ್ಗೆ ಮತ್ತು ಸಾಯಂಕಾಲ ಗುಂಡ್ಲುಪೇಟೆಯಿಂದ ಬಸ್ ಸೌಲಭ್ಯವಿದೆ. ಪ್ರತಿವರ್ಷ ಮೇ ತಿಂಗಳಲ್ಲಿ ಕಂಡುಬರುವ ಬುದ್ಧ ಪೂರ್ಣಿಮೆ ದಿನದಂದು ಈ ಬೆಟ್ಟದಲ್ಲಿ ಜಾತ್ರೆ ನಡೆಯುತ್ತದೆ. (ಚಿತ್ರಸಂಖ್ಯೆ-33) ಮೊದಲು ಸ್ಕಂದಗಾಲ ಅಗ್ರಹಾರವಾಗಿತ್ತು. ಅದು ಈಗ ಕಂದಗಾಲವಾಗಿದೆ. ಹಿರಿಯ ಪ್ರಕಾರ ವಸಂತ ಋತುವಿನ (ಮಾಘಮಾಸ) ವೈಶಾಖ ತ್ರಯೋದಶಿ, ಚತುರ್ಥಿಯ

ಪ್ರದೋಷ ಕಾಲದಲ್ಲಿ ಕನ್ಯಾ ಲಗ್ನದಲ್ಲಿ ಪಾರ್ವತಿ ದೇವಿಯನ್ನು ಮದುವೆ ಮಾಡಿಕೊಂಡು ಅಗಸ್ತ್ಯರಿಗೆ ದರ್ಶನವಿತ್ತು. ಸ್ಕಂದಗಿರಿಯಲ್ಲಿ ನೆಲೆಸುತ್ತಾರೆ. ಇಲ್ಲಿಯ ಸ್ಥಳೀಯ ಅರ್ಚಕರ ಹೇಳಿಕೆಯ ಪ್ರಕಾರ ವೈಶಾಖ ಬುದ್ಧಪೂರ್ಣಿಮ ದಿನ ಸೋಮೇಶ್ವರ, ಪಾರ್ವತಿ ಸಹಿತ ರಥೋತ್ಸವ ನಡೆಯುತ್ತದೆ. ಅಂದಿನ ಕಾಲದಿಂದ ಪ್ರಸ್ತುತ ಕಾಲದವರೆಗೂ ಅನೇಕ ರೀತಿಯ ಕಾರ್ಯಕ್ರಮಗಳು ಈ ಕ್ಷೇತ್ರದಲ್ಲಿ ಜರುಗಿವೆ. ಕಳೆದ ವರ್ಷ 2016 ರಲ್ಲಿ ನಡೆದ ಧಾರ್ಮಿಕ ಪರಂಪರೆ ಮಹಾ ರಥೋತ್ಸವದ ವಿವರಣೆಯನ್ನು ಸಹ ನೀಡಲಾಗುತ್ತದೆ. ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ತಹಶೀಲ್ದಾರ್ ಹಾಗೂ ಮುಜರಾಯಿ ಇಲಾಖೆಯ ಅಧಿಕಾರಿಗಳು ಮಾಡುವ ವಿಜ್ಞಾಪನೆಗಳು ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1938ನೇ ಸಂದ ವರ್ತಮಾನದ ಶ್ರೀಮತ್ ದುರ್ಮುಖಿ ನಾಮ ಸಂವತ್ಸರದ ಉತ್ತರಾಯಣೆ ವಸಂತ ಋತು ವೈಶಾಕಮಾಸದ ಶುಕ್ಲಪಕ್ಷ ಗುರುವಾರ ತಾರೀಖು 19-5-2016 ರಿಂದ 24-5-2016 ರ ಮಂಗಳವಾರದವರೆಗೆ ಶೈವಾಗಮ ಶಾಸ್ತ್ರ ರೀತ್ಯಾ ಪಂಚಾಹೋತ್ಸವ ಕ್ರಮದಲ್ಲಿ ಶ್ರೀಯವರ ಬ್ರಹ್ಮರಥೊತ್ಸವವು ನಡೆದಿದ್ದು, 21-5-2016 ರ ಶನಿವಾರದಂದು ವೈಶಾಖ ಬುದ್ಧಪೂರ್ಣಿಮ ವಿಶಾಖ ನಕ್ಷತ್ರ ಶುಭಯೋಗ ಹಗಲು 12 ರಿಂದ 1ರ ಒಳಗೆ ಸಲ್ಲುವ ಶುಭ ಅಭಿಜಿತ್ ಮುಹೂರ್ತದಲ್ಲಿ ಚಂದ್ರ ಹೊರೆಯ ವೃಷಭ ನವಾಂಶದಲ್ಲಿ ಬ್ರಹ್ಮರಥೋತ್ಸವವು ನಡೆದಿದೆ.

1. 19-5-2016ನೇ ಗುರುವಾರ ಶುಕ್ಲ ಶ್ರಯೋದಶಿ, ಚಿತ್ತ ನಕ್ಷತ್ರ ಅನುಜ್ಞೆಮೃತ್ಸಂಗಹಣಾಪುರ್ವಕ ಅಂಕುರಾರ್ಪಣೆ ಇತ್ಯಾದಿ ಕಾರ್ಯಗಳು
2. 20-5-2016ನೇ ಶುಕ್ರವಾರ ಶುಕ್ಲಪಕ್ಷದ ಚತುರ್ದಶಿ ಸ್ವಾತಿ ನಕ್ಷತ್ರದಂದು ಧ್ವಜಾರೋಹಣ ರಕ್ಷಾ ಸೂತ್ರಧಾರಣ ಬೇರಿತಾಡವು ಪೂರ್ವಕ ದೇವತಾಹ್ವಾನ ಕಾಶಿಯಾತ್ರೆ ಪೂರ್ವಕ ಗಿರಿಜಾ ಕಲ್ಯಾಣ ಮಹೋತ್ಸವ ನಡೆದಿದೆ.
3. 21-5-2016ನೇ ಶನಿವಾರ ಶುಕ್ಲ ಪೂರ್ಣಿಮ ವಿಶಾಖ ನಕ್ಷತ್ರದಂದು ಶಿವಯಾಗ ಬಲಿಪ್ರಧಾನ ರಥ ಪ್ರತಿಷ್ಠೆ ರಥಸ್ಥಂ ಸಿದ್ಧತೆ ಎಂಬ ಮರ್ಯಾದಾ ರೀತ್ಯಾ ಶುಭ ಅಭಿಜಿನ್ ಮುಹೂರ್ತ 12 ರಿಂದ 1 ಗಂಟೆಗೆ ಸಲ್ಲುವ ಚಂದ್ರಹೋರೆ ವೃಷಭ ನವಾಂಶದಲ್ಲಿ ದಿವ್ಯ ರಥಾರೋಹಣ, ಹಮ್ಸವಾಹನ ನಟೇಶೋತ್ಸವ ಮಹಾಪ್ರಭಾವ ಅನ್ನಸಂತರ್ಪಣೆ ಇತ್ಯಾದಿ ಕಾರ್ಯಕ್ರಮಗಳು ಆಗಿವೆ.
4. 22-5-2016ನೇ ಭಾನುವಾರ ಕೃಷ್ಣ ಪ್ರಥಮ ಅನುರಾಧ ನಕ್ಷತ್ರ ಶಿವಯಾಗ ಬಲಿ ಪ್ರಧಾನ ಶಯನೋತ್ಸವ ದೇವಿ ಪ್ರಣಯ ಕಲಹ ಸಂಥಾಸ್ ಆಗಿದೆ.

5. 23-5-2016 ಸೋಮವಾರ ಕೃಷ್ಣ ದ್ವಿತೀಯ ಜ್ಯೇಷ್ಠ, ಶಿವಯೋಗ, ಚೂರ್ಣಬಲಿ ಅವಭೃತ ತೀರ್ಥಸ್ಥಾನ ದೇವತಾ ಉದ್ವಾಸನೆ ಧ್ವಜಾರೋಹಣ ಮೌನಬಲಿ ಇತ್ಯಾದಿ ಕಾರ್ಯಕ್ರಮಗಳು ನಡೆದಿವೆ.
6. 24-5-2016 ರ ಮಂಗಳವಾರ ಕೃಷ್ಣ ತೃತೀಯ ಮೂಲ ಪಂಚಕಳಶ, ಮಹಾಸ್ನಪನ ಮಹಾರುದ್ರಾಭಿಷೇಕ, ಕೈಲಾಸ್ಥ ವಾಹನೋತ್ಸಾ ಇತ್ಯಾದಿ, ಈ ಮೇರೆಗೆ ಉತ್ಸವಾದಿಗಳು ನಡೆದಿವೆ. ಕರ್ನಾಟಕ ಸರ್ಕಾರ ಧಾರ್ಮಿಕದಾ ದತ್ತಿಯ ವತಿಯಿಂದ ಆಚರಣೆ ಆಗಿದೆ. ಪ್ರತಿಗಳು ಪ್ರಕಟಣೆಯಾಗಿರುವುದು, ಮಹದೇಶ್ವರ ಪ್ರಿಂಟರ್ಸ್ ಗುಂಡ್ಲುಪೇಟೆ ರವರಿಂದ ಮಾಹಿತಿಯನ್ನು ಪಡೆಯಲಾಗಿದೆ.[52]

ಹಿಂದೆ ಪಾರ್ವತಾಂಬ ಮತ್ತು ಸೋಮೇಶ್ವರಸ್ವಾಮಿಯವರ ರಥೋತ್ಸವ ದಿನ ಮೂಡಗೂರುಗೌಡರು ಸುಬ್ಬಣ್ಣರವರ ಮಕ್ಕಳು ಪುಟ್ಟವೀರಪ್ಪನವರು ಈ ಕ್ಷೇತ್ರಕ್ಕೆ ಬಂದ ಭಕ್ತರಿಗೆ ಅನ್ನ ದಾಸೋಹ ನಡೆಸುತ್ತಿದ್ದರು. ಅದೇ ದಿವಸ ಹುಲ್ಲಾಣಪುರದ ಶ್ಯಾನಭೋಗರಾದ ಡಿ.ಸುಬ್ಬರಾಯರ ಅನ್ನಸಂತರ್ಪಣೆ ಕಾರ್ಯ ಮಾಡಿದ್ದಾರೆ. ಮೂರನೇ ದಿನ ಗುಂಡ್ಲುಪೇಟೆ ಎಂ.ಎಸ್.ಕೃಷ್ಣಸ್ವಾಮಿ ರವರ ಮಗ ಲಾಯರ್ ಶ್ರೀನಿವಾಸ್‌ರವರು ಬಂದ ಭಕ್ತರಿಗೆ ಅನ್ನ ಸಂತರ್ಪಣೆ ಮಾಡುತ್ತಿದ್ದರು. ರಥೋತ್ಸವದ ದಿನ ದಾರಿ ಬೇಗೂರು ಶಂಕರಪ್ಪರವರ ಮಕ್ಕಳು ಡಿ.ಸುಬ್ಬರಾಯರು ಪಾನಕ ಪೂಜೆ ಮಾಡಿ ಅನ್ನ ಸಂತರ್ಪಣೆಯನ್ನು ನಡೆಸಿ ಬಂದ ಭಕ್ತರಿಗೆ ನೀಡುತ್ತಾರೆ.

ರಥೋತ್ಸವದ ದಿನ ಗುಂಡ್ಲುಪೇಟೆಯ ಬಡಪ್ಪನವರ ಮಕ್ಕಳಾದ ದೊಡ್ಡಯ್ಯನವರು ಮಂಟಪೋತ್ಸವ ನಡೆಸುತ್ತಾರೆ. ಅಲ್ಲದೆ ತಂಬಿಶೆಟ್ಟರ ಶ್ರೀನಿವಾಸನ್, ಗುಂಡ್ಲುಪೇಟೆ ನಾಯಕ ಜನಾಂಗದ ಮುಖಂಡರಾದ ಕೃಷ್ಣಮೂರ್ತಿರವರು ನೆರವೇರಿಸಿದ್ದಾರೆ. ಇವರೆಲ್ಲರು ಮಂಟಪೋತ್ಸವ ನಡೆಸಿ ಬಂದ ಭಕ್ತಾಧಿಗಳಗೆ ಪಾನಕ ಮತ್ತು ಮಜ್ಜಿಗೆ ನೀಡುತ್ತಾರೆ. ಗುಂಡ್ಲುಪೇಟೆಯ ಲಾಯರ್ ರಮೇಶ್‌ರವರ ಮನೆಯವರು ಮಂಟಪೋತ್ಸವ ನಡೆಸುತ್ತಾರೆ. ಬಂದ ಭಕ್ತಾದಿಗಳು ಪ್ರಸಾದ ವಿನಿಯೋಗ ಮಾಡುತ್ತಾರೆ. ಕಂದೇಗಾಲದ ನಂಜಪ್ಪ ಮಹದೇವಪ್ಪರವರು ಕ್ಷೇತ್ರದಲ್ಲಿ ಮಂಟಪ ಕಟ್ಟಿಸಿದ್ದಾರೆ. ಪ್ರತಿವರ್ಷ ಜಾತ್ರೆ ದಿನ ಪೂಜಿಸುವ ಪದ್ಧತಿ ಇದೆ.

ಅದು ಅಲ್ಲದೆ ರಥೋತ್ಸವದ ದಿನ ಕಂದೇಗಾಲ ಶಿಂಡನಪುರ, ಕಂದಗಾಲ ಹೊಸೂರು, ಬೆಟ್ಟಹಳ್ಳಿ ಗ್ರಾಮಸ್ಥರು ಸೇರಿ ಬಂದ ಭಕ್ತರಿಗೆ ಅನ್ನದಾಸೋಹ ನಡೆಸುತ್ತಾರೆ. ರಥ ನಿರ್ಮಾಣ ಕಾರ್ಯದಲ್ಲಿ ಕಂದೇಗಾಲ ಗ್ರಾಮಸ್ಥರಿಗೆ ಸೇರಿರುತ್ತದೆ. ಜಾತ್ರೆಯ ದಿನ ಪ್ರಯಾಣಿಕರ

ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಬಸ್ ಸೌಲಭ್ಯವನ್ನು ಒದಗಿಸಿದ್ದಾರೆ. ಈ ಕ್ಷೇತ್ರದಲ್ಲಿ ಒಂದಲ್ಲ ಅನೇಕ ಬಗೆಯ ಕಾರ್ಯಕ್ರಮಗಳು ಜರುಗುತ್ತಿರುತ್ತವೆ.

## ಭಕ್ತಾದಿಗಳಿಂದ ದೇವರ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮಗಳು

ಸ್ಕಂದಗಾಲದ ಪಾರ್ವತಿ ಸಮೇತ ಸೋಮೇಶ್ವರನ ಸನ್ನಿಧಾನದಲ್ಲಿ ಭಕ್ತರು ಸಂಕಲ್ಪ ಪೂರ್ವಕವಾಗಿ ಬಿಲಸರ್ಗ ಬಿಸಲಡಿಗೆಯಲ್ಲಿ ಸ್ನಾನ ಮಾಡಿ ದೇವಾಲಯದ ವಾಮ ಭಾಗದಿಂದ ಹೊರಟು ಪೂರ್ವದ್ವಾರದಿಂದ ಒಳಗೆ ಬಂದು ಅಗಸ್ತ್ಯತೀರ್ಥ ಮಜ್ಜನ ಕೊಳದಲ್ಲಿ ತೀರ್ಥ ಪ್ರೋಕ್ಷಣೆ ಮಾಡಿಕೊಂಡು ಗಂಗಾ ಭವಾನಿಗೆ ಸಾಷ್ಟಾಂಗ ಪ್ರಣಾಮ ಮಾಡಿ ದೇವಸ್ಥಾನಕ್ಕೆ ಬಂದು ಮೊದಲು ದೇವಸ್ಥಾನದ ಉತ್ಸವ ಬಾಗಿಲಿನಿಂದ ಹೋಗಿ ಪ್ರಸನ್ನ ಗಣಪತಿ ದರ್ಶನ ಪಡೆದು ಸೇವೆ ಮಾಡಿ ನಂತರ ಸೋಮೇಶ್ವರನ ದರ್ಶನ ಮಾಡಿ ಪರಿವಾರ ದೇವತಾ ಸಂದರ್ಶನಾ ಸೇವಾದಿಗಳನ್ನು ಪೂರೈಸಿಕೊಂಡು ಪೂರ್ವ ಬಾಗಿಲಿನಿಂದ ಹೊರಟು ಪ್ರದಕ್ಷಿಣೆ ಮಾಡಿ ನಂತರ ಪಾರ್ವತಿ ದೇವಿಯ ಸೇವೆಯನ್ನು ಭಕ್ತಿಯಿಂದ ದಂಪದ್ಯುಕ್ತವಾಗಿಯೇ ಆಗಲಿ ಒಬ್ಬರೇ ಆಗಲಿ ಹೋಗಿ ಕುಂಕುಮಾರ್ಚನೆ, ಅಷ್ಟೋತ್ತರ ಶತನಾಮಗಳಿಂದ ಸಾಂಗವಾಗಿ ನಡೆಸಿ ಸುಮಂಗಲಿಯರು ಹಾಡುಗಳಿಂದ ಪಾರ್ವತಿ ಪರಮೇಶ್ವರಿಯನ್ನು ಸಂತೋಷಪಡಿಸಿ ವರ ಪ್ರಸಾದವನ್ನು ಸ್ವೀಕರಿಸಿ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಅಲ್ಲಿಂದ ಹೊರಟು ಇಂದುಧರನ ದೇವಾಲಯವನ್ನು ಪ್ರದಕ್ಷಿಣೆ ಮಾಡಿಕೊಂಡು ಅಶ್ವತ್ಥದೇವಿ ದಾತ್ರಿ ವೃಕ್ಷ ಪ್ರದಕ್ಷಿಣೆ ಪೂಜೆ ಸೇವಾದಿಗಳನ್ನು ಮಾಡಿ ಸೂರ್ಯನಿಗೆ ಅರ್ಘ್ಯ ಕೊಟ್ಟು, ಷಣ್ಮುಕಸ್ವಾಮಿ ಇರುವ ಹುತ್ತಕ್ಕೆ ಕ್ರಮವರಿತು ಪೂಜೆ ಮಾಡಿ ಹಾಲು ಹಣ್ಣು ತನಿ ಎರೆದು ಪ್ರದಕ್ಷಿಣೆಯಾಗಿ ಬಂದು ಚಂಡೇಶ್ವರನನ್ನು ಪೂಜಿಸಿ ವರದಿ ಒಪ್ಪಿಸಲೇಬೇಕು. ಅನಂತರ ಹಾಲಸ್ತಿ ಮಾದೇಶ್ವರ ಭಕ್ತಮುನಿಗಳಾಶ್ರಮ ಸುಣಪಿಕಲ್ಲೇಶ್ವರಾದಿ ಆಶ್ರಮಗಳ ದರ್ಶನಾದಿಗಳನ್ನು ಮಾಡಿ ಭೈರವನ ದರ್ಶನ ಮಾಡಬೇಕು.

ಶಕ್ತಿವಂತರು, ಅತುಳ ಭಕ್ತಿಯುಳ್ಳವರು ಸಿದ್ಧಪ್ಪಾಜಿ ಗದ್ದಿಗೆ ಪ್ರಸನ್ನ ಗಣಪತಿ ತ್ರಿಯಂಬಕೇಶ್ವರ, ಭಕ್ತಮುನಿಗಳ ಆಶ್ರಯ ಪುನಃ ಹಾಲಸ್ತಿ ಮಾದೇಶ್ವರ ದರ್ಶನ ಸೇವಾದಿಗಳನ್ನು ಮಾಡಿಕೊಂಡು ಬಂದು ಭೈರವನ ದರ್ಶನ ಮಾಡಿದರೆ ವಿಶೇಷ ಫಲವೂ, ಮೋಕ್ಷವೂ ದೊರಕುವುದು ಎಂಬ ನಂಬಿಕೆ ಈ ಕ್ಷೇತ್ರದಲ್ಲಿ ಪ್ರಚಲಿತವಾಗಿದೆ. ಆದುದ್ದರಿಂದ ಈ ಕ್ಷೇತ್ರವು ಅನೇಕ ರೀತಿಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರವಾಗಿ ಪರಿಣಮಿಸಿದೆ.

## ಸಿದ್ದೇಶ್ವರ ದೇವಾಲಯ-ಕೆಲಸೂರು

ಕೆಲಸೂರು ಗ್ರಾಮದಲ್ಲಿ ದುಃಸ್ಥಿತಿಯಾಗಿರುವ ಸಿದ್ದೇಶ್ವರ ದೇವಾಲಯ ಇದೆ. ಈ ದೇವಾಲಯ ದಕ್ಷಿಣಾಭಿಮುಖವಾಗಿದೆ. ಗುಡಿಯಲ್ಲಿ ಸಿದ್ದೇಶ್ವರನ ಶಿಲ್ಪವನ್ನು ಇರಿಸಲಾಗಿದೆ.

## ಮಹಾಲಿಂಗೇಶ್ವರ ದೇವಾಲಯ-ಕೆಲಸೂರು

ಮಹಾಲಿಂಗೇಶ್ವರ ದೇವಾಲಯವು ಗ್ರಾಮದಿಂದ ಹೊರಗೆ ಉತ್ತರಾಭಿಮುಖವಾಗಿದೆ. ಈ ದೇವಾಲಯ ಈಗ ದುಃಸ್ಥಿತಿಯಲ್ಲಿದೆ. ಆದರೂ ಕೂಡ ಸ್ವಲ್ಪ ಜೀರೋದ್ಧಾರ ವ್ಯವಸ್ಥೆಯಲ್ಲಿದೆ. ಗರ್ಭಗುಡಿಯಲ್ಲಿ ಶಿವಲಿಂಗ ಇದೆ. ಶುಕನಾಸಿ ಅಂಕಣದಲ್ಲಿ ನಂದಿ ಶಿಲ್ಪವನ್ನು ಇರಿಸಲಾಗಿದೆ. ಮುಖಮಂಟಪವು ಸರಳವಾಗಿದ್ದು, ದ್ವಾರಬಂಧವು ಸಹ ಸರಳವಾಗಿದೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ಮೇಲ್ಭಾಗದ ವಿಮಾನವು ಸಹ ದುಃಸ್ಥಿತಿಯಾಗಿದೆ. (ಚಿತ್ರಸಂಖ್ಯೆ-34) ಇಲ್ಲಿರುವ ಕಂಬಗಳನ್ನು ಗಮನಿಸಿದರೆ ಅದು ಮೈಸೂರು ಒಡೆಯರವರ ಕಾಲಕ್ಕೆ ಸೇರಿಸಬಹುದಾಗಿದೆ. ಕೆಲಸೂರಿನಲ್ಲಿ ಜಾತ್ರೆಯು ನಡೆಯುತ್ತಿದ್ದು, ಮೂರು ವರ್ಷಕ್ಕೆ ಒಂದು ಸಾರಿ ಮಾತ್ರ ಜಾತ್ರೆಯು ನಡೆಯುತ್ತದೆ. ಅಲ್ಲದೆ ಈ ಜಾತ್ರೆ ಶಿವರಾತ್ರಿ ಹಬ್ಬವಾದ ಹದಿನೈದು ದಿನಕ್ಕೆ ನಡೆಯುತ್ತದೆ. ಫಾಲ್ಗುಣ ಮಾಸದಲ್ಲಿ ನಡೆಯುತ್ತದೆ. ಇದಕ್ಕೆ ಮೊದಲು ಷಷ್ಠಿ ಹಬ್ಬದ ಕೊನೆಯಲ್ಲಿ ಸಾಲು ಮಾರಿಹಬ್ಬ ನಡೆಯುತ್ತದೆ. ಸಾಲುಮರಿ ಹಬ್ಬ ನಡೆಯುತ್ತದೆ. ಸಾಲುಮರಿ ಹಬ್ಬ ಎಂದರೆ ೩೦ ಮರಿಗಳನ್ನು ಸಾಲಿಗೆ ನಿಲ್ಲಿಸಿ, ಇನ್ನಿತರ ದೇವರಿಗೆ ಬಲಿ ಕೊಡುವುದು, ಈ ಹಬ್ಬ ನಡೆದರೆ ಚೌಡೇಶ್ವರಿ ಜಾತ್ರೆ ನಡೆಯುತ್ತದೆ. ಈ ಊರಿನಲ್ಲಿ ಒಂದೊಂದು ರೀತಿಯಲ್ಲಿ ಕಾರ್ಯಕ್ರಮಗಳು ಜರುಗುತ್ತವೆ. ಈ ಗ್ರಾಮದ ಜಾತ್ರೆ ಪಕ್ಕದ ಗ್ರಾಮದಿಂದ ಅಂದರೆ, ಹಳೇಹುಂಡಿ, ಯಡುಹುಂಡಿ, ಸಂಗೇಗೌಡನಹುಂಡಿಯವರು ನಾಲ್ಕು ಬಿದಿರು ಬೊಂಬುಗಳನ್ನು ತರಿದು ತರುತ್ತಾರೆ. ನಂತರ ಬೊಂಬುಗಳಿಗೆ ಪೂಜೆ ಸಲ್ಲಿಸುತ್ತಾರೆ. ಈ ರೀತಿ ಅನೇಕ ಬಗೆಯ ಧಾರ್ಮಿಕ ಸಂಸ್ಕೃತಿ ಪರಂಪರೆಯನ್ನು ಅವಲಂಬಿಸಿಕೊಂಡು ಜಾತ್ರೆಯನ್ನು ಕೆಲಸೂರಿನಲ್ಲಿ ನಡೆಸುತ್ತಾರೆ.

## ಬಸವೇಶ್ವರ ದೇವಾಲಯ-ಪಡಗೂರು

ಪಡಗೂರು ಗ್ರಾಮದಲ್ಲಿ ಬಸವೇಶ್ವರ ದೇವಾಲಯ ಇದೆ. ಇದು ಇತ್ತೀಚಿನ ಕಾಲಕ್ಕೆ ಸೇರಿದ ದೇವಾಲಯವಾಗಿದೆ. ಅಲ್ಲದೆ ಮಹಾಲಿಂಗೇಶ್ವರ ದೇವಾಲಯ ಸಹ ಇದೆ. ಮಹಾಲಿಂಗೇಶ್ವರ ದೇವಾಲಯದ ಉತ್ತರದ ಕಡೆ ನಿಂತಿರುವ ಕಲ್ಲು ಶಾಸನದ ಪ್ರಕಾರ ಕ್ರಿ.ಶ.೯೮೮ ರಲ್ಲಿ ಗಂಗರಾಜನಾದ ನಾಲ್ಕನೇ ರಾಚಮಲ್ಲನ ಆಳ್ವಿಕೆಯ ಬಗ್ಗೆ ತಿಳಿದುಬರುತ್ತದೆ.

ಪಡಗೂರಿನಲ್ಲಿ ಮಾರಮ್ಮನ ದೇವಾಲಯ ಸಹ ಇದೆ. ಈ ದೇವಾಲಯಕ್ಕೆ 'ಶೂಲದ ಮಾರಮ್ಮ' ಎಂದು ಕರೆಯುತ್ತಾರೆ. ಈ ಮಾರಮ್ಮನ ಹೆಸರಿನಲ್ಲಿ ಜಾತ್ರೆಯು ನಡೆಯುತ್ತದೆ. ದೈವಿಕ ಸ್ವರೂಪಗಳಾದ ಗ್ರಾಮದೇವತೆಯಾದ ಮಾರಮ್ಮಳನ್ನು ಭಕ್ತಿಯಿಂದ ಪೂಜಿಸುವುದು ಹಾಗೂ ಈ ಗ್ರಾಮದ ಎಲ್ಲಾ ಜನಾಂಗದವರು ಒಂದುಗೂಡಿ ಆಚರಿಸುವ ಹಬ್ಬವೂ ಸಹ ಆಗಿದೆ. ಇನ್ನೊಂದು ಮುಖ್ಯವಾದ ಅಂಶವೇನೆಂದರೆ ಪ್ರತಿಯೊಂದು ಜನಾಂಗಕ್ಕೂ ಒಂದೊಂದು ಕೆಲಸ ಕಾರ್ಯಗಳು ಇದ್ದೇ ಇರುತ್ತದೆ. ಈ ಹಬ್ಬ ಜಾತ್ರೆಯಲ್ಲಿ ಭಕ್ತಿಯ ಪೂಜೆಯ ಜೊತೆಗೆ ಮನೋರಂಜನಾ ಕಾರ್ಯಕ್ರಮಗಳು ಸಹ ನಡೆಯುತ್ತದೆ. ಕಡ್ಡಿವರಸೆ, ದೊಣ್ಣೆವರಸೆ, ವೀರಮಕ್ಕಳ ಕುಣಿತ, ಕಣ್ಣಿಗೆ ಹಬ್ಬವನ್ನು ಉಂಟು ಮಾಡುತ್ತವೆ. ಸುಮಾರು 5 ದಿನಗಳವರೆಗೆ ಈ ಹಬ್ಬವನ್ನು ಆಚರಿಸುತ್ತಾರೆ.

## ಮೂಲಸ್ಥಾನೇಶ್ವರ ದೇವಾಲಯ – ತೆರಕಣಾಂಬಿ

ತೆರಕಣಾಂಬಿಯಲ್ಲಿ ಮೂಲಸ್ಥಾನೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ದ್ರಾವಿಡ ಶೈಲಿಯದಾಗಿದೆ. ಈ ಮೂಲಸ್ಥಾನ ದೇವಾಲಯವನ್ನು ಕುರಿತು ಯಾವುದೇ ತರಹದ ಆಧಾರಗಳಿಲ್ಲ. ಆದರೂ ಕೂಡ ಇದು ವಿಜಯನಗರ ಮತ್ತು ಮೈಸೂರು ಒಡೆಯರ ಕಾಲದಲ್ಲಿ ಬೆಳವಣಿಗೆಯಾಗಿದೆ ಎನ್ನಬಹುದು. ಮೂಲಸ್ಥಾನೇಶ್ವರ ದೇವಾಲಯಕ್ಕೆ ಪೂರಕವಾಗಿ ಮೂಲಸ್ಥಾನೇಶ್ವರ ದೇವಾಲಯದ ಒಳಬಾಗಿಲಿಗೆ ದಕ್ಷಿಣದ ಕಡೆ ನೆಟ್ಟಿರುವ ಕಲ್ಲಿನಲ್ಲಿ ಶಕವರುಷ 1436 ಅಂದರೆ ಕ್ರಿ.ಶ.1504ರಲ್ಲಿ ಅಕ್ಟೋಬರ್ 18 ರಂದು ಶಾಸನವನ್ನು ಬರೆಯಿಸಲಾಗಿದ್ದು, ಈ ಶಾಸನವು ಉಮ್ಮತ್ತೂರು ಪಾಳೇಗಾರರ ಆಳ್ವಿಕೆಯಲ್ಲಿ ವೀರ ನಂಜರಾಜ ಒಡೆಯರ್‌ರವರು ರಕ್ತಾಕ್ಷಿ ಸಂವತ್ಸರದ ಕಾರ್ತಿಕ ಶು 10 ಲು ಶ್ರೀ ಮೂಲಸ್ಥಾನದೇವರ ನೈವೇದ್ಯಕ್ಕಾಗಿ ಅಲ್ಲದೆ ಅಂಗ, ರಂಗ, ಭೋಗ ರಥೋತ್ಸವ ಇನ್ನೂ ತೆಗೆದುಹಾಕು ಮೊದಲಾದ ದೇವರ ಸೇವೆಗಾಗಿ ತೆರೆಕಾಣಿಕೆಯನ್ನು ಬ್ರಹ್ಮದಾಯದ ಗ್ರಾಮಗಳನ್ನು ಬಿಟ್ಟಿರುವುದಾಗಿ ತಿಳಿದುಬರುತ್ತದೆ. (ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–114, (ಎ.ಕ.4, ಗು.ಪೇ.5)

ತಳವಿನ್ಯಾಸದಲ್ಲಿ ಗರ್ಭಗುಡಿ, ಸುಕನಾಸ, ನವರಂಗ, ಮುಖಮಂಟಪಗಳನ್ನು ಒಳಗೊಂಡಿದೆ. ಮೂಲಗರ್ಭಗುಡಿಯಲ್ಲಿ ಶಿವಲಿಂಗವಿದೆ. ಶುಕನಾಸದಲ್ಲಿ ನಂದಿಶಿಲ್ಪ ಇದೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು, ದಕ್ಷಿಣ ದಿಕ್ಕಿಗೆ ಒಂದು ದ್ವಾರ ಇದೆ. ಅಲ್ಲದೆ ದ್ವಾರಕ್ಕೆ ಮುಖಮಂಟಪವಿದ್ದು, ಇಲ್ಲಿ ಎರಡು ಕಂಬಗಳಿವೆ. ಪೂರ್ವ ದಿಕ್ಕಿಗೆ ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ಈವಾಗ ಈ ದೇವಾಲಯದ ಸಾಕಷ್ಟು ಭಾಗ ದುಃಸ್ಥಿತಿಯಾಗಿದೆ. (ಚಿತ್ರಸಂಖ್ಯೆ–

35) ಆದರೂ ಕೂಡ ಪ್ರಾಚೀನ ಕಾಲದ ಪರಂಪರೆಯನ್ನು ಇತಿಹಾಸವನ್ನು ಹೊಂದಿರುವ ದೇವಾಲಯವಾಗಿದೆ. ಮೂಲಸ್ಥಾನೇಶ್ವರ ದೇವಾಲಯ ತೆರಕಣಾಂಬಿಯು ಪುರಾತನ ಕಾಲದಿಂದಲೂ ಒಂದು ವ್ಯಾಪಾರ ಕೇಂದ್ರ ಸಹ ಆಗಿತ್ತು. ಇದೊಂದು ಗಡಿ ಪ್ರದೇಶವು ಆಗಿದೆ. ಇಲ್ಲಿ ನೆರೆಯ ರಾಜ್ಯಗಳಾದ ತಮಿಳರು ಮತ್ತು ಮಲೆಯಾಳ ಭಾಷಿಕರು ಈಗ ವಾಸಿಸುತ್ತಾರೆ. ಅವರದೇ ಆದ ಸಂಸ್ಕೃತಿಯನ್ನು ಆಚಾರ-ವಿಚಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ, ನೆರೆಯವರ ಹಬ್ಬ ಹರಿದಿನಗಳಲ್ಲಿ ಕನ್ನಡಿಗರು ಸಹ ಭಾಗಿಯಾಗುವುದನ್ನು ಇಲ್ಲಿ ನಾವು ಕಾಣಬಹುದು. ವ್ಯಾಪಾರದ ಹಿನ್ನೆಲೆಯಲ್ಲಿ ಈ ಭಾಗದ ಜನರು ಕೇರಳ ಮತ್ತು ತಮಿಳುನಾಡಿನವರ ಜೊತೆ ಇರುವುದನ್ನು ಕಾಣಬಹುದು. ಆದಕಾರಣ ತೆರಕಣಾಂಬಿಯು ಒಂದು ಸಾಂಸ್ಕೃತಿಕ ನೆಲೆ ಬೀಡಾಗಿದ್ದು, ಐತಿಹಾಸಿಕವಾಗಿ ಅದೇ ಛಾಪನ್ನು ಮೂಡಿಸಿದೆ. ಈ ದೇವಾಲಯದಲ್ಲಿ ಸೋಮವಾರ, ಶುಕ್ರವಾರ, ಅಮವಾಸ್ಯೆ, ಹುಣ್ಣಿಮೆ, ಶಿವರಾತ್ರಿ ಹಬ್ಬದ ಸಮಯದಲ್ಲಿ ವಿಶೇಷವಾದ ಧಾರ್ಮಿಕ ಆಚರಣೆಗಳು, ಪೂಜೆ ಪುನಸ್ಕಾರಗಳು ನಡೆಯುತ್ತವೆ. ಪ್ರಸ್ತುತ ಈ ದೇವಾಲಯದ ಪುನರುಜ್ಜೀವನ ಕಾರ್ಯ ನಡೆಯುತ್ತಿದೆ.

**ವೀರಭದ್ರಸ್ವಾಮಿ ದೇವಾಲಯ-ತೆರಕಣಾಂಬಿ**

ತೆರಕಣಾಂಬಿಯಲ್ಲಿ ಶೈವ ಪರಂಪರೆಗೆ ಸೇರಿದ ಮತ್ತೊಂದು ದೇವಾಲಯ ಇದೆ. ಅದೇ ವೀರಭದ್ರಸ್ವಾಮಿ ದೇವಾಲಯ. ಈ ದೇವಾಲಯವು ಉತ್ತರಾಭಿಮುಖವಾಗಿದೆ. ಮೂಲಗರ್ಭಗೃಹದಲ್ಲಿ ವೀರಭದ್ರೇಶ್ವರನ ಶಿಲ್ಪ ಇದೆ. ಶುಕನಾಸಿ ಅಂಕಣದಲ್ಲಿ ಯಾವುದೇ ತರಹದ ಶಿಲ್ಪಗಳಿಲ್ಲ. ಶುಕನಾಸಿಗೆ ಹೊಂದಿಕೊಂಡಂತೆ ಪೂರ್ವ ಭಾಗಕ್ಕೆ ಒಂದು ಗುಡಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಗಣಪತಿ ಶಿಲ್ಪವನ್ನು ಇರಿಸಲಾಗಿದೆ. ನವರಂಗದ ಮಧ್ಯದ ನಾಲ್ಕು ಕಂಬಗಳ ಮೇಲ್ಭಾಗದ ಚಪ್ಪಡಿಯಲ್ಲಿ ಮೈಸೂರು ಒಡೆಯರ್‌ರವರ ಶಿಲ್ಪವು ಇದೆ. ಈ ದೇವಾಲಯಕ್ಕೆ ಸುತ್ತಲೂ ಪ್ರಾಕಾರ ಗೋಡೆಯನ್ನು ನಿರ್ಮಿಸಲಾಗಿದೆ. ಪ್ರಾಕಾರದ ಗೋಡೆಗೂ ಸಹ ದ್ವಾರವನ್ನು ನಿರ್ಮಿಸಲಾಗಿದೆ. ಸ್ಥಳೀಯ ಅರ್ಚಕರ ಪ್ರಕಾರ ಇದು ವಿಜಯನಗರ ಅರಸರು, ಮೈಸೂರು ಒಡೆಯರ ಕಾಲದ ದೇವಾಲಯವಾಗಿದ್ದು, ದೇವಾಲಯದಲ್ಲಿ ಅನೇಕ ಧಾರ್ಮಿಕ ಪರಂಪರೆಗೆ ಪೂರಕವಾಗಿ ಪೂಜೆ ಪುನಸ್ಕಾರಗಳು ನಡೆಯುತ್ತವೆ ಎಂದು ತಿಳಿಸುತ್ತಾರೆ. ಅಲ್ಲದೆ, ಗೌರಿ, ಶಿವರಾತ್ರಿ, ನವರಾತ್ರಿ, ಯುಗಾದಿ ಹಬ್ಬದ ಸಂದರ್ಭದಲ್ಲಿ ವಿಶೇಷ ದೇವರ ಧಾರ್ಮಿಕ ಕಾರ್ಯಗಳು ನಡೆಯುತ್ತದೆ ಎಂಬುದಾಗಿ ತಿಳಿದುಬರುತ್ತದೆ.[53] (ಚಿತ್ರಸಂಖ್ಯೆ-36)

## ಶಿವಾಲಯ–ತೆರಕಣಾಂಬಿ

ತೆರಕಣಾಂಬಿಯಲ್ಲಿ ಮತ್ತೊಂದು ಶಿವಾಲಯ ಇರುವುದನ್ನು ನಾವು ಕಾಣಬಹುದಾಗಿದೆ. ಇದು ಗರ್ಭಗೃಹ, ಶುಕನಾಸ, ನವರಂಗಕ್ಕೆ ತೆರೆದ ಮೂರು ದ್ವಾರಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಒಂದು ನಂದಿ ಶಿಲ್ಪವನ್ನು ಇರಿಸಲಾಗಿದೆ. ದೇವಾಲಯದ ಮುಂದೆ ಒಂದು ಬಲಿಪೀಠ ಇದೆ. ಇದು ಕೂಡ ಮೈಸೂರು ಒಡೆಯರ್‌ರವರ ಕಾಲಕ್ಕೆ ಸೇರಿದ ಶಿವಾಲಯ ಹಾಗೂ ಇದೊಂದು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಹೆಸರು ವಾಸಿಯಾದ ಶಿವಾಲಯ ಎನ್ನಬಹುದು. ಇಲ್ಲಿ ಅನ್ನದಾಸೋಹ ಸಹ ನಡೆಯುತ್ತಿತ್ತು ಎಂಬ ಹೇಳಿಕೆಗಳಿವೆ.

## ವೀರಭದ್ರೇಶ್ವರ ದೇವಾಲಯ–ಹೊರೆಯಾಲ

ಹೊರೆಯಾಲಕ್ಕೆ ಸಂಬಂಧಿಸಿದಂತೆ ಕ್ರಿ.ಶ.೨ನೇ ಶತಮಾನಕ್ಕೆ ಸೇರಿದ ಶಾಸನ ಇದೆ. ಒಂದು ಗದ್ದೆಯನ್ನು ದಾನ ಬಿಟ್ಟಿರುವುದಾಗಿ ತಿಳಿದು ಬರುತ್ತದೆ.[54] ಇನ್ನೆರಡು ಶಾಸನಗಳು ರಂಗನಾಥಸ್ವಾಮಿ ದೇವಾಲಯದ ಹತ್ತಿರ ಇದೆ. ಮೂಲಗುಡಿಯಲ್ಲಿ ವೀರಭದ್ರಸ್ವಾಮಿಯು ಚತುರ್ಭುಜವನ್ನು ಹೊಂದಿದೆ. ಬಿಲ್ಲು, ಬಾಣ, ಖಡ್ಗ, ಗಧೆಯನ್ನು ಹೊಂದಿದೆ. ಈ ದೇವಾಲಯಕ್ಕೆ ಪೂರಕವಾಗಿ ರಥಸಪ್ತಮಿ ಹಾಗೂ ರಾಮನವಮಿ ಹಬ್ಬದಂದು ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ. ಅಲ್ಲದೆ ನವರಾತ್ರಿಯ ದಿನ ರಾತ್ರಿಯೆಲ್ಲಾ ಅನೇಕ ಪೂಜೆ ಪುನಸ್ಕಾರಗಳೊಂದಿಗೆ ಕಾರ್ಯಕ್ರಮಗಳು ನಡೆಯುತ್ತದೆ,

## ಬಸವೇಶ್ವರ ದೇವಾಲಯ–ಹೊರೆಯಾಲ

ಹೊರೆಯಾಲದಲ್ಲಿ ಎರಡು ಬಸವೇಶ್ವರ ದೇವಾಲಯಗಳಿವೆ. ಒಂದು ದೇವಾಲಯ ಗ್ರಾಮದ ಒಳಗೆ ದಕ್ಷಿಣಾಭಿಮುಖವಾಗಿದ್ದರೆ, ಮತ್ತೊಂದು ಗ್ರಾಮದಿಂದ ಹೊರಗೆ ಒಂದು ಪ್ರಾಚೀನ ಕೆರೆಯ ಹತ್ತಿರ ಇದೆ. ಗ್ರಾಮದ ಒಳಗೆ ಇರುವ ಬಸವೇಶ್ವರ ಗುಡಿಯು ಗರ್ಭಗೃಹ ಮತ್ತು ಶುಕನಾಸವನ್ನು ಹೊಂದಿದೆ. ಗ್ರಾಮದ ಹೊರಗೆ ಇರುವ ದೇವಾಲಯ ಒಂದೇ ಒಂದು ಗರ್ಭಗುಡಿಯನ್ನು ಹೊಂದಿದೆ. ಈ ಎರಡು ದೇವಾಲಯಗಳು ಸಹ ಮೈಸೂರು ಅಥವಾ ವಿಜಯನಗರ ಅರಸರ ಕಾಲಕ್ಕೆ ಸೇರಿವೆ ಎನ್ನಬಹುದು. ಈ ಭಾಗದಲ್ಲಿ ವೀರಶೈವ ಸಮುದಾಯದವರು ಹೆಚ್ಚು ಕಂಡುಬರುವುದರಿಂದ ಬಸವೇಶ್ವರ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇವರು ಬಸವ ಜಯಂತಿ ಸಂದರ್ಭದಲ್ಲಿ ವಿಶೇಷ ಹಬ್ಬದ ಆಚರಣೆಗಳನ್ನು ನಡೆಸುವ ಮೂಲಕ ಸಾಂಸ್ಕೃತಿಕ ಕೊಡುಗೆಗೆ ಸಾಕ್ಷಿಯಾಗಿದೆ. ಆ ದಿನ ಗ್ರಾಮದ ಸುತ್ತಲೂ

ಬಸವೇಶ್ವರನನ್ನು ಮೆರವಣಿಗೆ ಮಾಡುವ ಮೂಲಕ ಸಂಪ್ರದಾಯವನ್ನು ಮೆರೆದಿದ್ದಾರೆ. ಆ ದಿನ ಜನರಿಗೆ ಅನ್ನದಾನ ನೀಡುವ ಪರಿಪಾಠವು ಸಹ ಇದೆ.

## ಮಲ್ಶೈ ಮಹದೇಶ್ವರ ದೇವಾಲಯ-ಅರೇಪುರ

ಅರೇಪುರ ಗ್ರಾಮದಲ್ಲಿ ಮಲ್ಶೈಮಹದೇಶ್ವರ ದೇವಾಲಯವು ಗ್ರಾಮದಿಂದ ಹೊರಗೆ ಪೂರ್ವಾಭಿಮುಖವಾಗಿದೆ. ಗ್ರಾಮದ ಒಳಗೆ ಬಸವೇಶ್ವರ ದೇವಾಲಯ ಇದೆ. ಎರಡು ಸಹ ಶೈವ ಪರಂಪರೆಗೆ ಪೂರಕವಾದಂತಹ ದೇವಾಲಯಗಳಾಗಿವೆ. ಮಲ್ಶೈಮಹದೇಶ್ವರ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ ಮತ್ತು ಪ್ರಾಕಾರ ಗೋಡೆಯನ್ನು ಹೊಂದಿದ್ದು, ಇದು ಸರಳವಾದ ದೇವಾಲಯವಾಗಿದೆ. ಈ ಗ್ರಾಮದ ಇತಿಹಾಸ ಕುರಿತು ಹೇಳುವುದಾದರೆ, ಈ ಗ್ರಾಮದ ಮಾರಿಗುಡಿಯ ಬಲಗಡೆ ಬಿದ್ದಿರುವ ದೊಡ್ಡ ತುಂಡು ಕಲ್ಲು ಶಾಸನದ ಪ್ರಕಾರ ನೋಡುವುದಾದರೆ, ಕ್ರಿ.ಶ.16ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಈ ಗ್ರಾಮ ಚತುಸ್ಸೀಮೆಯ ಒಳಗೆ ಗದ್ದೆ, ಬೆದ್ದಲು ತೋಟ ತುಡಿಕೆಯನ್ನು ಕುರಿತಂತೆ ತಿಳಿಸುವಂತಹ ಶಾಸನವಾಗಿದೆ.[55] ಆದರೆ ದೇವಾಲಯಗಳ ಕುರಿತು ಮಾಹಿತಿಗಳು ಶಾಸನದಲ್ಲಿ ಇಲ್ಲ. ಮಲ್ಶೈಮಹದೇಶ್ವರನ ಮೂಲಗರ್ಭಗುಡಿಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಶುಕನಾಸದಲ್ಲಿ ಯಾವುದೇ ಶಿಲ್ಪ ಇರುವುದಿಲ್ಲ. ಇಕ್ಕೆಲಗಳಲ್ಲಿ ಕುಮಾರ ಮತ್ತು ಗಣಪತಿ ಶಿಲ್ಪಗಳಿವೆ. ಮುಖಮಂಟಪಕ್ಕೆ ಸೇರಿದಂತೆ ಮಧ್ಯದಲ್ಲಿ ಗೋಡೆಗೆ ಸೇರಿದಂತೆ ಆರು ಕಂಬಗಳಿವೆ. ಮೇಲ್ಭಾಗದ ಕೋಷ್ಠ ಗುಡಿಯಲ್ಲಿ ಮಹದೇಶ್ವರನ ಗಾರೆ ಶಿಲ್ಪವನ್ನು ಮಾಡಲಾಗಿದೆ. ಈ ಗ್ರಾಮದಲ್ಲಿ ಕಾರ್ತಿಕ ಸಮಯಕ್ಕೆ ಜಾತ್ರೆಯು ನಡೆಯುತ್ತದೆ. ಅದು ಅಂದಿನ ಕಾಲದಿಂದ ಇಂದಿನ ಕಾಲದಲ್ಲಿಯೂ ನಡೆಯುವ ಪರಂಪರೆ ಇದೆ. (ಚಿತ್ರಸಂಖ್ಯೆ-37)

## ಉಮಾಮಹೇಶ್ವರ ದೇವಾಲಯ-ಚಿಕ್ಕಾಟಿ

ಚಿಕ್ಕಾಟಿಯಲ್ಲಿ ಗ್ರಾಮದ ಒಳಗೆ ಉಮಾಮಹೇಶ್ವರ ದೇವಾಲಯ ಇದೆ. ಈ ದೇವಾಲಯ ಗರ್ಭಗೃಹದಲ್ಲಿ ಶಿವಲಿಂಗವನ್ನು ಶುಕನಾಸದಲ್ಲಿ ನಂದಿಶಿಲ್ಪವನ್ನು ತೆರೆದ ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ಮೇಲ್ಭಾಗದಲ್ಲಿ ಗಾರೆಯಿಂದ ಮಾಡಿದ ಕೈಪಿಡಿ ಗೋಡೆಯಿದ್ದು, ಗಾರೆ ನಂದಿಶಿಲ್ಪಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ವಿಮಾನವನ್ನು ಮಾಡಲಾಗಿದೆ.

## ಮಲ್ಲಿಕಾರ್ಜುನ ದೇವಾಲಯ–ನಿಟ್ರೆ

ಗುಂಡ್ಲುಪೇಟೆಯ 'ನಿಟ್ರೆ ಮಲ್ಲಿಕಾರ್ಜುನ ದೇವಾಲಯ' ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ. (ಚಿತ್ರಸಂಖ್ಯೆ–38) ಮೂಲಗರ್ಭಗುಡಿಯಲ್ಲಿ ಶಿವಲಿಂಗವನ್ನು ಇಡಲಾಗಿದೆ. ಶುಕನಾಸದ ಅಂಕಣದಲ್ಲಿ ಎರಡು ನಂದಿ ಶಿಲ್ಪಗಳಿವೆ. ನವರಂಗಕ್ಕೆ ಹೊಂದಿಕೊಂಡಂತೆ ಮಧ್ಯದಲ್ಲಿ ನಾಲ್ಕು ಕಂಬಗಳು ಹಾಗೂ ಶುಕನಾಸಿ ಗೋಡೆಗೆ ಸೇರಿದಂತೆ ಎರಡು ಕಂಬಗಳಿವೆ. ಎರಡು ಕಂಬಗಳಲ್ಲಿಯೂ ಶಿಲ್ಪಗಳಿದ್ದು, (ಚಿತ್ರಸಂಖ್ಯೆ–39) ಉತ್ತರ ಭಾಗಕ್ಕೆ ಇರುವ ಕಂಬದಲ್ಲಿ ರಾಜ ಒಡೆಯರ್ ಶಿಲ್ಪ ಇದೆ. ಮುಖಮಂಟಪದ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳಿವೆ. ಉತ್ತರ ದಿಕ್ಕಿಗೆ ಪ್ರವೇಶ ಮಾಡಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಅಲ್ಲದೆ ಇಲ್ಲಿಯೂ ಸಹ ನಾಲ್ಕು ಕಂಬಗಳಿವೆ. ಈ ಊರಿನ ಸ್ಥಳೀಯರ ಪ್ರಕಾರ ಜಾತ್ರೆ ಮತ್ತು ರಥದ ಮನರಂಜನೆ ಕಾರ್ಯಕ್ರಮವು ನಡೆಯುತ್ತದೆ.[56] ಅಲ್ಲದೆ ಈ ಗ್ರಾಮದಲ್ಲಿ ಸಿದ್ಧಪ್ಪಾಜಿ ದೇವಾಲಯ ಇದೆ. ಅಲ್ಲದೆ ಪ್ರಾಚೀನವಾದ ಕೆರೆಯು ಸಹ ಇದೆ. ಆದಕಾರಣ ನಿಟ್ರೆ ಅತ್ಯಂತ ಪ್ರಾಚೀನತೆಯನ್ನು ಹಾಗೂ ಧಾರ್ಮಿಕ ಹಿನ್ನೆಲೆಯನ್ನು ಪಡೆದುಕೊಂಡ ಗ್ರಾಮವಾಗಿದೆ.

ನಿಟ್ರೆ ಗ್ರಾಮದಲ್ಲಿ ಪ್ರಾಚೀನ ಕಾಲದಿಂದಲೂ ಪ್ರತಿವರ್ಷವೂ ಹಸುಗೂಲಿಯ ಜಾತ್ರೆಗೆ ಹೋಗಿ ಪೂಜೆ ಸಲ್ಲಿಸಿ ಬರುತ್ತಿದ್ದರು. ಒಂದು ಸಾರಿ ಜಗಳ ತೆರೆದು ಇಲ್ಲಿಯೇ ಜಾತ್ರೆಯನ್ನು ಪ್ರಾರಂಭಿಸುತ್ತಾರೆ. ಪ್ರತಿ ವರ್ಷ ಮಹಾಲಯ ಅಮಾವಾಸ್ಯೆಯಲ್ಲಿ ಪ್ರಾರಂಭವಾಗುತ್ತದೆ. ಜಾತ್ರೆ ಸಂದರ್ಭದಲ್ಲಿ ಕಂಸಾಳೆ, ಕುಣಿತ, ಹಾಡುಗಳು ಮತ್ತು ಕಾರ್ಯಕ್ರಮಗಳು ನಡೆಯುತ್ತವೆ. ದೇವತೆಯ ಮೆರವಣಿಗೆಯ ಸಮಯದಲ್ಲಿ ಪ್ರಮುಖ ಬೀದಿಗಳಲ್ಲಿ ವಾದ್ಯ, ಛತ್ರಿ, ಚಾಮರ, ಬಿರುದು ಬಾವಲಿಗಳೊಡನೆ ಉತ್ಸವ ಕಾರ್ಯ ನಡೆಯುತ್ತದೆ. ದೇವರಿಗೆ ಹರಕೆ ಹೊತ್ತ ಭಕ್ತರು ದೇವರಿಗೆ ತಾಳಿ ಚಿನ್ನದ ಸರ ಮೊದಲಾದವುಗಳನ್ನು ದೇವರಿಗೆ ಅರ್ಪಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಹಿಂದೆ ನಾಟಕ ನಡೆಸುವ ಕಾರ್ಯಕ್ರಮಗಳು ಸಹ ಇದ್ದವು ಎಂಬ ಅಭಿಪ್ರಾಯಗಳಿವೆ. ಒಟ್ಟಾರೆ ಪ್ರಾಚೀನ ಸಂಸ್ಕೃತಿ ಈ ಗ್ರಾಮವಾಗಿದೆ ಎನ್ನಬಹುದಾಗಿದೆ.

## ಶ್ರೀನಲ್ಲಿ ತಾಳ ಬಸವೇಶ್ವರ ದೇವಾಲಯ–ಕುಣಗಾಲ

ಕುಣಗಾಲ ಗ್ರಾಮದಲ್ಲಿ ಮೈಸೂರು ಒಡೆಯರ್ ಕಾಲಕ್ಕೆ ಸೇರಿದ ಶ್ರೀನಲ್ಲಿ ತಾಳ ಬಸವೇಶ್ವರ ದೇವಾಲಯ ಇದೆ. ಈ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಶುದ್ಧ ದ್ರಾವಿಡ ಶೈಲಿಯ ದೇವಾಲಯವಾಗಿದೆ.

ಈ ದೇವಾಲಯದ ಮೂಲಗರ್ಭಗುಡಿಯಲ್ಲಿ ಕಲ್ಲುಪೀಠದ ಮೇಲೆ ಶಿವಲಿಂಗ ಇದೆ. ಅಲ್ಲದೆ ಮರದ ನಂದಿ ಶಿಲ್ಪವನ್ನು ಸಹ ಇಡಲಾಗಿದೆ. ನವರಂಗವು ವಿಶಾಲವಾಗಿದ್ದು, ಮಧ್ಯದಲ್ಲಿ ಮೈಸೂರು ಒಡೆಯರ್ ವಾಸ್ತುಶೈಲಿಗೆ ಸೇರಿದ ನಾಲ್ಕು ಕಂಬಗಳಿವೆ. ನಾಲ್ಕು ಕಂಬಗಳಲ್ಲಿಯೂ ಲಿಂಗ, ನಂದಿ, ಮುನಿಗಳು, ದೇವಭಕ್ತರ ಉಬ್ಬುಶಿಲ್ಪಗಳಿವೆ. ನಾಲ್ಕು ಕಂಬಗಳ ಮಧ್ಯದಲ್ಲಿ ಭುವನೇಶ್ವರಿ ಇದೆ. ಅಲ್ಲದೆ ಮುಂಭಾಗದಲ್ಲಿರುವ ಎರಡು ಕಂಬಗಳಲ್ಲಿ ಮೈಸೂರು ರಾಜ ಒಡೆಯರ್‌ರವರ ಉಬ್ಬುಶಿಲ್ಪಗಳಿವೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿದ್ದು, ಪಶ್ಚಿಮಾಭಿಮುಖವಾಗಿಯೇ ದ್ವಾರದ ಮೆಟ್ಟಿಲುಗಳಿದ್ದು, ಇಕ್ಕೆಲಗಳಲ್ಲಿ ಆನೆಮುಖವನ್ನು ಹೊಂದಿರುವ ಚಪ್ಪಡಿಗಳನ್ನು ಸೇರಿಸಲಾಗಿದೆ. ನವರಂಗದಲ್ಲಿ ಒಂದು ಕೋಷ್ಠಗುಡಿಯಿದ್ದು, ಅದರಲ್ಲಿ ಗಣಪತಿ ಶಿಲ್ಪವನ್ನು ಇಡಲಾಗಿದೆ. ಅಲ್ಲದೆ ಇಲ್ಲಿಯ ವಿಶೇಷತೆ ಏನೆಂದರೆ ಮರದ ಆನೆ, ಮರದ ಬಸವನ ಶಿಲ್ಪಗಳಿವೆ. ಅನೇಕ ಬಗೆಯ ಬಿಡಿಶಿಲ್ಪಗಳಿವೆ. ದೇವಾಲಯದ ಸುತ್ತಲೂ ಪ್ರಾಕಾರ ಗೋಡೆಯನ್ನು ನಿರ್ಮಿಸಲಾಗಿದೆ. ದೇವಾಲಯದ ಮೇಲೆ ದ್ರಾವಿಡ ಶೈಲಿಯ ವಿಮಾನ ಇದೆ. ಅಲ್ಲದೆ ಹಲವಾರು ಗಾರೆ ಶಿಲ್ಪಗಳಿವೆ.

ದೇವಾಲಯದ ಹೊರಭಾಗದಲ್ಲಿ ಪ್ರಾಚೀನ ಕಾಲದ ಸಾಕಷ್ಟು ಅವಶೇಷಗಳು ಇವೆ. ಒಂದು ಬಾವಿ ಇದೆ. ಅಲ್ಲದೆ ಈ ಭಾಗದಲ್ಲಿ ವೀರಗಲ್ಲು, ಮಾಸ್ತಿಕಲ್ಲುಗಳಿವೆ. ಈ ಎಲ್ಲಾ ಬೆಳವಣಿಗೆಯಿಂದ ಇದೊಂದು ಪ್ರಮುಖವಾದ ಒಂದು ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಒಂದು ದೇವಾಲಯವಾಗಿದೆ ಎನ್ನಬಹುದು. (ಚಿತ್ರಸಂಖ್ಯೆ-40)

## ರಾಮಲಿಂಗೇಶ್ವರ ದೇವಾಲಯ-ಸೋಮಹಳ್ಳಿ

ಸೋಮಹಳ್ಳಿ ಗುಂಡ್ಲುಪೇಟೆ ತಾಲ್ಲೂಕಿನ ಒಂದು ಪ್ರಮುಖವಾದ ಧಾರ್ಮಿಕ ಕೇಂದ್ರ, ಇಲ್ಲಿಯ ರಾಮೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ಕ್ರಿ.ಶ.16ನೇ ಶತಮಾನಕ್ಕೆ ಸೇರಿದ ಶಾಸನ ಇದೆ.[53] ಈ ಶಾಸನವು ವೀರಶೈವ ಧರ್ಮಕ್ಕೆ ಪೂರಕವಾದ ಶಾಸನವಾಗಿದ್ದು, ಶ್ರೀ ನಂಜುಂಡ ಲಿಂಗಾಯನಮಃ ಕಾಳಯುಕ್ತಿ ಸಂವತ್ಸರದ ಫಾಲ್ಗುಣ ಬ ರೆ ಲೂ ನಂಜನಗೂಡು ಸಿಂಹಾಸನದ ಸೇವೆ ಎಂದು ತಿಳಿಸಲಾಗಿದೆ. ಆದಕಾರಣ ಇದೊಂದು ಮಹತ್ವಪೂರ್ಣವಾದ ವೀರಶೈವ ಶಾಸನವಾಗಿದೆ.

ಕ್ರಿ.ಶ.1422 ರಲ್ಲಿ ಮೈಸೂರು ಒಡೆಯರಾದ ದೇವರಾಜ ಒಡೆಯರ್ ರವರು ಸೋಮಹಳ್ಳಿಯನ್ನು ದೇವರಾಜಪುರವೆಂಬ ಅಗ್ರಹಾರವಾಗಿ ಮಾಡಿರುವುದು ಮತ್ತೊಂದು

ಶಾಸನ ಪಾಠದಿಂದ ತಿಳಿದುಬರುತ್ತದೆ.[58] ಈ ಶಾಸನದ ಪಾಠದಿಂದ ಮೊದಲಿಗೆ ಸೋಮಹಳ್ಳಿ ಗ್ರಾಮವು ಬ್ರಾಹ್ಮಣರು ನೆಲೆಸಿದ್ದು, ಇದೊಂದು ಅಗ್ರಹಾರವಾಗಿದ್ದು, ತದನಂತರ ಕಾಲದಲ್ಲಿ ವೀರಶೈವ ಕೇಂದ್ರವಾಗಿ ಬದಲಾವಣೆಯಾಗಿರುವುದು ತಿಳಿದುಬರುತ್ತದೆ. ಈ ಪ್ರಾಚೀನತೆಯನ್ನು ಹೊಂದಿರುವ ಊರಿನಲ್ಲಿ ವೀರಸಿಂಹಾಸನ ಮಠವು ಹಲವಾರು ರೀತಿಯಲ್ಲಿ ಸೇವೆಯನ್ನು ನಡೆಸುತ್ತಾ ಬಂದಿದೆ.

ಸೋಮಹಳ್ಳಿಗೆ ಸುಮಾರು 500 ರಿಂದ 600 ವರ್ಷಗಳಷ್ಟು ಇತಿಹಾಸವನ್ನು ಹೊಂದಿರುವ ಶ್ರೀಮಠವು ಶ್ರೀ ಪರಂಪರೆಯಲ್ಲಿ ಮೂಲಪುರುಷರಾದ ಶ್ರೀ ಗಂಗಾಧರೇಶ್ವರವರು ಪ್ರಮುಖರಾಗಿದ್ದು, ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ನಂಜನಗೂಡಿನ ಮಠದಲ್ಲಿ 40 ಜನ ಒಡೆಯರ್ ಪ್ರಧಾನ ಸ್ಥಾನಮಾನದಲ್ಲಿದ್ದು, ಇವರು ನಂಜನಗೂಡಿನ ಹಿರಿಯ ಮಠದಲ್ಲಿ ಪಟ್ಟದ ಗಂಗಾಧರ ದೇವರು ಒಡೆಯರಾಗಿದ್ದರು ಎಂಬುದು ಸಹ ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಈ ಊರಿನಲ್ಲಿ ದೊರೆತಿರುವ ಇನ್ನೊಂದು ಶಾಸನದಿಂದ ವ್ಯಕ್ತವಾಗಿದೆ.[59] ಮತ್ತೊಂದು ಶಾಸನದ ಪ್ರಕಾರ ತೆರಕಣಾಂಬಿ ಪ್ರಾಂತ್ಯದ ನಾಡಿನಲ್ಲಿ ಧರ್ಮ ಶಾಸನಸ್ಥದಹ ದೇವರಾಯನಪುರವಾದ ಸೋಮಹಳ್ಳಿ ಊರಿನಲ್ಲಿ ಸಾಗಿ ಬಂದಿರುವ 34 ವೃತ್ತಿಯೊಳಗೆ ನಂಜನಗೂಡು ಬ್ರಾಹ್ಮಣರ ಛತ್ರದ ವೃತ್ತಿ, ಜಂಗಮರ ವೃತ್ತಿಯನ್ನು ಬಿಟ್ಟಿರುವ ಬಗ್ಗೆ ತಿಳಿದುಬರುತ್ತದೆ. ಶ್ರೀ ಗಂಗಾಧರೇಶ್ವರರು ಸೋಮಹಳ್ಳಿಯಲ್ಲಿ ಉಳಿದಿದ್ದು, ಹಲವಾರು ಪವಾಡಗಳನ್ನು ಮೆರೆದಿದ್ದಾರೆ. ಇಂತಹ ಧಾರ್ಮಿಕ ಕ್ಷೇತ್ರದಲ್ಲಿ ರಾಮಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗ ಇದೆ. ಶುಕನಾಸದ ಅಂಕಣದಲ್ಲಿ ನಂದಿ ಶಿಲ್ಪ ಇದೆ. ಈ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ನಾಲ್ಕು ಕಂಬಗಳಲ್ಲಿಯೂ ಉಬ್ಬುಶಿಲ್ಪದ ಕೆತ್ತನೆಗಳಿವೆ. ರಾಜ, ರಾಣಿ, ಮುನಿಗಳು, ಹನುಮಂತ ಇನ್ನೂ ಮೊದಲಾದ ಉಬ್ಬುಶಿಲ್ಪಗಳಿವೆ. ನವರಂಗದ ಉತ್ತರ ದಿಕ್ಕಿಗೆ ಒಂದು ಕೋಷ್ಠಗುಡಿ ಇದೆ. ಆದರೆ ಈಗ ಶಿಲ್ಪ ಇಲ್ಲ. ದಕ್ಷಿಣದ ದಿಕ್ಕಿಗೆ ಪ್ರವೇಶದ್ವಾರ ಇದೆ. ದ್ವಾರಕ್ಕೆ ಮುಖಮಂಟಪವನ್ನು ಸೇರಿಸಲಾಗಿದ್ದು, ಅಲ್ಲಿ ಎರಡು ಕಂಬಗಳಿವೆ. ಪೂರ್ವಾಭಿಮುಖವಾಗಿರುವ ಪ್ರವೇಶದ್ವಾರದಲ್ಲಿ ಲಲಾಟಬಿಂಬದಲ್ಲಿ ನಂದಿಶಿಲ್ಪದ ಉಬ್ಬು ಕೆತ್ತನೆ ಇದೆ. ದೇವಾಲಯದ ಮುಂದೆ ಮುಖಮಂಟಪಕ್ಕೆ ಸೇರಿದಂತೆ ನಾಲ್ಕು ಕಂಬಗಳಿವೆ. ಅವುಗಳಲ್ಲಿ ನಂದಿಶಿಲ್ಪದ ಉಬ್ಬು ಕೆತ್ತನೆ, ರಾಜ ಒಡೆಯರ ಉಬ್ಬು ಕೆತ್ತನೆ, ಕಮಲದ ಉಬ್ಬು ಕೆತ್ತನೆ ಇನ್ನೂ ಮೊದಲಾದ ಕೆತ್ತನೆಗಳಿವೆ. ಈ ಎಲ್ಲಾ ಬೆಳವಣಿಗೆಯಿಂದ ಸೋಮಹಳ್ಳಿಯ ರಾಮಲಿಂಗೇಶ್ವರ ದೇವಾಲಯವು ಹೆಸರುವಾಸಿಯಾದ ದೇವಾಲಯವಾಗಿದೆ. ಅಲ್ಲದೆ ಇದು ಧಾರ್ಮಿಕ

ಚಟುವಟಿಕೆಯಷ್ಟೆ ಅಲ್ಲದೆ ಜ್ಞಾನಾರ್ಜನೆಯ ಪ್ರಸಾರಕ್ಕಾಗಿ ಹೆಸರುವಾಸಿಯಾಗಿದೆ. ಇಲ್ಲಿಗೆ ಪ್ರತಿದಿನ ಭಕ್ತರು ಬರುವ ವಾಡಿಕೆ ಇದೆ. (ಚಿತ್ರಸಂಖ್ಯೆ-41)

## ಶಿವಾಲಯ-ಕಬ್ಬಹಳ್ಳಿ

ಕಬ್ಬಹಳ್ಳಿಯಲ್ಲಿ ಶಿವಾಲಯ ಮತ್ತು ಬಸವೇಶ್ವರ ದೇವಾಲಯಗಳಿವೆ. ಶಿವಾಲಯವು ಕಬ್ಬಹಳ್ಳಿಯಲ್ಲಿ ಪಶ್ಚಿಮಾಭಿಮುಖವಾಗಿದ್ದು, ಮೂಲಗರ್ಭಗುಡಿಯಲ್ಲಿ ಕಲ್ಲುಪೀಠದ ಮೇಲೆ ಬಸವಣ್ಣ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಶುಕನಾಸದ ಅಂಕಣವು ಖಾಲಿ ಇದೆ. ನವರಂಗವು ವಿಶಾಲವಾಗಿದ್ದು, ಮಧ್ಯದಲ್ಲಿ ನಾಲ್ಕು ಕಂಬಗಳು ಮತ್ತು ಗೋಡೆಗೆ ಸೇರಿದಂತೆ ನಾಲ್ಕು ಕಂಬಗಳಿವೆ. ಈ ಕಂಬಗಳ ಮೇಲೆ ಉಬ್ಬುಶಿಲ್ಪದ ಕೆತ್ತನೆಯನ್ನು ಮಾಡಲಾಗಿದೆ. ನವರಂಗದ ದಕ್ಷಿಣ ದಿಕ್ಕಿಗೆ ದ್ವಾರ ಇದೆ. ನವರಂಗದ ಪೂರ್ವದಿಕ್ಕಿನ ಗೋಡೆ ಕಂಬದಲ್ಲಿ ರಾಜ ರಾಣಿ ಶಿಲ್ಪಗಳಿವೆ. ಅಂದರೆ ಉತ್ತರ ದಿಕ್ಕಿನ ಗೋಡೆ ಕಂಬದಲ್ಲಿ ರಾಣಿಯ ಶಿಲ್ಪವನ್ನು, ದಕ್ಷಿಣ ದಿಕ್ಕಿನ ಗೋಡೆಯಲ್ಲಿ ರಾಜನ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಅಲ್ಲದೆ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಈ ದೇವಾಲಯ ಮೈಸೂರು ಒಡೆಯರ್ ಕಾಲಕ್ಕೆ ಆಗಿದೆ ಎಂಬುದು ಈ ದೇವಾಲಯದ ವಾಸ್ತು ಮತ್ತು ಶಿಲ್ಪಕಲೆಯಿಂದ ತಿಳಿದುಬರುತ್ತದೆ.[60] (ಚಿತ್ರಸಂಖ್ಯೆ-42)

## ಬಸವೇಶ್ವರ ದೇವಾಲಯ – ಕಬ್ಬಹಳ್ಳಿ

ಕಬ್ಬಹಳ್ಳಿಯಲ್ಲಿರುವ ಶೈವಧರ್ಮದ ಇನ್ನೊಂದು ದೇವಾಲಯವೇ ಬಸವೇಶ್ವರ ದೇವಾಲಯ. ಇದು ಕೂಡ ಪಶ್ಚಿಮಾಭಿಮುಖವಾಗಿದೆ. ಇಲ್ಲಿ ಮೂಲಗರ್ಭಗೃಹದಲ್ಲಿ ಶಿವಲಿಂಗ ಇದೆ. ಶುಕನಾಸದಲ್ಲಿ ನಂದಿಶಿಲ್ಪ, ನವರಂಗದಲ್ಲಿ ನಾಲ್ಕು ಕಂಬಗಳಿವೆ. ಈ ದೇವಾಲಯವು ಮೈಸೂರು ಒಡೆಯರ್ ಕಾಲಕ್ಕೆ ಸೇರಿದೆ. ಅದರ ಪಕ್ಕದಲ್ಲಿ ಶಿರಮಾರಮ್ಮ ದೇವಾಲಯ ಇದೆ. ಇವೆಲ್ಲ ಇರುವ ಈ ನೆಲೆಯಲ್ಲಿ ಅನೇಕ ಧಾರ್ಮಿಕ ಆಚರಣೆಗಳು, ಹಬ್ಬಗಳು, ಪೂಜೆ ಪುನಸ್ಕಾರಗಳು, ನಡೆದು ಸಾಂಸ್ಕೃತಿಕ ಇತಿಹಾಸವನ್ನು ಸೃಷ್ಟಿಸಿದೆ. ಈ ಊರಿನ ಎಲ್ಲಾ ಜನಾಂಗದವರು ಹಬ್ಬವನ್ನು ಅಚರಿಸುವ ಪರಿಪಾಠ ಇದೆ. (ಚಿತ್ರಸಂಖ್ಯೆ-43)

## ಅರ್ಕೇಶ್ವರ ದೇವಾಲಯ-ಸಂಪಿಗೆಪುರ

ಸಂಪಿಗೆಪುರದ ಗ್ರಾಮದ ಹೊರಗೆ ಒಂದು ಹೊಲದಲ್ಲಿ ಪೂರ್ವಾಭಿಮುಖವಾಗಿ ದುಃಸ್ಥಿತಿಯಲ್ಲಿರುವ ದೇವಾಲಯವೇ 'ಅರ್ಕೇಶ್ವರ ದೇವಾಲಯ'. ಈ ದೇವಾಲಯದ ಪಕ್ಕದಲ್ಲಿ ಶ್ರೀಪುರುಷನ ದಾನಶಾಸನವಿದೆ. ಅದರಲ್ಲಿ ಕಮ್ವಳಯ ಮಹಾರಾಜನ ಉಲ್ಲೇಖ

ತಿಳಿದುಬರುತ್ತದೆ.[61] ಇದರಲ್ಲಿ ಅಂಬಲಕ್ಕ ಕೆರೆಗೆ ದಾನ ನೀಡಿರುವ ವಿಚಾರ ತಿಳಿದುಬರುತ್ತದೆ. ಪ್ರಾಯಶಃ ಅಂಬಲ ಇದೇ ಆಗಿರಬೇಕು. ಈ ದೇವಾಲಯ ತಳವಿನ್ಯಾಸದಲ್ಲಿ ಗರ್ಭಗುಡಿಯಲ್ಲಿ ಕಲ್ಲುಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಚಿಕ್ಕದಾದ ಗರ್ಭಗೃಹ, ಚಿಕ್ಕದಾದ ಶುಕನಾಸಿ ಅಥವಾ ತೆರೆದ ಅಂತರಾಳ, ತೆರೆದ ಅಂತರಾಳಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳು, ಕಂಬಗಳ ಮಧ್ಯದಲ್ಲಿ ನಂದಿಶಿಲ್ಪ ಇದೆ. (ಚಿತ್ರಸಂಖ್ಯೆ-44)

ನವರಂಗದಲ್ಲಿ ಮಹಿಷಮರ್ದಿನಿ ಶಿಲ್ಪ, ಸೂರ್ಯನ ಶಿಲ್ಪ ಇದೆ, ಸೂರ್ಯನ ಶಿಲ್ಪ ಸುಮಾರು ನಾಲ್ಕು ಅಡಿ ಎತ್ತರವನ್ನು ಹೊಂದಿದೆ. ನವರಂಗದ ನಾಲ್ಕು ಕಂಬಗಳು ಚೌಕಾಕಾರ, ಅಷ್ಟಾಕಾರ, ಚತುರಸ್ರವಾಗಿದೆ. ಮಧ್ಯದಲ್ಲಿ ಅಷ್ಟಾಸ್ರ ಭಾಗ ಉದ್ದವಾಗಿದ್ದು, ಯಳಂದೂರು ತಾಲ್ಲೂಕು ಹೊಮ್ಮದ ವಿನಿಶೇಶ್ವರ ಕಂಬದಂತಿದೆ. ಮೇಲೆ ಸರಳವಾದ ಬೋದಿಗೆ ಇದೆ. ಅಲ್ಲದೆ ಸಪ್ತಮಾತೃಕೆ ಶಿಲ್ಪಗಳು, (ಚಿತ್ರಸಂಖ್ಯೆ-45) ಶಿವಲಿಂಗ, ನಾಲ್ಕು ನಂದಿಗಳಿವೆ. ದೇವಾಲಯ ತುಂಬಾ ಶಿಥಿಲವಾಗಿರುವುದರಿಂದ ಶುಕನಾಸದಲ್ಲಿರುವ ದುರ್ಗಾ ಮತ್ತು ಸೂರ್ಯ ಶಿಲ್ಪಗಳಲ್ಲಿ ಸುಮಾರು ಮೂರು ಅಡಿ ಎತ್ತರವಾಗಿದ್ದು, ಗಂಗರ ಅನೇಕ ಶಿಲ್ಪಗಳ ಲಕ್ಷಣಗಳನ್ನು ಒಳಗೊಂಡಿದೆ. ಈ ದೇವಾಲಯ ಕ್ರಿ.ಶ.8ನೇ ಶತಮಾನಕ್ಕೆ ಸೇರಿದೆ ಎನ್ನಬಹುದಾಗಿದೆ. ಈ ದೇವಾಲಯವನ್ನು ಸಂಪೂರ್ಣವಾಗಿ ಕಲ್ಲು ಚಪ್ಪಡಿಗಳಿಂದ ಸೇರಿಸಲಾಗಿದೆ. ಈ ಮಾದರಿಯ ದೇವಾಲಯಗಳು ಹಳ್ಳದ ಮಾದಹಳ್ಳಿಯಲ್ಲಿ ಸಹ ಕಾಣಬರುತ್ತದೆ.[62] ಚಿಕ್ಕಕಾಟಿ, ತೊಂಡವಾಡಿಯಲ್ಲಿಯೂ ಇದೇ ಮಾದರಿಯಲ್ಲಿವೆ. ಆದಕಾರಣ ಗಂಗರ ಮತ್ತು ಚೋಳರ ಕಾಲಕ್ಕೆ ಸೇರಿದ ದೇವಾಲಯಗಳಾಗಿವೆ ಎಂದು ತಿಳಿದುಬರುತ್ತದೆ.[63] ಇದೊಂದು ದುಃಸ್ಥಿತಿಯಲ್ಲಿರುವ ದೇವಾಲಯವಾಗಿದೆ. ಸರಿಯಾದ ರೀತಿಯಲ್ಲಿ ಪೂಜೆ, ಪುನಸ್ಕಾರಗಳು ನಡೆಯುತ್ತಿಲ್ಲ. ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆ ಮತ್ತು ಮುಜರಾಯಿ ಇಲಾಖೆಗಳು ಈ ದೇವಾಲಯವನ್ನು ಉಳಿಸಿಕೊಳ್ಳುವ ಕಾರ್ಯ ಮಾಡಬೇಕಾಗಿದೆ.

## ಸೋಮೇಶ್ವರ ದೇವಾಲಯ – ಹಳ್ಳದ ಮಾದಹಳ್ಳಿ

ಹಳ್ಳದಮಾದಹಳ್ಳಿಯನ್ನು ಕುರಿತು ಅದೇ ಗ್ರಾಮದಲ್ಲಿ ಎರಡು ಶಾಸನಗಳು ದೊರೆತಿವೆ. ಸೋಮೇಶ್ವರ ದೇವಾಲಯದ ಮುಂದೆ ಇರುವ ಶಾಸನದ ಪ್ರಕಾರ ಕ್ರಿ.ಶ.10ನೇ ಶತಮಾನಕ್ಕೆ ಸೇರಿದ ಶಾಸನ ಇದೆ. ಈ ಶಾಸನವು ದೇವರಿಗೆ ಬಿಟ್ಟ ದಾನವನ್ನು ತಿಳಿಸುತ್ತದೆ.[64] ಮತ್ತೊಂದು ಶಾಸನವು ಸೋಮೇಶ್ವರ ದೇವಾಲಯ ಉತ್ತರದ ಕಡೆ ಇರುವ ಶಾಸನವು ಕ್ರಿ.ಶ.11ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಇದು ದೇವರ ಸ್ಥಾನಕ್ಕೆ ಕವಿಲೆಯನ್ನು ನೀಡಿದ್ದು, ನಂದದೀವಿಯನ್ನು ಮಾಡಲಿಕ್ಕೆ ದಾನವನ್ನು ನೀಡಿರುವ ವಿಚಾರ ಕುರಿತು ತಿಳಿದು ಬರುತ್ತದೆ.[65]

ಈ ಸೋಮೇಶ್ವರ ದೇವಾಲಯವು ಹಳ್ಳದಮಾದಹಳ್ಳಿ ಕೆರೆಯ ಕಟ್ಟೆಯ ದಂಡೆಯಲ್ಲಿ ಅಂದರೆ ಕೆರೆಯ ಕೆಳಭಾಗದ ರಸ್ತೆಯಲ್ಲಿ ಉತ್ತರಾಭಿಮುಖವಾಗಿದೆ. (ಚಿತ್ರಸಂಖ್ಯೆ-46) ಇತ್ತೀಚೆಗೆ ಈ ದೇವಾಲಯದ ಮುಂಭಾಗವನ್ನು ರಸ್ತೆಯನ್ನಾಗಿ ಪರಿವರ್ತಿಸಿರುವುದರಿಂದ ಮಧ್ಯದಲ್ಲಿದ್ದ ಅನೇಕ ಅವಶೇಷಗಳು ಉಳಿದುಬಂದಿಲ್ಲ. ಬಿ.ಎಲ್.ರೈಸ್‌ರವರು ಗುರುತಿಸಿರುವ ಶಾಸನಗಳಲ್ಲಿ ದೇವಾಲಯದ ಉತ್ತರ ದಿಕ್ಕಿಗೆ ಇರುವುದು ಮಾತ್ರ ಕಾಣಬರುತ್ತದೆ. ದೇವಾಲಯದ ಹತ್ತಿರ ಇದ್ದ ಬಾವಿಯನ್ನು ಮುಚ್ಚಲಾಗಿದೆ ಎಂಬುದು ಡಾ.ದೇವರಕೊಂಡಾರೆಡ್ಡಿರವರ ಅಭಿಪ್ರಾಯವನ್ನು ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ. ಈಗಿನ ದೇವಾಲಯವನ್ನು ಗಮನಿಸಿದರೆ, ಚಿಕ್ಕಾಟಿ, ತೊಂಡವಾಡಿ ದೇವಾಲಯಗಳಂತೆ ಅಧಿಷ್ಠಾನರಹಿತವಾಗಿದೆ. ಗರ್ಭಗೃಹವು, ಅಲ್ಲದೆ ತೆರೆದ ಶುಕನಾಸಿ ಮತ್ತು ನವರಂಗವನ್ನು ಈಗಲೂ ಕಾಣಬಹುದು. ಮೂಲಗರ್ಭಗುಡಿ ಶಿವಲಿಂಗ ಇದೆ. ಶುಕನಾಸದ ಯಾವುದೇ ಶಿಲ್ಪಗಳಿಲ್ಲ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಈ ಕಂಬಗಳು ಚಿಕ್ಕಾಟಿ ಮತ್ತು ತೊಂಡವಾಡಿಯ ದೇವಾಲಯಗಳ ಮಾದರಿಯಲ್ಲಿಯೇ ಇವೆ. ಈ ಕಂಬಗಳು ಚೌಕ, ಅಷ್ಠಾಸ್ರ, ಚೌಕಾಕಾರದಲ್ಲಿದೆ. ಸರಳವಾದ ಬೋದಿಗೆಯನ್ನು ಹೊಂದಿದೆ. ಬಾಗಿಲು ಸಹ ಕಿರಿದಾಗಿದೆ. ಈ ದೇವಾಲಯದ ಮೇಲೆ ದೊಡ್ಡ ಚಪ್ಪಡಿಗಳನ್ನು ಹಾಕಿಸಿದ್ದಾರೆ. ದೇವಾಲಯದ ನವರಂಗದಲ್ಲಿ ಈಗ ಸಪ್ತಮಾತೃಕೆಯರ ಶಿಲ್ಪಗಳು ಹಾಗೂ ಒಂದು ಮುನಿಶಿಲ್ಪ ಇದೆ. ಈ ದೇವಾಲಯವು ಸಂಪೂರ್ಣ ಕಲ್ಲು ಚಪ್ಪಡಿಗಳಿಂದ ಆವೃತಗೊಂಡಿದೆ. ಈ ದೇವಾಲಯ ಗಂಗರ ಕಾಲಕ್ಕೆ ಸೇರಿದೆ. ಈ ದೇವಾಲಯದ ಪಕ್ಕದಲ್ಲಿಯೇ ಇನ್ನೊಂದು ಗುಡಿ ಇದೆ. ಈ ಗುಡಿ ಪಶ್ಚಿಮ ದಿಕ್ಕಿಗೆ ಮುಖ ಮಾಡಿದೆ. ಈ ಗುಡಿಯ ಒಳಗೆ ಒಂದು ಸೂರ್ಯನ ಶಿಲ್ಪ ಇದೆ. ಇದನ್ನು ತಲಕಾಡಿನ ಗಂಗರ ಕಾಲಕ್ಕೆ ಸೇರಿಸಬಹುದಾಗಿದೆ. ಈ ಹಿನ್ನೆಲೆಯಿಂದ ಅಂದಿನ ಕಾಲಕ್ಕೆ, ತಲಕಾಡಿನ ಗಂಗರು ಈ ಕೆರೆಯ ದಂಡೆಯಲ್ಲಿ ದೇವಾಲಯವನ್ನು ನಿರ್ಮಿಸಿ, ಧಾರ್ಮಿಕವಾಗಿ ಸಹಾಯಕರಾಗಿದ್ದರು ಎಂಬುದು ತಿಳಿದುಬರುತ್ತದೆ. ಅಲ್ಲದೆ ಈ ದೇವಾಲಯದ ಪಕ್ಕದಲ್ಲಿ ಪ್ರಾಚೀನವಾದ ಕೆರೆಯನ್ನು ಮುಚ್ಚಲಾಗಿದೆ ಎಂಬ ವಿಚಾರವನ್ನು ಸ್ಥಳೀಯರು ವ್ಯಕ್ತಪಡಿಸುತ್ತಾರೆ. (ಚಿತ್ರಸಂಖ್ಯೆ-47)

ಇಲ್ಲಿಯ ಇನ್ನೊಂದು ಪ್ರಮುಖ ವಿಚಾರವೇನೆಂದರೆ, ಒಂದೇ ಕಲ್ಲಿನಲ್ಲಿ ಕೊರೆದ ಪ್ರವೇಶದ್ವಾರದಲ್ಲಿ ಒಬ್ಬ ಮನುಷ್ಯ ತೆವಳಿಕೊಂಡು ಒಳಗೆ ಹೋಗುವುದಕ್ಕೆ ಮಾತ್ರ ಸಾಧ್ಯವಾಗಿದೆ. ಈ ದೇವಾಲಯ ಶಿಲಾಯುಗದ ಮಂಟಪದಂತೆ ದೊಡ್ಡ ದೊಡ್ಡ ಚಪ್ಪಡಿಗಳನ್ನು ಉಪಯೋಗಿಸಿ ದೇವಾಲಯವನ್ನು ನಿರ್ಮಿಸಿದ್ದಾರೆ. ದೇವಾಲಯದ ಒಳಗೆ ಕಂಡಮಾಲೆ ಧರಿಸಿ ಎಡಗಾಲನ್ನು ಸಮಪಾದವಾಗಿಸಿ ಬಲಗಾಲನ್ನು ಇಳಿಬಿಟ್ಟು ಆಸೀನವಾಗಿರುವ ಇನ್ನೊಂದು ಶಿಲ್ಪ ಇದೆ. ಸ್ಥಳೀಯರ ಪ್ರಕಾರ ಈ ಹಿಂದೆ ದೇವಾಲಯದಲ್ಲಿ ಬೇರೆ ಶಿಲ್ಪವಿತ್ತು. ಆ ಶಿಲ್ಪವನ್ನು ಕಳ್ಳತನ ಮಾಡಿದ್ದಾರೆ. ಆದ್ದರಿಂದ ಇಲ್ಲಿಯ ಪೂಜೆ ಪುನಸ್ಕಾರಗಳು ನಿಂತು ಹೋಯಿತು ಎಂದು

ತಿಳಿಸುತ್ತಾರೆ. ಇಲ್ಲಿ ದೊರೆತಿರುವ ಶಾಸನ ಪ್ರಕಾರ ಕ್ರಿ.ಶ.೨೨೦ರಲ್ಲಿ ಈ ಸೋಮೇಶ್ವರ ದೇವಾಲಯ ನಿರ್ಮಾಣವಾಗಿರಬೇಕು. ಇದನ್ನು ಪರಮಕುಲದ ತೊರೆಯದ 'ತಾತಣ್ಣ' ಎಂಬುವವರು ಕಟ್ಟಿಸಿದರು ಎಂದು ತಿಳಿದುಬರುತ್ತದೆ.[66] ಈ ದೇವಾಲಯ ಕೂಡ ದುಃಸ್ಥಿತಿ ತಲುಪಿದ್ದು, ಸ್ಥಳೀಯರು ಹಾಗೂ ಮುಜರಾಯಿ ಇಲಾಖೆಯವರು ಈ ದೇವಾಲಯದ ಉಳುಯುವಿಕೆಗೆ ಸಹಕರಿಸಬೇಕಾಗಿದೆ.

**ಬಸವೇಶ್ವರ ದೇವಾಲಯ – ಹಂಗಳ**

ಹಂಗಳದಲ್ಲಿ ಬಸವೇಶ್ವರ ದೇವಾಲಯ ಇದೆ. ಈ ದೇವಾಲಯವನ್ನು ಇತ್ತೀಚೆಗೆ ಮತ್ತೆ ಕಟ್ಟುತ್ತಿದ್ದಾರೆ. ಇದು ಪಶ್ಚಿಮಾಭಿಮುಖವಾಗಿದ್ದು, ಮೂಲಗುಡಿಯಲ್ಲಿ ಬಸವೇಶ್ವರ ಮತ್ತು ಶಿವಲಿಂಗವನ್ನು ಇಡಲಾಗಿದೆ. ದೇವಾಲಯದ ಸುತ್ತಲೂ ಅಂದರೆ ಉತ್ತರ ಹಾಗೂ ದಕ್ಷಿಣ ದಿಕ್ಕಿಗೆ ಐದು ಮತ್ತು ಐದು ಅಂದರೆ ಒಟ್ಟು ಹತ್ತು ಕಂಬಗಳಿವೆ. ದೇವಾಲಯದ ಮೇಲೆ ದ್ರಾವಿಡ ಶೈಲಿಯ ವಿಮಾನವನ್ನು ನಿರ್ಮಿಸುತ್ತಿದ್ದಾರೆ. (ಚಿತ್ರಸಂಖ್ಯೆ–48) ದೇವಾಲಯದ ಮುಂದೆ ದೀಪ ಕಂಬವನ್ನು ನಿಲ್ಲಿಸಲಾಗಿದೆ. ಈ ರೀತಿಯ ಕಂಬಗಳನ್ನು ನಾವು ಪ್ರಮುಖ ಶೈವ ದೇವಾಲಯಗಳಾದ ತಿರುಮಕೂಡಲು ನರಸೀಪುರದ ಕಾವೇರಿ ಕಪಿಲಾ ನದಿ ಸಂಗಮಾ ಅಗಸ್ತ್ಯೇಶ್ವರ ದೇವಾಲಯ ಮೂಗೂರಿನ ದೇಸೇಶ್ವರ, ನಂಜನಗೂಡಿನ ನಂಜುಂಡೇಶ್ವರ, ಚಾಮರಾಜನಗರ ಚಾಮರಾಜೇಶ್ವರ ದೇವಾಲಯ ಇನ್ನೂ ಮೊದಲಾದ ದೇವಾಲಯಗಳಲ್ಲಿ ಕಾಣಬಹುದಾಗಿದೆ. ಈ ಊರಿನಲ್ಲಿ ಎತ್ತಿನ ಹಬ್ಬದ ಜಾತ್ರೆಯು ನಡೆಯುತ್ತದೆ. ಈ ಹಬ್ಬದಲ್ಲಿ ಸ್ಥಳೀಯ ಜನಪದ ರೂಢಿ ಸಂಪ್ರದಾಯಗಳ ಪ್ರಕಾರ ನಡೆಯುತ್ತದೆ. ಈ ಊರಿನ ಹಬ್ಬದಲ್ಲಿ ಶಕ್ತಿ ಪ್ರಧಾನವಾದ ಮಾರಮ್ಮರನ್ನು ಪೂಜಿಸುವ ಕಾರ್ಯಗಳು ನಡೆಯುತ್ತವೆ. ಇಲ್ಲಿನ ದಂಡಿನ ಮಾರಮ್ಮ, ಪಟ್ಟದಮಾರಮ್ಮ, ಚಾಕಮ್ಮ, ಚಿಕ್ಕಮಾರಮ್ಮ, ದೊಡ್ಡ ಮಾರಮ್ಮ ದೇವತೆಗಳಿಗೆ ಪೂಜಾ ಕಾರ್ಯ ನಡೆಯುತ್ತದೆ. ಹೀಗೆ ಅನೇಕ ಬಗೆಯ ಸತ್ತಿಗೆ, ಸುರಪಾನಿ, ತಮಟೆ ಸಮೇತ ಜಾತ್ರೆ ನಡೆಯುತ್ತದೆ. ಇದು ಜಾನಪದ ಹಿರಿಮೆಗೆ ಒಂದು ಸಾಕ್ಷಿಯಾಗಿದೆ.

ಹಂಗಳ ಗ್ರಾಮದಲ್ಲಿ ನರೇಗಾ ಯೋಜನೆಯಡಿ ಸ್ವಚ್ಛ ಮಾಡುವಾಗ ಕಲ್ಯಾಣಿಯೊಂದು ಪತ್ತೆಯಾಗಿದೆ. ಇದು ಚೋಳರ ಕಾಲಕ್ಕೆ ಸೇರಿದ ಕಲ್ಯಾಣಿ ಎಂದು ಸ್ಥಳೀಯರ ಹೇಳಿಕೆಗಳಿವೆ. ಅಲ್ಲದೇ ಕೊಳದಲ್ಲಿ ಚಿನ್ನದ ನಾಣ್ಯ ಒಂದು ದೊರೆತಿದೆ. ಮೈಸೂರು ಒಡೆಯರ್ ಅಥವಾ ಬ್ರಿಟಿಷರ ಕಾಲದ ಚಿನ್ನದ ನಾಣ್ಯವೆಂದು ಆಂದೋಲನ ಮತ್ತು ಕನ್ನಡಪ್ರಭ ಪತ್ರಿಕೆಯಲ್ಲಿ ವರದಿಯಾಗಿದೆ.[67]

## ಓಂಕಾರ ಸಿದ್ಧೇಶ್ವರಸ್ವಾಮಿ ಜಾತ್ರೆ

ಓಂಕಾರ ಸಿದ್ದೇಶ್ವರ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗ ಇಡಲಾಗಿದ್ದು, ಗರ್ಭಗೃಹದ ಮುಂದೆ 12 ಕಂಬಗಳ ಒಳಗೊಂಡ ದೇವಾಲಯವಾಗಿದೆ. ಈ ದೇವಾಲಯದ ವಾಸ್ತು ರಚನೆ ನೋಡಿದರೆ ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣವಾಗಿದ್ದ ದೇವಾಲಯ ಎಂದು ಹೇಳಬಹುದು. ಇಲ್ಲಿ ಪ್ರತಿನಿತ್ಯ ಪೂಜಾಕಾರ್ಯ ನಡೆಯುತ್ತದೆ.

ಬೇಗೂರು ಸಮೀಪದ ಹೊಣಕನಪುರ ಗ್ರಾಮದ ಓಂಕಾರ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯುತ್ತದೆ. ಪ್ರತಿವರ್ಷವು ಜಾತ್ರಾ ಮಹೋತ್ಸವದಲ್ಲಿ ನಂಜನಗೂಡು, ಗುಂಡ್ಲುಪೇಟೆ ತಾಲ್ಲೂಕಿನ ಭಕ್ತರು ಪಾಲ್ಗೊಳ್ಳುತ್ತಾರೆ. 2018 ಜನವರಿ 30 ರಂದು ನಡೆದ ಜಾತ್ರೆ ಮಹೋತ್ಸವ ವಿವರ ಸಂಜೆ ಸುಮಾರು 4 ಗಂಟೆಯ ವೇಳೆಗೆ ಯಡವನಹಳ್ಳಿಯಿಂದ ಹೊರಟ ರಥಗಳು ಸಂಜೆ 5.15ರ ವೇಳೆಗೆ ಹೊಣಕನಪುರ ಓಂಕಾರ ಸಿದ್ದೇಶ್ವರಸ್ವಾಮಿ ದೇವಾಲಯದ ಆವರಣಕ್ಕೆ ತಲುಪಿದವು. ಮೊದಲು ಯಡವನಹಳ್ಳಿ ಗ್ರಾಮದಲ್ಲಿ ಸಿದ್ದಪಡಿಸಿದ್ದ ಓಂಕಾರ ಸಿದ್ದೇಶ್ವರ ಸ್ವಾಮಿಯ ರಥಕ್ಕೆ ಗ್ರಾಮಸ್ಥರು ಪೂಜೆ ಸಲ್ಲಿಸಿದರು. ಬಳಿಕ ಉತ್ಸವಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಪೂಜೆ ಸಲ್ಲಿಸಲಾಯಿತು. ರಥಕ್ಕೆ ಮೂರು ಬಾರಿ ಪ್ರದಕ್ಷಿಣೆ ಹಾಕಿದ ನಂತರ ಉತ್ಸವ ಮೂರ್ತಿಯನ್ನು ಹೊರೆಯಾಲ ಗ್ರಾಮಸ್ಥರಿಗೆ ಹಸ್ತಾಂತರಿಸಿದ ನಂತರ ಯಡವನಹಳ್ಳಿ ಹೊರೆಯಾಲದ ರಥಗಳು ಸಾಗಿದರೆ ಅರಾಪುರದಲ್ಲಿ ಸುಮಾರು ಎಂಟತ್ತು ಕಿಲೋಮೀಟರ್ ದೂರದ ಓಂಕಾರ ಸಿದ್ದೇಶ್ವರಸ್ವಾಮಿ ದೇವಾಲಯದ ಆವರಣಕ್ಕೆ ತಲುಪಿದವು.

ದೇವಾಲಯದ ಆವರಣದಲ್ಲಿ ಮೊದಲೇ ಇದ್ದ ನಂಜನಗೂಡು ತಾಲ್ಲೂಕಿನ ಕೂಗಲೂರಿನ ವಾಹನವೂ ಸಹ ದೇವಾಲಯದ ಸುತ್ತಲೂ ಛತ್ರ ಛಾಮರ ವಾದ್ಯ–ಮೇಳಗಳೊಂದಿಗೆ ಯಡವನಹಳ್ಳಿ ಮತ್ತು ಹೊರೆಯಾಲದ ರಥದ ಜೊತೆ–ಜೊತೆಯಲ್ಲೆ ಸಾಗಿ ಓಂಕಾರ ಸಿದ್ದೇಶ್ವರ ದೇವಸ್ಥಾನದ ಆವರಣಕ್ಕೆ ತಲುಪುತ್ತದೆ. ನೆರೆದಿದ್ದ ಭಕ್ತರು ತೇರಿಗೆ ಹಣ್ಣು ಜವನ ಎಸೆದು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಓಂಕಾರ ಸಿದ್ದೇಶ್ವರಸ್ವಾಮಿಗೆ ಹರಕೆ ಕಟ್ಟಿಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಜಾತ್ರೆಯ ಸಮಯದಲ್ಲಿ ದೇವಾಲಯವನ್ನು ತಳಿರು ತೋರಣ, ಫಲಪುಷ್ಪಗಳಿಂದ ಅಲಂಕರಿಸಲಾಗಿತ್ತು. ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಉತ್ಸವ: ಯಡವನಹಳ್ಳಿ ಗ್ರಾಮದಲ್ಲಿ ಓಂಕಾರ ಸಿದ್ದೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಪೂಜೆ ಸಲ್ಲಿಸಿ ರಥಕ್ಕೆ ಪ್ರದಕ್ಷಿಣೆ ಹಾಕಿದ ನಂತರ 101 ತೆಂಗಿನ ಕಾಯಿಗಳನ್ನು ಒಡೆದ ನಂತರ ಹೊರೆಯಾಲ ಗ್ರಾಮಸ್ಥರಿಗೆ ದೇವಾಲಯದ ಆವರಣದಲ್ಲಿ ಅರಳಿಮರದ ಜಗಲಿಕಟ್ಟೆಯವರೆಗೆ ಅಡ್ಡಪಲ್ಲಕ್ಕಿಯ ಉತ್ಸವಮೂರ್ತಿಯನ್ನು ಹೊತ್ತು ತಂದ ಹೊರೆಯಾಲ ಗ್ರಾಮಸ್ಥರ, ಚಲುವಡೆಯನಪುರ ಗ್ರಾಮಸ್ಥರಿಗೆ ಹಸ್ತಾಂತರಿಸಿದರು. ನಂತರ ಚನ್ನವಡೆಯನಪುರ ಗ್ರಾಮದವರು ತಮ್ಮ ಗ್ರಾಮಕ್ಕೆ ಉತ್ಸವಮೂರ್ತಿಯನ್ನು ತೆಗೆದುಕೊಂಡು ಹೋಗಿ ರಾತ್ರಿಯಿಡೀ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗ್ರಾಮದ ಪೂಜೆ ಸಲ್ಲಿಸುತ್ತಾರೆ. ಈ ಜಾತ್ರೆ ವಿಶಿಷ್ಟವಾದ ಜಾತ್ರೆಯಾಗಿದೆ. ಬೇಗೂರು, ನಂಜನಗೂಡು ತಾಲ್ಲೂಕಿನ ಹಲವಾರು ಜನರು ಈ ಗ್ರಾಮಕ್ಕೆ ಭೇಟಿ ನೀಡಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. (ವಿಜಯ ಕರ್ನಾಟಕ ಪತ್ರಿಕೆ ದಿನಾಂಕ:31.1.2018 ಮತ್ತು ಆಂದೋಲನ ದಿನಪತ್ರಿಕೆ ದಿನಾಂಕ: 31.1.2018) (ಚಿತ್ರಸಂಖ್ಯೆ–)

## ವೀರಭದ್ರ ದೇವಾಲಯ – ವೀರನಪುರ

ವೀರನಪುರದಲ್ಲಿ ಪೂರ್ವಾಭಿಮುಖವಾಗಿ ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ತಳವಿನ್ಯಾಸದಲ್ಲಿ ಗರ್ಭಗುಡಿ, ಶುಕನಾಸಿ, ನವರಂಗಕ್ಕೆ ಸೇರಿದಂತೆ ಮುಖಮಂಟಪವನ್ನು ಸೇರಿಸಲಾಗಿದೆ. ಈ ಗ್ರಾಮದಲ್ಲಿ ಎರಡು ಶಿಲಾಶಾಸನಗಳಿವೆ. ಈ ಶಾಸನವು 16ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಈ ಶಾಸನವು ಚಿಕ್ಕನಂಜಯ್ಯ ಅರಸರು ಕೋಣನೂರ ಬಸವಯ್ಯನ ವೀರನಿಗೆ ಕೊಟ್ಟ ಪುರಗುತ್ತಿಗೆಯ ಶಿಲಾಶಾಸನವಾಗಿದೆ. ಇದು ಈ ಭಾಗದ ಚತುರ್‌ಸೀಮೆಗೆ ಸೇರಿರುವ ಗದ್ದೆ, ಬೆದ್ದಲು, ತೋಟ, ತುಡಿಕೆ, ಕುಳ ಕೊಟಾರ ಸುಂಕವನ್ನು ಕಪ್ಪಕಾಣಿಕೆಯನ್ನು ನೀಡಿರುವುದನ್ನು ಕುರಿತು ತಿಳಿಸುತ್ತದೆ.[68]

ಮತ್ತೊಂದು ಶಾಸನ ಊರ ಮುಂದಣ ಬಾವಿಕಟ್ಟೆಗೆ ನಿಲ್ಲಿಸಿರುವ ಶಾಸನದ ಪ್ರಕಾರ ಇದು ಕ್ರಿ.ಶ.18ನೇ ಶತಮಾನಕ್ಕೆ ಸೇರಿದೆ. ಅಂದರೆ (ಕ್ರಿ.ಶ.1800) ಇದರ ಪ್ರಕಾರ ಶಾಲಿವಾಹನ ಶಕವರುಷ ಕ್ರಿ.ಶ.1780ರಂದು ಸಂವತ್ಸರದ ಜೇಷ್ಠ ಶುದ್ಧಹ್ 15 ರಂದು ವೀರನಪುರದ ಮೂಡ್ಲುಹಟ್ಟ ಮಾದಪ್ಪರವರ ಮಕ್ಕಳಾದ ಮಲ್ಲಪ್ಪರವರು ತಮ್ಮ ಮಾದಪ್ಪ ಇವರುಗಳ ಧರ್ಮಾರ್ಥವಾಗಿ ಬಾವಿಯನ್ನು, ನಿರ್ಮಾಣ ಮಾಡಿಸಿರುವ ಬಗ್ಗೆ ತಿಳಿದು ಬರುತ್ತದೆ.[69] ಆದರೆ ದೇವಾಲಯಕ್ಕೆ ಪೂರಕವಾಗಿ ಯಾವುದೇ ತರಹದ ಮಾಹಿತಿಗಳಿಲ್ಲ. ಆದರೂ ಕೂಡ ವಾಸ್ತುಕೃತಿ ರಚನಾ ನೋಟದಿಂದ ಇದು ವಿಜಯನಗರ ಅರಸರ ಕಾಲಕ್ಕೆ ಸೇರಿಸಬಹುದಾಗಿದೆ. ಮೂಲಗರ್ಭಗುಡಿ ಸುಮಾರು ಐದು ಅಡಿ ಎತ್ತರವಿರುವ ವೀರಭದ್ರಸ್ವಾಮಿಯ ಶಿಲ್ಪ ಇದೆ. ಒಂದು ಚಿಕ್ಕದಾದ ಗಣಪತಿ ಶಿಲ್ಪ ಇದೆ. ಅದರ ಮುಂದಿನ ಭಾಗದ ಶುಕನಾಸಿಯಲ್ಲಿ ಎರಡು ಕಂಬಗಳಿವೆ.

ನವರಂಗಕ್ಕೆ ಸೇರಿದಂತೆ ಎಂಟು ಕಂಬಗಳಿವೆ. ಅದರಲ್ಲಿ ನಾಲ್ಕು ಕಂಬಗಳು ಗೋಡೆಗೆ ಸೇರಿಕೊಂಡಿವೆ. ಅಲ್ಲದೆ ಮುಖಮಂಟಪದಲ್ಲಿಯೂ ಕೂಡ ಎರಡು ಕಂಬಗಳಿವೆ. ಈ ದೇವಾಲಯವು 2016ರಲ್ಲಿ ಜೀರ್ಣೋದ್ಧಾರವಾಗಿದೆ. (ಚಿತ್ರಸಂಖ್ಯೆ-49) ದೇವಾಲಯದ ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯಲ್ಲಿ ವಿಮಾನವನ್ನು ಮಾಡಲಾಗಿರುತ್ತದೆ. ವೀರನಪುರದಲ್ಲಿ ಪೂರ್ವಾಭಿಮುಖವಾಗಿ ಒಂದು ಸಿದ್ದಪ್ಪಾಜಿ ದೇವಾಲಯ, ಒಂದು ಬಸವೇಶ್ವರ ದೇವಾಲಯ, ಅಲ್ಲದೆ ಶಕ್ತಿ ಪ್ರಧಾನವಾದ ಮಾರಿಗುಡಿಯು ಸಹ ಇದೆ. ವೀರನಪುರದಲ್ಲಿ ಎರಡು ಮಾಸ್ತಿಕಲ್ಲುಗಳಿವೆ. ಅಲ್ಲದೆ ಇದರಲ್ಲಿ ಶಾಸನದ ಲಿಪಿಗಳಿವೆ. ಇವುಗಳ ಕುರಿತು ಇಲ್ಲಿಯ ತನಕ ಯಾವುದೇ ರೀತಿಯಲ್ಲಿ ಅಧ್ಯಯನ ನಡೆದಿಲ್ಲ.

ವೀರನಪುರದ ಹೊರವಲಯದಲ್ಲಿ ಒಂದು ಕಲ್ಲಿನ ಮಂಟಪ ಇದೆ. ಈ ಮಂಟಪವು ನಾಲ್ಕು ಹೊಯ್ಸಳರ ವಾಸ್ತುಶೈಲಿಯನ್ನು ಹೊಂದಿರುವ ಕಂಬಗಳಾಗಿವೆ. (ಚಿತ್ರಸಂಖ್ಯೆ-50) ಮೇಲ್ಭಾಗದ ವಿಮಾನವು ಸಹ ಕಲ್ಲಿನ ಮಂಟಪವಾಗಿದೆ. ಬಹುಶಃ ಅಂದಿನ ಕಾಲಕ್ಕೆ ಈ ನೆಲೆ ಪ್ರಮುಖವಾಗಿತ್ತೆಂದು ಪರಿಗಣಿಸಬಹುದಾಗಿದೆ. ಆದರೆ ಪ್ರಸ್ತುತ ಪಾಳುಮಂಟಪ ಮಾತ್ರ ಇದೆ. ಈ ಮಂಟಪದ ಸ್ವಲ್ಪ ದೂರದಲ್ಲಿ ಒಂದು ಪ್ರಾಚೀನ ಕಾಲಕ್ಕೆ ಸೇರಿದ ಬಾವಿ ಇದೆ. ಈ ಬಾವಿಯ ಪರಿಸರದಲ್ಲಿ ನಾಗದೇವತೆ ಶಿಲ್ಪ ಇದೆ. ಆದಕಾರಣ ಇದೊಂದು ಶೈವ ಪರಂಪರೆಗೆ ಪೂರಕವಾದ ಸ್ಥಳವೆಂದು ಸಹ ಗುರುತಿಸಬಹುದಾಗಿದೆ. ಈ ಎಲ್ಲಾ ಬೆಳವಣಿಗೆಯಿಂದ ವೀರನಪುರ ಒಂದು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಗ್ರಾಮವಾಗಿತ್ತೆಂದು ಪರಿಗಣಿಸಬಹುದಾಗಿದೆ. ಆಯಾ ದೇವಾಲಯಗಳಿಗೆ ಪೂರಕವಾಗಿ ಹಬ್ಬ ಹರಿದಿನಗಳು ದೇವತಾ ಕಾರ್ಯಗಳು ನಡೆಯುತ್ತವೆ. ಏಕೆಂದರೆ ಈ ಗ್ರಾಮದಲ್ಲಿ ವೀರಭದ್ರೇಶ್ವರ ದೇವಾಲಯ, ಮಲೈಮಹದೇಶ್ವರ ದೇವಾಲಯ, ಬಸವೇಶ್ವರ ದೇವಾಲಯ ಹಾಗೂ ಸಿದ್ದಪ್ಪಾಜಿ ದೇವಾಲಯಗಳು ಇವೆಲ್ಲವೂ ಕೂಡ ಶೈವಪರಂಪರೆಗೆ ಸೇರಿದ ಆಲಯಗಳಾಗಿವೆ. ಆದಕಾರಣ ವೀರನಪುರ ಶೈವಧರ್ಮದ ಬೆಳವಣಿಗೆಯನ್ನು ವ್ಯಕ್ತಪಡಿಸುತ್ತದೆ.

### ಶಿವಾಲಯ (ಈಶ್ವರ ದೇವಾಲಯ)

ಗುಂಡ್ಲುಪೇಟೆ ನಗರದಲ್ಲಿ ಶಿವಾಲಯವಿದ್ದು, ಈ ಆಲಯವು ಪೂರ್ವಾಭಿಮುಖವಾಗಿದೆ. ಈ ದೇವಾಲಯವು ಶ್ರೀರಾಮನಾಥ ದೇವಾಲಯಕ್ಕೆ ಸೇರಿದಂತೆಯೇ ಇದೆ. ಒಂದೇ ವೇದಿಕೆಯಲ್ಲಿ ಮೂರು ಗರ್ಭಗೃಹಗಳಿದ್ದು, ಮಧ್ಯದಲ್ಲಿರುವ ಗುಡಿಯಲ್ಲಿ ಶಿವಲಿಂಗವಿದೆ. ಉತ್ತರ ಕಡೆಗೆ ಪಾರ್ವತಿ ಶಿಲ್ಪವನ್ನು ದಕ್ಷಿಣ ದಿಕ್ಕಿಗೆ ಗಣಪತಿ ಶಿಲ್ಪವನ್ನು ಇರಿಸಲಾಗಿದೆ. ಈ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಈ ದೇವಾಲಯದ ಆಲಯದಲ್ಲಿ

ನಂದಿಶಿಲ್ಪ, ನಾಗದೇವತೆ ಶಿಲ್ಪ, ಗಣಪತಿ ಶಿಲ್ಪಗಳಿದ್ದು, ಇವು ಪೂಜೆ ಪುನಸ್ಕಾರಗಳಿಗೆ ಒಳಗಾಗಿವೆ. ಪ್ರತಿದಿನ ಪೂಜೆ ನಡೆಯುತ್ತದೆ. ಧನುರ್ಮಾಸ ತಿಂಗಳು 30 ದಿನಗಳು ಕೂಡ ವಿಶೇಷ ಪೂಜೆ ನಡೆಯುತ್ತದೆ. ಮಾರ್ಕಂಡಯ್ಯನ ಪೂಜೆ ನಡೆಯುತ್ತದೆ. ಈ ದೇವಾಲಯದ ಪಕ್ಕದಲ್ಲಿಯೇ ಹೊಂದಿಕೊಂಡಂತೆ ರಾಮದೇವಾಲಯ ಇರುವುದರಿಂದ ರಾಮನವಮಿ ನಡೆಯುತ್ತದೆ. ವರ್ಷಕ್ಕೆ ಒಂದು ಸಾರಿ ಹಿಂದೆ ರಥೋತ್ಸವ ನಡೆಯುತ್ತಿತ್ತು ಎಂಬ ಹೇಳಿಕೆಗಳಿವೆ. (ಚಿತ್ರಸಂಖ್ಯೆ-51)

## ನಂದಿಮಂಟಪ ಅಥವಾ ಬಸವ ಮಂಟಪ

ಗುಂಡ್ಲುಪೇಟೆಯ ಹೊರವಲಯದಲ್ಲಿ ಪೂರ್ವ ದಿಕ್ಕಿಗೆ ಒಂದು ನಂದಿಮಂಟಪವನ್ನು ಕಾಣಬಹುದಾಗಿದೆ. ಈ ನಂದಿಮಂಟಪವನ್ನು ಪಶ್ಚಿಮಾಭಿಮುಖವಾಗಿ ನಿರ್ಮಿಸಲಾಗಿದೆ. ಈ ನಂದಿಮಂಟಪವನ್ನು ಮೂರು ಬಾರಿ ನಿರ್ಮಿಸಲಾಗಿದೆ. ಒಂದೊಂದು ಸಾರಿ ನಡೆಸಿದ ಕಟ್ಟಡದ ವಾಸ್ತುವನ್ನು ಗಮನಿಸಬಹುದಾಗಿದೆ. ಒಂದೊಂದು ಮಂಟಪಕ್ಕೂ ನಾಲ್ಕು ನಾಲ್ಕು ಕಂಬಗಳಿವೆ. ಒಟ್ಟು 16 ಕಂಬಗಳಿರುವ ಮಂಟಪವನ್ನು ಹೊಂದಿರುವ ನಂದಿಮಂಟಪವೆಂದು ತಿಳಿಯಬಹುದಾಗಿದೆ. ಈ ಮಂಟಪಕ್ಕೆ ಏರಬೇಕಾದರೆ ಕಲ್ಲಿನ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಮೊದಲ ಬಾರಿಗೆ ನಿರ್ಮಿಸಿದ ಮಂಟಪದ ಮೇಲೆ ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿರುವ ವಿಮಾನ ಇದೆ.

ಈ ನಂದಿ ಮಂಟಪಕ್ಕೆ ಎದುರಾಗಿ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿರುವ ಒಂದು ಶಿವಾಲಯ ಇದೆ. ಈ ಶಿವಾಲಯ ಗರ್ಭಗುಡಿ, ಶುಕನಾಸಿ, ಮತ್ತು ತೆರೆದ ಮುಖಮಂಟಪವನ್ನು ಹೊಂದಿದೆ. ತೆರೆದ ಮುಖಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಮುಂಭಾಗದಲ್ಲಿ ನಾಲ್ಕು ಕಂಬಗಳಿವೆ. ಮೇಲ್ಭಾಗದಲ್ಲಿ ಕೋಷ್ಠಗುಡಿಗಳಿವೆ. ಮುಂಭಾಗದಲ್ಲಿ ಹುಲಿಬೇಟೆ ಶಿಲ್ಪ ಇದೆ. (ಚಿತ್ರಸಂಖ್ಯೆ-52)

## ಮಂಟೇಸ್ವಾಮಿ ದೇವಾಲಯ -ಶಿಂಡನಪುರ

ಶಿಂಡನಪುರದಲ್ಲಿ ಪಶ್ಚಿಮಾಭಿಮುಖವಾಗಿ ಮಂಟೇಸ್ವಾಮಿ ಮತ್ತು ಮಾರಮ್ಮ ದೇವಾಲಯವಿದೆ. ಗಡಿಕಲ್ಲುಗಳಿವೆ, ಇದೊಂದು ಪ್ರಾಚೀನ ನೆಲೆ, ಇಲ್ಲಿರುವ ಮಾರಿಗುಡಿ ಉತ್ತರಾಭಿಮುಖವಾಗಿದೆ. ಮಂಟೇಸ್ವಾಮಿಯ ದೇವಾಲಯ ಇರುವುದರಿಂದ ಇದೊಂದು ಶೈವ ಆರಾಧಕರ ನೆಲೆಯಾಗಿದೆ. ಐದು ಗುಡಿಕಲ್ಲುಗಳಿವೆ. ಈ ಎಲ್ಲಾ ಬೆಳವಣಿಗೆಯಿಂದ ಶಿಂಡನಪುರ ಶೈವಧರ್ಮಕ್ಕೆ ಪೂರಕವಾದ ಗ್ರಾಮವಾಗಿದೆ.

## ಚನ್ನಮಲ್ಲಿಕಾರ್ಜುನ ದೇವಾಲಯ – ಕೊಡಸೋಗೆ

ಕೊಡಸೋಗೆ ಗ್ರಾಮದಲ್ಲಿ ಚನ್ನಮಲ್ಲಿಕಾರ್ಜುನ ದೇವಾಲಯ ಇದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ದ್ರಾವಿಡ ಶೈಲಿಯನ್ನು ಹೊಂದಿದೆ. ಗರ್ಭಗುಡಿಯಲ್ಲಿ ಚನ್ನಮಲ್ಲಿಕಾರ್ಜುನವೆಂಬ ಶಿವಲಿಂಗ ಇದೆ. ಒಂದು ನಂದಿಶಿಲ್ಪ ಇದೆ. ಶುಕನಾಸದ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಟ್ಟಿಕೆಗಳಿವೆ. ಅಲ್ಲದೆ ಸುಂದರವಾದ ಶೈವ ಪುರಾಣಕ್ಕೆ ಸೇರಿದಂತಹ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ನವರಂಗದ ಮಧ್ಯದಲ್ಲಿ ಎರಡು ಕಂಬಗಳಿವೆ. ಮುಖ್ಯ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ವಿಜಯನಗರ ಶೈಲಿಯ ಕಂಬಗಳನ್ನು ಸೇರಿಸಲಾಗಿದೆ. ಈ ದೇವಾಲಯದಲ್ಲಿ ಮೂರು ಮುಖವನ್ನು ಹೊಂದಿರುವ ಕಾಳಿಶಿಲ್ಪ ಇದೆ. ರಾವಳೇಶ್ವರ ಶಿಲ್ಪ, ಭೈರವಶಿಲ್ಪ, ಮಹಿಷಮರ್ದಿನಿ ಇನ್ನಿತರ ಶಿಲ್ಪಗಳಿವೆ. ಊರ ಹೊರಗೆ ಒಂದು ಪ್ರಾಚೀನ ಕಾಲಕ್ಕೆ ಸೇರಿದ ಕೆರೆ ಇದ್ದು, ಕೆರೆಯ ಮಧ್ಯದಲ್ಲಿ ಒಂದು ಕಂಬದ ಮೇಲೆ ನಂದಿಶಿಲ್ಪ ಇದೆ. ಸ್ಥಳೀಯರು ಇದನ್ನು ನಂದಿ ಕಂಬದ ಶಿಲ್ಪವೆಂದು ಕರೆಯುವ ವಾಡಿಕೆ ಇದೆ. ಇದೊಂದು ಶೈವ ಪರಂಪರೆ ಹಿನ್ನೆಲೆಯಲ್ಲಿ ಮಹತ್ತರವಾದ ದೇವಾಲಯವಾಗಿದ್ದು, ಶಿಲ್ಪಗಳು ಸಹ ಇರುವುದು ಒಂದು ವಿಶೇಷವೆನ್ನಬಹುದಾಗಿದೆ.

## ಮಹದೇಶ್ವರ ದೇವಾಲಯ – ಕರಕಲಮಾದಹಳ್ಳಿ

ಕರಕಲ ಮಾದಹಳ್ಳಿ ಕುರಿತು ಈ ಊರಿನ ಗ್ರಾಮದ ಮುಂದೆ ಇರುವ ಶಾಸನದಲ್ಲಿ ಸುಮಾರು 26 ಸಾಲುಗಳು ಇರುವುದಾಗಿ ಶಾಸನ ಪಾಠದಿಂದ ತಿಳಿದುಬರುತ್ತದೆ.[70] ಈ ಶಾಸನವನ್ನು ಕ್ರಿ.ಶ.1496–97ರ ಕಾಲಕ್ಕೆ ಬರೆಸಲಾಗಿದೆ. ಇದರಿಂದ ಶ್ರೀವೀರ ಉಮ್ಮತ್ತೂರ ನಂಜರಾಯ ಒಡೆಯರ ಮಕ್ಕಳುಗಳ ಬಗ್ಗೆ ತಿಳಿದುಬರುತ್ತದೆ. ಅಲ್ಲದೆ ಕೊಳ್ಳೇಗಾಲ ತಾಲ್ಲೂಕು ಶಿವನ ಸಮುದ್ರ ಕಾವೇರಿ ತೀರದಲ್ಲಿ ನೆಲೆಸಿರುವ ಶ್ರೀ ಸೋಮೇಶ್ವರ ಸ್ವಾಮಿಗೆ ಅಗ್ರಹಾರವಾಗಿ ಬಿಟ್ಟುಕೊಟ್ಟ ಬಗ್ಗೆ ತಿಳಿದುಬರುತ್ತದೆ. ಅಲ್ಲದೆ ಅನೇಕ ಗ್ರಾಮಗಳ ಕುರಿತು ನೆಟ್ಟ ಗಡಿ ಕಲ್ಲುಗಳ ನಿರ್ಮಾಣದ ಬಗ್ಗೆ ತಿಳಿದುಬಂದಿದೆ. ಈ ಗ್ರಾಮದಲ್ಲಿರುವ ಮಹಾದೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ಮೂಲಗುಡಿಯಲ್ಲಿ ಶಿವಲಿಂಗ ಇದೆ. ಒಂದು ಸಣ್ಣ ನಂದಿಶಿಲ್ಪ ಇದೆ. ಅಲ್ಲದೆ ಗರ್ಭಗುಡಿಗೆ ಒಂದು ಸಣ್ಣ ಬಾಗಿಲು ಇದೆ. ಶುಕನಾಸಿಗೆ ಹೊಂದಿಕೊಂಡಂತೆ ನವರಂಗವಿದ್ದು, ನವರಂಗದ ಮಧ್ಯದಲ್ಲಿ ಎರಡು ಕಂಬಗಳು ಹಾಗೂ ಗೋಡೆಗೆ ಸೇರಿದಂತೆ ಎರಡು ಕಂಬಗಳಿವೆ. ಈ ದೇವಾಲಯ ಕಲ್ಲು ಚಪ್ಪಡಿ ಇಟ್ಟಿಗೆ ಮತ್ತು ಸುಣ್ಣದ ಗಾರೆಗಳಿಂದ ನಿರ್ಮಾಣವಾಗಿದೆ. ಇವರ ಕಾಲ ಸುಮಾರು 16–17ನೇ ಶತಮಾನ ಎನ್ನಬಹುದು.

ಇದೇ ಗ್ರಾಮದ ಹೊರಗೆ ಇರುವ ಒಂದು ಅರಳಿಮರದ ಬುಡದಲ್ಲಿ ಒಂದು ಕಾಳಿಶಿಲ್ಪ ಇದೆ. ಕಾಳಿಯು ಸುಮಾರು 10ನೇ ಶತಮಾನಕ್ಕೆ ಸೇರಿಸಬಹುದಾದಂತಹ ಶಿಲ್ಪವಾಗಿದ್ದು, ಚತುರ್ಭುಜಧಾರೆಯಾಗಿದ್ದಾಳೆ. ತ್ರಿಶೂಲ, ಡಮರು, ಚಕ್ರ, ಮತ್ತೊಂದು ಕೈಯಲ್ಲಿ ಒಂದು ತಲೆಯ ಮಾದರಿಯಲ್ಲಿರುವ ರೀತಿಯಲ್ಲಿ ಕಾಣಬರುತ್ತದೆ. ಅಲ್ಲದೆ ಇದೇ ಸ್ಥಳದಲ್ಲಿ ನಾಗರ ಕಲ್ಲುಗಳು ಸಹ ಇವೆ. ಈ ಎಲ್ಲಾ ಬೆಳವಣಿಗೆಯನ್ನು ಕರಕಲಮಾದಹಳ್ಳಿಯಲ್ಲಿ ಗಮನಿಸಲಾಗಿದೆ. ಕರಕಲಮಾದಹಳ್ಳಿಯಲ್ಲಿ ಬಸವೇಶ್ವರ ದೇವಾಲಯವು ಇದೆ. ಕುದುರೆ ಮೇಲೆ ಕುಳಿತ ರಾಜನ ಶಿಲ್ಪ ಇದೆ. ಬಸವೇಶ್ವರ ದೇವಾಲಯದ ಪರಿಸರದಲ್ಲಿ ಸಾಕಷ್ಟು ಅವಶೇಷಗಳಿವೆ.

### ಬಸವೇಶ್ವರ ದೇವಾಲಯ – ವಡ್ಡಗೆರೆ

ವಡ್ಡಗೆರೆಯಲ್ಲಿ ಬಸವೇಶ್ವರ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಒಂದು ಚಿಕ್ಕದಾದ ಗುಡಿಯಾಗಿದೆ. ಇಲ್ಲಿ ನಾಗದೇವತೆಯ ಶಿಲ್ಪಗಳಿದ್ದು, ನಾಗದೇವತೆಯ ಆರಾಧನೆಯು ನಡೆಯುತ್ತದೆ ಎಂಬುದಾಗಿ ತಿಳಿದುಬರುತ್ತದೆ.

### ಶಿವಶಂಕರ ದೇವಾಲಯ – ಹೆಗ್ಗವಾಡಿ

ಹೆಗ್ಗವಾಡಿಯಲ್ಲಿ ಶಿವಶಂಕರಸ್ವಾಮಿ ದೇವಾಲಯದ ಮುಂದೆ ಕ್ರಿ.ಶ.1327ರ ಕಾಲಕ್ಕೆ ಸೇರಿದ ಶಾಸನ ಇದೆ. ಈ ಶಾಸನದ ಪ್ರಕಾರ ಸ್ಥಳೀಯರಾದ ಶ್ರೀಮನುಮಹಾ ಪ್ರಧಾನ ಕೇತಯ ದಂಡನಾಯಕನು ಈ ಗ್ರಾಮದ ಶಿವಶಂಕರ ದೇವಾಲಯಕ್ಕೆ ದಾನ ನೀಡಿರುವ ಕುರಿತು ತಿಳಿದುಬರುತ್ತದೆ.[71] ಹೆಗ್ಗವಾಡಿಯ ಶಿವಶಂಕರ ದೇವಾಲಯವು ಗರ್ಭಗೃಹ, ಶುಕನಾಸಿ, ತೆರೆದ ಮುಖಮಂಟಪವನ್ನು ಹೊಂದಿದೆ. ಮೂಲಗರ್ಭಗುಡಿಯಲ್ಲಿ ಶಿವಶಂಕರನ ಶಿವಲಿಂಗ ಇದೆ. ಶುಕನಾಸಿಯಲ್ಲಿ ಒಂದು ನಂದಿಶಿಲ್ಪ, ಎರಡು ಸೂರ್ಯಶಿಲ್ಪಗಳು, ಒಂದು ಸರ್ಪಕಲ್ಲು ಇದೆ. ಪ್ರಸ್ತುತ ದೇವಾಲಯದ ಮುಖಮಂಟಪ ದುಃಸ್ಥಿತಿಯಾಗಿದೆ. ದೇವಾಲಯದ ಹೊರಭಾಗದಲ್ಲಿಯೂ ನಾಗದೇವತೆಯ ಶಿಲ್ಪಗಳಿವೆ. ಒಂದು ಕಾಲಕ್ಕೆ ಇದು ದೊಡ್ಡ ದೇವಾಲಯವಾಗಿತ್ತೆಂದು ಗುರುತಿಸಬಹುದಾಗಿದೆ. ಆದರೆ ಈಗ ಸಾಕಷ್ಟು ಹಾಳಾಗಿದೆ. ಮೊದಲಿಗೆ ಈ ದೇವಾಲಯಕ್ಕೆ ಪ್ರಾಕಾರವಿತ್ತೆಂದು ಹೇಳಬಹುದಾದರೂ ಈಗ ಅದು ಬರಿ ಅವಶೇಷಗಳಾಗಿ ಉಳಿದಿವೆ. ಈ ದೇವಾಲಯಕ್ಕೆ 20 ರಿಂದ 30 ಎಕರೆ ಭೂಮಿ ಇತ್ತು. ಪ್ರಸ್ತುತದಲ್ಲಿ ಆ ಭೂಮಿಯನ್ನು ಸಾರ್ವಜನಿಕರು ತಮ್ಮ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂಬುದನ್ನು ಅಲ್ಲಿಯ ಸ್ಥಳೀಯ ಜನರು ತಿಳಿಸುತ್ತಾರೆ. ಇಲ್ಲಿ ಪ್ರತಿನಿತ್ಯ ಪೂಜೆ ನಡೆಯುತ್ತದೆ. ಹೆಗ್ಗವಾಡಿಯಲ್ಲಿ ಒಂದು ಶಕ್ತಿ ಪ್ರಧಾನವಾದ ಮಾರಿದೇವಾಲಯವು ಸಹ

ಇದೆ. ಇಲ್ಲಿ ಒಂದು ಶಾಸನ ಕಲ್ಲು ಭೂಮಿಯಲ್ಲಿ ಮುಚ್ಚಿ ಹೋಗಿದೆ. ಒಟ್ಟಾರೆ ಹೆಗ್ಗವಾಡಿ ಒಂದು ಕಾಲದಲ್ಲಿ ತನ್ನದೇ ಆದ ಇತಿಹಾಸವನ್ನು ಹೊಂದಿತ್ತು. ಅದು ಪ್ರಸ್ತುತ ದಿನಗಳಲ್ಲಿಯೂ ಕೂಡ ಸಣ್ಣಪುಟ್ಟದಾಗಿ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. (ಚಿತ್ರಸಂಖ್ಯೆ-53)

## ಬಸವೇಶ್ವರ ದೇವಾಲಯ – ಅಂಕಹಳ್ಳಿ

ಅಂಕಹಳ್ಳಿಯಲ್ಲಿ ಬಸವೇಶ್ವರ ದೇವಾಲಯ ಇದೆ. ಈ ದೇವಾಲಯವು ಗರ್ಭಗುಡಿ, ಶುಕನಾಸಿ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಮೂಲಗರ್ಭಗುಡಿಯಲ್ಲಿ ಶಿವಲಿಂಗ ಇದೆ. ಶುಕನಾಸಿ ಅಂಕಣದಲ್ಲಿ ನಂದಿಶಿಲ್ಪ ಇದೆ. ನವರಂಗವು ವಿಶಾಲವಾಗಿದ್ದು, ಯಾವುದೇ ತರಹದ ಶಿಲ್ಪಗಳಿಲ್ಲ. ಅಲ್ಲದೆ ಕಂಬಗಳು ಸಹ ಇಲ್ಲ. ನವರಂಗದಲ್ಲಿರುವ ದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವು ಇದೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ವಾಸ್ತುಶೈಲಿಯ ದೃಷ್ಟಿಯಿಂದ ಇದು ವಿಜಯನಗರ ಶೈಲಿಯನ್ನು ಒಳಗೊಂಡಿದೆ. ಈ ದೇವಾಲಯದ ಹೊರಭಾಗದಲ್ಲಿ 5 ಲಿಂಗಗಳಿವೆ. ಸೂರ್ಯನ ಶಿಲ್ಪ ಇದೆ. ನಾಗದೇವತೆ ಶಿಲ್ಪ, ಅದು ಅಲ್ಲದೆ ಒಂದು ಪ್ರಾಚೀನ ಕೆರೆ ಇದೆ. ಈ ಎಲ್ಲಾ ಬೆಳವಣಿಗೆಯಿಂದ ಸಾಂಸ್ಕೃತಿಕವಾಗಿ ಮುಂದುವರೆದಿದ್ದ ಗ್ರಾಮವಾಗಿತ್ತೆಂದು ಹೇಳಬಹುದಾಗಿದೆ.

ಅಂಕಹಳ್ಳಿಯ ಗ್ರಾಮದ ಒಳಗೆ ಸುಮಾರು 15ಕ್ಕೂ ಹೆಚ್ಚು ಅವಶೇಷಗಳಿವೆ. ಇವುಗಳನ್ನು 12-13ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಒಂದು ವಿಶೇಷವಾದ ಮುನಿಶಿಲ್ಪ ಇದೆ. ಗ್ರಾಮದ ಒಳಗೂ ಒಂದು ಬಸವೇಶ್ವರ ಗುಡಿ ಇದೆ. ಆದಕಾರಣ ಈ ಗ್ರಾಮದಲ್ಲಿ ಎರಡು ಬಸವೇಶ್ವರನ ದೇವಾಲಯಗಳಿದ್ದು, ಇವು ಶೈವ ಹಾಗೂ ವೀರಶೈವ ಧರ್ಮದ ಬೆಳವಣಿಗೆಯನ್ನು ಸಾರುತ್ತದೆ ಎನ್ನಬಹುದಾಗಿದೆ. (ಚಿತ್ರಸಂಖ್ಯೆ-155)

## ಪಟ್ಟದ ರಾಣಿ ಅಮ್ಮರವರ ದೇವಾಲಯ- ಬೊಮ್ಮಲಾಪುರ

ಬೊಮ್ಮಲಾಪುರ ಪಟ್ಟದ ರಾಣಿ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಮೂಲಗುಡಿಯಲ್ಲಿ ಅಮ್ಮನವರ ಶಿಲ್ಪ ಇದೆ. ವಿಶಾಲವಾದ ನವರಂಗದಲ್ಲಿ ಎರಡು ಕಂಬಗಳಿವೆ. ತೆರೆದ ಮುಖಮಂಟಪ ಇದೆ. ಅಲ್ಲದೆ ಎರಡು ಕಂಬಗಳಿವೆ. ಮೇಲ್ಭಾಗದಲ್ಲಿ ಮೂರು ಕೋಷ್ಠ ಗುಡಿಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ವಿಮಾನ ಇದೆ. ಈ ದೇವಾಲಯ ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣಗೊಂಡಿದೆ. ಹಿಂದೆ ಈ ಗ್ರಾಮದಲ್ಲಿ ಪಟ್ಟದ ರಾಣಿ ಜಾತ್ರೆ ನಡೆಯುತ್ತಿತ್ತು. ಪ್ರಸ್ತುತದಲ್ಲಿ ಜನರ ಸಮಸ್ಯೆಗಳಿಂದ ಹಬ್ಬ ಮಾಡುವುದು ನಿಂತು ಹೋಗಿದೆ.

ಅಲ್ಲದೆ ಬೊಮ್ಮದೇವರಗುಡಿ ಇದೆ. ಈ ಗುಡಿಯು ಗರ್ಭಗುಡಿ, ಶುಕನಾಸಿ, ತೆರೆದ ಮುಖಮಂಟಪವನ್ನು ಹೊಂದಿದೆ. (ಚಿತ್ರಸಂಖ್ಯೆ-54) ಈ ದೇವಾಲಯವು ಕೂಡ ದಕ್ಷಿಣಾಭಿಮುಖವಾಗಿದೆ. ಲಿಂಗ, ನಂದಿಶಿಲ್ಪಗಳಿವೆ. ಅಲ್ಲದೆ ಲಲಾಟಬಿಂಬದಲ್ಲಿಯೂ ಕೂಡ ನಂದಿ ಉಬ್ಬುಶಿಲ್ಪ ಇದೆ. ದೇವಾಲಯದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ವಿಮಾನ ಇದೆ. ದೇವಾಲಯದ ಹೊರಗಡೆ ಅನೇಕ ಅವಶೇಷಗಳಿವೆ. ನಾಗರಶಿಲ್ಪ ಯೋಧರ ಶಿಲ್ಪಗಳು ಅಲ್ಲಲ್ಲಿ ಬಿದ್ದಿವೆ. ಇಲ್ಲಿಯೇ ಒಂದು ಬಸವೇಶ್ವರ ದೇವಾಲಯ ಇದೆ. ಇದು ಕೂಡ ದಕ್ಷಿಣಾಭಿಮುಖವಾಗಿದೆ. ಈ ಗ್ರಾಮದ ಮೂರು ದೇವಾಲಯಗಳು ಕೂಡ ದಕ್ಷಿಣಾಭಿಮುಖವಾಗಿಯೇ ನಿರ್ಮಾಣಗೊಂಡಿವೆ. ಈ ಗ್ರಾಮದಲ್ಲಿ ದ್ವಾರಕಂಬಗಳು, ಹಂದಿ ಬೇಟೆ, ಮುನಿಶಿಲ್ಪ, ರಾವಳೇಶ್ವರ ಶಿಲ್ಪಗಳು ಕಂಡುಬಂದಿವೆ.

## ಶಿವಪುರ ಗ್ರಾಮದ ದೇವಾಲಯಗಳು

ಶಿವಪುರ ಗ್ರಾಮದಲ್ಲಿ ಎರಡು ಶಾಸನಗಳಿವೆ. ಅದರಲ್ಲಿ ಬಸವೇಶ್ವರ ದೇವಸ್ಥಾನದ ಮುಂದೆ ಕಲ್ಲುಮಂಟಪದೊಳಗೆ ಕ್ರಿ.ಶ.1469 ನೇ ಕಾಲಕ್ಕೆ ಸೇರಿದ ಶಾಸನ ಇದೆ. ಇದೊಂದು ಶೈವ ವೀರಶೈವ ಧಾರ್ಮಿಕ ಹಿನ್ನೆಲೆಯನ್ನು ತಿಳಿಸುವಂತಹ ಶಾಸನವಾಗಿದೆ.[72] ಅದೇ ದೇವಾಲಯದ ಮಂಟಪಕ್ಕೆ ಉತ್ತರ ಇರುವ ಶಾಸನವು ಕ್ರಿ.ಶ.18ನೇ ಶತಮಾನಕ್ಕೆ ಸೇರಿದೆ. ಇದು ಬಸವನ ಧರ್ಮಕ್ಕೆ ಸೇರಿದ ವಿಚಾರವನ್ನು ತಿಳಿಸುತ್ತದೆ.[73]

ಶಿವನಪುರದಲ್ಲಿ ಶಿವಾಲಯ, ಮಾದೇಶ್ವರ, ಮಾರಮ್ಮ ದೇವಾಲಯಗಳಿವೆ. ಶಿವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಶುಕನಾಸಿ, ನವರಂಗ, ಮುಖಮಂಟಪವನ್ನು ಹೊಂದಿದೆ. ಮೂಲಗರ್ಭಗುಡಿಯಲ್ಲಿ ಶಿವಲಿಂಗ ಇದೆ. ಶುಕನಾಸದಲ್ಲಿ ನಂದಿಶಿಲ್ಪ, ಅಲ್ಲದೆ ಸಿದ್ಧಪ್ಪಾಜಿ ಶಿಲ್ಪವು ಸಹ ಇದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಈ ನಾಲ್ಕು ಕಂಬಗಳಲ್ಲಿಯೂ ಏಳುತಲೆ ಸರ್ಪಗಳಿರುವ ಉಬ್ಬುಶಿಲ್ಪದ ಕೆತ್ತನೆ ಇದೆ. ಮುಖಮಂಟಪದಲ್ಲಿ ಎರಡು ಕಂಬಗಳಿವೆ. ಇವುಗಳು ವಿಜಯನಗರ ಅರಸರ ವಾಸ್ತುಶೈಲಿಯನ್ನು ಹೊಂದಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ವಿಮಾನ ಇದೆ.

ಮಾದೇಶ್ವರ ದೇವಾಲಯ ಶಿವಪುರದಲ್ಲಿ ದಕ್ಷಿಣಾಭಿಮುಖವಾಗಿ ಒಂದು ಚಿಕ್ಕದಾದ ಮಾದೇಶ್ವರ ದೇವಾಲಯ ಇದೆ. ಮೂಲ ಗರ್ಭಗುಡಿಯಲ್ಲಿ ಮಾದೇಶ್ವರನ ಹೆಸರಿನ ಶಿವಲಿಂಗ ಇದೆ. ಈ ಗ್ರಾಮದಲ್ಲಿರುವ ಮಾರಮ್ಮನ ದೇವಾಲಯ ಪೂರ್ವಾಭಿಮುಖವಾಗಿದೆ. ಈ ಗ್ರಾಮದ

ಹೊರಭಾಗದ ರಸ್ತೆಯಲ್ಲಿ ಒಂದು ತಮಿಳು ಲಿಪಿ ಇರುವ ಶಾಸನವನ್ನು ಗುರುತಿಸಲಾಗಿದೆ. ಇದರ ಲಿಪಿಯೂ ತಮಿಳು ಅಕ್ಷರಗಳಿಂದ ಬರೆಯಲ್ಪಟ್ಟಿವೆ. (ಚಿತ್ರಸಂಖ್ಯೆ-55)

## ಮಲೈಮಹದೇಶ್ವರ ದೇವಾಲಯ – ಕೋಡಹಳ್ಳಿ

ಕೋಡಹಳ್ಳಿಯಲ್ಲಿ ಪೂರ್ವಾಭಿಮುಖವಾಗಿ ಮಲೈಮಹದೇಶ್ವರ ದೇವಾಲಯ ಇದೆ. ದೇವಾಲಯವು ಗರ್ಭಗುಡಿ, ಶುಕನಾಸಿ, ನವರಂಗವನ್ನು ಹೊಂದಿದೆ. ಗುಡಿಯಲ್ಲಿ ಮಹದೇಶ್ವರ ಶಿವಲಿಂಗ ಇದೆ. ನವರಂಗದಲ್ಲಿ ಇತ್ತೀಚಿನ ಕಾಲದ ನಾಲ್ಕು ಕಂಬಗಳಿವೆ. ದ್ವಾರದ ಇಕ್ಕೆಲಗಳಲ್ಲಿ ಎರಡು ಕಂಬಗಳಿವೆ. ಇವು ಮೈಸೂರು ಒಡೆಯರ್ ಕಾಲಕ್ಕೆ ಸೇರಿಸಬಹುದಾದ ಕಂಬಗಳ ಮಾದರಿಯಲ್ಲಿವೆ. ದೇವಾಲಯದ ಗರ್ಭಗುಡಿಯ ಮೇಲೆ ವಿಮಾನ ಇದೆ. ಶುಕನಾಸಿಯ ಅಂಕಣದ ಭಾಗದ ಮೇಲ್ಭಾಗದಲ್ಲಿ ಎರಡು ಕೋಷ್ಠ ಗುಡಿಗಳಿವೆ. ದೇವಾಲಯದ ಮುಂದೆ ನಾಲ್ಕು ಕಂಬಗಳಿರುವ ಒಂದು ನಂದಿ ಮಂಟಪ ಇದೆ. ಈ ದೇವಾಲಯದಲ್ಲಿ ಅಮವಾಸ್ಯೆ, ಹುಣ್ಣಿಮೆಯಲ್ಲಿ ವಿಶೇಷ ಪೂಜೆ ಕಾರ್ಯಕ್ರಮಗಳು ಜರುಗುತ್ತವೆ. ಅಂದಿನ ಕಾಲದ ಪ್ರಾಚೀನ ಸಂಸ್ಕೃತಿ ಪರಂಪರೆ ಪ್ರಸ್ತುತ ದಿನಗಳಲ್ಲಿ ನಡೆದುಕೊಂಡು ಹೋಗುತ್ತಿದೆ. ಹಬ್ಬ ಹರಿದಿನಗಳಲ್ಲಿ ಇಲ್ಲಿ ಅನೇಕ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. (ಚಿತ್ರಸಂಖ್ಯೆ-56)

## ರಾಮಲಿಂಗೇಶ್ವರ ದೇವಾಲಯ - ಹೊನ್ನೇಗೌಡನಹಳ್ಳಿ

ಹೊನ್ನೇಗೌಡನಹಳ್ಳಿಯಲ್ಲಿರುವ ರಾಮಲಿಂಗೇಶ್ವರ ದೇವಾಲಯ ಪೂರ್ವಾಭಿಮುಖವಾಗಿದ್ದು, ಮೂಲಗರ್ಭಗುಡಿಯಲ್ಲಿ ಶಿವಲಿಂಗವನ್ನು, ಶುಕನಾಸಿ ಭಾಗದಲ್ಲಿ ನಂದಿಶಿಲ್ಪವನ್ನು ಅಲ್ಲದೆ ಒಂದು ಕಾಲಭೈರವ ಶಿಲ್ಪ ಇರುವುದನ್ನು ಕಾಣಬಹುದಾಗಿದೆ. ಮೂಲಗರ್ಭಗುಡಿಯಲ್ಲಿರುವ ಶಿವಲಿಂಗವೂ ಅತ್ಯಂತ ಪ್ರಾಚೀನವಾಗಿದೆ. ಇದನ್ನು ಸುಮಾರು ಕ್ರಿ.ಶ.10ನೇ ಸತಮಾನಕ್ಕೆ ಸೇರಿಸಬಹುದಾಗಿದೆ. ಇಲ್ಲಿ ಸುಮಾರು ಏಳು ನಾಗದೇವತೆಯ ಶಿಲ್ಪಗಳಿವೆ. ಈ ಹಿನ್ನೆಲೆಯಿಂದ ನಾಗಾರಾಧನೆಯೂ ಕೂಡ ಈ ಗ್ರಾಮದಲ್ಲಿ ನಡೆಯುತ್ತದೆ ಎಂಬುದು ತಿಳಿದುಬಂದಿದೆ. (ಚಿತ್ರಸಂಖ್ಯೆ-57)

## ಕುಂಬೇಶ್ವರ ದೇವಾಲಯ – ಗೋಪಾಲಪುರ

ಗೋಪಾಲಪುರ ಕುಂಬೇಶ್ವರ ದೇವಾಲಯದಲ್ಲಿ ಒಂದು ಶಿವಲಿಂಗವಿದ್ದು, ಈ ದೇವಾಲಯ ಸಂಪೂರ್ಣವಾಗಿ ಜೀರ್ಣೋದ್ಧಾರವಾಗಿದೆ. ಪ್ರಸ್ತುತ ಇದು ಒಂದು ಸಾಮಾನ್ಯ ಮನೆಯ ಮಾದರಿಯಲ್ಲಿದೆ. ಗೋಪಾಲಪುರದಲ್ಲಿ ನಾಲ್ಕು ಶಿಲಾಶಾಸನಗಳಿವೆ. ಗ್ರಾಮದ

ಹೊಲವೊಂದರಲ್ಲಿ ಬಸವೇಶ್ವರ ದೇವಾಲಯದಲ್ಲಿರುವ ಶಾಸನದ ಪ್ರಕಾರ ಕ್ರಿ.ಶ.1513ರಲ್ಲಿ ಬರೆಸಲಾಗಿದೆ. ಇದು ಕೃಷ್ಣದೇವರಾಯನ ಕಾಲಕ್ಕೆ ಪ್ರಧಾನಿ ತಿಮ್ಮರಸನ ಬಗ್ಗೆ ತಿಳಿಸುತ್ತದೆ.[74] ಮತ್ತೊಂದು ಶಾಸನವು ಕ್ರಿ.ಶ.1537 ರಲ್ಲಿ ರಚಿಸಲಾಗಿದ್ದು, ಇದು ಅಚ್ಯುತರಾಯರ ಕಾಲಕ್ಕೆ ಸೇರಿದ ಶಾಸನವಾಗಿದೆ. ತೆರಕಣಾಂಬಿಯ ಸೀಮೆಯ ಕುಣಿಗಹಳ್ಳಿಯ ಸ್ಥಳದ ಯಿಂಗಳವಾಡಿಯ ಗ್ರಾಮವನ್ನು ಗೋವರ್ಧನಗಿರಿ, ಗೋಪಿನಾಥ ದೇವರ ಅಂಗಭೋಗ, ರಂಗಭೋಗಕ್ಕೆ ಸಮಸ್ತ ಪಡಿಯನ್ನು ನೀಡಿರುವ ಕುರಿತು ತಿಳಿದುಬಂದಿದೆ.[75]

ಹೊಲವೊಂದರಲ್ಲಿ ಬಿದ್ದಿರುವ ತುಂಡುಕಲ್ಲು ಶಾಸನ ಪ್ರಕಾರ ಕ್ರಿ.ಶ.1380ರ ಕಾಲಕ್ಕೆ ಸೇರಿದೆ. ಇದು ಪಾಲ್ಗುಣೇಶ್ವರನಿಗೆ ಕೊಟ್ಟ ಕೊಡುಗೆಯನ್ನು ತಿಳಿಸುತ್ತದೆ.[76] ಇನ್ನೊಂದು ಹೊಲದಲ್ಲಿ ನಿಂತಿರುವ ವೀರಗಲ್ಲು ಶಾಸನವು ಕ್ರಿ.ಶ.1156ರ ಕಾಲಕ್ಕೆ ಸೇರಿದ್ದು, ಚೋಳರ ಕಾಲಕ್ಕೆ ಸೇರಿದ ಶಾಸನವಾಗಿದೆ. ಇದು ಸ್ಥಳೀಯ ಗಾವುಂಡರ ಬಗ್ಗೆ ತಿಳಿಸುತ್ತದೆ. ಈ ಎಲ್ಲಾ ಬೆಳವಣಿಗೆಯಿಂದ ಗೋಪಾಲಪುರ ಗ್ರಾಮವು ಒಂದು ಐತಿಹಾಸಿಕ ಇತಿಹಾಸವನ್ನು ಹೊಂದಿರುವ ಗ್ರಾಮವಾಗಿದೆ.

## ಬೇರಂಬಾಡಿ

ಬೇರಂಬಾಡಿ ಗ್ರಾಮದಲ್ಲಿ ಸುಮಾರು ಮೂರು ದೇವಾಲಯಗಳಿವೆ. ಗಣಪತಿ ಮಾರಮ್ಮ ಮತ್ತು ಸಿದ್ದಪ್ಪಾಜಿ ದೇವಾಲಯಗಳಾಗಿವೆ. ಅಲ್ಲದೆ 7 ಶಿಲಾಶಾಸನಗಳಿವೆ. ಆದಕಾರಣ ಇದೊಂದು ಪ್ರಮುಖವಾದ ನೆಲೆಯಾಗಿದೆ.

## ಚನ್ನಮಲ್ಲಿಪುರ ಶಿವಾಲಯ

ಚನ್ನಮಲ್ಲಿಪುರ ಮತ್ತು ಮದ್ದೂರು ಗ್ರಾಮಗಳ ಮಧ್ಯದಲ್ಲಿ ಒಂದು ಶಿವಾಲಯ ಇದೆ. ಈ ಶಿವಾಲಯವು ಪೂರ್ವಾಭಿಮುಖವಾಗಿದೆ. ಶಿವಾಲಯದಲ್ಲಿ ಒಂದು ಶಿವಲಿಂಗ, ಒಂದು ನಂದಿಶಿಲ್ಪ ಇದೆ.[77] ಆಷಾಡ ಶು 1 ಅಲು ದೇವಾಧಿದೇವ ದೇವೋತ್ತಮ ಕಲಿಯುಗ ವಿಷ ಪರಿಹಾರ ಕಪಿಲಾ ಕೌಂಡನ್ಯ ಸಂಗಮದಲ್ಲಿ ಪ್ರಸಂನರಾದ ಶ್ರೀ ನಂಜುಂಡೇಶ್ವರ ದೇವರಿಗೆ ಶ್ರೀಮನ್ ಮಹಾಮಂಡಲೇಶ್ವರಂ ಶ್ರೀ ವೀರಸೋವಂಣವೊಡೆಯರ ಕುಮಾರ ಚಿಕಂಣವೊಡೆಯರ ತೆರಕಣಾಂಬಿ ರಾಜ್ಯವನ್ನು ಆಳುತ್ತಾ ಕುಡುಗನಾಡು ಗಡಿಯ ಆಲತ್ತೂರು ಚತುಸ್ಸೀಮೆ ಅಷ್ಟಭೋಗ ತೇಜ ಸ್ವಾಮ್ಯ ಸರ್ವ್ವಪ್ರಾಪ್ತಿ ಸಮಸ್ತ ಬಳಿ ಸಹಿತವಾಗಿ . . . . ದಾನಧಾರಾಪೂರ್ವಕವಾಗಿ ಆ ಚಂದಾಕ್ಕರಸ್ತಾಯಿ ಆಗಿ ಸಮರ್ಪಿಸಿರದ ಸ್ವದತಂ ತರದತ್ತಂವಾಯೋ ಹರಾತ ವಸುಂಧರ. (ಚನ್ನಮಲ್ಲಿಪುರ ಶಾಸನ ಸಂಖ್ಯೆ–24) ಈ

ದೇವಾಲಯದಲ್ಲಿ ಸುಂದರವಾದ ಶಿವಲಿಂಗ ಮತ್ತು ನಂದಿಶಿಲ್ಪ ಮಾತ್ರ ಕಂಡುಬರುತ್ತದೆ. ಪ್ರಸ್ತುತದಲ್ಲಿ ತುಂಬಾ ದುಃಸ್ಥಿತಿಯಲ್ಲಿದೆ. ಮರಗಳು ಈ ದೇವಾಲಯದ ಮೇಲೆ ಬಿದ್ದು ದೇವಾಲಯದ ಕಟ್ಟಡ ನಾಶವಾಗಿದೆ. ಈ ಗ್ರಾಮಕ್ಕೆ ಸಂಬಂಧಪಟ್ಟ ಸಾರ್ವಜನಿಕರು ಈ ದೇವಾಲಯವನ್ನು ಮುಂದಿನ ಪೀಳಿಗೆಗೆ ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ. (ಚಿತ್ರಸಂಖ್ಯೆ-58)

## ಸೋಮೇಶ್ವರ ದೇವಾಲಯ – ಕಣ್ಣೇಗಾಲ

ಕಣ್ಣೇಗಾಲದಲ್ಲಿರುವ ಸೋಮೇಶ್ವರ ದೇವಾಲಯ ಈಗ ಹೊಸದಾಗಿ ಜೀರ್ಣೋದ್ಧಾರವಾಗುತ್ತಿದೆ. ಪ್ರಸ್ತುತ ಈಗ ಅಲ್ಲಿ ಶಿವಲಿಂಗ ಮತ್ತು ನಂದಿ ಶಿಲ್ಪಗಳಿವೆ. ಎರಡು ಸರ್ಪಕಲ್ಲುಗಳಿವೆ. ಒಂದು ಶಾಸನ ಕಲ್ಲು ಸಹ ಇದೆ. ಇದುವರೆವಿಗೂ ಸಹ ಈ ಶಾಸನವು ಪ್ರಕಟಣೆಯಾಗಿಲ್ಲ. ಹೊಸದಾಗಿ ಜೀರ್ಣೋದ್ಧಾರವಾಗುತ್ತಿರುವ ದೇವಾಲಯದ ಪಕ್ಕದಲ್ಲಿಯೇ ಒಂದು ಪ್ರಾಚೀನ ಕೊಳ ಇದೆ. ಸ್ಥಳೀಯರ ಪ್ರಕಾರ ಹಿಂದೆ ಏಳು ಕೊಳಗಳು ಇದ್ದವೆಂದು ಹೇಳಿಕೆಗಳಿವೆ. ಆದರೆ ಈಗ ಕೊಳಗಳು ಕಾಣಬರುವುದಿಲ್ಲ.[78] ಪ್ರಸ್ತುತದಲ್ಲಿ ಈ ದೇವಾಲಯವನ್ನು ಸಂಪೂರ್ಣ ಹೊಡೆದು ಪುನರ್ ನಿರ್ಮಾಣ ಮಾಡಲಾಗುತ್ತಿದೆ. (ಚಿತ್ರಸಂಖ್ಯೆ-59)

## ಗುಂಡ್ಲುಪೇಟೆಯ ರಾಮೇಶ್ವರ ದೇವಾಲಯ

ಗುಂಡ್ಲುಪೇಟೆಯು ತಾಲ್ಲೂಕಿನ ಮುಖ್ಯ ಕೇಂದ್ರವಾಗಿದೆ. ಮೈಸೂರು ಜಿಲ್ಲೆಯ ಕಾಲಕ್ಕೂ ಸಹ ತಾಲೂಕು ಕೇಂದ್ರವಾಗಿತ್ತು. ನಂತರ ಚಾಮರಾಜನಗರ ಜಿಲ್ಲಾ ಕೇಂದ್ರವಾದ ನಂತರವೂ ಸಹ ಅದೇ ಮಾದರಿಯಲ್ಲೇ ತಾಲೂಕು ಕೇಂದ್ರವಾಗಿಯೇ ಇದೆ. ಹಿರಿಯರ ಹೇಳಿಕೆ ಪ್ರಕಾರ ಗುಂಡ್ಲುಪೇಟೆ ಗುಂಡ್ಲು ನದಿ ಎಡೆದಂಡೆಯ ಮೇಲಿದೆ.[79] ಕ್ರಿ.ಶ.1372ರ ಸಮಯಕ್ಕೆ ಈ ಗುಂಡ್ಲುಪೇಟೆ ಪ್ರಸನ್ನವಿಜಯಪುರ ಎಂಬ ಹೆಸರನ್ನು ಪಡೆದಿತ್ತು. ಕ್ರಿ.ಶ.1751ರಲ್ಲಿ ಗುಂಡ್ಲುಪೇಟೆ ಎಂಬ ನಾಮಕರಣದಿಂದ ಬದಲಾಯಿತು. ಮಾದಪಟ್ಟಣದ ಶಾಸನದ ಆಧಾರದಿಂದ ಇದು ತಿಳಿದುಬರುತ್ತದೆ.

ಗುಂಡ್ಲುಪೇಟೆ ರಾಜಕೀಯ ಇತಿಹಾಸವನ್ನು ತೆರೆದು ನೋಡಿದರೆ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಉಮ್ಮತ್ತೂರು ಪಾಳೆಯಗಾರರು, ಮೈಸೂರು ಒಡೆಯರು, ಕಳಲೆ ಅರಸರು ಹಾಗೂ ಇನ್ನಿತರರು ಆಡಳಿತ ನಡೆಸಿರುವುದೂ ಸಹ ಕಂಡುಬರುತ್ತದೆ.[80] ಗುಂಡ್ಲುಪೇಟೆ ಅಧಿದೇವ ವಿಜಯನಾರಾಯಣ. ಅದು ಅಲ್ಲದೆ ಪೇಟೆ

ಬೀದಿಯಲ್ಲಿ ರಾಮಮಂದಿರ, ಶಾರದ ದೇವಾಲಯ, ರಾಮೇಶ್ವರ ದೇವಾಲಯ, ಗಣೇಶ ದೇವಾಲಯ, ನವಗ್ರಹ ದೇವಾಲಯ ಮತ್ತು ಆಂಜನೇಯ ದೇವಾಲಯಗಳಿವೆ. ಇದಲ್ಲದೆ ಕ್ರೈಸ್ತ ಧರ್ಮಕ್ಕೆ ಪೂರಕವಾಗಿ ಚರ್ಚ್, ಮುಸ್ಲಿಂ ಧರ್ಮಕ್ಕೆ ಪೂರಕವಾಗಿ ಮಸೀದಿಗಳೂ ಸಹ ಇವೆ. ಊರಿನ ಹೊರಗೆ ಅಂದರೆ ಪೂರ್ವದಿಕ್ಕಿಗೆ ಹಳೆಯ ಊರಿನ ಅವಶೇಷಗಳಿವೆ. ಅದು ಈಗ ಸ್ಮಶಾನವಾಗಿ ಪರಿಗಣಿಸಿದೆ. ಈ ನೆಲೆಯಲ್ಲಿ ಪಾಳುಬಿದ್ದಿರುವ ರಾಮೇಶ್ವರ ದೇವಾಲಯ, ಕಮಲದಲ್ಲಿ ಪರವಾಸು ದೇವಾಲಯ ಇನ್ನಿತರ ಚಿಕ್ಕ ಚಿಕ್ಕ ದೇವಾಲಯಗಳಿವೆ.

ಆದರೆ ಇಲ್ಲಿ ಗುಂಡ್ಲುಪೇಟೆ ರಾಮೇಶ್ವರ ದೇವಾಲಯದ ಬಗ್ಗೆ ವಾಸ್ತುಶೈಲಿಯ ರಚನೆಯ ನೋಟವನ್ನು ಮಾತ್ರ ಚರ್ಚಿಸಲಾಗುತ್ತದೆ. ರಾಮೇಶ್ವರ ದೇವಾಲಯವು ಗುಂಡ್ಲುಪೇಟೆಯಲ್ಲಿ ಪೂರ್ವದಿಕ್ಕಿಗೆ ಸಮಾಧಿಯ ಹತ್ತಿರ ಈ ದೇವಾಲಯವಿದೆ. ಗುಂಡ್ಲುಪೇಟೆ ತಾಲೂಕಿನ ಶಾಸನ ಸಂಖ್ಯೆ-9ರಲ್ಲಿ ತೆರಕಣಾಂಬಿಯ ಸ್ಥಳದ ಮಹಮತ್ತಾರಿಂದ ರಾಮೇಶ್ವರ ದೇವಾಲಯಕ್ಕೆ ದೀಪ ಬೆಳಗಿಸುವ ಸಲುವಾಗಿ ಭೂಮಿಯನ್ನು ದಾನ ನೀಡಿರುವ ವಿಚಾರ ತಿಳಿದುಬರುತ್ತದೆ.

ಶಾಸನ ಸಂಖ್ಯೆ 10ರಲ್ಲಿ ಚಿಕ್ಕನಂಜಯ್ಯ ಅರಸರು ರಾಮದೇವರಿಗೆ ದೀಪ ಬೆಳಗಿಸುವುದಕ್ಕಾಗಿ ಭೂಮಿಯನ್ನು ದಾನ ನೀಡಿರುವುದರ ಬಗ್ಗೆ ತಿಳಿದುಬರುತ್ತದೆ. 11ನೇ ಶಾಸನವು ವಿದ್ಯಾರಾಸಿ ದಿಗಂಬರ ವಂಶಾವಳಿ ಪುರೋಹಿತತ್ವದ ಬಗ್ಗೆ ತಿಳಿಸುತ್ತದೆ. 12ನೇ ಶಾಸನವು ಅಗ್ರಹಾರ ಪ್ರಸನ್ನ ವಿಜಯಪುರ ಎಲ್ಲಾ ಮಹಾಜನರಿಂದ 30 ಗದ್ಯಾಣವನ್ನು (ಹಣವನ್ನು) ರಾಮನಾಥ ದೇವರಿಗೆ ಪಾತ್ರ ಲೋಹದ ಸೇವೆಗಾಗಿ, ನರ್ತನ ಮಾಡುವವರಿಗಾಗಿ ದಾನ ನೀಡಿರುವುದರ ಬಗ್ಗೆ ತಿಳಿಸುತ್ತದೆ. ಶಾಸನ ಸಂಖ್ಯೆ 13ರಲ್ಲಿ ರಾಮೇಶ್ವರ ದೇವಸ್ಥಾನಕ್ಕೆ ಅಲ್ಲಮನು ನೀಡಿದ ಕೊಡುಗೆಯ ಬಗ್ಗೆ ವಿಚಾರವಿದೆ ಮತ್ತು ಬುಕ್ಕ ಚಕ್ರೇಶ್ವರನ ಮಗನ ಬಗ್ಗೆ ತಿಳಿದುಬರುತ್ತದೆ. 14ನೇ ಶಾಸನವು ಚಂಗವ್ವೆ ನಾಗಣ್ಣ ದೇವನ ಹೆಸರನ್ನು ತಿಳಿಸುತ್ತದೆ ಮತ್ತು ದ್ವಾರವನ್ನು ಈತನೇ ಕಟ್ಟಿಸಿರಬಹುದೆಂದು ಹೇಳಲಾಗಿದೆ. 15ನೇ ಶಾಸನವು 14ನೇ ಶತಮಾನಕ್ಕೆ ಸೇರಿದ್ದು. ಶಾಸನ ಸಂಖ್ಯೆ 16ರಲ್ಲಿ ಮಹಾಜನರು ರಾಮನಾಥದೇವರಿಗೆ ಪ್ರತಿನಿತ್ಯ ಪೂಜಾ ಪುನಸ್ಕಾರವನ್ನು ಮಾಡುವುದಕ್ಕಾಗಿ ವ್ಯವಸ್ಥೆ ಮಾಡಿಸಿರುವುದರಿಂದ ಅದರ ವಿಚಾರವನ್ನು ವ್ಯಕ್ತಪಡಿಸುತ್ತದೆ. ಶಾಸನ ಸಂಖ್ಯೆ 17ರಲ್ಲಿ ನಾಗದ್ವೆಯ ಮಗನಾದ ಹಿರಿಯ ರಾಮನ್ನರು ವಿಜಯಪುರದ ರಾಮನಾಥ ದೇವರಿಗೆ ಕೇತವ್ವೆ ಎಂಬ ನೃತ್ಯಗಾರ್ತಿಯ ಸೇವೆಯನ್ನು ನೀಡಿರುವ ವಿಚಾರ ತಿಳಿದುಬರುತ್ತದೆ.

ಗುಂಡ್ಲುಪೇಟೆ ಪಟ್ಟಣದ ದೇವಾಲಯಗಳಲ್ಲಿ ರಾಮೇಶ್ವರ ದೇವಾಲಯ ಅತ್ಯಂತ ಪ್ರಾಚೀನವಾದ ದೇವಾಲಯವಾಗಿದೆ. ಈ ದೇವಾಲಯವನ್ನು ಕ್ರಿ.ಶ.1367ರಲ್ಲಿ 2ನೆಯ

ಕುಮಾರಕಂಪಣ್ಣ ಕಟ್ಟಿಸಿದಂತೆ ತಿಳಿದುಬರುತ್ತದೆ. ಕ್ರಿ.ಶ.1372ರಲ್ಲಿ ಕೇತವ್ವೆ ನೃತ್ಯಗಾತಿಯನ್ನು ಈ ರಾಮೇಶ್ವರ ದೇವಾಲಯದ ನೃತ್ಯ ಸೇವೆಗೆ ಬಿಟ್ಟಿರುವುದಾಗಿ ತಿಳಿದುಬಂದಿದೆ. ಈಕೆಯ ಜೀವನಾಂಶಕ್ಕಾಗಿ ತೆರಕಣಾಂಬಿಯ ವೀರಪಾಂಚಾಲರು ದತ್ತಿಯನ್ನು ಬಿಟ್ಟಿದ್ದಾರೆ. ಕ್ರಿ.ಶ.1374ರಲ್ಲಿ ಚಿಕ್ಕಕಂಪಣ್ಣ ಒಡೆಯ ಮರಣ ಹೊಂದಿದಾಗ ಆತನ ಮಗ ನಂಜಣ್ಣೊಡೆಯ ಮಡಹಳ್ಳಿಯನ್ನು ರಾಮನಾಥಪುರ ಎಂದು ಪುನರ್ ನಾಮಕರಣ ಮಾಡಿ ವಿಜಯಪುರದ ರಾಮನಾಥ ದೇವರಿಗೆ ಧಾರೆಯೆರೆದಿದ್ದಾನೆಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಗುಂಡ್ಲುಪೇಟೆ ಶಾಸನ ಸಂಖ್ಯೆ 16ರ ಗಮನಿಸಿದರೆ, ಗದ್ಯಾಣಂ ನೂರಅವತ್ತು ಇಹೊಂಗಿನ ಬಡ್ಡಿಗೆ ಪ್ರತಿದಿವಸದಲ್ಲೆಲ್ಲಾ ಪೊಂ. . . . . ನಲ್ಲೆ ರುದ್ರಾಭಿಷೇಕ ಮೂದ ಎಳನೀರ ಗಂದಾಕ್ಷತೆ ಪತ್ರೆ ಪುಷ್ಪ ಧೂಪ ಧೂಪ ಅಹೋರಾತ್ರಿಗಳತೆ ನಡೆಸುವ ನಂದಾದೀವಿಗೆ ಏಳರ ನೈವೇದ್ಯಕ್ಕೆ ಅಕ್ಕಿ, ಅಯ್ಯಾ ಮಾನೆ ತುಪ್ಪ ಸೊಲಗೆ ಉಪ್ಪು ಮೆಣಸು ಸಹಿತ ಎರಡು ಮೇಲೊಗರ ನೈವೇದ್ಯ ಕಾಲದಲ್ಲಿ ಆಯ್ದುಡಕೆ ಏಳೆಲೆಂದಲಿ ವೀಳೆಂದವೊಂದು ನೀರಾ. . . . . . .ಕ್ಕೆ ವೊಂದೊಂದು ಹೂಂನ ಕೊಟ್ಟು ಉತ್ತವವನು ಮಾಡಿಸುವೆವು ಇಂತಿವೆಲ್ಲವನು ಅಚಂದ್ರಾರ್ಕ್ಷಾರ ಸ್ಥಾಯಿಯಾಗಿ ಎಂಮಧವು ಸಾಕ್ಷಿಯಾಗಿ ನಡೆಸುವೆವು.

ರಾಮೇಶ್ವರ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗುಡಿ, ಸುಕನಾಸಿ ಮತ್ತು ನವರಂಗವನ್ನು ಹೊಂದಿದೆ. ದೇವಾಲಯವು ಪೂರ್ವಾಭಿಮುಖವಾಗಿದ್ದು, ದಕ್ಷಿಣ ದಿಕ್ಕಿಗೂ ಕೂಡ ದ್ವಾರವಿದೆ. ಪಶ್ಚಿಮ ದಿಕ್ಕಿಗೆ ಕೈಸಾಲೆಗಳಿವೆ. ಮೂಲಗರ್ಭಗೃಹದಲ್ಲಿ ಪ್ರಸ್ತುತದಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ. ಪಾಣಿಪೀಠ ಮಾತ್ರ ಕಾಣಬಹುದಾಗಿದೆ. ಈ ದೇವಾಲಯದ ಪ್ರಾಚೀನತೆಯನ್ನು ಚೋಳರ ಕಾಲಕ್ಕೆ ಹೇಳಬಹುದಾದರೂ ಪ್ರಸ್ತುತ ದೇವಾಲಯದ ವಾಸ್ತು ರಚನೆಯನ್ನು ಗಮನಿಸಿದರೆ ವಿಜಯನಗರ ಹಾಗೂ ಮೈಸೂರು ಒಡೆಯರ ಕಾಲಕ್ಕೆ ಸೇರಿಸಬಹುದಾಗಿದೆ. ಕಾರಣವೇನೆಂದರೆ ವಿಜಯನಗರ ಅರಸರ ಕಾಲಕ್ಕೂ ಹಾಗೂ ಮೈಸೂರು ಒಡೆಯರ ಕಾಲಕ್ಕೂ ಅನೇಕ ಸೇರ್ಪಡೆಗಳಾಗಿವೆ ಎಂಬುದನ್ನು ಸಹ ಗುರುತಿಸಬಹುದಾಗಿದೆ.

ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳು ಚತುರಸ್ರವಾಗಿದ್ದು, ಮೇಲೆ ಮೇಲೆ ಹೋಗುತ್ತಾ ಎಂಟು, ಹದಿನಾರು ಮತ್ತು ಮೂವತ್ತೇರಡು ಪಟ್ಟಸ (ಕೋನಗಳು)ಗಳನ್ನು ಹೊಂದಿದೆ. ಕೋನಾಕೃತಿಯಲ್ಲಿ ರಚಿಸಲಾಗಿದೆ. ನವರಂಗಕ್ಕೆ ಹೊಂದಿಕೊಂಡಂತೆ ಅರ್ಧಮಂಟಪ ಇದೆ. ಈ ಅರ್ಧಮಂಟಪವೂ ಪೂರ್ವ ಪಶ್ಚಿಮಾಭಿಮುಖವಾಗಿ ಹದಿನಾಲ್ಕು ಮೀಟರ ಮತ್ತು ಅರವತ್ತು ಸೆಂಟಿಮೀಟರ್ ಅಗಲವನ್ನು ಹೊಂದಿದೆ. ಮುಂದಿನ ಅಂಕಣ ಮುಖಮಂಟಪ ಈ ಮುಖಮಂಟಪದಲ್ಲಿ ನಾಲ್ಕು ಕಂಬಗಳಿದ್ದು, ಮುಖಮಂಟಪಕ್ಕೆ ಸೇರಿದಂತೆ ಒಂದು

ನಂದಿಕಂಬವಿದೆ. ಮುಖಮಂಟಪಕ್ಕೆ ಉತ್ತರ ದಕ್ಷಿಣ ದಿಕ್ಕಿಗೆ ಪ್ರವೇಶದ್ವಾರದ ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಆನೆಯ ಮುಖವಿರುವ ಚಪ್ಪಡಿಗಳನ್ನು ಸೇರಿಸಿ ನಿಲ್ಲಿಸಲಾಗಿದೆ. ಈ ಮುಖಮಂಟಪವು ಪೂರ್ವ ಪಶ್ಚಿಮಾಭಿಮುಖವಾಗಿ 6 ಮೀಟರ್ ಉದ್ದ, ಉತ್ತರ ದಕ್ಷಿಣಾಭಿಮುಖವಾಗಿ 3 ಮೀಟರ್ ಅಗಲವನ್ನು ಹೊಂದಿದೆ. ಕಂಬಗಳಲ್ಲಿ ನೃತ್ಯ ಮಾಡುತ್ತಿರುವ ಭಂಗಿಯಲ್ಲಿರುವ ಮಹಿಳೆಯ ಚಿತ್ರಗಳನ್ನು ಕಂಬದಲ್ಲಿ ನಾವು ಕಾಣಬಹುದಾಗಿದೆ. (ಚಿತ್ರಸಂಖ್ಯೆ–60) ಹಿಂದೆ ಈ ದೇವಾಲಯದಲ್ಲಿ ನೃತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿತ್ತು ಎಂಬುದು ಚಿತ್ರದ ಮೂಲಕ ತಿಳಿಯಬಹುದಾಗಿದೆ.

ಈ ದೇವಾಲಯದಲ್ಲಿ ಅಧಿಷ್ಠಾನ, ಜಗತಿ, ಪ್ರತಿಹಾರ ಇವುಗಳು ಇವೆ. ಆದರೆ ತಿಪಟಕುಮುಡ ಕಾಣಬರುವುದಿಲ್ಲ. ಬಿತ್ತಿಯ ಭಾಗವು ಸರಳವಾಗಿದ್ದು, ಚಪ್ಪಟೆಯಾದ ಚಪ್ಪಡಿಗಳಿಂದ ಜೋಡಿಸಿದ್ದು, ಇಲ್ಲಿ ಯಾವುದೇ ರೀತಿಯ ಶಿಲ್ಪಗಳಾಗಲಿ, ಅರೆಗಂಬಗಳಾಗಲಿ, ಕಾಣಬರುವುದಿಲ್ಲ. ಬಿತ್ತಿಯ ಮೇಲ್ಭಾಗದಲ್ಲಿ ಕಪೋತವು ಸಹ ಸರಳವಾಗಿದ್ದು ಇಳಿಜಾರಾಗಿದೆ. ಇದರ ಮೇಲೆ ಇಟ್ಟಿಗೆ ಗಾರೆಗಳಿಂದ ಮಾಡಿದ ಕೈಪಿಡಿ ಗೋಡೆಯನ್ನು ಕಟ್ಟಲಾಗಿದೆ. ದೇವಾಲಯದ ಮುಂದೆ ಒಂದು ಬಲಿಪೀಠವಿದೆ. ಈ ದೇವಾಲಯದ ಉತ್ತರದಲ್ಲಿ ಮತ್ತೊಂದು ದೇವಾಲಯವಿದೆ. ಅಲ್ಲಿ ಯಾವುದೇ ಶಿಲ್ಪಗಳು ಪ್ರಸ್ತುತದಲ್ಲಿ ಕಂಡುಬರುವುದಿಲ್ಲ.

ಗುಂಡ್ಲುಪೇಟೆಯ ಇತಿಹಾಸ ಮಹತ್ವವಾದ್ದುದು. ಮೇಲೆ ತಿಳಿಸಿರುವಂತೆ ಅನೇಕ ರಾಜಸಂತತಿಯವರು ಆಳ್ವಿಕೆ ನಡೆಸಿರುವುದು ಕಾಣಬುರುತ್ತದೆ. ಮೈಸೂರು ಒಡೆಯರ ಕಾಲಕ್ಕೆ ಗುಂಡ್ಲುಪೇಟೆಯಲ್ಲಿ ದೇವಾಲಯವನ್ನು ನಿರ್ಮಿಸಿ ಅಗ್ರಹಾರವನ್ನು ರಚಿಸಿ ಬ್ರಾಹ್ಮಣರಿಗೆ ದಾನಕೊಟ್ಟಿರುವುದಾಗಿ ತಿಳಿದುಬರುತ್ತದೆ. ಗುಂಡ್ಲುಪೇಟೆ ಪಟ್ಟಣದ ಹೊರವಲಯದ ಸಮಾಧಿ ಹತ್ತಿರ ಏಳರಿಂದ ಎಂಟು ದೇವಾಲಯಗಳು ಕಂಡುಬರುತ್ತದೆ. ಆದ್ದರಿಂದ ಗುಂಡ್ಲುಪೇಟೆ ಪಟ್ಟಣದಲ್ಲಿ ಹಿಂದೆ ಆಳ್ವಿಕೆ ನಡೆಸಿದ ರಾಜರುಗಳು ಧಾರ್ಮಿಕ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿರುವುದು ಕಾಣಬಹುದಾಗಿದೆ. ಪ್ರಸ್ತುತ ರಾಮೇಶ್ವರ ದೇವಾಲಯ ಪಾಳುಬಿದ್ದಿದೆ. ಈ ದೇವಾಲಯ 00 ರಿಂದ 700 ವರ್ಷಗಳ ಹಿಂದಿನ ಇತಿಹಾಸ ಹೊಂದಿದೆ. ಸ್ಥಳೀಯ ಈ ದೇವಾಲಯಗಳು ಮುಂದಿನ ಪೀಳಿಗೆ ಉಳಿಸಿಕೊಳ್ಳಬೇಕಾಗಿದೆ. (ಚಿತ್ರಸಂಖ್ಯೆ–61)[81]

**ದೊಡ್ಡತುಪ್ಪೂರು – ಶಿವದೇವಾಲಯ**

ಗುಂಡ್ಲುಪೇಟೆ ತಾಲ್ಲೂಕಿನ ದೊಡ್ಡತುಪ್ಪೂರು ಗ್ರಾಮದಲ್ಲಿ 8 ಮತ್ತು 9ನೇ ಶತಮಾನಕ್ಕೆ ಸೇರಿದ ಶಿವದೇವಾಲಯವಿದ್ದು, ಈ ದೇವಾಲಯವು ಪ್ರಸ್ತುತ ಸಂಪೂರ್ಣವಾಗಿ ದುಃಸ್ಥಿತಿಯಾಗಿದೆ. ಈ ದೇವಾಲಯವನ್ನು ಗಮನಿಸಿದರೆ ಪ್ರಾಯಶಃ, ಗಂಗರ ಕಾಲಕ್ಕೆ ಸೇರಿದ ದೇವಾಲಯವೆಂದು ಪರಿಗಣಿಸಬಹುದಾಗಿದೆ. ಏಕೆಂದರೆ ಗಂಗರ ಕಾಲದ ಶಿವದೇವಾಲಯಗಳಲ್ಲಿ ಚಿಕ್ಕ ಗರ್ಭಗುಡಿ, ಅಷ್ಟೇ ಸಮನಾದ ನವರಂಗವನ್ನು ಹೊಂದಿರುವುದು ಸಾಕಷ್ಟು ಗ್ರಾಮಗಳಲ್ಲಿ ಕಂಡುಬರುವುದನ್ನು ಗುರುತಿಸಲಾಗಿದೆ. ಅಲ್ಲದೆ ಖ್ಯಾತ ಸಂಶೋಧಕರಾದ ಪ್ರೊ.ದೇವರಕೊಂಡಾರೆಡ್ಡಿಯವರು ಕರ್ನಾಟಕದಲ್ಲಿ ಗಂಗರ ದೇವಾಲಯವನ್ನು ಕುರಿತು ಸಂಶೋಧನೆಯನ್ನು ನಡೆಸಿದ್ದಾರೆ. ಅಲ್ಲದೆ ಗುಂಡ್ಲುಪೇಟೆ ತಾಲ್ಲೂಕಿನ ತೊಂಡವಾಡಿ, ಸಂಪಿಗೆಪುರ, ಹಳ್ಳದಮಾದಹಳ್ಳಿ, ಹಿರಿಕಾಟಿ, ಚಿಕ್ಕಾಟಿ ಇನ್ನೂ ಮೊದಲಾದ ಗ್ರಾಮಗಳಲ್ಲಿ ಈ ಮಾದರಿಯ ದೇವಾಲಯಗಳನ್ನು ಗಂಗರ ಕಾಲಕ್ಕೆ ಹೋಲಿಸಿದ್ದಾರೆ. ಪ್ರಸ್ತುತ ನನ್ನ ಸಂಶೋಧನಾ ಕಾರ್ಯದಲ್ಲೂ ನಾನು ಸಹಿತ ಗುಂಡ್ಲುಪೇಟೆ ತಾಲ್ಲೂಕಿನ ಸಾಕಷ್ಟು ಗ್ರಾಮಗಳಲ್ಲಿ ಈ ರೀತಿಯ ದುಃಸ್ಥಿತಿಯಲ್ಲಿರುವ ದೇವಾಲಯಗಳನ್ನು ಗಮನಿಸಿದ್ದೇನೆ.

ಈ ದೇವಾಲಯದಲ್ಲಿ ಕಂಡುಬರುವ ಶಿವಲಿಂಗವನ್ನು ಗಮನಿಸಿದರೆ ಇದು 8 ಮತ್ತು 9ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಏಕೆಂದರೆ ತೊಂಡಾವಾಡಿ, ಚಿಕ್ಕಾಟಿ, ಹಳ್ಳದ ಮಾದಹಳ್ಳಿ, ಸಂಪಿಗೆಪುರ ಇನ್ನೂ ಮೊದಲಾದ ಗ್ರಾಮಗಳಲ್ಲಿ ಈ ಮಾದರಿ ಶಿವಲಿಂಗಗಳನ್ನು ಗುರುತಿಸಲಾಗಿದೆ. ಈ ಹಿನ್ನೆಲೆಯಿಂದ ಇದೊಂದು ಅತ್ಯಂತ ಪ್ರಾಚೀನತೆ ಹಾಗೂ ಪ್ರಾಮುಖ್ಯತೆ ಹೊಂದಿರುವ ಶಿವ ದೇವಾಲಯವೆಂದು ಪರಿಗಣಿಸಬಹುದಾಗಿದೆ. ಈ ಗ್ರಾಮಕ್ಕೆ ಸಂಬಂಧಪಟ್ಟಂತೆ ಎರಡು ಶಾಸನಗಳಿದ್ದು ಒಂದು ಶಾಸನವು 13ನೇ ಶತಮಾನಕ್ಕೆ ಸೇರಿದ್ದು, ಮತ್ತೊಂದು ಶಾಸನವು 14ನೇ ಶತಮಾನಕ್ಕೆ ಸೇರಿದೆ. ಆದರೆ ದೇವಾಲಯಕ್ಕೆ ಸಂಬಂಧಪಟ್ಟಂತೆ ಶಾಸನಗಳಲ್ಲಿ ಮಾಹಿತಿ ಕಂಡುಬರುವುದಿಲ್ಲ. ಆದರೆ ಕ್ರಿ.ಶ.1227ನೇ ಶಾಸನದ ಪ್ರಕಾರ ಚೋಳ ರಾಮನಾಥಂಗೆ ಎಂಬ ಉಲ್ಲೇಖಿತಗೊಂಡಿರುವುದರಿಂದ ಚೋಳ ನಂತರ ಕಾಲದ ಹೊಯ್ಸಳ ಅರಸ ರಾಮನಾಥನ ಬಗ್ಗೆ ಮಾಹಿತಿ ಇರುವುದರಿಂದ ಹಾಗೂ ಹೊಯ್ಸಳ ಗಾಣದ ಬಗ್ಗೆ ತಿಳಿದುಬರುವುದರಿಂದ ಹೊಯ್ಸಳರು ದೇವಾಲಯಕ್ಕೆ ಎಣ್ಣೆಯನ್ನು ಆಡಿಸಿ ದೇವರ ನೈವೇದ್ಯಕ್ಕೆ ಅರ್ಪಿಸುವುದರ ಬಗ್ಗೆ ತಿಳಿದುಬರುತ್ತದೆ. ಈ ಎಲ್ಲಾ ಬೆಳವಣಿಗೆಯಿಂದ ಪ್ರಾಚೀನ ಕಾಲದ

ಶಿವಾಲಯಕ್ಕೆ ಹೊಯ್ಸಳರು ಸಹ ಸೇವೆಯನ್ನುಗೈದಿರುವುದು ಕ್ರಿ.ಶ.13ನೇ ಶತಮಾನದ ಶಾಸನದಿಂದ ವ್ಯಕ್ತವಾಗುತ್ತದೆ.

ಈ ಶಿವದೇವಾಲಯವು ಅಧಿಷ್ಠಾನರಹಿತ ದೇವಾಲಯವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗುಡಿ, ಸುಕನಾಸಿ, ನವರಂಗವನ್ನು ಹೊಂದಿದ್ದು, ಎಲ್ಲವೂ ದುಃಸ್ಥಿತಿಯಲ್ಲಿದೆ. ಮೂಲಗರ್ಭಗುಡಿಯಲ್ಲಿ ಅತ್ಯಂತ ಪ್ರಾಚಿನ ಕಾಲಕ್ಕೆ ಹೋಲಿಸಬಹುದಾದ ಎರಡು ಶಿವಲಿಂಗಗಳಿವೆ. ಸುಕನಾಸಿಯಲ್ಲಿ ಅಂಕಣದಲ್ಲಿ ಸ್ಪಷ್ಟತೆ ಇಲ್ಲದ ಗಣಪತಿ ಶಿಲ್ಪವನ್ನು ಇರಿಸಲಾಗಿದೆ. ಅಲ್ಲದೆ ಲಿಂಗದ ಪಕ್ಕದಲ್ಲಿ ಒಂದು ವೀರಗಲ್ಲುಗಳನ್ನು ಸಹ ನಿಲ್ಲಿಸಲಾಗಿದೆ. ಈ ವೀರಗಲ್ಲನ್ನು ಗಮನಿಸಿದರೆ ವಿಜಯನಗರ ಅರಸರ ಕಾಲಕ್ಕೆ ಸೇರಿಸಬಹುದಾಗಿದೆ ಪ್ರಾಯಶಃ ಈ ವೀರಗಲ್ಲನ್ನು ಬೇರೆ ಸ್ಥಳದಿಂದ ತಂದು ಇಡಲಾಗಿದೆ ಎಂಬುದನ್ನು ವ್ಯಕ್ತಪಡಿಸಬಹುದಾಗಿದೆ.

ಇದು ಒಂದು ಅತ್ಯಂತ ಪ್ರಾಚೀನತೆ ಹೊಂದಿರುವ ದೇವಾಲಯವಾಗಿರುವುದರಿಂದ ಮುಂದಿನ ದಿನಗಳಲ್ಲಿ ಈ ದೇವಾಲಯದ ಹಿನ್ನೆಲೆಯನ್ನು ತಿಳಿಯುವುದಕ್ಕಾಗಿ ಸ್ಥಳೀಯ ಗ್ರಾಮಸ್ಥರು ಸಂಬಂಧಪಟ್ಟ ಪ್ರಾಚ್ಯ ಸಂಶೋಧನಾ ಇಲಾಖೆಯವರು ಮತ್ತು ಮುಜರಾಯಿ ಇಲಾಖೆಯವರು ಈ ದೇವಾಲಯವನ್ನು ಪುನರ್ ನವೀಕರಣಗೊಳಿಸಿ ಮುಂದಿನ ಪೀಳಿಗೆಗೆ ಇತಿಹಾಸವನ್ನು ಉಳಿಸಿಕೊಳ್ಳಬೇಕಾಗಿದೆ. (ಚಿತ್ರಸಂಖ್ಯೆ-158)

## ಮಂಟೇಸ್ವಾಮಿ ಪರಂಪರೆ

ಮಂಟೇಸ್ವಾಮಿ ಕರ್ನಾಟಕದ ಜನಪದ ಮಹಾಕಾವ್ಯ ಮತ್ತು ಆತನು ವಿಶಿಷ್ಠವಾದ ನೀಲಗಾರ ಪರಂಪರೆಯ ವ್ಯಕ್ತಿಯಾಗಿದ್ದಾರೆ. ಮಂಟೇಸ್ವಾಮಿ ಕ್ರಿ.ಶ.15-16ನೇ ಶತಮಾನದ ಒಬ್ಬ 'ಸಿದ್ದ ಪುರುಷ' ಮೈಸೂರು ಸೀಮೆಯಾದ ಕತ್ತಲ ರಾಜ್ಯದಲ್ಲಿ ಜೋತಿರ್ಲಿಂಗಯ್ಯನಾಗಿ ಕನ್ನಡದ ಬಹುಮುಖ್ಯ ಪರ್ಯಾಯ ಹಾಗೂ ಬಂಡಾಯ ಧರ್ಮ ಸಂಸ್ಕೃತಿ ಎನಿಸಿದ ನೀಲಗಾರ ಪರಂಪರೆಯ ಸ್ಥಾಪನೆಗೆ ಬಹುಮುಖ ಕಾರಣಕರ್ತರಾಗಿದ್ದಾರೆ. ಇವರು ತಳ ಸಮುದಾಯಗಳ ಜನಮಾನಸದ ಆರಾಧ್ಯ ದೇವನಾಗಿದ್ದಾರೆ. 'ಮಂಟೇಸ್ವಾಮಿ ಕಾವ್ಯ'ವೆಂಬ ಜನಪದ ಮಹಾಕಾವ್ಯ ಬೆಳವಣಿಗೆ ಕಾರಣಭೂತರಾಗಿದ್ದಾರೆ. (ಅಡಿಟಿಪ್ಪಣಿ: ಶಂಕನಪುರ ಮಹಾದೇವ – ಮಂಟೇಸ್ವಾಮಿ, ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು, ಪ್ರಕಟಣೆ 2010, ಪು.ಸಂ.1,2.)

ಮಂಟೇಸ್ವಾಮಿ ನೀಲಗಾರ ಪರಂಪರೆ ಕುರಿತು ವಿವರಿಸುವ ಕೆಲವು ಚಾರಿತ್ರಿಕ ಆಧಾರಗಳಿವೆ. ಈ ಪರಂಪರೆಯ ಸಿದ್ದರ ಸಾಧನೆಗಳನ್ನು ತಿಳಿಸುವ ಮೊದಲ ಮುಖ್ಯ

ಆಕರವೆಂದರೆ ನೀಲಗಾರರು ಹಾಡುವ ಮಂಟೇಸ್ವಾಮಿ ಕಾವ್ಯ. ಎರಡನೆಯದು ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕು ತೊಡೇಕಲ್ಲು ಬಸವೇಶ್ವರ ಮಠದಲ್ಲಿ ದೊಡ್ಡವರ ವಚನ ತಾಲೂಕಾಕಟ್ಟು ಹೆಸರಲ್ಲಿ ತಾಳೇಗರಿಯಲ್ಲಿ ದೊರೆತಿರುವ ಮಂಟೇಸ್ವಾಮಿ ರಾಚಪ್ಪಯ್ಯ ಮೊದಲಾದವರು ಬರೆದಿರುವ ಕೊಡೇಕಲ್ಲು ವಚನ ಸಾಹಿತ್ಯದಿಂದ ತಿಳಿದುಬರುತ್ತದೆ. (ಅಡಿಟಿಪ್ಪಣಿ: ಶಂಕನಪುರ ಮಹಾದೇವ – ಮಂಟೇಸ್ವಾಮಿ, ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು, ಪ್ರಕಟಣೆ 2010, ಪು.ಸಂ.3) ಮೂರನೆಯದಾಗಿ ಕೊಡೇಕಲ್ಲು ಬಸವಣ್ಣನ ವಂಶಜನಾದ ಕವಿ ವೀರಸಂಗಪ್ಪಯ್ಯ ಬರೆದ ಕ್ರಿ.ಶ.1589ರ ನಂದಿಯಾಗಮಲೀಲೆ ಎಂಬ ಚಾರಿತ್ರಿಕ ಕೃತಿ. ನಾಲ್ಕನೆಯದಾಗಿ ಕ್ರಿ.ಶ.1762ರಲ್ಲಿ ರಚನೆಯಾದ ಜೈನಕವಿ ದೇವಚಂದ್ರ ಬರೆದ ರಾಜಾವಳಿ ಕಥಾಸಾರ. ಅದೇ ರೀತಿ ಮಳವಳ್ಳಿ ತಾಲ್ಲೂಕಿನ ಮುಟ್ಟಹಳ್ಳಿ ಶಾಸನ ಸಂಖ್ಯೆ 106 ರಲ್ಲಿ ತಿಳಿದುಬರುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಶ್ರೀ ತತ್ವನಿಧಿ ತಿರುಮಲಾರ್ಯನ ಚಿಕ್ಕದೇವರಾಯ ವಿಜಯ ಮೊದಲಾದ ಆಧಾರಗಳು ಸಿದ್ಧಪುರುಷರ ಪರಂಪರೆಯ ಬಗ್ಗೆ ತಿಳಿದುಬರುತ್ತದೆ. ಮಂಟೇಸ್ವಾಮಿ ಮೂಲತಃ ಯಾವ ದೇಶದವರು, ಯಾವ ಕಾಲಘಟ್ಟದಲ್ಲಿ ಜೀವಿಸಿದ್ದರು. ಇವರು ಯಾವ ಜನಾಂಗ ಮೂಲದವರೆಂಬುದರ ಬಗ್ಗೆ ಕೆಲವು ಚಾರಿತ್ರಿಕ ಮಾಹಿತಿಗಳಿವೆ.

ತಿರುಮಲಾರ್ಯನ ಚಿಕ್ಕದೇವರಾಯ ವಿಜಯ ಉಲ್ಲೇಖಿಸುವಂತೆ ಕ್ರಿ.ಶ.1575–1617ರ ಕಾಲಕ್ಕೆ ರಾಜ್ಯಭಾರ ಮಾಡುವ ರಾಜ ಒಡೆಯರ್ ಕಾರುಗಳ್ಳಿ ನಾಯಕರ ವಿರುದ್ಧದ ಯುದ್ಧದಲ್ಲಿ ಸಾಧಿಸುವ ವಿಜಯ ಚಾಮರಾಜ ಒಡೆಯರ ವಿಧವೆ ರಾಣಿ ಮತ್ತು ರಾಜಕುಮಾರಿಯನ್ನು ರಕ್ಷಿಸಲು ನಡೆಯುವ ಮಾರನಾಯಕನ ಹತ್ಯೆ ಕಥೆಗೂ ಮೈಸೂರು ಒಡೆಯರ ರಕ್ಷಿಸಿ ಒಕ್ಕಲು ಪಡೆದ ಮಂಟೇಸ್ವಾಮಿ ಕಾವ್ಯದ ನೂರಾಣಿ ಮನೆಯ ಮೊದಲ ಭಿಕ್ಷಾ ಪಡೆದ ಕಥೆಗೂ ಪರಸ್ಪರ ಸಂಬಂಧ ಇದೆ. ಈ ಘಟನೆಗಳಿಗೆ ಆಧಾರವಾಗಿ ಇಂದಿಗೂ ಮೈಸೂರು ಒಡೆಯರ್ ಮಂಟೇಸ್ವಾಮಿ ಪರಂಪರೆಗೆ ಒಕ್ಕಲಾಗಿ ಈ ಭಾಗದ ಕಪ್ಪಡಿ ಮಂಟೇಸ್ವಾಮಿಯ ಮೊದಲನೆಯ ನೆಲೆ ನಂತರ ಬೊಪ್ಪೆಗೌಡನಪುರ, ಚಿಕ್ಕಲ್ಲೂರುಗಳು ಮಂಟೇಸ್ವಾಮಿಯವರ ಪವಿತ್ರ ನೆಲೆಗಳಾಗಿವೆ. ಮಂಟೇಸ್ವಾಮಿ ಕಾವ್ಯವು ಒಂದು ಜನಪದ ಕಾವ್ಯವಾದರೂ ಅದು ಅವರು ನಡೆಸಿದ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ ಬಂಡಾಯದ ಚಾರಿತ್ರಿಕ ಹೋರಾಟಗಳ ಹಿನ್ನೆಲೆಯನ್ನು ತಿಳಿಸುತ್ತದೆ. ಕ್ರಿ.ಶ.12ನೇ ಶತಮಾನದ ವೇಳೆಗೆ ವಚನ ಚಳುವಳಿಯ ಮೂಲ ಆಶಯಗಳ ಜೊತೆಗೆ ನಾಥ, ಸೂಫಿ, ವಜ್ರಾಯಾನಿ ಮೊದಲಾದ ಗುಪ್ತ ಪಂಥಗಳ ಅಂಶಗಳನ್ನು ಮೈಗೂಡಿಸಿಕೊಂಡು ಅವೈಧಿಕ ತಳ ಸಮುದಾಯಗಳ ನಡುವೆ ಸಾಂಸ್ಕೃತಿಕ ಎಚ್ಚರವನ್ನುಂಟು ಮಾಡುತ್ತಾ ಎಲ್ಲರನ್ನು ಒಂದು ಮಾಡಿದ ಮಂಟೇಸ್ವಾಮಿ ನೀಲಗಾರ ಪರಂಪರೆ ಕರ್ನಾಟಕದ

ಬಹುಮುಖ್ಯ ಜಾತ್ಯಾತೀತ ರಚಿಸಿದ್ದ ಪಂಥ. ಇದು ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮೈಸೂರು ಒಡೆಯರ್ ಆಳ್ವಿಕೆಯ ಸ್ಥಾಪನೆಯಾಗುವ ಕಾಲಕ್ಕೆ ನಡೆದ ಒಂದು ಚಾರಿತ್ರಿಕ ಘಟನೆ ಎನ್ನಬಹುದಾಗಿದೆ. ಈ ಹಿನ್ನೆಲೆಯಿಂದ ಕೃಷ್ಣರಾಜನಗರ ತಾಲ್ಲೂಕು ಕಪ್ಪಡಿ ಕ್ಷೇತ್ರ ಮಂಟೇಸ್ವಾಮಿ ಧಾರ್ಮಿಕ ನೆಲೆಯಾಗಿದೆ. ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಬಹುಸಂಖ್ಯಾತ ಜನರು ಈ ನೆಲೆಗೆ ಹೋಗಿ ಪೂಜೆ ಸಲ್ಲಿಸುವ ಒಂದು ಪರಂಪರೆ ಇದೆ. ಅಲ್ಲದೆ ಪ್ರತಿ ವರ್ಷ ಯುಗಾದಿ ಹಬ್ಬ 15 ದಿನಗಳು ಬಾಕಿ ಇರುವ ಸಂದರ್ಭದಲ್ಲಿ ಕಪ್ಪಡಿ ಕ್ಷೇತ್ರದಲ್ಲಿ ಜಾತ್ರೆ ನಡೆಯುತ್ತದೆ. ಅನೇಕ ರೀತಿಯ ಧಾರ್ಮಿಕ ಕಾರ್ಯಕ್ರಮಗಳು ಕೂಡ ಜರುಗುತ್ತವೆ. ಇದರ ಹಿನ್ನೆಲೆಯಿಂದಲೇ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಕೂಡ ಮಂಟೇಸ್ವಾಮಿ ದೇವಾಲಯಗಳನ್ನು ಗುರುತಿಸಬಹುದಾಗಿದೆ.

**ರಾಚಪ್ಪಾಜಿ**

ಮಂಟೇಸ್ವಾಮಿ ಕಾವ್ಯ ಹಾಗೂ ನೀಲಗಾರ ಪರಂಪರೆಯ ನಂಬಿಕೆಯಂತೆ ರಾಚಪ್ಪಾಜಿ ಕಲ್ಯಾಣದ ಬಸವಣ್ಣನವರ ಮಗ ಮಂಟೇಸ್ವಾಮಿ ಕಲ್ಯಾಣಕ್ಕೆ ಹೋಗಿ ಬಸವಣ್ಣ ನೀಲಮ್ಮನವರ ದುಡ ಪರೀಕ್ಷೆ ಮಾಡಿ ಅವರಿಗೆ ಗುರುವಾಗಿ ಹಿಂದಿರುಗುವಾಗ ರಾಚಪ್ಪಾಜಿಯವರನ್ನು ಶಿಶುಮಗನನ್ನಾಗಿ ಪಡೆಯುತ್ತಾರೆ ಎಂಬುದಾಗಿದೆ. ಮೈಸೂರು ಅರಸು ಮನೆತನದಲ್ಲಿ ಪಡೆವ ದೊಡ್ಡಮ್ಮತಾಯಿ ಎಂಬ ಶಿಶುಮಗಳನ್ನು ಇವರಿಗೆ ಮದುವೆ ಮಾಡಲಾಗುತ್ತದೆ. ಕೊನೆಯಲ್ಲಿ ಗುರು ಆಜ್ಞೆಯಂತೆ ರಾಚಪ್ಪಾಜಿ, ದೊಡ್ಡಮ್ಮತಾಯಿ, ಚೆನ್ನಾಜಮ್ಮ ಕಪ್ಪಡಿಯಲ್ಲಿ ನೆಲೆಗೊಳ್ಳಲು ತೆರಳುತ್ತಾರೆ. ದೊಡ್ಡಮ್ಮತಾಯಿ ಮಾರ್ಗಮಧ್ಯೆದಲ್ಲಿ ಮುಟ್ಟಾದುದರಿಂದ ಕಪ್ಪಡಿಗೆ ಹೋಗಲಿಲ್ಲ. ರಾಚಪ್ಪಾಜಿ, ಚನ್ನಾಜಮ್ಮ ಮಾತ್ರ ಕಪ್ಪಡಿಗೆ ಹೋಗಿ ನೆಲೆಸಿದರು. ಕಪ್ಪಡಿಯಲ್ಲಿ ನೆಲೆಸಿದ್ದರಿಂದ ಇವರಿಗೆ ಕಪ್ಪಡಿ ರಾಚಪ್ಪಾಜಿ ಎಂದೇ ಕರೆಯಲಾಯಿತು ಎಂಬುದು ಇತಿಹಾಸ ಪರಂಪರೆಯಾಗಿದೆ.

ಕಪ್ಪಡಿ ಕ್ಷೇತ್ರದಲ್ಲಿ ರಾಚಪ್ಪಾಜಿ ಐಕ್ಯವಾಗಿರುವ ಕಪ್ಪಡಿಯಲ್ಲಿ ಗದ್ದಿಗೆ ಇದೆ. ಈ ಹಿನ್ನೆಲೆಯಿಂದ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ರಾಚಪ್ಪಾಜಿಯ ದೇವಾಲಯಗಳನ್ನು ನಿರ್ಮಿಸಿಕೊಂಡು ಪೂಜೆ ಸಲ್ಲಿಸುತ್ತಿದ್ದಾರೆ.

**ಸಿದ್ದಪ್ಪಾಜಿ**

ಸಿದ್ದಪ್ಪಾಜಿ ಕೂಡ ಮಂಟೇಸ್ವಾಮಿ ಕಾವ್ಯದ ಅರ್ಧಭಾಗ ಸಿದ್ದಪ್ಪಾಜಿ ಕಾವ್ಯವಾಗಿದೆ ಎಂಬುದನ್ನು ಜನಪದ ಕಾವ್ಯಗಳಂದ ತಿಳಿಯಬಹುದಾಗಿದೆ. ಸಿದ್ದಪ್ಪಾಜಿ ಇಡೀ ನೀಲಗಾರ

ಪರಂಪರೆಯಲ್ಲಿ ಮೊಟ್ಟಮೊದಲ ನೀಲಗಾರ ಎಂದು ಹೇಳಬಹುದಾಗಿದೆ. ಆದಕಾರಣ ಈತನನ್ನು ನೀಲಗಾರರ ಗಂಡ. ಸಿದ್ದಸಿದ್ದರಿಗೆಲ್ಲಾ ಅತಿ ಮುದ್ದು ಘನನೀಲ ಸಿದ್ಧ. ಕಾವ್ಯದ ಪ್ರಕಾರ ಆದಿ ಕಲ್ಯಾಣದಲ್ಲಿ ಓಜಿ ಬಸಪ್ಪನಾಗಿ, ಕಲ್ಯಾಣ ಪಟ್ಟಣದ ಕಾವಲುಗಾರನಾಗಿದ್ದವನು, ಮಂಟೇಸ್ವಾಮಿ ಲೀಲೆಗಳಿಗೆ ಮಾರುಹೋಗಿ ಬಂದವನು, ಪಾಂಚಾಳರ ಸಿದ್ದಪ್ಪಾಜಿಯವರನ್ನು ಶಿಶುಮಗನನ್ನಾಗಿ ಮಾಡಿಕೊಂಡು ಮಂಟೇಸ್ವಾಮಿ ಬೊಪ್ಪೇಗೌಡನಪುರದಲ್ಲಿ ಮಠಮನೆ ಮಾಡಲು ಮತ್ತು ತಮಗೆ ಪಾತಾಳ ಬಾವಿ ನಿರ್ಮಿಸಿಕೊಳ್ಳಲು ಬೇಕಾಗುವ ಕಬ್ಬಿಣದ ಆಯುಧಗಳಿಗಾಗಿ ಕಬ್ಬಿಣ ಭಿಕ್ಷ ತರಲು ಸಿದ್ದಪ್ಪಾಜಿಯವರನ್ನು ಹಲಗೂರು ಪಾಂಚಾಳಗೇರಿಗೆ ಕಳುಹಿಸುತ್ತಾರೆ. ಹಲಗೂರು ಪ್ರಾಂತ್ಯದಲ್ಲಿ ಏಳು ಜನ ಪಾಂಚಾಳರು ಪಾಳೇಗಾರರಾಗಿದ್ದು, ಕಬ್ಬಿಣದ ಉತ್ಪಾದನೆಯಲ್ಲಿ ತೊಡಗಿರುತ್ತಾರೆ. ಇವರು ಸಿದ್ದಪ್ಪಾಜಿಗೆ ಕಬ್ಬಿಣದ ಭಿಕ್ಷೆ ಕೊಡಬೇಕಾದರೆ ತಾವು ಹೇಳುವ ಏಳು ಪಂದ್ಯಗಳನ್ನು ಗೆಲ್ಲುವಂತೆ ಸವಾಲು ಹಾಕುತ್ತಾರೆ. ಅದರಂತೆ ಸಿದ್ದಪ್ಪಾಜಿ ಏಳು ಪಂದ್ಯಗಳನ್ನು ಪವಾಡ ಮಾಡಿ ಗೆಲ್ಲುತ್ತಾರೆ. ಕಬ್ಬಿಣ ಭಿಕ್ಷೆ ಪಡೆದು ಗುರುಗಳಿಗೆ ಬೊಪ್ಪೇಗೌಡನಪುರದಲ್ಲಿ ಮಠಮನೆ ಮಾಡಿಸುತ್ತಾರೆ. ಅಷ್ಟೇ ಅಲ್ಲದೆ ಹಲಗೂರು ಪಾಂಚಾಳದವರನ್ನು ಮಂಟೇಸ್ವಾಮಿ ಪಂಥಕ್ಕೆ ಒಕ್ಕಲಾಗಿ ಮಾಡುತ್ತಾರೆ. ಇಡೀ ಚಾರಿತ್ರಿಕ ಘಟನೆಯನ್ನು ಆಧರಿಸಿ ನೀಲಗಾರರು ಸಿದ್ದಪ್ಪಾಜಿಯ ಸಾಧನೆಗಳನ್ನು ಸಿದ್ದಪ್ಪಾಜಿಯ ಪವಾಡಗಳು ಎಂಬುದಾಗಿ ಹಲವು ರಾತ್ರಿಯ ಕಥೆಗಳಾಗಿ ಮಂಟೇಸ್ವಾಮಿ ಕಾವ್ಯದಲ್ಲಿ ಹಾಡುತ್ತಾರೆ. ಈ ಹಿನ್ನೆಲೆಯಿಂದ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಿದ್ದಪ್ಪಾಜಿ ದೇವಾಲಯಗಳು ಹಾಗೂ ಭಕ್ತರು ಇದ್ದಾರೆ ಎಂಬುದು ತಿಳಿದುಬರುತ್ತದೆ.

## ದೊಡ್ಡಮ್ಮತಾಯಿ

ದೊಡ್ಡಮ್ಮತಾಯಿ ಮಂಟೇಸ್ವಾಮಿಯವರ ಪರಮಶಿಷ್ಯರಾದ ರಾಚಪ್ಪಾಜಿಯವರ ಪತ್ನಿ ಎಂಬುದಾಗಿ ಜನಪದ ಕಾವ್ಯ ಹಾಗೂ ಜನಪದ ಪರಂಪರೆಯ ನಂಬಿಕೆಯಾಗಿದೆ. ಉತ್ತರದಿಂದ ರಾಚಪ್ಪಾಜಿಯವರ ಜೊತೆ ದಕ್ಷಿಣಕ್ಕೆ ಬಂದರು ಎಂಬುದನ್ನು ಕೊಡೇಕಲ್ಲು ಪರಂಪರೆ ದೃಢಪಡಿಸುತ್ತದೆ. ಆದರೆ ಮೈಸೂರು ಸೀಮೆಯ ಮಂಟೇಸ್ವಾಮಿ ಕಾವ್ಯದ ಹಿನ್ನೆಲೆಯಲ್ಲಿ ದೊಡ್ಡಮ್ಮತಾಯಿ ಮೈಸೂರು ಅರಸರ ಮನೆಮಗಳೆಂದು ಇವಳನ್ನು ಮಂಟೇಸ್ವಾಮಿಗಳು ಶಿಶು ಮಗಳಾಗಿ ಪಡೆದು ರಾಚಪ್ಪಾಜಿಯವರಿಗೆ ಮದುವೆ ಮಾಡಿದರೆಂದು ತಿಳಿದುಬರುತ್ತದೆ. ಮಳವಳ್ಳಿ ಸೀಮೆಯ ಕೆಲವೊಂದು ಹೇಳಿಕೆಗಳಲ್ಲಿ ದೊಡ್ಡಮ್ಮತಾಯಿ ಕಾಗಿನೆಲೆಯ ಮೂಲದವರೆಂದು ತಿಳಿಸುತ್ತದೆ. ಪರಶೆಟ್ಟಿ ಮನೆತನದವರಾದ ಕಡಗಿಶೆಟ್ಟರ ಮನೆತನ ಈಗಲೂ ಕಾಗಿನೆಲೆಯಲ್ಲಿ ಇದೆ. ಬಹುಶಃ ದೊಡ್ಡಮ್ಮತಾಯಿ ಈ ಊರಿನವರೇ ಇರಬಹುದು ಎಂಬ ಅಭಿಪ್ರಾಯವೂ ಸಹ

ಇದೆ. ಆದರೆ ರಾಚಪ್ಪಾಜಿ ಕಾಗಿನೆಲೆ ಮೈಸೂರು ಕಡೆಗೆ ಬರುವ ಮೊದಲೇ ಮದುವೆಯಾಗಿದ್ದರು. ಒಬ್ಬ ಮಗನೂ ಇದ್ದು ಆತನ ಸಾವು ಅವರು ಕೊಡೇಕಲ್ಲನ್ನು ತೊರೆಯಲು ಒಂದು ಕಾರಣವಾಯಿತು. ಈಗಲೂ ಕೊಡೇಕಲ್ಲಲ್ಲಿ 'ಕುಮಾರಸ್ವಾಮಿ' ಎಂಬ ಅವರ ಮಗನ ಸಮಾಧಿ ಇದೆ. ದೊಡ್ಡಮ್ಮ ವಿಜಾಪುರದ ಪರಶೆಟ್ಟಿ ಮನೆತನದವರೇ ಆಗಿದ್ದು, ಉತ್ತರದ ಕಡೆಯವರು ಎಂಬುದು ತಿಳಿದುಬರುತ್ತದೆ. ಬಹುಶಃ ದೊಡಮ್ಮತಾಯಿ ಎಂಬುದು ಅವರ ನಿಜನಾಮವಾಗಿರದೆ ಪರಂಪರೆಯ ಮಾತೃಸ್ಥಾನ ಸಂಕೇತವಾಗಿ ಬಳಕೆಗೆ ಬಂದಿರಬೇಕು. ಇವರು ನೀಲಗಾರ ಪರಂಪರೆಯಲ್ಲಿ ಕ್ರಿ.ಶ.12ನೆಯ ಶತಮಾನದ ಅಕ್ಕಮಹಾದೇವಿಯಂತೆ ಸ್ಥಾನ ಪಡೆದಿದ್ದಾರೆ. ಮಂಟೇಸ್ವಾಮಿ ಸಿದ್ದಪ್ಪಾಜಿಯಂತಹ ಸಿದ್ದರಿಗೆಲ್ಲಾ ತಮ್ಮ ತಮ್ಮ ಕಷ್ಟ ಸುಖ ದುಃಖಗಳನ್ನು ಹೇಳಿಕೊಳ್ಳಲು ಇದ್ದ ಏಕೈಕ ತಾಯಿ ದೊಡ್ಡಮ್ಮತಾಯಿಯಾಗಿದ್ದಾರೆ. ಇವರು ರಾಚಪ್ಪಾಜಿಯ ಜೊತೆ ಕಪ್ಪಡಿಗೆ ತೆರಳುವಾಗ ಬೊಪ್ಪಗೌಡನಪುರದ ಹೊರಗೆ ಹೊರ ಸೂತಕವಾದರು. ಆದಕಾರಣ ಕಪ್ಪಡಿಗೆ ಅವರು ಸಲ್ಲಲಿಲ್ಲ. ದೊಡಮ್ಮತಾಯಿ ಮುಟ್ಟಾಗಿ ನೆಲೆ ನಿಂತ ಸ್ಥಳಕ್ಕೆ ಮುಟ್ಟಗಹಳ್ಳಿ ಎಂದು ಕರೆಯಲಾಗಿದೆ ಎಂದು ಜನಪದ ಕಾವ್ಯ ತಿಳಿಸುತ್ತದೆ. ಇಂದಿಗೂ ಬೊಪ್ಪೇಗೌಡನಪುರದ ಸಮೀಪ ಮುಟ್ಟಗಹಳ್ಳಿ ಎಂಬ ಊರಿದ್ದು ಅಲ್ಲಿ ದೊಡ್ಡಮ್ಮತಾಯಿ ಗದ್ದಿಗೆ ಇದೆ. ಇನ್ನು ಕೆಲವು ಹೇಳಿಕೆ ಪ್ರಕಾರ ದೊಡ್ಡಮ್ಮ ಮುಟ್ಟಾದ ಸ್ಥಳ ಮುಟ್ಟಗಹಳ್ಳಿಯಾಯಿತು. ಅವರ ಕುರುಹಾಗಿ ಗದ್ದಿಗೆ ಇದೆ. ಆದರೆ ಅನಂತರ ಅವರು ಬೊಪ್ಪೇಗೌಡನಪುರಕ್ಕೆ ಹಿಂದಿರುಗಿ ಊರ ಪಕ್ಕದ ದೊಡ್ಡಮ್ಮತಾಯಿ ಕೆರೆ ದಂಡೆಯಲ್ಲಿ ಐಕ್ಯರಾಗಿದ್ದಾರೆ ಎಂಬ ವಿಚಾರವು ಸಹ ಇದೆ. ಸಿದ್ದಪ್ಪಾಜಿ ಹಲಗೂರಿಗೆ ಕಬ್ಬಿಣ ಭಿಕ್ಷೆಗೆ ಬಂದಾಗ ಅವರಿಗೆ ಬೆಂಬಲವಾಗಿ ಬಂದವರು ದೊಡ್ಡಮ್ಮ. ಇವರು ಸಿದ್ದಪ್ಪಾಜಿಗೆ ಸಾಕುತಾಯಿ ಎಂಬ ಅಭಿಪ್ರಾಯವೂ ಸಹ ಇದೆ. ಹಾಗಾಗಿ ಸಿದ್ದಪ್ಪಾಜಿ ಐಕ್ಯವಾದ ಸ್ಥಳದಲ್ಲೇ ಅವರ ಬೆನ್ನ ಹಿಂದೆ ದೊಡ್ಡಮ್ಮ ಐಕ್ಯರಾಗಿದ್ದಾರೆ. ಯಾರು ಏನೇ ಹೇಳಿದರೂ ಕೂಡ ದೊಡ್ಡಮ್ಮತಾಯಿಯು ಐಕ್ಯ ಗದ್ದಿಗೆ ಇದೆ ಎನ್ನುತ್ತಾರೆ. ಈ ಎಲ್ಲಾ ಬೆಳವಣಿಗೆಯಿಂದ ಕ್ರಿ.ಶ.15–16ನೇ ಶತಮಾನದಲ್ಲಿ ಮಂಟೇಸ್ವಾಮಿ ಪರಂಪರೆಯಲ್ಲಿ ರಾಚಪ್ಪಾಜಿ, ಸಿದ್ದಪ್ಪಾಜಿ, ದೊಡ್ಡಮ್ಮತಾಯಿ, ಚೆನ್ನಾಜಮ್ಮ ಇನಿತರ ಸಿದ್ಧಪುರುಷರ ಇತಿಹಾಸವು ಚಾಮರಾಜನಗರ ಜಿಲ್ಲೆಯಲ್ಲಿ ಪ್ರಧಾನವಾಗಿ ಕಾಣಬರುತ್ತದೆ. ಇದನ್ನೇ ಆಧಾರವಾಗಿಟ್ಟುಕೊಂಡು ಈ ಭಾಗದ ಜನರು ಮಾದೇಶ್ವರ, ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ, ದೊಡ್ಡಮ್ಮತಾಯಿಯವರ ಹೆಸರುಗಳನ್ನು ಹೇಳಿಕೊಂಡು ದೇವಾಲಯಗಳನ್ನು ಗುಡಿಗಳನ್ನು, ಮಠಗಳನ್ನು ಕಟ್ಟಿಕೊಂಡು ಆರಾಧಿಸುವಂತಹ ಪರಂಪರೆ ಇಂದಿಗೂ ಇದೆ.

## ಮಹದೇಶ್ವರ

ಭಾರತದ ಪವಿತ್ರ ಸ್ಥಳವೆನಿಸಿದ ಶ್ರೀಶೈಲ ಪರ್ವತದ ತಪ್ಪಲಿನಲ್ಲಿ ವಾಸವಾಗಿದ್ದ ಶಿವನ ಭಕ್ತರಾದ ಶರಣ ಮಲ್ಲಪ್ಪ ಶ್ರೀ ಚಂದ್ರಶೇಖರಮೂರ್ತಿ ಮತ್ತು ಶರಣೆ ಉತ್ತರಾಜಮ್ಮ ಎಂಬ ದಂಪತಿಗಳು ಮಕ್ಕಳಿಲ್ಲದೆ ದುಃಖಿತರಾಗಿದ್ದರು. ಈ ಶರಣ ದಂಪತಿಗಳು ಒಂದು ದಿನ ಶಿವನ ಧ್ಯಾನದಲ್ಲಿರುವಂತಹ ಸಂದರ್ಭದಲ್ಲಿ ವ್ಯಾಘ್ರಾನಂದರೆಂಬ ಮಹಾ ತಪಸ್ವಿಗಳು ಬಂದರು. ಅವರನ್ನು ಕಂಡ ಈ ಶರಣರು ಬಹು ಸಂತೋಷದಿಂದ ಸ್ವಾಗತಿಸಿ ಉಪಚರಿಸಿದರು. ಇದರಿಂದ ಸಂತೋಷಗೊಂಡ ಮಹರ್ಷಿಗಳು ಸುಪುತ್ರ ಸಂತಾನವಾಗಲೆಂದು ಹಾರೈಸಿದರು. ಅಲ್ಲದೆ ನಿಮ್ಮ ಸುಪುತ್ರನು ಶಿವಸ್ವರೂಪನು, ಈ ಲೋಕಕಲ್ಯಾಣಕ್ಕಾಗಿ ನಿಮ್ಮ ಮಗನಾಗಿ ಜನಿಸುವ ಮಹಾಪುರುಷರೆಂದು ಮಹರ್ಷಿಗಳು ತಿಳಿಸಿದರು. ಕೆಲಕಾಲದಲ್ಲಿಯೇ ಉತ್ತರಾಜಮ್ಮನ ಉದರದಲ್ಲಿ ಸುಂದರ ಸುಪುತ್ರನ ಜನನವಾಯಿತು. ಪೂರ್ಣಚಂದ್ರನಂತೆ ಹೊಳೆಯುತ್ತಿದ್ದ ಮಗನನ್ನು ನೋಡಿ ನಮ್ಮ ಮಗ ಶ್ರೀಶೈಲ ಮಲ್ಲಿಕಾರ್ಜುನನೆಂದೇ ಭಾವಿಸಿ ಸಂತೋಷಪಡುತ್ತಿದ್ದರು. ಆ ಶರಣ ದಂಪತಿಗಳಿಗೆ ವ್ಯಾಘ್ರಾನಂದರು ಮಗನಿಗೆ ಮಾದೇವನೆಂದು ನಾಮಾಂಕಿತ ಮಾಡಿದರು. ಶ್ರೀಶೈಲದ ತಪ್ಪಲಿನ ಅರಣ್ಯ ಪ್ರದೇಶದಲ್ಲಿದ್ದ ಮಾದೇವನಿಗೆ ಕಾಡು ಪ್ರಾಣಿಗಳ ಜೊತೆ ಆಟವಾಡುವುದೆಂದರೆ ಅಚ್ಚುಮೆಚ್ಚು, ಬಾಲಕನಾದ ಮಾದೇವನಿಗೆ ಏಳುವರ್ಷ ಸಮೀಪಿಸುತ್ತಿದ್ದಂತೆ, ವ್ಯಾಘ್ರಾನಂದ ಮಹರ್ಷಿಗಳು ಹತ್ತಿರ ವಿದ್ಯಾಭ್ಯಾಸಕ್ಕಾಗಿ ಮಗನನ್ನು ವಹಿಸಿ ಶರಣ ದಂಪತಿಗಳು ಶಿವಧ್ಯಾನದಲ್ಲಿ ಲೀನರಾದರು. ಶಿವಸ್ವರೂಪ ನಾವು ಮಾದೇವನು ಗುರುವಿನ ಪ್ರೀತಿಪಾತ್ರ ಶಿಷ್ಯನಾಗಿ ಬೆಳೆದನು. ಮಾದೇವನು ಗುರುಭಕ್ತಿಯನ್ನು ಮೆಚ್ಚಿದ ಮಹರ್ಷಿಗಳು ತನ್ನ ಪ್ರೀತಿಯ ಶಿಷ್ಯನಿಗೆ ತನ್ನ ವ್ಯಾಘ್ರಾವನ್ನು ಧಾರೆಯೆರೆದು ಕೊಟ್ಟರು. ನಂತರ ಕೆಲವು ವರ್ಷಗಳು ಕಳೆದಂತೆ ಲೋಕಸಂದಾರ ಆಸೆ ಹೆಚ್ಚಾಯಿತು.

ನಂತರ ದಕ್ಷಿಣಕ್ಕೆ ಜಂಗಮರ ಜೊತೆಗೆ ಬಂದು ಸುತ್ತೂರಿನಲ್ಲಿ ಅನೇಕ ಪವಾಡಗಳನ್ನು ಮಾಡಿದನು. ನಂತರ ಕುಂತೂರಿನ ಸಿದ್ದಗಿರಿಯಲ್ಲಿ ಪ್ರಭುಲಿಂಗಬೆಟ್ಟದಲ್ಲಿ ತಮ್ಮ ಕೆಲವು ಶಿಷ್ಯರೊಡನೆ ಧ್ಯಾನಮಗ್ನರಾಗಿದ್ದು, ಜನರಿಗೆ ಶಿವಬೋಧನೆಯನ್ನು ಮಾಡುತ್ತಿದ್ದರು. ಇಲ್ಲಿನ ಗುರುಗಳಿಗೆ ಪ್ರತಿದಿನ ಪೂಜೆಗೆಂದು ಪುಷ್ಪವನ್ನು ತರುವ ಸೇವಾ ಕಾರ್ಯವು ದೊರೆಯಿತು. ಮಹದೇವನು ಈ ಭಾಗದ ಬಾಲಕರೊಡನೆ ಆಟವಾಡುತ್ತಿದ್ದು, ಸಾಯಂಕಾಲ ಸಮೀಪಿಸುತ್ತಿದ್ದಂತೆಯೇ ಗೊದ್ದ, ಗೋಸುಂಬೆ ಮುಂತಾದ ಕ್ರಿಮಿಕೀಟಗಳನ್ನು ಹಿಡಿದು ಜೋಳಿಗೆಗೆ ತುಂಬಿಕೊಂಡು ಸಮೀಪದ ಕೆರೆಯಲ್ಲಿ ಜೋಳಿಗೆಯನ್ನು ಮುಳುಗಿಸುತ್ತಿದ್ದನು. ತಕ್ಷಣ ಮಾದೇವನ ಲೀಲೆಯೋ ಏನೋ, ಜೋಳಿಗೆಯಲ್ಲಿ ಸುವಾಸನಾಯುಕ್ತವಾದ ವಿವಿಧ

ಸುಂದರ ಪುಷ್ಪಗಳಾಗುತ್ತಿದ್ದವು. ನಂತರ ಕೊಳ್ಳೇಗಾಲದ ಮರಡಿಗುಡ್ಡದಲ್ಲಿ ಮಂಡಿಹುರಿ, ಸಿಂಗನಲ್ಲೂರು ಕೌಡಳ್ಳಿ ಮುಖಾಂತರ ಮಲೈಮಹದೇಶ್ವರ ಬೆಟ್ಟದಲ್ಲಿ ನೆಲೆಸಿದ್ದಾನೆ ಎಂಬುದು ಪ್ರತೀತಿ ಇದೆ.[82]

ಮಾದೇಶ್ವರರ ಭಕ್ತ ಸಮೂಹ ಮೈಸೂರು, ಮಂಡ್ಯ, ತುಮಕೂರು, ಬೆಂಗಳೂರು, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲಿ ಚದುರಿದಂತೆಯೂ ಅಲ್ಲದೆ ತಮಿಳುನಾಡಿನ ಗಡಿಭಾಗಗಳಲ್ಲಿಯೂ ವಿಶೇಷವಾಗಿಯೂ ಇದೆ. ಮಾದೇಶ್ವರರು ಶ್ರೀ ಶೈಲದಿಂದ (ಉತ್ತರ ದೇಶದಿಂದ) ದಕ್ಷಿಣಕ್ಕೆ ದೇಶಕ್ಕೆ ಬಂದವರೆಂದು ಮಲೈಮಹದೇಶ್ವರರನ್ನು ಕುರಿತು ಎಲ್ಲಾ ಜನಪದ ಮಹಾಕಾವ್ಯಗಳು ಹೇಳಿವೆ. ಅವರ ಬದುಕಿನ ಮಹತ್ವದ ಭಾಗ ಕಳೆದದ್ದು, ನಡುಮಲೆಯಲ್ಲಿ ಅವರು ತಮ್ಮ ಈ ಕಾರ್ಯಕ್ಷೇತ್ರವನ್ನು ಅಲ್ಲಿನ ಜನರು ಸಾಮಾಜಿಕ ಜೀವನದ ಪರಿವರ್ತನೆಗಾಗಿ ಬಳಸಿಕೊಂಡರು. ಈ ಹಿನ್ನೆಲೆಯಲ್ಲಿ ಅವರು ದೈವತ್ವದ ಸಿದ್ಧಿ ಪಡೆದ ಒರ್ವ ಪ್ರಸಿದ್ಧ ಪ್ರಾದೇಶಿಕ ನಾಯಕನೆಂದು ದೇವರೆಂದು ಕರೆಯಲಾಗಿದೆ.[83]

ಒಂದು ಪ್ರಾದೇಶಿಕ ಸಮುದಾಯದ ನಾಯಕರಾದ ಮಾದೇಶ್ವರರು ಜೀವಿತದ ಕಾಲಮಾನ 14–15ನೇ ಶತಮಾನ ಅವರ ಕಾರ್ಯಕ್ಷೇತ್ರ ಮೈಸೂರು ಜಿಲ್ಲೆ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಕೌದಳ್ಳಿ ಗ್ರಾಮವನ್ನು ದಾಟಿದರೆ ಸಿಗುವ ದಟ್ಟವಾದ ಘಟ್ಟ ಪ್ರದೇಶವೇ ನಡುಮಲೈ[84] ಆಗಿದೆ. ಮಹದೇಶ್ವರನ ಭಕ್ತರು ಅನೇಕ ಜಾತಿ ಜನಾಂಗದಲ್ಲಿದ್ದಾರೆ. ಹರಿಜನರು, ಒಕ್ಕಲಿಗರು, ಕುರುಬರು, ಗಂಗಮತದವರು, ಉಪ್ಪಲಿಗರು, ನಾಯಕರು, ಮಡಿವಾಳರು, ಪರಿವಾರದವರು, ಮಾದಿಗರು ಇನ್ನೂ ಮೊದಲಾದ ಜಾತಿಯಲ್ಲಿ ಮಾದೇಶ್ವರನ ಗುಡ್ಡರಾಗಿದ್ದಾರೆ. ಗುಡ್ಡರೆಂದರೆ ಶಿಷ್ಯರು ಎಂಬರ್ಥ ಮಾಡಿಕೊಂಡರೆ ಈ ಪದಕ್ಕಿರುವ ಬಹುಮುಖತೆಯನ್ನು ನಿರಾಕರಿಸಿದಂತಾಗುತ್ತದೆ ಎಂದು ಹಿ.ಚಿ.ಬೋರಲಿಂಗಯ್ಯರವರು ಹೇಳಿದ್ದಾರೆ.[85]

ಮಾದೇಶ್ವರನ ಸಾಂಸ್ಕೃತಿಕ ಚರಿತ್ರೆಯನ್ನು ಗಮನಿಸಿದರೆ, ಆತ ಸೌಹಾರ್ದಯುತ ಶೈವ ದೇವತೆಯಾಗಿ ಕಾಣಿಸುತ್ತಾರೆ. ವೈದಿಕ ಸ್ವಭಾವಗಳನ್ನು ಮೈಗೂಡಿಸಿಕೊಂಡ ವೀರಶೈವ ಮಠಗಳಿಂದ ಮಾದೇಶ್ವರ ದೂರ ನಿಲ್ಲುತ್ತಾನೆ. ಆ ವೈದಿಕ, ನಾಥಸಿದ್ಧ ತನಗಳ ಮಾದೇಶ್ವರ ತಾನು ನೆಲೆನಿಲ್ಲಲು ಬಯಸಿದ ಆಸುಪಾಸಿನ ಪಂಥ ಸಂಸ್ಕೃತಿಗಳ ಜೊತೆ ಸೌಹಾರ್ದ ನೀತಿಯನ್ನು ಅನುಚರಿಸುತ್ತಾನೆ.

ಈ ಭಾಗದ ಜನಪದ ಸಂಸ್ಕೃತಿಯ ಹಿನ್ನೆಲೆಯ ಹಲವು ಪಂಥ ಪರಂಪರೆಗಳಿವೆ. ಅಂತಹ ಪಂಥಗಳಲ್ಲಿ ಈ ಭಾಗದ ಕಂಸಾಳೆ ದೇವರ ಗುಡ್ಡರ ಪಂಥವು ಒಂದು. ಇವರು

ಕರ್ನಾಟಕದ ದಕ್ಷಿಣ ಭಾಗದಲ್ಲಿ ಭಕ್ತ ಸಮೂಹವನ್ನು ಪಡೆದಿರುವ ಮಾದೇಶ್ವರನು ಶಿಶು ಮಕ್ಕಳು ಇವರನ್ನು ಸ್ಥಳೀಯವಾಗಿ ದೇವರ ಗುಡ್ಡರು ಎಂದು ಕರೆಯುತ್ತಾರೆ. ದೇವರ ಗುಡ್ಡ ಅಂದರೆ ದೈವ ಒಂದು ನೆಲೆಸಿದ ಗುಡ್ಡ ಎಂತಲೂ ಬೆಟ್ಟದ ದೈವದ ಶಿಷ್ಯ ಎಂದು ಅರ್ಥವಾಗುತ್ತದೆ. ಆದರೆ ಗುಡ್ಡ ಎಂಬುದನ್ನು ಇಲ್ಲಿ ಶಿಶು ಮಕ್ಕಳು ಎಂಬ ಅರ್ಥದಲ್ಲಿ ಬಳಸಲಾಗಿದೆ. ಇವರು ಮಾದೇಶ್ವರನ ಜೀವನ, ಸಾಧನೆ, ಪಂಥ, ಸಂಸ್ಕೃತಿಯನ್ನು ಮುಂದುವರೆಸಲು ಮತ್ತು ಪ್ರಚಾರ ಮಾಡಲು ಮುಡಿಪಾದರು. ಮಾದೇಶ್ವರನ ಒಕ್ಕಲಾದ ಪ್ರತಿ ಕುಟುಂಬದ ಹಿರಿಯ ಮಗನಿಗೆ ದೇವರಗುಡ್ಡನ ದೀಕ್ಷೆ ಕೊಡಿಸಲಾಗುತ್ತದೆ. ಹೀಗೆ ದೀಕ್ಷೆ ಪಡೆದ ಈ ಪಂಥದ ಸದಸ್ಯ ಈತನ ಕುಟುಂಬ ಈ ಸಂಸ್ಕೃತಿ ಮತ್ತು ಪರಂಪರೆಯ ವಾರಸುದಾರರು. ಇವನ್ನು ಮಾದೇಶ್ವರನ ಪಂಥ ಅಥವಾ ಧರ್ಮ ಎಂದು ಕರೆಯುವ ವಾಡಿಕೆ ಇದೆ. ಈತನು ವೀರಶೈವನಾಗದೆ ಅದಕ್ಕೆ ಮತ್ತು ವೈದಿಕಕ್ಕೆ ಪ್ರತಿರೋಧ ತೋರುತ್ತಾ ಹಾಗೂ ಪರ್ಯಾಯವಾಗಿ ಅವೈದಿಕ ಉದಾರ ಶೈವ ಸಿದ್ಧನಾಗಿ, ನಾಥಸಿದ್ದನಾಗಿ ಮಾದೇಶ್ವರ ಈ ಭಾಗದಲ್ಲಿ ಕಾಣಿಸಿಕೊಳ್ಳುತ್ತಾನೆ.[86]

ಎಳೆಗಾವಿ, ಸುಳಗಾವಿ ಹೊದ್ದು ಕೊರಳ ತುಂಬ ರುದ್ರಾಕ್ಷಿ ಧರಿಸಿ ಮುಂದಲ ಪಾದಕ್ಕೆ ಮುನ್ನೂರು ಜಂಗು, ಹಿಂದಲ ಪಾದಕ್ಕೆ ಇನ್ನೂರು ಜಂಗು ತೊಟ್ಟು ಮೈ ಕೈಗೆಲ್ಲಾ ವಿಭೂತಿ ಬಸು ಮಂಗವ ಧರಿಸಿ, ಮುತ್ತಿನ ಜೋಳಿಗೆಯ ಮುಂಗೈ ಗಾಧಾರ ಮಾಡ್ಕೆಂದು ಬಲಗೈಲಿ ನಾಗಬೆತ್ತವ ಹಿಡಿದು ಹೊನ್ನುತ್ತವ ಬಿಟ್ಟು ಬಂದು ಬಾರೀ ಬರಗನ ಮೇಲೆ ಮಾದೇಶ್ವರ ಬರುವುದನ್ನು ಕಾವ್ಯ ವರ್ಣಿಸುತ್ತದೆ. ಈ ಚಿತ್ರಣ ಆತನಿಗಿದ್ದ ಎಲ್ಲಾ ತಾಂತ್ರಿಕ ಸಿದ್ಧ ಲಕ್ಷಣಗಳನ್ನು ಸಂಕೇತಿಸುತ್ತದೆ. ಈ ಪಂಥ ಕಾಲಕ್ರಮೇಣದಲ್ಲಿ ಶಾಕ್ತಾ, ಶೈವ, ದ್ರಾವಿಡ, ಪರಂಪರೆಯ ಭಾಗವೂ ಮುಂದುವರಿಕೆಯು ಆದ ಪಂಥವಾಗಿ ರೂಪುಗೊಂಡಿರುವುದು ತಿಳಿದುಬರುತ್ತದೆ.[87]

## ದೇವರಗುಡ್ಡರ ದೀಕ್ಷೆ

ಈ ಭಾಗದಲ್ಲಿ ಮಲೈ ಮಾದೇಶ್ವರ ಪಂಥದ ಉಳಿವು ಮತ್ತು ಮುಂದುವರಿಕೆಯಾಗಿ ದೀಕ್ಷೆಯನ್ನು ಅವಲಂಬಿಸಿರುತ್ತದೆ ಎಂಬುದು ತಿಳಿದುಬರುತ್ತದೆ. ಕಂಪಣ ಬೇಡರು, ಸೋಲಿಗರು, ಹೊಲೆಯ, ಮಾದಿಗ, ಕುರುಬ, ಕುಂಬಾರ, ಉಪ್ಪಾರ, ಪರಿವಾರ ನಾಯಕ, ಗಾಣಿಗ, ಮಡಿವಾಳ, ಒಕ್ಕಲಿಗಗೌಡ ಮತ್ತು ಲಿಂಗಾಯಿತ ಹೀಗೆ ಬಹುತೇಕ ಎಲ್ಲಾ ಜನಸಮುದಾಯಗಳು ಮಾದೇಶ್ವರನ ಒಕ್ಕಲಾಗಿ ದೀಕ್ಷೆ ಪಡೆಯುತ್ತಾರೆ. ಇವರೇ ದೇವರಗುಡ್ಡರು ಸೋಮವಾರ, ಶುಕ್ರವಾರ ದೀಕ್ಷೆಗೆ ಶುಭದಿನಗಳಾಗಿರುತ್ತವೆ. ಅದಿನ ದೀಕ್ಷೆಗೆ ಒಳಗಾಗುವ ಹುಡುಗನಿಗೆ ತಲೆ ಬೋಳಿಸಿ ಸ್ನಾನ ಮಾಡಿಸಿ ಬಿಳಿ ಅಂಗಿ, ಪಂಚೆ, ಟವಲ್ಲು ಧರಿಸುತ್ತಾರೆ. ಮಾದೇಶ್ವರನ ಹೆಸರಿನಲ್ಲಿ ರುದ್ರಾಕ್ಷಿಧಾರಣೆ ಮಾಡಿಸಿ ಶೈವ ದೀಕ್ಷೆ ನೀಡಿ ಗುಡ್ಡನಿಗೆ ನೀತಿಬೋಧನೆ ಮಾಡುತ್ತಾರೆ.

ಇದುವರೆವಿಗೂ ನಾನು ನನ್ನ ತಂದೆ ತಾಯಿ ಮಗನಾಗಿದ್ದೆ. ಇನ್ನೂ ಮುಂದೆ ಮಾದೇಶ್ವರನ ಮಗ, ವಂಚನೆ ಅನ್ಯಾಯ, ಅತ್ಯಾಚಾರ ಮತ್ತು ಹಿಂಸೆ ಮಾಡದೆ ಒಳ್ಳೆಯ ಮಾತನ್ನಾಡುತ್ತಾ ನಾಲ್ಕು ಮನೆ ಭಿಕ್ಷೆ ಮಾಡಿದರು ಹಂಚಿ ಉಣ್ಣುವೆ ಎಂದು ಗುಡ್ಡನಾದವನು ಹಿರಿಯ ಗುರುಗಳ ಸಮ್ಮುಖದಲ್ಲಿ ವಾಗ್ದಾನ ಪಡೆದುಕೊಳ್ಳುತ್ತಾನೆ. ತದನಂತರ ಆತನು ನಾಗ, ಬೆತ್ತ, ಜಾಗಟೆ ಅಥವಾ ಕಂಸಾಳೆ ಜೋಳಗೆಯನ್ನು ಸ್ವೀಕರಿಸುತ್ತಾನೆ. ಇದನ್ನು ದೀಕ್ಷೆ ಎಂದು ಕರೆಯಲಾಗುತ್ತದೆ. ದೀಕ್ಷೆ ನಂತರ ಗುಡ್ಡಯ್ಯ ವಿವಾಹ ಸಹ ಆಗಬಹುದು. ಪ್ರತಿ ಸೋಮವಾರ, ಶುಕ್ರವಾರ, ಮಾದೇಶ್ವರನ ಗದ್ದಿಗೆ ಪೂಜಿಸಿ ನಾಲ್ಕಾರು ಮನೆ ಭಿಕ್ಷಾ ಮಾಡುತ್ತಾ ಮಾದೇಶ್ವರನ ಹೆಸರನ್ನು ಹೇಳುತ್ತಾ ತಂಬೂರಿ ನುಡಿಸುವುದು, ಅಲ್ಲದೆ ಕಾವ್ಯವನ್ನು ಹಾಡಿನ ಮೂಲಕ ಹಾಡುವುದು, ಇದನ್ನೇ ವೃತ್ತಿ ಮಾಡಿಕೊಂಡು ಹಾಡುತ್ತಾ ಊರೂರು ಸುತ್ತುತ್ತಾ ಭಿಕ್ಷಾ ಮಾಡುತ್ತಾರೆ. ಇದು ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ದೇವರ ಗುಡ್ಡರ ದೀಕ್ಷೆ ಎಂದರೆ ವೀರಶೈವ ಪರಿಕಲ್ಪನೆಯ ಲಿಂಗಧಾರಣೆಯ ದೀಕ್ಷೆಯಲ್ಲ. ರುದ್ರಾಕ್ಷಿಧಾರಣೆ ಜೊತೆಗೆ ಮಾದೇಶ್ವರನ ಹೆಸರಿನ ಶಿವ ದೀಕ್ಷೆಯಾಗಿರುತ್ತದೆ. ಈ ಆಚರಣೆಯು ಮಾದೇಶ್ವರನ ಪಂಥ ವೀರಶೈವವಲ್ಲ ಎಂಬುದಕ್ಕೆ ಇಂದಿಗೂ ಪುರಾವೆಯಾಗಿಯೇ ಉಳಿದಿವೆ. ಮಾದೇಶ್ವರನ ಗುಡ್ಡರು ಚಾಮರಾಜನಗರ ಮೈಸೂರು, ಕೊಡಗು, ಹಾಸನ, ಮಂಡ್ಯ, ಬೆಂಗಳೂರು, ತುಮಕೂರು ಜಿಲ್ಲೆಗಳನ್ನೊಳಗೊಂಡ ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡಿನ ಭಾಗಗಳಲ್ಲಿ ಇಂದಿಗೂ ಕೂಡ ಅಸ್ತಿತ್ವದಲ್ಲಿದೆ ಎಂಬುದು ಚರಿತ್ರೆಯಲ್ಲಿ ದಾಖಲಾಗಿದೆ. ಗುಂಡ್ಲುಪೇಟೆಯ ಭಾಗದ ಜನಸಮುದಾಯಗಳ ನಡುವೆ ಇಂದಿಗೂ ಜೀವಂತವಿರುವ ಒಂದು ಸಂಸ್ಕೃತಿ ಧರ್ಮ ಮತ್ತು ಜನಪದವೆಂಬ ಜನಚರಿತ್ರೆಯಾಗಿದೆ. ನಾಗಚಿತ್ತ, ಜೋಳಗೆ, ಜಾಗಟೆ, ಕಂಸಾಳೆ, ಹುಲಿ ಮತ್ತು ಮಾದೇಶ್ವರ ಈ ಸಂಸ್ಕೃತಿಯ ಸಂಕೇತಗಳಾಗಿವೆ.

ಈ ಹಿನ್ನೆಲೆಯಿಂದ ಈ ಭಾಗದಲ್ಲಿ ಸಾಕಷ್ಟು ಮಹದೇಶ್ವರ ದೇವಾಲಯಗಳಿವೆ.[88] ಮಳವಳ್ಳಿಯಲ್ಲಿ ಮಹದೇಶ್ವರ ದೇವಾಲಯಗಳಿವೆ. ಮಂಚನಹಳ್ಳಿಯಲ್ಲಿ ಒಂದು, ರಾಘವಾಪುರದಲ್ಲಿ ಇತ್ತೀಚಿನ ಕಾಲದ ಮಹದೇಶ್ವರ ದೇವಾಲಯ, ಅರೇಪುರ, ಕರಕಳ ಮಾದಹಳ್ಳಿ, ಕೋಡಹಳ್ಳಿ ಬೆರಟಹಳ್ಳಿ, ಹುಲಸಗುಂದಿ, ಮದ್ದೂರು, ನೇನೆಕಟ್ಟೆ, ಬೇಗೂದ, ಮಲ್ಲಯ್ಯನಪುರ, ಶಿಂಡನಪುರ, ಇಂಗಲವಾಡಿ, ಬನ್ನಿತಾಳಪುರ, ಕುತನೂರು, ಭೀಮನಬೀಡು ಇನ್ನೂ ಮೊದಲಾದ ಗ್ರಾಮಗಳಲ್ಲಿ ಮಹದೇಶ್ವರ ದೇವಾಲಯಗಳಿವೆ. ಈ ದೇವಾಲಯಗಳಲ್ಲಿ ಪ್ರತಿ ಸೋಮವಾರ ಅಮವಾಸ್ಯೆ, ಹುಣ್ಣಿಮೆ, ಶಿವರಾತ್ರಿ ಹಬ್ಬದಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಹಾಗೆಯೇ ವರ್ಷಕ್ಕೆ ಒಂದು ಬರಿ ಕೊಂಡ ಮಹೋತ್ಸವ ನಡೆಯುತ್ತದೆ.

## ಅಡಿಟಿಪ್ಪಣಿಗಳು

1. ಎಫಿಗ್ರಾಫಿಯ ಕರ್ನಾಟಕ ಸಂಪುಟ-3 ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿವಿ, 1974 ರ ಗ್ರಂಥದಲ್ಲಿರುವ ಎಲ್ಲಾ ಶಾಸನಗಳ ಹಿನ್ನೆಲೆಯಲ್ಲಿ ಧರ್ಮಗಳನ್ನು ಗುರುತಿಸಬಹುದಾಗಿದೆ.
2. ಕರ್ನಾಟಕ ಚರಿತ್ರೆ (ಸಂ) - ಸಂಪುಟ-1, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪು.ಸಂ.165.
3. ಆರ್.ಎಸ್.ಶರ್ಮ - ಪ್ರಾಚೀನ ಭಾರತ, 1997, ಪು.ಸಂ.61.
4. ಡಾ.ಎಚ್.ತಿಪ್ಪೇರುದ್ರಸ್ವಾಮಿ – ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿವಿಕೆ ಮೂರ್ತಿ ಪ್ರಕಾಶಕರು, ಮೈಸೂರು, 1968 ರಿಂದ 2010 ಪು.ಸಂ.20, 21.
5. ಅದೇ
6. ಕರ್ನಾಟಕ ಪರಂಪರೆ - ಸಂಪುಟ-1, ಪ್ರಕಾಶಕರು ಮೈಸೂರು ರಾಜ್ಯ ಸರ್ಕಾರ, 1970, ಪು.ಸಂ.171.
7. ಪಿ.ಸಿ.ರಾಜಶೇಖರ್ – ಗುಂಡ್ಲುಪೇಟೆ ತಾಲ್ಲೂಕಿನ ಜಾತ್ರೆಗಳು, ರಾಜೇ.ಶ್ಅರಿ ಪ್ರಕಾಶನ, ಪಡಗೂರು, ಗುಂಡ್ಲುಪೇಟೆ ತಾಲ್ಲೂಕು, 2012, ಪುಟ-ಪರಿವಿಡಿ ಭಾಗ 2 ರಿಂದ 10.
8. ಡಾ.ದೇವರಕೊಂಡಾರೆಡ್ಡಿ – ತಲಕಾಡಿನ ಗಂಗರ ದೇವಾಲಯಗಳು-ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1994 ಈ ಗ್ರಂಥದಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಶೈವ ದೇವಾಲಯಗಳು ಮತ್ತು ಶಾಸನಗಳನ್ನು ಕುರಿತು ಮಾಹಿತಿಯನ್ನು ನೀಡಿದ್ದಾರೆ.
9. ಎಂ.ಚಿದಾನಂದಮೂರ್ತಿ – ಕ.ಶಾ.ಸಾಂ.ಅ., ಸಂಪುಟ-1, ಪು.ಸಂ.137.
10. ಅದೇ, ಪು.ಸಂ.137.
11. ಮಲೆಯೂರು ಗುರುಸ್ವಾಮಿ (ಸಂ) – 'ಹೊನ್ನುಹೊಳೆ', ಚಾಮರಾಜನಗರ ಜಿಲ್ಲೆ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ, ಶ್ರೀರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ನಂ.12/1 ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು, 2007, ಪು.ಸಂ.385.
12. ಡಾ.ನಂಜಯ್ಯ ಹೊಂಗನೂರು – ಜಾನಪದ ವಿದ್ವಾಂಸರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ರವರಿಂದ ಕೆಲವೊಂದು ಮಾಹಿತಿಯನ್ನು ಪಡೆಯಲಾಗಿದೆ.

13. ಎ.ಕ.ಸಂಪುಟ-3, ತ್ರಿಯಂಬಕಪುರ ಶಾಸನ ಸಂಖ್ಯೆ-149 (ಎ.ಕ.XIV ಗು.ಪೇ.128)

14. ಎಚ್.ಎಂ.ನಾಗರಾಜ್‌ರಾವ್ - ಶಿವಯೋಧ, ರಚನಾ ಪ್ರಕಾಶನ, ನಂ.ಇ-99, 2ನೇ ಹಂತ, ಕೆಹೆಚ್‌ಬಿ ಕಾಲೋನಿ, ಕುವೆಂಪುನಗರ, ಮೈಸೂರು, 2008, ಪು.ಸಂ.161, 162.

15. ಎ.ಕ.ಸಂಪುಟ-3, ತ್ರಿಯಂಬಕಪುರ ಶಾಸನ ಸಂಖ್ಯೆ-147 (ಎ.ಕ.XIV ಗು.ಪೇ.126)

16. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-134.

17. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-135.

18. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-137.

19. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-139.

20. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-140.

21. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-143.

22. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-151.

23. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-146.

24. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-30. (ಎಂ.ಎ.ಆರ್. 1935-23)

25. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-31. (ಎಂ.ಎ.ಆರ್. 1935-24)

26. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-30. (ಎಂ.ಎ.ಆರ್. 1935-23)

27. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-32. (ಎಂ.ಎ.ಆರ್. 1935-25)

28. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-27.

29. ಪಿ.ಸಿ.ನಾಗರಾಜಶೇಖರ್ – ಗುಂಡ್ಲುಪೇಟೆ ತಾಲ್ಲೂಕಿನ ಜಾತ್ರೆಗಳು, ರಾಜೇಶ್ವರಿ ಪ್ರಕಾಶನ, ಪಡಗೂರು, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, 2012, ಪು.ಸಂ.43, 44.

30. ಬಂಡೀಪುರದ ಅಂಚಿನಲ್ಲೆ ಇದೆ ಗವಿಗಳ ಊರು ನಮ್ಮ ತಾಣಯಾನ, ವಿಜಯ ಕರ್ನಾಟಕ, 2016, ವಾಟ್ಸ್ ಆ್ಯಪ್ 7899867700.

31. ಮಂಚಹಳ್ಳಿ ಕ್ಷೇತ್ರ- ಗುಂಡ್ಲುಪೇಟೆ ಸೋಮಶೇಖರ್, ಮೈಸೂರು ಮಿತ್ರದಿನ ಪತ್ರಿಕೆ (28.4.2016) ರ ವರದಿ.

32. ಜಿ.ಜೆ.ಮಂಜುನಾಥ್ – ಶ್ರೀ ಮದ್ದಾನೇಶ್ವರ ಚರಿತೆ, ಶ್ರೀ ಅಡವಿ ಮಠ ಪಡಗೂರು ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, 2014, ಪು.ಸಂ.15.

33. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-39 (ಎಂ.ಎ.ಆರ್. 1938)

34. ಮಲೆಯೂರ್ ಗುರುಸ್ವಾಮಿ (ಸಂ) – ಹೊನ್ನುಹೊಳೆ (ಚಾಮರಾಜನಗರ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2007, ಪು.ಸಂ.503.

35. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-49.

36. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-50.

37. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-55.

38. ದೇವರಕೊಂಡಾರೆಡ್ಡಿ-ಸತ್ಯವಾಕ್ಯನ ಹಿರೇಕಾಟಿ ಶಾಸನ, ಇತಿಹಾಸ ದರ್ಶನ, ಸಂಪುಟ-1, ಪು.ಸಂ.5, ಮತ್ತು ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1994, ಪು.ಸಂ.212.

39. ಅದೇ

40. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-56.

41. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-57.

42. ಅದೇ

43. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-59

44. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-60.

45. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-61.

46. ಡಾ.ದೇವರಕೊಂಡಾರೆಡ್ಡಿ – ತಲಕಾಡಿನ ಗಂಗರ ದೇವಾಲಯಗಳು-ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1994, ಪು.ಸಂ.158, 159.

47. ಪಂಡಿತ ಕೆ.ಸಿ. ನಂಜುಂಡಾರಾಧ್ಯ (ಸಂ) – ಹೊನ್ನುಹೊಳೆ (ಚಾಮರಾಜನಗರಜ್ ಇಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ) ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2007, ಪು.ಸಂ.429, 430.

48. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-153.

49. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-154

50. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-155.

51. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-28.

52. ಬಿ.ರಾಮು ಐಎಎಸ್, ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಅವರ ಆದೇಶದ ಮೇರೆಗೆ, ಮಹದೇಶ್ವರ ಪ್ರಿಂಟರ್ಸ್, ಗುಂಡ್ಲುಪೇಟೆ, 9984920785, 8095410914 ರವರಿಂದ ಮಾಹಿತಿಯನ್ನು ಪಡೆಯಲಾಗಿದೆ.

53. ತೆರಕಣಾಂಬಿ ವೀರಭದ್ರೇಶ್ವರ ಸ್ವಾಮಿ ದೇವಾಲಯದ ಅರ್ಚಕರು, ಟಿ.ವಿಚನ್ನವೀರಸ್ವಾಮಿಗಳು, ವಯಸ್ಸು 54 ರವರಿಂದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

54. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-51.

55. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-54. (ಎಂ.ಎ.ಆರ್. 1935 - 19)

56. ನಿಟ್ರೆ ಊರಿನ ಅರ್ಚಕರಾದ ಬಸವಣ್ಣ 70 ವರ್ಷಗಳು ಹಾಗೂ ಸುಬ್ಬಣ್ಣ 70 ವರ್ಷಗಳು ರವರಿಂದ ಮಾಹಿತಿಯನ್ನು ಪಡೆಯಲಾಗಿದೆ.

57. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-76.

58. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-78.

59. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-77.

60. ಗುಂಡ್ಲುಪೇಟೆ ತಾಲ್ಲೂಕು ಕಬ್ಬಹಳ್ಳಿ ಊರಿನ ಗೌಡಿಕೆ ಬಸವಣ್ಣ, ವಯಸ್ಸು-55 ರವರಿಂದ ಮಾಹಿತಿ ಪಡೆಯಲಾಗಿದೆ.

61. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-92.

62. ಡಾ.ದೇವರಕೊಂಡಾರೆಡ್ಡಿ-ತಲಕಾಡಿನ ಗಂಗರ ದೇವಾಲಯಗಳು-ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1994, ಪು.ಸಂ.204-205.

63. ಡಾ.ಬಿ.ಬಸವರಾಜು ತಗರಪುರ- ಚೋಳರ ವಾಸ್ತು ಮತ್ತು ಶಿಲ್ಪ, 2008 ರಲ್ಲಿ ಪ್ರಕಟವಾಗಿರುವ ಕೃತಿಯನ್ನು ನೋಡಲಾಗಿದೆ.

64. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-82.

65. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-83.

66. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-83.

67. ಆಂದೋಲನ ದಿನಪತ್ರಿಕೆ 20.5.2017 ರಂದು ಕನ್ನಡ ಪ್ರಭ, 18.5.2017 ರಂದು ಪತ್ರಿಕೆಗಳಲ್ಲಿ ವರದಿ ಮಾಡಿದೆ.

68. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-86.

69. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-87.

70. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-168. (ಎ.ಕ.4, ಗು.ಪೇ.11)

71. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-179. (ಎ.ಕ.4, ಗು.ಪೇ.55)

72. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-176.

73. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-177.

74. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-212.

75. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-213

76. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-214..

77. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-215.

78. ಕುಣ್ಣೇಗಾಲ, ಮಾದಪ್ಪ ವಯಸ್ಸು-52, ಅವರಿಂದ ಮಾಹಿತಿಯನ್ನು ಪಡೆಯಲಾಗಿದೆ.

79. ಶಂಕನಪುರ ಮಹದೇವ – ಮಂಟೇಸ್ವಾಮಿ, ಪ್ರಸಾರಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು ಪ್ರಕಟಣೆ 2010, ಪು.ಸಂ.1.2.

80. ಎಫಿಗ್ರಪಿಯಾ ಆಫ್ ಕರ್ನಾಟಿಕ(ಸಂ3)- ಗುಂಡ್ಲುಪೇಟೆ ತಾಲೂಕಿಗೆ ಸೇರಿದ ಎಲ್ಲ ಶಾಸನಗಳ ಹಿನ್ನಲೆಯಲ್ಲಿ ಗಮನಿಸಬಹುದಾಗಿದೆ.

81. ಎಫಿಗ್ರಪಿಯಾ ಆಫ್ ಕರ್ನಾಟಿಕ(ಸಂ3)- ಶಾಸನ ಸಂಖ್ಯೆ 9 ರಿಂದ 17.

೮೨. ಸಿ.ನಾಗರಾಜು – ಶ್ರೀ ಮಲೈಮಹದೇಶ್ವರ ಕ್ಷೇತ್ರ, ಶ್ರೀಕಾಂತ ಮಲ್ಲಿಕಾರ್ಜುನಸ್ವಾಮಿ ಪ್ರಕಾಶನ, ಶ್ರೀ ಸಾಲೂರು ಬ್ರಹನ್ಮಠ, ಶ್ರೀ ಮಹದೇಶ್ವರ ಬೆಟ್ಟ, ಕೊಳ್ಳೇಗಾಲ ತಾಲ್ಲೂಕು, ಪ್ರಕಟಣೆ 1979, ಪು.ಸಂ.10, 11.

೮೩. ಡಾ.ವೆಂಕಟೇಶ ಇಂದ್ವಾಡಿ – ಮಲೆಯ ಮಾದಪ್ಪನ ಮಹಾಕಾವ್ಯ, ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೮, ಪು.ಸಂ.116.

೮೪. ಅದೇ ಪು.ಸಂ.115.

೮೫. ಅದೇ ಪು.ಸಂ.೮೩.

೮೬. ಮಹಾದೇವ ಶಂಕನಪುರ – ಮಲೆಯ ಮಾದಯ್ಯನ ಚರಿತ್ರೆ, ಪ್ರಸರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಮಂಟಪಮಾಲೆ, 257, ಪ್ರಕಟಣೆ 2011, ಪು.ಸಂ.18.

೮೭. ಅದೇ ಪು.ಸಂ.೨೦.

೮೮. ಡಾ.ಸಿ.ಕೆ.ರಾಜಶೇಖರ್ – ಜಾನಪದ ವಿದ್ವಾಂಸರು, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಕನ್ನಡ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಇವರಿಂದ ಸಾಕಷ್ಟು ಮಾಹಿತಿಯನ್ನು ಪಡೆಯಲಾಗಿದೆ.

## ವೀರಶೈವ ಮತಗಳು

### ಪೀಠಿಕೆ

ವೀರಶೈವ ಧರ್ಮವು ಕೂಡ ಒಂದು ಪ್ರಾಚೀನ ಧರ್ಮ. ವೇದಾಂತದ ಮೂರು ಪಂಥಗಳಾದ ಅದ್ವೈತ, ವಿಶಿಷ್ಠಾದ್ವೈತ, ದ್ವೈತ ಅಲ್ಲದೆ ಹನ್ನೆರಡನೆಯ ಶತಮಾನದಲ್ಲಿ ಬಸವೇಶ್ವರ, ಅಲ್ಲಮಪ್ರಭು, ಚನ್ನಬಸವೇಶ್ವರ, ಸಿದ್ಧರಾಮ, ಮತ್ತು ಇನ್ನಿತರರ ನೇತೃತ್ವದಲ್ಲಿ ವೀರಶೈವ ಧರ್ಮದ ಆಂದೋಲನವು ಆರಂಭವಾಯಿತು. ಈ ಆಂದೋಲನವು ಆ ಕಾಲದ ಧಾರ್ಮಿಕ ಆಚಾರ-ವಿಚಾರಗಳ ಮೇಲೆ ವಿಶೇಷವಾದಂತಹ ಪ್ರಭಾವವನ್ನು ಬೀರಿತು.

ಶಿವನನ್ನು ಲಿಂಗದ ರೂಪದಲ್ಲಿ ಪೂಜಿಸುವ ಶೈವ ಧರ್ಮವು ಪ್ರಪಂಚದ ಜೀವಂತವಾದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ವೀರಶೈವ ಧರ್ಮದಲ್ಲಿನ ದರ್ಶನವನ್ನು ಶಕ್ತಿ ವಿಶಿಷ್ಠಾದ್ವೈತವೆನ್ನುತ್ತಾರೆ. ವೀರಶೈವ ಧರ್ಮವು ಸಾಮಾನ್ಯವಾಗಿ ಇಪ್ಪತ್ತೆಂಟು ಶಿವಾಗಮಗಳನ್ನು ಪ್ರಮಾಣವೆಂದು ಭಾವಿಸಲಾಗಿದೆ. ಅಲ್ಲದೆ ಅಲ್ಲಲ್ಲಿ ವೇದಗಳ ಶ್ಲೋಕಗಳನ್ನು ಉದ್ಧರಿಸುವುದರ ಮೂಲಕ ವಿವಕ್ಷಿತ ತತ್ವವು ವೇದಸಮ್ಮತವೆಂದು ಸ್ಪಷ್ಟಪಡಿಸುತ್ತದೆ. ಆದರೆ ವೇದೋಪನಿಷತ್ತುಗಳು ಎಲ್ಲೆಲ್ಲಿ ಶೈವಾಗಮರೊಡನೆ ಒಮ್ಮತ ಹೊಂದಿವೆಯೋ ಅಂತಹವುಗಳನ್ನು ಮಾತ್ರ ವೀರಶೈವ ಧರ್ಮವೆಂದು ಹೇಳಲಾಗಿದೆ.

ಕ್ರಿ.ಶ.12ನೇ ಶತಮಾನದಲ್ಲಿ ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದ ಶಿವಶರಣರ ಅನುಭವಿಗಳ ಮೂಲಕ ಕರ್ನಾಟಕದಲ್ಲಿ ವೀರಶೈವ ಧರ್ಮದಲ್ಲಾದ ಬೆಳವಣಿಗೆಯನ್ನು ಸಂಗ್ರಹವಾಗಿ ಹೀಗೆ ತಿಳಿಸಬೇಕಾಗಿದೆ.

1. ಶಿವನಲ್ಲಿ ಭಕ್ತಿಭಾವ ಸಮರ್ಪಣೆಗೆ ಸರ್ವ ಪ್ರಾಧಾನ್ಯವನ್ನು ಕೊಡಲಾಯಿತು.
2. ಧಾರ್ಮಿಕ ಆಚರಣೆಯಲ್ಲಿ ಸ್ತ್ರೀಯರಿಗೆ ಸಮಾನ ಸ್ಥಾನ, ದೀಕ್ಷೆ ಅಥವಾ ಉಪದೇಶವನ್ನು ಪಡೆಯುವ ಹಕ್ಕು ಲಿಂಗಧಾರಣೆಯ ಮೂಲಕ ಅವಕಾಶವನ್ನು ಕೊಡಲಾಯಿತು.
3. ವೀರಶೈವ ಧರ್ಮವನ್ನು ಅನುಸರಿಸುವವರಿಗೆ ವರ್ಣಾಶ್ರಮ ಧರ್ಮದ ನಿರ್ಬಂಧವನ್ನು ಸಡಿಲಿಸಲಾಯಿತು.
4. ಹರಿಜನರಿಗೆ ಪೂಜಾಕಾರ್ಯದಲ್ಲಿಯೂ ಧಾರ್ಮಿಕ ವ್ಯವಹಾರಗಳಲ್ಲಿಯೂ ಸಮಾನ ಸ್ಥಾನಮಾನಗಳನ್ನು ನೀಡಲಾಯಿತು.
5. ವೀರಶೈವ ಧರ್ಮದಲ್ಲಿ ಶ್ರದ್ಧೆಯಿಟ್ಟವರಿಗೆ ಕಾಯಕದ ಮಹತ್ವವನ್ನು ಒತ್ತಿ ಹೇಳಿ ಕಾಯಕವೇ ಕೈಲಾಸ ಎಂಬುದನ್ನು ಮನದಟ್ಟು ಮಾಡಿಕೊಡಲಾಯಿತು.

6. ಅನುಭಾವಿಗಳಾದ ಶಿವಶರಣರು ನೀತಿ ಮತ್ತು ತತ್ವ ಪ್ರಚಾರಕ್ಕಾಗಿ ಪದ್ಯ ಗದ್ಯರೂಪದಲ್ಲಿ ಸುಲಭ ಶೈಲಿಯಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ವಚನಗಳನ್ನು ರಚಿಸಿದ್ದಾರೆ. ಇದರಿಂದ ಇದರ ಬೆಳವಣಿಗೆಯನ್ನು ತಿಳಿಯಲು ಸಹಕಾರಿಯಾಗಿದೆ.
7. ವೀರಶೈವ ಧರ್ಮದಲ್ಲಿ ಭಕ್ತರು ಆಧ್ಯಾತ್ಮಿಕ ಪ್ರಗತಿಯನ್ನು ಹೊಂದಲು ಎಂಟು ನಿಯಮಗಳನ್ನು ಪಾಲಿಸಬೇಕು. 1) ಗುರುವಿನಲ್ಲಿ ವಿಧೇಯತೆ, 2) ನಿತ್ಯ ಲಿಂಗಾರ್ಚನೆ, 3) ಜಂಗಮರಲ್ಲಿ ಗೌರವ ಭಾವ, 4) ಹಣೆ ಮತ್ತು ದೇಹದ ಮೇಲೆ ವಿಭೂತಿಧಾರಣೆ, 5)ರುದ್ರಾಕ್ಷಿ ಧಾರಣೆ 6) ಗುರುಜಂಗಮರನ್ನು ಪೂಜಿಸಿ ಅವರ ಪಾದದ ಮೇಲೆ ಎರೆದ ಪಾದೋದಕ ಸ್ವೀಕರಣ ಅಥವಾ ಶಿವಾರ್ಚನೆಯಾದ ಮೇಲೆ ಲಿಂಗದ ಮೇಲೆ ಎರೆದ ತೀರ್ಥಸ್ವೀಕರಣ, ಈ ರೀತಿಯಾದ ಶುದ್ಧೋಧಕ ಪವಿತ್ರವಾದುದರಿಂದ ತೀರ್ಥವಾಗಿ ಸ್ವೀಕರಿಸಬೇಕು. 7) ಪ್ರಸಾದ, ಗುರು ಅಥವಾ ಲಿಂಗ ಅಥವಾ ಜಂಗಮಕ್ಕೆ ಅರ್ಪಿಸಿದ ನಂತರ ಭಾಂಡದಲ್ಲಿ ಉಳಿದ ಆಹಾರ ಅವರು ಭೋಜಿಸಿದ ಮೇಲೆ ಭಾಂಡದಲ್ಲಿ ಉಳಿದುದುದನ್ನು ಪವಿತ್ರ ಭಾವನೆಯಿಂದ ಸ್ವೀಕರಿಸಬೇಕು. 8) ದೇವರನ್ನು ಧ್ಯಾನ ಮಾಡುತ್ತಾ ನಮಃಶಿವಾಯ ಎಂಬ ಪಂಚಾಕ್ಷರಿಯನ್ನು ಜಪಿಸುವುದೇ ಮಂತ್ರ. ಇದು ವೀರಶೈವರು ಪ್ರತಿನಿತ್ಯ ಅನುಸರಿಸಬೇಕಾದ ವಿಧಿ. ಕ್ರಿ.ಶ.12ನೇ ಶತಮಾನದಲ್ಲಿ ವೀರಶೈವ ಶರಣರು ಅನುಭಾವಿಗಳು ಕರ್ನಾಟಕದಲ್ಲಿ ಷಟ್‌ಸ್ಥಲ ಸಿದ್ಧಾಂತವನ್ನು ವಚನಗಳ ರೂಪದಲ್ಲಿ ಪ್ರಸಾರ ಮಾಡಿದರು. ಭಕ್ತಿ ಮಾರ್ಗದಲ್ಲಿ ನೈತಿಕಾಚರಣೆ ಇರುವ ಮಹತ್ವವನ್ನು ಒತ್ತಿ ಹೇಳಿದರು. ಈ ಧರ್ಮ ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪಕವಾಗಿ ಬೆಳೆದಿದೆ. ವೀರಶೈವ ಧರ್ಮದಷ್ಟೇ ಪ್ರಾಚೀನ ಇತಿಹಾಸವನ್ನು ಹೊಂದಿರುವ ವೀರಶೈವ ಮಠಗಳಿವೆ. 12ನೇ ಶತಮಾನದಲ್ಲಿ ಬಸವಾದಿ ಪ್ರಮಥರ ವಚನ ಚಳುವಳಿಯೊಂದಿಗೆ ಪ್ರಚಲಿತವಾಗತೊಡಗಿದ ವೀರಶೈವ ಧರ್ಮದಲ್ಲಿ ಮಠಗಳು ಸಹ ಗಣನೀಯ ಪ್ರಮಾಣದಲ್ಲಿ ಕಾಣಿಸಿಕೊಳ್ಳಲಾರಂಭಿಸಿದ್ದವು. ಮುಂದೆ ವೀರಶೈವ ಧರ್ಮೀಯರೆ ಪ್ರಧಾನವಾಗುವ ಪ್ರತಿಯೊಂದು ಗ್ರಾಮಗಳನ್ನು ಒಂದೊಂದು ವೀರಶೈವ ಮಠ ಕಡ್ಡಾಯವಾಗಿರುತ್ತಿತ್ತು.

ಮಠಗಳು ಧಾರ್ಮಿಕ ಕೇಂದ್ರವಾಗಿಯಲ್ಲದೆ. ಜ್ಞಾನಾರ್ಜನೆಯ ಕೇಂದ್ರ, ವಿದ್ಯಾಪ್ರಸಾರ, ಜ್ಞಾನ ಪ್ರಸಾರ ಮತ್ತು ಮತ ಪ್ರಚಾರ ಕೇಂದ್ರಗಳಾಗಿಯೂ ಕೆಲಸ ನಿರ್ವಹಿಸಿ ಆಶ್ರಯ ಹಾಗೂ ಆಶ್ರಯ ತಾಣಗಳೂ ಆಗಿದ್ದವು. ಈ ಹಿನ್ನೆಲೆಯಿಂದ ಶೀಘ್ರ ಬೆಳವಣಿಗೆಯ ಜೊತೆಗೆ ಪ್ರಭಾವಿ ಕೇಂದ್ರಗಳಾಗಿಯೂ ಮಾರ್ಪಟ್ಟವು. ಅವುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅನೇಕ ಹಿರಿಯ

ಸ್ವಾಮಿಗಳು ವೀರಶೈವ ಧರ್ಮದ ಪಾಲಕರಾಗಿಯೂ, ಪೋಷಕರಾಗಿಯೂ ಆಗಿದ್ದರಿಂದ ಅನೇಕ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅನೇಕ ಮಠಗಳ ಸ್ಥಾಪನೆಗೆ ಕಾರಣರಾಗಿದ್ದಾರೆ.

ಶಿವ ಎಂದರೆ ಶುಭದಾಯಕವಾದದ್ದು ಎಂದು ಅರ್ಥ. ಅಂತೆಯೇ ಸದಾಶಿವಪರ ಚಿಂತನೆ, ಕ್ರಿಯೆಗಳಿಗೆ ತಮ್ಮ ಶಕ್ತಿಯನ್ನು ಸಂಚಯವಾಗುವಂತೆ ಮಾಡುವವರೆಲ್ಲರೂ ಶಿವಕೃಪೆಗೆ ಒಳಗಾಗಿ ನಿರಂತರವಾಗಿ ಶಿವಪದವಾದುದರ ಚಿಂತನೆ, ಅರ್ಪಣೆ ಮತ್ತು ರಕ್ಷಣೆಗೆ ತಮ್ಮನ್ನು ಮುಡುಪಾಗಿಟ್ಟ ವೀರ ನಿಷ್ಠೆಯುಳ್ಳವರೇ ವೀರಶೈವರು ಎನಿಸಿಕೊಳ್ಳುವರು. ಇದನ್ನೇ ನಾವು ವೀರಶೈವ ಧರ್ಮದಲ್ಲಿ ಹೇಳಲಾಗಿರುವ ಅಷ್ಠಾವರಣ ಪಂಚಾಚಾರ, ಷಟ್‌ಸ್ಥಲ ಸಿದ್ಧಾಂತ ಶಿವನಿಗೂ ತನಗೂ ಭೇದವಿಲ್ಲ, ಅರಿವು ಮೂಡುವುದೇ ಶಕ್ತಿ ವಿಶಿಷ್ಠಾದ್ವೈತವೆಂದು ತಿಳಿಯಪಡಿಸಿ ಹಾಗೆ ಶಿವ ಒಂದನ್ನೇ ಆರಾಧಿಸುವ ಏಕೋದೇವೋಪಾಸನೆಯ ಅರಿವನ್ನು ಎಲ್ಲರಿಗೂ ಸ್ಪಷ್ಟಪಡಿಸಿದರು. ಹೀಗೆ ಚಿಂತನೆಗಳು ಮುಂದುವರೆದಂತೆ ವೀರಶೈವ ಧರ್ಮಕ್ಕೆ ಬಸವಣ್ಣನವರಿಂದ ಸಾಮಾಜಿಕವಾಗಿ, ಚನ್ನಬಸವಣ್ಣನವರಿಂದ ಧಾರ್ಮಿಕವಾಗಿ ಮತ್ತು ಅಲ್ಲಮಪ್ರಭುವಿನಿಂದ ಆಧ್ಯಾತ್ಮಿಕವಾಗಿ ಒಂದು ಶಿಸ್ತಿನ ಚೌಕಟ್ಟು ಉಂಟಾಯಿತು. ಸತ್ಯಶುದ್ಧ ಕಾಯಕದಿಂದಲೇ ಮನುಕುಲದ ಮುಕ್ತಿ ಸಾಧ್ಯ ಎನ್ನುವುದನ್ನು ಕಾಯಕವೇ ಕೈಲಾಸ ಎನ್ನುವ ಮಾತಿನಲ್ಲಿ ತಿಳಿಸಿದ್ದಾರೆ. ದಾಸೋಹದ ಕಲ್ಪನೆಯನ್ನು ಬಿತ್ತಿದ್ದಾರೆ. ಸ್ತ್ರೀ ಪುರುಷರೆನ್ನದೆ ಸಮಾಜದ ಎಲ್ಲಾ ವರ್ಗದ ಜ್ಞಾನಿಗಳನ್ನು ಸೇರಿಸಿಕೊಂಡು ಇಂದಿನ ಆಧುನಿಕ ಭಾರತೀಯರಾದ ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ನೀತಿಯನ್ನು, ಸಂವಿಧಾನವನ್ನು ಮೀರಿದ ಜಾತ್ಯಾತೀತ ಧೋರಣೆಯಲ್ಲಿ ಅವರು ನಿಷ್ಪಕ್ಷಪಾತವಾದ ದೃಷ್ಟಿಯಿಂದ ಬೇಕಾದುದನೆಲ್ಲಾ ತಮ್ಮ ಚಿಂತನ ಮಂಥನಗಳಿಗೆ ಸಹಕರಿಸಿ ವೀರಶೈವ ಧರ್ಮವನ್ನು ಸ್ಥಾಪಿಸಿದ್ದಾರೆ. ಇಂದು ವೀರಶೈವರು ತಾತ್ವಿಕ ದೃಷ್ಟಿಯಿಂದ ಮುಖ್ಯವಾಗಿ 28 ಶೈವಾಗಮಗಳನ್ನು ಶಿವದೀಕ್ಷೆ, ಶಿವಪೂಜೆ ಇನ್ನೂ ಮೊದಲಾದ ವೈದಿಕ ಕರ್ಮಗಳಲ್ಲಿ ವೇದಮಂತ್ರಗಳನ್ನು ಆಗಮೋಕ್ತ ಸಾಧನಾ ಕ್ರಮಗಳನ್ನು ಆಚರಣೆಯಲ್ಲಿಟ್ಟುಕೊಂಡು ಜೊತೆಗೆ ಶಿವಶರಣರ ಉಕ್ತಿಗಳನ್ನು ಮಾನ್ಯ ಮಾಡುತ್ತಾ ನಡೆಯುತ್ತಿದ್ದಾರೆ.

### ವೀರಶೈವ ಮಠಗಳು

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಪ್ರಸ್ತುತ ಕೆಲವೊಂದು ವೀರಶೈವ ಮಠಗಳಿವೆ. ಈ ವೀರಶೈವ ಮಠಗಳು ಸಮಾಜದ ಅವಿಭಾಜ್ಯ ಅಂಗವಾಗಿ ಸಮಾಜದ ಸದಸ್ಯರೊಡನೆ ವಿವಿಧ ಸಂಬಂಧವನ್ನು ಪಡೆದುಕೊಂಡು, ನಿರಂತರವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ವಿಕಾಸವಾಗುತ್ತಾ ವೀರಶೈವ ಮಠಗಳ ಕಾರ್ಯಕ್ಷೇತ್ರವು ಬೆಳೆಯುತ್ತಾ ಸಾಗಿದೆ. ಈ ಭಾಗದ ವೀರಶೈವ ಮಠಗಳು

ಇಂದಿಗೂ ಸಹ ಸಮಾಜದಲ್ಲಿ ನಿರ್ವಹಿಸುತ್ತಿರುವ ಪ್ರಮುಖ ಪಾತ್ರವು ಸರ್ವವಿಧಿತವಾಗಿದೆ. ವೀರಶೈವ ಮಠಗಳ ಕಾರ್ಯಕ್ಷೇತ್ರದ ವಿಕಾಸವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಕಾಣಬಹುದಾಗಿದೆ.

ವೀರಶೈವ ಧರ್ಮದಲ್ಲಿ ಕಾಯಕಕ್ಕೆ ಇರುವ ಮಹತ್ವದ ಸ್ಥಾನವನ್ನು ಇಲ್ಲಿ ಸ್ಮರಿಸಬಹುದು. ಸನ್ಯಾಸಿಗೂ ಸಹ ಕಾಯಕದ ಅಗತ್ಯವಿದೆ. ಕಾಯಕ ಶಬ್ದವೇ ಸೂಚಿಸುವಂತೆ ಪ್ರತಿಯೊಬ್ಬ ಮನುಷ್ಯನಿಗೂ ಒಂದಲ್ಲಾ ಒಂದು ರೀತಿಯಲ್ಲಿ ಶರೀರದ ಕಾರ್ಯದ ಅವಶ್ಯಕತೆ ಇದೆ. ಈ ಭಾಗದ ಮಠಗಳು ಕೂಡ ಪರಂಪರಾನುಗತವಾಗಿ ಬಂದ ಕಾರ್ಯಗಳ ನಿರ್ವಹಣೆಯಲ್ಲಿ ನವಚೇತನವನ್ನು ವೀರಶೈವ ಮಠಗಳ ಕಾರ್ಯಕ್ಷೇತ್ರದಲ್ಲಿ ಕಾಣುತ್ತೇವೆ. ಈ ಭಾಗದ ಮಠಗಳು ಕೇವಲ ವೀರಶೈವ ಧರ್ಮದ ತತ್ವಗಳಿಗೆ ಸೀಮಿತವಾಗಿರದೆ ವಿದ್ಯಾಕ್ಷೇತ್ರಗಳು ಸಹ ಆಗಿವೆ.

ವೀರಶೈವ ಮಠಗಳ ಚರಿತ್ರೆಯನ್ನು ಅವಲೋಕಿಸಿದರೆ, ವಿದ್ಯಾ ಪ್ರಸಾರಕ್ಕೂ ಮಠಗಳಿಗೂ ಇರುವ ಸಂಬಂಧವು ಸ್ಫುಟವಾಗಿ ಕಾಣುತ್ತದೆ. ವೀರಶೈವ ಮಠಗಳು ಮೊದಲ ಧರ್ಮ ಪ್ರಸಾರದಲ್ಲಿ ನಿರತವಾಗಿದ್ದವು. ಕಾಲಕ್ರಮೇಣ ಲೌಕಿಕ ವಿದ್ಯಾಭ್ಯಾಸಕ್ಕೆ ಉತ್ತೇಜನವನ್ನು ನೀಡಿದವು. ಬೌದ್ಧ ಮತದ ಚರಿತ್ರೆಯಿಂದ ವಿಧಿತವಾದ ವಿಚಾರವು ವೀರಶೈವ ಮಠಾಧಿಪತಿಗಳಿಗೆ ಮನವರಿಕೆಯಾಗಿದ್ದಿತು. ಆದಕಾರಣ ಇವರು ಸಹ ಲೌಕಿಕ ಜೀವನದ ಉತ್ಕೃಷ್ಟತೆಗೆ ಗಮನಕೊಟ್ಟರು ಜನರ ಆಶೋತ್ತರಗಳು ಅಭಿವೃದ್ಧಿಯಾದಂತೆ ಮಠಗಳ ಕಾರ್ಯಕ್ಷೇತ್ರದ ವೈಶಾಲ್ಯವು ವಿಕಾಸವಾಗಿದೆ.

ವೀರಶೈವ ಮಠಗಳಲ್ಲಿ ನೂರೊಂದು ಕಾಯಕಗಳು ಬೋಧಿಸಲ್ಪಡುತ್ತಿದ್ದವೆಂಬ ಸಂಪ್ರದಾಯವಿದೆ. ವ್ಯವಸಾಯಕ್ಕೆ ಸಂಬಂಧಿಸಿದಂತೆ ಹಲವಾರು ವೃತ್ತಿಗಳ ಶಿಕ್ಷಣವು ವೀರಶೈವ ಮಠಗಳಲ್ಲಿ ದೊರಕುತ್ತಿತ್ತು. ಪ್ರಸ್ತುತ ದಿನಗಳಲ್ಲಿ ಗುಂಡ್ಲುಪೇಟೆಯ ಸೋಮನಹಳ್ಳಿ ಮಠದಲ್ಲಿ ಈ ಕಾಯಕವನ್ನು ಕಾಣಬಹುದಾಗಿದೆ.

ಒಟ್ಟಾರೆ ಹೇಳುವುದಾದರೆ ವೀರಶೈವ ಧರ್ಮದಲ್ಲಿ ಮಠಗಳ ವ್ಯವಸ್ಥೆಯು ಮಹತ್ವಪೂರ್ಣವಾದುದು. ಜನಜೀವನದ ಸಮಸ್ತ ಭಾಗಗಳ ಮೇಲೂ ವಿವಿಧ ರೀತಿಯಲ್ಲಿ ಮಠಗಳು ತಮ್ಮ ಪ್ರಭಾವವನ್ನು ಬೀರುತ್ತಾ ಬಂದಿದೆ. ಆಯಾ ಕಾಲಕ್ಕೆ ಮಠಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಸೂಕ್ತವಾದ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತಾ ಬಂದು ಜನರ ಔನ್ನತ್ಯದ ಕಡೆಗೆ ದೃಷ್ಟಿಯಿಟ್ಟು ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿವೆ. ಆದುದರಿಂದಲೇ ಮಠಗಳು ಜನಜೀವನದ ಮೇಲೆ ಉನ್ನತ ನೈತಿಕ ಪ್ರಭಾವವನ್ನು ಹೊಂದಿದೆ.

## ಜೈನಧರ್ಮ–ವೀರಶೈವ ಧರ್ಮ

ವೀರಶೈವ ಧರ್ಮದಲ್ಲಿ ಏಕೈಕ ಪರಮಾರಾಧ್ಯ ದೇವಾಧಿದೇವರೆಂದರೆ ಶಿವ, ಇವರಲ್ಲಿ ಸಮಸ್ತಲೋಕವೂ ಈ ಪರಮೇಶ್ವರನನ್ನು ಆಧರವಾಗಿಟ್ಟುಕೊಂಡಿದೆ. ಅದೇ ರೀತಿ ಜೈನಧರ್ಮದಲ್ಲಿ ಶಿವಪಾರಮ್ಯವಿಲ್ಲವೆಂದು, ನಿಜವಾದರೂ ಶಿವಪದದ ಬಗ್ಗೆ ಅಪಾರ ಭಕ್ತಿ ಇದೆ. ಶಿವಪದಕ್ಕೆ ಮುಕ್ತಿ ಮೋಕ್ಷ ಮತ್ತು ನಿರ್ವಾಣ ಎಂಬ ಅರ್ಥವಿದೆ. ಬಹುಪ್ರಾಚೀನ ಕಾಲದಿಂದಲೂ ಜೈನಧರ್ಮದ ಭಕ್ತಿಪಂಥಗಳಲ್ಲಿ ಒಂದಾಗಿ ಉಳಿದುಬಂದಿರುವ ಪಂಚ ಗುರುಭಕ್ತಿಯಲ್ಲಿ ಹಾಗೂ ಸಿದ್ಧ ಭಕ್ತಿಯನ್ನು ಗಮನಿಸಬಹುದಾಗಿದೆ. ಉದಾಹರಣೆ ಶಿವನ ಕೊರಳಿನಲ್ಲಿ ಸರ್ಪ ಇದೆ. ಅದೇ ರೀತಿ ಪಾರ್ಶ್ವನಾಥನ ಪಾದದಿಂದ ತಲೆಯವರೆಗೆ ಸರ್ಪವನ್ನು ಗಮನಿಸಬಹುದಗಿದೆ.

ಶಿವನನ್ನು ಕುರಿತು ಅನೇಕ ಪೌರಾಣಿಕ ಕಥನಗಳು ಜೈನಧರ್ಮ ಪಂಥದ ಆದಿತೀರ್ಥಂಕರ ವೃಷಭನಾಥನ ಪೌರಾಣಿಕ ಕಥನಾಂಶಗಳೊಡನೆ ಸಾದೃಶ್ಯತೆಯುಳ್ಳವಾಗಿದೆ. ವೃಷಭನಾಥನು ಶಿವಪದವಿ, ಮುಕ್ತಿಪದವಿಯನ್ನು ಪಡೆದುದು ಕೈಲಾಸ ಪರ್ವತದಿಂದ, ಮಾಘಮಾಸ, ಕೃಷ್ಣಪಕ್ಷ, ಚತುರ್ದಶಿಯಂದು ವೃಷಭನಾಥನು ಶಿವಪದವಿ, ಮುಕ್ತಿಪದವಿ ಪಡೆದ ಕಾರಣ ಆ ದಿನವನ್ನು ಶಿವರಾತ್ರಿ ಎಂಬ ಹೆಸರಿನ ಪರ್ವದಿನವಾಗಿ ಆಚರಿಸಲಾಗುತ್ತಿದೆ. ಶಿವರಾತ್ರಿಯೂ ಶೈವಧರ್ಮೀಯರಿಗೆ ಪವಿತ್ರ ಪರ್ವದಿನವಾಗಿರುವುದೆಂಬುದು ಲೋಕಪ್ರಸಿದ್ಧವಾಗಿದೆ. ವೃಷಭನಾಥನನ್ನು ಶಿವ ಎಂಬ ಹೆಸರಿನಿಂದ ಮತ್ತು ಶಿವನಿಗೆ ಸಲ್ಲುವ ಇತರ ಹೆಸರುಗಳಿಂದ ಕರೆಯುವ ರೂಢಿ ಸಂಪ್ರದಾಯ ಪ್ರಾಚೀನ ಕಾಲದಿಂದಲೂ ಇದೆ. ಆದಕಾರಣ ಶೈವ, ವೀರಶೈವ, ಜೈನಧರ್ಮಕ್ಕೆ ಒಂದಕ್ಕೊಂದು ಸಂಬಂಧ ಇದೆ.

ಅಷ್ಟಾವರಣಗಳು ವೀರಶೈವ ಧರ್ಮದಲ್ಲಿ ಧಾರ್ಮಿಕ ಲಕ್ಷಣ ಮತ್ತು ಅವಶ್ಯಕ ಅಂಗಗಳಾಗಿವೆ. ಅದೇ ಮಾದರಿಯಲ್ಲಿ ಜೈನಧರ್ಮದಲ್ಲಿ ಆತ್ಮ ಸ್ವಾಭಾವಿಕ ಗುಣಗಳ ವಿಕಾಸಕ್ಕೆ ತಡೆಯಾಗಿರುವ ಎಂಟು ಕರ್ಮಗಳ ಆವರಣವನ್ನು ತಿಳಿಸಿದೆ. ಗುರುವಿಗೆ ವೀರಶೈವ ಧರ್ಮದಲ್ಲಿ ಪರಮಪೂಜ್ಯ ಸ್ಥಾನವಿದೆ. ಶಿವೈಕ್ಯತೆಯ ಮಾರ್ಗದರ್ಶನ ಕೊಡುವ ಗುರುವು ಶಿವನಷ್ಟೇ ಅಲ್ಲ, ಶಿವನಿಗಿಂತಲೂ ಹೆಚ್ಚು ಪೂಜ್ಯವಾಗಿದ್ದಾನೆ. ಜೈನಧರ್ಮ ಪಂಥದಲ್ಲಿ ಪರಮಾರಾಧ್ಯರೆನಿಸಿದ ಹರಹಂತ, ಸಿದ್ದ ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧು ಎಂಬ ಪಂಚಪರಮೇಷ್ಠಿಗಳನ್ನು ಪ್ರಾಚೀನ ಕಾಲದಿಂದಲೂ ಪಂಚಗುರುಗಳೆಂದು ಸ್ತುತಿಸಿದೆ. ಪಂಚ ಗುರುಭಕ್ತಿ ಪೀಠವು ಬಹುಪ್ರಾಚೀನವಾದದ್ದೆಂದು ಮುಕ್ತಿ ಸಾಧನೆಯ ಜೈನ ಧರ್ಮದ ಪರಮೋದ್ದೇಶವಾಗಿದೆ. ಜೈನಧರ್ಮ ಪಂಥದಲ್ಲಿ ನಿರ್ಗ್ರಂಥ ಮುನಿಯ ಬಹಿರಂಗ ಮತ್ತು ಅಂತರಂಗ ಶುದ್ಧ ಆಚಾರ ಧರ್ಮವನ್ನು ಲಿಂಗವೆಂದು ಕರೆಯಲಾಗಿದೆ. ಈ ಆಚಾರ ಧರ್ಮ

ಬೇರೆಯಲ್ಲ ಮತ್ತು ಇದನ್ನು ಪಾಲನೆ ಮಾಡುವ ನಿರ್ಗ್ರಂಥ ಮುನಿ ಬೇರೆಯಲ್ಲ. ಆದ್ದರಿಂದ ಮುಕ್ತಿ ಸಾಧಕವಾದ ಧರ್ಮಕ್ಕೆ ಸಲ್ಲುವಷ್ಟೇ ಪೂಜ್ಯಭಾವನೆಯು ಆ ಧರ್ಮದ ಮೂರ್ತ ಸ್ವರೂಪನಾಗಿರುವ ನಿರ್ಗ್ರಂಥ ಮುನಿಗೂ ಸಲ್ಲುತ್ತದೆ. ಜೈನರಲ್ಲಿ ನಿತ್ಯವೂ ವಿಭೂತಿಧಾರಣೆ ಇರುವುದಿಲ್ಲ. ಆದರೆ ವಿಭೂತಿಯನ್ನು ಪವಿತ್ರವೆಂದು ಪೂಜ್ಯಭಾವದಿಂದ ಕಾಣುತ್ತಾರೆ. ವೀರಶೈವ ಧರ್ಮದಲ್ಲಿ ಪರಮೇಶ್ವರನು ಭಸ್ಮಲೇಪನ ಮಾಡಿಕೊಂಡರು. ಆದುದರಿಂದ ಅವರು ವಿಭೂತಿ ಹಾಕಿಕೊಳ್ಳುತ್ತಾರೆ.

ವೀರಶೈವ ಧರ್ಮದಲ್ಲಿ ವಿಭೂತಿಗಿರುವ ಪೂಜ್ಯ ಭಾವದೊಡನೆ ನಿಕಟವಾದ ಸಂಬಂಧ ಇದೆ. ವೀರಶೈವರು ರುದ್ರಾಕ್ಷಿಯ ಮಾಲೆ ಹಾಕಿಕೊಳ್ಳುತ್ತಾರೆ. ಇದು ಶೈವ ಮತಧರ್ಮದ ವೈಶಿಷ್ಠತೆಯಾಗಿದೆ. ಆದರೆ ಜೈನಧರ್ಮದಲ್ಲಿ ಇದು ಇಲ್ಲ. ಮಂತ್ರದ ಹಿರಿಮೆಯಲ್ಲಿ ಮತ್ತು ಲಕ್ಷಣಗಳನ್ನು ಹೇಳುವಲ್ಲಿ ವೀರಶೈವ ಮತ್ತು ಜೈನ ಧರ್ಮಗಳ ಮಧ್ಯ ವಿಶೇಷ ಸಾದೃಶ್ಯತೆಯನ್ನು ಕಾಣಬಹುದು. ವೀರಶೈವ ಧರ್ಮದಲ್ಲಿ ನಮಃ ಶಿವಾಯ ಎಂಬುದು ಪಂಚಾಕ್ಷರೀ ಮಂತ್ರ, ಓಂ ನಮಃ ಶಿವಾಯ ಎಂಬುದು ಷಡಕ್ಷರ ಮಂತ್ರ. ಸರ್ವೇ ವರ್ಣಾಹ್ ಶಿವಾತ್ಮಕಾಃ ಎಂದು ಹೇಳಿದೆ. ಆದರೂ ಪಂಚಾಕ್ಷರೀ ಮಂತ್ರವು ಮಂತ್ರರಾಜವೆನಿಸಿದೆ. ಜೈನಧರ್ಮದಲ್ಲಿ ಪಂಚನಮಸ್ಕಾರ ಮಂತ್ರವು ಸರ್ವೋತ್ಕೃಷ್ಠ ಮಂತ್ರವಾಗಿದೆ. ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವ ಸಾಧುಗಳೆಂಬ ಪಂಚಪರ ಮೇಷ್ಠಿಗಳ ನಮಸ್ಕಾರಾತ್ಮಕವಾದ ಮಂತ್ರವೇ ಪಂಚನಮಸ್ಕಾರ ಮಂತ್ರವು ಹೆಸರುಗಳ ಮೊದಲ ಅಕ್ಷರಗಳಾದ ಅ.ಸಿ.ಆ.ಉ.ಸಾ. ಎಂಬ ಮಂತ್ರವು ಪಂಚಾಕ್ಷರೀ ಮಂತ್ರವಾಗಿದೆ.

ಶೈವಧರ್ಮ ಜಗತ್ತಿನ ಅತ್ಯಂತ ಪ್ರಾಚೀನ ಜೀವಂತ ಧರ್ಮಗಳಲ್ಲಿ ಒಂದಾಗಿದೆ. ಲಿಂಗದ ರೂಪದಲ್ಲಿ ಶಿವನ ಆರಾಧನೆಯೊಂದಿಗೆ ಅದನ್ನು ಸಮೀಕರಿಸಲಾಗಿದೆ. ಅರ್ಯಪೂರ್ವವೆಂದು ಪರಿಗಣಿಸಲಾಗಿದೆ. ಸಿಂಧೂಕಣಿವೆಯ ನಾಗರೀಕತೆಯಷ್ಟೇ ಮೊದಲಿಗೆ ಶೈವಪಂಥ ಹಾಗೂ ಲಿಂಗೋಪಾಸನೆ ಅಸ್ತಿತ್ವದಲ್ಲಿತ್ತು ಎಂಬುದನ್ನು ಹರಪ್ಪ ಮತ್ತು ಮೊಹೆಂಜೋದಾರೋ ಉತ್ಖನನದಿಂದ ದೊರೆತಿರುವ ಅವಶೇಷಗಳು ತಿಳಿಸಿವೆ. ಅದೇ ರೀತಿ ಜೈನಧರ್ಮವು ಕೂಡ ಕ್ರಿ.ಪೂ.ದಲ್ಲಿ ಪ್ರಚಲಿತದಲ್ಲಿತ್ತೆಂದು ಸಾಕಷ್ಟು ಆಧಾರಗಳಿವೆ. ಇವೆರಡು ಧರ್ಮಗಳನ್ನು ಕೂಡ ಉತ್ತರ ಭಾರತದಿಂದಲೇ ಬೆಳೆದು ದಕ್ಷಿಣ ಭಾರತ, ಕರ್ನಾಟಕಕ್ಕೆ ಬಂದು ಅದು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಪ್ರಚಲಿತದಲ್ಲಿತ್ತೆಂದು ತಿಳಿಸಲಾಗಿದೆ. ಇವೆಲ್ಲವನ್ನು ಗಮನಿಸಿದರೆ ಒಂದಕ್ಕೊಂದು ಪೂರಕವಾಗಿ ಬೆಳೆದುಬಂದಿದೆ ಎನ್ನಬಹುದಾಗಿದೆ.

ವೀರಶೈವ ಧರ್ಮವು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇರುವ ಒಂದು ಪ್ರಾಚೀನ ಧರ್ಮ ಎಂದರೆ ತಪ್ಪಾಗಲಾರದು. ವೀರಶೈವ ಧರ್ಮಕ್ಕೂ ಕೂಡ ಹಲವಾರು ವರ್ಷ ಇತಿಹಾಸವನ್ನು ಹೊಂದಿದೆ ಎಂದು ಹೇಳಬಹುದು. ಈ ಭಾಗ ಮಹಿಷಮಂಡಲದ ಭಾಗವಾಗಿತ್ತು. ಈ ಪ್ರಾಂತ್ಯದಲ್ಲಿ ವೀರಶೈವ ಧರ್ಮದ ಕೇಂದ್ರವೆಂದರೆ ನಂಜನಗೂಡು ತಾಲ್ಲೂಕು, ಸುತ್ತೂರು[1], ಇಲ್ಲಿಂದ ಪ್ರಾರಂಭವಾಗಿ ಈ ಪ್ರಾಂತ್ಯದಲ್ಲಿ ಹಲವಾರು ಊರುಗಳಲ್ಲಿ ವೀರಶೈವ ಧರ್ಮ ಬೆಳೆಯಲು ಕಾರಣವಾಗಿದ್ದು, ಈ ಭಾಗದಲ್ಲಿ ಒಂದು ಪ್ರಮುಖ ಧರ್ಮವು ಸಹ ಆಗಿದೆ.

ವೀರಶೈವ ಅಥವಾ ಶುದ್ಧ ಶೈವ ಎಂಬುದನ್ನು ಮೊದಲಿನಿಂದಲೂ ಬಲವಾಗಿ ಮೈಗೂಡಿಸಿಕೊಂಡು ಬಂದಿದೆ. ವೀರಶೈವ ಧರ್ಮವು ಶೈವ ಧರ್ಮದ ಒಂದು ಶಾಖೆ ಅಥವಾ ಒಂದು ಭಾಗವೆಂದೇ ಹೇಳಬಹುದು. ವೀರಶೈವ ಧರ್ಮವನ್ನು ಕ್ರಿ.ಶ.11–12ನೇ ಶತಮಾನದಲ್ಲಿ ಕಲ್ಯಾಣದ ಕಲಚೂರಿಯ ದೊರೆಯಾದ ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿದ್ದ ಬಸವಣ್ಣನವರು (ಕ್ರಿ.ಶ.1131–1167)ರ ಕಾಲಕ್ಕೆ ಈ ಧರ್ಮ ಬಲವಾಗಿ ಬೇರೂರುವಂತೆ ಹಾಗೂ ಕರ್ನಾಟಕ ಅಲ್ಲದೆ ಜಗತ್ತಿನಾದ್ಯಂತ ಹರಡಲು ಪ್ರಚೋದನೆಯನ್ನು ನೀಡಿದನು. ಆದಕಾರಣವೇ ವೀರಶೈವ ಧರ್ಮ ಶೈವ ಧರ್ಮದ ಮತ್ತೊಂದು ಕವಲಾಗಿ ಬೆಳೆಯಲು ಕಾರಣವಾಯಿತು. ರೇಣುಕ, ಪಂಡಿತಾರಾಧ್ಯ, ಮರುಳಾರಾಧ್ಯ, ಏಕೋರಾಮ ಮತ್ತು ವಿಶ್ವರಾಧ್ಯರೆಂಬ ಪಂಚಾಚಾರ್ಯರು ವೀರಶೈವ ಮತದ ಸ್ಥಾಪಕರೆಂದು ಸಂಪ್ರದಾಯವಾದಿಗಳು ಹೇಳಿದರೂ ಕೂಡ, ಸಮಾಜ ಮಾತ್ರ ಕ್ರಾಂತಿಕಾರಿ ಬಸವಣ್ಣರವರ ಹೆಸರನ್ನು ಸೂಚಿಸುತ್ತಾ, ಅವರ ಈ ಧರ್ಮಕ್ಕೆ ಪ್ರಚೋದನೆ ನೀಡಿದರು. ಅಲ್ಲದೆ ಅವರು ನೀಡಿದ ಪ್ರೋತ್ಸಾಹವೇ ವೀರಶೈವ ಧರ್ಮ ಬೆಳೆಯಲು ಕಾರಣಕರ್ತರು. ಆದಕಾರಣ ನಿಜವಾದ ವೀರಶೈವ ಧರ್ಮದ ಸ್ಥಾಪಕರು ಬಸವಣ್ಣರವರು ಎಂದು ಭಾವಿಸಿರಬಹುದಾಗಿದೆ. ಆದಕಾರಣವೇ ಪ್ರತಿಯೊಂದು ಊರಿನಲ್ಲಿಯೂ ವೀರಶೈವ (ಲಿಂಗಾಯಿತ)ರು ಇರುವರೋ ಅಲ್ಲಿ ಬಸವಣ್ಣರವರ ಭಾವಚಿತ್ರ, ಅವರ ಸಂಘಸಂಸ್ಥೆ, ಅವರ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದು ತಿಳಿದುಬರುತ್ತದೆ.

ಬಸವಣ್ಣರವರ ಪ್ರಕಾರ ಜಾತಿಭೇದ, ಲಿಂಗಭೇದಗಳನ್ನು ವೀರಶೈವರು ಒಪ್ಪುವುದಿಲ್ಲ. ಎಲ್ಲಾ ಮಾನವರು ಸಮಾನರು ಎಂಬುದು ಅವರ ಭಾವನೆಯಾಗಿದೆ.[2]

ಹನ್ನೆರಾಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಧಾರ್ಮಿಕ ಕ್ರಾಂತಿಯ ನಂತರ ಶಿವಶರಣರು ತಮ್ಮ ತತ್ವಗಳನ್ನು ಸಾರಲು ನಾಡಿನಾದ್ಯಂತ ಪ್ರಯಾಣ ಬೆಳೆಸಿದಾಗ ಸುಮಾರು ಮೂರು ಸಾವಿರ ಶರಣರ ಗುಂಪು ಇತ್ತು ಎಂಬ ಹೇಳಿಕೆಗಳಿವೆ. ಹನ್ನೆರಡನೆಯ ಶತಮಾನದಲ್ಲಿ ಶರಣ ತತ್ವಗಳು ಪ್ರಚಾರಗೊಂಡು ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿರುವುದಲ್ಲದೆ,

ಸಮಾಜದ ಒಂದು ಶಕ್ತಿಯಾಗಿ ರೂಪುಗೊಂಡಿತು. ಈ ಹಿನ್ನೆಲೆಯಿಂದಲೇ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಕೂಡ ಆಯಾ ಊರುಗಳನ್ನು ಗಮನಿಸಿದರೆ ವೀರಶೈವ ಧರ್ಮ ಮತ್ತು ವೀರಶೈವ ಮಠಗಳು ಬೆಳೆದಿರುವುದನ್ನು ಕಾಣಬಹುದಾಗಿದೆ.

ಪ್ರೌಢದೇವರಾಯನ ಕಾಲದಲ್ಲಿ ಲಕ್ಕಣ್ಣ ದಂಡೇಶನು ಕ್ರಿ.ಶ.1450 ರಲ್ಲಿ ರಚಿಸಲಾಗಿರುವ 'ಶಿವತತ್ವ ಚಿಂತಾಮಣಿ' ಎಂಬ ಕೃತಿಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಶರಣರ ಬಗ್ಗೆ ತಿಳಿದುಬರುತ್ತದೆ.[3] ಕೋಟೆಕೆರೆಯ ಹಂದಿಗದ ಕಾಯಕದ ಲಕ್ಕಮ್ಮ, ಅದೇ ಊರಿನ ಇನ್ನೊಬ್ಬ ಕಾಮಣ್ಣ, ತೆರಕಣಾಂಬಿಯ ಕಂಪರಾಯ, ಬಣಜಗರ ಕಾಯಕದ ಸೋಯಿಸೆಟ್ಟಿ, ಚೋಳಯಣ್ಣ, ಕಾಯಕದ ರಾಮಣಯ್ಯ, ಹಂಗಳದ ಕಾಮಣ್ಣ, ಮಲ್ಲಾಜಿ, ಬಿಲ್ಲಸೆಟ್ಟಿ, ಕುರುಬಲಿಂಗಯ್ಯ, ಹಾಲಪ್ಪ, ಸಿರಿಯೂರ ಚನ್ನಯ್ಯ ಮತ್ತು ಇಂಗುಳವಾಡಿ ಮಹಾಲಿಂಗ ಇವರುಗಳು ವೀರಶೈವ ಆರಾಧಕರಾಗಿದ್ದಾರೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹಲವಾರು ವೀರಶೈವ ಮಠಗಳಿವೆ. ಈ ಮಠಗಳು ತಮ್ಮದೇ ಆದ ಸಂಸ್ಕೃತಿ ಹಾಗೂ ಸಾಮಾಜಿಕ ಧಾರ್ಮಿಕ ಚಟುವಟಿಕೆ ಕಾರ್ಯಕ್ರಮಗಳಲ್ಲಿ ಮುಂದುವರೆದಿರುವುದನ್ನು ಕಾಣಬಹುದಾಗಿದೆ. ವೀರಶೈವ ಮಠಗಳನ್ನು ಕುರಿತು ಉಲ್ಲೇಖಿಸುವ ಶಿಲಾಶಾಸನಗಳು, ತಾಮ್ರ ಶಾಸನಗಳು ಹಾಗೂ ಸಾಹಿತ್ಯ ಗ್ರಂಥಗಳು ಸಾಕಷ್ಟಿವೆ. ಚನ್ನಮಲ್ಲಾಪುರದಲ್ಲಿರುವ ಶಾಸನದಲ್ಲಿ ಉಮ್ಮತ್ತೂರಿನ ಮಹಾಮಂಡಲೇಶ್ವರ ವೀರಸೋವಂಣವೊಡೆಯರ ಮಗ ಚಿಕಂಣವೊಡೆಯರು ತೆರಕಣಾಂಬಿ ರಾಜ್ಯವನ್ನು ಆಳ್ವಿಕೆ ನಡೆಸುತ್ತಿದ್ದು, ಅದೇ ಕಾಲಕ್ಕೆ ನಂಜನಗೂಡಿನ ನಂಜುಂಡೇಶ್ವರ ದೇವರಿಗೆ ಕುಡುಗುನಾಡೊಳಗಿನ ಆಲತ್ತೂರ ಗ್ರಾಮವನ್ನು ದಾನವಾಗಿ ದತ್ತಿಬಿಟ್ಟ ವಿಚಾರ ತಿಳಿದುಬರುತ್ತದೆ.[4]

ಸೋಮಹಳ್ಳಿಯ ಶ್ರೀ ವೀರಮಿಂದುಡಿರಾಯ ವಡೆಯರ ಮಕ್ಕಳು ದೇವಂಣವಡೆಯರವರ ನಂಜರಾಯ ವಡೆಯರ ಮಕ್ಕಳು ಪ್ರಧಾನ ಆಲಪ ಸೆಟ್ಟಿಯವರ ಮಕ್ಕಳು, ದೇವರಾಯನವರ ಧರ್ಮಾನುಸಾರ ನಂಜನಗೂಡು ನಂಜುಂಡೇಶ್ವರ ಸ್ವಾಮಿ ದೇವಸ್ಥಾನದಲ್ಲಿಯೇ ಇರುವ ವೀರಭದ್ರ ದೇವರ ಕಲ್ಲು ಮಂಟಪದ ಬಗ್ಗೆ ತಿಳಿಸುತ್ತಾ ಈ ದೇವಾಲಯಗಳಿಗೆ ದಾನದತ್ತಿ ನೀಡಿರುವ ಕುರಿತು, ವೀರಭದ್ರೇಶ್ವರನ ವಿಚಾರವನ್ನು ವ್ಯಕ್ತಪಡಿಸುವಂತಹ ಶಾಸನ ಇದೆ. ಆದಕಾರಣ ವೀರಶೈವ ಧರ್ಮದ ಬೆಳವಣಿಗೆಗೆ ಸಾಕ್ಷಿಯಾಗಿದೆ ಎಂಬುದನ್ನು ಶಾಸನ ವ್ಯಕ್ತಪಡಿಸುತ್ತದೆ.[5]

ಗುಂಡ್ಲುಪೇಟೆಯ ದೇಶಿಪುರ ಊರಿನಲ್ಲಿರುವ ಶಾಸನದ ಪ್ರಕಾರ ವೀರಪತಿರಾಯನ ಕಾಲಕ್ಕೆ ಮೈಸೂರಿನ ಅರಸರಾದ ದೇವರಾಜ ಪೊಡೆಯರಯ್ಯನವರು ನಂಜನಗೂಡು ತಾಲ್ಲೂಕು

ಮಲ್ಲನ ಮೂಲೆಯಲ್ಲಿ ವಿರಕ್ತಮಠವನ್ನು ಹೊಸದಾಗಿ ನಿರ್ಮಿಸಿ, ದೇಶಿಪುರದ ಹೂಕುಂದ ಎಂಬ ಊರನ್ನು ದತ್ತಿಯನ್ನು ನೀಡಿರುವುದಾಗಿ ತಿಳಿದುಬರುತ್ತದೆ.[6]

ವೀರ ವೆಂಕಟಪತಿರಾಯನ ಕಾಲದಲ್ಲಿ ಮೈಸೂರು ಅರಸರಾದ ದೊಡ್ಡದೇವರಾಜ ಒಡೆಯರ ಮಡದಿಯು ಹಂಗಳದಲ್ಲಿ ರಾಜ ಒಡೆಯರು ಮರಣ ಹೊಂದಿದ ಹಿನ್ನೆಲೆಯಲ್ಲಿ ರಾಜರ ಕುರುಹುಗಾಗಿ ಹಂಗಳದಲ್ಲಿ ಕಲ್ಲುಮಠವನ್ನು ಮಾಡಿಸಿದ್ದಾರೆ. ಅಲ್ಲದೆ ಲಿಂಗಸ್ಥಾಪನೆಯನ್ನು ಮಾಡಿಸಿ, ಈ ಊರಿಗೆ ಹೊರಕೇರಿ, ಬಾಚಹಳ್ಳಿ ಊರುಗಳ ಭೂಮಿಯನ್ನು ಹಂಗಳದ ವೀರಶೈವ ಗುರುಗಳಾದ ಮರಳಬಸವಲಿಂಗ ದೇವರಿಗೆ ದಾನದತ್ತಿಯನ್ನು ನೀಡಿರುವುದರ ಬಗ್ಗೆ ತಿಳಿದುಬರುತ್ತದೆ.[7]

ತ್ರಿಯಂಬಕಪುರದ ದೇವರು ಮತ್ತು ಒಡೆಯರ ಆರೋಗಣೆ ದೃಷ್ಟಿಯಿಂದ ಹೊಸದಾಗಿ ಬೊಮ್ಮನಹಳ್ಳಿಯನ್ನು ನಿರ್ಮಿಸಿ, ಆ ಊರಿಗೆ ದತ್ತಿ ನೀಡಿರುವ ಬಗ್ಗೆ ತಿಳಿದುಬರುತ್ತದೆ. ಅಲ್ಲದೆ ತ್ರಿಯಂಬಕ ದೇವರ ಅಮೃತಪಡಿಗೆ ಸರ್ವಮಾನ್ಯವಾಗಿ ನಡೆದು ಬಂದಂತಹ ಬೊಮ್ಮನಹಳ್ಳಿಯಲ್ಲಿ ದೇವರಾಯರವರು ಪುರವರ್ಗವಾಗಿ ಈ ಭಾಗದ ಸೀಮೆಯಲ್ಲಿ (ಊರಿನಲ್ಲಿ) ಲಿಂಗ ಇರುವ ಮುದ್ರೆಯನ್ನು ಸ್ಥಾಪಿಸಿ, ಇಲ್ಲಿಯೇ ಒಂದು ಕೆರೆಯನ್ನು ನಿರ್ಮಿಸಿ, ಕೆರೆಯ ಕೆಳಗಣ ಭಾಗದಲ್ಲಿ ಅಡಿಕೆಯ ಮರಗಳನ್ನು ಬೆಳೆಸಿ, ಇದರಿಂದ ಬಂದಂತಹ ಆದಾಯವನ್ನು ಅನುಭವಿಸಿಕೊಂಡು ಹೋಗುವಂತೆ ತ್ರಿಯಂಬಕಪುರದ ದೇವರ ಭಂಡಾರಕೆ ಪ್ರತಿಯೊಂದು ವರ್ಷವು ಆದಾಯ ಸಲ್ಲುವಂತೆ ತಿಳಿದುಬರುತ್ತದೆ. ಈ ಶಾಸನದ ಹಿನ್ನೆಲೆಯಿಂದ ಶೈವ ಮತ್ತು ವೀರಶೈವ ಎಂಬ ಎರಡು ಪಂಗಡಗಳು ಕೂಡ ಪೂಜೆ–ಪುನಸ್ಕಾರಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ.[8] ಶಿವಪುರದ ಶಾಸನದ ಪ್ರಕಾರ ಕ್ರಿ.ಶ.1469ರ ಕಾಲಕ್ಕೆ ಪಕ್ಕದ ತಾಲ್ಲೂಕಿನ ಉಮ್ಮತ್ತೂರಿನ ದೊರೆಯಾದ ಶ್ರೀಮಮ್ಮ ಮಹಾಮಂಡಳೇಶ್ವರ ಶ್ರೀ ವೀರ ಗಜಬೇಂಟೆಕಾರನಾದ ಸೋಮರಾಯ ವಡೆಯರ ಮಗನಾದ ದೇವರಾಜ ಒಡೆಯರ್‌ರವರು ಶುದ್ಧ ಶಿವಾಚಾರರಾಗಿದ್ದು, ಅವರ ಗುರುಗಳಾದ ಶ್ರೀ ರುದ್ರಾಕ್ಷಿ ಒಡೆಯರವರಿಗೆ ಕುಡುಗನಾಡಿನ ತೆರಕಣಾಂಬಿ ಪ್ರಾಂತ್ಯದಲ್ಲಿರುವ ಗೊಂಡಿಗನ ಗ್ರಾಮವನ್ನು ದಾನ ನೀಡಿರುವ ವಿಚಾರ ತಿಳಿದುಬರುತ್ತದೆ.[9] ಅದೇ ಊರಿನ ಸೋಮಯ್ಯ ದೇವರ ಅಂಗ, ರಂಗ, ಭೋಗ, ಅಮೃತಪಡಿಗೆ ಕೇತೆದಣಾಯಕರ ಮೂಲಕ ಹಲವು ಅಗತ್ಯವಸ್ತು ಪಡೆದಿರುವುದು, ಅಲ್ಲದೆ ಶೆಟ್ಟಿಹಳ್ಳಿ ಗ್ರಾಮವನ್ನು ದಾನ ನೀಡಿರುವ ಬಗ್ಗೆ ತಿಳಿದುಬರುತ್ತದೆ. ಈ ಆಸ್ತಿ ಉಮ್ಮತ್ತೂರು ದೊರೆಯಾದ ವೀರಹನುಮಪ್ಪ ಒಡೆಯರ ಮಗ ಇಮ್ಮಡಿ ರಾಯಕುಮಾರ್ ದೇವಣ್ಣ ಒಡೆಯರಿಗೆ ಸೇರಿದ

ಆಸ್ತಿಯಾಗಿದೆ. ಆದರೂ ಕೂಡ ಇವರು ವೀರಶೈವ ಆರಾಧಕರಾಗಿದ್ದರು ಎಂಬುದು ತಿಳಿದುಬರುತ್ತದೆ.[10]

ಮಸಹಳ್ಳಿಯಲ್ಲಿರುವ ಶಾಸನ ಪ್ರಕಾರ ಕ್ರಿ.ಶ.1546ರಲ್ಲಿ ವಿಜಯನಗರ ಅರಸ ಸದಾಶಿವರಾಯರು, ಅದೇ ಸದಾಶಿವರಾಯ ಕ್ರಿ.ಶ.1548ರಲ್ಲಿ ಈತನ ಅನುಯಾಯಿಯಾಗಿದ್ದ ಸೂರಪ್ಪ ಆರಿಚನಿಯು ತಾನು ಪಡೆದುಕೊಂಡಿದ್ದ ತೆರಕಣಾಂಬಿಯ ನೆಲೆಯಲ್ಲಿದ್ದ ಕೋಟೆಯ ಕೆರೆಯ ಊರನ್ನು ಅದರ ಕಾಲುವಳಿ ರಾಮಪುರವನ್ನು ಮಾದಿಹಳ್ಳಿ ಬೋಳನಂಜಯ ದೇವರಿಗೆ ನೀಡಿದ್ದಾನೆ. ಈ ಬೋಳನಂಜಯದೇವ ಹೆಗ್ಗಡದೇವನ ಕೋಟೆ ಮತ್ತು ನಂಜನಗೂಡು ತಾಲ್ಲೂಕಿನ ಶಾಸನಗಳಲ್ಲಿ ಈತನ ವಿಚಾರ ತಿಳಿದುಬರುತ್ತದೆ.[11] ಆದಕಾರಣ ಇವರ ಕಾಲದಲ್ಲಿ ವೀರಶೈವ ಧರ್ಮದ ಪ್ರಭಾವ ತುಂಬಾ ಬೆಳೆದಿತ್ತು ಎಂಬುದು ತಿಳಿದುಬರುತ್ತದೆ. ವಿಜಯನಗರದ ಅರಸರಾದ ರಾಮರಾಜ ದೇವರ ಮಾಳಗದ ಬಸಪ್ಪಗೌಡ ತೆರಕಣಾಂಬಿ ಹೊನ್ನಪ್ಪ ಗಣಾಚಾರರಿಗೆ ಗುಂಡ್ಲುಪೇಟೆ (ವಿಜಯಪುರ) ಸೀಮೆಯ ಒಳಗಣ ಬೇರಂಬಾಡಿ ಊರನ್ನು ದಾನವಾಗಿ ನೀಡಿರುವುದು ತಿಳಿದುಬರುತ್ತದೆ.[12] ಈ ಶಾಸನ ಪಾಠದಿಂದ ಶ್ರೀಮಂನ್ಮಹ ಬಸವೇಶ್ವರ ದೇವರಿಗೆ ಕೂರಿಗನಹಳ್ಳಿಯ ಜುಂಜವಡರ ಶಿಷ್ಯ ಕರಿಬಸವವಡೆರ ಮಗ ಲಿಂಗದೇವ ವೊಡೆಯರವರು ವೀರಶೈವ ಧರ್ಮಕ್ಕೆ ದೇವಾಲಯಕ್ಕೆ ದಾನದತ್ತಿಗಳನ್ನು ನೀಡಿರುವುದು ತಿಳಿದುಬರುತ್ತದೆ.[13]

ಬೇಗೂರು ಗ್ರಾಮದಲ್ಲಿರುವ ಕ್ರಿ.ಶ.1663-1664 ಶಾಸನದ ಪ್ರಕಾರ ದಾನವನ್ನು ನೀಡಿರುವುದು ಅಲ್ಲದೆ ದಾನವನ್ನು ಪಡೆದಿರುವ ಜನರುಗಳ ಹೆಸರುಗಳು ಇಲ್ಲದೆ ಹೋದರೂ ಸಹ ಈ ಶಾಸನ ಪಾಠದಿಂದ ಬೇಹುರು, ಇಲ್ಲಿಯ ವಿಜಯಪುರಕ್ಕೆ ಅಂದರೆ ಗುಂಡ್ಲುಪೇಟೆ ಸೇರಿರುವುದಾಗಿದ್ದು, ಇದು ವಿರಕ್ತ ಕಪ್ಪರಗೂಡಗೆಯಾಗಿರುವ ಶಾಸನ ಎಂಬುದನ್ನು ವ್ಯಕ್ತಪಡಿಸಲಾಗಿದೆ.[14]

ಗುಂಡ್ಲುಪೇಟೆಯಲ್ಲಿರುವ ಕ್ರಿ.ಶ.15ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ ಶ್ರೀರಾಮನಾಥ ದೇವರ ದೀಪಕ್ಕಾಗಿ ತೆರಕಣಾಂಬಿಯ ಮಹಾಮಹತ್ತು ತನ್ನ ಮಠದ ದೀವಿಗೆ ಸ್ವಾಮ್ಯವನ್ನು ದತ್ತಿಬಿಟ್ಟ ವಿಚಾರವು ತಿಳಿದುಬರುತ್ತದೆ.[15] ಈ ಭಾಗದಲ್ಲಿ ನೂರೊಂದು ವಿರಕ್ತರಲ್ಲಿ ಪ್ರಮುಖರೆನಿಸಿದ 'ಪಡಗೂರು ಮದ್ದಾನೆ ಶಾಂತರು' ಗುಂಡ್ಲುಪೇಟೆ ತಾಲ್ಲೂಕಿನ ಎಲ್ಲಾ ಊರುಗಳಲ್ಲಿ ಸುತ್ತಾಡಿ ತದನಂತರ ಪಡಗೂರಿನಲ್ಲಿ ಬಂದು ವಾಸವಾಗಿದ್ದು, ಇವರ ನೆನಪಿಗಾಗಿ ಗದ್ದುಗೆ ಮತ್ತು ಅಡಿವಿಮಠ ಪಡಗೂರಿನಲ್ಲಿದೆ. ಅಂದಿನಿಂದ ಇಂದಿನವರೆವಿಗೂ ಈ ಮಠದಲ್ಲಿ ಗುರುಪರಂಪರೆಯು ನಡೆದುಕೊಂಡು ಬರುತ್ತಿದೆ. ಇದೇ ಮಾದರಿಯಲ್ಲಿ ಇನ್ನೊಬ್ಬ ತಾನು

ನೂನೊಂದು ವಿರಕ್ತರಾದ ಕರಸ್ಥಳದ ನಾಗಲಿಂಗ ಎಂಬುವವರು ಮಂಚಹಳ್ಳಿ ಊರಿನ ಇದೇ ತಪ್ಪಲಿನಲ್ಲಿರುವ ಗುಡ್ಡದ ಮೇಲೆ ತಪಸ್ಸನ್ನು ಆಚರಿಸಿ ಇಲ್ಲಿಯೇ ಐಕ್ಯರಾದರು ಎಂಬ ಹೇಳಿಕೆಗಳಿವೆ. ಗುಂಡ್ಲುಪೇಟೆ ತಾಲ್ಲೂಕಿನ ವಿಶ್ವಕರ್ಮ ಜನಾಂಗದವರು ಇಲ್ಲಿಗೆ ಬಂದು ಪೂಜೆ ಪುನಸ್ಕಾರಗಳನ್ನು ನೆರವೇರಿಸುವ ಪರಂಪರೆ ಮತ್ತು ಸಂಸ್ಕೃತಿ ಇದೆ. ಇಲ್ಲಿಯ ಇನ್ನೊಬ್ಬರಾದ ಮುನಿಗಲು ಗಂಗಾಧರೇಶ್ವರರು ಎಂಬುವವರು ಸೋಮಹಳ್ಳಿ ಶಿಲಾಮಠದಲ್ಲಿ ಐಕ್ಯರಾದರು. ಅವರ ಗದ್ದುಗೆಯೂ ಸಹ ಮಂಚನಹಳ್ಳಿಯಲ್ಲಿದೆ. ಇವರುಗಳು ಉಮ್ಮತ್ತೂರು ಪಾಳೇಗಾರರಾಗಿದ್ದ, ನಂಜರಾಜರವರಿಂದ ಕ್ರಿ.ಶ.1510ರಲ್ಲಿ ಸನ್ಮಾನಿತರಾಗಿದ್ದರು ಎಂಬುದು ಸಹ ತಿಳಿದುಬರುತ್ತದೆ.

ಈ ಎಲ್ಲಾ ಹಿನ್ನೆಲೆಯನ್ನು ಹಾಗೂ ಕೆಲವೊಂದು ಶಾಸನಾಧಾರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಗುಂಡ್ಲುಪೇಟೆ ತಾಲ್ಲೂಕಿನ ವೀರಶೈವ ಧರ್ಮವು ಪ್ರಬಲವಾಗಿತ್ತೆಂದು ತಿಳಿದುಬರುತ್ತದೆ. ಕೆಲವೊಂದು ಶಾಸನಗಳ ದಾಖಲೆಗಳಿಂದ ಕ್ರಿ.ಶ.15ನೇ ಶತಮಾನದಿಂದ ಇತ್ತೆಂಬುದು ದೃಢಪಡುತ್ತದೆ. ಹೆಚ್ಚು ಕಡಿಮೆ ಕ್ರಿ.ಶ.1450ರಿಂದ ಪ್ರಸ್ತುತ ಕಾಲಮಾನದಲ್ಲಿ ವೀರಶೈವ ಧರ್ಮ ಬೆಳೆಯುತ್ತಿದೆ. ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ಪ್ರತಿಯೊಂದು ಊರಿನಲ್ಲಿ ವೀರಶೈವ ಸಂಘ ಸಂಸ್ಥೆಗಳು ತೆರೆದಿವೆ. ಈ ಹಿನ್ನೆಲೆಯಿಂದ ಹಾಗೂ ಜನಸಾಕ್ಷರತೆಯ ಮೂಲಕವೂ ವೀರಶೈವ ಧರ್ಮದ (ಲಿಂಗಾಯಿತ)ವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಮಠ ಎಂದರೆ, ಮಠಚ್ಛಾತ್ರಾದಿನಿಲಯಂ ಎಂಬ ಅಮರಕೋಶದ ಮಾತಿನಲ್ಲಿ ವಿದ್ಯೆ ಕಲಿಯುವ ನೆಲೆ, ಅಶ್ವವನ್ನು ನೀಡುವ ನೆಲೆ ಎಂಬುದು ಇದೆ. ವೀರಶೈವಾಚಾರವಾದ ಏಕೋತ್ತರ ಶತಸ್ಥಲ ಸಂಪನ್ನರಾದ ವೀರಮಾಹೇಶ್ವರಾಚಾರ್ಯರು ಇಷ್ಟ ಪ್ರಾಣಭಾವ ಲಿಂಗಾಂಗ ಸಂಭೂತ ಭಸ್ಮ ಲೇಪನ ತತ್ಪರರು, 63 ಶೀಲ ಸಂಪನ್ನರು, ಧರ್ಮಜ್ಞಾನ ಅನುಭವಗಳ ಸಾಧನಗಳನ್ನು ಉಳ್ಳವರು, ಇಂತಹವರು ಜಗತ್ತಿನ ಗುರುಗಳಾಗುವುದರಲ್ಲಿ ಸಂದೇಹವಿಲ್ಲ ಎಂದೆಲ್ಲಾ ಅರ್ಥಗಳು ಇವೆ. ಹೀಗಾಗಿ ಈ ವೀರ ಮಾಹೇಶ್ವರರು ಆದ್ಯರೆನಿಸಿದರು, ವೇದ್ಯರೆನಿಸಿದರು. ಅಂಥವರು ಇರುವ ಕಡೆ ಮಠ ನಿರ್ಮಾಣ, ಮಠಸ್ಥಾಪನೆ ಆಗಿರುತ್ತದೆ. ವೀರಶೈವ ಧರ್ಮ ಪರಂಪರೆಯಲ್ಲಿ ಮಟೀಯ ಗುರುಪೀಠಗಳನ್ನು ಸಿಂಹಾಸನ ಎನ್ನುವುದುಂಟು. ಧರ್ಮ ಸಂಸ್ಥಾಪನಾಚಾರ್ಯರ ಗುರುಪೀಠಗಳಿಗೆ ಸಿಂಹಾಸನ ಎಂದೇ ರೂಢಿ, ಸಾಂಪ್ರದಾಯಿಕವಾಗಿ ಪೀಠಗಳನ್ನು ನಿರ್ಮಿಸಿರುವುದನ್ನು ಗಮನಿಸಬಹುದಾಗಿದೆ.

ವೀರಶೈವ ಮಠಗಳು ಇಂದಿನ ಸಾಮಾಜಿಕ ಸನ್ನಿವೇಶಕ್ಕನುಗುಣವಾಗಿ ಸ್ಪಂದಿಸಿ ಶೈಕ್ಷಣಿಕ ಶಾಲೆಗಳನ್ನು ನಡೆಸಿಕೊಂಡು ಹೋಗುತ್ತಿರುವುದನ್ನು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ

ಕಾಣಬಹುದು. ಈ ತಾಲ್ಲೂಕಿನಲ್ಲಿ ವೀರಶೈವ ಮಠಗಳು ಪ್ರಚಲಿತ ವಿದ್ಯಾಮಾನಗಳಿಗೂ ಸ್ಪಂದಿಸಿ ನಮ್ಮ ಸ್ವಂತಿಕೆಯನ್ನು ನಿದರ್ಶಿಸಿದೆ.

ಉಮ್ಮತ್ತೂರಿನ ಪಾಳೇಗಾರರು ಮೂಲತಃ ವೀರಶೈವರು ಆಗಿದ್ದರು. ಉಮ್ಮತ್ತೂರು ಪಾಳೇಗಾರರ ಬಗ್ಗೆ ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳಲ್ಲಿ ಅವರ ಹೆಸರುಗಳಿವೆ. ಕುಮಾರ ಚಿಕ್ಕಣ್ಣ[16], ವೀರ ಸೋಮರಾಜ[17], ದೇವರಾಯವೊಡೆಯ[18], ವೀರನಂಜರಾಜವೊಡೆಯ[19], ವೀರ ಚಿಕ್ಕರಾಯ[20], ಚಿಕ್ಕಮಲೆಯ ಒಡೆಯ[21], ವೀರದೇವರಾಜವೊಡೆಯ[22] ಮತ್ತು ವೀರರಾಜವೊಡೆಯ[23] ಇನ್ನೂ ಮೊದಲಾದ ಶಾಸನಗಳು ವೀರಶೈವ ಪಾಳೇಗಾರರ ಬಗ್ಗೆ ತಿಳಿಸುವಂತಹ ಶಾಸನಗಳಾಗಿವೆ.[24]

ಶ್ರೀ ವೀರಗಜಬೇಂಟೆಕಾರ ಸೋಮರಾಯ ವಡೆಯರ ಕುಮಾರ (ಮಗನಾದ) ದೇವರಾಜ ಒಡೆಯರು ಶ್ರೀ ಗುರು ಶ್ರೀ ರುದ್ರಾಕ್ಷಿ ಒಡೆಯರ ರುದ್ರಾಕ್ಷಿ ಒಡೆಯರಿಗೆ ಗೊಂದಿಗನಹಳ್ಳಿಯನ್ನು ದಾನ ನೀಡಿರುವುದಾಗಿ ತಿಳಿದುಬರುತ್ತದೆ.[25] ಈ ಶಾಸನದ ಕಾಲಮಾನ 1469 ಆಕಾಲಕ್ಕೆ ಚಿಕ್ಕಣ್ಣ ವೊಡೆಯರು ತೆರಕಣಾಂಬಿ ರಾಜ್ಯವನ್ನು ಆಳ್ವಕೆಯನ್ನು ನಡೆಸುತ್ತಿದ್ದರೆಂದು ತಿಳಿದುಬರುತ್ತದೆ. ಅದು ಅಲ್ಲದೆ ನಂಜನಗೂಡಿನ ಶ್ರೀ ನಂಜುಂಡೇಶ್ವರನಿಗೆ ಕುಡುಗನಾಡ ಆಲತ್ತೂರ ಗ್ರಾಮವನ್ನು ದಾನವಾಗಿ ನೀಡಿದ ವಿಚಾರ ತಿಳಿದುಬರುತ್ತದೆ.[26] ತ್ರಿಯಂಬಕಪುರ ದೇವಾಲಯದ ಅರ್ಚಕರ ಬಳಿಯಲ್ಲಿದ್ದ ತಾಮ್ರಶಾಸನದ ಪ್ರಕಾರ ವೀರಸೋಮರಾಯನೆಂಬ ಅರಸನ ವಿಚಾರ ಶಾಸನ ಪಾಠದಲ್ಲಿದೆ. ಗುರು ರುದ್ರಾಕ್ಷಿ ಒಡೆಯರಿಗೆ ತೋಟವನ್ನು ದಾನವಾಗಿ ನೀಡಿರುವುದನ್ನು ತಿಳಿಸಲಾಗಿದೆ. ಹೀಗೆ ಅನೇಕ ಶಾಸನಗಳು ವೀರಶೈವ ಧರ್ಮದ ಅರಸರು ದಾನ ಧರ್ಮವನ್ನು ನೀಡಿರುವ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ. ಮೈಸೂರು ಒಡೆಯರ್ ಕಾಲಕ್ಕೂ ವೀರ ಶೈವಧರ್ಮಕ್ಕೆ ಪ್ರೋತ್ಸಾಹವನ್ನು ನೀಡಿದ್ದು, ದಾನ, ದತ್ತಿಗಳನ್ನು ನೀಡಿರುವ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ ಕ್ರಿ.ಶ.1656 ರಲ್ಲಿ ದೊಡ್ಡದೇವರಾಜ ಒಡೆಯರ್ ಕಾಲಕ್ಕೆ ಮಠ–ಮಾನ್ಯಗಳಿಗೆ ಕೊಡುಗೆಯನ್ನು ನೀಡಿದ್ದಾರೆ. ಮೈಸೂರು ಒಡೆಯರ್ ದೊಡ್ಡದೇವರಾಜ ಒಡೆಯರ್‌ರವರ ಧರ್ಮಪತ್ನಿಯವರಾದ ಅಮೃತಮ್ಮರವರು ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಗ್ರಾಮಕ್ಕೆ ಕಲ್ಲುಮಠವನ್ನು ನಿರ್ಮಿಸಿದ ವಿಚಾರ ತಿಳಿದುಬರುತ್ತದೆ.[28]

ಈ ಹಿನ್ನೆಲೆಯಿಂದ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಆಯಾ ರಾಜವಂಶದವರು ವೀರಶೈವ ಧರ್ಮಕ್ಕೆ ಪ್ರೋತ್ಸಾಹವನ್ನು ನೀಡಿದ್ದಾರೆ. ವೀರಶೈವ ಮೂಲವನ್ನು ನೋಡುವುದಾದರೆ ಪ್ರಾಚೀನ ಕಾಲಕ್ಕೆ ಹೋಗಬೇಕಾಗುತ್ತದೆ. ಇಷ್ಟಲಿಂಗ ಪೂಜಾ ರೂಪವಾದ ವೀರವ್ರತವನ್ನು ಬೋಧಿಸುವ

ಲಿಂಗಧಾರಿಯ ದೇಹವೇ ದೇವಾಲಯವೆಂದು ಹೇಳುವ ಲಿಂಗಧಾರಿಗೆ ಸೂತಕಗಳೇ ಇಲ್ಲವೆಂದು ತಿಳಿಸುವ, ಯಾವುದೇ ಧರ್ಮದವರೊಂದಿಗೆ ವಿರೋಧಿ ಭಾವನೆಯನ್ನು ತಾಳದೆ ಸರ್ವರೊಂದಿಗೆ ಸಹೃದಯದಿಂದ ಬಾಳುವ ಸಿದ್ಧಾಂತವನ್ನು ತಿಳಿಸುವ ಮತ್ತು ಲಿಂಗಂಗ ಸಾಮರಸ್ಯ ಬೋಧಕವಾದ ವಿದ್ಯೆಯಲ್ಲಿ ಸದಾ ಸಂತುಷ್ಟ ಚಿತ್ತನಾಗಿರಬೇಕೆಂಬ ಸರ್ವಶ್ರೇಷ್ಠವಾದ ದಾರ್ಶನಿಕ ಸಿದ್ಧಾಂತವನ್ನು ಬೋಧಿಸುವ ಧರ್ಮವೇ ಸನಾತನ ವೀರಶೈವ ಧರ್ಮ, ಈ ಧರ್ಮಕ್ಕೆ ಲೋಕರೂಢಿಯಲ್ಲಿ ಲಿಂಗಾಯಿತವೆಂತಲೂ ಕರೆಯುವುದುಂಟು.

ಇಂತಹ ವೀರಶೈವ ಧರ್ಮದ ಆದಿ ಬೋಧಕ ಶಿವನೇ ಆಗಿದ್ದರೂ ಆತನಿಂದ ಉಪದೇಶವನ್ನು ಪಡೆದು ಲೋಕಕಲ್ಯಾಣಕಾರಿ ಕೆಲಸಗಳನ್ನು ಮಾಡಿದ್ದಾರೆ. ಈ ಹಿನ್ನೆಲೆಯಿಂದ ಪ್ರಾಚೀನ ಕಾಲದ ಪರಂಪರೆಯನ್ನು ನಂತರ ಕಾಲದಲ್ಲಿ ವೀರಶೈವ ಧರ್ಮದವರು ಹೆಚ್ಚಾಗಿ ಆಚರಿಸುವ ಪರಿಪಾಠ ಮುಂದುವರೆಯಿತು. ಆದಕಾರಣವೇ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಸಹ ಈ ಧರ್ಮ ಬೆಳೆಯುವುದಕ್ಕೆ ಸಾಧ್ಯವಾಗಿದೆ. ಆಯಾ ಊರಿನಲ್ಲಿ ವೀರಶೈವ ಧರ್ಮಕ್ಕೆ ಪೂರಕವಾಗಿ ಬಸವೇಶ್ವರ, ಮಹದೇಶ್ವರ, ಸಿದ್ದೇಶ್ವರ ಹೀಗೆ ಹಲವಾರು ಹೆಸರುಗಳಿಂದ ಕರೆದುಕೊಂಡು ಆರಾಧನೆಯನ್ನು ಮಾಡಿಕೊಂಡು ಬರುತ್ತಿರುವುದನ್ನು ಈ ತಾಲ್ಲೂಕಿನಲ್ಲಿ ಕಾಣಬಹುದಾಗಿದೆ. ಮಹದೇಶ್ವರ, ಸಿದ್ದೇಶ್ವರ, ರಾಚಪ್ಪಾಜಿ, ಸಿದ್ದಪ್ಪಾಜಿ ಈ ದೇವಾಲಯಗಳು ಶೈವ ಪರಂಪರೆಗೆ ಸೇರಿದ್ದರೂ ಸಹ ಇನ್ನಿತರ ಪಂಗಡದವರು ಕೂಡ ಲಿಂಗಪೂಜೆಯನ್ನು ಮಾಡುತ್ತಾರೆ. ಆದರೆ ವೀರಶೈವ ಧರ್ಮ, ಲಿಂಗಾಯಿತರಿಗೆ ಮಾತ್ರ ಸೀಮಿತವಾಗಿದೆ.

## ಮಳವಳ್ಳಿ

ಮಳವಳ್ಳಿಯಲ್ಲಿ ಒಂದು ಪ್ರಾಚೀನ ಕಾಲದ ವೀರಶೈವ ಮಠ ಇದೆ. ಮಳವಳ್ಳಿಯಲ್ಲಿ ಕ್ರಿ.ಶ.1559 ರ ಕಾಲಕ್ಕೆ ಸೇರಿದ ವಿಜಯನಗರದ ಅರಸ ಸದಾಶಿವರಾಯರ ಶಾಸನ ಇದೆ. ಸದಾಶಿವರಾಯರು ವೀರಶೈವ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹವನ್ನು ನೀಡಿದ್ದಾರೆ. ಈ ಊರಿನಲ್ಲಿ ವೀರಶೈವ ಧರ್ಮದವರಿಗೆ ಸೇರಿದ ಬಸವ ದೇವಾಲಯವು ಸಹ ಇದೆ.[29] ಪೂರ್ವದಲ್ಲಿ ಶಿವನಮ್ಮನ ಮನೆತನದವರಿಗೆ ಗಂಡುಮಕ್ಕಳು ಇಲ್ಲದ ಕಾರಣ ಬಸಪ್ಪನವರನ್ನು ದತ್ತು ತೆಗೆದುಕೊಂಡರು, ನಂತರ ಆತನಿಗೆ ಒಬ್ಬ ಮಗ ಜನಿಸಿದನು ಎಂಬ ಹೇಳಿಕೆಗಳಿವೆ.

ಮಲೈ ಮಹದೇಶ್ವರ ಬೆಟ್ಟದಲ್ಲಿ ನಡೆಯುವಂತಹ ಧಾರ್ಮಿಕ ಕಾರ್ಯಗಳು ಈ ಊರಿನಲ್ಲಿಯೂ ನಡೆಯುತ್ತವೆ. ಈ ಊರಿನಲ್ಲಿ ಸಾಲೂರು ಮಠದ ಪರಂಪರೆ ಇದೆ. ಪ್ರಾರಂಭದಲ್ಲಿ 10 ಅಂಕಣ ಕಲ್ಲು ಮಠವನ್ನು ಸ್ಥಾಪಿಸಿದರು. ಈ ಮಠಕ್ಕೆ ಭಕ್ತರು ಗುಂಡ್ಲುಪೇಟೆ

ಅಲ್ಲದೆ, ಹಂಚೀಪುರ, ಮಡುವಿನಹಳ್ಳಿ, ಹೊಸವೀಡು, ದಂಗಪುರ ಹಾಗೂ ಸುತ್ತಮುತ್ತಲ ಊರುಗಳಿಂದಲೂ ಬರುವ ವಾಡಿಕೆ ಇದೆ.[30]

## ಪಟ್ಟದಮಠ – ಹಂಗಳ

ಹಂಗಳ ಗ್ರಾಮವು ಗುಂಡ್ಲುಪೇಟೆ ನಗರದಿಂದ ದಕ್ಷಿಣ ದಿಕ್ಕಿಗೆ ಸುಮಾರು ೮ ಕಿಲೋಮೀಟರ್ ದೂರದಲ್ಲಿ ಈ ಊರಿದೆ. ಇದೊಂದು ಇತಿಹಾಸ ಪ್ರಸಿದ್ಧವಾದ ನೆಲೆಯಾಗಿದೆ. ಈ ಊರಿಗೆ ಹೊಯ್ಸಳರ ಕಾಲದಿಂದ ಮೈಸೂರು ಒಡೆಯರ ಕಾಲದವರೆವಿಗೂ ತನ್ನದೇ ಆದ ಪರಂಪರೆಯನ್ನು ಬೆಳೆಸಿಕೊಂಡು ಬಂದಿದೆ.[31]

ಹಂಗಳ ವೀರಶೈವರ ಒಂದು ನೆಲೆಯಾಗಿ ತನ್ನದೇ ಆದ ಇತಿಹಾಸವನ್ನು ಹೊಂದಿರುವ ಮಠವನ್ನು ಹೊಂದಿದೆ. ವಿಜಯನಗರ ಅರಸರ ಕಾಲದಲ್ಲಿ ರಾಜನಾಗಿದ್ದ, ಪ್ರೌಢದೇವರಾಯನ ಮಹಾದಂಡನಾಯಕನಾದ ಲಕ್ಕಣ್ಣ ದಂಡೇಶನು ತನ್ನ ಗ್ರಂಥವಾದ ಶಿವತತ್ವ ಚಿಂತಾಮಣಿಯಲ್ಲಿ ಈ ಊರಿನ ಕಾಮಣ್ಣ, ಮಲ್ಲಾಜಿ, ಬಿಲ್ಲ ಸೆಟ್ಟಿಯರು, ಕುರುಬ ಲಿಂಗಯ್ಯ, ಹಾಲಪ್ಪ ಇನ್ನೂ ಮೊದಲಾದ ಶಿವಶರಣರ ವಿಚಾರ ತಿಳಿದುಬರುತ್ತದೆ. ಹಂಗಳದ ಮಠವು ಶ್ರೀಶೈಲ ಮಠದ ಪರಂಪರೆಯಲ್ಲಿ ಮುಂದುವರೆದ ಒಂದು ಭಾಗವಾಗಿದ್ದು, ಇದೊಂದು ಸೂರ್ಯ ಸಿಂಹಾಸನದ ಪೀಠ ಸಹ ಆಗಿದೆ. ಹಂಗಳದ ಆದಿಶಿವ ಗುರುಗಳು ಶ್ರೀಮರಳ ಬಸವಲಿಂಗದೇವರು ಎಂದು ಕರೆಯುವ ವಾಡಿಕೆ ಇದೆ. ತದನಂತರ ಕಾಲಕ್ಕೆ ಶ್ರೀ ಚನ್ನಬಸವಸ್ವಾಮಿಗಳು ಮತ್ತು ಶ್ರೀ ಶಾಂತವೀರಸ್ವಾಮಿಗಳು ಪೀಠಾಧಿಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ.

## ಪಟ್ಟದಮಠ–ಕಬ್ಬಹಳ್ಳಿ

ಕಬ್ಬಹಳ್ಳಿಯು ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ಪ್ರಾಚೀನ ಗ್ರಾಮವಾಗಿದೆ ಕಬ್ಬಹಳ್ಳಿಗೆ ಪ್ರಾಚೀನ ಹೆಸರು ಚಿಕ್ಕದೇವರಾಜಪುರ ಎಂದು ಕರೆಯಲಾಗಿತ್ತು. ಶ್ರೀ ರಾಜೋಟಿ ಒಡೆಯರು ದೇಶ ಸಂಹಾರ ಮಾಡುತ್ತ ಕಬ್ಬಹಳ್ಳಿ ಊರಿಗೆ ಬಂದು ನೆಲೆಸಿ ಈ ಊರಿನ ಭಕ್ತರ ಸಹಕಾರದಿಂದ ಒಂದು ಮಠವನ್ನು ಸ್ಥಾಪಿಸಿದರೆಂದು ಪ್ರತೀತಿ, ಆನಂತರ ಮುನಿಗಳು ಇಲ್ಲಿಯೇ ಐಕ್ಯರಾದರೆಂದೂ ತಿಳಿದುಬರುತ್ತದೆ. ತದನಂತರ ಕಾಲದಲ್ಲಿ ಈ ಮಠದ ಗುರುಪರಂಪರೆಯು ಶ್ರೀ ಸಿದ್ಧಲಿಂಗಸ್ವಾಮಿಗಳು, ಶ್ರೀ ವಿರಕ್ತಶಿವಾಚಾರ್ಯರ ಮುಖಾಂತರ ಬೆಳವಣಿಗೆಯಾಗಿದೆ. ಶ್ರೀ ಮಠದ ಪೀಠಾಧಿಪತಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಮಠದಲ್ಲಿ ಅನೇಕ ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳು ಜರುಗುತ್ತಿವೆ. ಈ ಊರಿನ ಸುತ್ತಮುತ್ತಲಿನ ಜನರು ಇಲ್ಲಿಗೆ ಬರುವ ಸಂಪ್ರದಾಯವಿದೆ.

**ಶಿವಪೂಜೆ ಮಠ – ಚಿಕ್ಕತುಪ್ಪೂರು**

ಚಿಕ್ಕತುಪ್ಪೂರು ಗುಂಡ್ಲುಪೇಟೆ ಪಟ್ಟಣದಿಂದ ಪೂರ್ವ ದಿಕ್ಕಿಗೆ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿದೆ. ಈ ಊರು ಸರಿಸುಮಾರು 250 ವರ್ಷಗಳಷ್ಟು ಇತಿಹಾಸವನ್ನು ಹೊಂದಿದೆ. ಆದರೆ ಈ ಊರಿನ ಬಗ್ಗೆ ರಾಜರ ಕಾಲದ ಶಾಸನಗಳು ಮಾತ್ರ ದೊರೆಯುವುದಿಲ್ಲ. ಶ್ರೀ ಚನ್ನವೀರದೇವರು ವೀರಶೈವ ಧರ್ಮದ ಪ್ರಸಾರವನ್ನು ಮಾಡುತ್ತಾ ಊರಿಂದ ಊರಿಗೆ ಪ್ರಯಾಣ ಬೆಳೆಸುತ್ತಾ, ನಂತರ ಚಿಕ್ಕತುಪ್ಪೂರು ಊರಿಗೆ ಬಂದಾಗ, ಈ ಊರಿನ ಜನರ ಪ್ರೀತಿಗೆ ಪೂರಕವಾಗಿ ಅವರು ದೇವರ ಶ್ರದ್ಧೆ ಭಕ್ತಿಗೆ ಮೆಚ್ಚಿ ಇಲ್ಲಿಯೇ ನೆಲೆಸಿದರು ಎಂಬ ಹೇಳಿಕೆಗಳಿವೆ. ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರದ ಶ್ರೀಗಳಾದ ಶ್ರೀ ಚಿಕ್ಕವೀರದೇಶಿಕೇಂದ್ರಸ್ವಾಮಿಗಳವರು ಆಗಾಗ್ಗೆ ತುಪ್ಪೂರು ಮಠಕ್ಕೆ ಬಂದು ಪೂಜೆ ಪುನಸ್ಕಾರಗಳನ್ನು ಸಲ್ಲಿಸಿ ಮುಂದಿನ ಊರುಗಳಿಗೆ ಹೋಗುತ್ತಿದ್ದರು.

ಆ ಸಮಯದಲ್ಲಿ ಚಿಕ್ಕತುಪ್ಪೂರು ಗ್ರಾಮದ ಜನರು ನಮ್ಮ ಊರಿನಲ್ಲಿಯೇ ಮಠವನ್ನು ಸ್ಥಾಪಿಸಬೇಕೆಂದು ಬೇಡಿಕೊಂಡರಂತೆ, ಅದಕ್ಕೆ ಪೂರಕವಾಗಿ ಚಿಕ್ಕವೀರದೇಶಿಕೇಂದ್ರ ಸ್ವಾಮಿಗಳು, ಅಲ್ಲದೆ ಸುತ್ತೂರು ಮಠದ ಹಿರಿಯ ಸ್ವಾಮಿಗಳೊಂದಿಗೆ ಹಾಗೂ ಬೆಟ್ಟದಪುರದ ಸ್ವಾಮಿಗಳೊಂದಿಗೆ ಸಮಾಲೋಚಿಸಿ ಶ್ರೀ ಶಿವಲಿಂಗ ಸ್ವಾಮಿಗಳನ್ನು 1926 ರಲ್ಲಿ ಈ ಚಿಕ್ಕತುಪ್ಪೂರು ಮಠದ ಪಟ್ಟಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಸ್ವಲ್ಪ ಕಾಲದವರೆಗೆ ಈ ಊರಿನಲ್ಲಿಯೇ ಕಾಯಕವನ್ನು ಮಾಡಿಕೊಂಡಿದ್ದು, ನಂತರ ಈ ಊರನ್ನು ಬಿಟ್ಟು ಸುಮಾರು 25 ಕಿಲೋಮೀಟರ್ ದೂರದಲ್ಲಿರುವ ಕುರುಬರಹುಂಡಿಗೆ ಹೋದರು ಎಂಬುದಾಗಿ ತಿಳಿದುಬರುತ್ತದೆ. ನಂತರ ಶ್ರೀ ದಯಾನಂದ ಸ್ವಾಮಿಗಳು 1942 ರಲ್ಲಿ ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರೀಶ್ವರರಿಂದ ಹರಗುರು ಚರಮೂರ್ತಿಗಳ ಮಾರ್ಗದರ್ಶನದಲ್ಲಿ ಗುರುಗಳಾದರು. ಸ್ವಾಮಿಗಳು ಪಕ್ಕದ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿಯೂ ಸಂಚರಿಸಿ ಭಕ್ತವೃಂದವನ್ನು ಪಡೆದುಕೊಂಡಿದ್ದಾರೆ. ಇವರ ಕಾಲದಲ್ಲಿ ಮಠಕ್ಕೆ ಸಾಕಷ್ಟು ಸಂಖ್ಯೆಯ ಆಸ್ತಿಪಾಸ್ತಿ ಮಾಡಿದ್ದಾರೆ. ಈ ಮಠದಲ್ಲಿಯೂ ಅನೇಕ ರೀತಿಯ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತವೆ.

**ಪಟ್ಟದಮಠ–ತೆರಕಣಾಂಬಿ**

ತೆರಕಣಾಂಬಿಯು ಗುಂಡ್ಲುಪೇಟೆಯಿಂದ ಸುಮಾರು 11 ಕಿಲೋಮೀಟರ್ ದೂರದಲ್ಲಿದೆ. ತೆರಕಣಾಂಬಿ ಇತಿಹಾಸ ಪ್ರಸಿದ್ಧವಾದ ನೆಲೆಯಾಗಿದೆ. ಇದೊಂದು ಪದಿನಾಲ್ಕು ನಾಡರಸರ

ರಾಜಧಾನಿಯಾಗಿತ್ತು. ಅಲ್ಲದೆ ಈ ನೆಲೆಯನ್ನು ಗಂಗರು, ಚೋಳರು, ಹೊಯ್ಸಳರು, ಉಮ್ಮತ್ತೂರು ಅರಸರು, ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರ್ ಹೀಗೆ ಎಲ್ಲಾ ರಾಜಕೀಯ ಬಣಗಳು ಕೂಡ ರಾಜಕೀಯವಾಗಿ ಆಳ್ವಿಕೆ ನಡೆಸಿದ್ದಾರೆ. ಒಂದು ಕಾಲದಲ್ಲಿ ಈ ಊರಿಗೆ ರತ್ನಪುರಿಪಟ್ಟಣ ಎಂಬ ಹೆಸರನ್ನು ಪಡೆದುಕೊಂಡಿತ್ತು. ಈ ಊರಿಗೆ ಶತಕಾಲದ ದಾಖಲೆಗಳಿಲ್ಲದಿದ್ದರೂ ಧಾರ್ಮಿಕ ಹಿನ್ನೆಲೆಯಿಂದ ಹೆಸರುವಾಸಿಯಾಗಿದೆ. ತೆರಕಣಾಂಬಿಯಲ್ಲಿ ವೀರಶೈವ ಧರ್ಮವು ಹೆಚ್ಚು ಪ್ರಭಾವಿತಗೊಂಡಿತು. ಈ ನೆಲೆಯ ಜಂಗಮ ಮನೆತನಕ್ಕೆ ಸೇರಿದ ಶ್ರೀ ಮಹದೇವಸ್ವಾಮಿಯವರಿಗೆ ಮಠದ ಅಧಿಕಾರವನ್ನು ನೀಡಲಾಗಿತ್ತು. ತೆರಕಣಾಂಬಿ ಮಠ ಯಾವ ಕಾಲದಲ್ಲಿ ಸ್ಥಾಪನೆಯಾಗಿದೆ ಎಂಬ ವಿಚಾರವು ತಿಳಿದುಬರುವುದಿಲ್ಲ. ಸ್ಥಳೀಯರ ಹೇಳಿಕೆಗಳ ಪ್ರಕಾರ ಸುಮಾರು 400 ರಿಂದ 500 ವರ್ಷಗಳ ಇತಿಹಾಸ ಇದೆ. ಈ ಸ್ವಾಮಿಗಳು ವೇದ, ಆಗಮ ಮತ್ತು ಸಂಸ್ಕೃತ ಭಾಷೆಗಳಲ್ಲಿ ವಿದ್ಯಾಭ್ಯಾಸ ಮಾಡಿದವರೆಂದು ತಿಳಿದುಬರುತ್ತದೆ.

## ವಿರಕ್ತಮಠ–ಮೂಡಗೂರು

ತೆರಕಣಾಂಬಿಯಿಂದ ಸುಮಾರು 8 ಕಿಲೋಮೀಟರ್ ದೂರದಲ್ಲಿ ಉತ್ತರ ದಿಕ್ಕಿಗೆ ಮೂಡಗೂರು ಎಂಬ ಊರಿದೆ. ಅಂದಿನ ಕಾಲಕ್ಕೆ ಉತ್ತರ ಕರ್ನಾಟಕದಿಂದ ಧರ್ಮ ಪ್ರಚಾರಕ್ಕೆ ದಕ್ಷಿಣದ ಕಡೆ ಬಂದ ಶಿವಶರಣರಲ್ಲಿ ಶ್ರೀ ಉದ್ದಾನೇಶ್ವರರು ಒಬ್ಬರಾಗಿದ್ದಾರೆ. ಶ್ರೀ ಉದ್ದಾನೇಶ್ವರರೇ ಮೂಡಗೂರು ವಿರಕ್ತಮಠದ ಸ್ಥಾಪಕರು ಎಂಬ ವಾಡಿಕೆಯೂ ಇದೆ. ಮೂಡಗೂರು ಮಠವು ಸುಮಾರು 500 ವರ್ಷಗಳ ಇತಿಹಾಸವನ್ನು ನೆನಪಿಸುತ್ತದೆ. ಮೊದಮೊದಲಿಗೆ ಈ ನೆಲೆ ಗಿಡಮರಗಳಿಂದ ಆವೃತವಾಗಿತ್ತೆಂದೂ ಇದನ್ನು ಗಮನಿಸಿದ ಶ್ರೀಗಳು ಇಲ್ಲಿಯೇ ನೆಲೆಸಿದ್ದರೆಂದು ಈ ಊರಿನ ಜನರ ಹೇಳಿಕೆಗಳಿವೆ. ಮೂಡಗೂರು ಮಠದಲ್ಲಿ ಶ್ರೀ ಶಿವಲಿಂಗಸ್ವಾಮಿಗಳು, ಶ್ರೀ ಚನ್ನಬಸವ ಸ್ವಾಮಿಗಳು ಅಲ್ಲದೆ ಮಹಾದೇವಸ್ವಾಮಿಗಳು ಈ ಮಠದ ಅಭಿವೃದ್ಧಿಗೆ ಸಾಕ್ಷಿಯಾಗಿದ್ದಾರೆ. ಈ ಮಠವು ಅನೇಕ ರೀತಿಯ ಧಾರ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶ್ರೀಮಠದಲ್ಲಿ ಅನೇಕ ಬಗೆಯ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಕಾರ್ತಿಕ, ಅಮವಾಸ್ಯೆಗಳು, ಧರ್ಮಮಾಸ, ಯುಗಾದಿ ಹಬ್ಬಗಳ ಸಮಯದಲ್ಲಿ ವಿಶೇಷವಾದ ಪೂಜೆ–ಪುನಸ್ಕಾರಗಳು ಜರುಗುತ್ತದೆ.

## ಪಟ್ಟದ ಹಿರೆಮಠ – ಬೊಮ್ಮನಹಳ್ಳಿ

ತೆರಕಣಾಂಬಿಯಿಂದ ಸುಮಾರು 8 ಕಿಲೋಮೀಟರ್ ದೂರದಲ್ಲಿ ಬೊಮ್ಮನಹಳ್ಳಿ ಇದೆ. ಬೊಮ್ಮನಹಳ್ಳಿಯ ಇತಿಹಾಸವನ್ನು ಕುರಿತು ತ್ರಿಯಂಬಕಪುರದಲ್ಲಿ ದೊರೆತಿರುವ ಶಾಸನದ

ಪ್ರಕಾರ ಉಮ್ಮತ್ತೂರಿನ ಒಡೆಯ ಇಮ್ಮಡಿ ದೇವರಾಯನ ಮಗನಾದ ವೀರನಂಜರಾಯನ ಮಗ ಪರ್ವತಯ್ಯನೆಂಬುವವನು ಹೊಸದಾಗಿ ಬೊಮ್ಮನಹಳ್ಳಿಯನ್ನು ನಿರ್ಮಿಸಿ, ಇಲ್ಲಿಯ ತ್ರಿಯಂಬಕಪುರದ ದೇವರಿಗಾಗಿ ಸರ್ವಮಾನ್ಯವಾಗಿ ದಾನ ನೀಡಿರುವ ವಿಚಾರ ಕುರಿತು ಕ್ರಿ.ಶ.1492 ರ ಕಾಲಕ್ಕೆ ಸೇರಿದ ಶಾಸನದ ಪಾಠದಿಂದ ತಿಳಿದುಬರುತ್ತದೆ.[32] ಈ ಹಿನ್ನೆಲೆಯಿಂದ ಬೊಮ್ಮನಹಳ್ಳಿ ಊರು ಸುಮಾರು 500 ವರ್ಷಗಳ ಇತಿಹಾಸವನ್ನು ಹೊಂದಿದೆ. ಅಂದಿನ ಕಾಲಕ್ಕೆ ಅನೇಕ ಬಗೆಯ ಸೇವಾಕಾರ್ಯಗಳಿಂದ ನಡೆದು ಇಲ್ಲಿಯ ಜನರ ಪ್ರೀತಿ, ಸಹಕಾರದಿಂದ ಬೊಮ್ಮನಹಳ್ಳಿ ಪಟ್ಟದ ಮಠವು ಸ್ಥಾಪನೆಯಾಗಿದೆ.

## ಶ್ರೀ ಕಬ್ಬಿಣಕೋಲೇಶ್ವರ ಪಟ್ಟದ ಮಠ-ಗೋಪಾಲಪುರ

ಗುಂಡ್ಲುಪೇಟೆಯಿಂದ ದಕ್ಷಿಣ ದಿಕ್ಕಿಗೆ ಸುಮಾರು 15 ಕಿಲೋಮೀಟರ್ ದೂರದಲ್ಲಿ ಗೋಪಾಲಪುರ ಇದೆ. ಈ ಊರು ಕಾಡಿಗೆ ಹತ್ತಿರಕ್ಕೆ ಇದೆ. ಅಲ್ಲದೆ ಈ ಊರು ಕಣ್ಣೇಗಾಲ ಗ್ರಾಮಕ್ಕೆ ಸೇರಿದ ದಾಖಲೆಯು ಸಹ ಇದೆ[33] ಹಾಗೂ ಹೊಯ್ಸಳ ದೊರೆ ಒಂದನೇ ನರಸಿಂಹನ ಕಾಲಕ್ಕೆ ಸೇರಿದ ವೀರಗಲ್ಲು ಶಾಸನ ಸಹ ಇದೆ.[34] ವಿಜಯನಗರ ಅರಸರ ಕಾಲದ ಶಾಸನಗಳಿವೆ.[35] ಆದಕಾರಣ ಇದೊಂದು ಪ್ರಾಚೀನ ಪರಂಪರೆಯನ್ನು ಹೊಂದಿರುವ ಊರಾಗಿದೆ.[36] ಈ ಹಿನ್ನೆಲೆಯಿಂದ ಕೃಷ್ಣದೇವರಾಯ ಮತ್ತು ಅಚ್ಯುತರಾಯನ ಕಾಲದಲ್ಲಿ ವಿಜಯನಗರ ಅರಸರು ವೀರಶೈವ ಧರ್ಮಕ್ಕೆ ಈ ಭಾಗದಲ್ಲಿ ವಿಶೇಷ ಪೋಷಣೆ ನೀಡಿರುವುದು ತಿಳಿದುಬರುತ್ತದೆ. ಆದಕಾರಣ ಕ್ರಿ.ಶ.1157 ರಲ್ಲಿಯೇ ಪಡುವಣ ಇಂಗಳವಾಡಿಯೆಂದು ಕರೆಯಲಾಗುತ್ತಿತ್ತು. ಈ ನೆಲೆ ಈಗ ಬೇಚಿರಾಕ್ ಆಗಿದೆ. ಅಂದಿನ ಕಾಲದ ಈ ಊರಿನ ಜನರು ಬೇರೆ ಬೇರೆ ನೆಲೆಗಳಿಗೆ ವಲಸೆ ಹೋಗಿರುತ್ತಾರೆ. ಮುಡಣ ಇಂಗಳವಾಡಿಯ ಬಗ್ಗೆ ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರದಲ್ಲಿ ತೆರಕಣಾಂಬಿ ಸ್ಥಳದಲ್ಲಿ ವಿಜಯರಾಯನೆಂಬ ವಿಜಯಾಪುರದ ಕೋಟೆಯಂ ನಿರ್ಮಿಸಿ ಗುಂಡಲದ ಪಶ್ಚಿಮದೊಳು ಪೇಟೆಯಂ ಮಾಡಿಸಿದಂ ಸಮೀಪದ ಇಂಗಳವಾಡಿಯೊಳು ಶೈವ ವೈಷ್ಣವರ ವರ್ತಕರು ಒಬ್ಬೊಬ್ಬರಾಗಿ ಬಂದು ಪ್ರತ್ಯೇಕವಾದ ಶಿವಾಲಯ ಮತ್ತು ಗೋಪಾಲ ದೇವಾಲಯಗಳನ್ನು ನಿರ್ಮಿಸಿದರು, ಎರಡು ಬೀದಿಗಳಲ್ಲಿವೆ ಎಂಬುದು ಸಹ ಶಾಸನ ಪಾಠದಿಂದ ತಿಳಿದುಬರುತ್ತದೆ. ಇಷ್ಟೆಲ್ಲಾ ದಾಖಲೆಗಳನ್ನು ಹೊಂದಿರುವ ಗೋಪಾಲಪುರ ಊರಿನಲ್ಲಿ ಪ್ರಮುಖವಾದ ಧಾರ್ಮಿಕ ಕೇಂದ್ರವಾದ ಶ್ರೀ ಕಬ್ಬಿಣ ಕೋಲೇಶ್ವರ ಪಟ್ಟದ ಮಠ ಇದೆ. ಇದೊಂದು ಪ್ರಾಚೀನ ಕಾಲದ ಪಟ್ಟದ ಮಠವಾಗಿದೆ. ಈ ಮಠಕ್ಕೆ ಕಬ್ಬಿಣ ಕೋಲೇಶ್ವರ ಮಠ ಎಂಬ ಹೆಸರು ಇದೆ. ಈ ಮಠದ ಅತ್ಯಂತ ಆದಿಪುರುಷರಾದ

ಶ್ರೀ ಮಠಾಧಿಪತಿಗಳಾದ ಶ್ರೀ ಕಬ್ಬಿಣಕೋಲೇಶ್ವರವರು ಉತ್ತರ ಕರ್ನಾಟಕದಿಂದ ಬಂದು ನೆಲೆಸಿದವರು ಎಂಬ ವಾಡಿಕೆ ಇದೆ.

ಶ್ರೀ ಕಬ್ಬಿಣ ಕೋಲೇಶ್ವರರು ಪವಾಡ ಪುರುಷರಾಗಿದ್ದ ಬಗ್ಗೆ ಇಲ್ಲಿ ಹಿರಿಯರು ಅಂದಿನ ಮಠಾಧೀಶರು ಹಲವಾರು ರೀತಿಯ ಒಳ್ಳೆಯ ಕಾರ್ಯಗಳನ್ನು ಮಾಡಿ ಹೋಗಿದ್ದಾರೆ ಎಂಬ ಅಭಿಪ್ರಾಯವನ್ನು ತಿಳಿಸುತ್ತಾರೆ. ಕಾಯಕ ತಪಸ್ವಿಯಾಗಿದ್ದ ಅವರು ಅನೇಕ ಭಕ್ತ ಸಮೂಹ ಬಂದಾಗ ಅವರಿಗೆ ರಾಗಿ ಅಂಬ್ಲಿ ಮತ್ತು ಬೇಯಿಸಿದ ಹುರುಳಿಯನ್ನು ಪ್ರಸಾದವನ್ನಾಗಿ ನೀಡುತ್ತಿದ್ದರೆಂಬುದು ಕೂಡ ಇದೆ. ಪ್ರಸ್ತುತ ಪ್ರತಿ ವರ್ಷವು ಶ್ರೀ ಮಠದಲ್ಲಿ ಶ್ರೀ ಕಬ್ಬಿಣಕೋಲೇಶ್ವರರ ಆರಾಧನೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಊರಿನ ಜನರು ಮಾರ್ಗಶಿರ ಮಳೆಯ ಕಾಲಕ್ಕೆ ಮಠಕ್ಕೆ ಪ್ರತಿ ಮನೆಯಿಂದಲೂ ಒಬ್ಬಟ್ಟು, ತುಪ್ಪವನ್ನು ತೆಗೆದುಕೊಂಡುಹೋಗಿ, ಈ ಮಠದಲ್ಲಿ ಆರಾಧನೆಯನ್ನು ಮಾಡುವ ಪರಿಪಾಠ ಇದೆ. ಈ ಮಠದಲ್ಲಿ ಪವಾಡ ಪುರುಷರಾದ ಶ್ರೀ ಕಬ್ಬಿಣ ಕೋಲೇಶ್ವರರ ತದನಂತರ ಪೀಠದ ಪರಂಪರೆಯು ಮುಂದುವರೆದುಕೊಂಡು ಬಂದಿದೆ.

ಶ್ರೀ ಜಡೆ ಸ್ವಾಮಿಗಳು, ಶ್ರೀ ಶಿವಲಿಂಗಸ್ವಾಮಿಗಳು ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಮುಂದುವರೆದು ಪ್ರಸ್ತುತ ಶ್ರೀ ಗಂಗಾಧರ ಸ್ವಾಮಿಗಳು ಪೀಠದ ಅಧಿಪತಿಗಳಾಗಿದ್ದಾರೆ. ಈ ಮಠದಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಅಂದಿನ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿದೆ.

**ಅಡವಿಮಠ–ಪಡಗೂರು**

ಅಡವಿ ಮಠವು ಗುಂಡ್ಲುಪೇಟೆ ತಾಲ್ಲೂಕು ಪಡಗೂರು ಗ್ರಾಮದಲ್ಲಿದೆ. ಇದೊಂದು ಪ್ರಸಿದ್ಧ ವೀರಶೈವ ಮಠ. ಈ ಮಠದ ಸ್ಥಾಪನೆಯು ಕ್ರಿ.ಶ.1450ರ ಕಾಲಕ್ಕೆ ಪಡಗೂರು ಗ್ರಾಮದಲ್ಲಿ ಪ್ರಾರಂಭವಾಯಿತೆಂದು ಇತಿಹಾಸ ತಿಳಿಸುತ್ತದೆ.[37] ಪಡಗೂರು ಆಂಜನೇಯ ದೇವಾಲಯದ ಮುಂದೆ ನೆಟ್ಟ ಕಲ್ಲು ಶಾಸನ ಪ್ರಕಾರ ಕ್ರಿ.ಶ.16ನೇ ಶತಮಾನದಲ್ಲಿ ವಿಜಯನಗರ ಅರಸರ ಕಾಲಕ್ಕೆ ದೇವರಾಯನ ಕಾಲದ ಆಡಳಿತವನ್ನು ತಿಳಿಸುತ್ತದೆ. ಈ ಭಾಗದ ಚತುಸೀಮೆಯ ಬಗ್ಗೆ ಹೊಲಗಳಿಗೆ ನೀಡಿದ ಕೊಡುಗೆಗಳನ್ನು ಶಾಸನ ವ್ಯಕ್ತಪಡಿಸುತ್ತದೆ.[38] ಅಲ್ಲದೆ ಇದೇ ಊರಿನಲ್ಲಿರುವ ಮಹಾಲಿಂಗೇಶ್ವರ ದೇವಾಲಯದ ಉತ್ತರದ ಕಡೆ ನಿಂತಿರುವ ಕಲ್ಲುಚಪ್ಪಡಿಯಲ್ಲಿ ಶಕವರ್ಷ ೯07 ರ ಕಾಲಕ್ಕೆ ಸೇರಿದ ಅಂದರೆ ಕ್ರಿ.ಶ.೯80ರ ಕಾಲದ ಗಂಗರ ಕಾಲದ ರಾಜರ ಕುರಿತು ಶಾಸನ ವಿಚಾರವನ್ನು ತಿಳಿಸುತ್ತದೆ. ಆದಕಾರಣ ಪಡಗೂರು

ತಲಕಾಡಿನ ಗಂಗರ ಕಾಲಕ್ಕೆ ಒಂದು ಉನ್ನತ ಕೇಂದ್ರವಾಗಿತ್ತೆಂದೂ ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ.[39] ಕ್ರಿ.ಶ.1424 ರಿಂದ 1446ರವರೆಗೆ ಆಳ್ವಿಕೆ ನಡೆಸಿದ ಪ್ರೌಢದೇವರಾಯನನ್ನು ಕುರಿತು ಹಿಂದೂರಾಯ ಸುರತ್ರಾಣ, ಗಜೇಂದ್ರ ಮೃಗಯಾರಾತ, ಗಜಗಂಡಭೇರುಂಡ ಎಂದು ಕರೆಯಲಾಗಿದೆ.[40]ಈತನನ್ನು ಕುರಿತು ವಾಣೀವ ಭೋಜರಾಜಂ ಶ್ರೀಪುರಾಂಭಾವತ್ಸರಾಜುಮಿನ ಕಾಲೀನ ವಿಕ್ರಮಾರ್ಕೇ ಕಲಿಯುತ ಪಂಪಾದ್ಯ ದೇವರಾಯ ನೃಪಂ ಎಂದು ಶಾಸನಗಳು ತಿಳಿಸುತ್ತವೆ. ಈತನು ಸಕಲ ವರ್ಣಾಶ್ರಮಗಳನ್ನು ಪಾಲಿಸುತ್ತಾ ಧರ್ಮ ಮಾರ್ಗದಲ್ಲಿ ಸಕಲ ಸಾಮ್ರಾಜ್ಯಗಳನ್ನು ಆಳುತ್ತಿದ್ದನು ಎಂದು ತಿಳಿದುಬರುತ್ತದೆ. ಪ್ರೌಢದೇವರಾಯನ ಆಸ್ಥಾನದಲ್ಲಿ ದ್ವೈತ, ಅದ್ವೈತ, ವಿಶಿಷ್ಠಾದ್ವೈತ ಮತ್ತು ಶಕ್ತಿ ವಿಶಿಷ್ಠಾದ್ವೈತಗಳಲ್ಲದೆ ಜೈನ, ಇಸ್ಲಾಂ ಧರ್ಮಗಳಿಗೂ ಆತನು ಆಶ್ರಯ ನೀಡಿದ್ದಾರೆ. ಅನೇಕ ದಾನದತ್ತಿಗಳನ್ನು ತಿರುಪತಿ ದೇವಾಲಯಕ್ಕೆ ನೀಡಿದ್ದಾರೆ. ಶೈವ ಮತ್ತು ವೈಷ್ಣವರ ನಡುವೆ ನಡೆಯುತ್ತಿದ್ದ ಜಗಳವನ್ನು ಆತನ ಮಂತ್ರಿ ಈರಣ್ಣರವರ ಮುಖಾಂತರ ಬಗೆಹರಿಸಿದ್ದಾರೆ. ಈತನು ಬ್ರಾಹ್ಮಣರಿಗೂ ದಾನದತ್ತಿಗಳನ್ನು ನೀಡಿದ್ದಾರೆ. ಅನೇಕ ಜೈನ ಬಸದಿಗಳನ್ನು, ಮುಸ್ಲಿಂರಿಗಾಗಿ ಮಸೀದಿಗಳನ್ನು ಕಟ್ಟಿಸಿದರು. ಹೀಗೆ ಪ್ರೌಢದೇವರಾಯನು ಸರ್ವಧರ್ಮ ಸಮನ್ವಯವನ್ನು ಪಾಲಿಸಿದರೂ ಕೂಡ ವೈಯಕ್ತಿಕವಾಗಿ ವೀರಶೈವ ಮತಾವಲಂಬಿಯಾಗಿದ್ದನೆಂದು ತಿಳಿದುಬರುತ್ತದೆ. ಮೊದಲಿಗೆ ಪ್ರೌಢದೇವರಾಯನು ವೈಷ್ಣವ ಧರ್ಮಕ್ಕೆ ಪೂರಕನಾಗಿದ್ದ. ಆದರೆ ತನ್ನ ಆಸ್ಥಾನದಲ್ಲಿದ್ದ ಎಲ್ಲಾ ಮತದವರನ್ನು ಸೋಲಿಸಿ ವೀರಶೈವರನ್ನು ನೆಲೆಗೊಳಿಸಿದ ಗುರುಬಸವರ ಸಲಹೆ ಮೇರೆಗೆ ವೀರಶೈವ ಧರ್ಮವನ್ನು ಅವಲಂಬಿಸಿದನು. ತನ್ನ ಮಗಳನ್ನು ಕರಸ್ಥಲದ ವೀರಣ್ಣೊಡೆಯನಿಗೆ ವೀರಶೈವ ದೀಕ್ಷಾನುಸಾರಿಯಾಗಿ ಧಾರೆಯೆರೆದು ಕೊಟ್ಟನು. ಪ್ರೌಢದೇವರಾಯನ ವೀರಶೈವ ಧರ್ಮದ ಮನೋಧರ್ಮ ಪುಷ್ಠಿಗೊಳ್ಳಲು ಮಹಾಮಂತ್ರಿ, ಮಹಾಸೇನಾನಿ, ಮಹಾಕವಿ, ಮಹಾನುಭಾವಿಯಾದಂತ ಧರಣೇಶ ದೇವ ರಾಜೇಂದ್ರನ ಮಹದ್ವೈಶ್ವರ್ಯ ಶರದಿಚಂದ್ರೋದಯನು ಹರಶರಣಹೃದಯ ಚಿಂತಾರತ್ನನೂ, ಲಕ್ಕಣ್ಣದಂಡೇಸ ಕಾರಣರಾದರು. ಅದರ ಫಲವಾಗಿ ಪಂಪಕ್ಷೇತ್ರ ಮತ್ತು ವಿಜಯನಗರ ಎನ್ನುವಂತಾಯಿತು. ಇಂತಹ ಪ್ರಮುಖ ವಾತಾವರಣದಲ್ಲಿ ನೂರೊಂದು ವಿರಕ್ತ ಮಠಗಳು ಅಲ್ಲಲ್ಲಿ ಕಾರ್ಯ ನಿರ್ವಹಿಸಿದ್ದವು. ಈ ಕಾರಣದಿಂದಲೆ ಇಲ್ಲಿಯೂ ಸಹ ನಿರ್ಮಾಣವಾಗಿದೆ.

ಪರಮಪುರ, ಪಡಗೂರು ಮೊದಲಿಗೆ ಒಂದು ನಿರ್ಜನ ಪ್ರದೇಶವಾಗಿತ್ತು. ಸುತ್ತಮುತ್ತ ಕಾಡು ಪ್ರಾಣಿಗಳಿಂದ ಕೂಡಿದ ಪ್ರದೇಶವೂ ಸಹ ಆಗಿತ್ತು. ಅದರ ಕಾರಣವೇ ಮುದ್ದಾನೇಶ್ವರರು ಈ ನೆಲೆಗೆ ಬಂದಿದ್ದಾರೆ. ಒಂದು ದಿನ ಪಡಗೂರಿನ ಶ್ರೀ ಕ್ಷೇತ್ರದಲ್ಲಿ ತಪೋನಿಷ್ಠರಾಗಿದ್ದ ಮುದ್ದಾನೇಶ್ವರ ಬಳಿಗೆ ರಾಜ ಜಗಪತಿಯು ರಾಣಿ ಅಂಬಿಕೆಯೊಂದಿಗೆ ಬಂದು

ಮುದ್ದಾನೇಶ್ವರರನ್ನು ಭಕ್ತಿಪೂರ್ವಕವಾಗಿ ಪೂಜಿಸಿ ತಾನು ಮಾಡಿದ ತಪ್ಪಿಗೆ ಕ್ಷಮೆ ಯಾಚಿಸುತ್ತಾನೆ. ರಾಜ ದಂಪತಿಗಳಿಗೆ ಮಕ್ಕಳು ಇರಲಿಲ್ಲವಾದ ಕಾರಣ, ಶಿವಶರಣರಾದ ಶ್ರೀ ಮದ್ದಾನೇಶ್ವರರ ಅನುಗ್ರಹದಿಂದಾಗಿ ಮಕ್ಕಳುಗಳಾಗಿ ಒಬ್ಬರಿಗೆ ವೀರಪಾರ್ವತಿ ರಾಮನೆಂದೂ ಮತ್ತೊಬ್ಬರಿಗೆ ಶಿವಲಿಂಗನೆಂದು ನಾಮಕರಣ ಮಾಡಿದರು. ಶ್ರೀ ಗುರುಗಳ ಅಪೇಕ್ಷೆಯಂತೆ ಎರಡನೇ ಮಗು ಶಿವಲಿಂಗನನ್ನು ಅಡವಿ ಮಠಕ್ಕೆ ಮೊದಲಿಗೆ ಶಿಷ್ಯನಾಗಿ ಮಾಡಿದರು. ಶ್ರೀ ಮದ್ದಾನೇಶ್ವರರು ಶಿಷ್ಯ ಶಿವಲಿಂಗರಿಗೆ ಪಟ್ಟಾಧಿಕಾರ ನೀಡಿದ ಒಂದು ವರ್ಷದಲ್ಲಿ ಶಿವರಾತ್ರಿ ದಿನ ಶಿವಪೂಜೆಗೆ ಕುಳಿತರು. ಅಲ್ಲಿಯೇ ಶಿವೈಕ್ಯರಾದ್ದರು. ಶ್ರೀಗಳ ಅಂತ್ಯಕ್ರಿಯೆಯು ಶ್ರೀ ಮಠದ ಶಿವಯೋಗ ಮಂಟಪದ ಉತ್ತರ ದಿಕ್ಕಿನಲ್ಲಿ ನಡೆದಿದೆ. ಅದೇ ಸ್ಥಳ ಈಗ ನೂತನವಾದ ಮದ್ದಾನೇಶ್ವರರ ಗದ್ದಿಗೆಯಾಗಿದೆ. ಪ್ರತಿದಿನ ಪೂಜೆಯಾಗುತ್ತಿದೆ. ಹೀಗೆ ಅಂದಿನಿಂದ ಇಂದಿನವರೆಗೆ ಅನೇಕ ಮಠಾಧೀಶರು ಆಗಿ ಹೋಗಿದ್ದಾರೆ. ಪಡಗೂರು ಇಂದು ಒಂದು ಧಾರ್ಮಿಕ ಮತ್ತು ಶೈಕ್ಷಣಿಕ ಕೇಂದ್ರವಾಗಿ ರೂಪುಗೊಂಡಿದೆ.

ಶ್ರೀಗಳು ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಆಸಕ್ತಿಯನ್ನು ಹೊಂದಿದ್ದರ ಫಲವಾಗಿ 1939 ರಲ್ಲಿ ಕಬ್ಬಹಳ್ಳಿಯ ತೊಟ್ಟಿ ಮನೆಯಲ್ಲಿ ನಡೆಯುತ್ತಿದ್ದ ವಿದ್ಯಾರ್ಥಿನಿಲಯವನ್ನು 1942 ರಲ್ಲಿ ಶ್ರೀ ಮದ್ದಾನೇಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಗುಂಡ್ಲುಪೇಟೆ, ಮೈಸೂರು ಇನ್ನೂ ಮೊದಲಾದ ಕಡೆ ಇವರ ಶಾಖಾ ಮಠಗಳಿವೆ. ಈ ಮಠವು ಜ್ಞಾನ ದಾಸೋಹಿಗಳಾಗಿ ಮತ್ತು ಅನ್ನದಾಸೋಹಿಗಳಾಗಿ ಅಲ್ಲದೆ ಜನರ ಆರೋಗ್ಯ ದೃಷ್ಟಿಯಿಂದ ಪಡಗೂರು ಗ್ರಾಮದಲ್ಲಿ ಆರೋಗ್ಯ ಕೇಂದ್ರವನ್ನು ಸ್ಥಾಪಿಸಿ ಇದಕ್ಕೆ ಶ್ರೀ ಮದ್ದಾನೇಶ್ವರ ಆರೋಗ್ಯ ಕೇಂದ್ರವೆಂದು ಕರೆಯಲಾಗಿದೆ. ಅಲ್ಲದೆ ಇವರ ಶ್ರಮದಿಂದ ಸರ್ಕಾರಿ ಆರೋಗ್ಯ ಕೇಂದ್ರವು ಸಹ ಇದೆ. ಈ ಮಠದಲ್ಲಿ ಅನೇಕ ಆರಾಧನಾ ಮಹೋತ್ಸವ ಮತ್ತು ಉತ್ಸವಗಳು ನಡೆಯುತ್ತವೆ. ಈ ಕ್ಷೇತ್ರ ಅಡವಿ ಮಠವು ಗುಂಡ್ಲುಪೇಟೆ ತಾಲ್ಲೂಕಿನ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿ ರೂಪುಗೊಂಡಿದೆ.

### ವೀರಸಿಂಹಾಸನ ಶಿಲಾಮಠ–ಸೋಮಹಳ್ಳಿ

ಸೋಮಹಳ್ಳಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಒಂದು ಪ್ರಾಚೀನ ಊರು, ಸೋಮಹಳ್ಳಿಯಲ್ಲಿ ದೊರೆತಿರುವ ಕ್ರಿ.ಶ.1422 ರ ಶಾಸನದಲ್ಲಿ ಮೈಸೂರು ಒಡೆಯರಾದ ದೇವರಾಜ ಒಡೆಯರ್‌ರವರು ಈ ಸೋಮಹಳ್ಳಿ ಗ್ರಾಮವನ್ನು ದೇವರಾಜಪುರವೆಂಬ ಅಗ್ರಹಾರವಾಗಿ ಮಾಡಿರುವುದನ್ನು ತಿಳಿಸುವ ವಿಚಾರ ತಿಳಿದುಬರುತ್ತದೆ.[41] ಈ ಶಾಸನವು ಈ ಗ್ರಾಮದ ಬ್ರಾಹ್ಮಣರ ವೃತ್ತಿಯ ತಾಮ್ರ ಶಾಸನವಾಗಿದೆ. ಅನೇಕ ಬಿರುದು ಬಾವಲಿಗಳನ್ನು

ಒಳಗೊಂಡಿದೆ ಹಾಗೂ ಈ ಊರಿನಲ್ಲಿರುವ ನಾನಾ ಗೋತ್ರದ (ಜಾತಿಯ) ನಾನಾ ನಾಮಧೇಯ ಮಹಾಜನರಿಗೆ ಹನ್ನೆರಡು ವೃತ್ತಿಗಳನ್ನು ನೀಡಿರುವ ಬಗ್ಗೆ ತಿಳಿದುಬರುತ್ತದೆ. ಶಾಸನದ ಬ್ರಾಹ್ಮಣರ ವಿವರವು ಹೀಗಿದೆ.

1. ಶ್ರೀ ನಂಜುಂಡೇಶ್ವರ ದೇವರಿಗೆ ವೃತ್ತಿ
2. ಬೊರುವ ಜೊತಿ ತಿದಿಗೆ,
3. ಕೃಷ್ಣಭಟ್ಟರಿಗೆ
4. ದೇವಂಣದೀಕ್ಷಿತರಿಗೆ
5. ಯಲ್ಲಾಜೋಯಿಸರಿಗೆ
6. ನರಸಾಜೋಯಿಸರಿಗೆ
7. ಕೃಷ್ಣಜೋಯಿಸರಿಗೆ
8. ಅಕ್ಕಜೋಯಿಸರಿಗೆ
9. ಚಂನಕೇಶ್ವಾಚಾರಿಗೆ
10. ಬಿನಕಠಸರ ವೃತ್ತಿ
11. ನಾರಶಿಭಟ್ಟರಿಗೆ
12. ದೇವರಾಯಬಟ್ಟಂಗೆ

ಹೀಗೆ ಆಯಾ ವೃತ್ತಿಗಳನ್ನು ತಿಳಿಸಲಾಗಿದೆ.

ಕ್ರಿ.ಶ.12ನೇ ಶತಮಾನಕ್ಕೆ ಸೇರಿದ ಗಂಗಾಧರಸ್ವಾಮಿಯವರ ಶಿಲಾಮಠದಲ್ಲಿರುವ ತುಂಡುಕಲ್ಲಿನ ಮೇಲೆ ಇರುವ ಶಾಸನದಲ್ಲಿ ಗದ್ದೆಯನ್ನು ದಾನವಾಗಿ ನೀಡಿರುವುದನ್ನು ತಿಳಿಸುತ್ತದೆ. ಈ ಶಾಸನದ ಕಾಲ ಕ್ರಿ.ಶ.12ನೇ ಶತಮಾನ[42]ಅಲ್ಲದೆ ಈ ಊರಿನ ಬಸವನಗುಡಿ ಬಳಿ ಇರುವ ಶಾಸನದ ಪ್ರಕಾರ ಸುಮಾರು 25 ಸಾಲುಗಳಿರುವ ಶಿಲಾ ಶಾಸನದಲ್ಲಿ ಅನೇಕ ದಾನ ಧರ್ಮಗಳನ್ನು ಅಲ್ಲದೆ ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಪಕ್ಕದಲ್ಲಿರುವ ವೀರಭದ್ರೇಶ್ವರ ದೇವಾಲಯದ ಪಕ್ಕದಲ್ಲಿರುವ ಕಲ್ಲುಮಂಟಪದಲ್ಲಿ ನಿವಾಸಿ ಮಠದ ಧರ್ಮಕ್ಕೆ ದಾನ ನೀಡಿರುವ ವಿಚಾರವು ತಿಳಿದುಬರುತ್ತದೆ.[43] ಈ ಶಾಸನಗಳ ಹಿನ್ನೆಲೆ ಹಾಗೂ ಸೋಮಹಳ್ಳಿಯ ಮಠದ ಪ್ರಕಾರ ಸುಮಾರು 500-600 ವರ್ಷಗಳಿಂದಲೂ ಮಠದ ಪರಂಪರೆ ಇದೆ ಎಂದು ಸ್ಥಳೀಯ ಮಠದ ಆಡಳಿತವರ್ಗ ತಿಳಿಸುತ್ತದೆ. ಶ್ರೀಗುರುಗಳಾದ ಶ್ರೀ ಗಂಗಾಧರೇಶ್ವರರು ಷ॥ಚ॥ಅಂ॥ ಶ್ರೀ ಸಿದ್ಧಮಲ್ಲಿಕಾರ್ಜುನ ಮಹಾಸ್ವಾಮಿಗಳು ಶ್ರೀ ಶ್ರೀ

ಗುರುಮಲ್ಲಸ್ವಾಮಿಗಳವರ ಗುರುಪರಂಪರೆಯಿಂದ ಬೆಳಗಿದ ಶ್ರೀ ಮಠದ ಪ್ರಸ್ತುತ ಅಧ್ಯಕ್ಷರಾಗಿ ಶ್ರೀ ಪಟ್ಟದ ಸಿದ್ಧಮಲ್ಲಸ್ವಾಮಿಗಳು ಸೇವೆ ಸಲ್ಲಿಸುತ್ತಿದ್ದಾರೆ.

ಆದಿಗುರುಗಳಾದ ಶ್ರೀ ಗಂಗಾಧರೇಶ್ವರರು ಮೂಲತಃ ಚಾಮರಾಜನಗರ ಜಿಲ್ಲೆ ಅದೇ ತಾಲ್ಲೂಕಿಗೆ ಸೇರಿದ ಉಮ್ಮತ್ತೂರು ಒಡೆಯರಾದ ಶ್ರೀ ನಂಜರಾಜನಿಂದ ಸನ್ಮಾನಿತರಾಗಿದ್ದಾರೆ. ಇವರು ನಂಜನಗೂಡು ನಿವಾಸಿ ಮಠದಲ್ಲಿ ಸುಮಾರು 40 ಜನ ಒಡೆಯರು ಪ್ರಧಾನ ಸ್ಥಾನದಲ್ಲಿದ್ದರು ಎಂಬುದಾಗಿ ಸ್ಥಳೀಯರ ಅಭಿಪ್ರಾಯವಾಗಿದೆ. ಕ್ರಿ.ಶ.1476ರಲ್ಲಿ ಬರೆಸಲಾಗಿರುವ ಶಾಸನದಲ್ಲಿ ಈ ಭಾಗದ ತೆರಕಣಾಂಬಿ ನಾಡಿನಲ್ಲಿ ಧರ್ಮ ಶಾಸನದ ಪ್ರಕಾರ ದೇವರಾಯನಪುರವಾದ ಸೋಮಹಳ್ಳಿಯಲ್ಲಿ ಆಯಾ ಕಾಲಕ್ಕೆ ನಡೆದು ಬಂದಿರುವ ಸುಮಾರು 34 ವೃತ್ತಿಯೊಳಗೆ ನಂಜನಗೂಡಿನಲ್ಲಿರುವ ಬ್ರಾಹ್ಮಣರ ಛತ್ರದ ವೃತ್ತಿ ಜಂಗಮರ ವೃತ್ತಿಯನ್ನು ಬಿಟ್ಟಿರುವ ವಿಚಾರ ತಿಳಿದುಬರುತ್ತದೆ.[44]ಸೋಮಹಳ್ಳಿಯ ಮಠದ ಗುರುಪರಂಪರೆಯು 1971ರಲ್ಲಿ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಪಟ್ಟಕ್ಕೆ ಬಂದರು. ಇದಕ್ಕಿಂತ ಮೊದಲು ನಂಜನಗೂಡು ತಾಲ್ಲೂಕಿನ ದೇವನೂರಿನ ಶ್ರೀ ಗುರುಮಲ್ಲೇಶ್ವರ ಮಠದಲ್ಲಿದ್ದರು. ಇವರು ಅಧಿಕಾರಕ್ಕೆ ಬಂದ ನಂತರ ಶ್ರೀಮಠವು ಅಭಿವೃದ್ಧಿಯನ್ನು ಪಡೆಯುತ್ತಿದೆ. ಇಲ್ಲಿಯ ಪ್ರಾಚೀನ ಕಾಲದ ಗದ್ದುಗೆಯನ್ನು ಜೀರ್ಣೋದ್ಧಾರ ಮಾಡಿಸಲಾಗಿದೆ. ಶ್ರೀ ಮಠದಲ್ಲಿ ಅನೇಕ ರೀತಿಯ ಸಾಮಾಜಿಕ ಕಾರ್ಯಕ್ರಮಗಳು ಹಾಗೂ ಧಾರ್ಮಿಕ ಕಾರ್ಯಗಳು ನಡೆಯುತ್ತವೆ. ಪ್ರತಿವರ್ಷವು ಶ್ರಿ ಶ್ರೀ ಸಿದ್ಧಮಲ್ಲಿಕಾರ್ಜುನ ಮಹಾಸ್ವಾಮಿಗಳ ಪುಣ್ಯಗಣಾರಾಧನಾ ಮಹೋತ್ಸವವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಶ್ರೀ ಮಠದಲ್ಲಿ ನಿತ್ಯಪೂಜೆಯಲ್ಲದೆ ಅಮವಾಸ್ಯೆ ಹುಣ್ಣಿಮೆ, ಶ್ರಾವಣಮಾಸ, ಕಾರ್ತಿಕ ಮಾಸಗಳಲ್ಲಿ ವಿವಿಧ ರೀತಿಯ ಕೈಂಕರ್ಯಗಳು ಜರುಗುತ್ತವೆ. ಅಲ್ಲದೆ ಮೈಸೂರು, ನಂಜನಗೂಡು, ಚಾಮರಾಜನಗರ, ಹೆಗ್ಗಡದೇವನಕೋಟೆ ಇನ್ನೂ ಮೊದಲಾದ ತಾಲ್ಲೂಕು ಕೇಂದ್ರಗಳ ನಾನಾ ಊರುಗಳ ಜನಸಮೂಹ ಇಲ್ಲಿಗೆ ಬರುವ ಪರಂಪರೆಯು ಸಹ ಇದೆ. ಈ ಹಿನ್ನೆಲೆಯಿಂದ ಸೋಮಹಳ್ಳಿಯು ಕೂಡ ಒಂದು ವೀರಶೈವ ಧಾರ್ಮಿಕ ಕೇಂದ್ರವಾಗಿ ನಿರಂತರ ಕಾರ್ಯ ಪ್ರಭಾವಿತವಾಗಿದೆ. ಶಾಸ್ತ್ರ ಗ್ರಂಥಗಳ ಪ್ರಕಾರ ಪ್ರಥಮಗಣ, ರುದ್ರಗಣ, ವೃಷಭಗಣ, ತ್ರಿಷಷ್ಠಿ ಪುರಾತನಗಣ, ಷೋಡಶಗಣ, ತೇರಸಗಣ, ನೂತನಗಣ, ಎಳನೂರು ಎಪ್ಪತ್ತು ಅಮರಗಣಂಗಳು ವೀರಶೈವ ಪ್ರಪಂಚದ ಸೌಭಾಗ್ಯವಾಗಿದೆ. ಈ ಹಿನ್ನೆಲೆಯಲ್ಲಿಯೇ ನೂರೊಂದು ವಿರಕ್ತರು ಕನ್ನಡ ನಾಡಿನಲ್ಲಿದ್ದಾರೆ. ಇವರನ್ನು ಕೈಲಾಸದಿಂದಿಳಗೈತಂದು ಜಂಗಮ ಸ್ಥಲವನಂಗೀಕರಿಸಿದವರು ಎಂದು ಭಾವಿಸಲಾಗಿದೆ. ಈ ಬೆಳವಣಿಗೆಯನ್ನು ಗಮನಿಸಿದರೆ ಗುಂಡ್ಲುಪೇಟೆ ತಾಲ್ಲೂಕಿನ ಕೆಲವೊಂದು ಗ್ರಾಮಗಳಲ್ಲಿ ವೀರಶೈವ ಮಠಗಳನ್ನು ಅವುಗಳ ಬೆಳವಣಿಗೆಯನ್ನು ಕಾಣಬಹುದಾಗಿದೆ. ಒಟ್ಟಾರೆ ಹೇಳುವುದಾದರೆ, ಬೇರೆ ಬೇರೆ ಮೂಲ

ಧರ್ಮಗಳಿಗಿಂತ ವೀರಶೈವ ಧರ್ಮ ಸ್ವಲ್ಪ ಮುಂದೆ ಇದೆ ಎಂಬುದು ತಿಳಿದುಬರುತ್ತದೆ. ನಂತರ ಶ್ರೀ ವೈಷ್ಣವ ಧರ್ಮ ಅನೇಕ ಧಾರ್ಮಿಕ ಕೆಲಸ ಕಾರ್ಯವಾಗುವುದನ್ನು ಸಹ ಕಾಣುತ್ತೇವೆ. ಇದರಿಂದ ಆಯಾ ಕಾಲಘಟ್ಟಗಳಲ್ಲಿ ಆಯಾ ಧರ್ಮ ಪ್ರಚಲಿತವಾಗಿತ್ತೆಂದೂ ಪ್ರಸ್ತುತ ವೀರಶೈವ ಧರ್ಮ ತನ್ನ ಪೂರ್ವ ಪರಂಪರೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗುತ್ತಿದೆ ಎಂಬುದನ್ನು ಕಾಣಬಹುದಾಗಿದೆ.

## ಅಡಿಟಿಪ್ಪಣಿಗಳು

1. ನಂಜನಗೂಡು ತಾಲ್ಲೂಕು ಸುತ್ತೂರಿನ ಎಲ್ಲಾ ಧಾರ್ಮಿಕ ಹಿನ್ನೆಲೆಯನ್ನು ಒಳಗೊಂಡಂತೆ ಗ್ರಂಥಗಳನ್ನು ಅಧ್ಯಯನ ಮಾಡಿರುವುದರಿಂದ ಇದೊಂದು ವೀರಶೈವ ಕ್ಷೇತ್ರವೆಂದೆ ಪರಿಗಣಿಸಬಹುದಾಗಿದೆ ಹಾಗೂ ಈ ಕ್ಷೇತ್ರದ ಹಿನ್ನೆಲೆಯಿಂದ ಕರ್ನಾಟಕದ ನಾನಾ ಭಾಗಗಳಲ್ಲಿ ವೀರಶೈವ ಆರಾಧಕರು ಬೆಳೆಯುವುದಕ್ಕೆ ಕಾರಣರು ಸಹ ಆಗಿದ್ದಾರೆ.
2. ಸೂರ್ಯನಾಥ ಯು ಕಾಮತ್ – ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-1, 1984, ಪು.ಸಂ.331.
3. ಡಾ.ಪಳನಿಸ್ವಾಮಿ – ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ, ಸ್ಕಂದಶ್ರೀ ಪ್ರಕಾಸನ, ಮೂಡಗೂರು, 2011, ಪು.ಸಂ.102-103.
4. ಎಫಿಗ್ರಾಫಿಯ ಕರ್ನಾಟಕ, ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-24.
5. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-77.
6. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-24.
7. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-100
8. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-135.
9. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-176.
10. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-178.
11. ಪಳನಿಸ್ವಾಮಿ ಪೂರ್ವೋಕ್ತ, ಪು.ಸಂ.108.
12. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-216.
13. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-69.
14. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-44.
15. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-49.
16. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-24.
17. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-154.
18. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-77, 176.
19. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆಗಳು (81, 178, 120, 135, 169, 168, 114, 115)

20. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-39.

21. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-55.

22. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-29.

23. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-113.

24. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-176.

25. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-24.

26. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-151.

27. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-202.

28. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-27.

29. ಗುಂಡ್ಲುಪೇಟೆ ತಾಲ್ಲೂಕು ಪಡಗೂರು ಪಿ.ಸಿ.ರಾಜಶೇಖರ್‌ರವರಿಂದ ಮಾಹಿತಿಯನ್ನು ಪಡೆಯಲಾಗಿದೆ.

30. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-198 ರಿಂದ 205 ರವರೆಗಿನ ಶಾಸನಗಳು ಇಲ್ಲಿಯ ಇತಿಹಾಸವನ್ನು ತಿಳಿಸುತ್ತದೆ.

31. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-135.

32. M.A.R. (Mysore Archeological Department)ಪು.ಸಂ.35.

33. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-215.

34. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-212.

35. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-213.

36. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-149.

37. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-94 ಹಾಗೂ (ಎಂ.ಎ.ಆರ್. 1934) ಪು.ಸಂ.44.

38. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-95 (ಎಂ.ಎ.ಆರ್. 1934, ಪು.ಸಂ.45)

39. ಜಿ.ಜಿ.ಮಂಜುನಾಥನ್ - ಶ್ರೀ ಮದ್ದಾನೇಶ್ವರ ಚರಿತೆ, ಶ್ರೀ ಅಡವಿಮಠ, ಪಡಗೂರು, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ಪುಸಂ.9.

40. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-78.

41. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-79 (ಎಂ.ಎ.ಆರ್.1935-29)

42. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–77.

43. ಅದೇ

44. ಜಿ.ಜಿ.ಮಂಜುನಾಥನ್ – ಶ್ರೀ ಮದ್ದಾನೇಶ್ವರ ಚರಿತೆ, ಶ್ರೀ ಅಡವಿಮಠ, ಪಡಗೂರು, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಹೊರತಂದಿರುವ 1987 ಕೃತಿಯಿಂದ ಮತ್ತು ಎಫಿಗ್ರಾಫಿಯ ಕರ್ನಾಟಕ ಸಂಪುಟ ಗುಂಡ್ಲುಪೇಟೆ ತಾಲ್ಲೂಕಿಗೆ ಅನ್ವಯಿಸಿರುವ ವೀರಶೈವ ಶಾಸನಗಳಿಂದ ಅಲ್ಲದೆ Annual Report of the Mysore Archeological Department 1936 of Mysore ಮತ್ತು Government Press, Bangalore, 1938 ಗಳಲ್ಲಿ ದೊರೆತ ಮಾಹಿತಿಗಳಿಂದ ರಚಿಸಲಾಗಿದೆ.

## ಶೈವ ದೇವಾಲಯಗಳ ಪಟ್ಟಿ

1. ತ್ರಿಯಂಬಕಪುರ – ತ್ರಿಯಂಬಕೇಶ್ವರ ದೇವಾಲಯ
2. ತ್ರಿಯಂಬಕಪುರ – ಪಾರ್ವತಿ ದೇವಾಲಯ
3. ಹಸಗೂಲಿ – ಸಿದ್ಧರಾಮೇಶ್ವರ ದೇವಾಲಯ
4. ಮಳವಳ್ಳಿ – ಮಲೆಮಹದೇಶ್ವರ ದೇವಾಲಯ
5. ಮಳವಳ್ಳಿ – ಬಸವೇಶ್ವರ ದೇವಾಲಯ
6. ಮಳವಳ್ಳಿ – ಸಿದ್ಧಪ್ಪಾಜಿ ದೇವಾಲಯ
7. ಮಂಚನಹಳ್ಳಿ – ಮಲ್ಲಿದೇವರಗುಡಿ ದೇವಾಲಯ
8. ರಾಘವಪುರ – ರಾಮಲಿಂಗೇಶ್ವರ ದೇವಾಲಯ
9. ಕೋಟೆಕೆರೆ – ಚಂದ್ರಮೌಳೇಶ್ವರ ದೇವಾಲಯ
10. ಹಿರಿಕಾಟಿ – ಚಂದ್ರಮೌಳೇಶ್ವರ ದೇವಾಲಯ
11. ಚಿಕ್ಕಾಟಿ – ಚಂದ್ರಶೇಖರ ದೇವಾಲಯ
12. ಕಂದೇಗಾಲ – ಸೋಮೇಶ್ವರ ದೇವಾಲಯ
13. ಕಂದೇಗಾಲ – ಪಾರ್ವತಮ್ಮ ದೇವಾಲಯ
14. ಕೆಲಸೂರು – ಸಿದ್ದೇಶ್ವರ ದೇವಾಲಯ
15. ಕೆಲಸೂರು – ಮಹಾಲಿಂಗೇಶ್ವರ ದೇವಾಲಯ
16. ಪಡಗೂರು – ಬಸವೇಶ್ವರ ದೇವಾಲಯ
17. ತೆರಕಣಾಂಬಿ – ಮೂಲಸ್ಥಾನಪುರ ದೇವಾಲಯ
18. ತೆರಕಣಾಂಬಿ – ವೀರಭದ್ರಸ್ವಾಮಿ ದೇವಾಲಯ
19. ತೆರಕಣಾಂಬಿ – ಶಿವಾಲಯ ದೇವಾಲಯ
20. ಹೊರೆಯಾಲ – ವೀರಭದ್ರೇಶ್ವರ ದೇವಾಲಯ
21. ಹೊರೆಯಾಲ – ಬಸವಾಪುರ ದೇವಾಲಯ
22. ಅರೇಪುರ – ಮಲೈಮಹದೇಶ್ವರ ದೇವಾಲಯ
23. ಚಿಕ್ಕಾಟಿ – ಉಮಾಮಹೇಶ್ವರ ದೇವಾಲಯ
24. ನಿಟ್ರೆ – ಮಲ್ಲಿಕಾರ್ಜುನ ದೇವಾಲಯ
25. ಕುಣಗಾಲ – ಶ್ರೀನಲ್ಲಿತಾಳ ಬಸವೇಶ್ವರ ದೇವಾಲಯ

26. ಸೋಮಹಳ್ಳಿ – ರಾಮಲಿಂಗೇಶ್ವರ ದೇವಾಲಯ

27. ಕಬ್ಬಹಳ್ಳಿ - ಶಿವಾಲಯ ದೇವಾಲಯ

28. ಕಬ್ಬಹಳ್ಳಿ - ಬಸವೇಶ್ವರ ದೇವಾಲಯ

29. ಸಂಪಿಗೆಪುರ – ಅರ್ಕೇಶ್ವರ ದೇವಾಲಯ

30. ಹಳ್ಳದಮಾದಹಳ್ಳಿ - ಸೋಮೇಶ್ವರ ದೇವಾಲಯ

31. ಹಂಗಳ - ಬಸವೇಶ್ವರ ದೇವಾಲಯ

32. ವಣಕನಪುರ – ಓಂಕಾರ ಸಿದ್ದೇಶ್ವರಸ್ವಾಮಿ

33. ಗುಂಡ್ಲುಪೇಟೆ – ಈಶ್ವರ ದೇವಾಲಯ

34. ಗುಂಡ್ಲುಪೇಟೆ - ಬಸವ ಮಂಟಪ

35. ಶಿಂಡನಪುರ – ಮಂಟೇಸ್ವಾಮಿ ದೇವಾಲಯ

36. ಕೊಡಸೋಗೆ – ಚನ್ನಮಲ್ಲಿಕಾರ್ಜುನ ದೇವಾಲಯ

37. ಕರಕಲಮಾದಹಳ್ಳಿ – ಮಹದೇಶ್ವರ ದೇವಾಲಯ

38. ವಡ್ಡಗೆರೆ - ಬಸವೇಶ್ವರ ದೇವಾಲಯ

39. ಹೆಗ್ಗವಾಡಿ - ಶಿವಶಂಕರ ದೇವಾಲಯ

40. ಅಂಕಹಳ್ಳಿ - ಬಸವೇಶ್ವರ ದೇವಾಲಯ

41. ಬೊಮ್ಮಲಾಪುರ - ಪಟ್ಟದರಾಣಿ ಅಮ್ಮರವರ ದೇವಾಲಯ

42. ಶಿವಪುರ - ಬಸವೇಶ್ವರ, ನಂದಿಮಂಟಪ, ಮಾರಮ್ಮ

43. ಕೋಡಹಳ್ಳಿ – ಮಲೈಮಹದೇಶ್ವರ ದೇವಾಲಯ

44. ಹೊನ್ನೇಗೌಡನಹಳ್ಳಿ – ರಾಮಲಿಂಗೇಶ್ವರ ದೇವಾಲಯ

45. ಗೋಪಾಲಪುರ – ಕುಂಬೇಶ್ವರ ದೇವಾಲಯ

46. ಚನ್ನಮಲ್ಲಿಕಾರ್ಜುನಪುರ- ಶಿವಾಲಯ

47. ಕಣ್ಣೇಗಾಲ - ಸೋಮೇಶ್ವರ ದೇವಾಲಯ

48. ಗುಂಡ್ಲುಪೇಟೆ – ರಾಮೇಶ್ವರ ದೇವಾಲಯ

49. ಸಿದ್ದಪ್ಪಾಜಿ ದೇವಾಲಯ

50. ದೊಡ್ಡಮ್ಮತಾಯಿ ದೇವಾಲಯ

51. ಮಂಟೇಸ್ವಾಮಿ ದೇವಾಲಯ

52. ದೊಡ್ಡತುಪ್ಪೂರು- ಶಿವ ದೇವಾಲಯ

# ಅಧ್ಯಾಯ–4

# ಗುಂಡ್ಲುಪೇಟೆ ತಾಲ್ಲೂಕಿನ ವೈಷ್ಣವ ದೇವಾಲಯಗಳು

## 4.1. ವೈಷ್ಣವ ಧರ್ಮ ಬೆಳವಣಿಗೆ

ಧರ್ಮವು ಮಾನವನ ಸಹಜವಾದ ನೈತಿಕ ಪ್ರವೃತ್ತಿಯ ಬೆಳವಣಿಗೆ ಮತ್ತು ನಂಬಿಕೆಗಳ ಮೂಲವಾಗಿದೆ. ಧರ್ಮವನ್ನು ಬಿಟ್ಟು ಮಾನವನು ಬದುಕಲಾರ, ಮಾನವನು ತನ್ನ ಹುಟ್ಟಿನಿಂದಲೇ ಧರ್ಮದ ಜೊತೆಯಲ್ಲಿ ಬೆಳೆದು ಬಂದಿದ್ದಾನೆ. ಅದು ಪ್ರತ್ಯಕ್ಷವಲ್ಲದಿದ್ದರೂ, ಪರೋಕ್ಷವಾಗಿಯಾದರೂ ಸಮಾಜದಲ್ಲಿ ಪ್ರಸ್ತುತ ಕಂಡುಬರುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ಅಲ್ಲದೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಜನಸಾಮಾನ್ಯರ ಧಾರ್ಮಿಕ ಜೀವನವನ್ನು ನಾವು ನೋಡಿದಾಗ ಸುಮಾರು ಕ್ರಿ.ಶ.6–7ನೇ ಶತಮಾನದಿಂದಲೂ ಹಲವಾರು ಧರ್ಮಗಳು ಬೆಳೆದುಬಂದಿದೆ. ಈ ತಾಲ್ಲೂಕಿನ ಜನತೆಯ ಧಾರ್ಮಿಕ ಶ್ರದ್ಧೆ, ಸಮನ್ವಯ, ಸೌಹಾರ್ದತೆ ಮತ್ತು ಈ ಭಾಗದ ವಾತಾವರಣ, ಪ್ರಾಚೀನ ಕಾಲದಿಂದಲೂ ಧಾರ್ಮಿಕ ನಂಬಿಕೆಗಳನ್ನು ಅಲ್ಲದೆ ಆಯಾ ಧರ್ಮಗಳನ್ನು ಆಕರ್ಷಿಸುತ್ತಿತ್ತು ಎಂಬುದು ತಿಳಿದುಬರುತ್ತದೆ.

ಋಗ್ವೇದದ ಪ್ರಕಾರ ಆರ್ಯರು ಅಗ್ನಿ, ಇಂದ್ರ, ವರುಣ ಇನ್ನಿತರ ದೇವಾನುದೇವತೆಗಳನ್ನು ಕುರಿತು ಪ್ರಾರ್ಥನೆ ಸಲ್ಲಿಸುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ ಋಗ್ವೇದ ಕಾಲದಲ್ಲಿ ಗಂಡು ದೇವತೆಗಳಿಗೆ ದೊರೆತ ಪ್ರಾಧಾನ್ಯತೆಯು ಹೆಣ್ಣು ದೇವತೆಗಳಿಗೆ ದೊರೆಯಲಿಲ್ಲ ಎಂಬುದು ಕೂಡ ವ್ಯಕ್ತವಾಗುತ್ತದೆ.[1] ಆದರೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅನೇಕ ಹೆಣ್ಣು ದೇವತೆಗಳನ್ನು ಆರಾಧಿಸುವ ಪರಿಪಾಠ ಇದೆ. ಈ ವಿಚಾರವನ್ನು ಸ್ಥಳೀಯ ದೇವತೆಗಳು ತಿಳಿಸುವ ಸಂದರ್ಭದಲ್ಲಿ ತಿಳಿಸಲಾಗುತ್ತದೆ. ಈ ಕಾಲಘಟ್ಟದಲ್ಲಿ ದೇವತೆಗಳನ್ನು ಮಂತ್ರಗಳು ಹಾಗೂ ಯಜ್ಞಯಾಗಾದಿಗಳ ಮೂಲಕ ಪೂಜಿಸುವುದು ಪ್ರಧಾನವಾಗಿತ್ತೆಂದೆ ತಿಳಿದುಬರುತ್ತದೆ. ಉತ್ತರ ವೇದಗಳ ಕಾಲದಲ್ಲಿ ಯಜ್ಞಯಾಗಾದಿಗಳ ಪ್ರಾಮುಖ್ಯತೆ ಹೆಚ್ಚಾಯಿತು. ಇದರಲ್ಲಿ ಪ್ರಜಾಪತಿಯು ಉನ್ನತ ಗಳಿಸಿಕೊಂಡಿದ್ದನು. ವಿಷ್ಣುವಿನ ಮಹತ್ವ ಹೆಚ್ಚಾಗಿ ಈತನು ಜನಸಾಮಾನ್ಯರನ್ನು ಕಾಪಾಡುವ ದೇವನಾಗಿ ಸೃಷ್ಠಿಗೊಂಡನು. ಈ ಕಾಲಕ್ಕೆ ವಿಗ್ರಹರಾಧನೆಯು ರೂಪುಗೊಂಡು ವೈದಿಕ ಸಂಸ್ಕಾರಗಳಿಗೆ ಹೆಚ್ಚಿನ ಆದ್ಯತೆಯನ್ನು ಆರ್ಯರು ನೀಡಿದರು ಎಂಬ ಅಭಿಪ್ರಾಯ ವೈಷ್ಣವ ಧರ್ಮದವರಲ್ಲಿದೆ.[2] ಇವರ ಧಾರ್ಮಿಕ ವೈಷ್ಣವ ಧರ್ಮದಲ್ಲಿ ಇರುವ ಶ್ರದ್ಧೆಯಲ್ಲಿ ರುದ್ರ ಮತ್ತು ವಿಷ್ಣು ಪ್ರಮುಖ ದೇವರುಗಳಾಗಿದ್ದರು ಎಂಬುದು ನಾನಾ ಗ್ರಂಥಗಳಿಂದ ತಿಳಿದುಬರುತ್ತದೆ. ಭಾರತದ ಧಾರ್ಮಿಕ ಇತಿಹಾಸವನ್ನು ತೆರೆದು ನೋಡಿದರೆ ಕ್ರಿಸ್ತಪೂರ್ವ 6ನೇ ಶತಮಾನದ ಕಾಲಕ್ಕೆ ಜೈನ ಮತ ಹಾಗೂ ಬೌದ್ಧ ಮತಗಳು ಹುಟ್ಟಿಕೊಂಡವು. ಅಲ್ಲದೆ ಮುಂದೆ

ಕ್ರಿ.ಶ.12ನೇ ಶತಮಾನದ ಕಾಲಕ್ಕೆ ವೀರಶೈವ ಇಸ್ಲಾಂ ಮತ್ತು ಕ್ರೈಸ್ತ ಇನ್ನಿತರ ಧರ್ಮಗಳು ಭಾರತದಲ್ಲಿ ಹುಟ್ಟಿಕೊಂಡವು. ತದನಂತರ ಧರ್ಮ ಪ್ರಸರಣ ಕಾರ್ಯದಲ್ಲಿ ತೊಡಗಿದವು. ಆದಕಾರಣ ದಕ್ಷಿಣ ಕರ್ನಾಟಕದ ಕಟ್ಟಕಡೆಯ ಜಿಲ್ಲೆಯಾದ ಚಾಮರಾಜನಗರ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾದ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಆಯಾ ಧರ್ಮಕ್ಕೆ ಸಾಕ್ಷಿಯಾಗಿ ದೇವಾಲಯಗಳು, ಶಿಲ್ಪಗಳು ಕಂಡುಬರುತ್ತವೆ.[3] ಪ್ರಾಚೀನ ಭಾರತದಲ್ಲಿ ಹಿಂದೂ ಧರ್ಮವು ಹುಟ್ಟಿ ಬೆಳೆದುದರ ಜೊತೆಯಲ್ಲೇ ನಾವು ವೈಷ್ಣವ ಧರ್ಮ (ಭಾಗವತ) ದ ಉಗಮವನ್ನು ಕಾಣುತ್ತೇವೆ. ವೈದಿಕ ಯುಗದಲ್ಲಿ ವಿಷ್ಣುವಿಗೆ ನೀಡಿದ ಮಹತ್ವವೆಂದರೆ ವಿಷ್ಣುವನ್ನು ಪ್ರಧಾನ ದೇವತೆಗಳ ಸಾಲಿನಲ್ಲಿ ನಿಲ್ಲಿಸಿತು. ಆದಕಾರಣವೇ ವಿಷ್ಣುದೇವಾಲಯಗಳನ್ನು ಬ್ರಾಹ್ಮಣ ಅರ್ಚಕರೇ ಪೂಜಿಸುವ ಪರಂಪರೆಯನ್ನು ನಾವು ಪ್ರಾಚೀನ ಕಾಲದಿಂದಲೂ ಕಾಣುತ್ತೇವೆ. ಉದಾಹರಣೆಗೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಾಕಷ್ಟು ವೈಷ್ಣವ ದೇವಾಲಯಗಳಲ್ಲಿ ಬ್ರಾಹ್ಮಣರೇ ಅರ್ಚಕರಾಗಿರುವುದು ತಿಳಿದುಬರುತ್ತದೆ.[4] ಈ ಭಾಗದ ಜನರು ಕೂಡ ವಿಷ್ಣುವು ನಮ್ಮನ್ನು ಕಾಪಾಡುವ ಮತ್ತು ರಕ್ಷಿಸುವ, ದೇವತೆಯೆಂದು ನಂಬಿದ್ದಾರೆ. ಅಲ್ಲದೆ ವಿಗ್ರಹರಾಧನೆಯು ಅಂದಿನ ಕಾಲಕ್ಕೆ ರೂಪುಗೊಂಡು ಪೂಜಾವಿಧಾನಗಳು ಏರ್ಪಟ್ಟವು. ಬ್ರಾಹ್ಮಣಕಗಳ ಕಾಲದಲ್ಲಿ ವಿಷ್ಣುವಿನ ಮಹತ್ವ ದ್ವಿಗುಣವಾಯಿತು. ಮಹಾಭಾರತದಲ್ಲಿ ವೈಷ್ಣವ ಧರ್ಮದ ಬಗೆಗೆ ಅನೇಕ ಆಧಾರಗಳಿವೆ. ಭಾಗವತ ಧರ್ಮ ಮುಂದೆ ಪರಿಪೂರ್ಣವಾದ ಧರ್ಮವಾಯಿತೆಂದು ತಿಳಿದುಬರುತ್ತದೆ. ಅಂದಿನ ಕಾಲದ ಜನರು ವೈದಿಕ ಧರ್ಮವನ್ನು ತಮ್ಮ ತಮ್ಮ ಸಮುದಾಯಗಳು ಎಂದು ಸೃಷ್ಠಿಸಿಕೊಂಡು ಮುಂದೆ ಮತ ಧರ್ಮದಲ್ಲಾದ ಬದಲಾವಣೆಯಿಂದ ಅನೇಕ ರಾಜ-ಮಹಾರಾಜರುಗಳು ವೈಷ್ಣವ ಧರ್ಮಕ್ಕೆ ಪರಿವರ್ತನೆಗೊಂಡರೂ ಭಾರತದಲ್ಲಿ ಮೊಟ್ಟ ಮೊದಲಿಗೆ ವೈಷ್ಣವ ಧರ್ಮದ ಉಗಮದ ಅವಶೇಷವನ್ನು ಮಧ್ಯಪ್ರದೇಶದ ವಿಧಿಷಾದಲ್ಲಿ ಕ್ರಿಸ್ತಪೂರ್ವ 2ನೇ ಶತಮಾನದ ಹೆಲಿಯೋಥೊರಸ್ ಎಂಬ ಗ್ರೀಕ್ ರಾಯಭಾರಿಯು ವಿಷ್ಣುವಿನ ನೆನಪಿಗಾಗಿ ಒಂದು ಸ್ತಂಭವನ್ನು ನಿಲ್ಲಿಸಿದ್ದನೆಂದು ತಿಳಿದುಬರುತ್ತದೆ.[5] ಕುಶಾನರ ಕಾಲದಲ್ಲಿ ಕೆಲವು ಅರಸರು ವಿಷ್ಣುವಿನ ಆರಾಧಕರಾಗಿದ್ದರು. ವಿಷ್ಣುವಿನ 24ನೇ ಅವತಾರಗಳನ್ನು ನಾವು ಕಾಣುತ್ತೇವೆ. ಗುಂಡ್ಲುಪೇಟೆ ತಾಲ್ಲೂಕಿನ ಹುಲ್ಲಗಿನ ಮುರುಡಿ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ಗಾರೆಯಿಂದ ಮಾಡಿದ ಅನೇಕ ಬಗೆಯ ವಿಷ್ಣು ಅವತಾರಗಳನ್ನು ಕಾಣಬಹುದಾಗಿದೆ. ಅಲ್ಲದೆ ತೆರಕಣಾಂಬಿಯ ವೀರಾಂಜನೇಯ ದೇವಾಲಯದಲ್ಲಿರುವ ಕಂಬಗಳಲ್ಲಿ ವಿಷ್ಣುವಿನ ಅವತಾರಗಳನ್ನು ಉಬ್ಬುಶಿಲ್ಪಗಳ ಮೂಲಕ ಕೆತ್ತಲಾಗಿದೆ. ಅದು ಅಲ್ಲದೆ ಗುಂಡ್ಲುಪೇಟೆ ಪಟ್ಟಣದ ಹೊರವಲಯದಲ್ಲಿರುವ ಪರವಾಸು ದೇವಾಲಯದ ಕಂಬಗಳಲ್ಲಿಯೂ ವಿಷ್ಣುವಿನ ಅವತಾರಗಳ

ಉಬ್ಬುಕೆತ್ತನೆಯನ್ನು ಕಾಣುತ್ತೇವೆ. ಆದಕಾರಣ ಈ ಭಾಗದಲ್ಲಿಯೂ ವೈಷ್ಣವ ಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ನೀಡಿರುವುದು ಶಿಲ್ಪಕಲೆಯಿಂದ ವ್ಯಕ್ತವಾಗುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೃಷ್ಣ, ಪರವಾಸು–ದೇವ, ನಾರಾಯಣ, ವರದರಾಜ, ವೆಂಕಟರಮಣ, ವೇಣುಗೋಪಾಲ ಇನ್ನೂ ಮೊದಲಾದ ಹೆಸರುಗಳಿಂದ ವಿಷ್ಣುವನ್ನು ಕರೆಯುವುದು ತಿಳಿದುಬರುತ್ತದೆ. ಸುಮಾರು ಕ್ರಿ.ಶ. ದ ಪ್ರಾರಂಭದ ವೇಳೆಗೆ ಭಾಗವತ ತತ್ವ ಅಥವಾ ವೈಷ್ಣವ ಧರ್ಮದ ಬೆಳವಣಿಗೆ ರೂಪುಗೊಂಡಿತೆಂದು ಹೇಳಲು ಅನೇಕ ದಾಖಲೆಗಳಿವೆ.

ಕೃಷ್ಣನು ಬೋಧಿಸಿದ ಭಗವದ್ಗೀತೆ, ವಿಷ್ಣುಪುರಾಣ ಹಾಗೂ ವಿಷ್ಣು ಸ್ಮೃತಿಗಳು ವೈಷ್ಣವ ತತ್ವದ ಬೋಧನೆಗಳನ್ನು ತಿಳಿಸುವಂತಹ ಪ್ರಮುಖ ಗ್ರಂಥಗಳಾಗಿವೆ. ಕರ್ನಾಟಕದಲ್ಲಿ ಕದಂಬರ ಕಾಲಕ್ಕೆ ವಿಷ್ಣುವಿನ ಭಕ್ತಭಾವ ತಿಳಿದುಬರುತ್ತದೆ.

ಗಂಗರ ಆರಂಭಿಕ ಶಾಸನಗಳಲ್ಲಿ ಅನಂತ ಪದ್ಮನಾಭನ ಸ್ತುತಿಯಿರುವುದು ಗಮನಾರ್ಹ. ಹರಿವರ್ಮ, ಕೃಷ್ಣವರ್ಮ, ವಿಷ್ಣುಗೋಪ ರಾಜರುಗಳು ವೈಷ್ಣವ ಧರ್ಮಕ್ಕೆ ಪೂರಕವಾದ ಹೆಸರುಗಳನ್ನಿಟ್ಟುಕೊಂಡಿದ್ದರು.

ಪರಾ–ವಾಸುದೇವನೇ ಸರ್ವೋತ್ತಮನೆಂಬ ತತ್ವ ಪ್ರನಾಳಿಕೆಯ ನವಪಾಂಚರಾತ್ರ ಪಂಥವು ಸುಮಾರು ಎಂಟನೆಯ ಶತಮಾನದಿಂದ ತನ್ನ ಪ್ರಭಾವವನ್ನು ಬೀರುತ್ತಾ, ಸರಿಸುಮಾರು ಕ್ರಿ.ಶ.10ನೇ ಶತಮಾನದ ಕೊನೆಯಲ್ಲಿ ವಿಶಿಷ್ಠಾದ್ವೈತ ಯಮುನಾ ಚಾರ್ಯರ ಪ್ರಯತ್ನದಿಂದ ವಿಶೇಷವಾಗಿ ಬೆಳೆದು ಶ್ರೀರಂಗಂ, ಕಂಚಿ, ತಿರುಪತಿ ಇನ್ನೂ ಮೊದಲಾದ ಸ್ಥಳಗಳಲ್ಲಿ ಬೇರೂರಿತ್ತು. ಅಭಿವೃದ್ಧಿಗೆ ಬಂದವರು ಶ್ರೀರಾಮಾನುಜಾಚಾರ್ಯರು, ಶೈವನಾದ ಮೊದಲನೆಯ ಕುಲೋತ್ತುಂಗ ಚೋಳನಿಗೂ, ರಾಮಾನುಜಾಚಾರ್ಯರಿಂದ ಧರ್ಮಗಳಲ್ಲಿ ಕಲಹ ಉಂಟಾಗಿ ಅವರು ಶ್ರೀರಂಗಂ ನೆಲೆಯನ್ನು ಬಿಟ್ಟು ಕರ್ನಾಟಕದ ದೋರಸಮುದ್ರದಲ್ಲಿದ್ದ ಬಿಟ್ಟಿದೇವನ ಆಶ್ರಯವನ್ನು ಪಡೆದರು. ತದನಂತರ ಬಿಟ್ಟಿದೇವನು ಶ್ರೀ ವೈಷ್ಣವನನ್ನಾಗಿ ಪರಿವರ್ತಿಸಿ ಆತನಿಗೆ ವಿಷ್ಣುವರ್ಧನೆಂಬುದಾಗಿ ನಾಮಕರಣ ಮಾಡಿದನು. ಆದಕಾರಣವೇ ಹೊಯ್ಸಳ ದೊರೆ ವಿಷ್ಣುವರ್ಧನ ಕರ್ನಾಟಕದ ನಾನಾ ಭಾಗಗಳಲ್ಲಿ ವೈಷ್ಣವ ದೇವಾಲಯಗಳನ್ನು ನಿರ್ಮಿಸಿದ್ದಾನೆ. ಈ ಒಂದು ಪರಂಪರೆಯಿಂದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 11–17ನೇ ಶತಮಾನದ ಕಾಲಕ್ಕೆ ವೈಷ್ಣವ ದೇವಾಲಯಗಳು ನಿರ್ಮಾಣವಾಗಿರುವುದು ಶಾಸನಗಳ ಹಿನ್ನೆಲೆಯಿಂದ ತಿಳಿದುಬರುತ್ತದೆ.

ವೈಷ್ಣವ ಪರಂಪರೆಯಲ್ಲಿ ಹರಿಯೇ ಪರಬ್ರಹ್ಮನು, ಜಗತ್ತು ಸತ್ಯವಾದುದು ಎಂಬುದು ತಿಳಿದುಬರುತ್ತದೆ. ಧರ್ಮದಲ್ಲಿ ಹರಿದಾಸ ಪಂಥ ಹುಟ್ಟಿಕೊಂಡಿತು. ಇದರಲ್ಲಿ ವ್ಯಾಸಕೂಟ ಮತ್ತು ದಾಸಕೂಟ ಎಂಬ ವಿಧಗಳು ತಮ್ಮ ಧರ್ಮ ಪ್ರಸಾರ ಕಾರ್ಯದಲ್ಲಿ ತೊಡಗಿದವು. ಸಾಮಾನ್ಯವಾಗಿ ಕನ್ನಡದಲ್ಲಿ ದಾಸಕೂಟದವರು ತತ್ವಗಳನ್ನು ಬೋಧಿಸಿದರೆ, ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದವರು ವ್ಯಾಸಕೂಟದವರೆಂದು ಕರೆಯಲಾಗಿದೆ. ಈ ಎರಡು ಪಂಥದವರು ವಿಜಯನಗರದ ಅರಸರ ಕಾಲದಲ್ಲಿ ತತ್ವ ಪ್ರಸಾರಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಇದರಲ್ಲಿ ದಾಸಕೂಟದವರು ಶ್ರೀಪಾದರಾಯರು, ವಾದಿರಾಜ, ಪುರಂದರದಾಸ, ಕನಕದಾಸ ಮೊದಲಾದವರು ವ್ಯಾಸಕೂಟದಲ್ಲಿ ವ್ಯಾಸರಾಯ, ವಿಜಯದಾಸ, ಜಗನ್ನಾಥದಾಸ, ವೆಂಕಟದಾಸ ಮೊದಲಾದವರು ಪ್ರಮುಖರಾಗಿದ್ದರು.

ಈ ಹಿನ್ನೆಲೆಯನ್ನು ನೋಡಿದರೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಾಕಷ್ಟು ಸಂಖ್ಯೆ ದಾಸಕೂಟದವರು ನೆಲೆಸಿರುವುದು ತಿಳಿದುಬರುತ್ತದೆ. ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ದಾಸರು ಹಿಮವದ್ ಗೋಪಾಲಸ್ವಾಮಿ ಬೆಟ್ಟ ಮತ್ತು ಹುಲ್ಲಗಿನ ಮುರಡಿ ವೆಂಕಟರಮಣ ಅಲ್ಲದೆ ತೆರಕಣಾಂಬಿಯ ವರದರಾಜಸ್ವಾಮಿ ದೇವಾಲಯಗಳನ್ನು ದಾಸಯ್ಯರವರು ವಿಶೇಷ ರೀತಿ ಬಂದು ಹೋಗುವುದನ್ನು ಈ ಪರಿಸರದಲ್ಲಿ ಅವರು ನಡೆದುಕೊಳ್ಳುವ ರೀತಿ, ಧಾರ್ಮಿಕ ಪರಂಪರೆ, ಅವರು ಧರಿಸುವ ವಸ್ತ್ರಗಳು ಇವೆಲ್ಲವೂ ಕೂಡ ಧಾರ್ಮಿಕ ಹಾಗೂ ಚಾರಿತ್ರಿಕ ಹಿನ್ನೆಲೆಯಿಂದಲೇ ಕೂಡಿರುತ್ತದೆ. ದಾಸಯ್ಯರವರು ಕೆಂಪು ಮತ್ತು ಬಿಳಿಯ ಮಣಿ ಸರಗಳನ್ನು ಕೊರಳಿಗೆ ಹಾಕಿಕೊಂಡಿರುತ್ತಾರೆ. ಕೆಲವರು ಬಿಳಿಬಟ್ಟೆಗಳನ್ನು ಧರಿಸಿ ಹಣೆಯ ಮೇಲೆ ತ್ರಿನಾಮ ಇರುವ ಮಾದರಿಯಲ್ಲಿ ಕುಂಕುಮ ಮತ್ತು ಬಿಳಿನಾಮವನ್ನು ಹಾಕುವುದು ಇವರ ವಿಶೇಷ ಕೈಯಲ್ಲಿ ಶಂಖ ಮತ್ತು ಜಾಗಟೆಯನ್ನು ಬಾರಿಸುತ್ತಾ, ಶಂಖವನ್ನು ಊದಿ ಮನೆಯಿಂದ ಮನೆಗೆ ನಡೆದು ಭಿಕ್ಷೆ ಬೇಡುವುದು ಇವರ ಕಾಯಕವಾಗಿದೆ. ಇದು ಕಾಲದಿಂದ ಕಾಲಕ್ಕೆ ತಲತಲಾಂತರದಿಂದ ನಡೆದುಕೊಂಡು ಬಂದಿರುವ ಸಂಪ್ರದಾಯವಾಗಿದೆ. ಕ್ರಿ.ಶ.13–14ನೇ ಶತಮಾನದಲ್ಲಿ ಎರಡು ರೀತಿಯ ಪಂಗಡಗಳಿದ್ದವು. ಆದರೆ ಅದು ಈಗ ಕಣ್ಮರೆಯಾಗಿ ಎಲ್ಲರೂ ದಾಸಯ್ಯರೆಂದೇ ಕರೆದುಕೊಂಡಿದ್ದಾರೆ. ಆದರೆ ಈ ದಾಸಯ್ಯರವರ ಸಂಪ್ರದಾಯದಲ್ಲಿಯೂ ಎರಡು ಪಂಗಡಗಳನ್ನು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಾಣಬಹುದು. ಅವುಗಳಾವುವೆಂದರೆ, ಒಂದು ಶೈವ ಪರಂಪರೆಗೆ ಸೇರಿದ ದಾಸಯ್ಯರವರು ಇನ್ನೊಬ್ಬರು ವೈಷ್ಣವ ಧರ್ಮಕ್ಕೆ ಸೇರಿದ ದಾಸಯ್ಯನವರು ಇವರಿಬ್ಬರ ವೃತ್ತಿಗಳು ಒಂದೇ ಆದರೂ ಕೂಡ ಹಣೆಗೆ ಹಾಕುವಂತಹ ಸಂಪ್ರದಾಯವೇ ಬೇರೆಯಾಗಿದೆ.

ಮೇಲೆ ಹೇಳಿದಂತೆ ವೈಷ್ಣವ ದಾಸಯ್ಯರವರು ತ್ರಿನಾಮಗಳನ್ನು ಧರಿಸಿದ್ದರೆ, ಶೈವರು ವಿಭೂತಿಯನ್ನು ಹಣೆಗೆ ಮೂರು ಪಟ್ಟಿಕೆಯ ಮಾದರಿಯಲ್ಲಿ ಹಾಕಿಕೊಳ್ಳುತ್ತಾರೆ. ಅಲ್ಲದೆ ವಿಭೂತಿಯನ್ನು ಕಣ್ಣಿಗೆ, ಕೊರಳಿಗೆ ಹಾಕಿಕೊಂಡಿರುತ್ತಾರೆ. ಆದರೆ ವೈಷ್ಣವ ಪರಂಪರೆಯಲ್ಲಿ ತಮ್ಮ ತೋಳುಗಳಿಗೆ ಶಂಖ ಮತ್ತು ಚಕ್ರದ ಚಿಹ್ನೆಗಳ ಮುದ್ರೆಯನ್ನು ಹಾಕಿಸಿಕೊಂಡಿರುತ್ತಾರೆ. ವೈಷ್ಣವರು ಶಂಖವನ್ನು ಊದಿದರೆ ಶೈವರು ಜಾಗಟೆಯನ್ನು ಭಾರಿಸುವುದು ಸರ್ವೆ ಸಾಮಾನ್ಯವಾಗಿ ಗುಂಡ್ಲುಪೇಟೆಯ ತಾಲ್ಲೂಕಿನ ನಾನಾ ಗ್ರಾಮಗಳಲ್ಲಿ ಕಂಡುಬರುತ್ತದೆ. ಗುಂಡ್ಲುಪೇಟೆಗೆ ಹೊಂದಿಕೊಂಡಂತೆ ತಮಿಳುನಾಡು ಹತ್ತಿರದಲ್ಲಿಯೇ ಇದೆ. ತಮಿಳುನಾಡಿನಲ್ಲಿ ಚೋಳರ ಕಾಲಕ್ಕೆ ಶೈವ ಧರ್ಮ ಪ್ರಬಲವಾಗಿದ್ದರೂ ಕೂಡ ತಮಿಳುನಾಡಿನಲ್ಲಿ ಕ್ರಿ.ಶ.೨ನೇ ಶತಮಾನದಿಂದ ವೈಷ್ಣವ ಪಂಥದ ಪ್ರಭಾವವನ್ನು ತಮಿಳುನಾಡಿನ ಪ್ರದೇಶದಲ್ಲಿ ಕಾಣುತ್ತೇವೆ. ಈ ಸಂಪ್ರದಾಯದಲ್ಲಿ ಮೊದಲಿಗೆ ಕಾಣಿಸಿಕೊಳ್ಳುವವರೆಂದರೆ ಆಳ್ವಾರರು, ಇವರು ಸುಮಾರು ಕ್ರಿ.ಶ.೮ನೇ ಶತಮಾನದಲ್ಲಿ ಇದ್ದಂತಹ ಭಕ್ತಾದಿಗಳು, ಇವರು ತಮಿಳು ಭಾಷೆಯಲ್ಲಿ ದೇವರ ಮೇಲಿನ ಭಕ್ತಿ ಪೂರ್ವಕವಾದ ಪದ್ಯಗಳನ್ನು ಹಾಡಿ ಜನರಲ್ಲಿ ಭಕ್ತಿ ಪ್ರಸಾರ ಮಾಡುತ್ತಿದ್ದರು. ಈ ಹಾಡುಗಳಿಗೆ ಪ್ರಬಂಧಗಳೆಂದು ಕರೆಯುತ್ತಾರೆ. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಎಲ್ಲಾ ವೈಷ್ಣವ ದೇವಾಲಯಗಳಲ್ಲಿಯೂ ಆಳ್ವಾರ್‌ರವರ ಶಿಲ್ಪಗಳಿದ್ದು, ಆಳ್ವಾರ್‌ರವರ ಪೂಜೆ ಪುನಸ್ಕಾರಗಳು ಇಂದಿಗೂ ನಡೆಯುತ್ತದೆ. ವೈಷ್ಣವರ ದೇವಾಲಯಗಳಲ್ಲಿ ಪೂಜೆಯ ಕಾಲಕ್ಕೆ ಪ್ರಬಂಧಗಳೊಳಗಿನ ಪದ್ಯಗಳನ್ನು ಹೇಳುವ ಪರಿಪಾಠ ಇಂದಿಗೂ ಇದೆ. ವೈಷ್ಣವ ಧರ್ಮದಲ್ಲಿ ವಿಶಿಷ್ಠಾದ್ವೈತ ಪಂಥವು ಹುಟ್ಟಿಕೊಂಡಿತು. ಇದರ ಮೂಲಪುರುಷ ನಾಥಮುನಿ. ಈತನ ತತ್ವಗಳನ್ನು ಮುಂದೆ ಬೆಳೆಸಿದ ಇನ್ನೊಬ್ಬ ಸಂತನೆಂದರೆ, ಯಮುನಾಚಾರ್ಯರು. ಇವರು ಹೆಚ್ಚು ಉತ್ಸಾಹದಿಂದ ತಮ್ಮ ಕಾಲದಲ್ಲಿ ಕೆಲಸ ಮಾಡಿ ಪೀಠಾಧಿಪತಿಯಾಗಿದ್ದರು. ಈ ಆಚಾರ್ಯರು ತನ್ನ ತರುವಾಯ ಶ್ರೀರಂಗದ ವೈಷ್ಣವ ಪೀಠದ ಉತ್ತರಾಧಿಕಾರಿಯನ್ನಾಗಿ ಶ್ರೀರಾಮಾನುಜಾಚಾರ್ಯರನ್ನು ನೇಮಿಸಬೇಕಾಗಿ ಸೂಚಿಸಿದ್ದರು. ಯಮುನಾಚಾರ್ಯರ ಪ್ರಯತ್ನದಿಂದ ವಿಶಿಷ್ಠಾದ್ವೈತ ಮತವು ವಿಶೇಷವಾಗಿ ಬೆಳೆದು ಹೆಚ್ಚಿನ ಪ್ರಾಂತ್ಯಗಳಲ್ಲಿ ಬೆಳೆಯುವುದಕ್ಕೆ ಕಾರಣಕರ್ತರಾದರು. ಈ ವಿಶಿಷ್ಠಾದ್ವೈತ ಸಿದ್ಧಾಂತವನ್ನು ಮುಂದಿನ ದಿನಗಳಲ್ಲಿ ಶ್ರೀರಾಮಾನುಜಾಚಾರ್ಯರು ಪೋಷಿಸಿ, ಬೆಳೆಸಿ ದೇವಾಲಯಗಳ ನಿರ್ಮಾಣಕ್ಕೆ ಕಾರಣರಾದರು. ಕರ್ನಾಟಕದಲ್ಲಿ ಅಲ್ಲದೆ ತಮಿಳುನಾಡಿನಲ್ಲಿಯೂ ಕೂಡ ಇವರ ಪ್ರಭಾವದಿಂದ ವೈಷ್ಣವ ಧರ್ಮವು ಹೆಚ್ಚು ಪ್ರಚಾರಗೊಂಡು ಅನೇಕ ವೈಷ್ಣವ ದೇವಾಲಯಗಳು ನಿರ್ಮಾಣಗೊಂಡವು. ಶ್ರೀರಾಮಾನುಜಾಚಾರ್ಯರು ಹಿಂದೆಯೇ ಚೋಳರ ಆಳ್ವಿಕೆಯ ಕಾಲಕ್ಕೆ ಮೈಸೂರಿನ ಕೆಲವೊಂದು ಭಾಗಗಳಲ್ಲಿ ವೈಷ್ಣವ ಧರ್ಮವಿತ್ತು. ಮೈಸೂರು ಜಿಲ್ಲೆ ಮಂಡ್ಯ ಜಿಲ್ಲೆ,

ಚಾಮರಾಜನಗರ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಶಾಸನಗಳಿಂದ ತಿಳಿದುಬರುತ್ತದೆ. ಆದುದರಿಂದ ಶ್ರೀರಾಮಾನುಜಾಚಾರ್ಯರು ಚೋಳರ ಹಿಂಸೆಯಿಂದ ತಪ್ಪಿಸಿಕೊಳ್ಳಲು ಮೈಸೂರು ಪ್ರದೇಶಕ್ಕೆ ಬರಲಿಲ್ಲವೆಂದು ಅಂದಿನ ಕಾಲಕ್ಕೆ ಶ್ರೀ ವೈಷ್ಣವ ಮತವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಬಲಗೊಳಿಸಿವುದಕ್ಕೋಸ್ಕರ ಬಂದಿದ್ದರೆಂದೂ ನನ್ನ ಅಭಿಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 11 ರಿಂದ 17ನೇ ಶತಮಾನದವರೆವಿಗೂ ವೈಷ್ಣವ ದೇವಾಲಯಗಳ ಬೆಳವಣಿಗೆಯಾಗಿರುವುದನ್ನು ಶಾಸನಗಳ ಹಿನ್ನೆಲೆಯಲ್ಲಿ ಕಾಣಬಹುದಾಗಿದೆ.[6]

ವೈಷ್ಣವ ದೇವಾಲಯವೆಂಬುದು ಒಂದು ಧಾರ್ಮಿಕ ಕಟ್ಟಡ. ಸಾಮೂಹಿಕ ಪೂಜೆ, ಪ್ರಾರ್ಥನೆ ಸಲ್ಲಿಸಲು ಅನುಕೂಲವಿರುವ ಒಂದು ಜಾಗ ಅಥವಾ ಸ್ಥಳ. ಇದಕ್ಕೆ ದೇವಾಲಯ, ದೇವಸ್ಥಾನ, ಗುಡಿ, ಮಂದಿರ, ದೇವಗಾರ, ದೇವಳ, ದೇಗುಲ ಇನ್ನಿತರ ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ಇಂಗ್ಲೀಷ್ ಭಾಷೆಯಲ್ಲಿ ಟೆಂಪಲ್ ಎಂಬ ಶಬ್ಧಕ್ಕೆ ದೇವರು ನೆಲೆಸಿರುವ ಸ್ಥಳ. ದೇವಾಲಯ, ದೇವಸ್ಥಾನ, ಗುಡಿ ಎಂಬ ಅರ್ಥವು ಸಹ ಇದೆ.[7]

ಗುಂಡ್ಲುಪೇಟೆ ತಾಲ್ಲೂಕಿನ ಕೆಲವೊಂದು ದೇವಾಲಯಗಳನ್ನು ಗಮನಿಸಿದರೆ ವಿಶೇಷವಾಗಿ ಹೊಯ್ಸಳ ಮತ್ತು ವಿಜಯನಗರ ಅರಸರ ವಾಸ್ತುಶೈಲಿಯ ಬೆಳವಣಿಗೆಯನ್ನು ಗಮನಿಸಿದಾಗ ಅವರು ಮೊಟ್ಟ ಮೊದಲು ಚೋಳ ರೀತಿಯ ದೇವಾಲಯಗಳ ಶೈಲಿಯನ್ನು ಅನುಸರಿಸಿದ್ದರು ಎಂಬುದು ತಿಳಿದುಬರುತ್ತದೆ. ಆದರೆ ಬೃಹದಾಕಾರದ ಒಂದೇ ಕಟ್ಟಡದ ಬದಲಾಗಿ ದೇವಾಲಯ ಪ್ರಾಕಾರದಲ್ಲಿ ಅನೇಕ ಕಟ್ಟಡಗಳ ನಿರ್ಮಾಣವನ್ನು ಕೈಗೊಂಡರು. ಇವೆರಡು ದ್ರಾವಿಡ ಶೈಲಿಯ ಮುಂದುವರೆದ ಭಾಗವಾಗಿ ಪರಿಣಮಿಸಿತು. ದ್ರಾವಿಡ ಮತ್ತು ಹೊಯ್ಸಳ ಶೈಲಿಗಳ ಸಂಗಮವನ್ನು ರೂಢಿಸಿಕೊಂಡರು ಎಂಬುದು ಕಂಡುಬರುತ್ತದೆ. ಉದಾಹರಣೆಗೆ ಗುಂಡ್ಲುಪೇಟೆಯ ವಿಜಯನಾರಾಯಣ ಮತ್ತು ತೆರಕಣಾಂಬಿಯ ವರದರಾಜಸ್ವಾಮಿ ದೇವಾಲಯಗಳು ಒಂದು ಉತ್ತಮ ಉದಾಹರಣೆಯಾಗಿದೆ.

ಇತರೆ ಅವತಾರಗಳನ್ನು ನಂಬುವವರು ಹಾಗೂ ಆರಾಧಿಸುವವರನ್ನು ವೈಷ್ಣವರೆಂದು ಕರೆಯುತ್ತಾರೆ. ವಿಷ್ಣುವನ್ನು ಹರಿನಾರಾಯಣ, ಮಾಧವ, ರಾಮ, ಕೃಷ್ಣ, ಗೋವಿಂದ, ಪುರುಷೋತ್ತಮ ಮೊದಲಾದ ರೂಪಗಳಲ್ಲಿ ಆರಾಧಕರಲ್ಲಿ ಪದ್ಧತಿಯನ್ನು ವೈಷ್ಣವ ಸಂಪ್ರದಾಯ ಭಾಗವತ ಸಂಪ್ರದಾಯವೆಂದು ಕರೆಯುತ್ತಾರೆ.

ವಿಷ್ಣುವಿನ ಆರಾಧಕರಲ್ಲಿ ಎರಡು ಪಂಗಡಗಳಿದ್ದು, ಅದರಲ್ಲಿ ಆಚಾರ-ವಿಚಾರಗಳಲ್ಲಿ ವಿಭಿನ್ನತೆಗಳು ಕಂಡುಬರುತ್ತದೆ. ಮಧ್ವಾಚಾರ್ಯರಿಂದ ಸ್ಥಾಪಿತವಾದ ಪಂಥವನ್ನು ವೈಷ್ಣವರೆಂದೂ ರಾಮಾನುಜಾಚಾರ್ಯರಿಂದ ಸ್ಥಾಪಿತವಾದ ಪಂಥವನ್ನು ಶ್ರೀ ವೈಷ್ಣವ

ಪಂಥವೆಂದು ಕರೆಯುತ್ತಾರೆ. ಕೃಷಿಕರು ಇತರ ಸಾಮಾನ್ಯ ವರ್ಗದವರಲ್ಲೂ ವಿಷ್ಣುವಿನ ಆರಾಧನೆ ಕಂಡುಬರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವೈಷ್ಣವ ಮತ್ತು ಶ್ರೀ ವೈಷ್ಣವ ಧರ್ಮಗಳ ಆಚರಣೆ ರೂಢಿಯಲ್ಲಿರುವುದು ಕಂಡುಬರುತ್ತದೆ. ಈ ಭಾಗದಲ್ಲಿ ವೈಷ್ಣವ ದೇವಾಲಯಗಳನ್ನು ನಿರ್ಮಿಸಿ ಅಗ್ರಹಾರಗಳನ್ನಾಗಿ ನಿರ್ಮಿಸಿರುವುದು ಸಹ ತಿಳಿದುಬರುತ್ತದೆ.

ದಕ್ಷಿಣ ಕರ್ನಾಟಕದ ಕಟ್ಟಕಡೆಯ ದಕ್ಷಿಣ ಭಾಗದಲ್ಲಿರುವ ಗುಂಡ್ಲುಪೇಟೆ ತಾಲ್ಲೂಕಿನ ಮಹತ್ವವಾದ ಶ್ರೀ ವೈಷ್ಣವ ಕೇಂದ್ರಗಳಿವೆ. ಅವುಗಳಲ್ಲಿ ಗುಂಡ್ಲುಪೇಟೆಯ ಪರ ವಾಸುದೇವ ದೇವಾಲಯ, ವಿಜಯನಾರಾಯಣ ದೇವಾಲಯ, ತೆರಕಣಾಂಬಿಯ ಲಕ್ಷ್ಮೀವರದರಾಜಸ್ವಾಮಿ ದೇವಾಲಯ, ಆಂಜನೇಯಸ್ವಾಮಿ ದೇವಾಲಯ, ಹುಲುಗಿನ ಮರಡಿ ವೆಂಕಟರಮಣಸ್ವಾಮಿ ದೇವಾಲಯ, ವೀರಾಂಜನೇಯ ದೇವಾಲಯ, ಹಂಡೆಗೋಪಾಲಸ್ವಾಮಿ ದೇವಾಲಯ, ತೊಂಡವಾಡಿ ವರದರಾಜಸ್ವಾಮಿ ದೇವಾಲಯ, ಕಮರಹಳ್ಳಿಯ ವೆಂಕಟರಮಣಸ್ವಾಮಿ ದೇವಾಲಯ, ಪಡಗೂರು ವೀರಾಂಜನೇಯ ದೇವಾಲಯ, ಹೊರೆಯಾಲ ರಂಗನಾಥ ದೇವಾಲಯ, ಚಿಕ್ಕಾಟಿ ವೇಣುಗೋಪಾಲಸ್ವಾಮಿ ದೇವಾಲಯ, ನಿಟ್ರೆ ಲಕ್ಷ್ಮೀ ದೇವಾಲಯ, ಕುಲಗಾಣ ವಾಸುದೇವ ದೇವಾಲಯ, ಸಿಂಗವಾಡಿ ಚನ್ನಿಗರಾಯ ದೇವಾಲಯ, ಕಬ್ಬಳ್ಳಿ ಚಲುವರಾಯಸ್ವಾಮಿ ದೇವಾಲಯ, ಹಂಗಳ ವರದರಾಜಸ್ವಾಮಿ ದೇವಾಲಯ, ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಗೋಪಾಲಸ್ವಾಮಿ ದೇವಾಲಯ, ರಾಘವಪುರ ಲಕ್ಷ್ಮೀಕಾಂತ ಅಥವಾ ಲಕ್ಷ್ಮೀನಾರಾಯಣ ದೇವಾಲಯ, ಕೋಟೆಕೆರೆ ವೇಣುಗೋಪಾಲಸ್ವಾಮಿ ದೇವಾಲಯ, ಬೇಗೂರು ವೀರಾಂಜನೇಯ ದೇವಾಲಯ, ಕಗ್ಗಳ್ಳ ವೈಷ್ಣವ ಸಂಕೇತ ಇರುವ ದೇವಾಲಯ, ಈ ವೈಷ್ಣವ ದೇವಾಲಯಗಳು 11–17ನೇ ಶತಮಾನದ ನಂತರ ಕಾಲಕ್ಕೆ ಸೇರಿದ ದೇವಾಲಯಗಳಾಗಿವೆ. ಈ ಹಿನ್ನೆಲೆಗಳಿಂದ ಇಲ್ಲಿನ ದೇವಾಲಯಗಳು ವೈಷ್ಣವ ಧರ್ಮ ಪ್ರಾಬಲ್ಯದ ಪ್ರತೀಕದಂತಿದೆ. ವಿಶಿಷ್ಠಾದ್ವೈತ ಸಿದ್ಧಾಂತದ ಪ್ರತಿಪಾದಕರಾದ ರಾಮಾನುಜಾಚಾರ್ಯರ ಪ್ರಭಾವದಿಂದ ಈ ತಾಲ್ಲೂಕು ಕೂಡ ಪ್ರಸಿದ್ಧಿಗೆ ಬಂದಿತು ಮತ್ತು ಇಲ್ಲಿನ ದೇವಾಲಯಗಳು ಶ್ರೀ ವೈಷ್ಣವ ಧರ್ಮದ ಇತಿಹಾಸದೊಂದಿಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದೆ. ಶ್ರೀರಾಮಾನುಜಾಚಾರ್ಯರು ಕರ್ನಾಟಕದ ಮಣ್ಣಿನ ಮೇಲೆ ಕಾಲೂರುವುದಕ್ಕೆ ಮೊದಲೇ ತಮಿಳುನಾಡಿನ ಆಳ್ವಾರುಗಳ ಶ್ರೀವೈಷ್ಣವ ಧರ್ಮದ ಪ್ರಭಾವ ವಾಹಿನಿಯು ಇಲ್ಲಿಗೆ ಹರಿದು ಬಂದಿದೆ. ಆದರೆ ಶ್ರೀ ರಾಮಾನುಜಾಚಾರ್ಯರು ಬಂದ ಮೇಲೆ ಶ್ರೀ ವೈಷ್ಣವ ಧರ್ಮವು ಒಂದು ಸ್ಪಷ್ಟವಾದ ರೂಪವನ್ನು ಪಡೆಯಿತು. ಇದು ಗೌರವಯುತ ಹಿನ್ನೆಲೆಯನ್ನು ಹೊಂದಿದೆ. ಇದು ಸಂಪೂರ್ಣವಾದ ಭಾಗವತನಾದ ವಿಷ್ಣುವಿಗೆ ಶರಣಾಗುವ

ತತ್ವವನ್ನು ಆಧಾರವಾಗಿ ಹೊಂದಿದೆ. ಅಲ್ಲದೆ ರಾಮಾನುಜರಿಗಿಂತ ಹಿಂದಿನ ವೈಷ್ಣವ ಮತ ಶ್ರದ್ಧೆಯಿಂದಾಗಿ ವೈಷ್ಣವ, ಶ್ರೀ ವೈಷ್ಣವ ಎಂಬ ಪರಿಕಲ್ಪನೆಯು ಬೆಳವಣಿಗೆಯಾಯಿತು.

ರಾಮಾನುಜಾಚಾರ್ಯರು ದಕ್ಷಿಣ ಭಾರತದಲ್ಲಿ ಬಲಗೊಳಸಿದ ದೇವಾಲಯ ಆಧಾರಿತ ಭಕ್ತಿ ಆಂದೋಲನಕ್ಕೆ ಸ್ಪಷ್ಟ ಉದಾಹರಣೆ ಮೇಲುಕೋಟೆ. ಇಲ್ಲಿ ತಮ್ಮ ಜೀವಿತದ 14 ವರ್ಷಗಳನ್ನು ಕಳೆದು ಶ್ರೀ ವೈಷ್ಣವ ತತ್ವಗಳನ್ನು ಪ್ರಚಾರ ಮಾಡಲು ಕೇಂದ್ರವಾಗಿಸಿಕೊಂಡರು. ಆ ಕಾಲಕ್ಕೆ ಈ ಭಾಗದಲ್ಲೂ ಅನೇಕ ವೈಷ್ಣವ, ಶ್ರೀವೈಷ್ಣವ ದೇವಾಲಯಗಳು ನಿರ್ಮಾಣವಾಗಿರುವುದನ್ನು ತಿಳಸಲಾಗಿದೆ.

## ಆಳ್ವಾರರು

ಗುಂಡ್ಲುಪೇಟೆ ತಾಲ್ಲೂಕಿನ ವೈಷ್ಣವ ಶ್ರೀವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ಶಿಲ್ಪಗಳವೆ. (ಚಿತ್ರಸಂಖ್ಯೆ-62) ಇದರಿಂದ ಆಳ್ವಾರರ ಪ್ರಭಾವ ನಿಕಟವಾದುದು. ಆದ್ದರಿಂದ ಆಳ್ವಾರರ ಹಿನ್ನೆಲೆ ಮತ್ತು ಚಿಂತನೆಗಳು ಇಲ್ಲಿ ಅತ್ಯಂತ ಉಪಯುಕ್ತವಾಗಿರುತ್ತದೆ. ರಾಮಾನುಜರ ಮೇಲೆ ಬಲವಾದ ಪ್ರಭಾವ ಬೀರಿದುದು ಆಳ್ವಾರರ ತಮಿಳು ಭಕ್ತಿ ಸಂಪ್ರದಾಯ, ರಾಮಾನುಜ ದರ್ಶನದ ಈಶ್ವರವಾದದ ಆಧಾರವೂ ಅವರ ಸರ್ವ ಸಮಾನತೆಯ ಭಾವನೆಯೂ ಆಳ್ವಾರರ ತಮಿಳು ಭಕ್ತಿ ಸಂಪ್ರದಾಯದಿಂದ ಬಂದಿದೆ ಎಂದು ಹೇಳಬಹುದು. ಈ ಧಾರ್ಮಿಕ ಬೆಳವಣಿಗೆಯ ಸೈದ್ಧಾಂತಿಕ ಅಂಶಗಳು ಭಕ್ತಿ ಮಾರ್ಗಗಳ ವ್ಯವಸ್ಥೆಯಲ್ಲಿ ಗುರುತಿಸಿರುತ್ತದೆ.

ಕರ್ನಾಟಕದಲ್ಲಿ ಕ್ರಿ.ಶ.12ನೇ ಶತಮಾನದಲ್ಲಿ ಭಕ್ತಿ ಚಳುವಳಿ ಆರಂಭವಾಯಿತು. ಕೆಲವು ಹಿಂದೂ ಸಂತರು ಮತ್ತು ಆಚಾರ್ಯರು ಕ್ಷಿಪ್ರ ರೀತಿಯಲ್ಲಿ ಪ್ರವರ್ಧಮಾನಕ್ಕೆ ಬಂದರು. ವೈದಿಕ ಮತ್ತು ಸಾಂಪ್ರದಾಯಿಕ ಹಿಂದೂಧರ್ಮದ ಅರ್ಥಹೀನ ಆಚರಣೆಗಳನ್ನು ವಿರೋಧಿಸುವ ಮೂಲಕ ಹಿಂದೂ ಧರ್ಮದ ಅರ್ಥಹೀನ ಆಚರಣೆಗಳನ್ನು ವಿರೋಧಿಸುವ ಮೂಲಕ ಹಿಂದೂ ಧರ್ಮವನ್ನು ಮತ್ತೊಮ್ಮೆ ಶಕ್ತಿಗೊಳಸುವ ಉದ್ದೇಶವಿತ್ತು. ರಾಮಾನುಜರು ಕರ್ನಾಟಕಕ್ಕೆ ಬರುವ ಮುನ್ನವೇ ಆಳ್ವಾರರ ವೈಷ್ಣವ ಧರ್ಮದ ಪ್ರಭಾವವು ಕರ್ನಾಟಕದ ಮೇಲಿತ್ತು ಎಂಬುದಕ್ಕೆ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನ ಸುಮಾರು ಕ್ರಿ.ಶ.1090 ರ ಕಾಲಕ್ಕೆ ಸೇರಿದ ಒಂದು ಶಾಸನದಲ್ಲಿ ವಿಣ್ಣಕರ್ ಆಳ್ವಾರ್ ಎಂಬುವವರಿಗೆ ದತ್ತಿಕೊಟ್ಟ ವಿಚಾರ, ಶಾಸನ ಸಂಖ್ಯೆ 24 ರಿಂದ ತಿಳದುಬರುತ್ತದೆ. ಆದಕಾರಣ ಇದೊಂದು ಪ್ರಮುಖವಾದ ವಿಚಾರವಾಗಿದೆ.

ಕೆ.ಹೆಚ್.ನೀಲಕಂಠಶಾಸ್ತ್ರಿಯವರು Development at Religion in South India Madras, 1963, Page No.47 ರಲ್ಲಿ ಜಗತ್ತಿನ ಪ್ರಸಿದ್ಧ ತತ್ವಜ್ಞಾನಿಯ ಅನುಭವ ಮತ್ತು ತತ್ವಜ್ಞಾನದ ಚಿಂತನೆಗಳು ಹಾಗೂ ಗಹನವಾದ ಧರ್ಮವನ್ನು ಒಂದಾಗಿ ತೋರಿಸಿದೆ. ನಮ್ಮಾಳ್ವರ್ ಹೇಳುವಂತೆ ನಾರಾಯಣನಿಗೆ ಸ್ವಯಂ ಶರಣಾಗುವವನು ಹಾಗೂ ಅತ್ಯುನ್ನತ ಶಕ್ತಿ ಮತ್ತು ಒಳ್ಳೆಯ ಗುಣಗಳ ಅಂಶವಾಗಿರುತ್ತದೆ ಎಂಬುದಾಗಿ ತಿಳಿದುಬರುತ್ತದೆ.

ಆರ್.ಸಿ.ಮಜುಂದಾರ್ ರವರ Ancient India, Delhi, 2003, Page No.435 ರಲ್ಲಿ ಆಳ್ವಾರರ ತತ್ವಗಳು ವೇದ ಮತ್ತು ಪ್ರಮಾಣ ಧರ್ಮಗ್ರಂಥಗಳಿಗೆ ಆಳವಾದ ಋಣಬದ್ಧತೆಯನ್ನು ಹೊಂದಿದೆ. ಭಕ್ತಿ ಶಾಲೆಯ ಆಧ್ಯಾತ್ಮಿಕ ವಾತಾವರಣ ಸೃಷ್ಟಿಸಿ ಜನರ ನಾಯಕರಾಗಿ ತಮ್ಮ ನಂಬಿಕೆಗಳನ್ನು ಹೆಚ್ಚು ಜನರಲ್ಲಿ ಪ್ರಚಾರ ಮಾಡಲು ಪ್ರಯತ್ನಿಸಿದರು. ಇದರಿಂದ ಈ ಭಾಗದ ವೈಷ್ಣವ ದೇವಾಲಯಗಳಲ್ಲಿ ಆಳ್ವಾರ್ ಶಿಲ್ಪಗಳನ್ನು ಸಹ ಕಾಣಬಹುದಾಗಿದೆ. ಉದಾಹರಣೆಗೆ ಗುಂಡ್ಲುಪೇಟೆಯ ವಿಜಯನಾರಾಯಣ ದೇವಾಲಯದಲ್ಲಿ 16 ಆಳ್ವಾರ್ ಶಿಲ್ಪಗಳಿವೆ. ತೊಂಡವಾಡಿಯ ಆಳ್ವಾರ್, ಅಂಡಾಳ್ ಅಮ್ಮರವರ ಶಿಲ್ಪಗಳಿವೆ.

ಹುಲುಗಿನ ಮುರಡಿ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಸುಮಾರು 16 ಆಳ್ವಾರ್ ಶಿಲ್ಪಗಳಿವೆ. ಹಂಗಳದ ವರದರಾಜಸ್ವಾಮಿ ದೇವಾಲಯದಲ್ಲಿ ಆಳ್ವಾರ್ ಆಂಡಾಳಮ್ಮರವರ ಶಿಲ್ಪಗಳಿವೆ. ಈ ಭಾಗದಲ್ಲಿ 16-17ನೇ ಶತಮಾನದವರೆಗೂ ವೈಷ್ಣವ ಮತ್ತು ದೇವಾಲಯಗಳು ನಿರ್ಮಾಣವಾದವು. ಮೈಸೂರು ಒಡೆಯರ್ ಕಾಲಕ್ಕೆ ವೈಷ್ಣವ ಧರ್ಮವನ್ನು ದೇವಾಲಯಗಳನ್ನು ಪೋಷಿಸಿ ಬೆಳೆಸಿದರು. ಈ ಭಾಗದ ಕೆಲವು ಪ್ರಮುಖ ವೈಷ್ಣವ ದೇವಾಲಯಗಳನ್ನು ನನ್ನ ಕ್ಷೇತ್ರ ಕಾರ್ಯದಲ್ಲಿ ಸಂದರ್ಶಿಸಿ ಹಾಗೂ ಕೆಲವು ಮೂಲಾಧಾರಗಳನ್ನು ಅಭ್ಯಾಸ ಮಾಡಿ ಅವುಗಳ ಕುರಿತು ಪ್ರಸ್ತುತ ಚರ್ಚಿಸಲಾಗಿದೆ.

ವಿಜಯನಗರದ ಅರಸರು ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಕೂಡ ತಮ್ಮ ಕಲಾತ್ಮಕತೆಯಲ್ಲಿ ಭಿನ್ನವಾದ ಶೈಲಿಯನ್ನು ಹುಟ್ಟುಹಾಕಿದ್ದಾರೆ. ಇದು ವಿಜಯನಗರ ಶೈಲಿ ಎಂದೇ ಕರೆಯಲಾದ ಹೊಸ ಹಾಗೂ ಖಚಿತವಾದ ಶೈಲಿಯ ಹುಟ್ಟಿಗೆ ಕಾರಣರಾದರು. ಇದನ್ನು ಸಹ ಗುಂಡ್ಲುಪೇಟೆ ತಾಲ್ಲೂಕಿನ ಬಹಳಷ್ಟು ಗ್ರಾಮಗಳಲ್ಲಿ ಕಾಣಬಹುದಾಗಿದೆ.

**1. ವಿಜಯನಾರಾಯಣಸ್ವಾಮಿ ದೇವಾಲಯ-ಗುಂಡ್ಲುಪೇಟೆ**

ಮೈಸೂರು ಊಟಿ ರಸ್ತೆಯಲ್ಲಿ ಗುಂಡ್ಲುನದಿಯ ಎಡದಂಡೆಯ ಮೇಲೆ ಗುಂಡ್ಲುಪೇಟೆ ನಗರ ಪಟ್ಟಣ ಇದೆ. ಮೈಸೂರಿನಿಂದ 60 ಕಿಲೋಮೀಟರ್ ಅಂತರದಲ್ಲಿದೆ. ಇದಕ್ಕೆ

ಪ್ರಾರಂಭದಲ್ಲಿ ಪ್ರಾಚೀನ ಹೆಸರು ವಿಜಯಪುರ ಎಂಬ ನಾಮಕರಣವನ್ನು ಮಾಡಲಾಗಿತ್ತು. ಗುಂಡ್ಲುಪೇಟೆ ಒಂದು ಅಗ್ರಹಾರವೂ ಸಹ ಆಗಿತ್ತು.[8] ಈ ಗ್ರಾಮ ತೆರಕಣಾಂಬಿಯ ಪಾಳೇಗಾರನ ಆಡಳಿತಕ್ಕೆ ಸೇರಿತ್ತೆಂದು ತಿಳಿದುಬರುತ್ತದೆ. ಪ್ರಾಯಶಃ ಅಂದಿನ ಕಾಲಕ್ಕೆ ಈ ಗ್ರಾಮದ ಬಳಿ ಗುಂಡ್ಲುನದಿ ಇರುವ ಕಾರಣದಿಂದಲೇ ಗುಂಡ್ಲುಪೇಟೆ ಎಂಬ ಹೆಸರು ಬಂದಿದೆ ಎಂಬ ಅಭಿಪ್ರಾಯವು ಸಹ ಇದೆ.[9]

ಕ್ರಿ.ಶ.10ನೇ ಶತಮಾನದಲ್ಲಿ ಕುಡುಗೂರು ಎಂದು ಕ್ರಿ.ಶ.13ನೇ ಶತಮಾನದಲ್ಲಿ ಪ್ರಸನ್ನ ವಿಜಯಪುರವೆಂದೂ ಕ್ರಿ.ಶ.17ನೇ ಶತಮಾನಕ್ಕೆ ದೇವನಗಿರಿ ಎಂಬಲ್ಲಿ ಹೆಸರುಗಳಿದ್ದ ಬಗ್ಗೆ ತಿಳಿದುಬರುತ್ತದೆ.[10] ಈ ಭಾಗದಲ್ಲಿ ತಮಿಳುನಾಡಿನ ತಂಜಾವೂರಿನ ಚೋಳರು ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ ಹಾಗೂ ನಂತರದ ಬೆಳವಣಿಗೆಯಲ್ಲಿ ಹೊಯ್ಸಳರು ಕ್ರಿ.ಶ.1048-49 ರಲ್ಲಿ ಸೋಲಿಸಿ ಕೊಂಗು ದೇಶವನ್ನು ಪಡೆದುಕೊಂಡರೆಂದೂ ಈ ಜಯದ ನೆನಪಿಗೋಸ್ಕರವಾಗಿಯೇ ಹೊಯ್ಸಳ ವಿಷ್ಣುವರ್ಧನನು ವಿಜಯಪುರದಲ್ಲಿ ವಿಜಯನಾರಾಯಣ ಸ್ವಾಮಿ ದೇವಾಲಯವನ್ನು ನಿರ್ಮಿಸಿದ್ದನೆಂದು ತಿಳಿದುಬರುತ್ತದೆ.[11] ಈ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದ ಊರ ಬಾಗಿಲಲ್ಲಿರುವ ಶಾಸನದ ಪ್ರಕಾರ ಕ್ರಿ.ಶ.1221 ರ ಕಾಲಕ್ಕೆ ಶ್ರೀರಂಗಡ ಣಾಯಕರು ಕುಡುಗನಾಡು ಶ್ರೀ ವಿಜಯನಾರಾಯಣ ದೇವರ ನಿತ್ಯ ಸಮಾರಾಧನೆ ಪೂಜೆ, ಪುನಸ್ಕಾರಕ್ಕೋಸ್ಕರವಾಗಿ ದತ್ತಿಬಿಟ್ಟಿರುವುದನ್ನು ಕಲ್ಲಹಳ್ಳಿಯ ಶಿಲಾಶಾಸನದಿಂದ ತಿಳಿದುಬರುತ್ತದೆ.[12] ವಿಜಯನಾರಾಯಣಸ್ವಾಮಿ ದೇವಾಲಯ ಮುಖಮಂಟಪದ ಕಂಬದ ಮೇಲೆ ಇರುವ ಶಾಸನದ ಪ್ರಕಾರ ಕ್ರಿ.ಶ.1543 ಜುಲೈ 26ನೇ ಗುರುವಾರ ಅಲ್ಲದೆ ಆಗಸ್ಟ್ 25 ಶನಿವಾರದಂದು ಶಾಸನ ಬರೆಸಿರುವ ವಿಚಾರ ತಿಳಿದುಬರುತ್ತದೆ.[13] ವಿಜಯನಾರಾಯಣಸ್ವಾಮಿ ದೇವಾಲಯದ ಮುಂದೆ ನಿಂತಿರುವ ಕಲ್ಲು ಶಾಸನದಲ್ಲಿ ಸುಮಾರು 23 ಸಾಲುಗಳಿರುವ ಶಾಸನವಿದ್ದು ಕ್ರಿ.ಶ.1554ನೇ ಏಪ್ರಿಲ್ 7 ರಂದು ಶನಿವಾರದ ದಿನದಂದು ಶಾಸನ ಬರೆಸಲಾಗಿದೆ. ಇದರ ಪ್ರಕಾರ ವಿಜಯನಾರಾಯಣಸ್ವಾಮಿ ದೇವರಿಗೆ ದೀಪ ಮತ್ತು ನೈವೇದ್ಯಕ್ಕೆ ಭೂಮಿಯನ್ನು ದಾನವಾಗಿ ನೀಡಿರುವ ಬಗ್ಗೆ ಬರುತ್ತದೆ. [14] ದೇವಾಲಯದಲ್ಲಿರುವ ಪರವಾಸುದೇವರ ಉತ್ಸವ ವಿಗ್ರಹದ ಪೀಠದ ಮೇಲಿನ ಲಿಪಿಯ ಪ್ರಕಾರ ಕ್ರಿ.ಶ.17ನೇ ಶತಮಾನಕ್ಕೆ ಸೇರಿದ ಶಾಸನವಾಗಿದ್ದು, ಇದರಲ್ಲಿ ಶ್ರೀ ವಾಸುದೇವರಾಯ ಸುಪ್ರಸಂನ ಶ್ರೀಮದಪ್ರತಿಮ ಪರವಾಸುದೇವ ಎಂದು ತಿಳಿದುಬರುತ್ತದೆ. [15] ಈ ಎಲ್ಲಾ ಬೆಳವಣಿಗೆಯನ್ನು ನೋಡಿದರೆ ಕ್ರಿ.ಶ.10-11ನೇ ಶತಮಾನದಿಂದ ಕ್ರಿ.ಶ.17ನೇ ಶತಮಾನದವರೆಗೆ ದಾಖಲೆಗಳಿದ್ದು, ಪ್ರಸ್ತುತ ದಿನಗಳಲ್ಲಿಯೂ ಅನೇಕ ರೀತಿಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಚಲಿತದಲ್ಲಿದೆ.

ವಿಜಯನಾರಾಯಣಸ್ವಾಮಿ ದೇವಾಲಯದ ತಳವಿನ್ಯಾಸವನ್ನು ನೋಡಿದರೆ ಗರ್ಭಗೃಹ, ಶುಕನಾಸ, ತೆರೆದ ಅಂಕಣ ಅದರ ಮುಂದಿನ ಭಾಗ ನವರಂಗ, ಮುಖಮಂಟಪ, ವಿಮಾನವನ್ನು ಹೊಂದಿದೆ ಎಂಬುದನ್ನು ಕಾಣಬಹುದು. ವಿಜಯನಾರಾಯಣಸ್ವಾಮಿ ದೇವಾಲಯವನ್ನು ಮೂರು ಹಂತಗಳಾಗಿ ಬೆಳವಣಿಗೆಯಾಗಿರುವುದನ್ನು ನಾವು ಇಲ್ಲಿ ಗಮನಿಸಬಹುದು. (ಚಿತ್ರಸಂಖ್ಯೆ-63) ಅವುಗಳಲ್ಲಿ ತೀರ ಇತ್ತೀಚಿನ ಬೆಳವಣಿಗೆಯ ಸೇರ್ಪಡೆ ಎಂದರೆ ಮುಂದಿನ ಮಂಟಪ, ಮೂಲಗರ್ಭಗುಡಿಯಲ್ಲಿ ಗರುಡ ಪೀಠದ ಮೇಲೆ ಸುಮಾರು 6 ಅಡಿ ಎತ್ತರವನ್ನು ಹೊಂದಿರುವ ಕಾಯೋತ್ಸರ್ಗ ಭಂಗಿಯಲ್ಲಿ (ನಿಂತಿರುವ) ಮಾದರಿಯಲ್ಲಿ ಶಿಲ್ಪವನ್ನು ನಿಲ್ಲಿಸಲಾಗಿದೆ. ಈ ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದರೆ ಹೊಯ್ಸಳರ ಕಾಲಕ್ಕೆ ಸೇರಿಸಬಹುದಾಗಿದೆ. ಈ ಶಿಲ್ಪಕ್ಕೆ ವಿಜಯನಾರಾಯಣ ಅಥವಾ ಜನಾರ್ಧನ ಎಂದು ಕರೆಯುವ ವಾಡಿಕೆ ಇರುವುದೆಂದು ತಿಳಿದುಬರುತ್ತದೆ. ಶಿಲ್ಪವು ಚತುರ್ಭುಜಧಾರನಾಗಿದ್ದು, ಶಂಖ, ಚಕ್ರ, ಗಧ ಮತ್ತು ಅಭಯ ಹಸ್ತವನ್ನು ಹೊಂದಿದ್ದಾನೆ. (ಚಿತ್ರಸಂಖ್ಯೆ-64)

ಶುಕನಾಸ ಅಂಕಣದಲ್ಲಿ ಯಾವುದೇ ರೀತಿಯ ಶಿಲ್ಪಗಳು ಕಂಡುಬರುವುದಿಲ್ಲ. ಶುಕನಾಸದ ಮುಂದಿನ ಅಂಕಣವು ತೆರೆದ ಮಾದರಿಯಲ್ಲಿದ್ದು ಮುಂದೆ, ನಾಲ್ಕು ಕಂಬಗಳಿವೆ. ಅಲ್ಲದೆ ಇಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹ ಮತ್ತು ಶುಕನಾಸದ ಹೊರಗೆ ಉತ್ತರ, ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಿಗೆ ಸೇರಿದಂತೆ ಕಂಬಗಳ ಸಾಲುಗಳಿವೆ. ದಕ್ಷಿಣ ದಿಕ್ಕಿಗೆ 5 ಸಾಲು ಕಂಬಗಳಿವೆ. ಈ ಕಂಬಗಳು ಹೊಯ್ಸಳ ಹಾಗೂ ಚೋಳರ ಕಾಲದ ಕಂಬದ ವಾಸ್ತು ಕೃತಿಗೆ ಸಾಕ್ಷಿಯಾಗಿದೆ. ದೇವಾಲಯದ ಇವೆರಡು ಭಾಗಗಳಲ್ಲಿಯೂ ಭಿತ್ತಿಯ ಭಾಗದಲ್ಲಿ ಅರೆಕಂಬಗಳು ಮತ್ತು ಕೋಷ್ಠಮಂಟಪಗಳನ್ನು ಕಡೆಯಲಾಗಿದೆ.

ದೇವಾಲಯದ ಗರ್ಭಗುಡಿ ಮತ್ತು ಶುಕನಾಸಿಯ ಭಾಗವು ಸರಳವಾಗಿದ್ದು, ಪ್ರಧಾನ ದೇವಾಲಯದ ಹೊರಬದಿಯ ಲಕ್ಷಣಗಳಲ್ಲಿ ಷಡ್ವರ್ಗದ ಮಾದರಿಯಲ್ಲಿದೆ. ಕೆಳಭಾಗದ ಅಧಿಷ್ಠಾನದಲ್ಲಿ ಪಾದುಕೆ, ಉಪಾನ, ಪದ್ಮ, ಕಂಸ, ಜಗತಿ, ತ್ರಿಪಟ್ಟ ಮತ್ತು ಕುಮುದ ಭಾಗಗಳಿಂದ ಕೂಡಿದೆ. ಮೇಲಿನ ಭಿತ್ತಿಯ ಭಾಗದಲ್ಲಿ ಉಬ್ಬು ಕೆತ್ತನೆಗಳ ಪಟ್ಟಿಕೆಗಳು, ಅರೆಕಂಬಗಳು ಅಥವಾ ಅರ್ಧಕಂಬ, ಕೋಷ್ಠಕಗಳನ್ನು ಹೊಂದಿದೆ. ಇವುಗಳನ್ನು ದೇವಕೋಷ್ಠಗಳೆಂದು ಕರೆಯುವ ವಾಡಿಕೆ ಇದೆ, ಆದರೆ ಶಿಲ್ಪಗಳಿಲ್ಲ.

ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳು ವಿಜಯನಗರ ಅರಸರ ಕಾಲಕ್ಕೆ ಸೇರಿಸಬಹುದಾಗಿದೆ. ಈ ನಾಲ್ಕು ಕಂಬಗಳ ಮಧ್ಯಭಾಗದ ವಲ್ಲಭಿಯ ಭಾಗದಲ್ಲಿ ಅನೇಕ ವ್ಯಾಳವಾರಿ ಸಾಲುಗಳನ್ನು ಹೊಂದಿರುವ ಸಣ್ಣ ಸಣ್ಣ ಉಬ್ಬುಶಿಲ್ಪಗಳಿವೆ. ಇದು

ವಿಶೇಷತೆಯನ್ನು ವ್ಯಕ್ತಪಡಿಸುತ್ತದೆ. ನವರಂಗದಲ್ಲಿ 10 ಕಂಚು ಶಿಲ್ಪಗಳಿವೆ. ಊರಿನಿಂದ ಹೊರಗೆ ಇದ್ದ ಪರವಾಸು ದೇವಸ್ಥಾನದಲ್ಲಿದ್ದ ಪರವಾಸು ಶಿಲ್ಪವನ್ನು ಶ್ರೀದೇವಿ, ಭೂದೇವಿಯರ ಶಿಲ್ಪಗಳನ್ನು ಇಡಲಾಗಿದೆ. 15 ಆಳ್ವಾರ್ ಶಿಲ್ಪಗಳಿವೆ. 'ರಾಮಾನುಜಾಚಾರ್ಯ'ರ ಶಿಲ್ಪ ಇದೆ. (ಚಿತ್ರಸಂಖ್ಯೆ-63) ನವರಂಗದ ದಕ್ಷಿಣ ದಿಕ್ಕಿಗೆ ಒಂದು ಗುಡಿ ಇದೆ. ಇದಕ್ಕೆ ಕಮಲವಲ್ಲಿ ಅಮ್ಮನವರ ಗುಡಿ ಎಂದು ಕರೆಯಲಾಗುತ್ತದೆ. ನವರಂಗದ ಮುಂದೆ ಮುಖಮಂಟಪದ ಅಂಕಣದಲ್ಲಿ ನಾಲ್ಕು ಕಂಬಗಳಿದ್ದು, ಅವುಗಳ ಮಧ್ಯದಲ್ಲಿ ಒಂದು ಧ್ವಜಗಂಭವನ್ನು ನಿಲ್ಲಿಸಲಾಗಿದ್ದು, ಅದರ ಮುಂದೆ ಬಲಿಪೀಠವು ಸಹ ಇದೆ. ದೇವಾಲಯದ ಮುಂಭಾಗದಲ್ಲಿ ನಾಲ್ಕು ಕಂಬಗಳಿದ್ದು, ದೇವಾಲಯದ ವಾಸ್ತು ಕೃತಿಯನ್ನು ಹಿಮ್ಮಡಿಗೊಳಿಸಿದೆ. ದೇವಾಲಯದ ಮುಂಭಾಗದ ಮೇಲ್ಭಾಗದಲ್ಲಿ ಮೂರು ಕೋಷ್ಠಗುಡಿಗಳಿವೆ.

ಅಲ್ಲಿ ಇತ್ತೀಚಿನ ಗಾರೆ ಶಿಲ್ಪಗಳನ್ನು ಇರಿಸಲಾಗಿದೆ. ಇದು ಕೂಡ ಇತ್ತೀಚಿನ ಕಾಲದ ಸೇರ್ಪಡೆಯಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ವಿಮಾನ ಇದೆ.

ವಿಜಯನಾರಾಯಣಸ್ವಾಮಿಯ ರಥೋತ್ಸವವು ರಥಸಪ್ತಮಿ ದಿನದಂದು ನಡೆಯುವ ಪರಂಪರೆ ಇದೆ. ಈ ಸಮಯದಲ್ಲಿ ವಿಜಯನಾರಾಯಣಸ್ವಾಮಿಯು ಸಹ ಪತ್ನಿಯ ಜೊತೆಯಲ್ಲಿ ಉತ್ಸವ ಮೂರ್ತಿಗಳನ್ನು ಆರಾಧಿಸುವ ಸಂಪ್ರದಾಯಗಳಿವೆ. ಪ್ರಾಚೀನ ಪರಂಪರೆ ಪೂರಕವಾಗಿ ಋಷಿ ಶ್ರೇಷ್ಠರಾದ ಕಪಿಲ ಮುನಿಗಳಿಂದ ಅನಂತ ಭಕ್ತಕೋಟಿ ಸಮೂಹದಿಂದ ಶ್ರೀ ವಿಜಯನಾರಾಯಣನೆಂಬ ನಾಮಾಂಕಿತದಿಂದ ಗುಂಡ್ಲುಪೇಟೆಯಲ್ಲಿ ಪೂಜೆ ಕೈಂಕರ್ಯಗಳು ನಡೆಯುತ್ತವೆ. ರಾಮಾನುಜಾಚಾರ್ಯರು ಗುಂಡ್ಲುಪೇಟೆಗೆ ಬಂದು ಸ್ವಲ್ಪ ದಿನಗಳ ಕಾಲ ವಿಜಯನಾರಾಯಣಸ್ವಾಮಿ ದೇವಸ್ಥಾನದಲ್ಲಿ ಉಳಿದುಕೊಂಡಿದ್ದರೆಂದು ಅರ್ಚಕರಾದ ರವಿರವರು ಮಾಹಿತಿ ನೀಡಿದ್ದಾರೆ.

ಪ್ರತಿವರ್ಷ ಮಾರ್ಗಶಿರ ಮಾಸಶುಕ್ಲ ಪಕ್ಷದಲ್ಲಿ ರಥೋತ್ಸವ ನಡೆಯುತ್ತದೆ. ಕೋಳಿ ಮತ್ತು ಕುದುರೆ ಕಾಳಗದ ಚಿತ್ರ ದೇವಾಲಯದ ಭಿತ್ತಿಯಲ್ಲಿದೆ. ಇದೊಂದು ವಿಶೇಷತೆ ಎನ್ನಬಹುದು.

**ಪೂಜೆ**

ವಿಜಯನಾರಾಯಣ ಸ್ವಾಮಿ ದೇವಾಲಯದಲ್ಲಿ ಪೂಜೆಗಳ ಬಗ್ಗೆ ಈ ಭಾಗದ ಅರ್ಚಕರು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ದೇವರ ಕಾರ್ಯ ಸೇವೆಯಲ್ಲಿ ವಿಶೇಷವಾಗಿ ತುಳಸಿ ಮಾಲೆಯನ್ನು ದೇವರಿಗೆ ಸಮರ್ಪಿಸುತ್ತಾರೆ. ಇದೇ ಸಂಪ್ರದಾಯ ಉಳಿದ ವೈಷ್ಣವ

ದೇವಾಲಯಗಳಲ್ಲಿಯೂ ಕಾಣಬರುತ್ತದೆ. ಪ್ರತಿ ದಿನನಿತ್ಯ ನೈವೇದ್ಯಗಳು, ದೀಪಾರಾಧನೆ, ಫಲಪೂಜಾ, ನೈಮಿತ್ತಿಕ ಪಂಚಪರ್ವ, ಅಮೃತಪಡಿ, ಅಂಗವೈಭವ, ರಂಗಭೋಗ, ಮಾಸಪೂಜೆ, ಪುಣ್ಯತಿಥಿಗಳಲ್ಲಿ ಮಾಡುವ ಮಹಾಪೂಜೆ ನೈವೇದ್ಯ ಇನ್ನಿತರ ಪೂಜಾ ಕೈಂಕರ್ಯಗಳು ನಡೆಯುವುದರ ಬಗ್ಗೆ ತಿಳಿದುಬರುತ್ತದೆ.[16]

## ನಿತ್ಯಪೂಜೆ

ನಿತ್ಯ ಪೂಜೆಯಲ್ಲಿ ಪ್ರಮುಖವಾಗಿ ತುಳಸಿ ಮಾಲೆಯನ್ನು ದೇವರಿಗೆ ಅರ್ಪಿಸುವುದು, ಧ್ಯಾನ, ಆವಾಹನ, ಆಸನ, ಪಾಡ್ಯ, ಆರ್ಘ್ಯ, ಅಚಮನ, ಸ್ನಾನ, ವಸ್ತ್ರ, ಯಜ್ಞಸೂತ್ರ, ಭೂಷಣ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ಮುಖವಾಸನ, ನೀರಾಂಜನ, ದರ್ಪಣ, ಫಲಾರ್ಪಣ, ತಾಂಬೂಲ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ, ಛತ್ರ, ಚಾಮರ ಇವೆಲ್ಲವೂ ಸಹ ಇರುತ್ತದೆ.

## ನೈವೇದ್ಯ

ದೇವಾಲಯಗಳಲ್ಲಿ ಪೂಜೆಯ ಸಮಯದಲ್ಲಿ ದೇವರಿಗೆ ನೈವೇದ್ಯ ಮಾಡುವುದು ಒಂದು ಸಂಪ್ರದಾಯವಾಗಿದೆ. ವೈಷ್ಣವ ದೇವಾಲಯಗಳಲ್ಲಿ ವಿಶೇಷ ಪುಣ್ಯ ತಿಥಿಗಳಲ್ಲಿ ಮಹಾಪೂಜೆ, ಮಹಾನೈವೇದ್ಯವನ್ನು ಸಮರ್ಪಿಸುವುದು ಸಹ ತಿಳಿದುಬರುತ್ತದೆ.

## ನೈಮಿತ್ತಿಕ

ನೈಮಿತ್ತಿಕ ಪೂಜೆಗಳು, ಸಾಮಾನ್ಯವಾಗಿ ಅಮಾವಾಸ್ಯೆ, ಪೌರ್ಣಿಮ, ಚೌತಿ, ಏಕಾದಶಿ ಮೊದಲಾದ ನಿರ್ದಿಷ್ಟ ತಿಥಿಗಳಲ್ಲಿ ನಡೆಯುತ್ತಿದ್ದವು.

## ವೈಕುಂಠ ಏಕಾದಶಿ

ವೈಕುಂಠ ಏಕಾದಶಿಯ ದಿನ ವಿಶೇಷ ಪೂಜೆ ನಡೆಯುತ್ತದೆ. ಸ್ವರ್ಗದ ಬಾಗಿಲು ತೆರೆಯುತ್ತದೆ. ವಿಷ್ಣುವನ್ನು ಅಡ್ಡ ಪಲ್ಲಕ್ಕಿಯಲ್ಲಿ ಇಟ್ಟಿರುತ್ತಾರೆ. ಹಲವಾರು ಜನಸಾಮಾನ್ಯರು ಈ ದಿನದಂದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಈ ದಿನದಲ್ಲಿ ದರ್ಶನ ಮಾಡಿದರೆ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ಪ್ರತೀತಿ ಸಹ ಇದೆ.

## ಶ್ರೀಕಾರ್ಯ

ಶ್ರೀಕಾರ್ಯ ದೇವಾಲಯಗಳಲ್ಲಿ ದೇವರ ಹೆಸರಿನಲ್ಲಿ ನಡೆಯುತ್ತಿರುವ ಎಲ್ಲಾ ಒಳ್ಳೆಯ ಕೆಲಸಗಳನ್ನು ಶ್ರೀಕಾರ್ಯ ಎಂದು ಕರೆಯುತ್ತಾರೆ.

## ನಂದಾದೀವಿಗೆ

ದೇವಾಲಯದಲ್ಲಿ ಯಾವಾಗಲೂ ಉರಿಯುವ ದೀಪವೇ ನಂದಾದೀಪ ಅಥವಾ ನಂದಾದೀವಿಗೆ ಎಂದು ಕರೆಯುತ್ತಾರೆ.

## ಧ್ವಜಾರೋಹಣ

ಧ್ವಜಾರೋಹಣ ವೈಷ್ಣವ ದೇವಾಲಯಗಳಲ್ಲಿ ಧ್ವಜಸ್ತಂಭಗಳು ಕಾಣಬರುತ್ತದೆ. ಗುಂಡ್ಲುಪೇಟೆಯ ವಿಜಯನಾರಾಯಣಸ್ವಾಮಿ ದೇವಾಲಯದಲ್ಲಿ ಧ್ವಜಸ್ತಂಭ ಇದೆ. ಧನುರ್ಮಾಸದಲ್ಲಿ ದಿನ ಬೆಳಗ್ಗೆ 5 ರಿಂದ ಪೂಜೆ ಕಾರ್ಯ ಪ್ರಾರಂಭವಾಗುತ್ತದೆ. ನೂರಾರು ಸಂಖ್ಯೆಯಲ್ಲಿ ಜನರು ದೇವರ ದರ್ಶನ ಪಡೆಯುತ್ತಾರೆ.

## ವೇದಾಧ್ಯಯನ

ವೈಷ್ಣವ ದೇವಾಲಯಗಳಲ್ಲಿ ವಿಷ್ಣುವಿನ ಶ್ಲೋಕವನ್ನೊಳಗೊಂಡ ವೇದಾಪರಾಯಣ ನಡೆಯುತ್ತಿದ್ದಿತು.

## ಮಹಾವಾದ್ಯ

ವೈಷ್ಣವ ದೇವಾಲಯಗಳಲ್ಲಿ ಪ್ರತಿಕಾಲದ ಪೂಜೆಯ ನೀರಾಂಜನ ಅಂದರೆ ಮಹಾಮಂಗಳಾರತಿ ಸಮಯದಲ್ಲಿ ವಾದ್ಯಗಳನ್ನು ಬಾರಿಸುವ ಪರಿಪಾಠ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ದೇವಾಲಯಗಳಲ್ಲಿ ಪಂಚಮಹಾವಾದ್ಯಗಳನ್ನು ಬಾರಿಸುತ್ತಿದ್ದರು. ಅವುಗಳಲ್ಲಿ ಕೊಂಬು, ತಮಟೆ, ಶಂಖ, ಭೇರಿ ಮತ್ತು ಜಯಘಂಟೆ ಪ್ರಮುಖವಾಗಿದೆ. ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿದೆಯೆಂದು ತಿಳಿದುಬರುತ್ತದೆ. ಆದರೆ ವಿಶೇಷ ಪೂಜೆದಿನಗಳಲ್ಲಿ ನಡೆಯುವ ಪರಿಪಾಠ ಇದೆ ಎಂದು ತಿಳಿದುಬರುತ್ತದೆ.

ಗುಂಡ್ಲುಪೇಟೆಯ ವೈಷ್ಣವ ದೇವಾಲಯಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದು ಸಾಂಸ್ಕೃತಿಕ ಹಿನ್ನೆಲೆಯನ್ನು ಒದಗಿಸುತ್ತದೆ. ಮಾನವನು ಸಮಾಜದ ಒಂದು ಜೀವಿಯಾಗಿದ್ದಾನೆ.

ಆತನು ನೀಡುವ ಸಾಮಾಜಿಕವಾಗಿ ಒಂದುಗೂಡುವ ಕ್ರಿಯೆಗಳೇ ಸಾಂಸ್ಕೃತಿಕ ಚಟುವಟಿಕೆಗಳು, ಜನಸಾಮಾನ್ಯರ ಬದುಕಿನ ತಮ್ಮ ಸಂತೋಷ ಮತ್ತು ಕಷ್ಟವನ್ನು ನಿವಾರಿಸಿಕೊಳ್ಳುವುದಕ್ಕೆ ಉತ್ಸವಗಳು ನಡೆಯುತ್ತವೆ ಎಂಬ ಅಭಿಪ್ರಾಯಗಳಿವೆ.

ಹಿಂದೂಧರ್ಮದ ಸಂಸ್ಕೃತಿಯ ಎಲ್ಲ ಬಗೆಯ ವೈಶಿಷ್ಟ್ಯತೆಗಳನ್ನು ಸಂರಕ್ಷಿಸಿಕೊಂಡು ಪುನಃಶ್ಚೇತನಗೊಳಿಸಿ ವೈಭಾವೋಪೇತವಾಗಿ ನಡೆಸುವುದು ಕಾಲದಿಂದ ಕಾಲಕ್ಕೆ ನಡೆದುಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ದೇವಾಲಯಗಳು ಹಬ್ಬ ಹರಿದಿನಗಳನ್ನು ರಥೋತ್ಸವಗಳನ್ನು ಇನ್ನಿತರ ಧಾರ್ಮಿಕ ವಿಧಿವಿಧಾನಗಳನ್ನು ನಾವು ಇಲ್ಲಿ ಕಾಣಬಹುದಾಗಿದೆ.

## ರಥಸಪ್ತಮಿ ರಥೋತ್ಸವ

ಸಾಮಾನ್ಯವಾಗಿ ಎಲ್ಲಾ ಬಗೆಯ ಉತ್ಸವಗಳಿಗೂ ಧಾರ್ಮಿಕ ಹಿನ್ನೆಲೆ ಹಾಗೂ ಹಬ್ಬಗಳ ನಡುವಿನ ಸಂಬಂಧವಿದೆ. ದೇವಸ್ಥಾನಗಳ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳು, ಮಕರ ಸಂಕ್ರಾಂತಿ, ಗೋಕುಲಾಷ್ಟಮಿ ಇನ್ನೂ ಮೊದಲಾದ ಪರ್ವ ದಿನಗಳಲ್ಲಿ ನಡೆಯುತ್ತಿದ್ದ ಉತ್ಸವಗಳು ಇಲ್ಲಿ ನಡೆದಿವೆ ಎಂಬುದಕ್ಕೆ ಪುರಾವೆಗಳಿವೆ. ಷಷ್ಠಿ ದಿನ ದೇವಯಾಗ ದೀಕ್ಷೆಯನ್ನು ಅಲಂಕರಿಸಿ ಮಾಘ ಶುದ್ಧ ಸಪ್ತಮಿ ಬೆಳಗ್ಗೆ 11.00 ಘಂಟೆಗೆ ಶ್ರೀ ವಿಜಯ ನಾರಾಯಣಸ್ವಾಮಿಯವರ ದಿವ್ಯ ರಥೋತ್ಸವ ಪ್ರಮುಖ ಬೀದಿಗಳಲ್ಲಿ ವಾದ್ಯ, ಛತ್ರಿ, ಚಾಮರಗಳೊಂದಿಗೆ ನಡೆಯುತ್ತದೆ. ರಥಸಪ್ತಮಿ ದಿನದಂದು ರಥೋತ್ಸವವು ವಾರ್ಷಿಕವಾಗಿ ಆಚರಿಸುವ ಉತ್ಸವವಾಗಿದೆ. ಇದಕ್ಕೆ ಜಾತ್ರೆ ಎಂತಲೂ ಕರೆಯುತ್ತಾರೆ. ಈ ವಾರ್ಷಿಕೋತ್ಸವದಲ್ಲಿ ಉತ್ಸವ ಮೂರ್ತಿಯನ್ನು ರಥದಲ್ಲಿ ಕುಳ್ಳಿರಿಸಿ ರಥೋತ್ಸವವನ್ನು ದೇವಾಲಯದ ರಥದ ಬೀದಿಗಳಲ್ಲಿ ಎಳೆಯುವ ಪರಿಪಾಠ ಇದೆ. ಮಾಘಶುದ್ಧ ಚತುರ್ಥಿ ದಿವಸದಿಂದ ದಶಮಿಯ ದಿನದವರೆಗೂ ದೇವಾಲಯದ ಮುಂದೆ ಪ್ರತಿ ದಿವಸ ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಿದ್ದವು. ಅದರಲ್ಲಿ ಪ್ರಮುಖವಾಗಿ ದಾಸ ಸಾಹಿತ್ಯದ ಕುರಿತಾದ ಹರಿಕಥೆಗಳು ದೇವರ ಹೆಸರಿನಲ್ಲಿ ಸುಗುಮ ಸಂಗೀತ, ಸ್ಥಳೀಯ ಜಾನಪದ ಹಾಡುಗಳು ಇನ್ನೂ ಮೊದಲಾದ ಕಾರ್ಯಕ್ರಮಗಳನ್ನು ಸ್ಥಳೀಯ ಸೇವಾರ್ಥದಾರರು ನೀಡುತ್ತಾ ಬಂದಿದ್ದಾರೆ ಎಂಬುದು ಒಂದು ಇತಿಹಾಸವಿದೆ. 2008 ರಲ್ಲಿ ಒಂದು ಹೊಸದಾದ ರಥವನ್ನು ಶ್ರೀಮತಿ ಶಕುಂತಲ ಶ್ರೀ ದಶರಥ ಶೆಟ್ಟರು ಎಂಬುವರು ಸುಮಾರು ಮೂರು ಲಕ್ಷದ ವೆಚ್ಚದಲ್ಲಿ ಮಾಡಿಸಿ ವಿಜಯನಾರಾಯಣಸ್ವಾಮಿ ದೇವಾಲಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ.[17]ಇದು ಪ್ರಾಚೀನ ಸಂಸ್ಕೃತಿಯ ಪರಂಪರೆಯನ್ನು ಬಿಂಬಿಸುತ್ತದೆ. ಈವಾಗ ಈ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದು, ಈಗಲೂ ಕೂಡ ಪೂಜೆ ಇನ್ನಿತರ ಕಾರ್ಯಕ್ರಮಗಳು ನಡೆಯುತ್ತವೆ.[18]

ರಥಸಪ್ತಮಿ ಅಂಗವಾಗಿ ಪಟ್ಟಣದ ವಿಜಯ ನಾರಾಯಣಸ್ವಾಮಿಯ ಉತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗುತ್ತದೆ. ಈ ಧರ್ಮೋತ್ಸವದ ಹಿನ್ನೆಲೆಯಿಂದ ದೇವಾಲಯವನ್ನು ತಳಿರು ತೋರಣ ವಿದ್ಯುತ್ ದೀಪಗಳಿಂದ ಸಿಂಗರಿಸುತ್ತಾರೆ. ಹಿಂದಿನ ದಿನವೇ ರಾತ್ರಿ ದೇವಾಲಯದ ನಾನಾ ಕಾರ್ಯಗಳು ಜರುಗುತ್ತವೆ. (ಚಿತ್ರಸಂಖ್ಯೆ–66) ಬೆಳಗ್ಗೆಯಿಂದಲೇ ಭಕ್ತರು ಸಾಲಿನಲ್ಲಿ ನಿಂತು ದೇವಾಲಯದಲ್ಲಿ ಪೂಜೆಯನ್ನು ಸಲ್ಲಿಸುತ್ತಾರೆ. ನಂತರ ವಿಜಯನಾರಾಯಣಸ್ವಾಮಿ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಮಂಗಳವಾದ್ಯ ಇನ್ನಿತರ ಕಲಾತಂಡಗಳೊಂದಿಗೆ ದೇವಾಲಯದ ಸುತ್ತಲೂ ಗೋವಿಂದ ನಾರಾಯಣ ಜೈಕಾರದ ಜಯಘೋಷಣೆಗಳೊಂದಿಗೆ ಮೆರವಣಿಗೆ ನಡೆಯುತ್ತದೆ. ತದನಂತರ ರಥದಲ್ಲಿರುವ ಉತ್ಸವಮೂರ್ತಿಗಳನ್ನು ಕೆಳಗಿರಿಸಿ ಮಹಾಮಂಗಳಾರತಿ ನೆರವೇರಿಸಲಾಗುತ್ತದೆ. ತಹಶೀಲ್ದಾರ್‌ರವರು ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡುತ್ತಾರೆ.. ಇದು ಇತ್ತೀಚಿನ ವರ್ಷಗಳಲ್ಲಿ ನಡೆಯುವಂತಹ ಕಾರ್ಯಕ್ರಮವಾಗಿದೆ. ಈ ಎಲ್ಲಾ ಬೆಳವಣಿಗೆಯನ್ನು ನೋಡಿದರೆ, ಕ್ರಿ.ಶ.10–11ನೇ ಶತಮಾನದಿಂದ ನಿರಂತರವಾಗಿ ನಡೆದುಕೊಂಡು ಬರುತ್ತಿದೆ ಎಂಬುದನ್ನು ಇಲ್ಲಿ ನೋಡಬಹುದಾಗಿದೆ. ಪ್ರಸ್ತುತ ದಿನಗಳಲ್ಲಿ ಶ್ರೀ ವಿಜಯನಾರಾಯಣಸ್ವಾಮಿ ಯವರ ಬ್ರಹ್ಮೋತ್ಸವ ನಡೆಯುತ್ತದೆ. ವಿಜಯನಾರಾಯಣಸ್ವಾಮಿ ದೇವಸ್ಥಾನದ ಮುಖಮಂಟಪದ ಮೇಲೆ ಇರುವ ಶಾಸನದಿಂದ ನೈವೇದ್ಯಕ್ಕೆ ಸಹಾಯ ನೀಡಿದ್ದಾನೆ.

| | | | | | | |
|---|---|---|---|---|---|---|
| 21.1.18 | ಮಾಘ | ಶುಕ್ಲ | ಚತುರ್ಥಿ | ಭಾನುವಾರ | ಬೆಳಗ್ಗೆ | ಶ್ರೀಯವರಿಗೆ ಅಭಿಷೇಕ ನಿತ್ಯಾರ್ಚನೆ ಮಹಾಮಂಗಳಾರತಿ |
| | | | | | ಸಾಯಂಕಾಲ | ಮೃತಿಕಾಸಂಗ್ರಹಣೇ ಅಂಕುರಾರ್ಪಣೆ |
| 22.1.18 | ಮಾಘ | ಶುಕ್ಲ | ಪಂಚಮಿ | ಸೋಮವಾರ | ಬೆಳಗ್ಗೆ | ಧ್ವಜಾರೋಹಣ ನಿತ್ಯಾರ್ಚನೆ |
| | | | | | ಸಾಯಂಕಾಲ | ಬೇರಿತಾಡನ ಯಾಗಶಾಲ ಪ್ರವೇಶ ನಿತ್ಯಾರ್ಚನೆ |
| 23.1.18 | ಮಾಘ | ಶುಕ್ಲ | ಷಷ್ಠಿ | ಮಂಗಳವಾರ | ಬೆಳಗ್ಗೆ | ನಿತ್ಯಾರ್ಚನೆ |
| | | | | | ಸಾಯಂಕಾಲ | ಕಲ್ಯಾಣೋತ್ಸವ |

| | | | | | | |
|---|---|---|---|---|---|---|
| 24.1.18 | ಮಾಘ | ಶುಕ್ಲ | ಸಪ್ತಮಿ | ಬುಧವಾರ | ಬೆಳಗ್ಗೆ | 10.00 ಗಂಟೆಯಿಂದ 11.00 ಗಂಟೆಯೊಳಗೆ ಸಲ್ಲುವ ಶುಭ ಲಗ್ನದಲ್ಲಿ 'ಡೋಲಾಯಮಾನಂ ಗೋವಿಂದಂ ಮಂಚಸ್ಥಂ ಮಧುಸೂಧನಂ ರಥಸ್ಥಂಕೇಶವಂದೃಷ್ಟ ಪುನರ್ಜನ್ಮ ನವಿದ್ಯತೆ ಎಂಬುದಾಗಿ ಅಪೂರ್ವವಾದ "ದಿವ್ಯರಥೋತ್ಸವ" |
| 25.1.18 | ಮಾಘ | ಶುಕ್ಲ | ಅಷ್ಠಮಿ | ಗುರುವಾರ | ಬೆಳಗ್ಗೆ | ನಿತ್ಯಾರ್ಚನೆ |
| | | | | | ಸಾಯಂಕಾಲ | 'ಡೋಲೋತ್ಸವ' ಮತ್ತು 'ಶಯನೋತ್ಸವ' |
| 26.1.18 | ಮಾಘ | ಶುಕ್ಲ | ನವಮಿ | ಶುಕ್ರವಾರ | ಬೆಳಗ್ಗೆ | ಲಕ್ಷ್ಮೀ ಪ್ರಣಯ ಕಲಹ ಸಂಧಾನ ಪೂರ್ವಕ ವಸಂತೋತ್ಸವ ನಂತರ ಅವಭೃತ ಮಹೋತ್ಸವ |
| | | | | | ಸಾಯಂಕಾಲ | ಪೂರ್ಣಾಹುತಿ ನಿತ್ಯಾರ್ಚನೆ |
| 27.1.18 | ಮಾಘ | ಶುಕ್ಲ | ದಶಮಿ ಏಕಾದಶಿ | ಶನಿವಾರ | ಬೆಳಗ್ಗೆ | ಮಹಾಭಿಷೇಕ ನಿತ್ಯಾರ್ಚನೆ |
| | | | | | ಸಾಯಂಕಾಲ | ಧ್ವಜಾರೋಹಣ |

| | | | | | | |
|---|---|---|---|---|---|---|
| | | | | | | ದ್ವಾದಶಾರಾಧನೆ ಪುಷ್ಪಯಾಗ ನಿತ್ಯಾರ್ಚನೆ ಶ್ರೀ ಶ್ರೀ ಶ್ರೀ |

ಶ್ರೀ ಬಿ.ರಾಮು, ಭಾ.ಆ.ಸೇ.
ಜಿಲ್ಲಾಧಿಕಾರಿಗಳು
ಚಾಮರಾಜನಗರ ಜಿಲ್ಲೆ

ಶ್ರೀ ಫೌಜಿಯ ತರನ್ನುಮ್, ಭಾ.ಆ.ಸೇ.
ಉಪವಿಭಾಗಾಧಿಕಾರಿಗಳು
ಕೊಳ್ಳೇಗಾಲ
ಅರ್ಚಕರು ಹಾಗೂ ಆಗಮಿಕರು
ಪಾಂಚರಾತ್ರಾಗಮ ಪ್ರವೀಣ ರಾಘವನ್ ಜೆ.

ಶ್ರೀ ಕೆ.ಸಿದ್ದು, ಕೆ.ಎ.ಎಸ್.
ತಹಶೀಲ್ದಾರ್ ಹಾಗೂ ಮುಜರಾಯಿ ಅಧಿಕಾರಿಗಳು
ಗುಂಡ್ಲುಪೇಟೆ

**ಪರವಾಸು ದೇವಾಲಯ–ಗುಂಡ್ಲುಪೇಟೆ**

ಪ್ರಸ್ತುತ ಗುಂಡ್ಲುಪೇಟೆಯ ಹೊರವಲಯದಲ್ಲಿ ಚಾಮರಾಜನಗರ ತೆರಕಣಾಂಬಿಗೆ ಹೋಗುವ ರಸ್ತೆಯಲ್ಲಿದೆ. ಈ ದೇವಾಲಯಕ್ಕೆ ನಿಖರವಾದ ಆಧಾರಗಳಿಲ್ಲ. ಆದರೂ ಕೂಡ ವಾಸ್ತು ಶೈಲಿಯ ದೃಷ್ಟಿಯಿಂದ ವಿಜಯನಗರ ಮತ್ತು ಮೈಸೂರು ಒಡೆಯರ್ ಕಾಲಕ್ಕೆ ಸೇರಿಸಬಹುದಾಗಿದೆ. ದೇವಾಲಯದ ಹೊರಭಾಗದ ಭಿತ್ತಿಯ ಭಾಗವನ್ನು ಸೂಕ್ಷ್ಮವಾಗಿ ಗಮನಿಸಿದರೆ ಹೊಯ್ಸಳರ ಹಾಗೂ ಚೋಳರ ಕಾಲದ ಕೋಷ್ಠಮಂಟಪಗಳು ಅಲ್ಲದೆ ಸೂಕ್ಷ್ಮವಾಗಿ ಚೋಳರ ವಾಸ್ತು ಲಕ್ಷಣಗಳನ್ನು ಪಡೆದುಕೊಂಡಿದೆ ಎನ್ನಬಹುದಾಗಿದೆ. ಈ ದೇವಾಲಯದ ಹೊರಭಾಗವು ಸಂಪೂರ್ಣ ಚೋಳರ ಪ್ರಭಾವವನ್ನು ಹೊಂದಿದೆ.

ಪರವಾಸು ದೇವಾಲಯ ಪಶ್ಚಿಮಾಭಿಮುಖವಾಗಿದೆ. ಕೆಲವೊಂದು ಆಧಾರಗಳಿಂದ ಮೈಸೂರು ಅರಸರಾದ ಚಿಕ್ಕದೇವರಾಜ ಒಡೆಯರ್‌ರವರ ತಂದೆಯವರಾದ ದೊಡ್ಡ ದೇವರಾಜ ಒಡೆಯರ್‌ರವರು ಕ್ರಿ.ಶ.1674 ರಲ್ಲಿ ಮರಣ ಹೊಂದಿದಾಗ ಅವರ ಅಂತ್ಯಕ್ರಿಯೆಯನ್ನು ನಡೆಸಲು ಹತ್ತಿರದಲ್ಲಿ ಯಾವುದೇ ನದಿ ಇಲ್ಲದ ಕಾರಣ, ಶವವನ್ನು ಗುಂಡ್ಲುಪೇಟೆಗೆ ತಂದು, ಇಲ್ಲಿಯ ಗುಂಡ್ಲುನದಿಯ ಎಡದಂಡೆಯ ಮೇಲೆ ಅಂತ್ಯ ಕ್ರಿಯೆಗಳನ್ನು ನಡೆಸಿ, ತದನಂತರ ಪರವಾಸು ದೇವಾಲಯವನ್ನು ನಿರ್ಮಿಸಿದ್ದರೆಂದೂ ಇಲ್ಲಿ ಬ್ರಾಹ್ಮಣರಿಗೋಸ್ಕರವಾಗಿ ಒಂದು ಅಗ್ರಹಾರವನ್ನು ನಿರ್ಮಿಸಿ ಬ್ರಾಹ್ಮಣರಿಗೆ ಉದಾರವಾಗಿ ನೀಡಿದ್ದರೆಂದೂ ತಿಳಿದುಬರುತ್ತದೆ.[19]

ಆದರೆ ಈ ಪ್ರಾಚೀನ ಕಾಲದ ದೇವಾಲಯ ಈವಾಗ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡು ಇನ್ನೂ ಕೆಲವು ಕೆಲಸಗಳು ನಡೆದಿಲ್ಲವೆಂದು ಹೇಳಬಹುದಾಗಿದೆ. ಈ ದೇವಾಲಯದ ಅಧಿಷ್ಠಾನವನ್ನು ನೋಡಿದರೆ ಇದು ಮೈಸೂರು ಒಡೆಯರಿಗಿಂತಲೂ ಹಳೆಯದಾದ ದೇವಾಲಯ ಎನ್ನಲೇಬೇಕು.

ಪರವಾಸು ದೇವಾಲಯ ವಿಶಾಲವಾದ ಅಗಲವಾದ ದೊಡ್ಡ ದೊಡ್ಡ ಗ್ರಾನೈಟ್ ಕಲ್ಲಿನ ದೇವಾಲಯವಾಗಿದೆ. ಇತ್ತೀಚಿನ ವಾಸ್ತು ಪ್ರಕಾರ ತಳವಿನ್ಯಾಸದಲ್ಲಿ ಗರ್ಭಗುಡಿ, ಶುಕನಾಸಿಯನ್ನು ಹೊಂದಿದೆ. ಆದರೆ ಗರ್ಭಗೃಹದಲ್ಲಿ ಯಾವುದೇ ತರಹದ ಶಿಲ್ಪಗಳು ಇಲ್ಲ. ಈ ದೇವಾಲಯದಲ್ಲಿದ್ದ ಶಿಲ್ಪವನ್ನು ವಿಜಯನಾರಾಯಣಸ್ವಾಮಿ ದೇವಾಲಯಕ್ಕೆ ತೆಗೆದುಕೊಂಡು ಇಡಲಾಗಿದೆ ಎಂದು ಮೇಲೆ ತಿಳಿಸಲಾಗಿದೆ. ಗರ್ಭಗುಡಿ ಮತ್ತು ಶುಕನಾಸ ಇವೆರಡು ಅಂಕಣಗಳಿಗೆ ಹೊಂದಿಕೊಂಡಂತೆ ಪ್ರಾಕಾರವನ್ನು ನಿರ್ಮಿಸಲಾಗಿದೆ. ಈ ಪ್ರಾಕಾರಗಳಿಗೆ ಹೊಂದಿಕೊಂಡಂತೆ ಉತ್ತರ ದಿಕ್ಕಿಗೂ ಹಾಗೂ ದಕ್ಷಿಣ ದಿಕ್ಕಿಗೂ ಒಂದೊಂದು ಪ್ರವೇಶದ್ವಾರಗಳಿವೆ. ಈ ದ್ವಾರಗಳ ಸಹಾಯದಿಂದ ಪ್ರದರ್ಶನವನ್ನು ಮಾಡಬಹುದಾಗಿದೆ. ಪ್ರಾಕಾರ ಗೋಡೆಗೆ ಸೇರಿದಂತೆ ಪೂರ್ವ ದಿಕ್ಕಿನ ಗೋಡೆಗೆ ಸೇರಿದಂತೆ ಎರಡು ಜಾಲಂಧ್ರವನ್ನು ಮಾಡಲಾಗಿದೆ. ಇದರ ಸಹಾಯದಿಂದ ಗಾಳಿ ಮತ್ತು ಬೆಳಕು ಬರುವುದಕ್ಕೆ ಸಹಾಯವಾಗುತ್ತದೆ. ಪ್ರಮುಖ ದ್ವಾರವಾದ ಶುಕನಾಸಿಯ ದ್ವಾರದ ಲಲಾಟ ಬಿಂಬದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. (ಚಿತ್ರಸಂಖ್ಯೆ-67)

ಅಲ್ಲದೆ ನರ್ತನ ಸುಂದರ ಚಾಮರದಾರಿಣಿ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಸೂಕ್ಷ್ಮವಾಗಿ ಸುಂದರವಾಗಿ ಬಳ್ಳಿಸುರಳಿ ಮೂಲಕ ಮನಮೋಹಕ ರೀತಿಯ ಕೆತ್ತನೆಯನ್ನು ಕೆತ್ತಲಾಗಿದೆ.

ಪರವಾಸು ದೇವಾಲಯದ ನವರಂಗವು ವಿಶಾಲವಾಗಿದ್ದು, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಒಂದೊಂದು ದ್ವಾರಗಳಿವೆ. ನವರಂಗದ ಮಧ್ಯದಲ್ಲಿ ಸುಮಾರು 48 ಕಂಬಗಳಿವೆ. ಈ ಕಂಬಗಳ ಆಧಾರದ ಮೇಲೆ ನಾವು ಮೈಸೂರು ಒಡೆಯರ್ ಕಾಲಕ್ಕೆ ದೇವಾಲಯವನ್ನು ಸೇರಿಸಬಹುದಾಗಿದೆ. ಈ ಕಂಬಗಳನ್ನು ನೋಡಿದರೆ ಚೌಕಾಕಾರ ಮತ್ತು ಆಯತಾಕಾರವಾದ ಪೀಠ, ದಿಂಡು ಅಲ್ಲದೆ ಅದೇ ಮಾದರಿಯ ಚಾಚು ಬೋದಿಗೆಯನ್ನು ಮತ್ತು ಆಯತಾಕಾರದ ತೊಲೆಗಳನ್ನು ಹೊಂದಿದೆ. ಇಲ್ಲಿರುವ ಸುಮಾರು 13 ಕಂಬಗಳಲ್ಲಿ ಅನೇಕ ಮಾದರಿಯ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ವೆಂಕಟೇಶ, ನೃತ್ಯಗಾರ್ತಿಯರು, ಮಿಥುನ ಶಿಲ್ಪಗಳು, ನರಸಿಂಹ,

ಶಂಖ, ಚಕ್ರ, ಹೂಬಳ್ಳಿ, ಗೋವರ್ಧನಗಿರಿಧಾರಿ, ಗೋಪಿಕೃಷ್ಣ, ಗರುಡ, ನವಿಲು, ಮಾಲೆ, ಮಂಗ, ಬೇಟೆಗಾರ್ತಿ, ಗಣೇಶ, ಹನುಮಾನ್, ವಾದ್ಯಗಾರ, ಕುಬ್ಜ ವಿಗ್ರಹ, ರಾಮ, ವಿಷ್ಣು, ಛಾಮರಧಾರಿ, ಹಸು, ಸಾಧು, ಉಗ್ರನರಸಿಂಹ, ಲಕ್ಷ್ಮೀನರಸಿಂಹ, ಯೋಗನರಸಿಂಹ, ಲಕ್ಷ್ಮೀ ಖಡ್ಗದಾರಿ ವಾಮನ, ದಶಾವತಾರಗಳು, ಯಾಳಿಗಳು, ಬೆಣ್ಣೆ ಕೃಷ್ಣ, ಲಜ್ಜೆಗೌರಿ, ನವಿಲು, ಸ್ತ್ರೀ ಅಂಜಲಿ ಮುದ್ರೆ ವೀರ, ರಾಮ, ಕಾಳಿಂಗ ಮರ್ದನ ಕೃಷ್ಣ, ಸಿಂಹ, ಗೋವು, ನಾಗಕನ್ಯೆ, ನಾಗರ, ಕುರುಬ, ನಗ್ನಶಿಲ್ಪ, ಕೋಲಾಟದವರು, ದೇವಾತಾಮೂರ್ತಿ ಮುಂತಾದ ಶಿಲ್ಪಗಳಿವೆ. ಒಂದು ಕಂಬದಲ್ಲಿ ಚಿಕ್ಕದೇವರಾಯನ ಕುಳಿತಿರುವ ಭಂಗಿಯ ಶಿಲ್ಪ ಇದೆ. ಇವೆಲ್ಲವುಗಳನ್ನು ನೋಡಿದರೆ ಸಾಂಸ್ಕೃತಿಕ ಇತಿಹಾಸಕ್ಕೆ ಒಂದು ಮಹತ್ವವಾದ ಕೊಡುಗೆಯನ್ನು ನೀಡಿದೆ ಎಂಬುದು ತಿಳಿದುಬರುತ್ತದೆ. ಪರವಾಸು ದೇವಾಲಯದ ಮುಂಭಾಗ ಸಾಲು ಕಲ್ಲಿನ ಮಂಟಪ ಇದೆ. ಈ ಕಲ್ಲಿನ ಮಂಟಪವನ್ನು ಗಮನಿಸಿದರೆ, ಹಿಂದೆ ಈ ಸ್ಥಳ ಹಲವು ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು ಎಂಬುದನ್ನು ತಿಳಿಯಬಹುದು. (ಚಿತ್ರಸಂಖ್ಯೆ-67)

ಪರವಾಸು ದೇವಾಲಯದ ಮುಂದೆ ಸ್ವಲ್ಪ ದೂರದ ಅಂತರದಲ್ಲಿ ಕಲ್ಯಾಣಿ ಇದೆ. ಇದು ಸಹ ಪ್ರಾಚೀನ ಕಾಲದ ಕೊಳವಾಗಿತ್ತು. ನಂತರ ಕಾಲದ ಬೆಳವಣಿಗೆಯಲ್ಲಿ ದುಃಸ್ಥಿತಿಯಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಪರವಾಸು ದೇವಾಲಯದ ಪುನರ್ ಜೀರ್ಣೋದ್ಧಾರದ ಹಿನ್ನೆಲೆಯಲ್ಲಿ ಅಂದಿನ ಕಾಲದ ಕೊಳಕ್ಕೂ ಕೂಡ ಮುಕ್ತಿ ದೊರೆತು ಗುಂಡ್ಲುಪೇಟೆ ಪುರಸಭೆ ವತಿಯಿಂದ ಕೊಳವೆ ಮೂಲಕ ನೀರು ತುಂಬಿಸುವ ಯೋಜನೆ ಕಾರ್ಯಗತ ಮಾಡಿರುವ ಕಾರಣ ಈ ಪುರಾತನ ಪರವಾಸು ದೇವಾಲಯದ ಕಲ್ಯಾಣಿಗೆ ಮರುಜೀವ ತುಂಬಿದೆ. ಕಲ್ಯಾಣಿಯು ಅತ್ಯಂತ ಪ್ರಮುಖವಾದ ಕಾಯಕದ ಸೂತ್ರ ಎನ್ನಬಹುದು. ಏಕೆಂದರೆ ಅಂದಿನ ಕಾಲದ ರಾಜ ಮಹಾರಾಜರು ದೇವಾಲಯಗಳು ಇದ್ದಂತಹ ಸ್ಥಳದಲ್ಲಿ ಕಲ್ಯಾಣಿಯನ್ನು ರೂಪಿಸುವ ಪರಿಪಾಠವಿತ್ತು. ಕಲ್ಯಾಣಿಯಲ್ಲಿ ಸ್ನಾನಕ್ಕೆ ನೀರಿನ ಬಳಕೆ, ವಸ್ತುಗಳನ್ನು ಶುಚಿಗೊಳಿಸುವಿಕೆಗಾಗಿ, ದೇವರ ಪೂಜೆಗೆ ಕಲ್ಯಾಣಿಯಿಂದಲೇ ನೀರನ್ನು ತೆಗೆದುಕೊಂಡು ಹೋಗುತ್ತಿದ್ದರು. ಜನಸಾಮಾನ್ಯರು ದೇವಾಲಯದ ಪರಿಸರದಲ್ಲಿ ಅನ್ನಸಂತರ್ಪಣೆ ಕಾರ್ಯಕ್ಕಾಗಿ ನೀರಿನ ಬಳಕೆ ಇನ್ನೂ ಮೊದಲಾದ ಕೆಲಸ ಕಾರ್ಯಗಳಿಗೆ ಕಲ್ಯಾಣಿಯ ಬಳಕೆಯನ್ನು ಗಮನಿಸಿದ್ದೇವೆ. ಎಲ್ಲಾ ಬೆಳವಣಿಗೆಯಿಂದ ಒಂದು ಸಾಂಸ್ಕೃತಿಕ ಸಂಬಂಧವನ್ನು ಹೊಂದಿದೆ ಎಂದು ಪರಿಗಣಿಸಬಹುದಾಗಿದೆ. ಇನ್ನೊಂದು ಮುಖ್ಯವಾದ ಅಂಶವೇನೆಂದರೆ ಕಲ್ಯಾಣಿಗಳಲ್ಲಿ ತೆಪ್ಪೋತ್ಸವವನ್ನು ನೆರವೇರಿಸಲು ಪುಷ್ಕರಣಿ ಅಥವಾ ಕೊಳಗಳನ್ನು ದೇವಾಲಯದ ಪರಿಸರದಲ್ಲಿ ನಿರ್ಮಿಸುತ್ತಿದ್ದರು. ಈ ರೀತಿಯ ಕಲ್ಯಾಣಿಗಳನ್ನು ನಿರ್ಮಿಸಬೇಕಾದರೆ, (ಚಿತ್ರಸಂಖ್ಯೆ-69) ಅಲ್ಲಿರುವ ದೇವಾಲಯವು ಅಷ್ಟೇ

ಪ್ರಮುಖವಾಗಿರಬೇಕು. ಪರವಾಸು ದೇವಾಲಯದ ಪರಿಸರದಲ್ಲಿ ಮೂರು ನಾಲ್ಕು ದೇವಾಲಯಗಳಿವೆ. ಅವುಗಳಲ್ಲಿ ಪರವಾಸು ಮತ್ತು ಕಮಲವಲ್ಲಿ ಹೆಸರುವಾಸಿಯಾದ ದೇವಾಲಯಗಳಾಗಿವೆ. ಹಿಂದೆ ಈ ಕಲ್ಯಾಣಿಯಲ್ಲಿ ಚಿನ್ನದ ತೇರು ಮುಳುಗಿ ಹೋಗಿತ್ತು ಎಂದು ಸ್ಥಳೀಯರ ಹೇಳಿಕೆ ಕೂಡ ಇದೆ. ತೆಪ್ಪೋತ್ಸವಗಳು ನಡೆಯುವಾಗ ಭಕ್ತರು ಹಲವು ಊರುಗಳಿಂದ ಹಲವು ಭಾಗಗಳಿಂದ ದೇವಾಲಯಗಳ ಉತ್ಸವಗಳನ್ನು ನೋಡಲು ಬರುತ್ತಿದ್ದರು. ದಿನಾಂಕ: 16-8-2016 ರ ವಿಜಯ ಕರ್ನಾಟಕ ಪತ್ರಿಕೆಯನ್ನು ಗಮನಿಸಿದರೆ ಪುಷ್ಕರಣಿಯು ತುಂಬಿದ್ದು, ನೀರಿನಲ್ಲಿ ಯುವಕರು ಈಜಾಡಿ ದೇಹವನ್ನು ತಣಿಸಿಕೊಳ್ಳುತ್ತಿದ್ದಾರೆ ಎಂಬುದು ಭಾಸವಾಗುತ್ತದೆ. ಕಲ್ಯಾಣಿಗಳಲ್ಲಿ ಈಜುವ ಸ್ಪರ್ಧೆಯು ಹಿಂದೆ ಇದ್ದುದಾಗಿ ಅನೇಕ ಗ್ರಂಥಗಳಲ್ಲಿ ಮಾಹಿತಿಗಳಿವೆ. ಆದಕಾರಣ ಈ ರೀತಿಯ ಕಲ್ಯಾಣಿಗಳಿಂದ ಧಾರ್ಮಿಕ ಆಚರಣೆಗೆ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಗತ್ಯವಾಗಿದೆ ಎಂದು ಹೇಳಬಹುದು.[20] ಹಿಂದೆ ರಾಜಮಹಾರಾಜರು ಯಾವುದೇ ಕೆಲಸ ಕಾರ್ಯಗಳಿಗೆ ಚಾಲನೆ ನೀಡುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಸರ್ಕಾರದ ಪರವಾಗಿ ಸ್ಥಳೀಯ ಮಂತ್ರಿಗಳು ಚಾಲನೆ ನೀಡುವ ಪರಿಪಾಠ ಇದೆ ಅಥವಾ ಸ್ಥಳೀಯ ಶಾಸಕರು ಸಹ ಚಾಲನೆ ನೀಡುವ ಬಗ್ಗೆ ತಿಳಿದುಬರುತ್ತದೆ. ಈ ಎಲ್ಲಾ ಬೆಳವಣಿಗೆಯಿಂದ ಕಾಲಕಾಲಕ್ಕೆ ಒಂದೊಂದು ಹೊಸ ಹೊಸ ಪ್ರಯೋಗಗಳು ನಡೆದುಕೊಂಡು ಬರುತ್ತಿರುವುದನ್ನು ಕಾಣುತ್ತೇವೆ. ಆದರೆ ಧಾರ್ಮಿಕ ಹಿನ್ನೆಲೆಯಲ್ಲಿ ಪ್ರಾಚೀನ ಕಾಲದ ಆಧಾರವನ್ನಿಟ್ಟುಕೊಂಡೇ ಪೂಜೆ ಪುನಸ್ಕಾರಗಳು ಸಾಗುತ್ತಿವೆ ಎಂಬುದು ಸ್ಥಳೀಯ ಬೆಳವಣಿಗೆಯಿಂದ ತಿಳಿದುಬರುತ್ತದೆ.[21]

ಪ್ರಸ್ತುತ ಈ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಒಂದು ಕೋಟಿ ಬಿಡುಗಡೆ ಮಾಡಿ ಜೀರ್ಣೋದ್ಧಾರ ಕೆಲಸ ನಡೆಯುತ್ತಿದೆ. ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ (ಮಂತ್ರಿಗಳು) ರವರ ಸಂದರ್ಭದಲ್ಲಿ ಪುನರ್ ನಿರ್ಮಾಣ ಕೆಲಸಕ್ಕೆ ಚಾಲನೆಯನ್ನು ನೀಡಿದ್ದಾರೆ.

## ಕಮಲವಲ್ಲಿ ದೇವಾಲಯ

ಪರವಾಸು ದೇವಾಲಯದ ಪಕ್ಕದಲ್ಲಿಯೇ ದಕ್ಷಿಣ ದಿಕ್ಕಿಗೆ ಕಮಲವಲ್ಲಿ ದೇವಾಲಯವು ಪಶ್ಚಿಮಾಭಿಮುಖವಾಗಿ ನಿರ್ಮಾಣಗೊಂಡಿದೆ. ಈ ದೇವಾಲಯದಲ್ಲಿದ್ದ ಕಮಲವಲ್ಲಿಯ ಶಿಲ್ಪವನ್ನು ಗುಂಡ್ಲುಪೇಟೆ ನಗರದ ಮಧ್ಯದಲ್ಲಿರುವ ವಿಜಯನಾರಾಯಣ ದೇವಾಲಯದಲ್ಲಿ ಇಡಲಾಗಿದೆ. ಈ ದೇವಾಲಯವು ದುಃಸ್ಥಿತಿಯನ್ನು ಹೊಂದಿದ ಕಾರಣ ಈವಾಗ ಜೀರ್ಣೋದ್ಧಾರವನ್ನು ಮಾಡಲಾಗಿದೆ. ಇಲ್ಲಿರುವ ಕಂಬಗಳಲ್ಲಿ ಮಹಾಭಾರತ, ರಾಮಾಯಣ, ದಶಾವತಾರ ಮತ್ತು ಭಾಗವತ ಕಥೆಗಳಿಗೆ ಸೇರಿದಂತೆ ಉಬ್ಬು ಶಿಲ್ಪಗಳನ್ನು ಬಹುಸುಂದರವಾಗಿ ಕೆತ್ತಲಾಗಿದೆ. ಕಂಬವೊಂದರಲ್ಲಿ ಚಿಕ್ಕದೇವರಾಜ ಒಡೆಯರ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ ಮತ್ತು

ಕಂಬಗಳಲ್ಲಿ ವಿಷ್ಣು, ಗರುಡ, ಗಿಳಿ, ಕಮಲ, ಉಗ್ರನರಸಿಂಹ, ಶಾರದಾ, ವೀರಾಂಜನೇಯ, ನವಿಲು, ನರಸಿಂಹ, ಕಾಮಧೇನು, ಭಕ್ತಪ್ರಹ್ಲಾದ, ಶಿವಭಕ್ತ, ಸಿಂಹ, ವ್ಯಾಳ, ಸರ್ಪ, ಗಣಪತಿ, ದುರ್ಗಿ, ಭೈರವ, ಶ್ರೀಕೃಷ್ಣ ಇನ್ನೂ ಮೊದಲಾದ ಉಬ್ಬು ಶಿಲ್ಪಗಳಿವೆ. ಮುಂಭಾಗದ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪ ಹಾಗೂ ವ್ಯಾಳವಾರಿ ಶಿಲ್ಪದ ಮೇಲೆ ನರ್ತನ ಮಾಡುತ್ತಿರುವ ನರ್ತಕಿಯ ಶಿಲ್ಪ ಇದೆ. ಇವುಗಳು ಹೂಬಳ್ಳಿ ಸುರುಳಿ ಕೆತ್ತನೆಯಿಂದ ಕೂಡಿದ್ದು, ಮೇಲ್ಭಾಗದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು ಕಡೆಯಲಾಗಿದೆ. ಪ್ರಾಚೀನ ದೇವಾಲಯವು ದುಃಸ್ಥಿತಿ ಹೊಂದಿದ ಕಾರಣ ಈಗ ಬದಲಾವಣೆಯಾಗಿದೆ. ಅಧಿಷ್ಠಾನ ಸರಳವಾದ ಜಗತಿ, ಕುಮುದ, ಹಾರ, ಪ್ರತಿ, ತಲ ಇವುಗಳು ಇವೆ. ಭಿತ್ತಿಯ ಭಾಗದಲ್ಲಿ ಚೋಳ ಮಾದರಿಯ ಅರೆಕಂಬಗಳನ್ನು ಸೇರಿಸಲಾಗಿದೆ. ಆದರೂ ಇದು ಮೈಸೂರು ಒಡೆಯರ್ ಕಾಲದ ಕೋಷ್ಠಗುಡಿಯ ಮಾದರಿಯನ್ನೇ ಹೊಂದಿದೆ. ಈ ಆಳವಿಲ್ಲದ ಕೋಷ್ಠಗುಡಿಯಲ್ಲಿ ಮಕರ ತೋರಣ, ತೋರಣದ ಮೇಲೆ ಕಳಸವಿದೆ. ದೇವಾಲಯದ ಮೇಲೆ ದ್ರಾವಿಡ ಶೈಲಿಯನ್ನು ಹೊಂದಿರುವ ವಿಮಾನ ಇದೆ. ಮೊದಲಿಗೆ ದೇವಾಲಯದ ವಾಸ್ತುಶೈಲಿಯ ಹಿನ್ನೆಲೆಯಲ್ಲಿ ಸುಂದರವಾಗಿತ್ತು. ಆದರೆ ಈಗ ಸಾಧಾರಣವಾಗಿ ಜೀರ್ಣೋದ್ಧಾರಗೊಳಿಸಿದ್ದಾರೆ.[22]

ಈ ಕಮಲವಲ್ಲಿ ದೇವಾಲಯದ ಮಾದರಿಯಲ್ಲಿಯೇ ಇನ್ನೊಂದು ದೇವಾಲಯವಿದೆ. ಇದು ಪರವಾಸು ದೇವಾಲಯದ ಬಲಭಾಗಕ್ಕೆ ಇದೆ. ಇದು ಸಹ ಪಶ್ಚಿಮಾಭಿಮುಖವಾಗಿದೆ. ಈ ದೇವಾಲಯವನ್ನು ಸಪ್ತಮಾತೃಕೆಯರ ದೇವಾಲಯವೆಂದು ಕರೆಯುವ ವಾಡಿಕೆ ಇದೆ. ಇದು ಕೂಡ ಜೀರ್ಣೋದ್ಧಾರವಾಗಿದೆ. ಈ ಆವರಣದಲ್ಲಿ ಇನ್ನೊಂದು ವಿಶಾಲವಾದ ದೇವಾಲಯವಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ದ್ರಾವಿಡ ಶೈಲಿಯ ದೇವಾಲಯವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ ಮುಖಮಂಟಪಗಳನ್ನು ಹೊಂದಿದೆ. ಆದರೆ ಮೂಲಗರ್ಭಗುಡಿಯಲ್ಲಿ ಯಾವುದೇ ತರಹದ ಶಿಲ್ಪಗಳಿಲ್ಲ. ಮಹಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ಮುಂದೆ ಮುಖಮಂಟಪದಲ್ಲಿ ಎರಡು ಕಂಬಗಳಿವೆ. ಇದು ಪೂರ್ವಾಭಿಮುಖವಾಗಿರುವುದರಿಂದ ನವರಂಗದ ಭಾಗದಲ್ಲಿ ಉತ್ತರ ದಿಕ್ಕಿಗೆ ಮತ್ತು ದಕ್ಷಿಣ ದಿಕ್ಕಿಗೆ ದ್ವಾರಗಳಿವೆ. ಈ ದೇವಾಲಯವು ದುಃಸ್ಥಿತಿಯನ್ನು ಹೊಂದಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ವಿಮಾನವನ್ನು ಹೊಂದಿದೆ. ಇದು ಸಹ ಸಾಕಷ್ಟು ಸಂಖ್ಯೆಯಲ್ಲಿ ದುಃಸ್ಥಿತಿಯನ್ನು ಹೊಂದಿದೆ. ಈ ಎಲ್ಲಾ ದೇವಾಲಯಗಳು ಸಹ ಮೈಸೂರು ಒಡೆಯರ್ ಕಾಲದ ದೇವಾಲಯಗಳೇ ಆಗಿವೆ. ಆದರೆ ಇವರ ಕಾಲದ ದೇವಾಲಯದಲ್ಲಿ ಚೋಳರ ಕಾಲದ ವಾಸ್ತುಶೈಲಿಯ ಲಕ್ಷಣಗಳನ್ನು ಪಡೆದುಕೊಂಡಿದೆ. (ಚಿತ್ರಸಂಖ್ಯೆ–70)

ಕೆಲವೊಂದು ವಿದ್ವಾಂಸರ ಪ್ರಕಾರ ಪರವಾಸು ದೇವಾಲಯ ಟಿಪ್ಪು ಸುಲ್ತಾನ್ ಆಳ್ವಿಕೆಯ ಕಾಲದವರೆವಿಗೂ ಉತ್ತಮವಾದ ಸ್ಥಿತಿಯಲ್ಲಿತ್ತು. ತದನಂತರ ಕಾಲಕ್ಕೆ ಈ ದೇವಾಲಯಗಳಿಗೆ ರಕ್ಷಣೆ ದೊರೆಯಲಿಲ್ಲ. ಅದು ಅಲ್ಲದೆ ಇದೊಂದು ಸ್ಥಳವು ರುದ್ರಭೂಮಿಯಾಗಿ ಬಳಕೆಯಾಗಿದೆ. ಪರವಾಸು ದೇವಾಲಯವು ಸಮಾಧಿಯ ಮೇಲೆ ನಿರ್ಮಿಸಲಾಗಿದ್ದೆಂದು ಹೇಳಿಕೆಗಳಿವೆ. ಮೊದಲಿಗೆ ಈ ನೆಲೆ ಒಂದು ಅಗ್ರಹಾರವಾಗಿತ್ತು. ತದನಂತರ ಕಾಲದಲ್ಲಿ ಜನರು ಈ ಜಾಗದಿಂದ ಪಶ್ಚಿಮ ದಿಕ್ಕಿಗೆ ನಡೆದರು. ಅಗ್ರಹಾರದ ಜನರು ಕೂಡ ಅಲ್ಲಿಂದ ಸ್ಥಳಾಂತರಗೊಂಡಿರಬಹುದು. ಈ ನೆಲೆಯಲ್ಲಿ ದೇವಾಲಯಗಳನ್ನು ನಿರ್ಮಿಸಿರುವ ಬಗ್ಗೆ ರಾಜಾವಳಿ ಕಥಾಸಾರದಲ್ಲಿ ಮತ್ತಂಗ್ಗುಂಡಲದ ಬಳಿ ತಮ್ಮ ತಂದೆಯ ನಿಧಿಯೊಳೆ ಪರವಾಸು ದೇವಾಲಯಂ ಅತಿಶಯಪಿನಲ್ಮಾಡಿಸಿ ಅನೇಕೋತ್ಸಹಂಗಳಿಗೆ ಉಪಾಸ್ತಿ ಮಂಧ್ಯಂಗಳಂ ಕೊಟ್ಟು ದ್ವಿಶತಕ ಅಗ್ರಹಾರಮಂ ಕೊಟ್ಟು ಸೇವೆಯಂ ಕಟ್ಟಿಸಿ ರಾಜ್ಯದೊಳೆಲ್ಲ ದೇವಾಲಯಕ್ಕಂ ಬ್ರಾಹ್ಮಣರಿಗಂ ಮಾನ್ಯಗಳಂ ನಡೆಸುತ್ತಾ ಮತಾಂತರಗಳನ್ನೆಲ್ಲಾ ವಿಚಾರಿಸಿ ತಿಳಿದ ಎಂದಿದ್ದು, ಚಿಕ್ಕದೇವರಾಜ ಒಡೆಯರ್ ಅಗ್ರಹಾರ ನಿರ್ಮಿಸಿ ದೇವಾಲಯವನ್ನು ಕಟ್ಟಿಸಿದ ಬಗ್ಗೆ ತಿಳಿದುಬರುತ್ತದೆ.[23] ಕೆಲವೊಂದು ಆಧಾರಗಳಿಂದ ತಿಳಿದುಬರುವುದೇನೆಂದರೆ, ಕ್ರಿ.ಶ.1674 ರಲ್ಲಿ ದೊಡ್ಡದೇವರಾಜ ಒಡೆಯರ್‌ರವರ ಅಂತ್ಯಕ್ರಿಯೆ ನಡೆದ ಸ್ಥಳದಲ್ಲಿ ಒಂದು ಅಗ್ರಹಾರವನ್ನು ನಿರ್ಮಿಸಿ, ಬ್ರಾಹ್ಮಣರಿಗೆ ಮನೆಗಳನ್ನು ನಿರ್ಮಿಸಿ ಈ ಒಂದು ಅಗ್ರಹಾರವನ್ನು ತಮ್ಮ ತಂದೆಯ ಹೆಸರಿನಲ್ಲಿ ದೇವನಗರಿ ಎಂಬುದಾಗಿ ಕರೆದಿರುವುದಾಗಿ ತಿಳಿದುಬರುತ್ತದೆ.[24]

ಇದನ್ನು ಗಮನಿಸಿದರೆ ಈ ನೆಲೆ ಹಿಂದೆ ಅನೇಕ ದೇವಾಲಯಗಳಿಂದ ಕೂಡಿದ ಸ್ಥಳವಾಗಿತ್ತೆಂದು ತಿಳಿದುಬರುತ್ತದೆ. ಈಗಲೂ 5-6 ದೇವಾಲಯಗಳಿವೆ. ಈ ಎಲ್ಲಾ ಬೆಳವಣಿಗೆಯನ್ನು ನೋಡಿದರೆ ದೇವಾಲಯಗಳ ಒಳಗೆ ಇರುವ ಕಂಬಗಳ ಮೇಲೆ ಕೆತ್ತಲಾಗಿರುವ ಉಬ್ಬು ಶಿಲ್ಪಗಳಿಂದ ವಿಷ್ಣುವಿಗೆ ಪ್ರಾಮುಖ್ಯತೆಯನ್ನು ಮೈಸೂರು ಒಡೆಯರು ನೀಡಿರುವುದು ತಿಳಿದುಬರುತ್ತದೆ.[25]

**ತೆರಕಣಾಂಬಿ**

ತೆರಕಣಾಂಬಿಯು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಹೋಬಳಿ ಕೇಂದ್ರವಾಗಿದ್ದು, ಈ ಗ್ರಾಮ ಚಾಮರಾಜನಗರ, ಗುಂಡ್ಲುಪೇಟೆ ಮುಖ್ಯರಸ್ತೆಯಲ್ಲಿದೆ. ಕ್ರಿ.ಶ.13ನೇ ಶತಮಾನಕ್ಕೆ ಇದು ಒಂದು ರಾಜಧಾನಿಯಾಗಿತ್ತು. ಇತಿಹಾಸ ಪ್ರಸಿದ್ಧ ಪಡೆದ ತೆರಕಣಾಂಬಿಯು ಪದಿನಾಲ್ಕು ನಾಡರಸರ ರಾಜಧಾನಿಯಾಗಿತ್ತು. ಕ್ರಿ.ಶ.1310 ರಲ್ಲಿ ಪೆರುಮಾಳೆದಣ್ಣಾಯಕನ ಮಗ ಮಾಧವ ದಣ್ಣಾಯಕನು ತೆರಕಣಾಂಬಿಯಲ್ಲಿ ನೆಲೆವೀಡಿನಲ್ಲಿ ಪದಿನಾಲ್ಕು ನಾಡನ್ನು

ಆಳುತ್ತಿದ್ದನೆಂದು ತಿಳಿದುಬರುತ್ತದೆ.[26] ಈ ತೆರಕಣಾಂಬಿಯಲ್ಲಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಉಮ್ಮತ್ತೂರು ಪಾಳೇಗಾರರು, ಮೈಸೂರು ಒಡೆಯರ್‌ರವರು ಆಡಳಿತ ನಡೆಸಿ ತಮ್ಮದೇ ಆದ ಇತಿಹಾಸವನ್ನು ನಿರ್ಮಿಸಿದ್ದಾರೆ. ಅಲ್ಲದೆ ಈ ಸುತ್ತಮುತ್ತಲ ಪ್ರದೇಶಗಳು ಕುಡುಗನ್ನಾಡು, ಕುಡುಗೂರನಾಡು ಎಂಬೆಲ್ಲಾ ಹೆಸರುಗಳಿಂದ ಪ್ರಸಿದ್ಧಿಯನ್ನು ಪಡೆದುಕೊಂಡು ತೆರಕಣಾಂಬಿಯು ಕೊಡುಗುನಾಡಿನ ಕೇಂದ್ರವೇ ಆಗಿ ರಾಜಧಾನಿಯಾಗಿಯೂ ಕಾರ್ಯ ನಿರ್ವಹಿಸಿತು. ಈ ಕುರಿತ ಅನೇಕ ಶಿಲಾಶಾಸನಗಳಿವೆ.[27] ತೆರಕಣಾಂಬಿಯಲ್ಲಿಯೇ ಸುಮಾರು 14 ಶಾಸನಗಳಿವೆ.[28]

ಐತಿಹಾಸಿಕವಾಗಿ ಹೆಸರುಗಳಿಸಿರುವ ತೆರಕಣಾಂಬಿಯು ಧಾರ್ಮಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿಯೂ ಕೂಡ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಈ ಗ್ರಾಮದಲ್ಲಿ ಕಂಡುಬರುವ ಪ್ರಾಚೀನ ಕಾಲದ ದೇವಾಲಯಗಳು, ಕೆರೆಕಟ್ಟೆಗಳು, ಬಾವಿಗಳು, ಛತ್ರಗಳು, ವ್ಯಾಪಾರ ವಾಣಿಜ್ಯ, ಪ್ರಾಚೀನ ಕವಿಗಳಿಂದಲೂ ಹೆಸರುಗಳಿಸಿದೆ. ವೈದಿಕ ಪ್ರಧಾನ ಹಿಂದೂ ಧರ್ಮವು ಪ್ರಧಾನವಾಗಿದ್ದರೂ ಇನ್ನಿತರ ಧರ್ಮಗಳಾದ ಜೈನ, ವೀರಶೈವ, ರಾಮಾನುಜ ಪಂಥಗಳು ಅಲ್ಲದೆ ಇಸ್ಲಾಂ ಧರ್ಮಗಳು ತೆರಕಣಾಂಬಿಯಲ್ಲಿ ಸಹಬಾಳ್ವೆಯಿಂದ ಇರುವುದು ತಿಳಿದುಬರುತ್ತದೆ. ರೈಸ್‌ರವರು ದಾಖಲಿಸಿರುವಂತೆ ಈ ಪ್ರದೇಶವು ದ್ರಾವಿಡ, ಕೇರಳ, ಹದಿನಾಡುಗಳ ಗಡಿ ಪ್ರದೇಶ ಇನ್ನೊಂದು ಅಭಿಪ್ರಾಯದ ಪ್ರಕಾರ ಗಂಗ, ಕೇರಳ, ಕದಂಬ ಅರಸು ಮನೆತನಗಳ ಗಡಿ ಪ್ರದೇಶ, ಈ ಅರಸು ಮನೆತನಗಳ ಗಡಿ ಪ್ರದೇಶವು ಈ ಊರಿನಲ್ಲಿ ಕೂಡುವುದರಿಂದ ಇದು ಕೂಡುಗಲ್ಲೂರು[29] ಮೊದಲು ತ್ರಿಕದಂಬಪುರವೇ ನಂತರ ತೆರಕಣಾಂಬಿಯಾಯಿತು ಎನ್ನುವುದು ವಾದ. ಆದರೆ ಇವೆಲ್ಲ ಪಂಡಿತರ ವಾದಗಳು. ದ್ರಾವಿಡ ಶಬ್ಧವಾದ ಕಡವೆಟಿ ಎಂದರೆ ಬೆಟ್ಟದ ತಪ್ಪಲು ಈ ತೆರಕಣಾಂಬಿಯ ಮೂಲವಾಗಿರುವ ಸಾಧ್ಯತೆ ಹೆಚ್ಚಾಗಿದೆ.[30] ಹಿಂದೆ ಈ ಗ್ರಾಮ ಒಂದು ಅಪ್ರಮುಖವಾದ ಅಗ್ರಹಾರವಾಗಿತ್ತು ಎಂಬುದಕ್ಕೆ ಇಲ್ಲಿರುವ ವೈಷ್ಣವ ಪರಂಪರೆಗೆ ದೇವಾಲಯಗಳೇ ಆಧಾರವಾಗಿದೆ.

ಕ್ರಿ.ಶ.1199 ರಷ್ಟು ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದ ಕುಡುಗನಾಡು, ಕಾರೆನಾಡು, ಹೊರನಾಡು, ಅಂಗಿನಾಡು, ಹಿರಿಯನಾಡು, ಎಡತಲೆನಾಡು, ತೊರೆನಾಡು, ಹುಲ್ಲನಹಳ್ಳಿಯ ನಾಡು, ಹುದೆನಾಡು, ಎಡೆಯಾಲನಾಡು, ಕಣಾಲನಾಡು, ನುಗುನಾಡು, ನವಿಲೆನಾಡು ಹಾಗೂ ಬಯಲ್ನಾಡುಗಳನ್ನು ಒಳಗೊಂಡ ಹದಿನಾಲ್ಕು ನಾಡಿನ ಕೇಂದ್ರಸ್ಥಳವಾಗಿತ್ತು ತೆರಕಣಾಂಬಿ. ಹೊಯ್ಸಳರ ಆಳ್ವಿಕೆ ಕೊನೆಯಾಗುವ ವೇಳೆಗೆ ಹದಿನಾಲ್ಕು ನಾಡು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು ತೆರಕಣಾಂಬಿ ರಾಜ್ಯದಲ್ಲಿಯೇ ಸೇರಿ ಹೋಯಿತು. ಕ್ರಿ.ಶ.1414 ರಿಂದ

ಕ್ರಿ.ಶ.1530 ರವರೆಗೆ ಉಮ್ಮತ್ತೂರನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಉಮ್ಮತ್ತೂರು ಪ್ರಭುಗಳು ಯಳಂದೂರನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಳಿದ ಹದಿನಾಡಿನ ಅರಸರು ಕಳಲೆಯನ್ನು ಕೇಂದ್ರವನ್ನಾಗಿಸಿಕೊಂಡು ಆಳಿದ ಕಳಲೆಯ ದಳವಾಯಿ ವಂಶದ ಪ್ರಭುಗಳು ಕೆಲ ಕಾಲ ಈ ಪ್ರದೇಶದ ಮೇಲೆ ಹಿಡಿತವನ್ನು ಸಾಧಿಸಿದ್ದರು. ಕ್ರಿ.ಶ.1310 ರಿಂದ ಕ್ರಿ.ಶ.17ನೇ ಶತಮಾನದವರೆಗಿನ ಶಾಸನಗಳು ಈ ಪ್ರದೇಶವನ್ನು ಆಳಿದವರ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತದೆ.

ವಿಜಯನಗರ ಅರಸರ ಆಡಳಿತದ ಕಾಲದಲ್ಲಿ ತೆರಕಣಾಂಬಿಯು ಸೀಮೆ ಹಾಗೂ ನಾಡುಗಳನ್ನು ಸಂವಾದಿಯಾಗಿಯೇ ಬಳಸಲಾಗಿದೆಯಾದರೂ ತೆರಕಣಾಂಬಿಯನಾಡು, ತೆರಕಣಾಂಬಿಯ ಸೀಮೆಯಲ್ಲಿದ್ದ ಒಂದು ಆಡಳಿತ ಘಟಕ ಎಂದೇ ಭಾವಿಸಬೇಕಾಗುತ್ತದೆ. ಈ ಪ್ರದೇಶದಲ್ಲಿ ನಾಡು, ಸ್ಥಳ ಹಾಗೂ ಸೀಮೆಗಳನ್ನು ಅತ್ಯಂತ ಸ್ಪಷ್ಟವಾದ ಅರ್ಥದಲ್ಲಿ ಉಪಯೋಗಿಸದೆ ಅನೇಕ ಗೊಂದಲಗಳಿಗೆ ಕಾರಣವಾಗಿದೆ. ಬೇರೆ ಬೇರೆಯೇ ಆದ ನೀಲಿ ನಕ್ಷೆಯನ್ನು ತಯಾರಿಸಿಕೊಂಡ ನಂತರ ಈ ವಿಂಗಡಣೆಗಳು ಗೋಚರವಾಗುತ್ತವೆ. ತೆರಕಣಾಂಬಿ ರಾಜ್ಯದಲ್ಲಿ ಅಂತರ್ಗತವಾಗಿ ಸ್ಥಳ, ಸೀಮೆ, ನಾಡುಗಳನ್ನು ವರ್ಗೀಕರಿಸಲಾಗಿದೆ. ಹಂಗಳ ಸ್ಥಳ, ತೆರಕಣಾಂಬಿಯ ಶಾಸನವೊಂದು ಹಂಗಳ ಸ್ಥಳವನ್ನು ಉಲ್ಲೇಖಿಸುತ್ತದೆ.[31] ಕ್ರಿ.ಶ. 1640 ರ ಈ ಶಾಸನದಲ್ಲಿ ಹಂಗಳ ಸ್ಥಳದಲ್ಲಿದ್ದ ಪುತ್ತನಪುರವನ್ನು ಉಲ್ಲೇಖಿಸುತ್ತದೆ. ಇದೇ ಗ್ರಾಮವನ್ನು ಇದೇ ಸ್ಥಳದಲ್ಲಿದೆ ಎಂದು ಕ್ರಿ.ಶ.1640ರ ಪುತ್ತನಪುರ ಶಾಸನವು ದಾಖಲಿಸುತ್ತದೆ.[32] ಸಿರಿಯೂರು ಸ್ಥಳ ತ್ರಿಯಂಬಕಪುರದ ತಾಮ್ರಶಾಸನವೊಂದು ಕ್ರಿ.ಶ.1521 ರಲ್ಲಿ ತೆರಕಣಾಂಬಿಯ ರಾಜ್ಯದ ಪಡುವನಾಡು ಸೀಮೆಯಲ್ಲಿದ್ದ ಸಿರಿಯೂರು ಸ್ಥಳವನ್ನು ಉಲ್ಲೇಖಿಸುತ್ತದೆ. ಈ ಶಾಸನವು ಸಿರಿಯೂರು ಸ್ಥಳದಲ್ಲಿದ್ದ ಸಿರಿಯೂರು, ಗೋಣಿಪುರ, ಮರೋಡಮಲಿ, ಐಚ್ಚನಹಳ್ಳಿ, ಸಂಪಿಗಪುರ, ಸೊಡಲೀಪುರ, ಸೋಮೆಯಪುರ, ಗಳಿಗೆಯಪುರ, ಹರದೀಪುರ, ಕುಂಮಾರನಪುರ, ಜಯಿದಾನಪುರ, ಮೋಟಗೌಡನಹಳ್ಳಿ, ಅಪಣನಪುರ ಬದನೇಪುರ, ಮತ್ತು ಗಂಗೋಪುರ ಗ್ರಾಮಗಳನ್ನು ಉಲ್ಲೇಖಿಸುತ್ತದೆ.[33]

## ಪಡುಗನಾಡು ಸ್ಥಳ

ಗುಂಡ್ಲುಪೇಟೆ ತಾಲ್ಲೂಕಿನ ತ್ರಿಯಂಬಕಪುರದ ಶಾಸನವೊಂದು ತೆರಕಣಾಂಬಿಯ ಸೀಮೆಯ ಪಡುಗನಾಡು ಸ್ಥಳದ ಹುಲ್ಲಾನವನ್ನೇ ಕಾಮಲಾಪುರ ಅಗ್ರಹಾರವನ್ನಾಗಿ ಪರಿವರ್ತಿಸಿ ಸರ್ವಮಾನ್ಯ ದಾನವನ್ನು ನೀಡಲಾಗಿದೆ. ಈ ಶಾಸನದ ಕಾಲ ಕ್ರಿ.ಶ.1535[34], ಕಣಿಗೆಹಳ್ಳಿಯ ಸ್ಥಳ, ಗುಂಡ್ಲುಪೇಟೆಯ ಗೋಪಾಲಪುರದ ಕ್ರಿ.ಶ.1537ರ ಅಚ್ಚುತರಾಯನ ಕಾಲದ ಶಾಸನವು

ತೆರಕಣಾಂಬಿಯ ಸೀಮೆಯಲ್ಲಿದ್ದ ಕಣಿಗಹಳ್ಳಿಯ ಸ್ಥಳದಲ್ಲಿದ್ದ ಯಿಂಗಳವಾಡಿ, ಹೊನ್ನಗೌಂಡನಹಳ್ಳಿ ಬಸವನ ಕೆರೆಗಳನ್ನು ಪ್ರಸ್ತಾಪಿಸುತ್ತದೆ.[35] ಗರಗನಹಳ್ಳಿಯ ಸ್ಥಳ, ಗುಂಡ್ಲುಪೇಟೆಯ ರಾಮೇಶ್ವರ ದೇವಾಲಯದ ಶಾಸನವೊಂದು ಕ್ರಿ.ಶ.1374 ರದ್ದಾಗಿದ್ದು, ಗರಗನಹಳ್ಳಿಯ ಸ್ಥಳವು ತೆರಕಣಾಂಬಿಯ ರಾಯಕಟಕದಲ್ಲಿತ್ತು ಎಂದು ತಿಳಿದುಬರುತ್ತದೆ.[36] ಈ ಗರಗನಹಳ್ಳಿಯು ಇಂದಿಗೂ ಇದೇ ಹೆಸರಲ್ಲಿದ್ದು, ಗುಂಡ್ಲುಪೇಟೆ ತಾಲ್ಲೂಕಿನಲ್ಲಿದೆ.[37] ಅದೇ ರೀತಿಯಲ್ಲಿ ಬಳುಕೆರೆ ಸ್ಥಳ, ಮಾರುತ ಸ್ಥಳ, ಕೊಲುಗಾಣದ ಸ್ಥಳ, ಹುಲ್ಲನಹಳ್ಳಿಯ ಸ್ಥಳ, ಹೊಸನಾಡು ಸ್ಥಳ, ತಗಡೂರು ಸ್ಥಳ, ಕಲ್ಲಹಳ್ಳಿಯ ಸ್ಥಳ, ಉಯಂಬಳ್ಳಿಯ ಸ್ಥಳ, ತೆರಕಣಾಂಬಿಯ ಸ್ಥಳ/ನಾಡು, ಉಮ್ಮತ್ತೂರು ಸೀಮೆ, ಪಡುವನಾಡು ಸೀಮೆ, ವಿಜಯಪುರದ ಸೀಮೆ, ವೆಲಗಿನ ಸೀಮೆ, ಕುಲುಮಡ ಸೀಮೆ, ಕೊಂಗಿನಸೀಮೆ, ಕುಡುಗನಾಡು, ಬಡುಗುನಾಡು, ಕಾರೆನಾಡು, ಹದಿನಾಡಿನ ಭಾಗಗಳು, ಪೆರೂರು ನಾಡು, ಕಣಿಯಾಲ ನಾಡು ಇವೆಲ್ಲವೂ ಸಹ ತೆರಕಣಾಂಬಿ ರಾಜ್ಯಕ್ಕೆ ಸೇರಿದ್ದವು. ಇಂತಹ ವೈವಿಧ್ಯಪೂರ್ಣವಾದ ರಾಜಕೀಯ ಹಿನ್ನೆಲೆಯುಳ್ಳ ತೆರಕಣಾಂಬಿಯ ಒಂದು ಐತಿಹಾಸಿಕ ಅಲ್ಲದೆ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ರಾಜ್ಯ. ತೆರಕಣಾಂಬಿಯ ಹೆಸರಿನ ನಾಮಾಂಕಿತವನ್ನು ಕುರಿತು ಹಲವಾರು ರೀತಿ ಅಭಿಪ್ರಾಯಗಳಿವೆ. ಅಲ್ಲದೆ ಶಿಲಾಶಾಸನಗಳಲ್ಲಿಯೂ ಸಹ ಇದೆ. ಇಂದಿನ ತೆರಕಣಾಂಬಿಗೆ, ತೆರಕಾಂಬಿ[38], ತೆರಕಣಾಂಬೆ[39], ತೆರಕಣಂಬೆ[40], ತೆರಕ್(ಣಾ)ಂಬಿ ಸ್ಥಳ[41], ತೆರಕಣಾಂಬಿಯ ರಾಜ್ಯ[42], ತೆರಕಣಾಂಬೆ ನಾಡು[43], ತೆರಕಣಾಂಬಿಯ ಸೀಮೆ[44], ತೆರಕಣಾಂಬಿಯ ನೆಲೆವೀಡು[44], ತೆರಕಣಾಂಬಿಯ ಸ್ಥಳ[45], ತೆರಕಣಾಂಬಿಯ ಸ್ಥಳ[46], ತೆರಕಣಂಬಿಯ ಸ್ಥಳ[47], ತೆರಕಣಾಂಬಿಯ ಪಟ್ಟಣ[48] ಈ ಹೆಸರುಗಳು ತೆರಕಣಾಂಬಿಯ ಬಗ್ಗೆ ಹಲವಾರು ಶಾಸನಗಳಿಂದ ತಿಳಿದುಬರುತ್ತದೆ. ಗುಂಡಲ ಪಂಡಿತರಾದ ಲಕ್ಷ್ಮಣಾಚಾರ್ಯರ ಹತ್ತಿರ ಇದ್ದ, ತಾಮ್ರ ಶಾಸನದ ಪ್ರಕಾರ ಮೈಸೂರಿನ ರಾಜರಾದ ಚಿಕ್ಕದೇವರಾಜ ಒಡೆಯರ್‌ರವರ ಕಾಲಕ್ಕೆ ಸೇರಿದ ತಾಮ್ರಶಾಸನವು ಮೈಸೂರು ಒಡೆಯರ್ ವಂಶದವರ ವಂಶಾವಳಿಯನ್ನು ಇನ್ನಿತರ ವಿಚಾರಗಳನ್ನು ತಿಳಿಸುತ್ತದೆ. ಅಲ್ಲದೆ ಗ್ರಾಮಗಳ ಮೇರೆಯನ್ನು ತಿಳಿಸುವಾಗ ಪುಡುವಲು ತೆರಕಣಾಂಬಿ ಎಂದು ತಿಳಿದುಬಂದಿದೆ.[49]ಅಲ್ಲದೆ ಮೈಸೂರಿನಲ್ಲಿ ಸಿಕ್ಕಿರುವ ಇನ್ನೊಂದು ಶಾಸನದ ಪ್ರಕಾರ ಕ್ರಿ.ಶ. ಸರಿಸುಮಾರು 1665 ಕ್ಕೆ ಸೇರಿದ ಶಾಸನವಾಗಿದೆ. ಇದು ದಾನ ಶಾಸನವಾಗಿದ್ದು, ತೆರಕಣಾಂಬಿ ಸ್ಥಳದ ಲಕ್ಕೂರು ಗ್ರಾಮವನ್ನು ದಾನ ಬಿಟ್ಟಿರುವ ವಿಚಾರವನ್ನು ತಿಳಿಸುತ್ತದೆ.[50]

ಚಾಮರಾಜನಗರ ಜಿಲ್ಲೆ ಅದೇ ತಾಲ್ಲೂಕಿಗೆ ಸೇರಿದ ದಾಸನಪುರಕ್ಕೆ ಸೇರಿದ ಕ್ರಿ.ಶ.1458ರ ಶಾಸನದ ಪ್ರಕಾರ ದಾನ ಶಾಸನವಾಗಿದೆ. ಈ ಶಾಸನವು ತೆರಕಣಾಂಬಿಗೆ ಹೊಯಿಸಣ ದೇಶದ ಬಡಗುನಾಡ ಕುಡುಗಲೂರೆಂಬ ಪರ್ಯಾಯ ನಾಮವಿದ್ದುದರ ಬಗ್ಗೆ

ಅಲ್ಲದೆ ತೆರಕಣಾಂಬಿಯ ತಿರುಮಲನಾಥ ದೇವರಿಗೆ ಗ್ರಾಮವನ್ನು ದಾನ ನೀಡಿರುವ ವಿಚಾರವು ತಿಳಿದುಬರುತ್ತದೆ.[51] ಇದೇ ತಾಲ್ಲೂಕಿನ ಕಿಲಗೆರೆಯ ಕ್ರಿ.ಶ.1318 ರ ಕಾಲಕ್ಕೆ ಸೇರಿದ ಶಾಸನದಲ್ಲಿ ತೆರಕಣಾಂಬಿಯ ಶ್ರೀ ಗೋಪಿನಾಥ ದೇವರ ಅಂಗಭೋಗ, ರಂಗಭೋಗಕ್ಕಾಗಿ ದಾನವನ್ನು ನೀಡಿರುವ ವಿಚಾರವು ತಿಳಿದುಬರುತ್ತದೆ.[52]

ಇದೇ ಊರಿನ ಮತ್ತೊಂದು ಶಾಸನದ ಪ್ರಕಾರ ಕ್ರಿ.ಶ.1610ಕ್ಕೆ ಸೇರಿದ ಶಾಸನದಲ್ಲಿ ಶ್ರೀರಂಗಪಟ್ಟಣದ ಶ್ರೀಲಿಂಗಣ್ಣನವರಿಗೆ ದಾಸೋಹಕ್ಕಾಗಿ ತೆರಕಣಾಂಬಿ ಸೀಮೆಯ ಕಿಲಗೆರೆ ಊರನ್ನು ದಾನವಾಗಿ ನೀಡಿರುವುದನ್ನು ತಿಳಿಸುತ್ತದೆ.[53]

ಅರಕಲವಾಡಿಯ ಶಾಸನವು ತೆರಕಣಾಂಬಿಯ ವರದರಾಜ ದೇವರಿಗೆ ರಥೋತ್ಸವಕ್ಕೆ ಗ್ರಾಮವನ್ನು ದಾನ ನೀಡಿರುವುದು ತಿಳಿದುಬರುತ್ತದೆ.[54]

ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿಯ ಶಾಸನದ ಪ್ರಕಾರ ನೋಡುವುದಾದರೆ, ಈ ಊರಿನ ಅಲ್ಲಾಳನಾಥ ದೇವರಿಗೆ ಪದಿನಾಲ್ಕು ನಾಡರಸನಾದ ಶ್ರೀ ವೀರಮಾಧವ ದಂಣಾಯಕರ ಕುವರ ಶ್ರೀ ವೀರಕೇತೆಯ ದಂಣಾಯಕರ ಆಡಳಿತದ ಕಾಲದಲ್ಲಿ ದಾನವನ್ನು ನೀಡಿದ ವಿಚಾರವನ್ನು ತಿಳಿಸುತ್ತದೆ. ಇಲ್ಲಿ ತೆರಕಣಾಂಬಿಯನ್ನು ತೆರಕಣಾಂಬೆಯ ನೆಲೆವೀಡು ಎಂದು ಉಲ್ಲೇಖಿಸಲಾಗಿದೆ.[55]

ಹೆಮ್ಮರಗಾಲದ ಇನ್ನೊಂದು ಶಾಸನದ ಪ್ರಕಾರ ಗ್ರಾಮ ಬೀರೇದೇವರ ಗುಡಿಯ ಜೀರ್ಣೋದ್ಧಾರ ಮಾಡಿಸಿದ್ದಕ್ಕಾಗಿ ತೆರಕಣಾಂಬಿ, ಕಳಲೆ ಮತ್ತು ಹಂಪಾಪುರ ಗ್ರಾಮಗಳ ಮುಖಂಡರುಗಳು ಸಾಕ್ಷಿಯಾಗಿರುವ ವಿಚಾರವನ್ನು ತಿಳಿಸಲಾಗಿದೆ. ಇಲ್ಲಿಯು ಕೂಡ ತೆರಕಣಾಂಬಿಯನ್ನು ತೆರಕಣಾಂಬಿ ಎಂದು ಕರೆಯಲಾಗಿದೆ.[56] ಹೀಗೆ ಅನೇಕ ಶಾಸನಗಳು ತೆರಕಣಾಂಬಿಯ ಬಗ್ಗೆ ತಿಳಿಸುತ್ತದೆ.

ತೆರಕಣಾಂಬಿಯಲ್ಲಿ 12ಕ್ಕೂ ಹೆಚ್ಚು ಪ್ರಾಚೀನ ದೇವಾಲಯಗಳಿವೆ. ಅದರಲ್ಲಿ ಪ್ರಮುಖವಾದ ದೇವಾಲಯ ಲಕ್ಷ್ಮೀ ವರದರಾಜಸ್ವಾಮಿ ದೇವಾಲಯವು ಸಹ ಒಂದಾಗಿದೆ.

## ಲಕ್ಷ್ಮೀವರದರಾಜಸ್ವಾಮಿ ದೇವಾಲಯ

ತೆರಕಣಾಂಬಿಯಲ್ಲಿ ಚಾಮರಾಜನಗರ-ಗುಂಡ್ಲುಪೇಟೆಯ ಮುಖ್ಯರಸ್ತೆ ಪಕ್ಕದಲ್ಲಿಯೇ ಲಕ್ಷ್ಮೀ ವರದರಾಜಸ್ವಾಮಿ ದೇವಾಲಯ ಇದೆ.[57] ಈ ದೇವಸ್ಥಾನದ ಬಗ್ಗೆ ನೋಡುವುದಾದರೆ ಸ್ವಸ್ತಿಪುರವರಾಧೀಶ್ವರ ಮಹಾಮಂಡಲಿಕ ಶ್ರೀ ಪೆರುಮಾಳ ದಣ್ಣಾಯಕರ ಕುಮಾರಂ ಶ್ರೀ

ವೀರಮಾಧವ ದಣ್ಣಾಯಕರು ಶ್ರೀ ಸಕವರ್ಷ 1225 ನೆಯ ಶೋಭಕೃತ್ಯಂ ವತ್ಸರದ ಚೈತ್ರ ಬ1 ಪಾಡ್ಯಸ್ವಾತಮಿ ನಕ್ಷತ್ರದಲು ತೆರಕಣ್ಣಂಬಿಯೊಳು ಶ್ರೀ ವರದರಾಜ ಅಲ್ಲಾಳನಾಥನಂ ಸುಪ್ರತಿಷ್ಠಿಸಿ ಎಂದು ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದ ಪ್ರಕಾರ 3–4–1303 ರಲ್ಲಿ ತೆರಕಣಾಂಬಿಯಲ್ಲಿ ವರದರಾಜಸ್ವಾಮಿ ದೇವರ ಪ್ರತಿಷ್ಠಾಪನೆಯಾಗಿದೆ ಎಂದು ತಿಳಿದುಬರುತ್ತದೆ.[58]

ವರದರಾಜಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿದ್ದು, ಶುದ್ಧ ದ್ರಾವಿಡ ಶೈಲಿಯ ದೇವಾಲಯವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ, ಮುಖಮಂಟಪ ಹಾಗೂ ದ್ವಾರಮಂಟಪವನ್ನು ಹೊಂದಿದೆ. ಸುತ್ತಲೂ ಪ್ರಾಕಾರವನ್ನು ಸಹ ಹೊಂದಿದೆ. ಈ ದೇವಾಲಯದ ಗರ್ಭಗೃಹ ಮತ್ತು ಶುಕನಾಸ ಹೊಯ್ಸಳರ ಕಾಲಕ್ಕೆ ಸೇರಿದೆ. ಮೂಲಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ವರದರಾಜಸ್ವಾಮಿ ಶಿಲ್ಪ ಇದೆ. ಸುಮಾರು ಐದೂವರೆ ಅಡಿ ಎತ್ತರವನ್ನು ಹೊಂದಿದೆ. ಈ ಶಿಲ್ಪವು ಹೊಯ್ಸಳರ ಕಾಲದ ಶಿಲ್ಪವೇ ಆಗಿದೆ.[59]ನವರಂಗದಲ್ಲಿ ಯಾವುದೇ ಶಿಲ್ಪಗಳಿಲ್ಲ, ಶುಕನಾಸದ ದ್ವಾರದ ಇಕ್ಕೆಲಗಳಲ್ಲಿ ಜಯ ಮತ್ತು ವಿಜಯರವರ ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹ ಮತ್ತು ಶುಕನಾಸದ ಭಾಗದಲ್ಲಿ ಅಧಿಷ್ಠಾನ, ಉಪಾನ, ಜಗತಿ, ಕುಮುದ, ಕಂಸ ಮತ್ತು ಪಟ್ಟಿಕೆಗಳಿವೆ. ಅದರ ಮೇಲೆ ಭಿತ್ತಿಯ ಭಾಗವಿದೆ. (ಚಿತ್ರಸಂಖ್ಯೆ–71)

ಭಿತ್ತಿ ಎಂದರೆ ದೇವಾಲಯದ ಗೋಡೆ ಭಿತ್ತಿಯೆಂಬ ಪದವು ಭಿದ್ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ದೇವಾಲಯವನ್ನು (ಗರ್ಭಗುಡಿಯನ್ನು) ಹೊರ ಪ್ರಾಂಗಣದಿಂದ ಬೇರ್ಪಡಿಸುವುದರಿಂದ (ಭೇದರ್) ಇದಕ್ಕೆ ಭಿತ್ತಿಯೆಂದು ಕರೆಯುತ್ತಾರೆ. ಎಲ್ಲಾ ಪ್ರಾಕಾರದ ಗೋಡೆಗಳು ದೇವಾಲಯದ ನಿರ್ಮಾಣದಲ್ಲಿ ಬಳಕೆಯಲ್ಲಿರುವುದು ತಿಳಿದುಬರುತ್ತದೆ. ಭಿತ್ತಿಯಲ್ಲಿ ಅರೆಕಂಬಗಳು ಮತ್ತು ಕೋಷ್ಠಮಂಟಪವನ್ನು ಕಾಣಬಹುದಾಗಿದೆ. ಕೋಷ್ಠಗಳೆಂದರೆ ಭಿತ್ತಿಯಲ್ಲಿ ನಿರ್ಮಿಸಲಾಗಿರುವ ಗೂಡುಗಳು ಇವುಗಳನ್ನು ದೇವತೆಗಳ ಪ್ರತಿಮೆಗಳನ್ನು ಸ್ಥಾಪಿಸುವುದಕ್ಕಾಗಿ ನಿರ್ಮಿಸಲಾಗಿದೆ. ಈ ದೇವತೆಗಳನ್ನು ಕೋಷ್ಠದೇವತೆಗಳೆನ್ನುವರು. ಇವುಗಳನ್ನು ನಾವು ಚೋಳರ ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಕಾಣಬಹುದು. ಕೋಷ್ಠಗುಡಿಗಳಲ್ಲಿ ಮಕರ ತೋರಣಗಳನ್ನು ಸಹ ಕಾಣಬಹುದಾಗಿದೆ.

ಅಲ್ಲದೆ ಕೂಟ ತೋರಣ, ಪಂಜರ ತೋರಣ, ಭೋಗಮಾದವ ತೋರಣ, ತೋರಣ ಮತ್ತು ಜಾಲಕ ಇವುಗಳನ್ನು ಕಾಣುತ್ತೇವೆ. ಈ ಹಿನ್ನೆಲೆಯನ್ನು ನೋಡಿದರೆ ವರದರಾಜಸ್ವಾಮಿ ದೇವಾಲಯದ ಗರ್ಭಗೃಹ ಮತ್ತು ಶುಕನಾಸದ ಭಾಗದ ಭಿತ್ತಿಯ ಭಾಗದಲ್ಲಿ ಅರೆಕಂಬಗಳು

ಮತ್ತು ಕೋಷ್ಠಮಂಟಪಗಳು ಹಾಗೂ ಕುಂಭ ಮಾದರಿಯ ಕಂಬಗಳನ್ನು ಕಾಣಬಹುದಾಗಿದೆ. ಅಲ್ಲದೆ ಸ್ತಂಭ ಪಂಜರವನ್ನು ಸಹ ಗುರುತಿಸಬಹುದಾಗಿದೆ ಮತ್ತು ರಥ ಪಂಜರಗಳು ಸಹ ಇದೆ. ಈ ಎಲ್ಲಾ ಬೆಳವಣಿಗೆಯಿಂದ ಇದು ಹೊಯ್ಸಳರ ಕಾಲಕ್ಕೆ ಸೇರಿದೆ ಎನ್ನಬಹುದಾಗಿದೆ.

ಗರ್ಭಗೃಹ ಮತ್ತು ಶುಕನಾಸದ ಭಾಗಕ್ಕೆ ಸುತ್ತಲೂ ಪ್ರದಕ್ಷಿಣ ಪಥ ಇದೆ. ಅದು ಅಲ್ಲದೆ ಸುತ್ತಲು 12 ಕಂಬಗಳ ಸಾಲುಗಳಿವೆ. ಇವು ಹೊಯ್ಸಳರ ಕಾಲದ ಅಲ್ಲದೆ ಚೋಳರ ಕಾಲದ ವಾಸ್ತು ಪರಂಪರೆಯನ್ನು ತಿಳಿಸುತ್ತದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ವಿಮಾನವನ್ನು ಸಹ ನಿರ್ಮಿಸಲಾಗಿದೆ.

ನವರಂಗದಲ್ಲಿ ಪೂರ್ವ ಪಶ್ಚಿಮಾಭಿಮುಖವಾಗಿ 4 ಸಾಲು ಕಂಬಗಳಿದ್ದು, ಒಂದು ಸಾಲಿನಲ್ಲಿ 5 ರಂತೆ ಒಟ್ಟು 20 ಕಂಬಗಳಿವೆ. ಇವುಗಳನ್ನು ಗಮನಿಸಿದರೆ ವಿಜಯನಗರ ಅರಸರ ಕಾಲಕ್ಕೆ ಸೇರಿಸಬಹುದಾಗಿದೆ. ನವರಂಗಕ್ಕೆ ಹೊಂದಿಕೊಂಡಂತೆ ದಕ್ಷಿಣ ದಿಕ್ಕಿಗೆ ಒಂದು ಗುಡಿಯಿದ್ದು, ಈ ಗುಡಿಯಲ್ಲಿ ಲಕ್ಷ್ಮೀ ದೇವಿಯನ್ನು ಇರಿಸಲಾಗಿದೆ. ಆದಕಾರಣ ಈ ದೇವಾಲಯಕ್ಕೆ ಲಕ್ಷ್ಮೀ ವರದರಾಜಸ್ವಾಮಿ ದೇವಾಲಯವೆಂದು ಕರೆಯುತ್ತಾರೆ. ನವರಂಗದಲ್ಲಿ ರಾಮ-ಲಕ್ಷ್ಮಣ, ಸೀತೆ-ಮಾತೆ, ಭರತ ಮತ್ತು ಶತೃಘ್ನರ ಶಿಲ್ಪಗಳಿವೆ. ಅಲ್ಲದೆ ಪಂಚಲೋಹದಿಂದ ತಯಾರಿಸಿರುವ ರಾಮಾನುಜಾಚಾರ್ಯರು, ನಮ್ಮಾಳವರ್, ವಿಶ್ವಶೇನರ್ ವಿಗ್ರಹಗಳಿವೆ. (ಚಿತ್ರಸಂಖ್ಯೆ-72) ಶ್ರೀ ವೈಷ್ಣವ ಪರಂಪರೆಗೆ ಪೂರಕವಾಗಿ ಪೂಜಾಕೈಂಕರ್ಯಗಳು ನಡೆಯುತ್ತಿರುತ್ತವೆ. ನಂತರದ ಭಾಗದಲ್ಲಿ ಮಹಾದ್ವಾರವನ್ನು ನಿರ್ಮಿಸಲಾಗಿದೆ. ದ್ವಾರದ ಒಳಗೆ ಧ್ವಜಗಂಭ ಮತ್ತು ಬಲಿಪೀಠ ಇದೆ. ದ್ವಾರದಲ್ಲಿಯೂ ಸಹ ಕಂಬಗಳಿಂದ ಕೂಡಿದೆ. ದೇವಾಲಯದ ಹೊರಭಾಗದಲ್ಲಿ ಗರುಡ ಕಂಬ ಇದೆ. ಇದು ಸುಮಾರು 60 ಅಡಿ ಎತ್ತರದ್ದಾಗಿದೆ. ಕಂಬದಲ್ಲಿ ವೀರಾಂಜನೇಯನ ಉಬ್ಬು ಶಿಲ್ಪ, ಶಂಖ, ಚಕ್ರ, ತ್ರಿನಾಮವನ್ನು ಹೊಂದಿದೆ. (ಚಿತ್ರಸಂಖ್ಯೆ-73)

ಚಾಮರಾಜನಗರ ತಾಲ್ಲೂಕಿನ ಅರಕಲವಾಡಿಯಲ್ಲಿರುವ ಶಿಲಾಶಾಸನದ ಪ್ರಕಾರ ವಿಜಯನಗರ ದೊರೆಯಾದ ಸದಾಶಿವರಾಯರು ಆಳ್ವಿಕೆ ನಡೆಸುತ್ತಿದ್ದಾಗ ಮಹಾಮಂಡಳೇಶ್ವರರಾದ ಗೊಬೂರ ತಿಂದುಯ ದೇವ ಮಹಾರಾಜರ ಪುತ್ರರಾದ ರಂಗರಾಜಯ್ಯದೇವ ಮಹಾರಾಜರುಗಳು ತೆರಕಣಾಂಬಿಯ ವರದರಾಜ ದೇವರಿಗೆ ರಥೋತ್ಸವಕ್ಕೆ ದಾನ ನೀಡಿರುವುದು ತಿಳಿದುಬರುತ್ತದೆ.[60]

ಈ ಶಾಸನದ ಕಾಲ ಕ್ರಿ.ಶ.1555 ಪ್ರಾಚೀನ ಕಾಲದಿಂದಲೂ ತೆರಕಣಾಂಬಿಯಲ್ಲಿ ಬ್ರಹ್ಮೋತ್ಸವಗಳು ನಡೆದಿರುವುದು ತಿಳಿದುಬಂದಿದೆ. ಉತ್ಸವವಾದ ತದನಂತರ ದೇವರನ್ನು

ದೇವಾಲಯದ ಒಳಗೆ ತೆಗೆದುಕೊಂಡು ಹೋಗುವಂತಿರಲಿಲ್ಲ. ದೇವರನ್ನು ಹೊರಗಡೆಯೇ ಇಳಿಸಿ ದೇವಾಲಯದ ಮುಂದೆ ಮಂಟಪದಲ್ಲಿ ಪೂಜೆ ಪುನಸ್ಕಾರಗಳನ್ನು ಮಾಡಿ ರಥವನ್ನು ಈ ಸ್ಥಳದಲ್ಲಿಯೇ ನಿಲ್ಲಿಸುತ್ತಿದ್ದರು.

ಬ್ರಹ್ಮೋತ್ಸವದ ನಂತರ ತೇರನ್ನು ನಿಲ್ಲಿಸುತ್ತಿದ್ದ ಈ ಸ್ಥಳವನ್ನು ತೇರಡಿಮಂಟಪ ಎಂದು ಕರೆಯುತ್ತಾರೆ. ಈ ರಥೋತ್ಸವಕ್ಕೆ ತೇರ ಕಾಣಿಕೆಯನ್ನು ನೀಡಿರುವುದು ಶಿಲಾಶಾಸನದಿಂದ ತಿಳಿದುಬರುತ್ತದೆ.[61] ಮೇ ತಿಂಗಳಲ್ಲಿ ಈ ಗ್ರಾಮದ ಕುಂಬಾರ ಶೆಟ್ಟರ ಜನಾಂಗಕ್ಕೆ ಸೇರಿದವರು ವಿಜೃಂಭಣೆಯಿಂದ ರಾಮೋತ್ಸವವನ್ನು ನಡೆಸುವ ಪರಿಪಾಠ ಇದೆ. ಈ ಹಬ್ಬದ ಸಮಯದಲ್ಲಿ ರಾಮನ ವಿಗ್ರಹಕ್ಕೆ ಪೂಜೆ ಮಾಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವ ಪದ್ಧತಿ ಇದೆ. ನವೆಂಬರ್–ಡಿಸೆಂಬರ್ ತಿಂಗಳಲ್ಲಿ ಈ ಗ್ರಾಮದ ದಾಸ ಬಣಂಜಿಗ ಸಂಘದವರಿಂದ ಪ್ರತಿವರ್ಷವು ಕೂಡ ವಿಷ್ಣು ದೀಪೋತ್ಸವವನ್ನು ನಡೆಸುತ್ತಾರೆ. ಆ ದಿನ ಸಾಕಷ್ಟು ಸಂಖ್ಯೆಯಲ್ಲಿ ಸಾವಿರಾರು ದೀಪಗಳನ್ನು ಬೆಳಗಿಸುವ ಪರಂಪರೆ ಸಂಪ್ರದಾಯವಿದೆ. ಆ ದಿನ ವಿಶೇಷ ಪೂಜೆ, ಪುನಸ್ಕಾರಗಳು ಅಲ್ಲದೆ ಪ್ರಸಾದ ವಿನಿಯೋಗವನ್ನು ಸಹ ಮಾಡುವ ಪರಿಪಾಠ ಇದೆ. ತೆರಕಣಾಂಬಿಯ ಈ ವರದರಾಜಸ್ವಾಮಿ ದೇವಾಲಯದ ಇನ್ನೊಂದು ವಿಶೇಷತೆ ಏನೆಂದರೆ, ಮೈಸೂರಿನ ಒಡೆಯರ್ ಸಹ ಇಲ್ಲಿಗೆ ಬಂದು ಪೂಜೆ ಸಲ್ಲಿಸುತ್ತಿದ್ದರು ಎಂಬ ಹೇಳಿಕೆಗಳಿವೆ. ಅದಕ್ಕಾಗಿಯೇ ಮೈಸೂರಿನಿಂದ ತೆರಕಣಾಂಬಿಯವರೆಗೆ ವರದರಾಜಸ್ವಾಮಿ ದೇವಾಲಯದ ಒಳಗೆ ಸುರಂಗಮಾರ್ಗ ಇತ್ತೆಂದು ಪ್ರತೀತಿ ಇದೆ. ಆದರೆ ಈಗ ಅದು ಮುಚ್ಚಲಾಗಿದೆ ಎಂಬ ವಿಚಾರವನ್ನು ದೇವಾಲಯದ ಅರ್ಚಕರು ವ್ಯಕ್ತಪಡಿಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಅಂದರೆ ಸುಮಾರು 20 ವರ್ಷಗಳ ಹಿಂದೇ ಶ್ರೀ ಧರ್ಮಸ್ಥಳದ ಶ್ರೀ ಕ್ಷೇತ್ರ ಧರ್ಮಾಧಿಕಾರಿಗಳ ಸಹಕಾರದೊಂದಿಗೆ ಸರ್ಕಾರ ಹಾಗೂ ಸ್ಥಳೀಯ ಗ್ರಾಮದವರ ಸಹಕಾರದಿಂದ ಜೀರ್ಣೋದ್ಧಾರವಾಗಿದೆ.

ತೆರಕಣಾಂಬಿಯಲ್ಲಿ ವೀರಶೈವರು, ನಾಯಕರು, ಕುರುಬರು, ಉಪ್ಪಾರರು, ಹರಿಜನರು, ಬ್ರಾಹ್ಮಣರು, ಕುಂಬಾರರು, ಮುಸಲ್ಮಾನರು ಮತ್ತು ಇನ್ನಿತರ ಜನಾಂಗದವರು ನೆಲೆಸಿರುವುದು ತಿಳಿದುಬರುತ್ತದೆ. ಈ ಊರಿನಲ್ಲಿ ಸ್ಥಳೀಯ ಹಬ್ಬಗಳ ಆಚರಣೆ ಕೇವಲ ವೈಯಕ್ತಿಕವಾಗಿರದೆ ಹೆಚ್ಚು ಕಡಿಮೆ ಗ್ರಾಮದ ಹಬ್ಬಗಳೇ ಆಗಿ ಪರಿಣಮಿಸುತ್ತದೆ. ಯುಗಾದಿ–ಗೌರಿಹಬ್ಬ, ಬಸವನಹಬ್ಬ, ಸಂಕ್ರಾಂತಿ, ಶಿವರಾತ್ರಿಗಳು ನಡೆಯುತ್ತವೆ. ತೆರಕಣಾಂಬಿಯಲ್ಲಿ ಮಾರಿ ಹಬ್ಬದ ಆಚರಣೆಗಳು, ಮಾರಮ್ಮನ ಜಾತ್ರೆ ಈ ಊರಿಗೆ ದೊಡ್ಡ ಹಬ್ಬವೆಂದೇ ಭಾವಿಸುತ್ತಾರೆ. ತೆರಕಣಾಂಬಿಯಲ್ಲಿ ಸಂತೆ ನಡೆಯುತ್ತದೆ. ಇದು ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ. ರಣಧೀರ ಕಂಠೀರವ

ನರಸರಾಜ ಒಡೆಯರ್‌ರವರು ಇದೇ ಗ್ರಾಮದಲ್ಲಿ ತಮ್ಮ ಬಾಲ್ಯ ಜೀವನವನ್ನು ನಂತರ ಯೌವ್ವನದ ದಿನಗಳನ್ನು ಸಹ ಕಳೆದಿದ್ದಾರೆಂದು ತಿಳಿದುಬರುತ್ತದೆ. ಸಂಸರ ಪ್ರಸಿದ್ಧ ನಾಟಕ ವಿಗಡವಿಕ್ರಮರಾಯದ ನಾಯಕ ವಿಕ್ರಮರಾಯ ಇಲ್ಲಿಯವನೇ, ಹೀಗೆ ಇನ್ನೂ ಅನೇಕ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಗ್ರಾಮ ಸಹ ಆಗಿದೆ. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವವು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಒಂದು ಜಾತ್ರೆಯು ಸಹ ಆಗಿತ್ತು. ಆದರೆ ಮಧ್ಯದಲ್ಲಿ ಈ ಜಾತ್ರೆ ನಿಂತುಹೋಗಿತ್ತು. ಮತ್ತೆ 2010 ರಿಂದ ಜಾತ್ರೆಯು ನಡೆದುಕೊಂಡು ಬರುತ್ತಿದೆ. 2010ರ ಜನವರಿ ತಿಂಗಳಲ್ಲಿ ಇಲ್ಲಿನ ಲಕ್ಷ್ಮೀ ವರದರಾಜಸ್ವಾಮಿ ಜಾತ್ರೆಯ ರಥೋತ್ಸವ ಕಾರ್ಯವನ್ನು ನಡೆಸಲು ಸ್ಥಳೀಯ ತೆರಕಣಾಂಬಿಯ ಸಕಲ ಭಕ್ತರು ನಿರ್ಧಾರ ಮಾಡಿ ಸುಮಾರು ಎಂಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಹೊಸದಾಗಿ ರಥವನ್ನು ಮಾಡಿಸಿ ದಿನಾಂಕ 21-11-2009ನೇ ಶನಿವಾರದಿಂದ 23-11-2009ನೇ ಸೋಮವಾರದವರೆಗೂ ಪಂಚ ರಾತ್ರಾಗಮ ರೀತಿಯಲ್ಲಿ ಪೂಜಾ ಕಾರ್ಯಗಳನ್ನು ನೆರವೇರಿಸಲಾಯಿತು. ಅಲ್ಲದೆ ಶ್ರೀ ಲಕ್ಷ್ಮೀವರದರಾಜಸ್ವಾಮಿ ಚಿರಬಿಂಬ ನೂತನ ಧ್ವಜಸ್ತಂಭ ಮತ್ತು ನೂತನ ರಥ ಪ್ರತಿಷ್ಠಾಪನಾ ಮಹೋತ್ಸವ ನೆರವೇರಿತು. ಜಾತ್ರಾ ಮಹೋತ್ಸವ ಸಮಯದಲ್ಲಿ ಸ್ವಸ್ತಿವಾಚನ ಪುಣ್ಯಾಹ, ಆಚಾರ್ಯ ಋತ್ವಿಕ್ ವರುಣ, ರಕ್ಷಾಬಂಧನ, ಮೃತ್ಸಂಗ್ರಹಣ, ಪೂರ್ವಕ ಅಂಕುರಾರ್ಪಣ, ದ್ವಾರತೋರಣ ಆರಾಧನೆ, ಜಲಾದಿವಾಸ, ಕಲಶಾಧಿವಾಸ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ  ಹೀಗೆ ಅನೇಕ ಬಗೆಯ ಕಾರ್ಯಕ್ರಮಗಳು ನಡೆಯುತ್ತದೆ. ಪ್ರತಿವರ್ಷವು ಮಾಘ ಶುದ್ಧ ಪೂರ್ಣಿಮೆ ದಿನ ರಥೋತ್ಸವ ನಡೆಯುತ್ತದೆ. ಪಂಚರಾತ್ರಾಗಮ ರೀತಿ ಪೂಜಾ ಕಾರ್ಯಗಳು ನಡೆದುಕೊಂಡು ಬಂದಿವೆ. ಶ್ರೀ ಲಕ್ಷ್ಮೀ ವರದರಾಜಸ್ವಾಮಿ ರಥೋತ್ಸವಕ್ಕೆ ಎಲ್ಲಾ ಸಮುದಾಯ ಸೇರಿ ದೇಣಿಗೆ ನೀಡುತ್ತಾರೆ. ರಥೋತ್ಸವ ಸಮಿತಿಯ ಗ್ರಾಮಸ್ಥರು, ಮುಜರಾಯಿ ಇಲಾಖೆಯ ಅಧಿಕಾರಿಗಳ ಸಹಯೋಗದೊಡನೆ ಶ್ರೀ ಲಕ್ಷ್ಮೀ ವರದರಾಜ  ರಥೋತ್ಸವದ ಜಾತ್ರೆಯು ನಡೆಯುತ್ತದೆ.

ಜಾತ್ರೆಯು ಛತ್ರಿ ಚಾಮರ, ವಾದ್ಯದೊಡನೆ ಭಕ್ತಾಧಿಗಳು ರಥವನ್ನು ದೇವಸ್ಥಾನದಿಂದ ಶ್ರೀ ಹನುಮಂತರಾಯ ದೇವಸ್ಥಾನವನ್ನು ಬಳಸಿಕೊಂಡು ನಂತರ ದೇವಾಲಯದ ಮುಂದೆ ಬಂದು ರಥವು ನಿಂತುಕೊಳ್ಳುತ್ತದೆ. ಶ್ರೀ ಲಕ್ಷ್ಮೀ ವರದರಾಜಸ್ವಾಮಿ ದೇವಾಲಯದ 109 ಜನ ಸದಸ್ಯರು ಇರುತ್ತಾರೆ.

ಪ್ರತಿವರ್ಷ ಯುಗಾದಿ ಹಬ್ಬದ ದಿನ ವಿಶೇಷ ಪೂಜೆ ನಡೆಯುತ್ತದೆ. ಆಷಾಡ ಶುಕ್ರವಾರ ದಿನಗಳಲ್ಲಿ ಅಮ್ಮರವರಿಗೆ ವಿಶೇಷವಾದ ಪೂಜೆಯನ್ನು ನಡೆಸಲಾಗುತ್ತದೆ. ವಿಜಯದಶಮಿಯ

ದಿನ ದೇವರಿಗೆ ವಿಶೇಷ ಪೂಜೆ ನಡೆಯುತ್ತದೆ. ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನದ ಬಳಯಿರುವ ಕೊಳದ ಬದಿಯವರೆಗೆ ಮೆರವಣಿಗೆ ಮೂಲಕ ಕೊಂಡೊಯ್ಯಲಾಗುತ್ತದೆ. ಅಲ್ಲಿ ಬನ್ನಿಮರಕ್ಕೆ ಪೂಜೆ ಸಲ್ಲಿಸಿದ ನಂತರ ಉತ್ಸವಮೂರ್ತಿಯು ದೇವಸ್ಥಾನಕ್ಕೆ ಹಿಂದಿರುಗುವಾಗ ಮೆರವಣಿಗೆ, ಪೂಜೆ ಸಲ್ಲಿಸಲಾಗುತ್ತದೆ. ಕಾರ್ತಿಕ ಮಾಸದಲ್ಲಿ ವಿಷ್ಣು ದೀಪೋತ್ಸವ ನಡೆಯುತ್ತದೆ. ಅಲ್ಲದೆ ಧನುರ್ಮಾಸದಲ್ಲಿಯೂ ಸಹ ವಿಶೇಷ ಪೂಜೆಗಳು ನಡೆಯುತ್ತದೆ. ಆದರೆ ವರ್ಷಕ್ಕೆ ಒಂದು ಸಾರಿ ಮಾತ್ರ ಜಾತ್ರೆ ನಡೆಯುತ್ತದೆ. (ಚಿತ್ರಸಂಖ್ಯೆ-74)

## ಕಂಠೀರವ ಆಂಜನೇಯ ದೇವಾಲಯ

ಈ ದೇವಾಲಯವು ತೆರಕಣಾಂಬಿಯ ಮುಖ್ಯರಸ್ತೆಯಲ್ಲಿ ಉತ್ತರಾಭಿಮುಖವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ತೆರೆದ ಶುಕನಾಸಿ ಅಥವಾ ಅಂತರಾಳ, ಮುಖಮಂಟಪವನ್ನು ಹೊಂದಿದೆ. ಈ ಆಂಜನೇಯ ದೇವಾಲಯವನ್ನು ಕ್ರಿ.ಶ.1640 ರಲ್ಲಿ ನಿರ್ಮಿಸಲಾಗಿದೆ.[62] ಈ ಶಿಲಾಶಾಸನದ ಪ್ರಕಾರ, ವೆಂಕಟಪತಿ ಮಹಾರಾಯನ ಕಾಲದಲ್ಲಿ ಮೈಸೂರು ಅಧಿಪ ನರಸರಾಜಯ್ಯನು ತೆರಕಣಾಂಬಿ ಸೀಮೆಯ ಹಂಗಳ ಸ್ಥಳದ ಪುತ್ತನಪುರವೆಂಬ ಗ್ರಾಮವನ್ನು ತೆರಕಣಾಂಬಿಯಲ್ಲಿರುವ ಹನುಮಂತಸ್ವಾಮಿ ದೇವರ ಪೂಜೆ ಹಾಗೂ ಅನ್ನದಾನ ನಡೆಸುವ ಸಲುವಾಗಿ ನೀಡಿದ ವಿಚಾರ ಈ ಶಾಸನ ಪಾಠದಿಂದ ತಿಳಿದುಬರುತ್ತದೆ. ಈ ಆಂಜನೇಯವನ್ನು ವಿಜಯನಗರ ಅರಸರು, ಉಮ್ಮತ್ತೂರು ಪಾಳೇಗಾರರ ಕಾಲಕ್ಕೆ ಸೇರಿಸಬಹುದಾಗಿದೆ. ಮೂಲಗರ್ಭಗುಡಿಯಲ್ಲಿ ಸುಮಾರು 8 ಅಡಿ ಎತ್ತರದ ಆಂಜನೇಯ ಶಿಲ್ಪ ಸೊಗಸಾಗಿದೆ. ಮೇಲ್ಭಾಗದಲ್ಲಿ ಭುವನೇಶ್ವರಿಯ ಕೆತ್ತನೆ ಇದೆ. ದ್ವಾರದ ಲಲಾಟಬಿಂಬದಲ್ಲಿ ಶಂಖ, ಚಕ್ರ, ತ್ರಿನಾಮಗಳ ಕೆತ್ತನೆ ಇದೆ. ಅದು ಅಲ್ಲದೆ ದ್ವಾರದ ನಿಲುವು ಕಂಬಗಳಲ್ಲಿ ಬಳ ಸುರುಳಿ ಕೆತ್ತನೆಯನ್ನು ಮಾಡಲಾಗಿದೆ.

ಮುಖಮಂಟಪಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳಿವೆ. ಈ ಕಂಬಗಳಲ್ಲಿ ಗಣಪತಿ, ವಿಷಕನ್ಯೆ, ವಿಷ್ಣು, ಉಗ್ರನರಸಿಂಹ, ವರಾಹಿ, ರಾಮ, ಕುರುಮ ಅವಾತಾರ, ಗಜ ಸಂಹಾರ, ರುದ್ರವೀಣೆ ಹಿಡಿದಿರುವ ಮನುಷ್ಯ, ಯೋಗಿ, ಹನುಮಂತ, ವೇಣುಗೋಪಾಲ, ಗರುಡ, ಕಂಬ ನರಸಿಂಹ, ಯೋಗಾನರಸಿಂಹ, ವರದನರಸಿಂಹ, ಹಿರಣ್ಯಕಶಿಪು, ಉಗ್ರನರಸಿಂಹ, ಲಕ್ಷ್ಮೀನರಸಿಂಹ, ಲಕ್ಷ್ಮಿ ಹಯಗ್ರೀವ, ದಶಾವತಾರಗಳು, ವರದರಾಜ, ಕಾಳಿಂಗಮರ್ಧನ, ವಿದ್ಯಾಗಣಪತಿ, ಅಂಬೆಗಾಲಿನ ಕೃಷ್ಣ ಮತ್ತು ವಿದ್ಯಾಧರಿಯರ ಕೆತ್ತನೆಗಳನ್ನು ಕಂಬಗಳಲ್ಲಿ ಕಾಣಬಹುದಾಗಿದೆ. ಈ ದೇವಾಲಯದಲ್ಲಿ ಒಂದು ಶಾಸನ ಕಲ್ಲು ಇದ್ದು, ಅದರಲ್ಲಿ ಚಕ್ರ, ಮುನಿ, ಮತ್ತು ಶಂಖವನ್ನು ಕೆತ್ತಲಾಗಿದೆ. ಆದಕಾರಣ ಇದೊಂದು ವೈಷ್ಣವ ಪರಂಪರೆಯನ್ನು

ವ್ಯಕ್ತಪಡಿಸುವ ಶಾಸನವಾಗಿದೆ. ಮುಖಮಂಟಪದ ಮೇಲ್ಭಾಗದಲ್ಲಿ ಚೌಕಾಕಾರದ ಭುವನೇಶ್ವರಿಯನ್ನು ಮಾಡಲಾಗಿದ್ದು, ಅದರ ಸುತ್ತಲೂ ಸಣ್ಣ ಸಣ್ಣ ಗಣಗಳ ಮಾದರಿಯಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಇದು ತುಂಬಾ ಸೊಗಸಾದ ಸನ್ನಿವೇಶಗಳನ್ನು ವ್ಯಕ್ತಪಡಿಸುತ್ತದೆ.

ರಾಮಲಕ್ಷ್ಮಣರು, ವಿಶ್ವಾಮಿತ್ರ ತಾಟಕ, ಮಾರೀಚಕ, ಸುಬಾಹು ಸಂಹಾರ, ಅಹಲ್ಯಾಮೋಕ್ಷ, ಶಿವ ಧನಸ್ಸನ್ನು ಮುರಿದ ರಾಮ, ಪರಶುರಾಮನ ಸೋಲು ಇನ್ನೂ ಮೊದಲಾದ ರಾಮಾಯಣಕ್ಕೆ ಸಂಬಂಧಿಸಿದ ವಿಚಾರಗಳನ್ನು ಶಿಲ್ಪಕಲೆಯಲ್ಲಿ ಕೆತ್ತನೆಯಾಗಿರುವುದು ಒಂದು ವಿಶೇಷವೇ ಎನ್ನಬಹುದಾಗಿದೆ. (ಚಿತ್ರಸಂಖ್ಯೆ-75)

ಈ ದೇವಾಲಯದ ಮುಂದೆ ಪ್ರಸ್ತುತ ಈಗ ಒಂದು ಜೈನ ಶಿಲ್ಪವನ್ನು ಇಡಲಾಗಿದೆ. ಶಿಲ್ಪ ವಿಕೃತವಾಗಿದ್ದು, ತನ್ನ ಮೂಲವಾಸ್ತುವನ್ನು ಕಳೆದುಕೊಂಡಿದೆ. ಆದರೂ ಕೂಡ ಈ ಶಿಲ್ಪವನ್ನು ಪಾರ್ಶ್ವನಾಥ ಶಿಲ್ಪವೆಂದು ಪರಿಗಣಿಸಬಹುದಾಗಿದೆ. ತೆರಕಣಾಂಬಿಯಲ್ಲಿ ಜೈನಧರ್ಮಕ್ಕೆ ಸೇರಿದ ಬಸದಿ ಇತ್ತೆಂದು ಸ್ಥಳೀಯರ ಅಭಿಪ್ರಾಯವಾಗಿದೆ. ಆದರೆ ಪ್ರಸ್ತುತ ಬಸದಿ ಇಲ್ಲ. ಆದರೂ ಕೂಡ ಈ ಒಂದು ಶಿಲ್ಪದ ಕುರುಹುನಿಂದ ಜೈನ ಧರ್ಮ ಇತ್ತು ಎಂದು ಹೇಳಬಹುದಾಗಿದೆ. ಹನುಮಂತ ಮಂಟಪದಲ್ಲಿ ಪಶ್ಚಿಮದ ಕಡೆ ನೆಟ್ಟಕಲ್ಲು ಶಾಸನದ ಪ್ರಕಾರ ಕ್ರಿ.ಶ.1640ರಲ್ಲಿ ಅಂದರೆ ಶಕವರುಷ 1562ರ ವಿಕ್ರಮ ಸಂವತ್ಸರದ ಪುಷ್ಯ ಶು 5ಯ ಸೋಮವಾರದಂದು ಶ್ರೀ ಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರ ವೆಂಕಟಪತಿದೇವ ಮಹಾರಾಯರವರು ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ ಶ್ರೀ ಮಂಮಹಾಮೈಸೂರ ಅಧಿಪ ನರಸುರಾಜ ಅಯ್ಯನವರು ತೆರಕಣಾಂಬಿಯಲಿ ಕೆಂಪನಾರಸಿಂಹಸ್ ಎಟ್ಟರು ನೂತನ ಪ್ರತಿಷ್ಠಿಯಾಗಿ ತೆರಕಣಾಂಬಿಯ ನಡುಕೇರಿಯಲ್ಲಿ ಹೊಸದಾಗಿ ಮಂಟಪವನ್ನು ನಿರ್ಮಿಸಿ ಹನುಮಂತರಾಯನನ್ನು ಪ್ರತಿಷ್ಠೆ ಮಾಡಿಸಿ ಅಲ್ಲಿನ ದೇವರ ಕೆಲಸ ಸರ್ವಮಾನ್ಯವಾಗಿ ನಡೆಯಲೆಂದು ಬ್ರಾಹ್ಮಣರಿಗೂ ಒಳ್ಳೆಯದು ಆಗಲೆಂದು ಈ ಗ್ರಾಮದ ಚತುಸ್ಸೀಮೆವೊಳಗಾದ ಭೂಮಿಯನ್ನು ದಾನವಾಗಿ ನೀಡಿರುವುದು ತಿಳದುಬರುತ್ತದೆ.[62ಎ]

## ಹುಲುಗಿನ ಮರಡಿ ವೆಂಕಟರಮಣಸ್ವಾಮಿ ದೇವಾಲಯ

ಹುಲಗಿನ ಮರಡಿಯು ತೆರಕಣಾಂಬಿಯಿಂದ ಆಗ್ನೇಯ ದಿಕ್ಕಿಗೆ ಸರಿಸುಮಾರು ಎಂಟು ಕಿಲೋಮೀಟರ್ ದೂರದಲ್ಲಿ ಮರಡಿ ಅಥವಾ ಮಾರಡಿ ಬೆಟ್ಟ ಇದೆ. ಈ ಬೆಟ್ಟವು ಸುಮಾರು 800 ಅಡಿಗಳ ಎತ್ತರವನ್ನು ಹೊಂದಿದೆ. ಈ ನೆಲೆಯ ಸ್ಥಳಪುರಾಣದ ಪ್ರಕಾರ ಶ್ರೀನಿವಾಸ ಕ್ಷೇತ್ರವಾದ ಇದನ್ನು ದಕ್ಷಿಣ ಶೇಷಾದ್ರಿ ಕ್ಷೇತ್ರವೆಂದೂ ಕರೆಯಲಾಗಿದೆ. ಕೃತಯುಗದಲ್ಲಿ

ಶೇಷಾದ್ರಿಯೆಂತಲೂ, ತ್ರೇತಾಯುಗದಲ್ಲಿ ಕನಕಾದಿಯೆಂತಲೂ, ದ್ವಾಪರಯುಗದಲ್ಲಿ ವೆಂಕಟಾದ್ರಿಯೆಂತಲೂ, ಪ್ರಸ್ತುತ ಕಲಿಯುಗದಲ್ಲಿ ವ್ಯಾಘ್ರಾದಿ (ಹುಲುಗಿನ ಮೊರಡಿ) ಎಂತಲೂ ಕರೆಯುವ ವಾಡಿಕೆ ಇದೆ ಎಂಬುದನ್ನು ತಿಳಿಸುತ್ತಾರೆ.[63] ಮಾಂಡವಿ ಋಷಿ ತಪಸ್ಸು ಮಾಡಿದಾಗ ವೆಂಕಟೇಶ ಪ್ರತ್ಯಕ್ಷನಾಗಿ ಅವರ ಮನವಿಯಂತೆ ಶ್ರೀದೇವಿ, ಭೂದೇವಿ ಮತ್ತು ನೀಳಾದೇವಿಯೊಡನೆ ಇಲ್ಲಿ ನೆಲೆನಿಂತರು ಎಂಬ ಪುರಾಣದ ಹಿನ್ನೆಲೆಯೂ ಕೂಡ ಹುಲಗನ ಮುರಡಿ ಕ್ಷೇತ್ರಕ್ಕೆ ಇದೆ.[64] ತೆರಕಣಾಂಬಿಯ ಸಾಹುಕಾರ ದಾಸಕೇಶವ ಶೆಟ್ಟಿ ಎಂಬುವವನು ಕ್ರಿ.ಶ.1498 ರಲ್ಲಿ ಹುಲುಗನ ಮುರಡಿ ವೆಂಕಟರಮಣಸ್ವಾಮಿ ದೇವಾಲಯವನ್ನು ಕಟ್ಟಿಸಿದನು. ನಂತರ ಕ್ರಿ.ಶ.1620ರಲ್ಲಿ ಚಿಕ್ಕಹಳ್ಳಿ ಅಪ್ಪಣ್ಣಗೌಡ ಎಂಬುವವರು ನಾಲ್ಕು ಅಂಕಣ ಕೈಸಾಲೆಯನ್ನು ಕಟ್ಟಿಸಿದರು. ಕ್ರಿ.ಶ.1629ರಲ್ಲಿ ದೇವಾಲಯದ ವೈಕುಂಠ ನಾರಾಯಣಸ್ವಾಮಿ ಮತ್ತು ಅಮ್ಮರವರ ಗುಡಿಯನ್ನು ತೆರಕಣಾಂಬಿಯ ದೊಡ್ಡನಾರಾಯಣಪ್ಪ ಎಂಬುವವರು ಕಟ್ಟಿಸಿದರು. ಕ್ರಿ.ಶ.1678ರಲ್ಲಿ ತೆರಕಣಾಂಬಿಯ ಚೆನ್ನಯ್ಯ ಶೆಟ್ಟಿ ಎಂಬುವವರು ಪಾತಾಳ ಮಂಟಪವನ್ನು ಕಟ್ಟಿಸಿದರು. ಚಿಕ್ಕದೇವರಾಜ ಒಡೆಯರ ಹೆಂಡತಿ ದೊಡ್ಡ ಮುದ್ದಮ್ಮನವರೂ ಈ ಬೆಟ್ಟದ ಮೇಲಿನ ಕೋಟೆಯನ್ನು ಕ್ರಿ.ಶ.1696ರಲ್ಲಿ ಕಟ್ಟಿಸಿದರು ಎಂಬುದನ್ನು ನಾವು ತಿಳಿಯಬಹುದಾಗಿದೆ.[65]

ಹುಲಗನ ಮುರಡಿ ಶ್ರೀ ವೆಂಕಟರಮಣಸ್ವಾಮಿ ದೇವಾಲಯ ದಕ್ಷಿಣಾಭಿಮುಖವಾಗಿದೆ. (ಚಿತ್ರಸಂಖ್ಯೆ–76) ತಳವಿನ್ಯಾಸದಲ್ಲಿ ಮೂರು ಗರ್ಭಗೃಹವನ್ನು, ಶುಕನಾಸ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಮಧ್ಯದ ಮೂಲಗರ್ಭಗುಡಿಯಲ್ಲಿ ಸುಮಾರು 7 ಅಡಿ ಎತ್ತರವಿರುವ ಭೂ ನೀಳಾದೇವಿಯ ಜೊತೆಗೆ ವೆಂಕಟರಮಣ ಸ್ವಾಮಿಯ ಶಿಲ್ಪವು ಇದೆ. (ಚಿತ್ರಸಂಖ್ಯೆ–77) ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರ ಶಿಲ್ಪಗಳು ಸಹ ಇವೆ. ಇಕ್ಕೆಲಗಳ ಗುಡಿಯಲ್ಲಿ ಅಮ್ಮರವರ ಶಿಲ್ಪ ಹಾಗೂ ಇನ್ನೊಂದು ಗುಡಿಯಲ್ಲಿ ಶ್ರೀ ಭೂ ನೀಳಾದೇವಿಯ (ಅಂಡಾಳ್) ಶಿಲ್ಪಗಳಿವೆ. ಈ ಗರ್ಭಗೃಹಗಳು 6x6 ಅಡಿ ಚದರ ಸುತ್ತಳತೆಯನ್ನು ಹೊಂದಿದೆ. ಅದರ ಮುಂದೆ ಒಂದು ಅಂಕಣ ಇದೆ. ಈ ಅಂಕಣವು 8x8 ಅಡಿ ಚದರ ಸುತ್ತಳತೆಯನ್ನು ಹೊಂದಿದೆ. ಇಲ್ಲಿರುವ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪದ ಕೆತ್ತನೆಯನ್ನು ಕೆತ್ತಲಾಗಿದೆ. ಅಲ್ಲದೆ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ನವರಂಗವು ವಿಶಾಲವಾಗಿದ್ದು, ಮಧ್ಯದಲ್ಲಿ 4 ಕಂಬಗಳಿವೆ. ಪೂರ್ವ ದಿಕ್ಕಿಗಿರುವ ಗುಡಿಯಲ್ಲಿ ವೈಕುಂಠ ನಾರಾಯಣಮೂರ್ತಿ ಶಿಲ್ಪ ಇದೆ. ಪಶ್ಚಿಮ ದಿಕ್ಕಿಗೆ ಭೂ ನೀಳಾದೇವಿ ಸಮೇತ ಶ್ರೀನಿವಾಸ ಸ್ವಾಮಿ ಶಿಲ್ಪವಿದೆ. ಇಲ್ಲಿರುವ ದ್ವಾರದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಅಲ್ಲದೆ ಧ್ವಜಗಂಭ, ಬಲಿಪೀಠ ಇದೆ. 16 ಆಳ್ವಾರ್ ಶಿಲ್ಪಗಳು, (ಚಿತ್ರಸಂಖ್ಯೆ–78) ಈ ದೇವಾಲಯದ ಮುಖಮಂಟಪದ ಭಾಗದ ಮೇಲಿನ ಪಟ್ಟಿಕೆಯಲ್ಲಿ ಹಲವಾರು ಗಾರೆ ಶಿಲ್ಪಗಳಿವೆ. ಅವುಗಳಲ್ಲಿ ಕಲ್ಕಿ–ಕುದುರೆ ಮೇಲೆ

ಕುಳಿತಿರುವ ಶ್ರೀ ಕೃಷ್ಣ-ಕೊಳಲು ನುಡಿಸುವುದು, ಬಲರಾಮ-ನೇಗಿಲು ಹೊತ್ತುಕೊಂಡಿರುವುದು, ಶ್ರೀರಾಮ ಬಿಲ್ಲುಬಾಣ ಹಿಡಿದಿರುವುದು, ಪರಶುರಾಮ ಕೊಡಲಿ ಹಿಡಿದಿರುವುದು, ವಾಮನ ಋಷಿಮುನಿ ಛತ್ರಿ ನರಸಿಂಹ ಅವತಾರ, ವರಹ ಅವತಾರ, ಆನೆಮುಖ, ಕೂರ್ಮಾವತಾರ, ಆಮೆ ಮತ್ಸ್ಯಾವತಾರ, ಮೀನಿನ ಮೇಲೆ ಕುಳಿತಿರುವುದು, ಶೇಷಾಶಹಿ ವಿಷ್ಣು, ಸರ್ಪದ ಮೇಲೆ ಮಲಗಿರುವುದು ಹೀಗೆ ಅನೇಕ ಬಗೆಯ ಅವತಾರ ಗಾರೆ ಶಿಲ್ಪಗಳನ್ನು ಕಾಣಬಹುದಾಗಿದೆ. (ಚಿತ್ರಸಂಖ್ಯೆ-79) ಇದೇ ಮಾದರಿಯಲ್ಲಿ ತೆರಕಣಾಂಬಿಯ ಆಂಜನೇಯ ದೇವಾಲಯದ ಕಂಬಗಳಲ್ಲಿ ಉಬ್ಬುಶಿಲ್ಪಗಳ ಮಾದರಿಯಲ್ಲಿ ಕಾಣಬಹುದಾಗಿದೆ. ಶ್ರೀ ಹುಲಗಿನ ಮುರಡಿ ವೆಂಕಟರಮಣಸ್ವಾಮಿ ದೇವಾಲಯದ ಮುಂದೆ ದ್ವಾರಗೋಪುರವನ್ನು 2005, ನವೆಂಬರ್ 21 ರಂದು ನಿರ್ಮಾಣ ಮಾಡಲಾಗಿದೆ. (ಚಿತ್ರಸಂಖ್ಯೆ-80)

ವೈದಿಕ ಸಂಪ್ರದಾಯದ ಪ್ರಕಾರ, ಇಲ್ಲಿ ಪ್ರತಿವರ್ಷವೂ ಜನವರಿ 14ನೇ ತಾರೀಖಿನದ್ದು ಅಥವಾ ಮಕರ ಸಂಕ್ರಾಂತಿ ಹಬ್ಬದ ದಿನಾಂಕದಂದು ವಿಶೇಷವಾಗಿ ಭಕ್ತಿಪೂರ್ವಕವಾಗಿ ಅತ್ಯಂತ ವಿಜೃಂಭಣೆಯಿಂದ ಹುಲುಗಿನ ಮುರಡಿ ರಥೋತ್ಸವ ನಡೆಯುತ್ತದೆ. ಈ ಭಾಗದ ಜನರು ಜಾತ್ರೆಯನ್ನು ಬಹು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

ಹುಲಗನ ಮರಡಿ ಕ್ಷೇತ್ರದಲ್ಲಿ ನಡೆಯುವ ವೆಂಕಟರಮಣಸ್ವಾಮಿ ಜಾತ್ರೆ ವಿಶೇಷತೆ ಇಲ್ಲಿಯ ವೈದಿಕ ವಿಧಿ ಸಂಪ್ರದಾಯದ ಪ್ರಕಾರ ಪ್ರತಿ ವರ್ಷ ಜನವರಿ ತಿಂಗಳು 14 ರಂದು ಅಥವಾ ಮಕರ ಸಂಕ್ರಾಂತಿ ಹಬ್ಬದ ದಿನಕ್ಕೆ ಸರಿಯಾಗಿ ಜಾತ್ರೆ ಹಾಗೂ ಇಲ್ಲಿನ ವೆಂಕಟರಮಣಸ್ವಾಮಿ ರಥೋತ್ಸವ ಕಾರ್ಯ ನಡೆಯುತ್ತದೆ. ಸುಮಾರು 30 ರಿಂದ 40 ಅಡಿ ಎತ್ತರವನ್ನು ಹೊಂದಿರುವ ರಥವನ್ನು ವಿವಿಧ ಬಣ್ಣ ಬಣ್ಣಗಳಿಂದ ಕೂಡಿದ ವಸ್ತ್ರಗಳಿಂದ ಶೃಂಗರಿಸಿರಲಾಗಿರುತ್ತದೆ. ಉದ್ದವಾದ ಹಗ್ಗದಿಂದ ಇಲ್ಲಿರುವ ಭಕ್ತರು ಜಯಘೋಷವನ್ನು ಮಾಡುತ್ತಾ ರಥವನ್ನು ಎಳೆಯುತ್ತಾರೆ. ಇಲ್ಲಿಯ ಶ್ರೀನಿವಾಸ ಅಥವಾ ವೆಂಕಟರಮಣಸ್ವಾಮಿ ಮೂರ್ತಿಯನ್ನು ರಥದಲ್ಲಿ ಕುಳ್ಳಿರಿಸಿ ತೇರನ್ನು ಎಳೆಯುತ್ತಾರೆ. ರಥದ ಮುಂಭಾಗದಲ್ಲಿ ಅರ್ಚಕರು ಮತ್ತು ಭಕ್ತಾದಿಗಳು ಶ್ರೀಮನ್ನಾರಯಣ, ಗೋವಿಂದ, ಗೋವಿಂದ ಎಂದು ಕೂಗುತ್ತಾ, ಹರ್ಷ ಚಿತ್ತರಾಗಿ ತೇರನ್ನು ಎಳೆಯುತ್ತಾರೆ. ತೇರನ್ನು ಎಳೆಯುವ ಸಮಯದಲ್ಲಿ ಹೊಸದಾಗಿ ಮದುವೆಯಾದ ನವದಂಪತಿಗಳು ಹಣ್ಣು ಜವನವನ್ನು ಎಸೆಯುವ ಪರಂಪರೆ ಸಂಪ್ರದಾಯ ಇದೆ.

ರಥೋತ್ಸವದ ಸಮಯದಲ್ಲಿ ಅಂಕುರಾರ್ಪಣದಿಂದ ಆರಂಭವಾಗಿ ಶಿಖರಾರೋಹಣ, ಧ್ವಜಾರೋಹಣ, ಹಂಸಾರೋಹಣ, ಚಂದ್ರಮಂಡಲಾರೋಹಣ, ಅನಂತಪೀಠಾರೋಹಣ,

ಪುಷ್ಪಮಂಟಪಾರೋಹಣ, ಲಕ್ಷ್ಮೀ ಕಲ್ಯಾಣ ಮಹೋತ್ಸವ, ಸಮರಭೂಪಾಲವಾಹನ, ಗಜೇಂದ್ರ ಪರಿಪಾಲನಾ ಪೂರ್ವಕ ಗಜಾರೋಹಣ, ದಿವ್ಯರಥೋತ್ಸವ, ತೋಲೋತ್ಸವ, ವಸಂತೋತ್ಸವ, ಮಹಾಭಿಷೇಕ, ಪುಷ್ಪಯಾಗ ಇನ್ನೂ ಮೊದಲಾದ ಕೈಂಕರ್ಯಗಳು ನಡೆಯುತ್ತದೆ.[66] ಈ ಕ್ಷೇತ್ರದಲ್ಲಿ ಜಾತ್ರೆ ಆರಂಭವಾಗುವುದಕ್ಕೆ ಮೊದಲೇ ಒಂದು ವಾರದಿಂದ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ. ಮಾರ್ಗಶಿರ ಕೃಷ್ಣಪಕ್ಷದ ಕೊನೆಯ ದಿನದಂದು ಅಂಕುರಾರ್ಪಣೆ, ಆದಿವಾಸ ನಂತರ ಶಿಬಿರಾರೋಹಣ ನಡೆಯುತ್ತದೆ.

ಈ ಕ್ಷೇತ್ರದಲ್ಲಿ ಅನೇಕ ಸೇವೆಗಳು ಸಹ ಇವೆ. ಅವುಗಳಲ್ಲಿ ಅಭಿಷೇಕ ಸಾಮಾನು ದೇವಾಲಯದಿಂದಲೇ ಪಡೆಯಬಹುದು. ಮಂಟಪೋತ್ಸವ, ವಿವಾಹ ಉಪನಯನ, ಚೌಲಮುಡಿ, ಬೆಳ್ಳಿಗರಥೋತ್ಸವ, ಬಣ್ಣದ ಗರುಡೋತ್ಸವ, ಕುಂಕುಮಾರ್ಚನೆ, ತುಳಸಿ ಅರ್ಚನೆ, ಕಲ್ಯಾಣೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ.[67] ಧಾರ್ಮಿಕ ಕ್ಷೇತ್ರ, ಹುಲಗಿನ ಮುರಡಿ ವೆಂಕಟರಮಣಸ್ವಾಮಿ ರಥೋತ್ಸವ ವಿಜೃಂಭಣೆಯು ಕಾರ್ಯವನ್ನು ನೋಡಿದರೆ ಇದೊಂದು ಚಿಕ್ಕ ತಿರುಪತಿ ಎನ್ನಬಹುದಾಗಿದೆ. ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಚಿಕ್ಕ ತಿರುಪತಿ ಖ್ಯಾತಿಯ ಈ ಜಾತ್ರೆ ಪ್ರತಿವರ್ಷ ಮಕರ ಸಂಕ್ರಾಂತಿಯಂದೇ ಸಾವಿರಾರು ಭಕ್ತರ ಸಮ್ಮುಖದಲ್ಲಿಯೇ ಸಡಗರ ಮತ್ತು ಸಂಭ್ರಮದಿಂದ ನಡೆಯುತ್ತದೆ. ಇತಿಹಾಸ ಪ್ರಸಿದ್ಧ ಶ್ರೀ ಕ್ಷೇತ್ರದಲ್ಲಿ ವೆಂಕಟರಮಣಸ್ವಾಮಿ ಜಾತ್ರೆಯ ಹಿನ್ನೆಲೆಯಲ್ಲಿ ದೇವಾಲಯ ಮತ್ತು ಇತರೆ ಕಟ್ಟಡಗಳಿಗೆ ಸುಣ್ಣ, ಬಣ್ಣ ಬಳದು ತಳಿರುತೋರಣಗಳಿಂದ ಶೃಂಗರಿಸಲಾಗುತ್ತದೆ. ಜನವರಿ ಮೊದಲನೆಯ ವಾರದಿಂದಲೇ ಧಾರ್ಮಿಕ ಕಾರ್ಯಗಳು ಸಾಂಗವಾಗಿ ನೆರವೇರುವುದು ಸಂಪ್ರದಾಯವಾಗಿದೆ. ಈ ಕ್ಷೇತ್ರಕ್ಕೆ ರಾಜ್ಯದ ನಾನಾ ಭಾಗಗಳಿಂದ ಭಕ್ತರು ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸುತ್ತಾರೆ. ಅಲ್ಲದೆ ಅರ್ಚಕರು ಕೂಡ ನಾನಾ ಕಡೆಗಳಿಂದ ಬರುತ್ತಾರೆ.

ಭಕ್ತ ಸಾಗರವೇ ಸಾಗರ – ಈ ಜಾತ್ರೆಯ ಸಂದರ್ಭದಲ್ಲಿ ಸುಗ್ಗಿ ಮುಗಿದು ಕೃಷಿ ಕೆಲಸಕ್ಕೆ ಬಿಡುವಾದ ಹಿನ್ನೆಲೆಯಲ್ಲಿ ತಾಲ್ಲೂಕಿನವರು ಮತ್ತು ರಾಜ್ಯದ ನಾನಾ ಕಡೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ಕಾರಣ ದೇವಾಲಯದ ಆವರಣ, ಬೆಟ್ಟದ ತಪ್ಪಲು, ಎತ್ತ ನೋಡಿದರೂ ಜನವೋ ಜನ, ಭಕ್ತರು ಬೆಳಗಿನಿಂದಲೇ ಸರದಿ ಸಾಲಿನಲ್ಲಿ ನಿಂತು ಪೂಜೆ ಸಲ್ಲಿಸಿ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸುವುದು ಕಂಡುಬರುತ್ತದೆ. ಬೆಟ್ಟದ ತಪ್ಪಲಿನಲ್ಲಿ ವಾಹನಗಳ ಪ್ರವೇಶ ನಿರ್ಬಂಧಿಸಿದ್ದ ಹಿನ್ನೆಲೆಯಲ್ಲಿ ಹೆಚ್ಚಿನ ಜನರು ಪಾದಚಾರಿ ರಸ್ತೆಯಲ್ಲಿ ಸಂಚರಿಸುವುದು, ಕಡಿದಾದ ಮತ್ತು ಸಮತಟ್ಟಿಲ್ಲದ ಹಾಸು ಕಲ್ಲುಗಳ ದಾರಿಯಲ್ಲಿ ಮಹಿಳೆಯರು, ಮಕ್ಕಳು, ವಯೋವೃದ್ಧರೆನ್ನದೇ ಉತ್ಸಾಹದಿಂದ ನಡೆದರು. ಆದರೆ ಬಿಸಿಲ ಝಳ ಹೆಚ್ಚಿದ್ದ ಕಾರಣ

ಬೆವರಿಳಿಸಬೇಕಾಗುತ್ತದೆ. ಪಾದಚಾರಿ ಮಾರ್ಗ ಮಧ್ಯೆ ಇರುವ ಬಂಡೆ ನಡುವೆ ಕಿರಿದಾದ ದಾರಿಯಲ್ಲಿ ಸಾಗಲು ನೂಕುನುಗ್ಗಲು ಉಂಟಾಗುವುದು.

ಬೆಟ್ಟದ ತಪ್ಪಲಿನ ಕಿಲಗೆರೆ, ಹುತ್ತೂರು, ತೆರಕಣಾಂಬಿ ಮತ್ತು ಕೊತ್ತಲವಾಡಿಗಳಿಂದ ಭಕ್ತರು ಕಾಲ್ನಡಿಗೆಯಲ್ಲಿ ತೆರಳುವ ಪರಂಪರೆ ಇದೆ. ಜಾತ್ರೆಯ ಸಮಯದಲ್ಲಿ ತಪ್ಪಲಿನಿಂದ ಹಿಡಿದು ದೇವಾಲಯದವರೆವಿಗೂ ಇಕ್ಕೆಲಗಳಲ್ಲಿ ಪಾದಚಾರಿ ಮಾರ್ಗದಲ್ಲಿ ತಿಂಡಿ, ತಿನಿಸು, ಐಸ್‌ಕ್ರೀಂ, ಆಟಿಕೆ ವಸ್ತುಗಳು, ಹಣ್ಣು ಹಂಪಲು, ಎಳನೀರು, ಗೃಹೋಪಯೋಗಿ ವಸ್ತುಗಳು ಪೂಜಾ ಸಾಮಾಗ್ರಿಗಳು ಅಲ್ಲದೆ ಹೂವಿನ ಮಾರಾಟ ನಡೆಯುತ್ತದೆ.

ಜಾತ್ರೆಯ ಸಂದರ್ಭದಲ್ಲಿ ಅನೇಕ ದೇವರ ದಾನಿಗಳು ದೇವಾಲಯದ ಆವರಣದಲ್ಲಿ ಹರಕೆ ಹೊತ್ತಿದ್ದ ಭಕ್ತರು ಪ್ರಸಾದ ತಯಾರಿಸಿ ಭಕ್ತರಿಗೆ ವಿತರಿಸುವ ಸಂಪ್ರದಾಯವು ಸಹ ಇದೆ. ಮುಖ್ಯ ರಸ್ತೆ ಹಾಗೂ ಪಾದಚಾರಿ ಮಾರ್ಗದಲ್ಲಿ ಮಜ್ಜಿಗೆ, ಪಾನಕ ವಿತರಿಸುವ ಪರಿಪಾಠವು ಸಹ ಇದೆ. ಈ ಎಲ್ಲಾ ಬಗೆಯ ಧಾರ್ಮಿಕ ಹಿನ್ನೆಲೆಯ ಜೊತೆಗೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಂಶಗಳು ಕೂಡ ಈ ಹುಲಗಿನ ಮುರಡಿಯ ವೆಂಕಟರಮಣಸ್ವಾಮಿ ದೇವಾಲಯದ ರಥೋತ್ಸವದ ಸಂದರ್ಭದಲ್ಲಿ ಕಾಣಬಹುದಾಗಿದೆ.[68] (ಚಿತ್ರಸಂಖ್ಯೆ-81)

ಶ್ರಾವಣ ಶನಿವಾರ ಮತ್ತೊಂದು ಚಿಕ್ಕ ಜಾತ್ರೆ ನಡೆಯುತ್ತದೆ. ಶನಿವಾರ ಬೆಳಗ್ಗೆಯಿಂದಲೇ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಅದೇ ದಿನ ಮಧ್ಯಾಹ್ನ 12 ಗಂಟೆ ವೇಳೆಯಲ್ಲಿ ಧ್ವಜಪತಾಕೆ, ತಳಿರುತೋರಣ ಫಲ ಪುಷ್ಪಗಳಿಂದ ಅಲಂಕಾರಗೊಂಡಿದ್ದು, ಚಿಕ್ಕ ರಥದಲ್ಲಿ ಸ್ವಾಮಿಯವರ ಉತ್ಸವಮೂರ್ತಿ ಇರಿಸಿ ಮಹಾಮಂಗಳಾರತಿ ನೆರವೇರಿಸಲಾಗುತ್ತದೆ. ಸ್ಥಳೀಯ ತಹಶೀಲ್ದಾರ್‌ರವರು ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಅಧಿಕೃತ ಚಾಲನೆಯನ್ನು ನೀಡುತ್ತಾರೆ. ಅಲ್ಲದೆ ಮಂಗಳವಾದ್ಯ, ತಮಟೆ ಇನ್ನಿತರ ಕಲಾ ತಂಡಗಳೊಂದಿಗೆ ಸಾಗುವ ರಥೋತ್ಸವ ದೇವಾಲಯದ ಸುತ್ತಲೂ ಒಂದು ಪ್ರದಕ್ಷಿಣೆಗೊಂಡು ಜನರು ಎಳೆಯುತ್ತಾರೆ. ಗೋವಿಂದ, ಗೋವಿಂದ ಎಂಬ ಜೈಕಾರದೊಂದಿಗೆ ರಥವನ್ನು ಎಳೆಯುತ್ತಾರೆ. ತದನಂತರ ಮೂಲಸ್ಥಾನದಲ್ಲಿ ಕೊನೆಗೊಳ್ಳುತ್ತದೆ.

**ವೀರಾಂಜನೇಯ ದೇವಾಲಯ-ತೆರಕಣಾಂಬಿ**

ತೆರಕಣಾಂಬಿಯ ಒಂದು ಪ್ರಾಚೀನ ಕೊಳದ ಪಕ್ಕದಲ್ಲಿ ಉತ್ತರಾಭಿಮುಖವಾಗಿ ನಿರ್ಮಾಣಗೊಂಡಿರುವ ವೀರಾಂಜನೇಯ ಸ್ವಾಮಿ ದೇವಾಲಯ ಇದೆ. ಇದೊಂದು ಪ್ರಾಚೀನ ದೇವಾಲಯವಾಗಿದ್ದರೂ ಕೂಡ ಅನೇಕ ಬಾರಿ ಜೀರ್ಣೋದ್ಧಾರವಾಗಿದೆ. ಆದರೂ ಕೂಡ

ಪ್ರಸ್ತುತ ಸುಸ್ಥಿತಿಯಲ್ಲಿದೆ. ಮೂಲಗರ್ಭಗುಡಿಯಲ್ಲಿ ಸುಮಾರು ಎಂಟು ಅಡಿ ಎತ್ತರವಿರುವ ವೀರಾಂಜನೇಯ ಸ್ವಾಮಿಯ ಶಿಲ್ಪವನ್ನು ಚಪ್ಪಡಿಯಿಂದ ಕಡೆಯಲಾಗಿದೆ. ಇದನ್ನು ಗಮನಿಸಿದರೆ ಪ್ರಾಯಶಃ ವಿಜಯನಗರ ಅರಸರ ಕಾಲಕ್ಕೆ ಸೇರಿಸಬಹುದಾಗಿದೆ. ಶುಕನಾಸದಲ್ಲಿ ಯಾವುದೇ ಶಿಲ್ಪಗಳಿಲ್ಲ. ಆದರೆ ನವರಂಗದಲ್ಲಿ ಸುಮಾರು ಆರು ಮಧ್ಯದಲ್ಲಿರುವ ಕಂಬಗಳು ಹಾಗೂ 12 ಗೋಡೆಯ ಸುತ್ತಲೂ ಇರುವ ಕಂಬಗಳಾಗಿವೆ. ನವರಂಗದಲ್ಲಿ ಒಂದು ದ್ವಾರದ ಮಾದರಿಯಲ್ಲಿ ಕಂಬಗಳಿವೆ. ಒಂದು ಕಂಬದಲ್ಲಿ ಮೈಸೂರು ಅರಸರ ಮಾದರಿಯಲ್ಲಿ ರಾಜ ಒಡೆಯರ್ ಮತ್ತು ರಾಣಿಯ ಉಬ್ಬುಶಿಲ್ಪ ಇದೆ. ಆದಕಾರಣ ನವರಂಗದ ಭಾಗವು ಮೈಸೂರು ಒಡೆಯರ್ ಆಡಳಿತ ಕಾಲದಲ್ಲಿ ಅಭಿವೃದ್ಧಿ ಹೊಂದಿರಬೇಕು ಎಂಬುದು ತಿಳಿದುಬರುತ್ತದೆ. ಇದೊಂದು ಸರಳವಾದ ದೇವಾಲಯವಾಗಿದೆ. (ಚಿತ್ರಸಂಖ್ಯೆ-82)

ಈ ದೇವಾಲಯದ ಮುಂದೆ ಮಕರ ತೋರಣದ ಅಲಂಕರಣೆಯಲ್ಲಿರುವ ವೀರಗಲ್ಲು ವಿಶೇಷತೆಯನ್ನು ಪಡೆದುಕೊಂಡಿದೆ. ಅಲ್ಲದೆ ಒಂದು ಕಡೆ ಕುದುರೆ, ಒಂದು ಕಡೆ ಆನೆ ಮೇಲೆ ಕುಳಿತು ಯುದ್ಧ ಮಾಡುತ್ತಿರುವ ವೀರಗಲ್ಲು, ಈ ವೀರಾಂಜನೇಯ ಸ್ವಾಮಿ ದೇವಾಲಯದ ಮುಂದೆ ಇದೆ. ಇದನ್ನು ಗಮನಿಸಿದರೆ ಕ್ರಿ.ಶ.10ನೇ ಶತಮಾನಕ್ಕೆ ಸೇರಿದ ಅವಶೇಷಗಳಾಗಿವೆ. ಆದಕಾರಣ ಇದೊಂದು ಪ್ರಮುಖ ನೆಲೆಯಾಗಿತ್ತೆಂದು ತಿಳಿಯಬಹುದಾಗಿದೆ.

## ಹಂಡೆಗೋಪಾಲಸ್ವಾಮಿ ದೇವಾಲಯ-ತೆರಕಣಾಂಬಿ

ಶ್ರೀ ಹಂಡೆ-ಗೋಪಾಲಸ್ವಾಮಿ ದೇವಾಲಯ ತೆರಕಣಾಂಬಿಯಲ್ಲಿದ್ದು, ಉತ್ತರಾಭಿಮುಖವಾಗಿದೆ. ಪ್ರಸ್ತುತ ಈ ದೇವಾಲಯದ ಕೆಲವು ಭಾಗಗಳು ದುಃಸ್ಥಿತಿಯಾಗಿವೆ. ಆದರೆ ಒಳಭಾಗವು ಸುಃಸ್ಥಿತಿ ಮಾದರಿಯಲ್ಲಿದೆ. ದೇವಾಲಯದ ಮೂಲಗರ್ಭಗುಡಿಯಲ್ಲಿ ಕಲ್ಲುಪೀಠದ ಮೇಲೆ ಗೋಪಾಲಸ್ವಾಮಿ ಶಿಲ್ಪವನ್ನು ನಿಲ್ಲಿಸಲಾಗಿದೆ.

ಕಣ್ಣಾಗಾಲ ಗ್ರಾಮದಲ್ಲಿ ದೊರೆತಿರುವ ಶಾಸನದ ಪ್ರಕಾರ ಪೆರುಮಾಳ ದಣ್ಣಾಯಕರ ಮಗನಾದ ಸ್ರೀ ಮಾಧವ ದಣ್ಣಾಯಕರು ತೆರಕಣಾಂಬಿಯ ನೆಲೆವೀಡಿನೊಳು ಸುಖ ಸಂಕಥಾ ವಿನೋದದಿಂದ ಪದಿನಾಲ್ಕು ನಾಡುವಂ ಪ್ರತಿಪಾಲಿಸುತ್ತ ಧರ್ಮಚಿತ್ತರಾಗಿ ಶಕವರುಷ 1238ನೆ[69] ಕ್ಷಸ ಸಂವತ್ಸರದ ಪುಣ್ಯಕಾಲೆಯಲು ಶ್ರೀ ಮನುಮಹಾಪ್ರಧಾನಂ ಮಾಧವದಂಣ್ನಾಯಕರು ಗೋವರ್ಧನಗರಿಯಲು ಪ್ರತಿಷಿ ಮಾಡಿಸಿ ಗೋಪಿನಾಥದೇವರ ಅಂಗಭೋಗ ರಂಗಭೋಗ, ಸಮಸ್ತ ಪಡಿ ತಿರುವಳಿಯಾಟ ಕೋಸುಕರ ಆ ಬಲ್ಲಾಳದೇವರಸರು ಆಮಾದಪ್ಪ ದಂಣ್ನಾಯಕರಿಗೆ ಸಕಾರುಂಣ್ಯದಿ ಕರುಣಿಸಿದ ಕುಡುಗು ನಾಡೊಳಗಣ ಕಂಣ್ನವಗಾಲವನ್ನು

ಗೋವರ್ಧನಗಿರಿಯ ಶ್ರೀ ಗೋಪಿನಾಥ ದೇವರಿಗೆ ಧಾರಪೂರ್ವಕವಾಗಿ ತಿಳಸಿರುವುದು ತಿಳದುಬರುತ್ತದೆ.[70]

ಕ್ರಿ.ಶ.1318 ರಲ್ಲಿ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಕಿಲಗೆರೆ ಗ್ರಾಮದ ಶಾಸನದ ಪ್ರಕಾರ ಇದೇ ಶ್ರೀಮಾಧವ ದಣ್ನಾಯಕನ ಹತ್ತಿರದ ಸಂಬಂಧಿಕರಾದ ಅಲ್ಲದೆ, ತುಂಬಾ ಹತ್ತಿರದ ಅಧಿಕಾರಿಯಾದ ಅಲ್ಲಪ್ಪ ದಂಡನಾಯಕರ ರಾಣಿಯರಾದ ಚಾಮವ್ವೆ ದಂಡನಾಯಕತಿಯರು ತೆರಕಣಾಂಬಿಯ ಗೋಪಿನಾಥ ಸ್ವಾಮಿಯನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ಕಟ್ಟಿಸಿದರು ಎಂಬುದಾಗಿ ತಿಳದುಬರುತ್ತದೆ. ಅದು ಅಲ್ಲದೆ ಈ ದೇವರ ಸೇವೆಗಾಗಿ ಇದೇ ಕಿಲಗೆರೆ ಗ್ರಾಮವನ್ನು ಮಾಧವ ದಣ್ಣಾಯಕನು ಕೊಟ್ಟಿರುವ ವಿಚಾರ ತಿಳದುಬರುತ್ತದೆ.[71]

ಅದೇ ಹಂಡೆಗೋಪಾಲಸ್ವಾಮಿ ದೇವಾಲಯಕ್ಕೆ ವಿಜಯನಗರದ ಅರಸ ಸದಾಶಿವರಾಯನ ಕಾಲದಲ್ಲಿ ಶ್ರೀಮಾನ ಮಹಾಮಂಡಳೇಶ್ವರ ಮಹಾರಾಜ ಭಳರಾಜಯ್ಯದೇವ ಮಹಾ ಅರಸುಗಳು ತೆರಕಣಂಬಿಯ ಗೋಪಾಲಕೃಷ್ಣ ದೇವರಿಗೆ ಸರ್ವಮಾನ್ಯವಾಗಿ ಗುಂಡ್ಲುಪೇಟೆ ತಾಲ್ಲೂಕಿನ ಹೊರದಹಳ್ಳಿ ಗ್ರಾಮವನ್ನು ದಾನ ಬಿಟ್ಟ ವಿಚಾರವನ್ನುತಿಳಸುತ್ತದೆ.[72]

ಇದೊಂದು ಶುದ್ಧ ದ್ರಾವಿಡ ಶೈಲಿಯ ದೇವಾಲಯವಾಗಿದೆ. ಗರ್ಭಗೃಹ, ಶುಕನಾಸ, ಹಾಗೂ ನವರಂಗವನ್ನು ಹೊಂದಿದೆ. ಮೇಲೆ ತಿಳಸುವಂತೆ ಗೋಪಾಲಸ್ವಾಮಿ ವಿಗ್ರಹದ ಸುತ್ತಲೂ ಗೋವುಗಳು, ಕಮಲದಳ, ವೃಕ್ಷವನ, ಸರ್ಪಕಾವಲುಗಳ ಹಾರ ಅಲ್ಲದೆ ಸಿಂಹ ಲಲಾಟದಿಂದ ಕೂಡಿದೆ. ಗರ್ಭಗೃಹದ ದ್ವಾರದ ಇಕ್ಕೆಲಗಳಲ್ಲಿ ಅರೆಕಂಬಗಳ ಪಟ್ಟಿಕೆಗಳವೆ. ಅದೇ ರೀತಿ ಶುಕನಾಸ ಅಂಕಣದಲ್ಲಿಯೂ ಅರೇಕಂಬಗಳವೆ. ದೇವಾಲಯವು ವಿಶಾಲವಾಗಿದ್ದು, ನವರಂಗದ ಪಶ್ಚಿಮಾ ಹಾಗೂ ಪೂರ್ವದಿಕ್ಕಿಗೆ ದ್ವಾರಗಳವೆ. ಸುಮಾರು 32 ಕಂಬಗಳವೆ. ದೇವಾಲಯದ ಮುಂದೆ ಮುಖಮಂಟಪವನ್ನು ಹೊಂದಿದಂತೆ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಗೆ ಮೆಟ್ಟಿಲುಗಳವೆ. ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಆನೆಮುಖವನ್ನು ಹೊಂದಿರುವ ಚಪ್ಪಡಿಯನ್ನು ಸೇರಿಸಲಾಗಿದೆ. ಪ್ರಸ್ತುತದಲ್ಲಿ ಈ ದೇವಾಲಯವು ದುಃಸ್ಥಿತಿಯಲ್ಲಿದೆ. ಇಲ್ಲಿ ಸರಿಯಾದ ರೀತಿಯಲ್ಲಿ ಪೂಜೆ ಪುನಸ್ಕಾರಗಳ ಕಾರ್ಯಗಳು ನಡೆಯುತ್ತಿರುವ ಲಕ್ಷಣಗಳು ಕಾಣಿಸುವುದಿಲ್ಲ. ದೇವಾಲಯದ ಮುಂದೆ ಸ್ವಚ್ಛತೆ ಕೂಡ ಸರಿಯಾಗಿಲ್ಲ. ಆದ್ದರಿಂದ ಸ್ಥಳೀಯರು ಹಾಗೂ ಮುಜರಾಯಿ ಇಲಾಖೆಯವರು ಸೇರಿಕೊಂಡು ಈ ದೇವಾಲಯವನ್ನು ಮುಂದಿನ ಪೀಳಗೆಗೆ ಉಳಸಬೇಕಾಗಿದೆ. (ಚಿತ್ರಸಂಖ್ಯೆ–83)

**ವರದರಾಜಸ್ವಾಮಿ ದೇವಾಲಯ–ತೊಂಡವಾಡಿ**

ತೊಂಡವಾಡಿ ಗ್ರಾಮವು ಇತಿಹಾಸ ಪ್ರಸಿದ್ಧವಾದ ಪ್ರಾಚೀನ ಗ್ರಾಮಗಿದೆ. ಈ ಗ್ರಾಮದಲ್ಲಿ ವೈಷ್ಣವ ಧರ್ಮಕ್ಕೆ ಸೇರಿದ ವರದರಾಜಸ್ವಾಮಿ ದೇವಾಲಯವಿದೆ. ಇತಿಹಾಸ ಕಾಲಕ್ಕೆ ಪೂರಕವಾಗಿ ನೋಡಿದರೆ ಕ್ರಿ.ಶ.975 ರ ಕಾಲಕ್ಕೆ ಸೇರಿದ ಶಾಸನ ಪ್ರಾಚೀನ ಶಾಸನವಾಗಿದೆ.[73] ಇದು ಸ್ಥಳೀಯರ ಇತಿಹಾಸವನ್ನು ತಿಳಿಸುತ್ತದೆ. ಮತ್ತೊಂದು ಶಾಸನದ ಕಾಲ ಶಕವರ್ಷ 1423. ಅಲ್ಲದೆ ತೊಟ್ಟಿಹಟ್ಟಿ ಸ್ವಾಮಿಗಳಲ್ಲಿದ್ದ ತಾಮ್ರಶಾಸನವು ಹಿಂದೆ ಮುಂದೆ ಸೇರಿ ಎರಡು ಹಲಗೆಯನ್ನು ಹೊಂದಿದ್ದು, ಸುಮಾರು 105 ಸಾಲುಗಳನ್ನು ಹೊಂದಿರುವ ಶಾಸನವಾಗಿದೆ. ಇದು ಈ ಭಾಗದ ಸ್ಥಳೀಯ ಇತಿಹಾಸವನ್ನು ತಿಳಿಸುತ್ತದೆ.[74]

ಆದರೆ ಈ ಗ್ರಾಮದಲ್ಲಿರುವ ವರದರಾಜಸ್ವಾಮಿ ದೇವಾಲಯವನ್ನು ನೋಡಿದರೆ ಹೊಯ್ಸಳ–ವಿಜಯನಗರ ಅರಸರ ಕಾಲಕ್ಕೆ ಸೇರಿದೆ ಎನ್ನಬಹುದಾಗಿದೆ.

ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಮೂಲಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಸುಮಾರು ಆರು ಅಡಿ ಎತ್ತರವಿರುವ ವರದರಾಜಸ್ವಾಮಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಮೇಲ್ಭಾಗದಲ್ಲಿ ಭುವನೇಶ್ವರಿಯನ್ನು ಕೆತ್ತಲಾಗಿದೆ. ವರದರಾಜಸ್ವಾಮಿಯ ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿಯರ ಶಿಲ್ಪಗಳಿವೆ. ಶುಕನಾಸದ ಅಂಕಣವು ಖಾಲಿ ಇದೆ. ಆದರೆ ಈ ದ್ವಾರದ ಇಕ್ಕೆಲಗಳಲ್ಲಿ ಜಯ–ವಿಜಯರ ಶಿಲ್ಪಗಳಿವೆ. ಈ ದೇವಾಲಯದ ಅರ್ಚಕರಾದ ಕೆ.ಟಿ.ಶ್ರೀರಾಮಭಟ್ಟಾಚಾರ್ ಇವರ ಪ್ರಕಾರ ಹೊಯ್ಸಳರ ಹಾಗೂ ವಿಜಯನಗರ ಅರಸರ ಕಾಲಕ್ಕೆ ದೇವಾಲಯವು ಬೆಳವಣಿಗೆಯಾಗಿದೆ ಎಂಬ ಹೇಳಿಕೆಗಳನ್ನು ನೀಡುತ್ತಾರೆ.[75]

ನವರಂಗದಲ್ಲಿ 4 ಕಂಬಗಳಿವೆ. ಅಲ್ಲದೆ ನವರಂಗಕ್ಕೆ ಹೊಂದಿಕೊಂಡಂತೆ ಪ್ರವೇಶದ್ವಾರ ಇದೆ. ನವರಂಗಕ್ಕೆ ಹೊಂದಿಕೊಂಡಂತೆ ತೆರೆದಮುಖ ಮಂಟಪ ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ಇಕ್ಕೆಲಗಳಲ್ಲಿ ದ್ವಾರದ ಮೆಟ್ಟಿಲುಗಳನ್ನು ಅಳವಡಿಸಲಾಗಿದೆ. ಮುಂದೆಗಡೆ ಬಲಿಪೀಠ ಇದೆ. ದೇವಾಲಯದ ಗರ್ಭಗೃಹದ ಮೇಲೆ ವಿಮಾನ ಇದೆ. ಈ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದೆ. ಜನವರಿ ತಿಂಗಳು ಮಕರ ಸಂಕ್ರಾಂತಿಯ ಹಬ್ಬದ ದಿವಸ ವಿಶೇಷವಾಗಿ ಪೂಜೆ ನಮಸ್ಕಾರಗಳು ನಡೆಯುತ್ತವೆ. ಜೊತೆಗೆ ವಿಜಯದಶಮಿ ದಿನದಂದು ವಿಶೇಷ ಪೂಜೆ ನಡೆಯುತ್ತದೆ. ರಥಸಪ್ತಮಿ, ಧನುರ್ಮಾಸ, ವೈಕುಂಠ ಏಕಾದಶಿ, ಶ್ರಾವಣ ಶನಿವಾರದಂದು ವಿಶೇಷ ಪೂಜೆಗಳು ನಡೆಯುತ್ತವೆ. ಈ ದೇವಾಲಯದ ವಿಮಾನದ ಕಳಶ ಶಿಥಿಲವಾ

ಹಂತದಲ್ಲಿದೆ. ಆದಕಾರಣ ಸ್ಥಳೀಯರು ಹಾಗೂ ಮುಜರಾಯಿ ಇಲಾಖೆಯವರು ಈ ಕಡೆ ಗಮನ ನೀಡಿ, ಈ ದೇವಾಲಯದ ವಾಸ್ತುಕೃತಿಯನ್ನು ಸರಿಪಡಿಸಿ, ಮುಂದಿನ ಪೀಳಗೆಗೆ ಈ ಗ್ರಾಮದ ಇತಿಹಾಸವನ್ನು ನೀಡಬೇಕಾಗಿರುತ್ತದೆ. ಆದಕಾರಣ ಪ್ರಾಚೀನ ಪರಂಪರೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾಗಿದೆ. (ಚಿತ್ರಸಂಖ್ಯೆ–84)

## ವೆಂಕಟರಮಣಸ್ವಾಮಿ ದೇವಾಲಯ–ಕಮರಹಳ್ಳಿ

ಕಮರಹಳ್ಳಿಯು ತಲಕಾಡಿನ ಗಂಗರ ಕಾಲದಿಂದಲೂ ಹೆಸರುವಾಸಿಯಾದ ಗ್ರಾಮ. ಕಮರಹಳ್ಳಿ ಮಾರಿ ಚಾವಡಿಗೆ ಪಶ್ಚಿಮದಲ್ಲಿರುವ ಕಲ್ಲಿನಲ್ಲಿ ಗಂಗರ ದೊರೆ ಶ್ರೀಪುರುಷನ ಆಳ್ವಿಕೆ ಕಾಲದ ಶಾಸನ ಇದೆ. ಈತನ ಕಾಲ ಕ್ರಿ.ಶ.8ನೇ ಶತಮಾನಕ್ಕೆ ಸೇರಿದೆ.[76] ಆದರೆ ಈ ಗ್ರಾಮದಲ್ಲಿ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ವೆಂಕಟರಮಣಸ್ವಾಮಿ ದೇವಾಲಯವು ಸಹ ಒಂದಾಗಿದೆ. ಈ ದೇವಾಲಯವನ್ನು ವಿಜಯನಗರ ಅರಸರ ಕಾಲಕ್ಕೆ ಸೇರಿಸಬಹುದಾಗಿದೆ. ಮೂಲಗರ್ಭಗುಡಿಯಲ್ಲಿ ವೆಂಕಟರಮಣಸ್ವಾಮಿ ಶಿಲ್ಪವನ್ನು ಇರಿಸಲಾಗಿದೆ. ಆದರೆ ದ್ವಾರದ ಲಲಾಟಬಿಂಬದಲ್ಲಿ ಶೇಷಶಾಹಿ ವಿಷ್ಣು ಮಲಗಿರುವ ಉಬ್ಬುಶಿಲ್ಪದ ಕೆತ್ತನೆಯನ್ನು ಕೆತ್ತಲಾಗಿದೆ.

ನವರಂಗದ ಭಾಗದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳು ವಿಜಯನಗರ ಅರಸರ ಕಾಲಕ್ಕೆ ಸೇರಿಸಬಹುದಾದ ಮಾದರಿಯ ಕಂಬಗಳಾಗಿವೆ. ಮುಖ್ಯ ಪ್ರವೇಶದ್ವಾರದ ನಿಲುವು ಕಂಬದ ಇಕ್ಕೆಲಗಳಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಅಲ್ಲದೆ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪದ ಕೆತ್ತನೆಯನ್ನು ಮಾಡಲಾಗಿದೆ. ಅದರ ಮುಂದೆ ದ್ವಾರಮಂಟಪ ಇದೆ. ಮಂಟಪಕ್ಕೆ ಮೆಟ್ಟಿಲುಗಳನ್ನು ಸೇರಿಸಲಾಗಿದ್ದು, (ಚಿತ್ರಸಂಖ್ಯೆ–85) ಆನೆಮುಖ ಹೊಂದಿರುವ ಚಪ್ಪಡಿಯನ್ನು ಸೇರಿಸಲಾಗಿದೆ. ವಿಶೇಷ ಪುಣ್ಯ ತಿಥಿಗಳಲ್ಲಿ ಮಹಾಪೂಜೆ ಮಹಾನೈವೇದ್ಯವನ್ನು ಸಮರ್ಪಿಸುತ್ತಿದ್ದರು ಎಂದು ಗ್ರಾಮದವರ ಹೇಳಿಕೆಗಳಿವೆ. ವೆಂಕಟರಮಣನಿಗೆ ಅರ್ಚನೆ, ಧೂಪ ದೀಪ ಮತ್ತು ನೈವೇದ್ಯವನ್ನು ಅರ್ಪಿಸುತ್ತಾರೆ. ನಮಿತ್ತಿಕ ಪೂಜೆಗಳು ಸಾಮಾನ್ಯವಾಗಿ ಅಮಾವಾಸ್ಯೆ ಪೂರ್ಣಮಿ, ಚೌತಿ, ಏಕಾದಶಿ, ದ್ವಾದಶಿ ಇನ್ನೂ ಮೊದಲಾದ ನಿರ್ದಿಷ್ಟ ತಿಥಿಗಳಲ್ಲಿ ನಡೆಯುವ ಪರಿಪಾಠ ಈ ಗ್ರಾಮದಲ್ಲಿದೆ.

## ವೀರಾಂಜನೇಯ ದೇವಾಲಯ–ಪಡಗೂರು

ಪಡಗೂರು ಗ್ರಾಮದಲ್ಲಿರುವ ಆಂಜನೇಯ ದೇವಸ್ಥಾನದ ಮುಂದೆ ನೆಟ್ಟಕಲ್ಲು ಶಾಸನದ ಪ್ರಕಾರ ದೇವಾಲಯವು ಕ್ರಿ.ಶ.15–16ನೇ ಶತಮಾನಕ್ಕೆ ಸೇರಿದೆ.[77] ಈ ದೇವಾಲಯವು ಉತ್ತರಾಭಿಮುಖವಾಗಿದೆ. ಮೂಲಗರ್ಭಗುಡಿಯಲ್ಲಿ ವೀರಾಂಜನೇಯನ ಶಿಲ್ಪ ಇದೆ. ಇದನ್ನು

ಗಮನಿಸಿದರೆ ಪ್ರಾಯಶಃ ವಿಜಯನಗರ ಅರಸರ ಕಾಲಕ್ಕೆ ಸೇರಿದ ದೇವಾಲಯವಾಗಿದೆ ಎನ್ನಬಹುದು.

ಏಕೆಂದರೆ ವಿಜಯನಗರದ ಅರಸರಾದ ಸಾಳುವ ಗೋವಿಂದರಾಜಯ್ಯನು ಹನುಮಂತ ದೇವರಿಗೆ ಅನೇಕ ಬಗೆಯ ದಾನ ನೀಡಿರುವುದು ತಿಳಿದುಬರುತ್ತದೆ. ಅಲ್ಲದೆ ಸಾರಿಗೆ ಹೊಲ ಕಂಬ ಹುಣಸೆ ರಾ ಹೊಲ ಕಂಬ 100, ಸಂಘಿಗೆಪುರದ ಯಲ್ಲೆ ಸೀಮೆ ಹೊಲ 100, ಬಗುತ ಕೆರೆಯ ಕಂಬ-100 ಹೀಗೆ ಅನೇಕ ಕೊಡುಗೆಯನ್ನು ನೀಡಿರುವುದು ತಿಳಿದುಬರುತ್ತದೆ. ಆದಕಾರಣ ಈ ದೇವಾಲಯವು ವಿಜಯನಗರ ಅರಸರ ಆಳ್ವಿಕೆಯ ಕಾಲಕ್ಕಾಗಲೇ ನಿರ್ಮಾಣವಾಗಿದೆ. ಶುಕನಾಸ ಅಂಕಣವು ಖಾಲಿ ಇದೆ. ತೆರೆದ ಮುಖಮಂಟಪದಲ್ಲಿ ಎರಡು ಕಂಬಗಳು ಹಾಗೂ ಮುಂದೆ ತೆರೆದ ನಾಲ್ಕು ಕಂಬಗಳಿವೆ. ಇವುಗಳನ್ನು ಗಮನಿಸಿದರೆ ಮೈಸೂರು ಒಡೆಯರ್ ಕಾಲಕ್ಕೆ ಜೀರ್ಣೋದ್ಧಾರಗೊಂಡಿರಬೇಕು ಎಂಬುದು ದೃಢಪಡುತ್ತದೆ. ಪ್ರತಿದಿನ ಪೂಜೆ ಕಾರ್ಯಗಳು ನಡೆಯುತ್ತವೆ. ಪ್ರತಿ ಶನಿವಾರ ಹಾಗೂ ಶ್ರಾವಣ ಶನಿವಾರ ವಿಶೇಷ ಪೂಜೆಗಳು ನಡೆಯುತ್ತವೆ. (ಚಿತ್ರಸಂಖ್ಯೆ-86)

## ರಂಗನಾಥಸ್ವಾಮಿ ದೇವಾಲಯ-ಹೊರೆಯಾಲ

ಹೊರೆಯಾಲ ಗ್ರಾಮದ ಇತಿಹಾಸವನ್ನು ಕುರಿತು ಕ್ರಿ.ಶ.9ನೇ ಶತಮಾನಕ್ಕೆ ಸೇರಿದ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನವು ಸಂಪೂರ್ಣವಾಗಿ ನಾಶವಾಗಿರುವುದರಿಂದ, ಅದರ ಹಿನ್ನೆಲೆಯು ತಿಳಿದುಬರುವುದಿಲ್ಲ. ಆದರೂ ಕೂಡ ಕ್ರಿ.ಶ.9ನೇ ಶತಮಾನದಲ್ಲಿ ಬರವಣಿಗೆಯಿದ್ದು, 7ನೇ ತಾರೀಖು ಮಂಗಳವಾರ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ ಹಾಗೂ ಈ ಗ್ರಾಮದ ಮಂಗಳ ಕಾರ್ಯಕ್ಕೆ ಗದ್ದೆ ಒಂದು ಖಂಡುಗವನ್ನು ದಾನ ನೀಡಿರುವುದು ತಿಳಿದುಬರುತ್ತದೆ.[78] ಮತ್ತೊಂದು ಶಿಲಾಶಾಸನದಲ್ಲಿ ಅಂದರೆ ರಂಗನಾಥಸ್ವಾಮಿ ದೇವಸ್ಥಾನದ ಹಿಂದೆ ಬಿದ್ದಿರುವ ಶಾಸನದ ಪ್ರಕಾರವೂ ಕೂಡ ದೇವರಿಗೆ ಭೂಮಿಯನ್ನು ದಾನ ನೀಡಿರುವ ವಿಚಾರ ತಿಳಿದುಬರುತ್ತದೆ.[79] ರಂಗನಾಥಸ್ವಾಮಿ ದೇವಸ್ಥಾನದ ಎಡಗಡೆ ಕಟ್ಟೆಯಲ್ಲಿರುವ ಕಲ್ಲು ಶಾಸನ ಪ್ರಕಾರ ಶಾಸನವನ್ನು ನವೆಂಬರ್ 3ನೇ ತಾರೀಖು ಕ್ರಿ.ಶ.1546ರಲ್ಲಿ ಬರೆಸಲಾಗಿದೆ. ಇದರ ಪ್ರಕಾರ ಒಳ್ಳೆಯ ಶುಭದಿನದಂದು ಸ್ವಸ್ತಿ ಶ್ರೀ ಜಯಾಭ್ಯುದಯಂ ಸಾಲಿವಾಹನಾ ಶಕವರುಷ 1468ನೆಯ ಸಂದ ವರ್ತಮಾನವಾದ ಪರಾಭವ ಸಂವತ್ಸರದ ಕಾರ್ತಿಕ ಶು10 ರಂದು ದಳವಾಯಿ ಕೃಷ್ಣಪ್ಪನಾಯಕರವರು ತಗಡೂರು ಚಿಕಮಲಯಗೆ ಕೂಟ ಉಂಬಳಿ ಗ್ರಾಮದ ಶಿಲಾಶಾಸನದ ಕ್ರಮವೆಂತೆಂದಡೆ ಅಚ್ಯುತ ಮಹಾರಾಯರು ನಮಗೆ ನಾಯಕನ ತನಕ ಪಾಲಿಸಿದ ಉಮ್ಮತ್ತೂರು ಸೀಮೆಯಲ್ಲಿರುವ ತಗಡೂರ ಸ್ಥಳದ ಹೊರೆಯಾಲ ಗ್ರಾಮದ

ಒಂದನ್ನು ಉಂಬಳಿಯಾಗಿ ಕೊಟ್ಟ ಆ ಗ್ರಾಮದ ಚತ್ರು ಸಿಮೆಯ ವೊಳಗೆ ಸಲುವ ಪಯಿರು ಉಂಟಾದ ಸರ್ವ ಸ್ವಾಮ್ಯವನು ಅಗು ಮಾಡಿಕೊಂಡು ಆ ಚಂದ್ರಾರ್ಕ್ಕಾಸ್ಥಾಯಿಯಾಗಿ ಅನುಭಾವಿಸಿಕೊಂಡು ಬರುವೆ ಎಂದು ಕೂಟ ಉಂಬಳಿ ಗ್ರಾಮವಾಗಿದೆ ಎಂಬುದಾಗಿ ತಿಳಿದುಬರುತ್ತದೆ.[80] ಈ ಎಲ್ಲಾ ಶಾಸನಗಳ ಬೆಳವಣಿಗೆ ಹಿನ್ನೆಲೆಯನ್ನು ಗಮನಿಸಿದರೆ ಈ ಗ್ರಾಮದಲ್ಲಿರುವ ರಂಗನಾಥಸ್ವಾಮಿ ದೇವಾಲಯವು 15–16ನೇ ಶತಮಾನದ ಕಾಲಕ್ಕೆ ನಿರ್ಮಾಣವಾಗಿರಬೇಕು.

ರಂಗನಾಥಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗವನ್ನು ಹೊಂದಿದೆ. ಗರ್ಭಗುಡಿಯಲ್ಲಿ ರಂಗನಾಥನು ಶೇಷಾಶಯಿಯಾಗಿ ಮಲಗಿದ್ದಾನೆ. ಶುಕನಾಸದ ಭಾಗದಲ್ಲಿ ಯಾವುದೇ ಶಿಲ್ಪ ಕಾಣಬರುವುದಿಲ್ಲ.

ನವರಂಗದಲ್ಲಿ ನಾಲ್ಕು ಕಂಬಗಳಿವೆ ಮುಖ್ಯ ದ್ವಾರದಲ್ಲಿ ದ್ವಾರಪಾಲಕರ ಶಿಲ್ಪಗಳಿದ್ದು, ಆನೆಮುಖವನ್ನು ಹೊಂದಿರುವ ಚಪ್ಪಡಿಯನ್ನು ಸೇರಿಸಲಾಗಿದೆ. ಈ ದೇವರಿಗೆ ಪೂರಕವಾಗಿ ರಥಸಪ್ತಮಿ, ರಾಮನವಮಿ, ನವರಾತ್ರಿ ಸಮಯದಲ್ಲಿ ವಿಶೇಷ ಪೂಜೆ ಕಾರ್ಯಗಳು ನಡೆಯುತ್ತದೆ. ಎಲ್ಲಾ ವರ್ಗದ ಜನರು ಸಮಾನವಾಗಿ ದೇವಾಲಯ ಮತ್ತು ಮನೆಗಳಲ್ಲಿ ದೀಪಗಳನ್ನು ಹಚ್ಚಿ ಉರಿಸುವ ಪರಿಪಾಠ ನವರಾತ್ರಿ ದೀಪಾವಳಿ ಹಬ್ಬದ ಸಮಯದಲ್ಲಿ ನಡೆಯುತ್ತದೆ. ರಥಸಪ್ತಮಿ ಮಾಘಮಾಸ ಶುಕ್ಲಪಕ್ಷದ ಸಪ್ತಮಿ ತಿಥಿಗೆ ರಥಸಪ್ತಮಿ ಎಂದು ಕರೆಯುತ್ತಾರೆ. ಅದು ಈ ಗ್ರಾಮದಲ್ಲಿಯೂ ಸಹ ನಡೆಯುವ ವಾಡಿಕೆ ಇದೆ. (ಚಿತ್ರಸಂಖ್ಯೆ–87)

### ವೇಣುಗೋಪಾಲಸ್ವಾಮಿ ದೇವಾಲಯ–ಚಿಕ್ಕಾಟಿ

ಚಿಕ್ಕಕಾಟಿ ಅಥವಾ ಚಿಕ್ಕಾಟಿ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಒಂದು ಪ್ರಾಚೀನ ಗ್ರಾಮ. ಈ ಊರಿಗೆ ಸಂಬಂಧಿಸಿದಂತೆ ತಲಕಾಡಿನ ಗಂಗರ ಕಾಲದ ಕ್ರಿ.ಶ.9ನೇ ಶತಮಾನದ ಶಾಸನ[81] ಹಾಗೂ ಕ್ರಿ.ಶ.1049 ರ ಕಾಲಕ್ಕೆ ಸೇರಿದ ಚೋಳರ ಶಾಸನಗಳಿವೆ.[82] ಅಲ್ಲದೆ ಶೈವ ದೇವಾಲಯಗಳು ಸಹ ಇದೆ. ಆದರೂ ಕೂಡ ನಂತರ ಕಾಲದ ವೇಣುಗೋಪಾಲಸ್ವಾಮಿ ದೇವಾಲಯವು ಸಹ ಇದ್ದು, ಇದು ವೈಷ್ಣವ ಧರ್ಮಕ್ಕೆ ಸೇರಿದ ಆಲಯವಾಗಿದೆ. ಈ ದೇವಾಲಯವು ಪ್ರಾಯಶಃ ವಿಜಯನಗರ ಅರಸರ ಕಾಲಕ್ಕೆ ಆಗಿರಬೇಕು. ನಂತರ ಕಾಲದ ಬೆಳವಣಿಗೆಯಲ್ಲಿ ಮೈಸೂರು ಒಡೆಯರ್ ಕಾಲಕ್ಕೂ ಸಹ ಆಗಿದೆ ಎಂದು ಪರಿಗಣಿಸಬಹುದಾಗಿದೆ. ವೇಣುಗೋಪಾಲಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿದ್ದು, ದ್ರಾವಿಡ ಶೈಲಿಯ ದೇವಾಲಯವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ,

ಮುಖಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ನಿಂತಿರುವ ವೇಣುಗೋಪಾಲಸ್ವಾಮಿ ಯನ್ನು ಇರಿಸಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ನವರಂಗದ ಮುಖ್ಯ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ವೇಣುಗೋಪಾಲನ ಉಬ್ಬುಶಿಲ್ಪ ಇದೆ. ಮುಖಮಂಟಪಕ್ಕೆ ನಾಲ್ಕು ಕಂಬಗಳಿದ್ದು, ಈ ಕಂಬಗಳು ಮೈಸೂರು ಒಡೆಯರ್ ಕಾಲಕ್ಕೆ ಸೇರಿದೆ. ಆದಕಾರಣ ನವರಂಗದ ಮುಂದಿನ ಭಾಗ ಮೈಸೂರು ಅರಸರ ಕಾಲದ ಸೇರ್ಪಡೆ ಎನ್ನಬಹುದು. ಅಲ್ಲದೆ ಮಧ್ಯದಲ್ಲಿರುವ ಎರಡು ಕಂಬದಲ್ಲಿ ರಾಜ ಒಡೆಯರ್‌ರವರ ಉಬ್ಬುಶಿಲ್ಪದ ಕೆತ್ತನೆ ಇದೆ. ಆದಕಾರಣ ಚಿಕ್ಕಾಟಿಯ ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ಮೈಸೂರಿನ ಒಡೆಯರ್ ಕೊಡುಗೆಯು ಅಪಾರವಾಗಿದೆ. ಗರ್ಭಗೃಹದ ಮೇಲಿನ ವಿಮಾನ ವೃತ್ತಾಕಾರದ ಮಾದರಿಯಲ್ಲಿ ರಚಿಸಲಾಗಿದೆ. ಈ ಬೆಳಣಿಗೆಯನ್ನು ಗಮನಿಸಿದರೆ, ಚೋಳರ ಪ್ರಭಾವವು ಸಹ ಇದೆ. ಏಕೆಂದರೆ ಈ ರೀತಿಯ ಬೆಳವಣಿಗೆಯನ್ನು ತಿರುಮಕೂಡಲು ನರಸೀಪುರದ ಅಗಸ್ತೇಶ್ವರ ದೇವಾಲಯದಲ್ಲಿ ಕಾಣಬಹುದಾಗಿದೆ. ಈ ಎಲ್ಲಾ ಬೆಳವಣಿಗೆಯಿಂದ ಮುಂದೆ ಬಂದಂತಹ ರಾಜರು ಪ್ರಾಚೀನ ವಾಸ್ತು ಪರಂಪರೆಯನ್ನು ತಮ್ಮ ಕಾಲಕ್ಕೂ ಕೂಡ ಬಳಸಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಈ ಊರಿನಲ್ಲಿ ರಾಮನವಮಿ, ರಥಸಪ್ತಮಿ, ನವರಾತ್ರಿ, ಸಂಕ್ರಾಂತಿ ಹಬ್ಬದ ಸಮಯದಲ್ಲಿ ವಿಶೇಷವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆ ಎಂಬ ಹೇಳಿಕೆಗಳಿವೆ.

## ಲಕ್ಷ್ಮೀದೇವಾಲಯ–ನಿಟ್ರೆ

ನಿಟ್ರೆ ಎನ್ನುವ ಹೆಸರು ಬರುವುದಕ್ಕೆ ಕಾರಣವೇನೆಂದರೆ, ಸಾಕಷ್ಟು ವರ್ಷಗಳ ಹಿಂದಿನ ಕಾಲದಲ್ಲಿ ನೆಲ್ಲಿಗುತ್ತಿಗಳು ಹೆಚ್ಚಾಗಿ ಕಂಡುಬರುತ್ತಿದ್ದವು. ಆ ಕಾರಣಕ್ಕೆ ಸಸ್ಯವಾಚಕವಾಗಿ ಈ ಗ್ರಾಮಕ್ಕೆ ನಿಟ್ರೆ ಎಂದು ನಾಮಕರಣವಾಗಿರುವುದು ಒಂದು ಇತಿಹಾಸ.[83]

ಈ ಗ್ರಾಮದಲ್ಲಿ ವೈಷ್ಣವ ಪರಂಪರೆ ಪೂರಕವಾಗಿ ಲಕ್ಷ್ಮೀದೇವಾಲಯ ಇದೆ ಎಂಬ ಅಭಿಪ್ರಾಯವನ್ನು ಗ್ರಾಮದಲ್ಲಿ ವ್ಯಕ್ತಪಡಿಸುತ್ತಾರೆ.[84] ಆದರೆ ಲಕ್ಷ್ಮೀ ದೇವಾಲಯದಲ್ಲಿ ಲಕ್ಷ್ಮಿಯ ಬದಲು ಶಕ್ತಿ ಪ್ರಧಾನವಾದ ದೇವತೆ ಶಿಲ್ಪ ಇರುವುದು ಒಂದು ವಿಶೇಷವಾಗಿದೆ. ಗ್ರಾಮದವರ ಮಾಹಿತಿ ಮೇರೆಗೆ ಲಕ್ಷ್ಮೀ ದೇವಾಲಯದಲ್ಲಿ ಲಕ್ಷ್ಮಿ ಶಿಲ್ಪ ಕಾಣಬರುವುದಿಲ್ಲ. ಶಕ್ತಿ ಪ್ರಧಾನವಾದ ದೇವತೆಯು ಚತುರ್ಭುಜಧಾರಿಯಾಗಿದ್ದಾಳೆ. ಶುಕನಾಸದಲ್ಲಿ ಯಾವುದೇ ತರಹದ ಶಿಲ್ಪಗಳಿಲ್ಲ. ನವರಂಗವು ವಿಶಾಲವಾಗಿದ್ದು, ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ನಾಲ್ಕು ಕಂಬಗಳು ಸಹ ವಿಜಯನಗರ ಅರಸ ಕಾಲದ ಕಂಬದ ಮಾದರಿಯಲ್ಲಿಯೆ ಇದೆ. ಬಾಳೆಮಂಡಿ (ಮುಖ) ಮತ್ತು ಸಿಂಹಮುಖದ ಕೆತ್ತನೆ ಕಂಬದ ನಾಲ್ಕು ಮುಖದಲ್ಲಿಯೂ ಇವೆ. ನಾಲ್ಕು

ಕಂಬಗಳ ಮಧ್ಯದಲ್ಲಿ ಮೇಲ್ಭಾಗದಲ್ಲಿ ಭುವನೇಶ್ವರಿ ಇದೆ. ಮುಂಭಾಗದಲ್ಲಿ ಮುಖಮಂಟಪಕ್ಕೆ ನಾಲ್ಕು ಕಂಬಗಳನ್ನು ಸೇರಿಸಲಾಗಿದೆ. (ಚಿತ್ರಸಂಖ್ಯೆ-88) ಗೌರಿಹಬ್ಬವಾದ 12 ದಿನಕ್ಕೆ ಜಾತ್ರೆ ನಡೆಯುತ್ತದೆ. ಆ ಸಂದರ್ಭದಲ್ಲಿ ರಥಕ್ಕೆ ಪೂಜೆ ಮಾಡಿ ಹೂವಿನ ಅಲಂಕಾರ ಮಾಡಿ ಸಿಂಗರಿಸುತ್ತಾರೆ. ಸಾವಿರಾರು ಜನ ಬಾಯಿ ಬೀಗ ಹಾಕಿ ಹರಕೆ ತೀರಿಸುತ್ತಾರೆ. ದನಗಳಿಗೆ ದೀವಟಿಗೆ ಸೇವೆ (ಪೆಂಜಿನ ಮೆರವಣಿಗೆ) ನಡೆಯುತ್ತದೆ. ವಾದ್ಯ, ಸತ್ತಿಗೆ, ಸುರಪಾನಿ, ಕಂಸಾಳೆ ಕುಣಿತ, ಬಿರುದು ಬಾವಲಿಗಳೊಡನೆ ಹತ್ತು ನಂದಿ ಕಂಬಗಳ ಜೊತೆ ಬೀದಿಯಲ್ಲಿ ಮೆರವಣಿಗೆ ನಡೆಯುತ್ತದೆ. ರಾತ್ರಿ 2 ಗಂಟೆಯ ಸಮಯಕ್ಕೆ ಮೆರವಣಿಗೆಯು ಲಕ್ಷ್ಮೀ ದೇವಾಲಯದ ಮುಂದೆ ಬಂದು ನಿಲ್ಲುತ್ತದೆ. ಅಲ್ಲದೆ ಹೊರಗಿನಿಂದ ಬಂದ ಭಕ್ತರಿಗೆ ಊಟದ ವ್ಯವಸ್ಥೆಯನ್ನು ಸಹ ಮಾಡಲಾಗುತ್ತದೆ. ಹೀಗೆ ಅನೇಕ ರೀತಿಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಿಟ್ರೆ ಗ್ರಾಮದಲ್ಲಿ ನಡೆದುಕೊಂಡು ಬರುತ್ತಿದೆ.

## ವಾಸುದೇವ ಅಥವಾ ಗೋಪಿನಾಥ ದೇವಾಲಯ (ಕುಲಗಾಣ)

ಕುಲಗಾಣದ ವಾಸುದೇವ ದೇವಾಲಯವು ಪಶ್ಚಿಮಾಭಿಮುಖವಾಗಿದೆ. ಇದೊಂದು ಶುದ್ಧ ದ್ರಾವಿಡ ಶೈಲಿಯ ದೇವಾಲಯ. ಈ ಗ್ರಾಮದಲ್ಲಿರುವ ಶಾಸನದ ಪ್ರಕಾರ ಹೊಯ್ಸಳ ರಾಜ ಮೂರನೇ ಬಲ್ಲಾಳ ಆಡಳಿತ ಕಾಲದಲ್ಲಿ ಶಾಸನವನ್ನು ಬರೆಸಲಾಗಿದೆ. ಈ ಶಾಸನವು ಸುಮಾರು 33 ಸಾಲುಗಳನ್ನು ಹೊಂದಿದೆ. ಈ ಶಾಸನದ ಕಾಲ ಕ್ರಿ.ಶ.1315 ಏಪ್ರಿಲ್ ನಾಲ್ಕನೇ ತಾರೀಖು ಶುಕ್ರವಾರದಂದು ಬರೆಸಲಾಗಿದೆ. ಈ ಶಾಸನದ ಪ್ರಕಾರ ಹೊಯ್ಸಳರ ಬಿರುದುಗಳು ವಿಷ್ಣುವರ್ಧನನ ಬಿರುದುಗಳು, ಅಲ್ಲದೆ ಈ ದೇವಾಲಯದ ಅಂಗಭೋಗ, ರಂಗಭೋಗಕ್ಕೆ ದಾನ ನೀಡಿರುವ ಬಗ್ಗೆ ತಿಳಿದುಬರುತ್ತದೆ.[85]

ಕುಲಗಾಣದ ವಾಸುದೇವ ದೇವಾಲಯವನ್ನು ಗಮನಿಸಿದರೆ ಹೊಯ್ಸಳರ ಕಾಲದಲ್ಲಿಯೇ ನಿರ್ಮಾಣವಾಗಿರುವಂತೆ ಕಂಡುಬರುತ್ತದೆ. ಈ ಗ್ರಾಮದ ದೇವಾಲಯದ ಅರ್ಚಕ ವೇದಾಂತರಂಗ ರವರ ಪ್ರಕಾರ ಹೊಯ್ಸಳರ ಕಾಲದ ದೇವಾಲಯ ಎಂದು ಹೊಯ್ಸಳರ ಇತಿಹಾಸವನ್ನು ತಿಳಿಸುತ್ತಾರೆ. [86]

ದೇವಾಲಯವು ಗರ್ಭಗೃಹ, ಶುಕನಾಸ ನಂತರ ವಿಶಾಲವಾದ ನವರಂಗವಾಗಿದ್ದು, ಮೂಲಗರ್ಭಗುಡಿಯಲ್ಲಿ ಸುಮಾರು ಆರೂವರೆ ಅಡಿ ಎತ್ತರ ನಿಂತಿರುವ ವಾಸುದೇವಮೂರ್ತಿ ಶಿಲ್ಪ ಇದೆ. ಶುಕನಾಸ ಭಾಗದಲ್ಲಿ ಯಾವುದೇ ತೆರೆದ ಶಿಲ್ಪಗಳಿಲ್ಲ. ನವರಂಗದಲ್ಲಿ ಅಂಡಾಳ್ ಅಮ್ಮರವರ ಶಿಲ್ಪ ಇದೆ. ಗರ್ಭಗೃಹ, ಶುಕನಾಸ, ತೆರೆದ ನವರಂಗದ ಭಾಗಗಳಲ್ಲಿ ಎರಡು ಸಾಲು

18 ಕಂಬಗಳಿವೆ. ಈ ಕಂಬಗಳ ಹೊಯ್ಸಳರ ಕಾಲಕ್ಕೆ ಸೇರಿದ ಕಂಬಗಳಾಗಿವೆ. ಅಲ್ಲದೆ ಎಂಟು ಗೋಡೆ ಕಂಬಗಳಿವೆ. ಮುಖಮಂಟಪವು ದ್ವಾರ ಮಂಟಪವಾಗಿದ್ದು, ಎರಡು ಕಂಬಗಳಿವೆ. ದೇವಾಲಯದ ಮುಂದೆ ಧ್ವಜಗಂಭವಿದೆ. ಈ ಊರಿನಲ್ಲಿ ವಿಶೇಷವಾಗಿ ರಾಮನವಮಿಯನ್ನು ಆಚರಿಸುತ್ತಾರೆ. ನವರಾತ್ರಿಯು ಸಹ ನಡೆಯುತ್ತದೆ. ಬನ್ನಿ ಮರಕ್ಕೆ ಪೂಜೆಯನ್ನು ಸಲ್ಲಿಸುತ್ತಾರೆ. ವೈಕುಂಠ ಏಕಾದಶಿ, ದ್ವಾದಶಿ, ಶ್ರಾವಣ, ಧನುರ್ಮಾಸ ಸಮಯದಲ್ಲಿ ಗ್ರಾಮದಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ವೈಷ್ಣವ ರೂಢಿಸಂಪ್ರದಾಯದಂತೆ ನಡೆಯುತ್ತದೆ. ಅಭಿಜಾತ ನಕ್ಷತ್ರದದ್ದು ನಡೆಯುತ್ತದೆ.

ಈ ಗ್ರಾಮದಲ್ಲಿ ಮತ್ತೊಂದು ಗುಡಿಯಿದ್ದು, ಆ ಗುಡಿಯಲ್ಲಿ ಒಂದು ಕಲ್ಲುಚಪ್ಪಡಿಯಲ್ಲಿ ರಂಗನಾಥಸ್ವಾಮಿ ಶೇಷಾಶಾಹಿಯಾಗಿ ಮಲಗಿರುವುದನ್ನು ನಾವು ಕಾಣಬಹುದಾಗಿದೆ. (ಚಿತ್ರಸಂಖ್ಯೆ-89)

## ಚನ್ನಿಗರಾಯ (ಚೆಲುವ ನಾರಾಯಣಸ್ವಾಮಿ) ದೇವಾಲಯ – ಸಿಂಗವಾಡಿ (ಸೀಗೋಡಿ)

ಸಿಂಗವಾಡಿ ಅಥವಾ ಸೀಗೋಡಿ ಗ್ರಾಮ ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಒಂದು ಪ್ರಾಚೀನ ನೆಲೆಯಾಗಿದೆ. ಸೀಗೋಡಿಯ ಕೊಂಬಿನಮಾಳದಲ್ಲಿನ ಕಲ್ಲು ಶಾಸನ ಪ್ರಕಾರ ನೋಡುವುದಾದರೆ ಹೊಯ್ಸಳ ದೊರೆ ವೀರ ಸೋಮೇಶ್ವರ ದೇವನ ಆಳ್ವಿಕೆಯ ಕಾಲದಲ್ಲಿ ತಮಿಳು ಲಿಪಿಯನ್ನು ಹಾಗೂ ಗ್ರಂಥ ಲಿಪಿಯನ್ನು ಹೊಂದಿರುವ ಶಕವರ್ಷ 1166 ಅಂದರೆ ಕ್ರಿ.ಶ.1244 ರ ಕಾಲಕ್ಕೆ ಶಾಸನವನ್ನು ಬರೆಸಲಾಗಿದೆ. [87] ಈ ಶಾಸನದಲ್ಲಿ ಅನೇಕ ಬಿರುದು ಬಾವಲಿಯನ್ನು ಬರೆಸಲಾಗಿದೆ. ಅದರಲ್ಲಿ ಶ್ರೀ ಪ್ರತಿವೀರಬಲ್ಲವ, ರಾಜಾಧಿರಾಜ, ಪರಮಭಟ್ಟಾರಕ, ಬರೆಧೀಶ್ವರ, ಯಾದವ ಕುಲ ಅಭ್ಯುದಯ ಚೂಡಾಮಣಿ, ಮಲೆರಾಜರಾಜ, ಮಲೆಪೆರೊಗೊಂಡ, ಗಂಡಬೇರುಂಡ, ಶನಿವಾರಸಿದ್ಧಿ, ಗಿರಿದುರ್ಗಮಲ್ಲ, ಚಲದಂಕರಾಮ ಮಕರ ರಾಜ್ಯ ನಿರ್ಮೂಲನ ಚೋಳ ರಾಜ್ಯ ಪ್ರತಿನಿಧಿಚಾರ್ಯ, ಶ್ರೀ ವಿಷ್ಣುವರ್ಧನ ನಿಸ್ಸಂಕ ಪ್ರತಾಪ ಚಕ್ರವರ್ತಿಯಾದ ಶ್ರೀ ವೀರಸೋಮೇಶ್ವರ ದೇವನೆಂದು ಶಾಸನದಿಂದ ತಿಳಿದುಬರುತ್ತದೆ. ಆದಕಾರಣ ಸಿಂಗವಾಡಿಯಲ್ಲಿರುವ ಪ್ರಾಚೀನ ಚನ್ನಿಗರಾಯಸ್ವಾಮಿ ಅಥವಾ ಚಲುವರಾಯಸ್ವಾಮಿ ದೇವಾಲಯ ಹೊಯ್ಸಳರ ಕಾಲದಲ್ಲಿಯೇ ನಿರ್ಮಾಣವಾಗಿರಬಹುದೆಂಬುದು ನನ್ನ ಅನಿಸಿಕೆ. ಚೆನ್ನಿಗರಾಯಸ್ವಾಮಿ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ ಮತ್ತು ದ್ವಾರ ಮಂಟಪವನ್ನು ಪಡೆದುಕೊಂಡಿದೆ. (ಚಿತ್ರಸಂಖ್ಯೆ-90)

ದೇವಾಲಯ ಪೂರ್ವಾಭಿಮುಖವಾಗಿದ್ದು, ಮೂಲಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ನಿಂತಿರುವ ಚೆಲುವ ನಾರಾಯಣಸ್ವಾಮಿಯನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಅಲ್ಲದೆ ದ್ವಾರಮಂಟಪದಲ್ಲಿ ಎರಡು ಕಂಬಗಳಿವೆ. ದೇವಾಲಯದ ಹೊರಭಾಗದ ಗರ್ಭಗುಡಿ ಮತ್ತು ಶುಕನಾಸದ ಅಂಕಣದ ಭಾಗದ ಗೋಡೆಯಲ್ಲಿ ಅರೆಕಂಬಗಳು ಮತ್ತು ಕೋಷ್ಠ ಮಂಟಪಗಳನ್ನು ಕೆತ್ತಲಾಗಿದೆ. ಅದೇ ರೀತಿ ನವರಂಗದ ಭಾಗದ ಭಿತ್ತಿಯ ಭಾಗದಲ್ಲಿಯೂ ಇದೇ ಮಾದರಿಯಲ್ಲಿ ಕೆತ್ತಲಾಗಿರುವ ಅರೆಕಂಬಗಳು ಮತ್ತು ಕೋಷ್ಠ ಮಂಟಪಗಳನ್ನು ಕಾಣಬಹುದಾಗಿದೆ. ದೇವಾಲಯದ ಗರ್ಭಗೃಹದ ಮೇಲಿನ ಭಾಗದಲ್ಲಿ ಇತ್ತೀಚಿನ ಕಾಲದಲ್ಲಿ ನಿರ್ಮಿಸಲಾಗಿರುವ ದ್ರಾವಿಡ ಶೈಲಿಯ ವಿಮಾನವನ್ನು ಕಾಣಬಹುದು.

ದೇವಾಲಯದ ಮುಂದೆ ಧ್ವಜಗಂಭ ಮತ್ತು ಪೀಠವನ್ನು ಪ್ರಸ್ತುತದಲ್ಲಿ ಕಂಡುಬರುತ್ತದೆ. ಈ ದೇವಾಲಯದ ಪರಿಸರದಲ್ಲಿ ಹಲವಾರು ಸಂಖ್ಯೆಯಲ್ಲಿ ವೀರಗಲ್ಲುಗಳು, ಅಲ್ಲದೆ ಮೂರು ತಲೆಯ ರಾವಳೇಶ್ವರ ಶಿಲ್ಪವನ್ನು ಗುರುತಿಸಹುದಾಗಿದೆ. ರಾವಳೇಶ್ವರ ಶಿಲ್ಪಗಳನ್ನು ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು. ಇವುಗಳು 10–11ನೇ ಶತಮಾನಕ್ಕೆ ಸೇರಿದ ಶಿಲ್ಪಗಳಾಗಿವೆ.[೮೮] ಯುಗಾದಿ, ಸಂಕ್ರಾಂತಿ, ನವರಾತ್ರಿ ಸಮಯದಲ್ಲಿ ಒಂಭತ್ತು ದಿನಗಳು ವಿಶೇಷ ಪೂಜೆ ನಡೆಯುತ್ತದೆ. ವಿಶೇಷವಾಗಿ ಗ್ರಾಮದ ಎಲ್ಲಾ ಜನರು ಭಾಗವಹಿಸುತ್ತಾರೆ. ಧಾರ್ಮಿಕ ಸಂಪ್ರದಾಯಗಳು ನಡೆಯುತ್ತವೆ.

## ಚೆಲುವರಾಯಸ್ವಾಮಿ ದೇವಾಲಯ–ಕಬ್ಬಹಳ್ಳಿ

ಚೆಲುವರಾಯಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿದ್ದು, ದ್ರಾವಿಡ ಶೈಲಿಯ ದೇವಾಲಯವಾಗಿದೆ. ಗರ್ಭಗೃಹದಲ್ಲಿ ಚೆಲುವರಾಯಸ್ವಾಮಿ ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿಯರ ಶಿಲ್ಪ ಇದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಅಲ್ಲದೆ ವೀರಾಂಜನೇಯ, ಮಹಾಗಣಪತಿ, ವೇಣುಗೋಪಾಲ ಮತ್ತು ಆಳ್ವಾರ ಶಿಲ್ಪಗಳಿವೆ. ನವರಂಗದ ದ್ವಾರದ ಲಲಾಟಬಿಂಬದಲ್ಲಿ ಶೇಷಶಾಯಿ ವಿಷ್ಣುವಿನ ಉಬ್ಬುಶಿಲ್ಪದ ಕೆತ್ತನೆ ಇದೆ. ದ್ವಾರಮಂಟಪದಲ್ಲಿ ನಾಲ್ಕು ಕಂಬಗಳನ್ನು ಸೇರಿಸಲಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ವಿಮಾನವಿದೆ. ಈ ದೇವಾಲಯವನ್ನು ಗಮನಿಸಿದರೆ, ಮೈಸೂರು ಒಡೆಯರ್ ಕಾಲಕ್ಕೆ ಸೇರಿದ ವಾಸ್ತು ಕೃತಿ ಗಮನಿಸಬಹುದಾಗಿದೆ.

ಚೆಲುವರಾಯಸ್ವಾಮಿ ದೇವಾಲಯದ ಸುತ್ತಲೂ ಪ್ರಕಾರದ ಗೋಡೆ ನಿರ್ಮಿಸಲಾಗಿದೆ. ಮುಖ್ಯ ಪ್ರವೇಶದ್ವಾರದಲ್ಲಿ ದ್ವಾರಮಂಟಪ ಇದೆ. ಇದಕ್ಕೆ ನಾಲ್ಕು ಕಂಬಗಳನ್ನು ಸೇರಿಸಲಾಗಿದೆ.

ಇದನ್ನು ಮಹಾದ್ವಾರವೆಂದೂ ಕರೆಯುವ ವಾಡಿಕೆ ಇದೆ. (ಚಿತ್ರಸಂಖ್ಯೆ-91) ಈ ಗ್ರಾಮದಲ್ಲಿ ಪ್ರತಿಯೊಂದು ಜಾತಿ ಜನಾಂಗ ಇದೆ. ಆದರೆ ಬ್ರಾಹ್ಮಣರು ಮಾತ್ರ ಇಲ್ಲ. ಆದರೂ ಕೂಡ ಈ ವೈಷ್ಣವ ದೇವಾಲಯವಿರುವುದು ಒಂದು ವಿಶೇಷತೆ ಎನ್ನಬಹುದು. ಏಕೆಂದರೆ ಗುಂಡ್ಲುಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಮಾತ್ರ ಬ್ರಾಹ್ಮಣರು ಇದ್ದಾರೆ. ಇವರು ಬೇರೆ ಬೇರೆ ಊರುಗಳಿಗೆ ಹೋಗಿ ದೇವಾಲಯದಲ್ಲಿ ಪೂಜೆ ಪುನಸ್ಕಾರದಲ್ಲಿ ಭಾಗಿಯಾಗುವ ಸಂಪ್ರದಾಯವಿದೆ. ಇಲ್ಲಿಯೂ ಸಹ ಅನೇಕ ರೀತಿಯ ಧಾರ್ಮಿಕ ವಿಧಿವಿಧಾನದ ಪ್ರಕಾರವಾಗಿಯೇ ಹಬ್ಬ ಹರಿದಿನಗಳಲ್ಲಿ ಪೂಜೆಗಳು ನಡೆಯುವ ಪರಂಪರೆ ಇದೆ.

## ವರದರಾಜಸ್ವಾಮಿ ದೇವಾಲಯ-ಹಂಗಳ

ಹಂಗಳ ಗ್ರಾಮವು ಇತಿಹಾಸ ಪ್ರಸಿದ್ಧವಾದ ಗ್ರಾಮವಾಗಿದ್ದು, ಈ ಗ್ರಾಮಕ್ಕೆ ಪಂಗುಲ ಎಂಬ ಹೆಸರನಿಂದ ಕರೆಯಲಾಗುತ್ತಿತ್ತು. ಇಲ್ಲಿಯ ವರದರಾಜಸ್ವಾಮಿ ದೇವಾಲಯದ ಉತ್ತರ ದಿಕ್ಕಿನ ಗೋಡೆಯ ತಳಪಾದಿಯಲ್ಲಿ ಕ್ರಿ.ಶ.13ನೇ ಶತಮಾನಕ್ಕೆ ಸೇರಿದ ಮೂರನೇ ನರಸಿಂಹನ ಕಾಲದ ಶಾಸನದಿಂದ ತಿಳಿದುಬರುತ್ತದೆ.[89] ಹಂಗಳಕ್ಕೆ ಇನ್ನೊಂದು ಹೆಸರು ಧರ್ಮಪುರಿ. ಪಂಗುಲಂ ಎಂದು ಕರೆಯಲಾಗಿದೆ. ಇದು ಹಳೆಯ ಹೆಸರು. ಇಂದಿನ ಹೆಸರು ಹಂಗಳವಾಗಿದೆ. ಪಂಗು ಎಂದರೆ ರಾಜನಿಗೆ ಕೊಡಬೇಕಾದ ತೆರಿಗೆ, ಮಂಗಲಂ ಎನ್ನುವುದು ಅಗ್ರಹಾರ, ಆದಕಾರಣವೇ ವರದರಾಜಸ್ವಾಮಿ ದೇವಾಲಯವನ್ನು ನಿರ್ಮಿಸಲಾಗಿದೆ. ಆ ದೇವರ ಸೇವಾರ್ಥಕ್ಕಾಗಿ ರಾಜ ಇಲ್ಲಿನ ಪೊಗದಿಯನ್ನು ಬಿಟ್ಟಿರಬಹುದು.

ಇದರ ಕಾಲ ಕ್ರಿ.ಶ.ಸುಮಾರು 1275, ಇಲ್ಲಿ ಪಙ್ಗಳತ್ತು ತಿರುನಾರಾಯಣ ಪೆರುಮಾ ಎಂದು ಬರೆಯಲಾಗಿದೆ. ಇದೇ ಊರಿನ ಇನ್ನೊಂದು ಶಿಲಾಶಾಸನದ ಪ್ರಕಾರ ಹಂಗುಳ ಎಂದು ತಿಳಿದುಬರುತ್ತದೆ.[90] ಇದು ವಿಜಯನಗರ ಅರಸ ಮೂರನೇ ಶ್ರೀರಂಗರಾಯನ ಕಾಲದ ಶಾಸನವಾಗಿದೆ. ಇಲ್ಲಿ ಪೆಂಗು ಎಂಬುದು ರಾಜನಿಗೆ ನೀಡಬೇಕಾಗಿದ್ದ ಕರದ (ಸುಂಕ) ಭಾಗ ರಾಜಾದಾಯ ಅಲ್ಲದೆ ಈ ಅರ್ಥವು ಪಂಗು ಕನ್ನಡ ಪಂಜು (ತಮಿಳು) ಪಂಙ್ಗ ಮಲೆಯಾಳ ಸಂಗಳ್ (ತುಳು) ಎಂದು ಆಗುತ್ತದೆ.[91] ಮೈಸೂರು ಒಡೆಯರಾದ ದೊಡ್ಡದೇವರಾಜ ಒಡೆಯರ್ ಪುತ್ರ ಚಿಕ್ಕದೇವರಾಜ ಒಡೆಯರ್‌ರವರು (ಕ್ರಿ.ಶ.1673-1704) ರಲ್ಲಿ ತಮ್ಮ ಬಾಲ್ಯ ಜೀವನದ ದಿವಸಗಳನ್ನು ಇಲ್ಲಿ ಕಳೆದರು ಎಂಬುದರ ಬಗ್ಗೆ ಶಿಲಾಶಾಸನಗಳು ಮತ್ತು ಇತರೆ ಮೂಲಗಳು ಸ್ಪಷ್ಟಪಡಿಸುತ್ತವೆ.[92] ಕ್ರಿ.ಶ.1668 ರಲ್ಲಿ ದೊಡ್ಡದೇವರಾಜ ಒಡೆಯರ್‌ರವರು ಶ್ರೀರಂಗಪಟ್ಟಣದಿಂದ ಮೈಸೂರಿನ ದಕ್ಷಿಣ ದಿಕ್ಕಿಗೆ ಗುಂಡ್ಲು-ವಿಜಯಪುರ ಬಳಿಯ ಹಂಗಳ ಗ್ರಾಮಕ್ಕೆ ತನ್ನ ಸ್ವಕುಟುಂಬವನ್ನು ಕರೆತಂದರು. ಪಿಂದೆ ಚಾಮರಾಜರಸನಾಳದಿಂಬಳಿಯ ಇಮ್ಮಡಿ ರಾಜನುಂ

ಕಂಠೀರವನರಸರಾಜ ದೊಡ್ಡ ದೇವರಾಜರು ಪಟ್ಟಣ ಮಹಿಸೂರಂ ನಿಷ್ಕಂಟಕ ಮಾಗೆ ಆಳ್ದುಪೋಪಂದು ಚಿಕ್ಕ ದೇವರಾಜರು ತೆಂಕ ಸೀಮೆಯಾದ ಹಂಗಳವೆಂಬ ಊರಿಗೆ ಬಂದು ವಿಶಾಲಾಕ್ಷಪಂಡಿತಂ ಬೆರಸು ಮಹಾರಾತ್ರಿಯೊಳೆ ಪಟ್ಟಣಮಂ ಪೊಕ್ಕು ರಾಜ್ಯಾಭಿಷೇಕಮನಾಂತು ಪಂಡಿತರಿಗೆ ಮಂತ್ರಿ ಪದಮನಿತ್ತಾತಂ ಪೇಳ್ದಂತೆ ನಡೆಸುತ್ತಾಮಿರಲೊಂದು ದಿವಸಂ ಎಂಬ ಪ್ರಸ್ತಾಪವನ್ನು ಇಲ್ಲಿ ಗಮನಿಸಬಹುದಾಗಿದೆ. ಅಲ್ಲದೆ ಕ್ರಿ.ಶ.1662 ರಲ್ಲಿ ಯಳಂದೂರಿನ ಲಿಂಗರಾಜಯ್ಯನ ಮಗಳಾದ ದೇವಾಂಬ (ದೇವಾಜಮ್ಮ) ಜೊತೆ ವಿವಾಹವಾದ ನಂತರ ಹಂಗಳ ಗ್ರಾಮದಲ್ಲಿ ನೆಲೆಸಿರುವ ಬಗ್ಗೆ ತಿಳಿದುಬರುತ್ತದೆ.[93] ಹಂಗಳದ ವರದರಾಜಸ್ವಾಮಿ ದೇವಾಲಯ ಕ್ರಿ.ಶ.13-14ನೇ ಶತಮಾನದಲ್ಲಿ ನಿರ್ಮಾಣವಾಗಿದೆ. ಸುಮಾರು 900 ವರ್ಷಗಳ ಹಿಂದೆಯೇ ಆಗಿದೆ ಎನ್ನಬಹುದು. ಈ ದೇವಾಲಯಕ್ಕೆ ಹೊಯ್ಸಳ ಮೂರನೇ ವೀರನರಸಿಂಹನ ಕ್ರಿ.ಶ.1275 ರ ಶಾಸನ ಪಾಠದಿಂದ ತಿಳಿದುಬರುತ್ತದೆ. ವರದರಾಜಸ್ವಾಮಿ ದೇವಾಲಯ ಶ್ರೀ ವೈಷ್ಣವ ಪರಂಪರೆಗೆ ಸೇರಿದ ಆಲಯ. ಆದಕಾರಣ ತಿರುನಾರಾಯಣ ಎಂಬ ಇನ್ನೊಂದು ನಾಮಧೇಯ ಇದೆ. ಈ ದೇವಾಲಯವು ಮೂರು ಹಂತಗಳಲ್ಲಿ ನಿರ್ಮಾಣವಾಗಿದೆ. ದೇವಾಲಯದ ಗರ್ಭಗುಡಿ ಮತ್ತು ಶುಕನಾಸದ ಭಾಗವು 11-12ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಏಕೆಂದರೆ ಇದು ಹೊಯ್ಸಳರ ಕಾಲಕ್ಕೆ ಸೇರಿದ್ದರೂ ಕೂಡ ಚೋಳರ ಪ್ರಭಾವವನ್ನು ವಾಸ್ತುಶೈಲಿಯ ದೃಷ್ಟಿಯಿಂದ ಕಾಣಬಹುದಾಗಿದೆ. (ಚಿತ್ರಸಂಖ್ಯೆ-92)

ವರದರಾಜಸ್ವಾಮಿ ದೇವಾಲಯದ ಮೂಲ ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಸುಮಾರು 5 ಅಡಿ ಎತ್ತರದ ವರದರಾಜಸ್ವಾಮಿ ಶಿಲ್ಪ ಇದೆ. ಶುಕನಾಸ ಅಂಕಣದಲ್ಲಿ ಹೊಯ್ಸಳ ವಾಸ್ತುಶೈಲಿಯ ನಾಲ್ಕು ಕಂಬಗಳಿವೆ. (ಚಿತ್ರಸಂಖ್ಯೆ-93) ಅದರ ಮೇಲ್ಭಾಗದಲ್ಲಿ ಭುವನೇಶ್ವರಿ ಇದೆ. ಇಲ್ಲಿರುವ ಕಂಬಗಳು ಹೊಯ್ಸಳ ಹಾಗೂ ಚೋಳ ಎರಡು ಶೈಲಿಯ ಲಕ್ಷಣಗಳನ್ನು ಸಹ ಹೊಂದಿದೆ. ಇಲ್ಲಿರುವ ದ್ವಾರ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ ಹಾಗೂ ಬಿಡಿಶಿಲ್ಪಗಳು ಸಹ ಇವೆ.

ನವರಂಗವು ವಿಶಾಲವಾಗಿದ್ದು, ಎಂಟು ಕಂಬಗಳಿಂದ ಕೂಡಿದೆ. ನವರಂಗದಲ್ಲಿ ದಕ್ಷಿಣ ದಿಕ್ಕಿಗೆ ಪ್ರವೇಶದ್ವಾರವಿದ್ದು, ದ್ವಾರಕ್ಕೆ ಮಂಟಪ ಇದೆ. ಈ ಮಂಟಪದಲ್ಲಿ ಎರಡು ಕಂಬಗಳಿವೆ. ದೇವಾಲಯವು ಪೂರ್ವಾಭಿಮುಖವಾಗಿರುವುದರಿಂದ, ಮೂಲ ದ್ವಾರವು ಪೂರ್ವಾಭಿಮುಖವಾಗಿದೆ. ಅಲ್ಲದೆ ಮುಖಮಂಟಪ ಸಹ ಇದೆ. ಈ ಮುಖಮಂಟಪಕ್ಕೆ ನಾಲ್ಕು ಕಂಬಗಳಿವೆ. ದೇವಾಲಯ ಪ್ರವೇಶಿಸಲು ಮೆಟ್ಟಿಲುಗಳಿದ್ದು, ಇಕ್ಕೆಲಗಳಲ್ಲಿ ಆನೆಮುಖ ಹೊಂದಿರುವ ಚಪ್ಪಡಿಯನ್ನು ಇರಿಸಲಾಗಿದೆ. ಅದರ ಮುಂದೆ ಒಂದು ಕಮಲಪೀಠವನ್ನು ಸಹ ಇಡಲಾಗಿದೆ.

ನವರಂಗದ ಹೊರಗೋಡೆಗೆ ಸೇರಿದಂತೆ ಪ್ರವೇಶದ್ವಾರದ ದಕ್ಷಿಣ ದಿಕ್ಕಿಗೆ ವೇಣುಗೋಪಾಲನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ದೇವಾಲಯದ ನವರಂಗದ ಒಳಗೆ ಆಳ್ವಾರ್ ಶಿಲ್ಪಗಳು, ವಿಷ್ಣುಶಿಲ್ಪಗಳು ಕಂಡುಬರುತ್ತವೆ.

ವರದರಾಜಸ್ವಾಮಿ ದೇವಾಲಯದಲ್ಲಿ ಸುಮಾರು 3 ಅಡಿ ಎತ್ತರವಿರುವ ರುಕ್ಮಿಣಿ ಶಿಲ್ಪವನ್ನು ಹಾಗೂ ಸತ್ಯಭಾಮೆಯರ ಶಿಲ್ಪ ಇದೆ. ಕ್ರಿ.ಶ.1300 ರ ಸಮಯಕ್ಕೆ ವಿಜಯನಗರದ ಅರಸರ ಕಾಲವೇ ಅನೇಕ ಕೆಲಸ ಕಾರ್ಯವಾಗಿರುವುದು ದೃಢಪಡುತ್ತದೆ. ದೇವಾಲಯದ ಗರ್ಭಗೃಹದ ಮೇಲೆ ಇಟ್ಟಿಗೆಯಿಂದ ನಿರ್ಮಿತವಾದ ವಿಮಾನವನ್ನು ಮಾಡಲಾಗಿದೆ. ಇದು ಕ್ರಿ.ಶ.1629ರಲ್ಲಿ ಆಗಿರುವಂತೆ ತಿಳಿದುಬರುತ್ತದೆ.

ಶ್ರೀವರದರಾಜಸ್ವಾಮಿ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ್ದು, ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯದ ಸಂರಕ್ಷಣೆಗೆ ಒಳಪಟ್ಟಿದೆ. ವರದರಾಜಸ್ವಾಮಿ ದೇವಾಲಯದಲ್ಲಿ ಪ್ರತಿದಿನ ಪೂಜಾ ಕಾರ್ಯಗಳು ನಡೆಯುತ್ತದೆ. ಶ್ರಾವಣಮಾಸ, ಕಾರ್ತಿಕಮಾಸ, ನವರಾತ್ರಿ ಹಬ್ಬದ ಸಮಯದಲ್ಲಿ ವಿವಿಧ ರೀತಿಯ ಪೂಜಾ ಕಾರ್ಯಕ್ರಮಗಳು ಜರುಗುತ್ತಿರುತ್ತವೆ. ಹಂಗಳದ ವರದರಾಜಸ್ವಾಮಿ ದೇವಾಲಯ ಈ ಭಾಗದ ಭೌಗೋಳಿಕ ಪರಿಸರಕ್ಕನುಗುಣವಾಗಿ ನಿರ್ಮಾಣವಾಗಿದೆ. ಹೊಯ್ಸಳರ ಕಾಲದಿಂದ ಪ್ರಾರಂಭವಾಗಿ ವಿಜಯನಗರ ಮೈಸೂರು ಅರಸರ ಕಾಲಕ್ಕೂ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಅಂದಿನ ಕಾಲಕ್ಕೆ ಈ ಗ್ರಾಮ ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು. ಆದಕಾರಣ ಈ ಗ್ರಾಮದಲ್ಲಿ ಈ ದೇವಾಲಯ ಧಾರ್ಮಿಕ ಕಟ್ಟಡವಾಗಿ ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು ಎಂಬುದು ಗಮನಾರ್ಹ. ಹಂಗಳದಲ್ಲಿ ಹಿಂದೆ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳನ್ನು ಗಮನಿಸಿದಾಗ ರಾಜರ ಪ್ರೋತ್ಸಾಹದಿಂದ ವೈಷ್ಣವ ದೇವಾಲಯಗಳು ಶ್ರೀಮಂತಗೊಂಡಿವೆ. ಹಿಂದಿದ್ದ ಸಂಪ್ರದಾಯದ ಪೂಜಾಪದ್ಧತಿಗಳ ಜೊತೆಗೆ ಅನೇಕ ಬಗೆಯ ಉತ್ಸವಗಳನ್ನು ನಡೆಯುತ್ತದೆ. ಪೂಜೆ, ನೈವೇದ್ಯ, ನೈಮಿತ್ತಿಕ ಕಾರ್ಯ, ಶ್ರೀಕಾರ್ಯ, ನಂದಾದೀವಿಗೆ ಮಹಾವಾದ್ಯ ಅಂಗರಂಗ ವೈಭೋಗ ನಡೆಯುತ್ತದೆ, ಉತ್ಸವಗಳು ನಡೆಯುತ್ತವೆ. ಜಾತ್ರೆಗಳು, ರಥೋತ್ಸವ ಕೂಡ ಇಲ್ಲಿ ನಡೆಯುತ್ತವೆ. ದೀಪಾವಳಿ, ಮಕರ ಸಂಕ್ರಾಂತಿ, ಏಕಾದಶಿ ಮತ್ತು ದ್ವಾದಶಿ, ರಥಸಪ್ತಮಿಯದ್ದು ದೇವರ ಕಾರ್ಯಗಳು ವಿಶೇಷವಾಗಿ ನಡೆಯುತ್ತವೆ.

ಈ ಗ್ರಾಮದಲ್ಲಿ ಎತ್ತಿನ ಹಬ್ಬವು ಸಹ ನಡೆಯುವ ಪರಂಪರೆ ಇದೆ. ಈ ಹಬ್ಬ ಬೇರೆ ಬೇರೆ ಸಂಪ್ರದಾಯಕ್ಕೆ ಸೇರಿದ್ದರೂ ಸಹ ಇಲ್ಲಿಯ ಕಾರ್ಯಕ್ರಮಗಳಲ್ಲಿ ಒಂದಾಗುವ ಸಹಜ ಪ್ರವೃತ್ತಿ ಈ ಗ್ರಾಮದಲ್ಲಿದೆ ಎಂದರೆ ತಪ್ಪಾಗಲಾರದು.

## ಗೋಪಾಲಸ್ವಾಮಿ ದೇವಾಲಯ–ಹಿಮವದ್ ಗೋಪಾಲಸ್ವಾಮಿ ಬೆಟ್ಟ

ಗೋಪಾಲಸ್ವಾಮಿ ಬೆಟ್ಟ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಪ್ರಸಿದ್ಧ ವೈಷ್ಣವ ಧರ್ಮದ ಧಾರ್ಮಿಕ ಕ್ಷೇತ್ರವಾಗಿದೆ. ಗುಂಡ್ಲುಪೇಟೆ ಪಟ್ಟಣದಿಂದ ದಕ್ಷಿಣ ದಿಕ್ಕಿಗೆ ಸುಮಾರು 18 ಕಿಲೋಮೀಟರ್ ದೂರದಲ್ಲಿ ಇದೆ. ನೀಲಗಿರಿ, ಮೈಸೂರು ರಾಜ್ಯದ ಹೆದ್ದಾರಿ 17 ರಲ್ಲಿದ್ದು, ಈ ಬೆಟ್ಟ ಸಮುದ್ರಮಟ್ಟಕ್ಕಿಂತ ಸುಮಾರು 4770 ಅಡಿಗಳಷ್ಟು ಎತ್ತರವನ್ನು ಹೊಂದಿರುವ ಬೆಟ್ಟವಾಗಿದೆ. ಈ ಬೆಟ್ಟದಲ್ಲಿ ಸದಾ ಹಿಮ ಸುರಿಯುವುದರಿಂದ, ಈ ಬೆಟ್ಟಕ್ಕೆ ಹಿಮವದ್ ಗೋಪಾಲಸ್ವಾಮಿ ಬೆಟ್ಟವೆಂದು ಕರೆಯುವ ವಾಡಿಕೆ ಇದೆ.[94]

ಸುಮಾರು 25 ಚದರ ಕಿಲೋಮೀಟರ್ ಸುತ್ತಳತೆಯನ್ನು ಹೊಂದಿದೆ. ಅಲ್ಲದೆ ಇದು ಬಂಡೀಪುರ ರಾಷ್ಟ್ರೀಯ ಅಭಯಾರಣ್ಯದ ವ್ಯಾಪ್ತಿಗೆ ಸೇರಿದೆ.

ಹಿಮವದ್ ಗೋಪಾಲಸ್ವಾಮಿ ಬೆಟ್ಟವನ್ನು ಅನೇಕ ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ದಕ್ಷಿಣ ಗೋವರ್ಧನಗಿರಿ, ಕಂಜಗಿರಿ, ಕಮಲಾಚಲ, ಬೆಟ್ಟದಕೋಟೆ ಮತ್ತು ಮೂಡಣ ಕೋಟೆಗಳೆಂದು ಕರೆಯುತ್ತಾರೆ. ಗೋಪಾಲಸ್ವಾಮಿ ಬೆಟ್ಟದ ಸುತ್ತಲೂ ಎತ್ತಕಡೆ ನೋಡಿದರೂ ಬೆಟ್ಟಗಳು ಗುಡ್ಡಗಳೇ ಇವೆ. ಪೂರ್ವಕ್ಕೆ ತ್ರಿಯಂಬಕಾದ್ರಿ, ಪಶ್ಚಿಮಕ್ಕೆ ನೀಲಾದ್ರಿ, ಉತ್ತರಕ್ಕೆ ಮಂಗಳಾದ್ರಿ, ದಕ್ಷಿಣಕ್ಕೆ ಶಂಬರಾಗಿರಿ ಆಗ್ನೇಯಕ್ಕೆ ಹಂಸಾದ್ರಿ, ನೈಋತ್ಯಕ್ಕೆ ಗರುಡಾದ್ರಿ, ವಾಯುವ್ಯಕ್ಕೆ ಪಲ್ಲವ, ಈಶಾನ್ಯಕ್ಕೆ ಮಲ್ಲಿಕಾರ್ಜುನಗಿರಿಗಳಿವೆ. ಇವುಗಳ ಜೊತೆಗೆ ಗದ್ದೆಹಳ್ಳದ ಗುಡ್ಡ, ವಡೇರಕಲ್ಲುಗುಡ್ಡ, ಕೆಂಪನಾಯಕನದುರ್ಗ, ಬಂಡಿಕಲ್ ಬೆಟ್ಟ ಇನ್ನೂ ಹಲವಾರು ಚಿಕ್ಕಪುಟ್ಟ ಗುಡ್ಡಗಳಿವೆ. ಇವುಗಳನ್ನು ಚಿಕ್ಕಬೆಟ್ಟಗಳೆಂದೂ ಕರೆಯುವ ವಾಡಿಕೆ ಇದೆ. ಈ ಎಲ್ಲಾ ಬೆಟ್ಟಗಳಿಗೂ ಸ್ಥಳೀಯವಾಗಿ ಒಂದೊಂದು ಐತಿಹಾಸಿಕ ಕಥೆಗಳಿವೆ. ಅನೇಕ ಹಿರಿಯ ವಿದ್ವಾಂಸರು ಅನೇಕ ಬಗೆಯಲ್ಲಿ ಈ ಬೆಟ್ಟವನ್ನು ಅಭ್ಯಸಿಸಿದ್ದಾರೆ. ಕೆಲವರು ಪೌರಾಣಿಕ ಹಿನ್ನೆಲೆಯನ್ನು ವ್ಯಕ್ತಪಡಿಸಿದರೆ, ಕೆಲವರು ಐತಿಹಾಸಿಕವಾಗಿ ನೋಡಿದ್ದಾರೆ ಮತ್ತು ಕೆಲವರು ಸಾಹಿತ್ಯಿಕವಾಗಿ ನೋಡಿದ್ದಾರೆ. ಅಲ್ಲದೆ ಭಾವಿಷ್ಯೋತ್ತರ ಪ್ರಕಾರವಾಗಿಯೂ ನೋಡಿದ್ದಾರೆ. ಅಗಸ್ತ್ಯರು ಉತ್ತರ ಭಾರತದಲ್ಲಿರುವ ವಿಂಧ್ಯ ಪರ್ವತದ ಬೆಳವಣಿಗೆಯ ಅಭಿವೃದ್ಧಿ ಕಾರ್ಯಗಳನ್ನು ನಿಲ್ಲಿಸಿ ದಕ್ಷಿಣ ಭಾರತದ ಅದರಲ್ಲೂ ದಕ್ಷಿಣ ಕರ್ನಾಟಕದ ಕಟ್ಟಕಡೆಯ

ನೆಲೆಯಾದ ಪವಿತ್ರ ಗೋಪಾಲಸ್ವಾಮಿ ಬೆಟ್ಟಕ್ಕೆ ಬಂದು ಗೋಪಾಲಸ್ವಾಮಿಯನ್ನು ಕುರಿತು ತಪಸ್ಸು ಮಾಡಿದರು. ನಂತರ ಗೋಪಾಲಸ್ವಾಮಿಯು ಪ್ರತ್ಯಕ್ಷನಾದನು. ನಂತರ ರುಕ್ಮಿಣಿ, ಸತ್ಯಭಾಮೆಯರೊಂದಿಗೆ ಇಲ್ಲಿ ನೆಲೆಸಿದನು ಎಂಬ ಹೇಳಿಕೆಗಳಿವೆ. ಅಲ್ಲದೆ ಅಗಸ್ತ್ಯರು ಉತ್ತರದ ಕಡೆಯಿಂದ ಬರುವಾಗ ಪುಣ್ಯನದಿ, ಪುಣ್ಯವೃಕ್ಷ, ಪುಣ್ಯಾರಣ್ಯ, ಪುಣ್ಯಾಶ್ರಮ, ಋಷಿಗಳೆಲ್ಲರು ಇಲ್ಲಿಗೆ ಬಂದರು ಎಂಬ ಐತಿಹಾಸಿಕ ವಿಚಾರಗಳಿವೆ. ಕಮಲಾಚಲದ ಆಗ್ನೇಯದಲ್ಲಿ ಕೌಂಡಿನ್ಯ ಋಷಿ ನೆಲೆಸಿದ್ದನು. ಇದರಿಂದಾಗಿ ಆಶ್ರಮದಲ್ಲಿ ಒಂದು ನದಿ ಉಗಮವಾಯಿತೆಂದೂ ಅದು ನಂತರದ ಕಾಲದಲ್ಲಿ ಈ ಭಾಗದ ಕೌಂಡಿನ್ಯ ನದಿಯಾಗಿ ಗುಂಡ್ಲುಪೇಟೆ ತಾಲ್ಲೂಕಿನ ನಾನಾ ಭಾಗಗಳನ್ನು ಹಸಿರುಗೊಳಿಸಲು ಸಾಧ್ಯವಾಯಿತೆಂದು ಹೇಳಿಕೆಗಳಿವೆ.

ದಕ್ಷಿಣ ದಿಕ್ಕಿನಲ್ಲಿ ಜಮದಗ್ನಿ, ನೈಋತ್ಯಕ್ಕೆ ಭೃಗು, ಪಶ್ಚಿಮಕ್ಕೆ ಕಪಿಲ, ವಾಯುವ್ಯಕ್ಕೆ ಕಣ್ವ, ಉತ್ತರಕ್ಕೆ ವಿಶ್ವಾಮಿತ್ರ, ಈಶಾನ್ಯಕ್ಕೆ ಕಶ್ಯಪ, ಪೂರ್ವಕ್ಕೆ ಮಾಂಡವ್ಯ ಋಷಿಮುನಿಗಳ ಆಶ್ರಯ ಇದ್ದಿತ್ತೆಂದೂ ಪುರಾಣದಲ್ಲಿ ಉಕ್ತವಾಗಿದೆ. ಅಲ್ಲದೆ ಈ ಭಾಗದ ಹಂಸತೀರ್ಥದ ಪುರಾಣಕಾರರು ಅಗಸ್ತ್ಯ ಸ್ಥಾಪಿಸಿದ್ದೆಂದು ತಿಳಿಸುತ್ತಾ, ಈ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ದೈವಿಕ್ ಆವರಣವನ್ನು ಕಲ್ಪಿಸಿದ್ದಾರೆ. ಆದರೆ ವಾಸ್ತವವಾಗಿ ಗೋಪಾಲಸ್ವಾಮಿ ಬೆಟ್ಟದ ಮೇಲೆ ಗೋಪಾಲಸ್ವಾಮಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ.[95] ಆದರೆ ಶಾಸನಗಳ ಆಧಾರವನ್ನು ಗಮನಿಸಿದರೆ ಕ್ರಿ.ಶ.1315ರಲ್ಲಿ ಗೋಪಾಲಸ್ವಾಮಿಯ ಶಿಲ್ಪವನ್ನು ಪ್ರತಿಷ್ಠೆ ಮಾಡಿಸಿ ದೇವರ ಅಂಗರಂಗ ಭೋಗಕ್ಕೆ ತಿರುವಳಿಯಾಟಕ್ಕೆ ಬಲ್ಲಾಳದೇವ ಅರಸರಿಂದ ಕುಡುಗಣ ದೊಳಗಣ ಕಣ್ಣವಗಾಲದವನು ದತ್ತಿಬಿಟ್ಟು ವಿಚಾರ ಶಾಸನ ಪಾಠದಿಂದ ತಿಳಿದುಬರುತ್ತದೆ.[96]

ಗೋಪಾಲಸ್ವಾಮಿ ಬೆಟ್ಟದ ಪರಿಸರದಲ್ಲಿ ಸುಮಾರು 77 ತೀರ್ಥಗಳಿವೆ. ಒಂದೊಂದು ತೀರ್ಥಕ್ಕೆ ಒಂದೊಂದು ಕಥೆ ಇದೆ. ಈ ಕಥೆಗಳನ್ನು ಆಧರಿಸಿ ಇಲ್ಲಿಯ ಹಿಮವದ್ ಗೋಪಾಲಸ್ವಾಮಿಯನ್ನು ಸಂತಾನ ಗೋಪಾಲಸ್ವಾಮಿ ಎಂದು ಕರೆಯುತ್ತಾರೆ. ಈ ಪರಿಸರದ ಮುಖ್ಯ ದೇವಾಲಯವೇ ಗೋಪಾಲಸ್ವಾಮಿ ದೇವಾಲಯವಾಗಿದೆ. ಯಾವಾಗಲೂ ಹಿಮದಿಂದ ಆವರಿಸಿರುವುದರಿಂದ ಹಿಮವದ್ ಗೋಪಾಲಸ್ವಾಮಿ ದೇವಾಲಯವೆಂದು ಕರೆಯುತ್ತಾರೆ. ಆ ದೇವಾಲಯವು ಹೊಯ್ಸಳರ ಕಾಲಕ್ಕೆ ಸೇರಿದೆ. ನಂತರ ವಿಜಯನಗರ ಅರಸರ ಕಾಲಕ್ಕೂ ಹಾಗೂ ಮೈಸೂರು ಒಡೆಯರ್ ಕಾಲಕ್ಕೂ ಬೆಳವಣಿಗೆಯಾಗಿದೆ.

ದೇವಾಲಯವು ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗವನ್ನು ಒಳಗೊಂಡಿದೆ. ಮೂಲಗರ್ಭಗುಡಿಯಲ್ಲಿ ಅಷ್ಟದಳದ ಕಲ್ಲುಪೀಠದ ಮೇಲೆ ಶ್ರೀ ವೇಣುಗೋಪಾಲಸ್ವಾಮಿಯ ಶಿಲ್ಪವನ್ನು ಇರಿಸಲಾಗಿದೆ. ವೇಣುಗೋಪಾಲ ಎಂಬ ಹೆಸರಿಗೆ

ಪೂರಕವಾಗಿ ಈ ಶಿಲ್ಪದ ಕೆತ್ತನೆಯನ್ನು ಮಾಡಲಾಗಿದೆ. ವೇಣುಗೋಪಾಲ ಶಿಲ್ಪದ ಎಡಭಾಗಕ್ಕೆ ರುಕ್ಮಿಣಿ ಸತ್ಯಭಾಮೆಯರ ಶಿಲ್ಪಗಳನ್ನು ಅಲ್ಲದೆ ಗೋವುಗಳ ಶಿಲ್ಪಗಳಿವೆ. ಮೂಲ ವೇಣುಗೋಪಾಲ ಶಿಲ್ಪವು ಸುಮಾರು ಆರು ಅಡಿ ಎತ್ತರವನ್ನು ಹಾಗೂ ಸುಂದರವಾದ ಹೊಯ್ಸಳರ ವಾಸ್ತುಶಿಲ್ಪವಾಗಿದೆ. ಪ್ರಭಾವಳಿಯಲ್ಲಿ ಬಳ್ಳಿ ಸುರಳಿ ಗಿಡಗಳಿಂದ ಕೂಡಿದೆ. ಅಲ್ಲದೆ ಇಲ್ಲಿ ರಾಮಾನುಜಾಚಾರ್ಯರು, ವಿಶ್ವಕಸೇನ, ಆಳ್ವಾರ್ ಮೊದಲಾದ ಶಿಲ್ಪಗಳಿವೆ. ನವರಂಗದ ಬಲಗಡೆಯಲ್ಲಿರುವ ಒಂದು ಚಿಕ್ಕದಾದ ಗುಡಿಯಲ್ಲಿ ಸುಗ್ರೀವನಮೂರ್ತಿ ಇದೆ. ಶುಕನಾಸಿಯ ಪ್ರವೇಶದ್ವಾರದ ನಿಲುವುಗಳ ಇಕ್ಕೆಲಗಳಲ್ಲಿ ಜಯ–ವಿಜಯರ ಉಬ್ಬು ಶಿಲ್ಪಗಳಿವೆ.

ದೇವಾಲಯದ ಮುಂದೆ ಕಲ್ಲಿನಿಂದ ಮಾಡಿದ ಬೃಂದಾವನ, ಧ್ವಜಸ್ತಂಭ ಅಲ್ಲದೆ ಬಲಿಪೀಠಗಳಿವೆ. ಧ್ವಜಸ್ತಂಭದಲ್ಲಿ ಶಂಖ, ಚಕ್ರ, ಗರುಡ ಮತ್ತು ಆಂಜನೇಯನ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಒಟ್ಟಾರೆ ಹೇಳುವುದಾದರೆ, ಗೋಪಾಲಸ್ವಾಮಿ ಬೆಟ್ಟದಲ್ಲಿರುವ ಗೋಪಾಲಸ್ವಾಮಿ ದೇವಾಲಯವು ಶ್ರೀ ವೈಷ್ಣವ ಸಂಪ್ರದಾಯಕ್ಕೆ ಅನುಗುಣವಾಗಿಯೇ ನಿರ್ಮಾಣಗೊಂಡಿದೆ. ಗೋಪಾಲಸ್ವಾಮಿ ಬೆಟ್ಟಕ್ಕೆ ಪೂರಕವಾಗಿ ಅಲ್ಲದೆ ಸೇರಿದಂತೆ ಇನ್ನಿತರ ಕೆಲವು ಸಣ್ಣಪುಟ್ಟ ದೇವಾಲಯಗಳಿವೆ. ಅವುಗಳು ಶೈವ ಮತ್ತು ವೀರಶೈವ ಧರ್ಮಕ್ಕೆ ಪೂರಕವಾದ ದೇವಾಲಯಗಳಾಗಿರುವುದರಿಂದ ಅವುಗಳನ್ನು ಶೈವ ದೇವಾಲಯಗಳ ಅಧ್ಯಯನದಲ್ಲಿ ಸೇರಿಸಲಾಗಿರುತ್ತದೆ. ಗೋಪಾಲಸ್ವಾಮಿ ಬೆಟ್ಟಕ್ಕೆ ಹಾಗೂ ದೇವಾಲಯಕ್ಕೆ ಸಂಬಂಧಿಸಿದಂತೆ ತೇರು, ಉತ್ಸವಗಳು ನಡೆಯುತ್ತದೆ. ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಪ್ರತಿವರ್ಷ ಅಷ್ಠತೀರ್ಥೋತ್ಸವ, ದೀಪೋತ್ಸವ, ಧನುರ್ಮಾಸದ ಪೂಜೆ, ಪ್ರತಿ ಶ್ರಾವಣ ಮಾಸದಲ್ಲಿ ಶನಿವಾರ ಜಾತ್ರೆ ವಾತಾವರಣ ಕಂಡುಬರುತ್ತದೆ. ಪ್ರತಿಶ್ರಾವಣ ಶನಿವಾರ ಸಾವಿರಾರು ಜನರು ದೇವರ ದರ್ಶನವನ್ನು ಪಡೆಯುತ್ತಾರೆ. ಮಕರಸಂಕ್ರಮಣ ಅಭಿಷೇಕ ಉತ್ಸವಗಳು ನಡೆಯುತ್ತದೆ. ಜಾತ್ರೆ ವರ್ಷಕ್ಕೆ ಒಂದು ಸಾರಿ ಪಾಲ್ಗುಣ ಬಹುಳ ಶ್ರವಣ ನಕ್ಷತ್ರದ ದಿವಸದಂದು ಹಿಮವದ್ ಗೋಪಾಲಸ್ವಾಮಿ ರಥೋತ್ಸವವು ಇಲ್ಲಿಯ ಗೋಪಾಲಪುರದ ಗ್ರಾಮಸ್ಥರ ಸಹಕಾರದಿಂದ ನಡೆಯುತ್ತದೆ. ಈ ಸಮಯದಲ್ಲಿ ಬೆಟ್ಟದ ಕೋಟೆ ಅರಸು ಮನೆತನದವರು ಈ ಜಾತ್ರೆಯಲ್ಲಿ ಪಾಲ್ಗೊಳ್ಳುವ ಸಂಪ್ರದಾಯವಿದೆ. ಗೋಪಾಲಸ್ವಾಮಿ ದೇವಾಲಯದ ಪೂಜೆ ಪುನಸ್ಕಾರಗಳು ಪಾಂಚರಾತ್ರ ಸಂಪ್ರದಾಯಕ್ಕೆ ಅನೂಚಾನವಾಗಿ ನಡೆದುಕೊಂಡು ಬರುತ್ತವೆ. ಗೋಪಾಲಸ್ವಾಮಿ ದೇವಾಲಯದ ಸುತ್ತಮುತ್ತಲ ಗ್ರಾಮಗಳಲ್ಲಿ ವೀರಶೈವ ಮತ್ತು ಶ್ರೀವೈಷ್ಣವ ಧರ್ಮಗಳ ಭಾವೈಕ್ಯತೆಯನ್ನು ಕಾಣುತ್ತೇವೆ. ಆದ ಕಾರಣವೇ ಕೆಲವೊಂದು ಗ್ರಾಮಗಳಿಗೆ ವೀರಶೈವ ಧರ್ಮದವರಲ್ಲಿ ಗೋಪಾಲಪ್ಪ ಎಂಬ ಹೆಸರುಗಳಿವೆ. ಶ್ರೀ ಹಿಮವದ್ ಗೋಪಾಲಸ್ವಾಮಿ ರಥೋತ್ಸವಕ್ಕೆ ಮೂರು ದಿನಕ್ಕೆ ಮೊದಲೇ ಪೂಜಾ ವಿಧಾನಗಳ ಕಾರ್ಯಗಳು ನಡೆಯುತ್ತವೆ.

ಯುಗಾದಿ ಹಬ್ಬದ ಹಿಂದಿನ ಐದು ದಿನಕ್ಕೆ ಇಲ್ಲಿನ ಜಾತ್ರೆ ನಡೆಯುವ ಪರಿಪಾಠವಿದೆ. ಮೊದಲನೆ ದಿನದಿಂದ ಕಾರ್ಯಕ್ರಮಗಳು ಸಪ್ತಮಿ ಬೆಳಗ್ಗೆ ಸಾಯಂಕಾಲ ಫಲಪಂಚಾಮೃತಾಭಿಷೇಕ ಆದಿವಾಸರ ಅಂಕುರಾರ್ಪಣೆ, ಗರುಡ ಪ್ರತಿಷ್ಠೆ, ರಕ್ಷಾಬಂಧನ ಇನ್ನಿತರ ಪೂಜಾಕಾರ್ಯಗಳು ಜರುಗುತ್ತವೆ. ಎರಡನೆಯ ದಿನ (ಅಷ್ಟಮಿ) ಯಂದು ದೇವರಿಗೆ ಉತ್ಸವ, ಪುಷ್ಪಬಲಿ, ಧ್ವಜಾರೋಹಣ, ಭೇರಿತಾಡನ ಯಾಗಶಾಲಾ ಪ್ರವೇಶ ಕಾರ್ಯಗಳು ನಡೆಯುತ್ತವೆ. ತೃತೀಯ ದಿನ (ನವಮಿ) ಯಂದು ದೇವರಿಗೆ ಉತ್ಸವ ಕಾಶಿಯಾತ್ರೆ ಉತ್ಸವ ನಿಮೀತ ಮಾಲಾಪುರ್ವಕ, ಶ್ರೀ ರುಕ್ಮಿಣಿ ಸತ್ಯಭಾಮ ಸಹಿತ ಹಿಮವದ್ ಗೋಪಾಲಸ್ವಾಮಿಗೆ ದಿವ್ಯ ಕಲ್ಯಾಣೋತ್ಸವ ಕಾರ್ಯಗಳು ನಡೆಯುತ್ತವೆ.

ನಾಲ್ಕನೆ ದಿನ (ದಶಮಿ) ಶ್ರೀಯವರ ದಿವ್ಯ ಬ್ರಹ್ಮರಥೋತ್ಸವ ನಡೆಯುತ್ತದೆ. ಐದನೇ ದಿನ (ದ್ವಾದಶಿ) ಸಂಧಾನ ಆೀಲೋತ್ಸವ, ಅವಭೃತ ಸ್ನಾನ, ಉತ್ಸವಗಳು ಫಣಿಮಾಲಾ ಪ್ರಬಂಧ ಕಾರ್ಯ ಸೇವೆಗಳು ಪೂರ್ಣಾವ್ರತಿ ಕಾರ್ಯಗಳು ನಡೆಯುತ್ತವೆ. ಆರನೇ ದಿನ (ತ್ರಯೋದಶಿ) ಮಹಾಭಿಷೇಕ ಮಹಾಮಂಗಳಾರತಿ, ದ್ವಾದಶಾರಾಧನೆ, ಪುಷ್ಪಯಾಗ, ಧ್ವಜಾರೋಹಣ, ಉದ್ವಾಸನ, ಪ್ರಬಂಧ ಸೇವೆ, ನೇಮಾ ಸೇವೆ, ಮೂಕ ಬಲಿ ಕಾರ್ಯಕ್ರಮಗಳು ನಡೆಯುತ್ತವೆ. ಗೋಪಾಲಪುರದ ಊರಿನವರು ಇಲ್ಲಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಜಾತ್ರೆ, ರಥೋತ್ಸವವನ್ನು ಪೂರ್ವಿಕರ ಕಾಲದಿಂದಲೂ ನಡೆಸಿಕೊಂಡು ಬರುತ್ತಿದ್ದಾರೆ. ಗರುಡೋತ್ಸವಕ್ಕೆ ಬಾಚಹಳ್ಳಿಯ ಊರಿನವರಾದ ಆರ್.ಮುಕುಂದರಾಮಯ್ಯ ಯವರು ೩೦-೦೬-೧೯೬೬ರಲ್ಲಿ ಹಿಮವದ್ ಗೋಪಾಲಸ್ವಾಮಿ ದೇವಾಲಯಕ್ಕೆ ಬೆಳ್ಳಿಯ ಗರುಡನನ್ನು ದಾನವಾಗಿ ನೀಡಿದ್ದಾರೆ. ಇದು ದೇವಾಲಯಕ್ಕೆ ಆದಾಯವೂ ಸಹ ಆಗಿದೆ ಎನ್ನಬಹುದಾಗಿದೆ. ಇಲ್ಲಿನ ಜಾತ್ರೆಗೆ ಒಂದು ವಿಶಿಷ್ಠವಾದ ಪರಂಪರೆ ಇದೆ. ಅದೇನೆಂದರೆ ಗೋಪಾಲಪುರದ ಊರಿನವರು ರಥೋತ್ಸವಕ್ಕೆ ಮೊದಲು ನಾಲ್ಕು ದಿವಸಗಳ ಹಿಂದೆಯೇ ಬೆಟ್ಟಕ್ಕೆ ಹೋಗಿ ರಥದ ಭಾಗಗಳನ್ನು ಸಿದ್ಧಪಡಿಸುತ್ತಾರೆ. ಹೊನ್ನೇಗೌಡನಹಳ್ಳಿಯ ಜನರು ಬಿದಿರಿನ ದಟ್ಟೆಯನ್ನು ತರುವ ಕೆಲಸ ಕಾರ್ಯದಲ್ಲಿ ಭಾಗಿಯಾಗಿರುತ್ತಾರೆ. ಆದರೆ ರಥವನ್ನು ಸಿದ್ಧಪಡಿಸುವವರು ಮಾತ್ರ ಗೋಪಾಲಪುರದವರು. ರಥವನ್ನು ಒತ್ತಗದ ಅಂಬಿನಿಂದ ಎಳೆಯುವ ಸಂಪ್ರದಾಯ ಇದೆ. ಯುಗಾದಿ ಹಬ್ಬದ ದಿನ ಗೋಪಾಲಪುರದ ದೊಡ್ಡಮನೆಯವರು ಕಾಶಿ ಸಿದ್ದೇಶ್ವರ ದೇವಾಲಯಕ್ಕೆ ಹೋಗಿ ಅಲ್ಲಿ ಆ ದಿನ ಆರಾಧನೆ ಮಾಡಿ ಮತ್ತೆ ಮೂರನೇ ದಿನ ಹಿಮವದ್ ಗೋಪಾಲಸ್ವಾಮಿ ದೇವಾಲಯಕ್ಕೆ ಬಂದು ರಥವನ್ನು ಬಿಚ್ಚಿ, ಒಂದು ಕಡೆ ಕಟ್ಟಿ ದೇವರಿಗೆ ಮಹಾಮಂಗಳಾರತಿ ಮಾಡಿಸಿ ಗರುಡೋತ್ಸವ ನಡೆಸಿ ಎಲ್ಲಾ ಗ್ರಾಮಸ್ಥರು ತಮ್ಮ ತಮ್ಮ ಗ್ರಾಮಗಳಿಗೆ ಹೋಗುತ್ತಾರೆ. ಗೋಪಾಲಸ್ವಾಮಿ ರಥೋತ್ಸವ ದಿವಸದಂದು ಶ್ರೀ ಕಬ್ಬಿಣ ಕೋಲೇಶ್ವರ ಮಠದಲ್ಲಿ ಆರಾಧನೆ ನಡೆಯುತ್ತದೆ. ಅಂದು

ಬೆಟ್ಟಕ್ಕೆ ಹೋಗಿ ಬರುವ ಭಕ್ತಾಧಿಗಳಗೆ ಅನ್ನದಾಸೋಹ ಕಾರ್ಯಕ್ರಮಗಳು ನಡೆಯುತ್ತದೆ. (ಚಿತ್ರಸಂಖ್ಯೆ–94)

ಹಿಮವದ್ ಗೋಪಾಲಸ್ವಾಮಿಬೆಟ್ಟದ ಭಕ್ತರು ಎಲ್ಲಾ ಜನಾಂಗದಲ್ಲಿಯೂ ಇದ್ದಾರೆ. ಬ್ರಾಹ್ಮಣರು, ನಾಯಕ ಜನಾಂಗ, ಪರಿಶಿಷ್ಠ ಜನಾಂಗ, ವೀರಶೈವರಲ್ಲಿ ಈ ಮನೆತನದ ಒಕ್ಕಲುಗಳಿವೆ. ಗೋಪಾಲಸ್ವಾಮಿ ಜಾತ್ರೆ, ರಥೋತ್ಸವ ದಿನದಂದು ಕೂತನೂರು, ಭೀಮನಬೀಡು ಊರಿನವರು ಸತ್ತಿಗೆ, ಸುರಪಾನಿ, ಬಿರುದು ಬಾವಲಿಗಳೊಡನೆ, ಗೋಪಾಲಪುರಕ್ಕೆ ಬಂದು ದೊಡ್ಡಮನೆಯವರು ಪೂಜೆ ಸಲ್ಲಿಸಿದ ನಂತರ ಬೆಟ್ಟಕ್ಕೆ ಹೋಗುವ ಪರಂಪರೆ ಸಂಪ್ರದಾಯಗಳು ಇಂದಿಗೂ ನಿರಂತರವಾಗಿ ಬೆಳೆದುಬಂದಿದೆ. ಹೀಗೆ ಇಲ್ಲಿನ ಜಾತ್ರೆಯು ನಡೆಯುತ್ತದೆ.[97] ಈ ಸ್ಥಳದಲ್ಲಿ ಮದುವೆ ಕಾರ್ಯಕ್ರಮಗಳು ನಡೆಯುತ್ತವೆ. ಕೆಳವರ್ಗದ ಜನರಿಂದ ಶ್ರೀಮಂತವರ್ಗದ ಜನರು ಮದುವೆಗಳನ್ನು ಮಾಡಿಸುತ್ತಾರೆ.

ದೇವಾಲಯವನ್ನು ಗಮನಿಸಿದರೆ ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಒಡೆಯರ್ ಕಾಲಕ್ಕೆ ಆಗಾಗ ಬೆಳವಣಿಗೆಯಾಗಿರುವುದನ್ನು ಕಾಣಬಹುದಾಗಿದೆ. ಮೂಲಗೃಹದ ಬಾಗಿಲ ಲಲಾಟಬಿಂಬದಲ್ಲಿ ವಿಷ್ಣುವಿನ ಉಬ್ಬುಶಿಲ್ಪವನ್ನು ಶುಕನಾಸದ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಹಾಗೂ ನವರಂಗದ ಮೇಲ್ಭಾಗದಲ್ಲಿರುವ ತೊಲೆಗಳಲ್ಲಿ ವ್ಯಾಳವಾರಿ ಶಿಲ್ಪಗಳ ಸಾಲುಗಳುಳ್ಳ ಕೆತ್ತನೆಯನ್ನು ಕಾಣಬಹುದಾಗಿದೆ. ದೇವಾಲಯದ ಮೇಲೆ ಸುತ್ತಲೂ ಗರುಡನ ಗಾರೆ ಶಿಲ್ಪಗಳಿವೆ. ವಾಸ್ತುಶೈಲಿ ದೃಷ್ಟಿಯಿಂದ ಮೂಲ ದೇವಾಲಯ ಸುಂದರವಾಗಿದ್ದು, ಚೋಳರ ವಾಸ್ತುಶೈಲಿಯ ಅರೆಕಂಬಗಳನ್ನು ಮತ್ತು ಕೋಷ್ಠ ಮಂಟಪಗಳನ್ನು ಭಿತ್ತಿಯ ಭಾಗದಲ್ಲಿ ಕಾಣಬಹುದಾಗಿದೆ.[98] ಕ್ರಿ.ಶ.18ನೇ ಶತಮಾನದಲ್ಲಿ ಹಿಮವದ್ ಗೋಪಾಲಸ್ವಾಮಿ ಸನ್ನಿಧಿಗೆ ಹರದನಹಳ್ಳಿ ಗುರುವೈಯನ ಸೇವಾರ್ಥ ಇದೆ. ಗೋಪಾರಾ ಜೈಯ ಅರಶಿನರ ಸೇವೆ, ದೇವಾಜಮ್ಮನವರ ಸೇವೆ ಅಲ್ಲದೆ ಗುಂಡ್ಲುಗುರಿಕಾರು ನಂಜಪನ ಸೇವಾರ್ಥ ಇದೆ.[98ಎ]

## ಲಕ್ಷ್ಮೀಕಾಂತ ಅಥವಾ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯ–ರಾಘವಪುರ

ರಾಘವಪುರವು ಗುಂಡ್ಲುಪೇಟೆಯಲ್ಲಿರುವ ಒಂದು ಗ್ರಾಮ. ಈ ಗ್ರಾಮದ ಪೂರ್ವ ಹೆಸರು ಗೊಮ್ಮಟಹಳ್ಳಿ, ಕ್ರಿ.ಶ.1320ರ ಕಾಲಕ್ಕೆ ಸೇರಿದ ಶಾಸನ ಒಂದರಿಂದ ತಿಳಿದುಬರುತ್ತದೆ.[99] ಈ ಶಾಸನ ಹೊಯ್ಸಳ ರಾಜನಾದ ಮುಮ್ಮಡಿ ವೀರಬಲ್ಲಾಳನ ದೇವನು ಅರುಣ ಸಮುದ್ರದಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದಾಗ ಪದಿನಾಲ್ಕು ನಾಡರಸರ ರಾಜಧಾನಿಯಾದ ತೆರಕಣಾಂಬಿಯಲ್ಲಿ

ಪದಿನಾಲ್ಕು ನಾಡನ್ನು ಸ್ಥಳೀಯವಾಗಿ ಆಡಳಿತ ನಡೆಸುತ್ತಿದ್ದ ಮಾಧವ ದಣ್ಣಾಯಕನ ಮಗ ಭಾರತಜೀಯ ದಣ್ಣಾಯಕನಿಗೆ ಕೊಡಗು ನಾಡೊಳಗಣ ಗೊಮ್ಮಟಹಳ್ಳಿ ಮತ್ತು ಕಾಚಗೌಡನಮಾದೆಯ ಗ್ರಾಮವನ್ನು ಕೊಟ್ಟನು. ಅಲ್ಲದೆ ಈತನು ಅರಮನೆಯ ಶ್ರೀಕರಣ ರಾಘದೇವನ ಮಗ ನಾರಣ ದೇವಣ್ಣನಿಗೆ ನೀಡಲಾಗಿರುವ ವಿಚಾರ ತಿಳಿದುಬರುತ್ತದೆ. ಇಲ್ಲಿ ತಿಳಿಸಲಾಗಿರುವ ಎರಡು ಗ್ರಾಮಗಳನ್ನು ತನ್ನ ತಂದೆಯಾದ ರಾಘವ ದೇವನ ಹೆಸರಿನಲ್ಲಿ ಅಗ್ರಹಾರವಾಗಿ ಮಾಡಿದನೆಂದೂ, ಅಲ್ಲದೆ ಈ ಊರಿನ ಭೂಮಿಯನ್ನು ೩೦ ಜನ ಬ್ರಾಹ್ಮಣರಿಗೆ ದಾನವಾಗಿ ಹಂಚಿದ ವಿಚಾರ ಶಾಸನ ಪಾಠದಿಂದ ತಿಳಿದುಬರುತ್ತದೆ.[100] ಮತ್ತೊಂದು ಶಾಸನದ ಪ್ರಕಾರ ಚಾಮುಂಡ ಪೆರ್ಮಾನಡಿಯನ್ನು ಪ್ರಸ್ತಾಪಿಸುತ್ತದೆ. ಅಲ್ಲದೆ ಮೇಲಿನ ಶಾಸನದಂತೆ ರಾಘವಪುರದ ಪ್ರಾಚೀನ ಹೆಸರು ಗೊಮ್ಮಟಹಳ್ಳಿ ಎಂದು ತಿಳಿದಿರುವುದು ಮತ್ತೆ ಇರುವುದು ಗಮನಾರ್ಹವಾಗಿದೆ. ರಾಘವಪುರದ ಉತ್ತರ ದಿಕ್ಕಿನಲ್ಲಿರುವ ಲಕ್ಷ್ಮಣಸಾಗರ ಎಂಬಂತಹ ಪ್ರಾಚೀನ ಕೆರೆಯನ್ನು ನಾರಣದೇವನೇ ನಿರ್ಮಿಸಿದನೆಂದು ಆಧಾರಗಳಿವೆ. ಈ ಗ್ರಾಮದಲ್ಲಿರುವ ಲಕ್ಷ್ಮಿನಾರಾಯಣಸ್ವಾಮಿ ದೇವಾಲಯವು ಹೊಯ್ಸಳರ ಕಾಲದ ವಾಸ್ತುಶೈಲಿಯನ್ನು ಹೊಂದಿರುವ ದೇವಾಲಯವಾಗಿದೆ. ರಾಘವಪುರದ ಸ್ಥಳೀಯರ ಪ್ರಕಾರ ಶ್ರೀರಾಮರಾಯರು ಲಕ್ಷ್ಮಣರಾಯರು ಈ ಗ್ರಾಮಕ್ಕೆ ಬಂದು ಹೋದ ಹಿನ್ನೆಲೆಯಲ್ಲಿ ಈ ಗ್ರಾಮಕ್ಕೆ ರಾಘವಪುರವೆಂಬ ಹೆಸರು ಬಂದಿದೆ ಎಂಬ ಪ್ರತೀತಿ ಸಹ ಇದೆ.[101]

ರಾಘವಪುರದ ಲಕ್ಷ್ಮಿನಾರಾಯಣಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ, ಮುಖಮಂಟಪ ಪ್ರಾಕಾರವನ್ನು ಹೊಂದಿದ್ದು, ಪ್ರಾಕಾರದ್ವಾರ ಮಂಟಪವನ್ನು ಸಹ ಹೊಂದಿದೆ. ಮೂಲಗರ್ಭಗುಡಿಯಲ್ಲಿ ಕಲ್ಲುಗರುಡ ಪೀಠದ ಮೇಲೆ ಸುಮಾರು 5 ಅಡಿ ಎತ್ತರವುಳ್ಳ ಲಕ್ಷ್ಮೀನಾರಾಯಣ ಶಿಲ್ಪವನ್ನು ನಿಲ್ಲಿಸಲಾಗಿದೆ. ಇದನ್ನು ಬಳಪದ ಕಲ್ಲಿನಿಂದ ಕೆತ್ತಲಾಗಿದೆ. ಶಿಲ್ಪವು ಸಮಭಂಗಿಯಲ್ಲಿದ್ದು, ಚತುರ್ಭುಜಧಾರಿಯಾಗಿದ್ದಾನೆ. ಶಂಖ, ಚಕ್ರ, ಗಧೆ, ಅಭಯಹಸ್ತಧಾರನಾಗಿದ್ದಾನೆ. ತೋರಣದಲ್ಲಿ ದಶಾವತಾರವನ್ನು ಕೆತ್ತಲಾಗಿದೆ. ಇಕ್ಕೆಲಗಳಲ್ಲಿ ಗಂಗ-ಯಮುನೆಯರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಗರ್ಭಗೃಹದ ದ್ವಾರದ ಇಕ್ಕೆಲಗಳಲ್ಲಿ ಅರೆಕಂಬಗಳಿದ್ದು, ಇವು ಚೋಳ ಶೈಲಿಯ ಮಾದರಿಯ ಅರೆಕಂಬಗಳಾಗಿವೆ. ಶುಕನಾಸ ಭಾಗದಲ್ಲಿ ನಮ್ಮಾಳ್ವಾರ್ ಮತ್ತು ಭಾಷ್ಯಕಾರರ ಶಿಲ್ಪಗಳಿವೆ. ಶುಕನಾಸದ ಭಾಗದಲ್ಲಿ ಒಂದು ಕೋಷ್ಠ ಕಂಬ ಇದೆ. ನವರಂಗದ ಭಾಗದಲ್ಲಿ ಉತ್ತರದಿಕ್ಕಿಗೆ ಒಂದು ಕೋಷ್ಠ ಗುಡಿ ಇದೆ. ಇಲ್ಲಿ ಒಂದು ನಾರಾಯಣ ಶಿಲ್ಪವನ್ನು ಇರಿಸಲಾಗಿದೆ. ಅಲ್ಲದೆ ನವರಂಗದ ದಕ್ಷಿಣಭಾಗಕ್ಕೆ ೮ ಮತ್ತೊಂದು ವಿಶಾಲವಾದ ಗುಡಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಲಕ್ಷ್ಮಿಯ ಶಿಲ್ಪವನ್ನು ಇಡಲಾಗಿದೆ. ಆದಕಾರಣ ಈ ದೇವಾಲಯವನ್ನು

ಲಕ್ಷ್ಮೀನಾರಾಯಣಸ್ವಾಮಿ ದೇವಾಲಯವೆಂದು ಕರೆಯುವ ವಾಡಿಕೆ ಇದೆ. ನಂತರ ಭಾಗ ಮುಖಮಂಟಪ, ಈ ಮುಖಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳು ಹಾಗೂ ಗೋಡೆಗೆ ಸೇರಿದಂತೆ ಆರು ಕಂಬಗಳು ಒಟ್ಟು 10 ಕಂಬಗಳಿವೆ. ಇಲ್ಲಿಯ ಪ್ರವೇಶ ದ್ವಾರದ ಪಕ್ಕದಲ್ಲಿರುವ ಎರಡು ಕಂಬಗಳ ಮಧ್ಯದಲ್ಲಿ ಕಮಲ ಹಾಗೂ ನಕ್ಷತ್ರಾಕಾರದ ಭುವನೇಶ್ವರಿಯನ್ನು ಮಾಡಲಾಗಿದೆ.

ಈ ದೇವಾಲಯದ ಸುತ್ತಲೂ ಪ್ರಕಾರ ಗೋಡೆಯನ್ನು ನಿರ್ಮಿಸಲಾಗಿದ್ದು, ಪೂರ್ವದಿಕ್ಕಿಗೆ ಮಹಾದ್ವಾರವನ್ನು ನಿರ್ಮಿಸಲಾಗಿದೆ. ಮುಖಮಂಟಪದ ಮೇಲೆ ಇಟ್ಟಿಗೆ ಗಾರೆಯಿಂದ ಮಾಡಿದ ಕೈಪಿಡಿ ಇದೆ. ಅಲ್ಲದೆ ದ್ವಾರ ಮಂಟಪಕ್ಕೆ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ದೇವಾಲಯದ ಮುಂದೆ ಬಲಿಪೀಠ ಇದೆ. ಇದೊಂದು ಶುದ್ಧ ದ್ರಾವಿಡ ಶೈಲಿಯ ಶ್ರೀ ವೈಷ್ಣವ ದೇವಾಲಯವಾಗಿದೆ.

ಈ ದೇವಾಲಯಕ್ಕೆ ನೆಲಮಾಳಿಗೆ ಇದ್ದು, ಸ್ಥಳೀಯರ ಪ್ರಕಾರ ಅಮಾವಾಸ್ಯೆ ಮತ್ತು ಹುಣ್ಣಿಮೆ ಸಂದರ್ಭದಲ್ಲಿ ಶಂಖ ಶಬ್ಧ ಕೇಳಬರುತ್ತದೆ ಎಂಬ ಹೇಳಿಕೆಗಳಿವೆ. ಲಕ್ಷ್ಮೀಗುಡಿಯಲ್ಲಿರುವ ಲಕ್ಷ್ಮೀ ಶಿಲ್ಪವು ವಿಜಯನಗರ ಅರಸರ ಕಾಲಕ್ಕೆ ಸೇರಿದ ಶಿಲ್ಪವಾಗಿದೆ ಎಂಬುದು ಕೂಡ ದೇವಾಲಯದ ಅರ್ಚಕರ ವಾದವಾಗಿದೆ. ರಾಘವಪುರದಲ್ಲಿ ಅನೇಕ ರೀತಿಯ ಹಬ್ಬಗಳು ಜಾತ್ರೆಗಳು ನಡೆಯುತ್ತವೆ. ಆದರೆ ಲಕ್ಷ್ಮೀನಾರಾಯಣ ದೇವಾಲಯಕ್ಕೆ ಪೂರಕವಾಗಿ, ರಥಸಪ್ತಮಿ, ರಾಮನವಮಿ, ಶ್ರಾವಣ ಮತ್ತು ಸಂಕ್ರಾಂತಿ ಸಮಯದಲ್ಲಿ ವಿಶೇಷವಾದ ಪೂಜಾಕಾರ್ಯಗಳು ನಡೆಯುತ್ತದೆ. ಅಲ್ಲದೆ ದಸರಾ ಸಂದರ್ಭದಲ್ಲಿ ಈ ದೇವಾಲಯದಲ್ಲಿ ವಿಶೇಷವಾದ ಪೂಜಾಕಾರ್ಯಕ್ರಮಗಳು ಜರುಗುತ್ತವೆ. ಹಿಂದೆ ಈ ಗ್ರಾಮವು ಒಂದು ಅಗ್ರಹಾರ ಕೇಂದ್ರವಾಗಿತ್ತು ಎಂಬುದಕ್ಕೆ ಈ ದೇವಾಲಯವೇ ಸಾಕ್ಷಿ.

### ವೇಣುಗೋಪಾಲಸ್ವಾಮಿ ದೇವಾಲಯ–ಕೋಟೆಕೆರೆ

ಗುಂಡ್ಲುಪೇಟೆ ತಾಲ್ಲೂಕು ಕೋಟೆಕೆರೆಯಲ್ಲಿ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ವೇಣುಗೋಪಾಲಸ್ವಾಮಿ ದೇವಾಲಯ ವೈಷ್ಣವ ಧರ್ಮಕ್ಕೆ ಪೂರಕವಾದ ಆಲಯವಾಗಿದೆ. ವೇಣುಗೋಪಾಲಸ್ವಾಮಿ ಪ್ರಾಚೀನ ದೇವಾಲಯ. ಇದನ್ನು ಚಿನ್ನದ ಕೋಮಾಳಸೆಟ್ಟಿ, ಬೆಳ್ಳಿಕೋಮಾಳಸೆಟ್ಟಿ ಮತ್ತು ಅವರ ವಂಶಿಕರು ನಿರ್ಮಾಣ ಮಾಡಿಸಿರುವ ಬಗ್ಗೆ ಕೆಲವೊಂದು ಐತಿಹ್ಯಗಳಿವೆ.[102] ಈ ದೇವಾಲಯಕ್ಕೆ ಒಂದು ಸಾವಿರ ವರ್ಷ ಇತಿಹಾಸ ಇರುವ ಬಗ್ಗೆ ತಿಳಿಸುತ್ತಾರೆ. ಕೋಟೆಕೆರೆಯಲ್ಲಿರುವ ಶಾಸನದ ಪ್ರಕಾರ ಕ್ರಿ.ಶ.10ನೇ ಶತಮಾನದ ಕಾಲಕ್ಕೆ

ಸೇರಿದ ಕೊಲ್ಲಿಯಣ್ಣ ತುರುಗೋಳನಲ್ಲಿ ಮರಣ ಹೊಂದಿರುವುದಾಗಿ ಆತನ ಮಗ ಸಾಂತಣ್ಣ ಎಂಬುವವನು ಒಂದು ವೀರಗಲ್ಲನ್ನು ನಿಲ್ಲಿಸಿದ್ದಾನೆ ಎಂಬುದು ತಿಳಿದುಬರುತ್ತದೆ.[103]

ಅಲ್ಲದೆ ಈ ಕೋಟೆಕೆರೆಯನ್ನು ಮತ್ತು ರಾಮನಪುರವನ್ನು ಮರಿಹಳ್ಳಿ ಬೋಳನಂಜಯ್ಯ ದೇವರಿಗೆ ಸೂರಪ್ಪ ಅರಚನಿಗಳು ಗುತ್ತಿಗೆ ಮೇರೆಗೆ ಕ್ರಿ.ಶ.1548 ರಲ್ಲಿ ಬಿಟ್ಟ ಒಂದು ಶಾಸನ ಸಹ ಇದೆ.[104] ಈ ಶಾಸನದ ಪ್ರಕಾರ ಶ್ರೀ ಮನ್ಮದಾ ರಾಜಾಧಿರಾಜ ರಾಜ ಪರಮೇಶ್ವರ ಶ್ರೀ ಸದಾಶಿವರಾಯ ಮಹಾರಾಯರು ನಮಗೆ ನಕ್ಕೆ ಕನತೇಶ್ವರ ತೆರಕಣಾಂಬಿಯ ಸ್ಥಳದ ಕೋಟೆಕೆರೆ ಗ್ರಾಮ 1 ಅ ಕಾಲುವಳ ರಾಮನಪುರ ಹರಗ್ರಾಮ 1 ಉಭಯ ರಸ್ತಳದ ಕಾಲುವಳಸ್ ಅಹ ನಮಗೆ ಗುತ್ತಿಗೆಯಾಗಿ ಕೊಟ್ಟಿರುವುದಾಗಿ ಆ ಗ್ರಾಹ ಹೊಳಗೆ ಸಲುವ ಚತುಸ್ಸೀಮೆಯೊಳಗಣ ಗದ್ದೆ, ಬೆದ್ದಲು, ತೋಟಕುಡಿಕೆ, ಕಳ, ಸುಂಕ, ಸುವರ್ಣಾದಾಯ, ಸಳದಾಯ ಮಗ ಮನೆದಣ ಆಡದಕೆರೆಯ ನಿಧಿ ನಿಕ್ಷೇಪ ಎಂಬುದಾಗಿ ತಿಳಿದುಬರುತ್ತದೆ. ಮೇಲೆ ತಿಳಿಸಿರುವಂತೆ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ತಳವಿನ್ಯಾಸವನ್ನು ಗಮನಿಸಿದರೆ ವಿಶೇಷತೆಯನ್ನು ಕಾಣುತ್ತೇವೆ. ಮೂಲಗರ್ಭಗುಡಿಯಲ್ಲಿ ಕಲ್ಲು ಗರುಡ ಪೀಠದ ಮೇಲೆ ವೇಣುಗೋಪಾಲಸ್ವಾಮಿ ಶಿಲ್ಪವನ್ನು ಇರಿಸಲಾಗಿದೆ. ಅಲ್ಲದೆ ನಂದಿಯ ಶಿಲ್ಪವೂ ಸಹ ಪೀಠದಲ್ಲಿದೆ. ಏಕೆಂದರೆ ಗೋಪಾಲ ಇದ್ದ ಮೇಲೆ ಗೋವು ಇರಲೇಬೇಕು. ಈ ಹಿನ್ನೆಲೆಯಿಂದ ಗರುಡ ಮತ್ತು ಗೋವು ಇವೆರಡರ ಉಬ್ಬುಶಿಲ್ಪವನ್ನು ಪೀಠದಲ್ಲಿ ತೋರಿಸಲಾಗಿದೆ. ಇದೊಂದು ತ್ರಿಕೂಟ ದೇವಾಲಯವಾಗಿದೆ. ವೇಣುಗೋಪಾಲಸ್ವಾಮಿಯ ಶಿಲ್ಪವು ಸುಮಾರು 4 ಅಡಿ ಎತ್ತರವಾಗಿದ್ದು, ಚತುರ್ಭುಜಗಳನ್ನು ಹೊಂದಿದೆ. ಈತನು ಶಂಖ, ಚಕ್ರಧಾರಿಯಾಗಿದ್ದಾನೆ. ಅಲ್ಲದೆ ತನ್ನ ಇನ್ನೆರಡು ಕೈಗಳಿಂದ ಕೊಳಲನ್ನು ನುಡಿಸುವ ಭಂಗಿಯಲ್ಲಿದ್ದಾನೆ. ಇದೊಂದು ಸುಂದರವಾದ ಶಿಲ್ಪಕೃತಿಯಾಗಿದೆ. ಈ ದೇವಾಲಯದ ಗರ್ಭಗೃಹಕ್ಕೆ ಬಾಗಿಲನ್ನು ಮರದಿಂದ ಮಾಡಲಾಗಿದೆ.

ಶುಕನಾಸಿ ಅಂಕಣದಲ್ಲಿ ಅಮ್ಮರವರ ಶಿಲ್ಪ ಆಳ್ವಾರಗಳ ಶಿಲ್ಪ, ರಾಮಾನುಜಾಚಾರ್ಯರ ಶಿಲ್ಪ ಹಾಗೂ ಕಂಚುಶಿಲ್ಪಗಳಿವೆ. ನವರಂಗದ ಅಂಕಣವೂ ಖಾಲಿ ಇದೆ. ಆದರೆ ನವರಂಗ ಮತ್ತು ಮುಖಮಂಟಪಕ್ಕೆ ಹೊಂದಿಕೊಂಡಂತೆ ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಗೆ ಒಂದೊಂದು ಗುಡಿಗಳನ್ನು ನಿರ್ಮಿಸಲಾಗಿದೆ ಹಾಗೂ ಈ ಗುಡಿಗಳಿಗೂ ನವರಂಗವನ್ನು ತೋರಿಸಲಾಗಿದೆ. ದಕ್ಷಿಣ ದಿಕ್ಕಿಗೆ ಇರುವ ಗುಡಿಯಲ್ಲಿ ಶ್ರೀ ಲಕ್ಷ್ಮಿ ಶಿಲ್ಪವೆಂದೂ, ಉತ್ತರ ದಿಕ್ಕಿಗೆ ಇರುವ ಗುಡಿಗೆ ಶ್ರೀದೇವಿ ಭೂದೇವಿ ಮತ್ತು ಆಳ್ವಾರ್ ಶಿಲ್ಪವನ್ನು ಇಡಲಾಗಿದೆ. ಇದರ ಮುಂದಿನ ಭಾಗದಲ್ಲಿ ನಾಲ್ಕು ಕಂಬಗಳಿವೆ. ಮುಖ್ಯದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ.

ಮೇಲಿನ ಲಲಾಟಬಿಂಬದಲ್ಲಿ ತ್ರಿನಾಮ ಶಂಖ ಚಕ್ರಗಳ ಉಬ್ಬು ಕೆತ್ತನೆಯನ್ನು ಮಾಡಲಾಗಿದೆ. ದ್ವಾರಮಂಟಪದಲ್ಲಿ ನಾಲ್ಕು ಕಂಬಗಳಿದ್ದು, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಮೆಟ್ಟಿಲುಗಳುಳ್ಳ ಚಪ್ಪಡಿಯನ್ನು ಸೇರಿಸಲಾಗಿದ್ದು, ಸುಂದರವಾದ ಕಲಾಕೃತಿಯಿಂದ ದೇವಾಲಯ ನಿರ್ಮಾಣಗೊಂಡಿದೆ. ಈ ದೇವಾಲಯವು ತ್ರಿಕೂಟವಾಗಿರುವುದರಿಂದ ಮೂರು ವಿಮಾನಗಳನ್ನು ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿ ಪ್ರತಿ ದಿನ ಪೂಜೆ ಪುನಸ್ಕಾರಗಳು ನಡೆಯುತ್ತಿರುತ್ತವೆ. ಸ್ಥಳೀಯರ ಪ್ರಕಾರ ಈ ದೇವಾಲಯಕ್ಕೆ ಅನೇಕ ದಾನಿಗಳು ದಾನ ನೀಡಿರುವ ಬಗ್ಗೆ ತಿಳಿಸುತ್ತಾರೆ. ಆದಕಾರಣ ಪ್ರಾಚೀನ ಕಾಲದಿಂದ ಪ್ರಸ್ತುತ ಕಾಲಕ್ಕೂ ಕೂಡ ನಿರಂತರವಾಗಿ ಪೂಜೆ ಪುನಸ್ಕಾರಗಳು ನಡೆಯುತ್ತವೆ. ರಾಮನವಮಿ ಹಬ್ಬದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ. ಅಂದಿನ ಕಾಲದ ಧಾರ್ಮಿಕ ವಿಧಿವಿಧಾನದ ಪ್ರಕಾರವಾಗಿಯೇ ಉತ್ಸವಗಳು ನಡೆಯುತ್ತವೆ. (ಚಿತ್ರಸಂಖ್ಯೆ-96)

## ವರದರಾಜಸ್ವಾಮಿ ದೇವಾಲಯ-ಆಲತ್ತೂರು

ಆಲತ್ತೂರು ತಲಕಾಡಿನ ಗಂಗರ ಕಾಲಕ್ಕೆ ಹಾಗೂ ಚೋಳರ ಕಾಲಕ್ಕೆ ಒಂದು ಹೆಸರು ವಾಸಿಯಾದ ಗ್ರಾಮವಾಗಿದೆ.[105] ಅಲ್ಲದೆ ಕ್ರಿ.ಶ.17ನೇ ಶತಮಾನದ ಕಾಲಕ್ಕೂ ಅನೇಕ ಸುಧಾರಣೆಗಳು ಆಗಿರುವುದು ತಿಳಿದುಬರುತ್ತದೆ[106] ಹಾಗೂ ಹೊಯ್ಸಳರ ರಾಜರುಗಳಾದ ಮೂರನೇ ನರಸಿಂಹ ಮತ್ತು ಮೂರನೇ ಬಲ್ಲಾಳ ಈ ಊರಿನಲ್ಲಿ ಆಡಳಿತ ನಡೆಸಿರುವ ವಿಚಾರ ತಿಳಿದುಬರುತ್ತದೆ.[107] ಆದಕಾರಣ ಆಲತ್ತೂರಿನಲ್ಲಿರುವ ಶ್ರೀ ವರದರಾಜಸ್ವಾಮಿ ದೇವಾಲಯವನ್ನು ಗಮನಿಸಿದರೆ ಇದು ಹೊಯ್ಸಳರ ಕಾಲಕ್ಕೆ ನಿರ್ಮಾಣಗೊಂಡು ಪ್ರಸ್ತುತ ಈಗ ಜೀರ್ಣೋದ್ಧಾರವಾಗಿದೆ. ಪ್ರಸ್ತುತ ಈಗ ದೇವಾಲಯವನ್ನು ನೋಡಿದರೆ ಸಂಪೂರ್ಣವಾಗಿ ತನ್ನ ಮೂಲ ವಾಸ್ತುವನ್ನು ಕಳೆದುಕೊಂಡಿದೆ. ಆದರೂ ಸಹ ಈ ಊರಿನಲ್ಲಿ ದೊರೆತಿರುವ ಶಾಸನಗಳ ಕಾಲಘಟ್ಟದ ಆಧಾರ ಇದು ಅತ್ಯಂತ ಪ್ರಾಚೀನ ದೇವಾಲಯವೆಂದೂ ಮಾತ್ರ ಹೇಳಬಹುದಾಗಿದೆ. ಮೂಲಗರ್ಭಗುಡಿಯಲ್ಲಿ ಶ್ರೀ ವರದರಾಜಸ್ವಾಮಿ ಶಿಲ್ಪ ಇದೆ. ನವರಂಗದಲ್ಲಿ ಶಾಸನ ಕಲ್ಲು ಇದೆ. ಮೇಲ್ಭಾಗದಲ್ಲಿ ಇತ್ತೀಚಿನ ವಿಮಾನ ಇದೆ. ಹೆಚ್ಚಿನ ವಿಚಾರ ತಿಳಿದುಬರುವುದಿಲ್ಲ. ಆದರೂ ಕೂಡ ಆಲತ್ತೂರಿನ ವರದರಾಜಸ್ವಾಮಿ ದೇವಾಲಯವನ್ನು ಕ್ರಿ.ಶ.11-12ನೇ ಶತಮಾನದಲ್ಲೇ ನಿರ್ಮಿಸಲಾಗಿದೆ ಎನ್ನಬಹುದು. ಶ್ರೀ ವೈಷ್ಣವ ಪರಂಪರೆಯ ರೀತಿಯೇ ದೇವತಾಕಾರ್ಯಗಳು ಪೂಜಾ ವಿಧಾನಗಳು ನಡೆಯುತ್ತವೆ ಎಂಬ ಹೇಳಿಕೆಗಳಿವೆ.[108] ಇನ್ನೊಂದು ವಿಚಾರವೇನೆಂದರೆ, ಆಲತ್ತೂರಿನಲ್ಲಿ ಪೂರ್ವ ದಿಕ್ಕಿಗೆ ಒಂದು ಊರಿನ ದ್ವಾರಮಂಟಪ ಇದೆ. ಈ ಮಂಟಪವು ದುಃಸ್ಥಿತಿಯಾಗಿದೆ. ಆದರೂ ಕೂಡ ಮಂಟಪದ ಪ್ರವೇಶದ್ವಾರ ಕಂಬದಲ್ಲಿ ಚಕ್ರ, ಶಂಖ, ತ್ರಿನಾಮ,

ಗರುಡ, ರಾಮ, ಲಕ್ಷ್ಮಣ, ಸೀತೆ, ಆಂಜನೇಯ ಇರುವ ಉಬ್ಬುಶಿಲ್ಪಗಳಿವೆ. ಆದಕಾರಣ ಇದೊಂದು ವೈಷ್ಣವ ಧರ್ಮಕ್ಕೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವಂತಹ ಗ್ರಾಮವಾಗಿತ್ತೆಂದು ಹಾಗೂ ಇದು ಬಹುಶಃ ವಿಜಯನಗರ ಅರಸರ ಕಾಲದ ದ್ವಾರಮಂಟಪ ಎನ್ನಬಹುದಾಗಿದೆ.

## ವೀರಾಂಜನೇಯ ದೇವಾಲಯ–ಬೇಗೂರು

ಬೇಗೂರು–ಗುಂಡ್ಲುಪೇಟೆ ಮತ್ತು ಮೈಸೂರು ಮುಖ್ಯರಸ್ತೆಗೆ ಸೇರಿದಂತೆಯೇ ಇರುವ ಒಂದು ಪ್ರಾಚೀನ ಗ್ರಾಮ. ಕ್ರಿ.ಶ.1663ರ ಕಾಲಕ್ಕೆ ಸೇರಿದ ಶಾಸನ ಇದೆ.[109] ಈ ಊರಿನಲ್ಲಿ ಒಂದೆರಡು ದೇವಾಲಯಗಳಿವೆ. ಅದರಲ್ಲಿ ವೀರಾಂಜನೇಯಸ್ವಾಮಿ ದೇವಾಲಯವು ಸಹ ಒಂದು. ಈ ದೇವಾಲಯದ ಮುಂದೆಯೇ ಮೇಲೆ ತಿಳಿಸಲಾಗಿರುವ ಶಾಸನ ಇದೆ ಹಾಗೂ ಈ ದೇವಾಲಯವನ್ನು ವಿಜಯನಗರ ಹಾಗೂ ಮೈಸೂರು ಒಡೆಯರ್ ಕಾಲದಲ್ಲಿಯೇ ಆಗಿರುವ ದೇವಾಲಯವಾಗಿದೆ. ಈ ದೇವಾಲಯ ಗರ್ಭಗುಡಿ, ಶುಕನಾಸ, ನವರಂಗಗಳನ್ನು ಹೊಂದಿದೆ. ಮೂಲಗರ್ಭ ಗುಡಿಯಲ್ಲಿ ವೀರಾಂಜನೇಯ ಶಿಲ್ಪವನ್ನು ಇಡಲಾಗಿದೆ. ನವರಂಗಕ್ಕೆ ಹೊಂದಿಕೊಂಡಂತೆ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಈ ದೇವಾಲಯವನ್ನು ಬ್ರಾಹ್ಮಣರು ಪೂಜಿಸುತ್ತಾರೆಂಬ ಹೇಳಿಕೆಗಳಿವೆ. ಪ್ರಾಯಶಃ ಈ ದೇವಾಲಯ 15–16ನೇ ಶತಮಾನಕ್ಕೆ ಸೇರಿದ ದೇವಾಲಯ. ಈ ಗ್ರಾಮದಲ್ಲಿ ಬಂಡಿಗೆರೆ ಮಾದಪ್ಪನ ಜಾತ್ರೆ ನಡೆಯುತ್ತದೆ. ಜಾತ್ರೆಗೂ ವೀರಾಂಜನೇಯ ಸ್ವಾಮಿ ದೇವಾಲಯಕ್ಕೂ ಯಾವುದೇ ತರಹದ ಸಂಬಂಧವಿಲ್ಲ. ಪ್ರತಿವರ್ಷ ಶಿವರಾತ್ರಿ ಹಬ್ಬದ ತದನಂತರ ಸುಮಾರು ಹದಿನೈದು ದಿನಕ್ಕೆ ಜಾತ್ರೆ ಪ್ರಾರಂಭವಾಗುತ್ತದೆ. ಜಾತ್ರೆ ಸಂಬಂಧ ಶೈವ ದೇವಾಲಯಗಳ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಬೇಗೂರು ಗ್ರಾಮವು ಹಿಂದೆ ಒಂದು ಅಗ್ರಹಾರವಾಗಿತ್ತೆಂದು ತಿಳಿಯುವುದಕ್ಕೆ ಈ ವೀರಾಂಜನೇಯ ದೇವಾಲಯವೇ ಸಾಕ್ಷಿಯಾಗಿದೆ. ಇಂದು ಸಹ ಈ ಗ್ರಾಮದಲ್ಲಿ ಬ್ರಾಹ್ಮಣ ಸಮುದಾಯದವರು ವಾಸವಾಗಿದ್ದಾರೆ.

## ವೈಷ್ಣವ ಸಂಕೇತ ಇರುವ ದೇವಾಲಯ–ಕಗ್ಗಳ

ಗುಂಡ್ಲುಪೇಟೆ ತಾಲ್ಲೂಕು ಕಗ್ಗಳ ಎಂಬ ಗ್ರಾಮದಲ್ಲಿ ವಿಜಯನಗರ ಅರಸರಾದ ಅಚ್ಯುತರಾಯ ಕಾಲದ ಅಂದರೆ ಕ್ರಿ.ಶ.1480 ರ ಕಾಲಕ್ಕೆ ಸೇರಿದ ಶಾಸನ ಇದೆ. ಇದು ಈ ಗ್ರಾಮದ ಅಭಿವೃದ್ಧಿಗಾಗಿ ನೀಡಿರುವ ಶಾಸನವಾಗಿದೆ.[110] ಈ ಊರಿನ ಹೊರಭಾಗದಲ್ಲಿ ಒಂದು ದೇವಾಲಯವಿದೆ. ಆದರೆ ಈ ದೇವಾಲಯಕ್ಕೆ ಯಾವುದೇ ಹೆಸರು ಇಲ್ಲ. ಆದರೆ ದೇವಾಲಯವು

ಗರ್ಭಗೃಹ ಮತ್ತು ಶುಕನಾಸವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಯಾವುದೇ ಶಿಲ್ಪವಾಗಲಿ ಈಗ ಇಲ್ಲ. ಆದರೆ ಒಂದು ಚಪ್ಪಡಿಯಲ್ಲಿ ಎರಡು ಪಾದುಕೆಗಳಿವೆ ಮತ್ತು ಗರ್ಭಗುಡಿಯಲ್ಲಿ ಎರಡುಕಂಬಗಳಿವೆ. ಈ ಕಂಬಗಳನ್ನು ಗಮನಿಸಿದರೆ ವಿಜಯನಗರ ಅರಸರ ಕಾಲಕ್ಕೆ ಸೇರಿದೆ ಎನ್ನಬಹುದು. ಕಂಬದ ಮೇಲೆ ವೈಷ್ಣವ ಧರ್ಮದ ಸಂಕೇತಗಳಾದ ಶಂಖ, ಚಕ್ರ, ತ್ರಿನಾಮ ಇದೆ. ಅಲ್ಲದೆ ಆಂಜನೇಯ, ರಾಮ, ಸೀತೆ ಮತ್ತು ವ್ಯಾಳವಾರಿ ಹಾಗೂ ವಿಷ್ಣುವಿನ ವಾಹನವಾದ ಗರುಡನ ಉಬ್ಬುಶಿಲ್ಪಗಳಿವೆ. ಆದಕಾರಣ ಇದೊಂದು ವೈಷ್ಣವ ಪರಂಪರೆಗೆ ಸೇರಿರುವ ಒಂದು ದೇವಾಲಯವಾಗಿದೆ ಎಂಬುದನ್ನು ಪ್ರಸ್ತುತಪಡಿಸಲಾಗಿದೆ. (ಚಿತ್ರಸಂಖ್ಯೆ-97)

## ವೈಷ್ಣವ ಸಂಕೇತ ಇರುವ ದೇವಾಲಯ – ಪಂಜನಹಳ್ಳಿ

ಗುಂಡ್ಲುಪೇಟೆ ತಾಲ್ಲೂಕಿನ ಪಂಜನಹಳ್ಳಿ ಎಂಬ ಗ್ರಾಮದಲ್ಲಿ ವಿಜಯನಗರ ಅರಸರಾದ ಸಾಳುವ ನರಸಿಂಹನಾಯಕನಿಗೆ ಸೇರಿದ ಶಾಸನವಿದೆ. ಈ ಗ್ರಾಮದಲ್ಲಿ ಒಂದು ದೇವಾಲಯವಿದೆ. ಈ ದೇವಾಲಯದಲ್ಲಿ ಯಾವುದೇ ಶಿಲ್ಪವು ಕಂಡುಬರುವುದಿಲ್ಲ. ಕಲ್ಲಿನಿಂದ ಮಾಡಿದ ಎರಡು ಪಾದಗಳು ಮತ್ತು ಎರಡು ಕಂಬಗಳು ಕಂಡುಬರುತ್ತದೆ. ಈ ದೇವಾಲಯವನ್ನು ಸ್ಥಳೀಯರು ಚಲುವನಾರಾಯಣ ಪಾದ ಎಂದು ಕರೆಯುತ್ತಾರೆ. ಈ ಕಂಬಗಳನ್ನು ಗಮನಿಸಿದರೆ ವಿಜಯನಗರ ಅರಸರ ಕಾಲಕ್ಕೆ ಸೇರಿದೆ ಎನ್ನಬಹುದು. ಕಂಬದ ಮೇಲೆ ವೈಷ್ಣವ ಧರ್ಮದ ಸಂಕೇತಗಳಾದ ಶಂಖ, ಚಕ್ರ, ತ್ರಿನಾಮ ಇದೆ. ಆದಕಾರಣ ಇದೊಂದು ವೈಷ್ಣವ ಪರಂಪರೆಗೆ ಸೇರಿದಂತಹ ಒಂದು ದೇವಾಲಯವಾಗಿದೆ ಎಂಬುವುದನ್ನು ಪ್ರಸ್ತುತಪಡಿಸಲಾಗಿದೆ. (ಚಿತ್ರಸಂಖ್ಯೆ-98)

## ಶ್ರೀರಾಮ ದೇವಾಲಯ – ಗುಂಡ್ಲುಪೇಟೆ

ಗುಂಡ್ಲುಪೇಟೆ ಪಟ್ಟಣದಲ್ಲಿ ಶ್ರೀರಾಮನಾಥ ದೇವಾಲಯವು ಉತ್ತರಾಭಿಮುಖವಾಗಿದ್ದು, ಒಳಭಾಗದಲ್ಲಿ ಮೂಲಗರ್ಭಗುಡಿಯು ಪೂರ್ವಾಭಿಮುಖವಾಗಿದೆ. ಇದೊಂದು ವಿಶೇಷವಾದ ದೇವಾಲಯ. ಕಾರಣವೇನೆಂದರೆ, ಶೈವ ಮತ್ತು ವೈಷ್ಣವ ಇವೆರಡು ಧರ್ಮಕ್ಕೆ ಸೇರಿದಂತೆ ಶಿಲ್ಪಗಳಿವೆ. ಈ ದೇವಾಲಯದಲ್ಲಿ ಮೂರು ಗರ್ಭಗುಡಿಗಳನ್ನು ನಿರ್ಮಿಸಿದ್ದು, ಒಂದು ಗುಡಿಯಲ್ಲಿ ಆಂಜನೇಯಸ್ವಾಮಿ ಶಿಲ್ಪವನ್ನು, ಎರಡನೆಯ ಗುಡಿಯಲ್ಲಿ ರಾಮ, ಲಕ್ಷ್ಮಣ ಮತ್ತು ಸೀತೆಯನ್ನು, ಮೂರನೇ ಗುಡಿಯಲ್ಲಿ ಎರಡು ಕೈಯಲ್ಲಿ ಕಮಲವನ್ನು ಹಿಡಿದಿರುವ ಲಕ್ಷ್ಮಿ ರೂಪದ ಶಿಲ್ಪವನ್ನು ಇರಿಸಲಾಗಿದೆ. ಇವುಗಳಲ್ಲದೆ, ಶಕ್ತಿ ಪ್ರಧಾನವಾದ ಗಣಪತಿ ಶಿಲ್ಪವನ್ನು, ನಾಗದೇವತೆಯಾದ ಸರ್ಪಕಲ್ಲನ್ನು ಅಲ್ಲದೆ ಈ ಭಾಗದಲ್ಲಿ ವೈಷ್ಣವ ಧರ್ಮಕ್ಕೆ ಪ್ರೋತ್ಸಾಹಿಸಿದ ರಾಮಾನುಜಾಚಾರ್ಯರ

ಶಿಲ್ಪವನ್ನು ಇರಿಸಲಾಗಿದೆ. ಮೂರು ಗರ್ಭಗುಡಿಗಳು ಉತ್ತರಾಭಿಮುಖವಾಗಿ ನಿರ್ಮಾಣಗೊಂಡಿದೆ. ಉತ್ತರಾಭಿಮುಖವಾಗಿ ನಾಲ್ಕು ಕಂಬಗಳನ್ನು ಹೊಂದಿರುವ ಮುಖಮಂಟಪವನ್ನು ಸೇರಿಸಲಾಗಿದೆ. ಆದಕಾರಣ ಇದು ನಂತರ ಕಾಲದ ಸೇರ್ಪಡೆ ಎನ್ನಬಹುದಾಗಿದೆ. ಅಲ್ಲದೆ ಇಲ್ಲಿಯೇ ಮತ್ತೊಂದು ಮೂರು ಗುಡಿಗಳಿವೆ. ಗುಡಿಗಳಲ್ಲಿ ಗಣಪತಿ, ಶಿವಲಿಂಗ ಮತ್ತು ಪಾರ್ವತಿ ಶಿಲ್ಪಗಳನ್ನು ಇರಿಸಲಾಗಿದೆ. ಇದನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಇಲ್ಲಿ ನಾಗದೇವತೆ, ಗಣಪತಿ, ನಂದಿ ಶಿಲ್ಪಗಳಿವೆ. ಈ ದೇವಾಲಯದಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ಜರುಗುತ್ತವೆ. ಧನುರ್ಮಾಸದ ಸಮಯದಲ್ಲಿ 30 ದಿನಗಳು ವಿಶೇಷ ಪೂಜೆ ಕಾರ್ಯಕ್ರಮಗಳು ನಡೆಯುತ್ತವೆ. ಮಾರ್ಕಂಡೇಯ ರಾಮನವಮಿ ಸಂದರ್ಭದಲ್ಲಿಯೂ ಕೂಡ ವಿಶೇಷ ಧಾರ್ಮಿಕ ಆಚರಣೆಗಳು ನಡೆಯುತ್ತವೆ. ಕೆಲವೊಂದು ಸಂದರ್ಭದಲ್ಲಿ ಜಾತ್ರೆಯು ನಡೆಯುತ್ತದೆ ಎಂಬ ಹೇಳಿಕೆಗಳಿವೆ. ಈ ದೇವಾಲಯದಲ್ಲಿ ರಾಮನವಮಿಯಂದು ಹಿಂದೆ ತೇರಿನ ಉತ್ಸವ ನಡೆಯುತ್ತಿತ್ತು ಎಂದು ಅಲ್ಲಿ ಅರ್ಚಕರು ಮಾಹಿತಿ ನೀಡಿದ್ದಾರೆ. (ಅರ್ಚಕರು ಶಂಕರ ಜ್ಯೋತಿಷಿ) (ಚಿತ್ರಸಂಖ್ಯೆ-99)

**ವೀರಾಂಜನೇಯ ದೇವಾಲಯ**

ಗುಂಡ್ಲುಪೇಟೆ ಪಟ್ಟಣದಲ್ಲಿ ಶ್ರೀ ರಾಮನಾಥ ದೇವಾಲಯದ ಎದುರು ಒಂದು ವೀರಾಂಜನೇಯಸ್ವಾಮಿ ದೇವಸ್ಥಾನ ಇದೆ. ಈ ದೇವಸ್ಥಾನವು ದಕ್ಷಿಣಾಭಿಮುಖವಾಗಿ ನಿರ್ಮಾಣಗೊಂಡಿದೆ. ಮೂಲಗರ್ಭಗುಡಿಯಲ್ಲಿ ವೀರಾಂಜನೇಯನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿಜಯನಗರ, ಮೈಸೂರು ಒಡೆಯರ್ ಕಾಲಕ್ಕೆ ಸ್ಥಾಪಿತವಾಗಿರಬೇಕು. ಆದರೆ ದೇವಾಲಯವು ಸಂಪೂರ್ಣವಾಗಿ ಜೀರ್ಣೋದ್ಧಾರವಾಗಿದೆ. ಆದಕಾರಣ ನಿಖರವಾಗಿ ಕಾಲಘಟ್ಟವನ್ನು ತಿಳಿಸಲು ಸಾಧ್ಯವಾಗುತ್ತಿಲ್ಲ. ಆದರೂ ಕೂಡ ಇದೊಂದು ಮೈಸೂರು ಒಡೆಯರ್ ಕಾಲಕ್ಕೆ ಆಗಿರಬಹುದೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ.

ಈ ದೇವಾಲಯದಲ್ಲಿ ಇತ್ತೀಚಿನ ಕಾಲಕ್ಕೆ ನವಗ್ರಹಗಳನ್ನು ಸಹ ಇರಿಸಲಾಗಿದೆ. ಆದುದರಿಂದ ಇದು ಒಂದು ವಿಶೇಷ ಸಂಸ್ಕೃತಿಯನ್ನು ಹೊಂದಿದೆ ಎಂದು ತಿಳಿಯಬಹುದಾಗಿದೆ. (ಚಿತ್ರಸಂಖ್ಯೆ-100)

## ಶ್ರೀ ಚೆಲುವ ನಾರಾಯಣಸ್ವಾಮಿ ದೇವಾಲಯ – ಕೊಡಸೋಗೆ

ಗುಂಡ್ಲುಪೇಟೆ ತಾಲ್ಲೂಕು ಕೊಡಸೋಗೆಯಲ್ಲಿ ವೈಷ್ಣವ ಧರ್ಮಕ್ಕೆ ಸೇರಿದ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ. ದೇವಾಲಯವು ದ್ರಾವಿಡ ಶೈಲಿಯಲ್ಲಿ ಕಟ್ಟಲಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗುಡಿ, ಶುಕನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಮೂಲಗರ್ಭಗುಡಿಯಲ್ಲಿ ಕಲ್ಲುಪೀಠದ ಮೇಲೆ ಚತುರ್ಭುಜಗಳನ್ನು ಹೊಂದಿರುವ ಚೆಲುವನಾರಾಯಣಸ್ವಾಮಿ ಶಿಲ್ಪ ಇದೆ. ಶುಕನಾಸಿ ಹಾಗೂ ನವರಂಗದ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದಲ್ಲಿ ಎರಡು ಕಂಬಗಳಿವೆ. ನಂತರದ ಭಾಗ ಮುಖಮಂಟಪ, ಮುಖಮಂಟಪಕ್ಕೆ ನಾಲ್ಕು ಕಂಬಗಳನ್ನು ಸೇರಿಸಲಾಗಿದೆ. ಅಲ್ಲದೆ ಮೇಲ್ಭಾಗದಲ್ಲಿ ಮೂರು ಕೋಷ್ಠಗುಡಿಗಳಿವೆ. ಈ ದೇವಾಲಯದಲ್ಲಿ ಗರುಡ ಮತ್ತು ಕಾಳಿಂಗ ಮರ್ದನ ಶಿಲ್ಪಗಳಿವೆ. (ಚಿತ್ರಸಂಖ್ಯೆ–101)

ಕೊಡಸೋಗೆ ಗ್ರಾಮದಲ್ಲಿ ಅಕ್ಟೋಬರ್–ನವೆಂಬರ್ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ಧಾರ್ಮಿಕ ಹಿನ್ನೆಲೆಯಲ್ಲಿ ಪೂಜಾಕಾರ್ಯಕ್ರಮಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ಜರುಗುತ್ತವೆ.

## ರಾಮಸ್ವಾಮಿ ದೇವಾಲಯ – ಭೀಮನಬೀಡು

ಭೀಮನಬೀಡು ಗ್ರಾಮದಲ್ಲಿ ಹೊರವಲಯದಲ್ಲಿ ದುಃಸ್ಥಿತಿಯಲ್ಲಿರುವ ರಾಮಸ್ವಾಮಿ ದೇವಾಲಯ ಇದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಮೂಲಗರ್ಭಗುಡಿಯ ಪಾಣಿಪೀಠ ಇಲ್ಲ. ಆದರೆ ಇಲ್ಲಿ ನಾಲ್ಕು ಶಿಲ್ಪಗಳಿವೆ. ಈ ನಾಲ್ಕು ಶಿಲ್ಪಗಳಲ್ಲಿ ಎರಡು ಶಿಲ್ಪಗಳಿಗೆ ತಲೆ ಇವೆ. ಆದರೆ ಇನ್ನಿತರ ಎರಡು ಶಿಲ್ಪಗಳಿಗೆ ರುಂಡವೇ ಇಲ್ಲ. ಒಂದು ಶಿಲ್ಪವು ಪುರಷನ ಹೋಲಿಕೆಯನ್ನು ಹೊಂದಿದ್ದರೆ, ಮತ್ತೊಂದು ಮಹಿಳೆಯ ಹೋಲಿಕೆಯನ್ನು ಹೊಂದಿದೆ. ಎರಡು ಶಿಲ್ಪಗಳು ಕೂಡ ಒಂದೇ ಕಾಲಘಟ್ಟದಲ್ಲಿ ಆಗಿದೆ ಎನ್ನಬಹುದು. ಎರಡು ಶಿಲ್ಪಗಳು ಸಹ ವಾಸ್ತುಕಲಾ ಬೆಳವಣಿಗೆಯ ಶೈಲಿಯ ದೃಷ್ಟಿಯಿಂದ ಮೈಸೂರು ಒಡೆಯರ್ ಕಾಲಕ್ಕೆ ಸೇರಿಸಬಹುದಾಗಿದೆ. ಅಲ್ಲದೆ ಮೈಸೂರು ಒಡೆಯರ್ ಕಾಲಕ್ಕೆ ಬಳಸಲಾಗಿರುವ ಇಟ್ಟಿಗೆಗಳನ್ನು ದೇವಾಲಯದಲ್ಲಿ ಕಾಣಬರುವುದರಿಂದ ಇದು ಮೈಸೂರು ಒಡೆಯರ್ ಕಾಲಕ್ಕೆ ನಿರ್ಮಾಣವಾದಂತಹ ದೇವಾಲಯವಾಗಿದೆ ಎಂಬುದು ನನ್ನ ಅಭಿಪ್ರಾಯವೂ ಸಹ ಆಗಿದೆ. ಈ ಮಾದರಿಯ ಇಟ್ಟಿಗೆಗಳನ್ನು ಮೈಸೂರು ಒಡೆಯರ್ ನಿರ್ಮಿಸಲಾಗಿರುವ ಸಾಕಷ್ಟು ಕಟ್ಟಡಗಳಲ್ಲಿ

ಕಾಣಬರುತ್ತವೆ. ಈ ಎಲ್ಲಾ ಬೆಳವಣಿಗೆಯಿಂದ ಇದೊಂದು ಒಡೆಯರ್ ಕಾಲಕ್ಕೆ ಸೇರಿದ ದೇವಾಲಯ ಎನ್ನಬಹುದಾಗಿದೆ. (ಕ್ಷೇತ್ರಕಾರ್ಯದ ಮಾಹಿತಿ) (ಚಿತ್ರಸಂಖ್ಯೆ–102)

## ಲಕ್ಷ್ಮೀಕಾಂತ ದೇವಾಲಯ –ಮಲ್ಲಯ್ಯನಪುರ

ಮಲ್ಲಯ್ಯನಪುರದ ಗ್ರಾಮದಿಂದ ಹೊರಗೆ ಪೂರ್ವಾಭಿಮುಖವಾಗಿ ಶುದ್ಧ ದ್ರಾವಿಡ ಶೈಲಿಯಲ್ಲಿ ಲಕ್ಷ್ಮೀಕಾಂತ ದೇವಾಲಯವು ಇದೆ. ಆದರೆ ಪ್ರಸ್ತುತ ಈ ದೇವಾಲಯ ಸಾಕಷ್ಟು ದುಃಸ್ಥಿತಿಯ ಹಂತದಲ್ಲಿದೆ. ತಳವಿನ್ಯಾಸದಲ್ಲಿ ಗರ್ಭಗುಡಿ, ಶುಕನಾಸಿ, ನವರಂಗ ಮತ್ತು ತೆರೆದ ಮುಖಮಂಟಪವನ್ನು ಹೊಂದಿದೆ. ಇದು ಸಹ ಮೈಸೂರು ಒಡೆಯರ್ ಕಾಲಕ್ಕೆ ಸೇರಿಸಬಹುದಾಗಿದೆ. ಮೂಲಗುಡಿಯಲ್ಲಿ ಯಾವುದೇ ರೀತಿಯ ಶಿಲ್ಪಗಳಿಲ್ಲ. ದೇವಾಲಯದ ಮುಂದೆ ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ದೇವಾಲಯದ ಮೇಲೆ ದುಃಸ್ಥಿತಿಯಾಗಿರುವ ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿರುವ ವಿಮಾನ ಅವಶೇಷಗಳಾಗಿ ಕಾಣಬಹುದಾಗಿದೆ. ಸ್ಥಳೀಯ ಪ್ರಕಾರ ಈ ನೆಲೆಯಲ್ಲಿ ಹಿಂದೆ ಜನರು ವಾಸಿಸುತ್ತಿದ್ದರು. ಕಾಲಾನಂತರ ಬೇರೆ ಬೇರೆ ಕಡೆಗೆ ಹೋದರು ಎಂಬುದಾಗಿ ತಿಳಿಸುತ್ತಾರೆ. ಆದರೆ ಪ್ರಸ್ತುತ ದಿನದಲ್ಲಿ ಈ ನೆಲೆಯನ್ನು ಸೂಕ್ಷ್ಮವಾಗಿ ನೋಡಿದರೆ ಸಾಕಷ್ಟು ಸಂಖ್ಯೆಯಲ್ಲಿ ಮಡಿಕೆ, ಕುಡಿಕೆಯ ಚೂರುಗಳು ದೊರೆಯುತ್ತವೆ. ಅಲ್ಲದೆ ಇಲ್ಲಿಯೇ ಸ್ಥಳೀಯವಾಗಿ ಮಾರಮ್ಮ ದೇವಾಲಯ ಇದೆ. ಈ ದೇವಾಲಯಕ್ಕೆ ದೊಡ್ಡ ಮಾರಮ್ಮನ ದೇವಾಲಯವೆಂದು ಕರೆಯುತ್ತಾರೆ. ಅಲ್ಲದೆ ಇನ್ನಿತರ ಅವಶೇಷಗಳಾಗಿ ವೀರಗಲ್ಲುಗಳು, ಮಾಸ್ತಿಕಲ್ಲುಗಳು ಅಂದಿನ ಕಾಲದ ಜನರು ಉಪಯೋಗಿಸಿರುವ ಕಲ್ಲು, ಕಲ್ಲುಚಪ್ಪಡಿಗಳು ದೊರೆತಿವೆ. ಈ ಎಲ್ಲಾ ಬೆಳವಣಿಗೆಯಿಂದಲೂ ಈ ನೆಲೆ ಅತ್ಯಂತ ಪ್ರಾಚೀನತೆಯನ್ನು ಹೊಂದಿದೆ ಎಂದು ತಿಳಿಯಬಹುದಾಗಿದೆ. (ಚಿತ್ರಸಂಖ್ಯೆ–103)

## ತೆರಕಣಾಂಬಿಯ ಮಂಟಪ

ತೆರಕಣಾಂಬಿಯಲ್ಲಿ ಒಂದು ದುಃಸ್ಥಿತಿಯಾಗಿರುವ ಮಂಟಪ ಇದೆ. ಈ ಮಂಟಪವು ಪೂರ್ವ ಪಶ್ಚಿಮಾಭಿಮುಖವಾಗಿದ್ದು, ವಿಶಾಲವಾಗಿದೆ. ಈ ಮಂಟಪಕ್ಕೆ ಪೂರ್ವ ದಿಕ್ಕಿಗೆ ಪಶ್ಚಿಮ ದಿಕ್ಕಿಗೆ ಹಾಗೂ ದಕ್ಷಿಣ ದಿಕ್ಕಿಗೆ, ಅಂದರೆ ಮೂರು ದಿಕ್ಕುಗಳಿಗೂ ಸೇರಿದಂತೆ ಒಂದೊಂದು ದ್ವಾರಗಳಿವೆ. ಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಗೋಡೆಗೆ ಸೇರಿದಂತೆ ನಾಲ್ಕು ಕಂಬಗಳಿವೆ. ಎರಡು ಕಂಬಗಳಲ್ಲಿ ಮೈಸೂರು ಒಡೆಯರ್ ಕಾಲಕ್ಕೆ ಸೇರಿದ ಒಡೆಯರ್ ಮಾದರಿಯ ಶಿಲ್ಪಗಳಿವೆ. ಆದಕಾರಣ ಇದು ಸಹ ಮೈಸೂರು ಒಡೆಯರ್ ಕೊಡುಗೆ ಸಹ ಇದೆ ಎನ್ನಬಹುದು. ಆದರೆ ಈಗ ಸಾಕಷ್ಟು ಸಂಖ್ಯೆಯಲ್ಲಿ ಮಂಟಪ ದುಃಸ್ಥಿತಿಯಾಗಿದೆ ಹಾಗೂ

ಶಾಸನದ ಹಿನ್ನೆಲೆಯನ್ನು ಗಮನಿಸಿದರೆ ಈ ಮಂಟಪ ಉಮ್ಮತ್ತೂರು ಪಾಳೇಗಾರರ ಆಳ್ವಿಕೆಯ ಕಾಲಕ್ಕೆ ಶ್ರೀ ವೀರನಂಜರಾಯವೊಡೆಯರ ಇತಿಹಾಸವನ್ನು ತಿಳಿಸುತ್ತದೆ. ಅಲ್ಲದೆ ಅಂದಿನ ಕಾಲಕ್ಕೆ ಈ ಮಂಟಪದಲ್ಲಿ ರಾಮನ ದೇವಾಲಯವಾಗಿತ್ತೆಂದು ತಿಳಿದುಬರುತ್ತದೆ. ಪೂಜೆ ಪುನಸ್ಕಾರದ ಹಿನ್ನೆಲೆಯಲ್ಲಿ ಈ ದೇವರ ವೈಕುಂಠನಾಥ ದೇವರು, ರಾಮಚಂದ್ರ ದೇವರು ಮತ್ತು ವೈಷ್ಣವ ಪರಂಪರೆಗೆ ಪೂರಕವಾಗಿ, ಆಳ್ವಾರ ದೇವರುಗಳ ಕುರಿತು ಅಂಗ, ರಂಗ, ಭೋಗಗಳಿಗೆ ತೇರು ತಿರುನಾಳು, ನಿತ್ಯೋತ್ಸವಕ್ಕೆ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳಿಗೆ ದಾನ ನೀಡಿರುವ ಕುರಿತು ತಿಳಿದುಬರುತ್ತದೆ. ಈ ಹಿನ್ನೆಲೆಯಿಂದ ಕ್ರಿ.ಶ.15-16ನೇ ಶತಮಾನದಲ್ಲಿ ಇದೊಂದು ವೈಷ್ಣವರ ಧಾರ್ಮಿಕ ಕೇಂದ್ರವಾಗಿತ್ತೆಂದು ಪರಿಗಣಿಸಬಹುದಾಗಿದೆ. ಆದರೆ ಈ ದೇವಾಲಯ ಪ್ರಸ್ತುತ ದುಃಸ್ಥಿತಿಯಾಗಿದ್ದು, ದೇವಾಲಯದ ಮುಂದೆ ಸಾಕಷ್ಟು ಅಂಗಡಿಗಳ ಮಳಿಗೆಗಳು ಬೆಳೆದಿರುವ ಕಾರಣ ಮಂಟಪವು ಸಾರ್ವಜನಿಕರಿಗೆ ಕಾಣುತ್ತಿಲ್ಲ. ಈ ಮಂಟಪವು ದುಃಸ್ಥಿತಿಯಲ್ಲಿದೆ. ಸ್ಥಳೀಯರು ಈ ಮಂಟಪವನ್ನು ಪುನರ್‌ನವೀಕರಣ ಮಾಡಿದ್ದಾರೆ. (ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-120)

## ಅಡಿಟಿಪ್ಪಣಿಗಳು

1. ಆರ್.ಎಸ್.ಶರ್ಮ – ಪ್ರಾಚೀನ ಭಾರತ, 1997, ಪು.ಸಂ.78.
2. ಕೆ.ಎಸ್.ನರಸಿಂಹಸ್ವಾಮಿ ಅಯ್ಯಂಗಾರ್ – ಪ್ರಧಾನ ಅರ್ಚಕರು, ತೆರಕಣಾಂಬಿ ವರದರಾಜಸ್ವಾಮಿ ದೇವಾಲಯ, ವಯಸ್ಸು-82 ರವರಿಂದ ಮಾಹಿತಿಯನ್ನು ಪಡೆಯಲಾಗಿದೆ.
3. ಎಂ.ನಾಗಮಲ್ಲಪ್ಪ (ಸಂ) – ಸಂಪಾದಕರು ವಿಜಯಸಿರಿ ಸ್ಮರಣ ಸಂಚಿಕೆ (ಸಂ), ಚಾಮರಾಜನಗರ ಜಿಲ್ಲೆಯ 3ನೇ ಕನ್ನಡ ಸಾಹಿತ್ಯ ಸಮ್ಮೇಳನ ಗುಂಡ್ಲುಪೇಟೆ ಪ್ರಕಾಶನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ 2011 ರಲ್ಲಿ ಪ್ರಕಟವಾದ ಗ್ರಂಥವನ್ನು ಅಧ್ಯಯನ ಮಾಡಲಾಗಿದೆ.
4. ಹುಲಗಿನ ಮರಡಿ ಪ್ರಸನ್ನ ವೆಂಕಟರಮಣಸ್ವಾಮಿ ಬೆಟ್ಟದ ಅರ್ಚಕರಾದ ಎಸ್.ನಾಗರಾಜು ವಯಸ್ಸು 63ರ ಪ್ರಕಾರ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.
5. ಆರ್.ಎಸ್.ಶರ್ಮ–ಪ್ರಾಚೀನ ಭಾರತ, 1997, ಪು.ಸಂ.158, 159.
6. ಎಪಿಗ್ರಾಫಿಯ ಕರ್ನಾಟಕ, ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕಿನ ವೈಷ್ಣವ ದೇವಾಲಯಗಳು ಮತ್ತು ವೈಷ್ಣವ ಧರ್ಮಕ್ಕೆ ಪೂರಕವಾದ ಶಾಸನಗಳು.
7. ಇಂಗ್ಲೀಷ್-ಕನ್ನಡ ನಿಘಂಟು, ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಂಗ, 1999 ಗ್ರಂಥವನ್ನು ನೋಡಲಾಗಿದೆ.
8. ಮಲೆಯೂರು ಗುರುಸ್ವಾಮಿ (ಸಂ) – ಹೊನ್ನು ಹೊಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2007, ಪು.ಸಂ.396.
9. ಸೂರ್ಯನಾಥ ಯು ಕಾಮತ್ – ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-1, 1984, ಪು.ಸಂ.494.
10. ಪಿ.ಸಿ.ರಾಜಶೇಖರ್ – ಗುಂಡ್ಲುಪೇಟೆ ತಾಲ್ಲೂಕಿನ ಜಾತ್ರೆಗಳು, ರಾಜೇಶ್ವರಿ ಪ್ರಕಾಶನ, ಪಡಗೂರು ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ, 2012, ಪು.ಸಂ.11.
11. ಡಾ. ಪಳನಿಸ್ವಾಮಿ – ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ, ಸ್ಕಂದಶ್ರೀ ಪ್ರಕಾಶನ, ಮೂಡಗೂರು, 2011, ಪು.ಸಂ.160, 161.
12. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಕಲ್ಲಹಳ್ಳಿ, ಶಾಸನ ಸಂಖ್ಯೆ-89 (ಎ.ಕ.IV, ಗು.ಪೇ.37)
13. ಎ.ಕ.ಸಂಪುಟ-3, ಗುಂಡ್ಲುಪೇಟೆ ಶಾಸನ ಸಂಖ್ಯೆ-5 (ಎ.ಕ. IV ಗು.ಪೇ.29)

14. ಎ.ಕ.ಸಂಪುಟ-3, ಗುಂಡ್ಲುಪೇಟೆ ಶಾಸನ ಸಂಖ್ಯೆ-6 (ಎ.ಕ. XIV ಗು.ಪೇ.103)

15. ಎ.ಕ.ಸಂಪುಟ-3, ಗುಂಡ್ಲುಪೇಟೆ ಶಾಸನ ಸಂಖ್ಯೆ-6 (ಎ.ಕ. XIV ಗು.ಪೇ.104)

16. ಗುಂಡ್ಲುಪೇಟೆ ವಿಜಯನಾರಾಯಣಸ್ವಾಮಿ ದೇವಾಲಯದ ಅರ್ಚಕರಿಂದ ಮಾಹಿತಿಯನ್ನು ಪಡೆಯಲಾಗಿದೆ.

17. ಪಿ.ಸಿ.ರಾಜಶೇಖರ್ – ಗುಂಡ್ಲುಪೇಟೆ ತಾಲ್ಲೂಕಿನ ಜಾತ್ರೆಗಳು, ರಾಜೇಶ್ವರಿ ಪ್ರಕಾಶನ, ಪಡಗೂರು ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ, 2012, ಪು.ಸಂ.13.

18. ಸೂರ್ಯನಾಥ ಯು ಕಾಮತ್ – ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-2, 1983, ಪು.ಸಂ.1213.

19. ಸೂರ್ಯನಾಥ ಯು ಕಾಮತ್ (ಸಂ)– ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಮೈಸೂರು ಜಿಲ್ಲೆ, 1988, ಪು.ಸಂ.850.

20. ವಿಜಯಕರ್ನಾಟಕ ದಿನಪತ್ರಿಕೆ, ಗುಂಡ್ಲುಪೇಟೆ ಅಂಕಣ, ದಿನಾಂಕ: 11-5-2016.

21. ಸಿ.ಹಯಾದನರಾವ್ – History of Mysore, Vol. I, ಪು.ಸಂ.375

22. ಡಾ.ದೇವರಕೊಂಡಾರೆಡ್ಡಿ – ಸಂಪಾದಕರು, ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು, ಸಂಪುಟ-30, ವರ್ಷ-2015, ಪು.ಸಂ.270, 271.

23. ದೇವಚಂದ್ರ ಕವಿ – ರಾಜಾವಳಿ ಕಥಾವಳಿ (1770-1841) ಪು.ಸಂ.282.

24. ಸಿ.ಹಯಾದನರಾವ್ – History of Mysore, Vol. I, ಪು.ಸಂ.375

25. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ನಂಜನಗೂಡು ತಾಲ್ಲೂಕು ಶಾಸನ ಸಂಖ್ಯೆ-50.

26. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-152.

27. ಎ.ಎಂ.ನಾಗಮಲ್ಲಪ್ಪ – ವಿಜಯಸಿರಿ ಚಾಮರಾಜನಗರ ಜಿಲ್ಲಾ 3ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಗ್ರಂಥ, ಪ್ರಕಾಶನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2011, ಪು.ಸಂ.22.

28. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ತೆರಕಣಾಂಬಿಯಲ್ಲಿರುವ 113 ರಿಂದ 126 ರವರೆಗಿನ ಶಾಸನಗಳ ಹಿನ್ನೆಲೆಯಿಂದ ತಿಳಿದುಬರುತ್ತದೆ. ಪು.ಸಂ.82 ರಿಂದ 93.

29. ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು, ಸಂಪುಟ-24, 2009, ಪು.ಸಂ.92.

30. ಮಲೆಯೂರು ಗುರುಸ್ವಾಮಿ (ಸಂ) – ಹೊನ್ನಹೊಳೆ ಲೇಖಕಿ, ಬಿ.ಎನ್.ನಾಗರತ್ನ ರವರ ಸಾಂಸ್ಕೃತಿಕ ರಾಜಧಾನಿ ತೆರಕಣಾಂಬಿ, ಪ್ರಕಾಶನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ ಜಿಲ್ಲೆ, 2007, ಪು.ಸಂ.401 ರಿಂದ 419.

31. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–121.

32. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–121.

33. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–150.

34. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–137.

35. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–213.

36. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–17.

37. ಅದೇ

38. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–1.

39. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–17.

40. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–9.

41. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–24.

42. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–26.

43. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆಗಳು (29, 136, 157, 211)

44. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆಗಳು (40, 152, 223)

45. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆಗಳು (49, 156)

46. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆಗಳು (134, 149)

47. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–176.

48. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–178.

49. ಎ.ಕ.ಸಂಪುಟ–5, ಮೈಸೂರು ಶಾಸನ ಸಂಖ್ಯೆ–99.

50. ಎ.ಕ.ಸಂಪುಟ–5, ಮೈಸೂರು ಶಾಸನ ಸಂಖ್ಯೆ–100.

51. ಎ.ಕ.ಸಂಪುಟ–4, ಚಾಮರಾಜನಗರ ತಾಲ್ಲೂಕು ಶಾಸನ ಸಂಖ್ಯೆ–302.

52. ಎ.ಕ.ಸಂಪುಟ–4, ಚಾಮರಾಜನಗರ ತಾಲ್ಲೂಕು ಶಾಸನ ಸಂಖ್ಯೆ–306.

53. ಎ.ಕ.ಸಂಪುಟ–4, ಚಾಮರಾಜನಗರ ತಾಲ್ಲೂಕು ಶಾಸನ ಸಂಖ್ಯೆ–307.

54. ಎ.ಕ.ಸಂಪುಟ–4, ಚಾಮರಾಜನಗರ ತಾಲ್ಲೂಕು ಶಾಸನ ಸಂಖ್ಯೆ–301.

55. ಎ.ಕ.ಸಂಪುಟ–3, ನಂಜನಗೂಡು ತಾಲ್ಲೂಕು ಶಾಸನ ಸಂಖ್ಯೆ–138.

56. ಎ.ಕ.ಸಂಪುಟ–3, ನಂಜನಗೂಡು ತಾಲ್ಲೂಕು ಶಾಸನ ಸಂಖ್ಯೆ–332.

57. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿ ಶಾಸನ ಸಂಖ್ಯೆ–115.

58. ಮಲೆಯೂರು ಗುರುಸ್ವಾಮಿ (ಸಂ) – ಹೊನ್ನುಹೊಳೆ ಚಾಮರಾಜನಗರ ಜಿಲ್ಲೆ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ, ಪ್ರಕಾಶಕರು, ಮಲೆಯೂರು ಗುರುಸ್ವಾಮಿ, ನಂ.635, ಮಹಾಮನೆ, ಆಶ್ರಮ ರಸ್ತೆ, ಹಿನಕಲ್, ಮೈಸೂರು 2007, ಪು.416.

59. ತೆರಕಣಂಬಿ ವರದರಾಜಸ್ವಾಮಿ ದೇವಾಲಯದ ಅರ್ಚಕರಾದ ಕೆ.ಎಸ್.ನರಸಿಂಹ ಅಯ್ಯಂಗಾರ್ ವಯಸ್ಸು 82 ರವರ ಪ್ರಕಾರ ಹೇಳಿಕೆಗಳನ್ನು ಪಡೆಯಲಾಗಿದೆ.

60. ಎ.ಕ.ಸಂಪುಟ–4, ಚಾಮರಾಜನಗರ ತಾಲ್ಲೂಕು ಶಾಸನ ಸಂಖ್ಯೆ–301.

61. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–119.

62. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–121.

62ಎ. ಎ.ಕ.ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–121.

63. ಎಸ್.ನಾಗರಾಜು (ವಯಸ್ಸು 65) ಹುಲಗಿನ ಮರಡಿ ವೆಂಕಟರಮಣಸ್ವಾಮಿ ದೇವಾಲಯದ ಅರ್ಚಕರು ಗುಂಡ್ಲುಪೇಟೆ ತಾಲ್ಲೂಕು ರವರಿಂದ ಮಾಹಿತಿಯನ್ನು ಪಡೆಯಲಾಗಿದೆ.

64. ಎ.ಎಂ.ನಾಗಮಲ್ಲಪ್ಪ (ಸಂ) ವಿಜಯಸಿರಿ ಪ್ರಕಾಶನ, ಚಾಮರಾಜನಗರ ಜಿಲ್ಲಾ 3ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಗ್ರಂಥ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2011, ಪು.ಸಂ.15.

65. ಪಿ.ಸಿ.ರಾಜಶೇಖರ – ಗುಂಡ್ಲುಪೇಟೆ ತಾಲ್ಲೂಕಿನ ಜಾತ್ರೆಗಳು, ರಾಜೇಶ್ವರಿ ಪ್ರಕಾಶನ, ಪಡಗೂರು ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, 2012, ಪು.ಸಂ.8.

66. ಡಾ.ಪಳನಿಸ್ವಾಮಿ – ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ, ಸ್ಕಂದಶ್ರೀ ಪ್ರಕಾಶನ, ಮೂಡಗೂರು ಗುಂಡ್ಲುಪೇಟೆ ತಾಲ್ಲೂಕು, 2011, ಪು.ಸಂ.239, 240.

67. ಪಿ.ಸಿ.ರಾಜಶೇಖರ, ಪೂರ್ವೋಕ್ತ, ಪು.ಸಂ.9, 10.

68. ವಿಜಯ ಕರ್ನಾಟಕ ದಿನಪತ್ರಿಕೆ, 15-1-2016ರಲ್ಲಿ ಪ್ರಕಟವಾದ ಮಾಹಿತಿಯನ್ನು ಸಹ ನೋಡಲಾಗಿದೆ.

69. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-223.

70. ಅದೇ

71. ಎಫಿಗ್ರಾಫಿಯ ಕರ್ನಾಟಕ ಸಂಪುಟ-4, ಚಾಮರಾಜನಗರ ತಾಲ್ಲೂಕು ಶಾಸನ ಸಂಖ್ಯೆ-306.

72. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-93.

73. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-59 (ಎ.ಕ.IV ಗು.ಪೇ.91)

74. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-61.

75. ತೊಂಡವಾಡಿ ವರದರಾಜಸ್ವಾಮಿ ದೇವಾಲಯದ ಅರ್ಚಕರು-ಕೆ.ಟಿ.ಶ್ರೀರಾಮಭಟ್ಟಾಚಾರ್‌ರವರ ಹೇಳಿಕೆಗಳನ್ನು ಆಧರಿಸಿ ಸಂಶೋಧನೆಯನ್ನು ನಡೆಸಲಾಗಿರುತ್ತದೆ.

76. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-67.

77. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-94. (ಎಂ.ಎ.ಆರ್.1934-44)

78. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-51.

79. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-52.

80. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-93.

81. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-57.

82. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-56.

83. ಪಿ.ಸಿ.ರಾಜಶೇಖರ್ – ಗುಂಡ್ಲುಪೇಟೆ ತಾಲ್ಲೂಕಿನ ಜಾತ್ರೆಗಳು, ರಾಜೇಶ್ವರಿ ಪ್ರಕಾಶನ, ಪಡಗೂರು, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, 2012, ಪು.ಸಂ.91.

84. ನಿಟ್ರೆ ಗ್ರಾಮದ ನಂಜಪ್ಪ (ವಯಸ್ಸು 75), ಹಾಗೂ ಸುರೇಶ್ (ವಯಸ್ಸು 40) ಅವರ 7353514298 ರವರ ಪ್ರಕಾರ ಮಾಹಿತಿಯನ್ನು ಪಡೆಯಲಾಗಿದೆ.

85. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-223.

86. ಕುಲಗಾಣ ವಾಸುದೇವ ದೇವಾಲಯದ ಅರ್ಚಕ ವೇದಾಂತರಂಗ (ವಯಸ್ಸು 65) ಮೊಬೈಲ್ ನಂಬರ್ 9972963956 ರವರ ಪ್ರಕಾರ ಇತಿಹಾಸವನ್ನು ಕಲೆ ಹಾಕಲಾಗಿರುತ್ತದೆ.
87. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-70.
88. ಡಾ. ಬಿ.ಬಸವರಾಜು ತಗರಪುರ – ಮೂಗೂರು ಮತ್ತು ತಗರಪುರದ ಸಾಂಸ್ಕೃತಿಕ ಇತಿಹಾಸ, ವೀರಾಜನಿ ಎಂಟರ್ ಪ್ರೈಸಸ್, ನಂ.845, 6ನೇ ಕ್ರಾಸ್, ರೆಹ್ಮಾನಿಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು, 2009, ಪು.ಸಂ.103.
89. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-198. (ಎಂ.ಎ.ಆರ್. 1930-26)
90. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-202. (ಎಂ.ಎ.ಆರ್. 1930-25)
91. ಡಾ. ಪಳನಿಸ್ವಾಮಿ ಪೂರ್ವೋಕ್ತ, ಪು.ಸಂ.271.
92. B.L.Rice – Mysore Gazetteer, compiled for Government Vol. II, P.No.243 to 246.
93. ಡಾ.ಪಳನಿಸ್ವಾಮಿ, ಪೂರ್ವೋಕ್ತ, ಪು.ಸಂ.140.
94. Hayavadana Rao – Mysore Gazetteer, 1930, Vol. 5, Page No.659-660.
95. ಡಾ.ವೈ.ಸಿ.ಭಾನುಮತಿ – ಗೋಪಾಲಸ್ವಾಮಿ ಬೆಟ್ಟ, ಹೊನ್ನುಹೊಳೆ (ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ) ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಚಾಮರಾಜನಗರ, 2007, ಪು.ಸಂ.420 ರಿಂದ 422.
96. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ-223.
97. ಪಿ.ಸಿ.ರಾಜಶೇಖರ್ – ಗುಂಡ್ಲುಪೇಟೆ ತಾಲ್ಲೂಕಿನ ಜಾತ್ರೆಗಳು, ರಾಜೇಶ್ವರಿ ಪ್ರಕಾಶನ, ಪಡಗೂರು, ಗುಂಡ್ಲುಪೇಟೆ ತಾಲ್ಲೂಕು, 2012, ಪು.ಸಂ.4 ರಿಂದ 7.
98. ವಿಜಯವಾಣಿ ದಿನಪತ್ರಿಕೆ ವರದಿ ಪ್ರಕಾರ 31-3-2016 ಕೆಲವು ಮಾಹಿತಿಗಳನ್ನು ಪಡೆಯಲಾಗಿದೆ.

98ಎ. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನಗಳು-194,195,196,197.

99. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-40. (ಎ.ಕ.IV ಗು.ಪೇ.69)

100. ಅದೇ

101. ಮಲೆಯೂರು ಗುರುಸ್ವಾಮಿ (ಸಂ) – ಹೊನ್ನಹೊಳೆ (ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ) ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ ಪ್ರಕಟಣೆ 2007, ಪು.ಸಂ.503.

102. ಈ ದೇವಾಲಯದ ಅರ್ಚಕರಾದ ಶ್ರೀ ಸುಬ್ರಹ್ಮಣ್ಯಸ್ವಾಮಿಗಳವರು ಕೋಟೆಕೆರೆ ರವರಿಂದ ಮಾಹಿತಿಯನ್ನು ಪಡೆಯಲಾಗಿದೆ.

103. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-50.

104. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-49. (ಎ.ಕ.IV ಗು.ಪೇ.73)

105. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-36.

106. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-35.

107. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-34.

108. ಆಲತ್ತೂರಿನ ಮಾದೇಗೌಡ (ವಯಸ್ಸು 63) ಹಾಗೂ ಅಂಗರಾಜೇಗೌಡ (ವಯಸ್ಸು 64) ರ ಪ್ರಕಾರ ಈ ಊರಿನ ಹಾಗೂ ವರದರಾಜ ಸ್ವಾಮಿ ದೇವಾಲಯದ ಮಾಹಿತಿಯನ್ನು ಪಡೆಯಲಾಗಿದೆ.

109. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-44. (ಎಂ.ಎ.ಆರ್. 1935-16)

110. ಎ.ಕ.ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-127. (ಎ.ಕ.IV ಗು.ಪೇ.17)

## ವೈಷ್ಣವ ದೇವಾಲಯಗಳ ಪಟ್ಟಿ

1. ಗುಂಡ್ಲುಪೇಟೆ – ವಿಜಯನಾರಾಯಣಸ್ವಾಮಿ ದೇವಾಲಯ
2. ಗುಂಡ್ಲುಪೇಟೆ – ಪರವಾಸು ದೇವಾಲಯ
3. ಗುಂಡ್ಲುಪೇಟೆ – ಕಮಲವಲ್ಲಿ ದೇವಾಲಯ
4. ತೆರಕಣಾಂಬಿ – ಲಕ್ಷ್ಮೀವರದರಾಜಸ್ವಾಮಿ ದೇವಾಲಯ
5. ತೆರಕಣಾಂಬಿ – ಕಂಠೀರವ ಆಂಜನೇಯ ದೇವಾಲಯ
6. ತೆರಕಣಾಂಬಿ – ಹುಲುಗಿನ ಮರಡಿ ವೆಂಕಟರಮಣಸ್ವಾಮಿ ದೇವಾಲಯ
7. ತೆರಕಣಾಂಬಿ – ವೀರಾಂಜನೇಯ ದೇವಾಲಯ
8. ತೆರಕಣಾಂಬಿ – ಹಂಡೆಗೋಪಾಲಸ್ವಾಮಿ ದೇವಾಲಯ
9. ತೊಂಡವಾಡಿ – ವರದರಾಜಸ್ವಾಮಿ ದೇವಾಲಯ
10. ಕಮರಹಳ್ಳಿ – ವೆಂಕಟರಮಣಸ್ವಾಮಿ ದೇವಾಲಯ
11. ಪಡಗೂರು – ವೀರಾಂಜನೇಯ ದೇವಾಲಯ
12. ಹೊರೆಯಾಲ – ರಂಗನಾಥಸ್ವಾಮಿ ದೇವಾಲಯ
13. ಚಿಕ್ಕಾಟಿ – ವೇಣುಗೋಪಾಲಸ್ವಾಮಿ
14. ನಿಟ್ರೆ – ಲಕ್ಷ್ಮಿ ದೇವಾಲಯ
15. ಕುಲಗಾಣ – ವಾಸುದೇವ ಅಥವಾ ಗೋಪಿನಾಥ ದೇವಾಲಯ
16. ಸಿಂಗವಾಡಿ – ಚನ್ನಿಗರಾಯ (ಚಲುವನಾರಾಯಣಸ್ವಾಮಿ)
17. ಕಬ್ಬಹಳ್ಳಿ – ಚಲುವರಾಯಸ್ವಾಮಿ ದೇವಾಲಯ
18. ಹಂಗಳ – ವರದರಾಜಸ್ವಾಮಿ ದೇವಾಲಯ
19. ಹಿಮವದ್ ಗೋಪಾಲಸ್ವಾಮಿ ಬೆಟ್ಟ – ಗೋಪಾಲಸ್ವಾಮಿ ದೇವಾಲಯ
20. ರಾಘವಪುರ – ಲಕ್ಷ್ಮೀಕಾಂತ ದೇವಾಲಯ
21. ಕೋಟೆಕೆರೆ – ವೇಣುಗೋಪಾಲಸ್ವಾಮಿ
22. ಆಲತ್ತೂರು – ವರದರಾಜಸ್ವಾಮಿ ದೇವಾಲಯ
23. ಬೇಗೂರು – ವೀರಾಂಜನೇಯ ದೇವಾಲಯ
24. ಕಗ್ಗಳ – ವೈಷ್ಣವ ಸಂಕೇತ ಗುಡಿ

25. ಪಂಜನಹಳ್ಳಿ – ವೈಷ್ಣವ ಸಂಕೇತ ಗುಡಿ

26. ಗುಂಡ್ಲುಪೇಟೆ – ಶ್ರೀರಾಮ ದೇವಾಲಯ

27. ಗುಂಡ್ಲುಪೇಟೆ – ವೀರಾಂಜನೇಯ ದೇವಾಲಯ

28. ಗುಂಡ್ಲುಪೇಟೆ – ಆಂಜನೇಯ (ಉಪ್ಪಾರ ಸಮುದಾಯ ಭವನ)

29. ಕೋಡಸೋಗೆ – ಶ್ರಿ ಚಲುವನಾರಾಯಣಸ್ವಾಮಿ

30. ಭೀಮನಬೀಡು – ರಾಮಸ್ವಾಮಿ ದೇವಾಲಯ

31. ಮಲ್ಲಯ್ಯನಪುರ – ಲಕ್ಷ್ಮೀಕಾಂತ ದೇವಾಲಯ

32. ತೆರಕಣಾಂಬಿ – ವೈಷ್ಣವ ಸಂಕೇತ ಮಂಟಪ

# ಅಧ್ಯಾಯ-5

# ಗುಂಡ್ಲುಪೇಟೆ ತಾಲ್ಲೂಕಿನ ಜೈನ ಬಸದಿ

## 5.1. ಗುಂಡ್ಲುಪೇಟೆ ತಾಲ್ಲೂಕಿನ ಜೈನ ಬಸದಿಗಳ ಹಿನ್ನೆಲೆ

ಜೈನ ಧರ್ಮವೂ ಒಂದು ಪ್ರಮುಖವಾದಂತಹ ಧರ್ಮವಾಗಿದೆ. ಪ್ರಾಚೀನ ಕರ್ನಾಟಕದ ಪರಂಪರೆಯಲ್ಲಿ ಜೈನ ಧರ್ಮವು ಹೆಸರು ಗಳಿಸಿದೆ.[1] ಕ್ರಿಸ್ತಪೂರ್ವದಲ್ಲಿಯೇ ಉತ್ತರ ಭಾರತದಿಂದ ಕರ್ನಾಟಕಕ್ಕೆ ಬಂದು ಒಂದು ಹೊಸ ಪಂಥವನ್ನು ಸ್ಥಾಪಿಸಿತು.[2] ಜೈನಧರ್ಮ ಕರ್ನಾಟಕದ ಇನ್ನಿತರ ಭಾಗಗಳ ಮಟ್ಟಿಗೆ ಹಿಂದೂ ಧರ್ಮದ ನಂತರ ರಾಜಪೋಷಣೆಯನ್ನು ಪಡೆಯುತ್ತಾ ನಿರಂತರವಾಗಿ ಬೆಳವಣಿಗೆಯನ್ನು ಹೊಂದಿದೆ. ಅದಕ್ಕೂ ಮೊದಲಿಗೆ ನೋಡುವುದಾದರೆ, ಉತ್ತರ ಭಾರತದಲ್ಲಿ ಜೈನರಲ್ಲಿ ಪ್ರಮುಖವಾಗಿ 'ಶ್ವೇತಾಂಬರ ಮತ್ತು ದಿಗಂಬರ' ಎಂಬ ಎರಡು ಪಂಥಗಳು ಹುಟ್ಟಿಕೊಂಡವು. ದಿಗಂಬರ ಸಂಪ್ರದಾಯವನ್ನು ಅನುಸರಿಸಿದ ಜೈನರು ಉತ್ತರ ಭಾರತದಲ್ಲಿ ಉಂಟಾದ ಮಹಾಕ್ಷಾಮದ ಹಿನ್ನೆಲೆಯಿಂದಾಗಿ ಮೌರ್ಯರ ಮೂಲ ಪುರುಷ 'ಚಂದ್ರಗುಪ್ತಮೌರ್ಯ'ನು ಅಲ್ಲದೆ ಶ್ರುತಕೇವಲಿ ಭದ್ರಬಾಹು ಇಬ್ಬರು ಇವರ ಜೊತೆ ಇನ್ನಿತರ ಅಪಾರ ಶಿಷ್ಯವರ್ಗದೊಂದಿಗೆ ವಲಸೆ ಹೊರಟು ಬಂದರೆಂದು ತಿಳಿದುಬರುತ್ತದೆ. ದಿಗಂಬರ ಸಮುದಾಯಗಳು ಮೈಸೂರು ಭಾಗದಲ್ಲಿತ್ತೆಂದು ತಿಳಿದು ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದವರೆಂದು ಜೈನರ ನಂಬಿಕೆಗಳಾಗಿವೆ. ಕದಂಬರ ಕಾಲಕ್ಕೆ ಜೈನ ಧರ್ಮಕ್ಕೆ ವಿಶೇಷ ಪ್ರೋತ್ಸಾಹವನ್ನು ನೀಡಿರುವುದು ಹಲಸಿ ತಾಮ್ರಪಟ ಶಾಸನದಿಂದ ತಿಳಿದುಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿಯೂ ಜೈನ ಧರ್ಮಕ್ಕೆ ಪ್ರೋತ್ಸಾಹವನ್ನು ನೀಡಿದ್ದಾರೆ. ಇಮ್ಮಡಿ ಪುಲಿಕೇಶಿಯ ಆಸ್ಥಾನ ಕವಿ 'ರವಿಕೀರ್ತಿ'ಯು ಜೈನಮತೀಯನಾಗಿದ್ದ, ಆತನ ಐಹೊಳೆ ಪ್ರಶಸ್ತಿಯು ಜೈನ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ರಾಷ್ಟ್ರಕೂಟರ ಮತ್ತು ಗಂಗರ ಕಾಲದಲ್ಲಿ ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಗಂಗರ ಕಾಲಕ್ಕೆ ಕಂಬದಹಳ್ಳಿ ಶ್ರವಣ ಬೆಳಗೊಳ, ಕೊಳ್ಳೇಗಾಲದ ಬಸ್ತಿಪುರ, ತಲಕಾಡು, ಮೂಗೂರು, ಕನಕಗಿರಿ ಮತ್ತು ಕೆಲಸೂರು ಪ್ರಮುಖ ಜೈನನೆಲೆಗಳಾಗಿವೆ. ಜೈನ ವಾಸ್ತುಶಿಲ್ಪ ಕಲೆಯನ್ನು ಪ್ರಮುಖವಾಗಿ ನಾಲ್ಕು ಮಾದರಿಯಲ್ಲಿ ಕಾಣಬಹುದಾಗಿದೆ. ಸುಂದರವಾಗಿ ಹಾಗೂ ವೈರಾಗ್ಯಪರ ಜಿನರ ನಗ್ನಮೂರ್ತಿಗಳು, ಕಾಯೋತ್ಸರ್ಗ ಮಾದರಿಯಲ್ಲಿರುವ ಗೊಮ್ಮಟನ ಶಿಲ್ಪ, ಬೃಹದಾಕಾರದ ಮಾನಸ್ತಂಭಗಳು, ಕುಸುರಿ ಕೆಲಸದಿಂದ ಕಂಗೊಳಿಸುವ ಯಕ್ಷ-ಯಕ್ಷಿಯರ ಮೂರ್ತಿ ಶಿಲ್ಪಗಳು[3], ಜೈನ ವಾಸ್ತುವಿನಲ್ಲಿ ಕೆಲವು ಜೈನ ಧರ್ಮದ ಕಥಾ ನಿರೂಪಣಾ ಶಿಲ್ಪಗಳನ್ನು ಬಿಟ್ಟರೆ ಉಳಿದಂತೆ ವಾಸ್ತು ರೀತಿಯಲ್ಲಾಗಲಿ ಯಕ್ಷ-ಯಕ್ಷಿಯರು ಅಲಂಕರಣ ಶಿಲ್ಪಗಳು ಪ್ರಾಣಿ, ಪಕ್ಷಿ, ಪ್ರಕೃತಿ ಮತ್ತು

ಮಾನವರ ಶಿಲ್ಪಗಳು ಮುಂತಾದವುಗಳನ್ನು ಶಿಲ್ಪಕಲೆಯಲ್ಲಿ ಕಾಣಬಹುದಾಗಿದೆ. ಜೈನ ಪರಂಪರೆಯಲ್ಲಿ ವೈದಿಕ ಸಂಪ್ರದಾಯದ ಭಾರತೀಯ ವಾಸ್ತುಶೈಲಿಯನ್ನೇ ನೋಡಬಹುದಾಗಿದೆ. ಜೈನ ಸಂಘ ಸಂಸ್ಥೆಗಳ ಆಶ್ರಯದಾತರಾಗಿದ್ದು, ಅವುಗಳ ಉಚ್ಛ್ರಾಯ ಸ್ಥಿತಿಗೆ ಬೇಕಾದ ಸಹಾಯ ಸಂಪತ್ತುಗಳನ್ನು ಉದಾರವಾಗಿ ನೀಡುತ್ತಿದ್ದರು ಎಂಬುದು ಸಹ ತಿಳಿದುಬರುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಕಂಡುಬರುವ ಜೈನ ಬಸದಿಗಳು ತೀರ್ಥಂಕರರ ಶಿಲ್ಪಗಳು ಅಥವಾ ಮೂರ್ತಿಗಳು, ಜೈನ ಮುನಿಗಳ ಸಮಾಧಿ ಸ್ಥಾನಗಳಾದ ನಿಷಧಿಗಳು ಮತ್ತು ಶಾಸನಗಳು ಕಂಡುಬಂದಿವೆ.

ಜೈನ ಬಸದಿಗಳ ನಿರ್ಮಾಣ ಗಂಗರ ಕಾಲದಲ್ಲಿ ಹೆಚ್ಚು ಹೆಚ್ಚು ಜನಪ್ರಿಯವಾಗಿದ್ದವು ಎಂಬುದು ತಿಳಿದ ವಿಚಾರವೇ ಆಗಿದೆ. ಉದಾಹರಣೆಗೆ ಶ್ರವಣ ಬೆಳಗೊಳದಲ್ಲಿ ಗಂಗರ ಮಂತ್ರಿ ಚಾವುಂಡರಾಯ ನಿರ್ಮಿಸಿದ ಪಾರ್ಶ್ವನಾಥ ಬಸದಿ ಅಥವಾ ಚಾವುಂಡರಾಯ ಬಸದಿ ಒಂದು ಉತ್ತಮ ಉದಾಹರಣೆಯಾಗಿದೆ. ಅದೇ ಮಾದರಿಯಲ್ಲಿ  ಚಾಮರಾಜನಗರ ಜಿಲ್ಲೆಯೂ ಕೂಡ ಕ್ರಿ.ಶ.5–6ನೇ ಶತಮಾನಕ್ಕೆ ಜೈನಧರ್ಮ ಪ್ರವೇಶಿಸಿದೆ ಎಂಬುದು ತಿಳಿದುಬರುತ್ತದೆ. ಕೊಳ್ಳೇಗಾಲದ ಪಕ್ಕದಲ್ಲಿ ಬಸ್ತಿಪುರವಿದೆ. ಈ ಬಸ್ತಿಪುರವೇ ಹಿಂದಿನ ಬಸದಿಪುರ ಎಂದು ಹೇಳಬಹುದು. ಈ ಗ್ರಾಮ ಪ್ರಾಚೀನ ಕಾಲದಲ್ಲಿ ಜೈನರ ಬಸದಿ ಕೇಂದ್ರವಾಗಿತ್ತೆಂದು ಉಲ್ಲೇಖವಿದೆ. ಇಲ್ಲಿ ಕ್ರಿ.ಶ.480 ರಲ್ಲಿ ಪೂಜ್ಯಪಾದನೆಂಬ ಜೈನ ಯತಿ ವಾಸಿಸುತ್ತಿದ್ದನೆಂದು ತಿಳಿಯುತ್ತದೆ. ಈ ಪ್ರದೇಶದಲ್ಲಿ ಶಾಸನಗಳು ಈ ಧರ್ಮಕ್ಕೆ ಸಂಬಂಧಿಸಿದಂತೆ ಬಸ್ತಿಪುರದಲ್ಲಿ ದೊರೆತಿದೆ. ಆದರೆ ಶಾಸನಗಳಲ್ಲಿ ಕಾಲದ ಉಲ್ಲೇಖವಿಲ್ಲ. ಲಿಪಿಯ ಆಧಾರದಿಂದ ಕ್ರಿ.ಶ.7ನೇ ಅಥವಾ 8ನೇ ಶತಮಾನದೆಂದು ತಿಳಿಯಬಹುದು.[5] ಬಸ್ತಿಪುರದ ಒಂದು ಶಾಸನದಲ್ಲಿ ಪುಷ್ಪನಂದಿ ಮುನಿಯ ಪ್ರಶಸ್ತಿಯನ್ನು ಹೇಳಿದೆ. ಅಂದರೆ ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ, ಸಮ್ಯಕ್ ಚಾರಿತ್ರ್ಯಗಳಲ್ಲಿ ಪಾಂಡಿತ್ಯವನ್ನು ಪಡೆದವನಾಗಿದ್ದನೆಂದು ತಿಳಿಸುತ್ತದೆ ಹಾಗೂ ತಪಸ್ಸಿನ ಫಲದಿಂದ ಇಂದ್ರನ ಸ್ವರ್ಗಕ್ಕೆ ತಲುಪಿದನೆಂದು ತಿಳಿದುಬರುತ್ತದೆ.[61] ಅದೇ ಸ್ಥಳದಲ್ಲಿ ಇನ್ನೊಂದು ಶಾಸನ ಪುಷ್ಪನಂದಿಯು ಸಲ್ಲೇಖನ ವ್ರತವನ್ನು ಕೈಗೊಂಡಾಗ ಆತನ ಶಿಷ್ಯ ಬಲದೇವನು ತನ್ನ ಗುರುಗಳ ನಿಷಧಿಯನ್ನು ಬಿಟ್ಟು ಹೋಗದಿರಲು ನಿರ್ಧರಿಸಿ ಒಂದು ತಿಂಗಳ ಕಾಲ ಸಲ್ಲೇಖನ ವ್ರತವನ್ನು ಕೈಗೊಂಡು ಮಡಿದನೆಂದು ಕುತೂಹಲಕರವಾದ ವಿಷಯವನ್ನು ತಿಳಿಸುತ್ತದೆ.[7]ಈ ಬೆಳವಣಿಗೆಯನ್ನು ನೋಡಿದರೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕ್ರಿ.ಶ.9–10ನೇ ಶತಮಾನದಲ್ಲಿ ಜೈನಧರ್ಮ ಬೆಳವಣಿಗೆಯಾಗಿರುವುದು ತಿಳಿದುಬರುತ್ತದೆ.[8]ಆದಕಾರಣ ಕರ್ನಾಟಕದ ಜೈನಪರಂಪರೆಗೆ ಗುಂಡ್ಲುಪೇಟೆಯೂ ಸಹ ಸಹಕಾರಿಯಾಗಿರುವುದಲ್ಲದೆ, ಜೈನಧರ್ಮದ ಮುನಿಗಳಿಗೂ ಆಶ್ರಯದಾತರಾಗಿರುವುದು ಹಾಗೂ

ಈ ಭಾಗದಲ್ಲಿ ಅನೇಕ ಜೈನ ಬಸದಿಗಳು ನಿರ್ಮಾಣಗೊಂಡಿರುವ ಬಗ್ಗೆ ಶಾಸನಗಳು ದೃಢಪಡಿಸುತ್ತವೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಶಾಸನ ಹಾಗೂ ಸಾಹಿತ್ಯ ಕ್ಷೇತ್ರದ ಹಿನ್ನೆಲೆಯಲ್ಲಿ ಬಸದಿಗಳು ಇದ್ದ ಬಗ್ಗೆ ಮಾಹಿತಿಗಳಿವೆ. ನಗರ ಪಟ್ಟಣದ ಬಸ್ತಿಮಾಳ, ಬೇರಂಬಾಡಿ, ಕೆಲಸೂರು, ತುಪ್ಪೂರು, ತೆರಕಣಾಂಬಿ, ಹಂಗಳ, ಬೇಗೂರು, ತಗ್ಗಲೂರು, ರಾಘವಪುರ ಗ್ರಾಮಗಳಲ್ಲಿ ಬಸದಿಗಳು, ಕೆಲವು ಕಡೆ ಜಿನಶಿಲ್ಪಗಳು ಕೆಲವು ಕಡೆ ಶಾಸನಗಳು ಮಾತ್ರ ಕಂಡುಬಂದಿವೆ. ಒಟ್ಟಾರೆ ಹೇಳುವುದಾದರೆ ಈ ತಾಲ್ಲೂಕಿನಲ್ಲೂ ಜೈನ ಧರ್ಮ ಇತ್ತು ಎಂಬುದು ಮಾತ್ರ ಸ್ಪಷ್ಟ ಆಧಾರಗಳಿಂದ ತಿಳಿದುಬರುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸುಮಾರು 12 ಜೈನ ಶಾಸನಗಳಿದ್ದು[9], ಇವುಗಳು ಈ ಭಾಗದ ಜೈನಧರ್ಮವು ನೀಡಿದ ಸಾಂಸ್ಕೃತಿಕ ಕೊಡುಗೆಗಳನ್ನು ದಾಖಲಿಸಿದೆ. ಈ ಹಿನ್ನೆಲೆಯಿಂದ ಈ ಭಾಗದ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ತನ್ನದೇ ಕೊಡುಗೆಯನ್ನು ನೀಡಿದೆ ಎಂಬುದು ತಿಳಿದುಬರುತ್ತದೆ. ಈ ಬೆಳವಣಿಗೆಯಿಂದ ಜೈನಧರ್ಮ, ಜೈನ ಆಚಾರ್ಯರು ಮತ್ತು ಕರ್ನಾಟಕದ ರಾಜಮನೆತನಗಳ ನಿರಂತರ ಸಂಬಂಧಗಳು ಅರ್ಥಪೂರ್ಣವಾಗಿಯೇ ಬೆಸೆದುಕೊಂಡಂತಿರುವುದು ತಿಳಿದುಬರುತ್ತದೆ.

ಗಂಗವಾಡಿ 96000 ಪ್ರಾಂತ್ಯದಲ್ಲಿ ಅಂದರೆ ಮೈಸೂರು ಪ್ರಾಂತ್ಯದ ಗುಂಡ್ಲುಪೇಟೆ ತಾಲ್ಲೂಕಿನ ಇತಿಹಾಸವು ಸಹ ಜೈನಾಚಾರ್ಯರಾದ 'ಸಿಂಹನಂದಿ'ಯಿಂದ ಪ್ರಾರಂಭವಾಯಿತೆಂದು ಹೇಳಬಹುದು. ಏಕೆಂದರೆ ಕೆಲಸೂರಿನಲ್ಲಿ ಪ್ರಸ್ತುತ ಜೈನ ಆರಾಧಕರು ಮಾಹಿತಿಯನ್ನು ನೀಡುತ್ತಾರೆ.[10] ತಲಕಾಡಿನ ಗಂಗರ ಆಳ್ವಿಕೆಯು ಜೈನಧರ್ಮದ ಬೆಳವಣಿಗೆಗೆ ಒಂದು ಸುವರ್ಣಯುಗವೆನ್ನಬಹುದು. ಗಂಗರ ಮತ್ತು ಹೊಯ್ಸಳರ ಕಾಲಕ್ಕೆ ರಾಷ್ಟ್ರಧರ್ಮವಾಗಿ ಬೆಳೆದಿದೆ. ನಂತರ ಕಾಲಕ್ಕೆ ಇವೆರಡು ಮನೆತನಗಳ ಪತನದೊಂದಿಗೆ ಬಲಹೀನತೆಯನ್ನು ಕಳೆದುಕೊಂಡಿತು. ಒಟ್ಟಾರೆ ನೋಡುವುದಾದರೆ ಚಾಮರಾಜನಗರ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಒಂದಾನೊಂದು ಕಾಲಕ್ಕೆ ಸಾಕಷ್ಟು ಪ್ರಬಲ ಹೊಂದಿದ ಧರ್ಮವಾಗಿತ್ತು. ಇದಕ್ಕೆ ಪೂರಕವಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೆಲವೊಂದು ಮಾಹಿತಿಯನ್ನು ಪತ್ತೆ ಮಾಡಲಾಗಿದೆ.

ಜೈನರು ತಮ್ಮ ಧರ್ಮದ ಪ್ರಾಚೀನತೆಯನ್ನು ವೇದಗಳ ಕಾಲದಷ್ಟು ಹಿಂದಕ್ಕೆ ಹೋಗುತ್ತದೆ ಎಂದು ಭಾವಿಸಿದ್ದಾರೆ. ಭಾಗವತ ಪುರಾಣದಲ್ಲಿ ಮೊದಲು ತೀರ್ಥಂಕರನಾದ ವೃಷಭದೇವನ ಉಲ್ಲೇಖವಿದೆ. ದಕ್ಷಿಣ ಕರ್ನಾಟಕದ ಕಟ್ಟಕಡೆಯ ಜಿಲ್ಲೆಯ ಅಷ್ಟೇ ಕೊನೆಯ ತಾಲ್ಲೂಕಾದ ಗುಂಡ್ಲುಪೇಟೆಯ ನಾನಾ ಗ್ರಾಮಗಳಲ್ಲಿ ರಾಜಮಹಾರಾಜರ ರಾಜಾಶ್ರಯ ಮತ್ತು ಪ್ರೋತ್ಸಾಹದಿಂದಾಗಿ ಅಂದಿನ ಕಾಲದ ಅನ್ಯಧರ್ಮಗಳೊಂದಿಗೆ ಜೈನ ಧರ್ಮವು ಸಹ ಒಂದು

ಪ್ರಬಲ ಧರ್ಮವಾಗಿ ಬೆಳೆದುಬಂದಿತೆಂದು ಹೇಳಬಹುದಾಗಿದೆ. 24ನೇ ತೀರ್ಥಂಕರನ ಮರಣಾನಂತರ ಜೈನ ಧರ್ಮದಲ್ಲಿ ಎರಡು ಪಂಗಡಗಳಾದವು ಎಂಬುದನ್ನು ಹಲವಾರು ಹಿರಿಯ ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ಕ್ರಿ.ಶ.10 ರಿಂದ 14ನೇ ಶತಮಾನದವರೆಗೆ ಈ ಭಾಗದಲ್ಲಿ ದಿಗಂಬರ ಪಂಥವಿತ್ತೆಂದು ಸಹ ಅಭಿಪ್ರಾಯಗಳಿವೆ. ಆದರೆ ಪ್ರಸ್ತುತ ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಪಂಥದವರು ಪೂಜೆ ಪುನಸ್ಕಾರದಲ್ಲಿ ತೊಡಗಿರುವುದು ತಿಳಿದುಬರುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಲ್ಲಿ ಜೈನ ಬಸದಿಗಳು ನಿರ್ಮಾಣವಾಗಿತ್ತೆಂದು ಅನೇಕ ಜೈನ ಕವಿಗಳು ಸಾಹಿತ್ಯ ರಚನೆಯ ಕಾರ್ಯದಲ್ಲಿ ತೊಡಗಿದ್ದರೆಂದು ತಿಳಿದುಬರುತ್ತದೆ. ಈ ಹಿನ್ನೆಲೆಯ ಬೆಳವಣಿಗೆಯಿಂದ ಅಧ್ಯಯನದ ದೃಷ್ಟಿಯಲ್ಲಿ ಮೂರು ರೀತಿಯಲ್ಲಿ ಗುಂಡ್ಲುಪೇಟೆಯ ತಾಲ್ಲೂಕಿನ ಜೈನಧರ್ಮದ ಬೆಳವಣಿಗೆಯ ಹಂತಗಳನ್ನು ನೋಡಬಹುದಾಗಿದೆ.

**ಶಾಸನಗಳು**

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದಂತೆ 12 ಶಾಸನಗಳಿವೆ. ಇವುಗಳ ಆ ಕಾಲದ ಜೈನಧರ್ಮದ ಚಟುವಟಿಕೆಗಳನ್ನು, ಸ್ಥಿತಿಗತಿಗಳನ್ನು ತಿಳಿಯಲು ನಮಗೆ ಸಾಕ್ಷಿಯಾಗಿದೆ.

1) ಗುಂಡ್ಲುಪೇಟೆ ಕೋಟೆಯೊಳಗೆ ಬಸ್ತಿಮಾಳದಲ್ಲಿ ನೆಟ್ಟಿರುವ ಕಲ್ಲಿನ ಪ್ರಕಾರ ಕ್ರಿ.ಶ.1196 ರ ಕಾಲಕ್ಕೆ ಸೇರಿದ್ದು, ಇದರಲ್ಲಿ ಹೊಯ್ಸಳ ರಾಜನಾದ ಇಮ್ಮಡಿ ವೀರಬಲ್ಲಾಳನನ್ನು ಕುರಿತು ಸಮ್ಯಕ್ ಚೂಡಾಮಣಿ ಎಂದು ಕರೆಯಲಾಗಿದೆ.[11] ಕುಡುಗನಾಡ ಸಮಸ್ತ ಪ್ರಭು ಗಾವುಂಡಗಳು ತುಪ್ಪೂರು ಬಿಟ್ಟ ಜಿನಾಲಯಕ್ಕೆ ಮಡಹಳ್ಳಿಯನ್ನು ದತ್ತಿಬಿಟ್ಟಿದ್ದಾರೆ. ಆದಕಾರಣ ಇದೊಂದು ದಾನವನ್ನು ನೀಡಿರುವ ವಿಚಾರ ಪೂರಕವಾದ ಶಾಸನವಾಗಿದ್ದು, ವಜ್ರಣಂದಿ ಸಿದ್ಧಾಂತ ದೇವರ ಶಿಷ್ಯ ನಾಗಪಂಡಿತರ ಮಗ ಕನಕನಂದಿ ಪಂಡಿತರ ಕಾಲು ತೊಳೆದು ಸಮಸ್ತ ಗೌಡರೂ ಜಿನಾಲಯದ ಜೀರ್ಣೋದ್ಧಾರ, ದೇವರ ಅಷ್ಟವಿದ್ಯಾರ್ಚನೆ ಮತ್ತು ಮುನಿಗಳು ಆಹಾರ ದಾನಕ್ಕೆ ದತ್ತಿ ಕೊಟ್ಟಿರುವುದನ್ನು ತಿಳಿಸುತ್ತದೆ.

2) ಕೋಟೆಯೊಳಗೆ ಬಸ್ತಿಮಾಳದಲ್ಲಿ ನೆಟ್ಟ ಎರಡನೆಯ ಕಲ್ಲು ಶಾಸನ ಪ್ರಕಾರ ಕ್ರಿ.ಶ.16ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಇದು ವಿಜಯಪುರದ ಅನಂತ ದೇವರಿಗೆ ಕೆಲವು ಗೌಡ ಪ್ರಜೆಗಳು ಕೊಟ್ಟ ದತ್ತಿಯ ವಿಚಾರವನ್ನು ತಿಳಿಸುತ್ತದೆ. [12]

3) ಸಂಪಿಗೆಪುರದಲ್ಲಿರುವ ಅರ್ಕೇಶ್ವರ ದೇವಸ್ಥಾನದ ಹಿಂದೆ ಗೋಡೆಗೆ ಒದಗಿಸಿರುವ ಶಾಸನದ ಪ್ರಕಾರ ಕ್ರಿ.ಶ.9-10ನೇ ಶತಮಾನಕ್ಕೆ ಸೇರಿಸಬಹುದಾದ ಶಾಸನವಾಗಿದೆ. ಆದಕಾರಣ 9ನೇ ಶತಮಾನದ ಕಾಲಕ್ಕೆ ಜೈನ ಧರ್ಮ ಗುಂಡ್ಲುಪೇಟೆಯಲ್ಲಿತ್ತೆಂಬುದಕ್ಕೆ ಸಾಕ್ಷಿಯಾಗಿದೆ.[13]

4) ಕೆಲಸೂರು ಜೈನ ಬಸದಿಯೊಳಗೆ ಗೋಡೆಯ ಮೇಲೆ ಇರುವ ಶಾಸನದ ಪ್ರಕಾರ ಕ್ರಿ.ಶ.1829 ರ ಕಾಲಕ್ಕೆ ಸೇರಿದೆ. ಶಾಂತಿ ಪಂಡಿತನ ಮಗನ ವಿಜ್ಞಾಪನೆಯ ಮೇರೆಗೆ ಮುಮ್ಮಡಿ ಕೃಷ್ಣರಾಜನು ಕೆಲಸೂರಿನ ಚೈತ್ಯಾಲಯದಲ್ಲಿ ಚಂದ್ರಪ್ರಭ ಮತ್ತು ವಿಜಯ ಪಾರ್ಶ್ವನಾಥ ತೀರ್ಥಂಕರರ ಮತ್ತು ಜ್ವಾಲಿನೀ ದೇವಿಯ ಬಿಂಬಗಳನ್ನು ಹೊಸದಾಗಿ ಪ್ರತಿಷ್ಠಾಪಿಸಿ ಚೈತ್ಯಾಲಯವನ್ನು ಹೊಸದಾಗಿ ಜೀರ್ಣೋದ್ಧಾರ ಮಾಡಿಸಿ ಸುಣ್ಣ ಬಣ್ಣ ಮಾಡಿಸಿರುವ ವಿಚಾರ ತಿಳಿದುಬರುತ್ತದೆ.[14]

5) ಕೆಲಸೂರು ಬಸದಿಯ ಪಶ್ಚಿಮ ದಿಕ್ಕಿನ ಪಾಳಿಯಲ್ಲಿ ನೆಟ್ಟ ಶಾಸನದ ಪ್ರಕಾರ ಕ್ರಿ.ಶ.1229 ರ ಕಾಲಕ್ಕೆ ಕೆಲವು ಭಕ್ತರು ದಾನ ಬಿಟ್ಟ ವಿಚಾರವನ್ನು ಪ್ರಸ್ತಾಪಿಸುತ್ತದೆ. [15]

6) ಕೆಲಸೂರು ಬಸದಿಯ ತಳಪಾದಿ ಕಲ್ಲಿನ ಮೇಲೆ ಇರುವ ಶಾಸನದ ಪ್ರಕಾರ ಶಾಸನವು ಕ್ರಿ.ಶ.12ನೇ ಶತಮಾನಕ್ಕೆ ಸೇರಿದೆ. ಈ ಶಾಸನವು ತಮಿಳು ಗ್ರಂಥಲಿಪಿಯಿಂದ ಬರೆಯಲ್ಪಟ್ಟಿದೆ. ಇದೊಂದು ಬಸದಿಗೆ ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ. ಕೆಲಸೂರು ಗುಂಡ್ಲುಪೇಟೆ ತಾಲ್ಲೂಕಿನ ಒಂದು ಪ್ರಮುಖ ಜೈನ ಕೇಂದ್ರವಾಗಿತ್ತು.[16] ಕೆಲಸೂರನ್ನು ಕುರಿತು ದೇವಚಂದ್ರನ ರಾಜಾವಳಿ ಕಥೆಯಲ್ಲಿಯೂ ತಿಳಿದುಬರುತ್ತದೆ. ಶ್ರೀವತ್ಸಗೋತ್ರದ ಸಾದ್ವಾದಿಗಳ್ ಹಸ್ತಿಮಲ್ಲಾರ್ಯಾಸ್ವಯರ್ ದೀಪಗುಡಿಯಂ ಬಂದರಿ ಕುಠಾರದಿಂ ಛತ್ತತ್ರಯಪುರದ ಚಂದ್ರಪ್ರಭುಸ್ವಾಮಿ ಸೇವೆಯೊಳಿದ್ದಲ್ಲಿ ಅಭಿವೃದ್ಧಿಯಿಂ ಚಂದ್ರನಾರ್ಥಂ ಮೊದಲಾಗಣ್ವರ್ ಕನಕಗಿರಿ ಕೆಲಸೂರಾದಿ ಸ್ಥಳಂಗಳೊಳಿರ್ಪರಾ ಚಂದ್ರನಾಥನ ವಂಶಂ ಶಾಖಾಕೀರ್ಣದಿಂ ಪ್ರಸರಿಸೆ ಎಂದು ಪ್ರಸ್ತಾಪಿಸಲಾಗಿದೆ.[17]

7) ಕೆಲಸೂರು ಬಸದಿಯ ಉತ್ತರದಿಕ್ಕಿನ ತಳಪಾದಿಯ ಮೇಲೆ ಕ್ರಿ.ಶ.12ನೇ ಶತಮಾನಕ್ಕೆ ಸೇರಿದ ಶಾಸನ ಇದೆ. ಇದೊಂದು ಭೂಮಿಯನ್ನು ದಾನವನ್ನಾಗಿ ನೀಡಿದ ಶಾಸನವಾಗಿದೆ.[18]

8) ತೆರಕಣಾಂಬಿ ಪ್ರವಾಸಿ ಮಂದಿರದ ಬಳಿ ಬಿದ್ದಿದ್ದ ಪಾರ್ಶ್ವನಾಥ ವಿಗ್ರಹದ ಶಿಲ್ಪ (ಶಿಲ್ಪದ) ಪೀಠದ ಮೇಲೆ ಶಾಸನ ಇದ್ದು, ಇದು ಕ್ರಿ.ಶ.14ನೇ ಶತಮಾನಕ್ಕೆ ಸೇರಿದ ಶಿಲ್ಪವಾಗಿದೆ ಎನ್ನಬಹುದು. ಪೀಠದ ಮೇಲೆ ರಾಜಗುರು ಮಂಡಲಾಚಾರ್ಯರಾದ ಸಮಯಾಭರಣ ಲಲಿತಕೀರ್ತಿ ಭಟಾರಕರು ಮಾಡಿಸಿದ ಪ್ರತಿಮೆ ಎಂಬ ಬರಹ ಇದೆ.[19]ರಾಜಗುರು (ಮಂಡ) ಳಾಚಾರ್ಯರುಮಪ್ಪ (ಸಮ) ಯುಭರಣ ಲಲಿತ ಕೀರ್ತಿಭಟಾರಕರು ಮಂಗಳ ಮಹಾಶ್ರೀ ಶ್ರೀ ಶ್ರೀ ಎಂದು ತಿಳಿದುಬರುತ್ತದೆ.

9) ಹಂಗಳ ಗ್ರಾಮದಲ್ಲಿ ಜೈನಧರ್ಮಕ್ಕೆ ಸೇರಿದ ಮೂರು ಶಾಸನಗಳಿವೆ. ಹಂಗಳ ಗ್ರಾಮದಲ್ಲಿ ಭೂಮಿಯಲ್ಲಿ ದೊರೆತ ಅನೇಕ ಪೂಜಾ ವಸ್ತುಗಳಲ್ಲಿ 18 ವಸ್ತುಗಳಲ್ಲಿ ಶಾಸನ ಲಿಪಿಗಳಿವೆ.[20]ಚವ್ವೀಸ ತೀರ್ಥಂಕರರ ಬಿಂಬದ ಹಿಂಬದಿಯ ಪಾದಪೀಠದಲ್ಲಿರುವ ಬರವಣಿಗೆಯಿಂದ ಚಿಕ್ಕಜೋಗಬ್ಬೆಯ ತಾಯಿ ಮಾಚಿಕಬ್ಬೆಯು ರಾಮನಂದಿ ಭಟ್ಟಾರಕರ ಶಿಷ್ಯ ಎಂದು ತಿಳಿದುಬರುತ್ತದೆ.[21]ವರ್ಷಗಳ ಹಿಂದೆ ಚಾಲುಕ್ಯ ಕಲಾವೈಭವವನ್ನು ನೆನಪಿಸುವ ಕಂಚಿನ ಪ್ರತಿಮೆ, ಗಿಂಡಿ, ತಟ್ಟೆ, ಘಂಟೆ ಮತ್ತು ದೀಪಸ್ತಂಭ ಮೊದಲಾದ ವಸ್ತುಗಳಲ್ಲಿ ಶಾಸನಗಳಿವೆ.[22]

10) ಬೇರಂಬಾಡಿ ಗ್ರಾಮದ ಮಾರಿಗುಡಿಯ ಬಳಿ ನೆಟ್ಟ ಕಲ್ಲು ಇದರ ಪ್ರಕಾರ ಕ್ರಿ.ಶ.14ನೇ ಶತಮಾನಕ್ಕೆ ಸೇರಿದೆ. ಅದರಲ್ಲಿ ಪಾರ್ಶ್ವನಾಥ, ಧರಣೇಂದ್ರ ಮತ್ತು ಪದ್ಮಾವತಿಯ ಬಗ್ಗೆ ತಿಳಿದುಬರುತ್ತದೆ. ಆದಕಾರಣ ಇದೊಂದು ಜೈನ ಶಾಸನವಾಗಿದೆ.[23]

## ಜೈನಬಸದಿಗಳು

### ಚಂದ್ರನಾಥ ಬಸದಿ – ಕೆಲಸೂರು ಅಥವಾ (ಉದ್ಯೋಗಪುರ) (ಕಾಮಗಾರಿ)

ಗುಂಡ್ಲುಪೇಟೆ ತಾಲ್ಲೂಕು ಕೆಲಸೂರು ಗ್ರಾಮವು ಒಂದು ಪ್ರಾಚೀನ ಗ್ರಾಮ. ಈ ಗ್ರಾಮ ಸುಮಾರು 2 ರಿಂದ 3 ಸಾವಿರ ವರ್ಷಗಳ ಹಿಂದಿನ ಇತಿಹಾಸವನ್ನು ಹೊಂದಿರುವ ಗ್ರಾಮ. ಆದರೆ ಜೈನಧರ್ಮವು ಕ್ರಿ.ಶ.9–10ನೇ ಶತಮಾನಕ್ಕೆ ಸೇರಿದೆ, ಜೈನಧರ್ಮಕ್ಕೆ ಪೂರಕವಾಗಿ ಹಿಂದೆ ಸುಮಾರು 600 ಕುಳದವರು ಇದ್ದರೆಂದು ತಿಳಿದುಬರುತ್ತದೆ. ಆದರೆ ಪ್ರಸ್ತುತ ಈಗ ಒಂದೇ

ಒಂದು ಮನೆತನ ಇದೆ. ಇದರ ಬಗ್ಗೆ ಜೈನ ಅರ್ಚಕರಾದ ಸ್ಥಳೀಯರ ಅಭಿಪ್ರಾಯವಾಗಿದೆ.[24] ಇಲ್ಲಿರುವ ಪ್ರಾಚೀನ ಚಂದ್ರನಾಥಬಸದಿ ಇವಾಗ ಸಂಪೂರ್ಣವಾಗಿ ಜೀರ್ಣೋದ್ಧಾರವಾಗಿದೆ. (ಚಿತ್ರಸಂಖ್ಯೆ-104) ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ, ಮುಖಮಂಟಪವನ್ನು ಒಳಗೊಂಡಿದೆ. ಈ ಬಸದಿಯು ಉತ್ತರಾಭಿಮುಖವಾಗಿದ್ದು, ಮೂಲಗರ್ಭಗುಡಿಯಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಆದಿನಾಥ ಶಿಲ್ಪ ಇದೆ. ಜ್ವಾಲಾಮಾಲಿನಿ ಕೋಣನ ಮೇಲೆ ಕುಳಿತಿದ್ದಾಳೆ. ಶ್ಯಾಮ ಯಕ್ಷರ ಶಿಲ್ಪ ಇದೆ. ಇವರು ಹಂಸದ ಮೇಲೆ ಕುಳಿತಿದ್ದಾಳೆ. ಅಲ್ಲದೆ ಮೂಲಗರ್ಭಗೃಹದಲ್ಲಿ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಎಂಟು ಕಂಬಗಳು ಗೋಡೆಯಲ್ಲಿ ಸೇರಿವೆ. ಗರ್ಭಗುಡಿಗೆ ಹೊಂದಿಕೊಂಡಂತೆ ಶುಕನಾಸಿ ಮತ್ತು ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. (ಚಿತ್ರಸಂಖ್ಯೆ-105) ಗೋಡೆಗೆ ಸೇರಿದಂತೆ ಆರು ಕಂಬಗಳಿವೆ. ನವರಂಗದಲ್ಲಿ ಒಟ್ಟು ಮೂರು ದ್ವಾರಗಳಿವೆ. ಅದರ ಮುಂದೆ ಮುಖಮಂಟಪ ಇದೆ. ಮುಖಮಂಟಪದಲ್ಲಿಯೂ ಕೂಡ ನಾಲ್ಕು ಕಂಬಗಳಿವೆ. ಮೂಲಗರ್ಭಗೃಹದ ಬಾಗಿಲುವಾಡದ ಇಕ್ಕೆಲೆಯಲ್ಲಿ ಚಂದ್ರನಾಥಸ್ವಾಮಿಯ ಪಾರ್ಶ್ವದೇವತಾ ಬಿಂಬಗಳಿವೆ. ಗರ್ಭಗುಡಿ ಹಾಗೂ ನವರಂಗದಲ್ಲಿರುವ ಕಂಬಗಳು ಚತುರಸ್ರವಾಗಿದ್ದು, ಮುಂದೆ ಕಾಂಡದ ಮೇಲೆ ಕಂಬವನ್ನು ಸೇರಿಸಿದಂತಿದ್ದು, ಕಂಠ, ಮುಚ್ಚಳ ಮತ್ತು ಬೋದಿಗೆಗಳನ್ನು ಹೊಂದಿದೆ. ಈ ಬಸದಿ ತಲಕಾಡಿನ ಗಂಗರ ಕಾಲದ ಬಸದಿ ಇದಾಗಿದ್ದು, ಈಗ ಸಂಪೂರ್ಣ ಜೀರ್ಣೋದ್ಧಾರವಾಗಿದೆ. ಮೊದಲಿಗೆ ಮೈಸೂರು ಅರಸರ ಕಾಲಕ್ಕೂ ಜೀರ್ಣೋದ್ಧಾರವಾಗಿರುವುದಾಗಿ ತಿಳಿದುಬರುತ್ತದೆ. ಈಗ ಗರ್ಭಗೃಹದಲ್ಲಿರುವ ತೀರ್ಥಂಕರಮೂರ್ತಿ ಮಣ್ಣಿನಮೂರ್ತಿ ಶಿಲ್ಪವಾಗಿದೆ. (ಚಿತ್ರಸಂಖ್ಯೆ-106) ಆದರೆ ಅಭಿಷೇಕದ ಹಿನ್ನೆಲೆಯಲ್ಲಿ ಅಮೃತಶಿಲೆಯ ಶಿಲ್ಪವನ್ನು ಇಡಲಾಗಿದೆ. ಅದು ಅಲ್ಲದೆ ಇಲ್ಲಿರುವ ಪಾರ್ಶ್ವನಾಥ ದೇವತೆಗಳ ಮೂರ್ತಿಗಳು ಸಹ ಮಣ್ಣಿನವೆ ಆಗಿವೆ. ಈಗಿರುವ ಯಕ್ಷ-ಯಕ್ಷಿಯರ ಶಿಲ್ಪಗಳು 17-18ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಈ ಪ್ರಾಚೀನ ಕಾಲದ ಬಸದಿಯನ್ನು ಮೂಲ ಅಧಿಷ್ಠಾನದ ಮೇಲೆಯೂ ನಿರ್ಮಿಸಲಾಗಿದೆ. ಬಸದಿಯ ಮುಂದೆ ಒಂದು ಮಾನಸ್ತಂಭವನ್ನು ನಿಲ್ಲಿಸಲಾಗಿದೆ. ಇದು ಜೈನಧರ್ಮಿಯರ ಒಂದು ಸಂಕೇತ ಎನ್ನಬಹುದು. ಏಕೆಂದರೆ ಜೈನಪರಂಪರೆಯಲ್ಲಿ ಬಸದಿಗಳ ಮುಂದೆ ಮಾನಸ್ತಂಭಗಳನ್ನು ನಿಲ್ಲಿಸುವುದು ಒಂದು ರೂಢಿ ಸಂಪ್ರದಾಯವಾಗಿದೆ. ಅದೇ ರೀತಿ ಇಲ್ಲಿ ಇದೆ. ಕೆಲಸೂರಿನ ಈ ಬಸದಿಯ ಆವರಣದಲ್ಲಿ ಸುಮಾರು 10 ನಿಷಧಿ ಶಾಸನಗಳಿವೆ. (ಚಿತ್ರಸಂಖ್ಯೆ-107) ಅದು ಅಲ್ಲದೆ ಪದ್ಮಾವತಿ, ಬ್ರಹ್ಮದೇವರು, ಕೂಷ್ಮಾಂಡಿನಿ, ಪಾರ್ಶ್ವನಾಥ ಶಿಲ್ಪಗಳಿವೆ. (ಚಿತ್ರಸಂಖ್ಯೆ-108) ಕೆಲವೊಂದು ವೀರಗಲ್ಲುಗಳು ಸಹ ಕಂಡುಬರುತ್ತವೆ. ಈ ಎಲ್ಲಾ ಬೆಳವಣಿಗೆಯಿಂದ ಗುಂಡ್ಲುಪೇಟೆ ತಾಲ್ಲೂಕಿನ

ಕೆಲಸೂರು ಕ್ರಿ.ಶ.9–10ನೇ ಶತಮಾನಕ್ಕಾಗಲೇ ಒಂದು ಪ್ರಮುಖ ಜೈನ ಕೇಂದ್ರವಾಗಿತ್ತೆಂದು ತಿಳಿಯಬಹುದಾಗಿದೆ.

ಕೆಲಸೂರಿನ ಜೈನಬಸದಿಯ ಬಗ್ಗೆ ಹಂಗಳದ ಶಿಲಾಶಾಸನದಲ್ಲಿ ಚಿಕ್ಕಜೋಗಬ್ಬೆ ಹಾಗೂ ಸರ್ವಲೋಕಾಶ್ರಯರು ಕ್ರಿ.ಶ.950–1024ರ ಕಾಲಕ್ಕೆ ಕಟ್ಟಿಸಿರುವ ವಿಚಾರ ತಿಳಿದುಬರುತ್ತದೆ.[25] ಅದು ಅಲ್ಲದೆ ಮೈಸೂರಿನ ಒಡೆಯರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲಕ್ಕೆ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದರೆಂದು ತಿಳಿದುಬರುತ್ತದೆ.[26] ಆದರೆ ಈಗ ಪ್ರಸ್ತುತ ಮತ್ತೆ ಜೀರ್ಣೋದ್ಧಾರವಾಗಿದೆ.

## ತೆರಕಣಾಂಬಿಯ ಜೈನ ಬಸದಿ

ಕೆಲವು ಹಿರಿಯರ ಪ್ರಕಾರ ತೆರಕಣಾಂಬಿಯಲ್ಲಿ ಜೈನಬಸದಿ ಇದ್ದಿತ್ತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆದರೆ ಪ್ರಸ್ತುತ ಈಗ ಇಲ್ಲಿ ಯಾವುದೇ ತರಹದ ಬಸದಿಯ ಬಗ್ಗೆ ಅವಶೇಷಗಳಿಲ್ಲ. ಆದರೆ ಅಲ್ಲಿದ್ದ ಒಂದು ಜೈನ ಪಾರ್ಶ್ವನಾಥ ಶಿಲ್ಪವನ್ನು ಇವಾಗ ಊರಿನ ಮುಖ್ಯರಸ್ತೆಯಲ್ಲಿರುವ ವೀರಾಂಜನೇಯನ ದೇವಾಲಯದ ಮುಂದೆ ನಿಲ್ಲಿಸಲಾಗಿದೆ. ಈ ಶಿಲ್ಪದ ಪೀಠದ ಮೇಲೆ ಲಲಿತಕೀರ್ತಿ ಭಟಾರರು ಮಾಡಿಸಿದ ಶಿಲ್ಪವೆಂದೂ ಶಾಸನ ಲಿಪಿಯಿಂದ ತಿಳಿದುಬರುತ್ತದೆ. ಪ್ರಾಯಶಃ ಇದು ಕ್ರಿ.ಶ.14ನೇ ಶತಮಾನದ ಶಾಸನವಾಗಿದೆ. ಆದಕಾರಣ ಕ್ರಿ.ಶ.14ನೇ ಶತಮಾನದಲ್ಲಿ ತೆರಕಣಾಂಬಿಯಲ್ಲಿ ಒಂದು ಜೈನ ಬಸದಿ ಇದ್ದಿರಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ.

## ಹಂಗಳ

ಹಂಗಳ ಗ್ರಾಮದಲ್ಲಿ ಭೂಮಿಯಲ್ಲಿ ಜೈನಪರಂಪರೆಗೆ ಸೇರಿದ ಅನೇಕ ವಸ್ತುಗಳು, ಶಿಲ್ಪಗಳು ದೊರೆತಿವೆ. ಅಲ್ಲದೆ, ಅಲ್ಲಿಯ ಚಿಕ್ಕ ಜೋಗಬ್ಬೆ ಎಂಬುವವಳು ಜೈನ ಧರ್ಮೀಯವಾಗಿದ್ದು, ಈಕೆಯ ಕಾಲಕ್ಕೆ ಶಿಲ್ಪಗಳನ್ನು ಸೇರಿಸಬಹುದಾಗಿದೆ. ಪ್ರಾಯಶಃ ಕ್ರಿ.ಶ.10ನೇ ಶತಮಾನದಲ್ಲಿ ಈ ಗ್ರಾಮ ಒಂದು ಜೈನ ನೆಲೆಯಾಗಿರಬೇಕು. ನಂತರ ಕಾಲದಲ್ಲಿ ಜೈನ ಪರಂಪರೆ ದುಃಸ್ಥಿತಿ ಹೊಂದಿರಬಹುದು. ಆದಕಾರಣ ಜೈನ ಅವಶೇಷಗಳು ಭೂಮಿಯಲ್ಲಿ ಸೇರಿಕೊಂಡಿರಬಹುದು. ಅನಂತರ ಈ ಗ್ರಾಮದಲ್ಲಿ ಭೂಮಿಯನ್ನು ತೆಗೆಯಬೇಕಾದರೆ, ಸುಮಾರು 18ಕ್ಕೂ ಹೆಚ್ಚು ಜೈನ ಶಿಲ್ಪಗಳು ದೊರೆತಿವೆ. ಆದಕಾರಣ ಹಂಗಳ ಗ್ರಾಮ ಒಂದಾನೊಂದು ಕಾಲದಲ್ಲಿ ಜೈನರ ಒಂದು ಪ್ರಮುಖ ಗ್ರಾಮವಾಗಿತ್ತೆಂದು ಪರಿಗಣಿಸಬಹುದಾಗಿದೆ.

ಒಂದಾನೊಂದು ಕಾಲದಲ್ಲಿ ಸರ್ವಲೋಕಾಶ್ರಯದಲ್ಲಿ ಜೈನಬಸದಿಯು ಶ್ರೀಮಂತಿಕೆಯನ್ನು ಹೊಂದಿತ್ತು ಎಂಬುದು ಅಲ್ಲಿಯ ಶಾಸನಾಧಾರಗಳಿಂದ ವ್ಯಕ್ತವಾಗುತ್ತದೆ.[27]

## ಗುಂಡ್ಲುಪೇಟೆ

ಗುಂಡ್ಲುಪೇಟೆ ನಗರ ಪ್ರದೇಶದಲ್ಲಿ ಒಂದು ಅನಂತನಾಥ ಸ್ವಾಮಿ ಬಸದಿ ಇತ್ತೆಂದು ತಿಳಿದುಬರುತ್ತದೆ. ಆದರೆ ಈಗ ಈ ಬಸದಿ ಕಣ್ಮರೆಯಾಗಿದೆ.[28] ಆದರೂ ಕೂಡ ಪ್ರಸ್ತುತ ಈ ನೆಲೆಗೆ ಇಂದಿಗೂ ಬಸ್ತಿಮಾಳ, ಬಸದಿಮಾಳ ಎಂದು ಕರೆಯುವ ವಾಡಿಕೆ ಇದೆ. ಇಂದು ಗುಜರಾತ್ ಮತ್ತು ರಾಜಸ್ಥಾನದಿಂದ ಬಂದು ಜೈನಧರ್ಮದವರು ವಾಸವಾಗಿದ್ದಾರೆ.

## ತಗ್ಗಲೂರು

ಗುಂಡ್ಲುಪೇಟೆ ತಾಲ್ಲೂಕಿನ ತಗ್ಗಲೂರು ಗ್ರಾಮದಲ್ಲಿ ಬೊಮ್ಮದೇವರು (ಬ್ರಹ್ಮದೇವರು) ಎಂಬ ಒಂದು ಚಿಕ್ಕದಾದ ದೇವಾಲಯ ಇದೆ. ಕೆಲವು ಹಿರಿಯರು ಇದು ಜೈನ ಮತೀಯರಿಗೆ ಸೇರಿದ ಆಲಯವೆಂದೂ ಕರೆಯುವ ವಾಡಿಕೆ ಇದೆ.

## ಬೇಗೂರು

ಪ್ರಸ್ತುತ ಬೇಗೂರು ಗ್ರಾಮದಲ್ಲಿ ವಿಶೇಷವಾಗಿ ಜೈನರು ವಾಸ ಮಾಡುತ್ತಿರುವುದು ಕಂಡುಬರುತ್ತದೆ. ಇವರು ರಾಜಸ್ಥಾನ, ಗುಜರಾತ್ ರಾಜ್ಯಗಳಿಂದ ಬಂದು ವ್ಯಾಪಾರ ನಡೆಸುತ್ತಿರುವುದರಿಂದ, ಇಲ್ಲಿರುವ ಅನೇಕ ಜೈನ ಕೆಲವೊಂದು ಧಾರ್ಮಿಕ ಸಭೆ, ಸಮಾರಂಭಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ.

## ರಾಘವಪುರ

ರಾಘವಪುರದಲ್ಲಿ ಜೈನ ಕುರಿತು ಯಾವುದೇ ತರಹದ ಆಧಾರಗಳಿಲ್ಲದಿದ್ದರೂ, ಕೂಡ ಶಾಸನಗಳು ಇಲ್ಲದಿದ್ದರೂ ಕೂಡ ಜೈನ ಧರ್ಮದ ಕುರಿತು ಕೆಲವೊಂದು ಮಾಹಿತಿಗಳಿವೆ. ಕ್ರಿ.ಶ.1320 ರ ಕಾಲಕ್ಕೆ ಸೇರಿದ ಹೊಯ್ಸಳ ದೊರೆಯಾದ ಮುಮ್ಮಡಿ ವೀರಬಲ್ಲಾಳನ ಶಾಸನ ಇದೆ.[29] ಪದಿನಾಲ್ಕು ನಾಡರಸನಾದ ಕೇತಯ ದಣಾಯಕನು ದೊರೆಯಿಂದ ಕುಡುಗನಾಡೊಳಗಿನ ಗೊಮ್ಮಟಹಳ್ಳಿ ಮತ್ತು ಕಾಚೇಗೌಡನ ಮಾದಿಹಳ್ಳಿಗಳನ್ನು ಪಡೆದು ತನ್ನ ಬಳಿ ಶ್ರೀಕರಣನಾಗಿದ್ದ ನಾರಣ ದೇವಣ್ಣನಿಗೆ ದತ್ತಿ ನೀಡಿದ ವಿಚಾರ ತಿಳಿದುಬರುತ್ತದೆ. ಈ ಎರಡು ಗ್ರಾಮಗಳು ಅಗ್ರಹಾರವಾಗಿ ಪರಿವರ್ತನೆಗೊಂಡವು. ಗೊಮ್ಮಟಹಳ್ಳಿಗೆ ನಾರಣದೇವಣ್ಣನ ತಂದೆ

ರಾಘವಾದೇವನ ಹೆಸರಿನಲ್ಲಿ ರಾಘವಪುರ ಎಂದು ಪುನರ್ ನಾಮಕರಣವನ್ನು ಮಾಡಲಾಯಿತು. ಹಿರಿಯ ಹೇಳಿಕೆ ಪ್ರಕಾರ ಈ ಗ್ರಾಮದಲ್ಲಿ ಹಿಂದೆ ಜೈನರು ವಾಸವಾಗಿದ್ದರೆಂದು ತಿಳಿಸುತ್ತಾರೆ. ಈ ಎಲ್ಲಾ ಬೆಳವಣಿಗೆಯಿಂದ ಗುಂಡ್ಲುಪೇಟೆ ತಾಲ್ಲೂಕಿನ ನಾನಾ ಗ್ರಾಮಗಳಲ್ಲಿ ಜೈನಧರ್ಮ ಇತ್ತೆಂದು ಹೇಳಬಹುದಾಗಿದೆ.

## ಗುಂಡ್ಲುಪೇಟೆ ತಾಲ್ಲೂಕಿನ ಜೈನ ಸಾಹಿತಿ ಹಾಗೂ ಸಾಹಿತ್ಯಗಳು

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬೊಮ್ಮರಸ ಆದಿದೇವ, ಪದ್ಮರಸ, ಇವರು ಈ ತಾಲ್ಲೂಕಿನ ಜೈನ ಸಾಹಿತಿಗಳಾಗಿದ್ದಾರೆ.

## ತೆರಕಣಾಂಬಿಯ ಬೊಮ್ಮರಸ

ಈತನು ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಈತನು ಗುಂಡ್ಲುಪೇಟೆ ತಾಲ್ಲೂಕಿನ ತೆಂಕಣಾಂಬಿಯವರಾಗಿದ್ದಾರೆ. ಈತನ ಕಾಲ ಕ್ರಿ.ಶ.1485 ಬೊಮ್ಮರಸನು ಜೈನ ಕೃತಿಗಳಾದ 'ಸನತ್ಕುಮಾರ ಚರಿತ್ರೆ' ಮತ್ತು 'ಜೀವಂಧರ ಸಾಂಗತ್ಯ' ಎಂಬಂತಹ ಗ್ರಂಥಗಳನ್ನು ಬರೆದಿದ್ದಾರೆ. ಭಾಮಿನಿಷಟ್ಪದಿಯ 870 ಪದ್ಯಗಳನ್ನೊಳಗೊಂಡ ಮೇಲೆ ತಿಳಿಸಲಾಗಿರುವ ಸನತ್ಕುಮಾರ ಚರಿತೆಯನ್ನು ತುಂಬಾ ಸೊಗಸಾಗಿ ರಚಿಸಿದ್ದಾರೆ. ಮಾನವನ ಆಯುಷ್ಯ ಮತ್ತು ಸೌಂದರ್ಯ ತನಗರಿವಿಲ್ಲದೆಯೇ ನಾಶವಾಗುತ್ತದೆ. ಜೀವನ ಕ್ಷಣಿಕವಾದದ್ದು ಎಂದು ತಿಳಿಸುವುದೇ ಈ ಮಹಾಕಾವ್ಯದ ಆಶಯವಾಗಿದೆ. ಈತನ ಮತ್ತೊಂದು ಕೃತಿಯಲ್ಲಿ ತಿಳಿಸಲಾಗಿರುವ ಜೀವಂಧರ ಸಾಂಗತ್ಯವೂ ಸರಳವಾದ ಭಾಷೆಯಿಂದ ಕೂಡಿದ್ದು, ಸುಮಾರು 1450 ಸಾಂಗತ್ಯ ಪದ್ಯಗಳ ಹಾಡುಗಳನ್ನು ಒಳಗೊಂಡಿದೆ. ಇದರ ಮೂಲ ಉದ್ದೇಶವೇನೆಂದರೆ, ಮಾನವನ ಭಾವನೆಗಳನ್ನು ಬಡಿದೆಬ್ಬಿಸುವುದರಲ್ಲಿ ಪರಿಣಾಮಕಾರಿಯಾದ ವಿಚಾರವನ್ನು ತಿಳಿಸುತ್ತದೆ. ಒಳ್ಳೆಯ ವಿದ್ವತ್ ಹೊಂದಿದ್ದ ಬೊಮ್ಮರಸನು ಶಿಷ್ಯದುಷ್ಟ ಚಿತ್ರಗಳನ್ನು ಸಮಾಜಕ್ಕೆ ನೀಡಿ, ಸಮಾಜವನ್ನು ಒಂದು ಉತ್ತಮವಾದ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾಡುವ ಪ್ರಯತ್ನವನ್ನು ಮಾಡಿದ್ದಾರೆ.

## ಆದಿದೇವ

ಈತನು ಕೆಲಸೂರಿನವನು. ಈತನು ಕೆಲಸೂರಿ ಚಂದ್ರನಾಥ ಸ್ವಾಮಿಯ ಭಕ್ತನಾಗಿದ್ದು, ಈತನು ಸುಕುಮಾರ ಚರಿತೆ ಎಂಬ ಗ್ರಂಥವನ್ನು ರಚಿಸಿದ್ದಾರೆ. ಈತನ ಕಾಲ ಕ್ರಿ.ಶ.1500,

ಈತನು 1095 ಸಾಂಗತ್ಯದ ವಿಚಾರವನ್ನು ತನ್ನ ಗ್ರಂಥದಲ್ಲಿ ಬೆಳಕು ಚೆಲ್ಲುವ ಕೆಲಸವನ್ನು ಮಾಡಿದ್ದಾರೆ.

## ಪದ್ಮರಸ

ಈತನು ಕೆಲಸೂರಿನವನು, ಪದ್ಮರಸನು ಶೃಂಗಾರ ಕಥೆಗಳನ್ನು ರಚಿಸಿದ್ದಾರೆ. ಈತನ ಮಹಾನ್ ಗುರು ಭಟ್ಟಾರಕಳಂಕ, 'ನೇಮಿನಾಥಪುರಾಣ'ವನ್ನು ಪ್ರತಿ ಮಾಡಿದ ಮಹಾಬಲಿ ಕವಿಯು ಸಹ ಆಗಿದ್ದಾರೆ. ಈತನು ಕ್ರಿ.ಶ.1599 ರಲ್ಲಿ ಬದುಕಿದನೆಂದು ಮಾಹಿತಿ ಇದೆ. ಈ ಎಲ್ಲಾ ಬೆಳವಣಿಗೆಗಳಿಂದ ಗುಂಡುಪೇಟೆ ತಾಲ್ಲೂಕಿನಲ್ಲಿ ನಾನಾ ಗ್ರಾಮಗಳಲ್ಲಿ ಜೈನಧರ್ಮದ ಬೆಳವಣಿಗೆಯು ತಲಕಾಡಿನ ಗಂಗರ ಕಾಲದಿಂದ ಮೈಸೂರು ಒಡೆಯರ್ ಕಾಲದವರೆವಿಗೂ ಒಂದಲ್ಲ ಒಂದು ರೀತಿಯಲ್ಲಿ ಬೆಳೆದಿತ್ತೆಂಬುದು ತಿಳಿದುಬರುತ್ತದೆ. ತಲಕಾಡಿನ ಗಂಗರ ಕಾಲಕ್ಕೆ ಗುಂಡ್ಲುಪೇಟೆ ಅಲ್ಲದೆ ಈ ಭಾಗದ ಕನಕಗಿರಿ, ಕೊಳ್ಳೇಗಾಲದ ಬಸ್ತಿಪುರ, ಕೆಲಸೂರು ಒಂದು ಜೈನಧಾರ್ಮಿಕ ಕೇಂದ್ರಗಳಾಗಿದ್ದವು. ಅಲ್ಲದೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಪ್ರಸ್ತುತ ಇಂದಿಗೂ ಕೂಡ ಕೆಲವೊಂದು ನೆಲೆಗಳಲ್ಲಿ ಜೈನಧರ್ಮದ ಅಂದಿನ ಕಾಲದ ವೈಭವವನ್ನು ಅಂದಿನ ಕಾಲದ ಶಿಲಾಶಾಸನಗಳಿಂದ ಕೆಲವೊಂದು ಪ್ರಾಚೀನ ಜೈನ ಗ್ರಂಥಗಳಿಂದ, ಅಲ್ಲದೆ ಅಲ್ಲಲ್ಲಿ ದೊರೆತಿರುವ ಶಿಲ್ಪಕಲೆಯಿಂದ ಜೈನ ಪರಂಪರೆಯನ್ನು ಪ್ರಸ್ತುತ ದಿನಗಳಲ್ಲಿಯೂ ಸಾಕ್ಷೀಕರಿಸಬಹುದಾಗಿದೆ.

ಪ್ರಸ್ತುತ ದಿನಗಳಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಕೆಲಸೂರಿನಲ್ಲಿ ಅನೇಕ ಬಗೆಯ ಕೈಂಕರ್ಯಗಳು ನಡೆಯುತ್ತಿವೆ. ಅಲ್ಲಿನ ಜೈನರ ಕುಟುಂಬ ವಿವಿಧ ರೀತಿಯ ಕೈಂಕರ್ಯದಲ್ಲಿ ತೊಡಾಗಿದ್ದು, ಕೆಲವು ಸಂದರ್ಭಗಳಲ್ಲಿ ಬ್ರಹ್ಮೋತ್ಸವನ್ನು ಆಚರಿಸುವಂತಹ ಪರಿಪಾಠ ಇದೆ. ಕೆಲಸೂರಿನಲ್ಲಿ ಪ್ರತಿದಿನವೂ ಪೂಜೆ–ಪುನಸ್ಕಾರಗಳು ನಡೆಯುತ್ತಿದೆ. ಈ ಗ್ರಾಮದ ಅರ್ಚಕರು ಬಸದಿಗೆ ಸೇರಿದಂತೆ ಒಂದು ಮನೆಯನ್ನು ನಿರ್ಮಿಸಿಕೊಂಡು ಪ್ರತಿದಿನ ದೇವರ ಸೇವೆಯಲ್ಲಿ ಭಾಗಿಯಾಗಿದ್ದು, ಅನೇಕ ಜೈನ ಪ್ರವಾಸಿಗರು ರಾಜ್ಯದ ದೇಶದ ಅಲ್ಲದೆ ಹೊರ ರಾಷ್ಟ್ರದ ಜೈನ ಆರಾಧಕರು ಬರುವ ಪರಂಪರೆ ಇದೆ. ಆದಕಾರಣ ಬರುವಂತಹ ಜೈನ ಯಾತ್ರಾರ್ಥಿಗಳಿಗಾಗಿಯೇ ವಸತಿಗೃಹವನ್ನು ನಿರ್ಮಿಸಲಾಗುತ್ತಿದೆ. ಕೆಲಸೂರಿನ ಜೈನಬಸದಿಯ ನಿರ್ವಹಣೆಯ ಕಾರ್ಯದಲ್ಲಿ ಪಕ್ಕದಲ್ಲಿರುವ ಕನಕಗಿರಿ ಜೈನ ಕ್ಷೇತ್ರದ ಧರ್ಮಗುರುಗಳಾದ ಲಲಿತ ಭಟ್ಟಾರಕರು ಕೂಡ ಸಹಾಯಹಸ್ತವನ್ನು ಚಾಚುತ್ತಿದ್ದು, ಕೆಲಸೂರಿನ ಜೈನ ಬಸದಿಯ ಅಭಿವೃದ್ಧಿಗೆ ಪೂರಕವಾಗಿ ಕೆಲಸಕಾರ್ಯಗಳು ನಡೆಯುತ್ತಿವೆ. ಈ ಎಲ್ಲಾ ಬೆಳವಣಿಗೆಯ ಹಿನ್ನೆಲೆಯಿಂದ ಪ್ರಾಚೀನ ಕಾಲದಿಂದ ಬಂದಂತಹ ಜೈನಧರ್ಮ ನಿರಂತರವಾಗಿ ಸಾಗುತ್ತಿರುವುದು ಕಂಡುಬರುತ್ತದೆ.

## ಶಾಸನೋಕ್ತ ಜೈನ ಬಸದಿಗಳು

ಕರ್ನಾಟಕಕ್ಕೆ ಕ್ರಿ.ಪೂ. ದಲ್ಲಿಯೇ ಜೈನರು ವಲಸೆ ಬಂದರೆಂದು ಪ್ರತೀತಿ ಇದ್ದರೂ ಕೂಡ ಇವರ ವಾಸ್ತುಶಿಲ್ಪಕಲೆ ಬೆಳವಣಿಗೆ ಕಾಣಬರುವುದು. ಕ್ರಿ.ಶ.6–7ನೇ ಶತಮಾನದಿಂದೀಚೆಗೆ, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರ ಕಾಲದಲ್ಲಿಯೇ ಜೈನ ಗುಹೆಗಳನ್ನು ಮಾಡಲಾಗಿದೆ. ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಜೈನ ಬಸದಿಗಳ ಬಗ್ಗೆ ತಿಳಿದುಬರುತ್ತದೆ. ಆದರೆ ಈ ಭಾಗದಲ್ಲಿ ಗಂಗರ ಹೊಯ್ಸಳರ ಕಾಲಕ್ಕೆ ಬಸದಿಗಳ ಹಿನ್ನೆಲೆಯನ್ನು ಕಾಣಬಹುದಾಗಿದೆ. ಕ್ರಿ.ಪೂ.2ನೇ ಶತಮಾನದಿಂದ ಕ್ರಿ.ಶ.10ನೇ ಶತಮಾನದವರೆವಿಗೂ ದೇಶದ ನಾನಾ ಭಾಗಗಳಲ್ಲಿ ಜೈನಯತಿಗಳ ವಾಸಕ್ಕಾಗಿಯೋ ಅಥವಾ ಜೈನಮಂದಿರಗಳಗಾಗಿಯೋ ಗುಹೆಗಳನ್ನು ಕೊರೆದಿರುವುದು ಅಲ್ಲದೆ ಸ್ವಾಭಾವಿಕ ಗುಹೆಗಳನ್ನು ಮಾರ್ಪಡಿಸಿರುವುದು ಕರ್ನಾಟಕದಲ್ಲಿ ಕಂಡುಬಂದಿದೆ. ಇಲ್ಲಿಯ ಅನೇಕ ರಾಜಮನೆತನಗಳು ಕೊಟ್ಟ ಪ್ರೋತ್ಸಾಹದಿಂದ ಜೈನ ವಾಸ್ತುಶಿಲ್ಪ ವಿಸ್ತಾರವಾಗಿಯೂ ವೈವಿಧ್ಯಮಯವಾಗಿಯೂ ಬೆಳೆಯಲು ಸಹಕಾರವಾಯಿತು. ಆದರೆ ಅಂದು ಇದ್ದ ಜೈನ ಬಸದಿಗಳು, ಈಗ ಸಂಪೂರ್ಣ ನಾಶವಾಗಿದೆ. ಈ ಹಿನ್ನೆಲೆಯಿಂದ ಶಾಸನೋಕ್ತ ಬಸದಿಗಳ ಬಗ್ಗೆ ಚರ್ಚಿಸಲಾಗುತ್ತದೆ.

### ತೆರಕಣಾಂಬಿ

ಪ್ರವಾಸಿ ಮಂದಿರದ ಬಳಿ ಬಿದ್ದಿದ್ದ ಪಾರ್ಶ್ವನಾಥ ವಿಗ್ರಹದ ಪೀಠದ ಮೇಲೆ ಕ್ರಿ.ಶ.14ನೇ ಶತಮಾನಕ್ಕೆ ಸೇರಿಸಬಹುದಾದ ಶಾಸನದಲ್ಲಿ ಐದು ಸಾಲುಗಳಿರುವ ಶಾಸನವಾಗಿದ್ದು, ಸ್ವಸ್ತಿ ಶ್ರೀ ಮೂಲಸಂಘ ದೇಶೀಯಗಣ ಪುಸ್ತಕಗಚ್ಛ ಕೊಂಡ ಕುಂದಾನ್ವಯ ಹನಸೋಗೆಯ ಬಳಿಯ ರಾಜಗುರು (ಮಂಡೆ)ಳಾ ಚಾರ್ಯರುಮಪ್ಪ (ಸಮ)ಯಾಭರಣ ಲಲಿತ ಕೀರ್ತಿ ಭಟಾರಕರು ಮಾಡಿಸಿದ (ಪ್ರತಿಮೆ) ಮಂಗಳ ಮಹಾ ಶ್ರೀಶ್ರೀಶ್ರೀ ಎಂದು ತಿಳಿಸಲಾಗಿದೆ. ಆದಕಾರಣ ಅಂದಿನ ಕಾಲಕ್ಕೆ ತೆರಕಣಾಂಬಿಯಲ್ಲಿ ಒಂದು ಬಸದಿಯ ನಿರ್ಮಾಣವಾಗಿತ್ತೆಂದು ತಿಳಿಯಬಹುದಾಗಿದೆ. ಆದರೆ ಪ್ರಸ್ತುತ ತೆರಕಣಾಂಬಿಯಲ್ಲಿ ಕ್ರಿ.ಶ.14ನೇ ಶತಮಾನಕ್ಕೆ ಸೇರಿದ ಒಂದು ಶಿಲ್ಪವನ್ನು ಕಾಣಬಹುದಾಗಿದೆ.[30]

### ಗುಂಡ್ಲುಪೇಟೆ

ಗುಂಡ್ಲುಪೇಟೆಯ ಕೋಟೆಯೊಳಗೆ ಬಸ್ತಿಮಾಳದಲ್ಲಿ ನೆಟ್ಟಿರುವ ಕಲ್ಲು ಚಪ್ಪಡಿಯಲ್ಲಿ ಸುಮಾರು ಮುಂಭಾಗ ಮತ್ತು ಹಿಂಭಾಗ ಸೇರಿ 28 ಸಾಲುಗಳಿರುವ ಶಾಸನವಾಗಿದ್ದು, ಈ ಶಾಸನವನ್ನು ಹೊಯ್ಸಳರ ದೊರೆಯಾದ ಎರಡನೆಯ ವೀರಬಲ್ಲಾಳನ ಆಳ್ವಿಕೆಯ ಕಾಲಕ್ಕೆ

ಸೇರಿದ ಶಾಸನವಾಗಿದ್ದು, ಇದನ್ನು ಕ್ರಿ.ಶ.1196ರ ಕಾಲಕ್ಕೆ ಸೇರಿಸಲಾಗಿದೆ. ಇದೊಂದು ಜಿನಾಲಯಕ್ಕೆ ಬಿಟ್ಟ ದಾನಶಾಸನ. ಆದರೆ ಜಿನಾಲಯ ಮಾತ್ರ ಕಾಣಬರುವುದಿಲ್ಲ.[31] ಅದೇ ಸ್ಥಳದಲ್ಲಿ ಬಸ್ತಿಮಾಳದಲ್ಲಿ ನೆಟ್ಟ ಎರಡನೆಯ ಕಲ್ಲು ಪ್ರಕಾರ ಇದು ಕ್ರಿ.ಶ.16ನೇ ಶತಮಾನಕ್ಕೆ ಸೇರಿದೆ. ಇದರ ಪ್ರಕಾರ ವಿಜಯಪುರದ ಅನಂತ ದೇವರಿಗೆ ಅಂದರೆ ಅನಂತ ಜೈನ ಮುನಿ ದೇವರಿಗೆ ಅನೇಕ ರೀತಿಯ ದಾನ ನೀಡಿರುವುದು ತಿಳಿದುಬರುತ್ತದೆ. ಇದರಿಂದ ಈ ವಿಜಯಪುರದಲ್ಲಿ (ಗುಂಡ್ಲುಪೇಟೆ) ಯಲ್ಲಿ ಜೈನರ ನೆಲೆ ಇತ್ತೆಂದು ಹೆಸರೇ ಸೂಚಿಸುತ್ತದೆ.[32]

### ಬೇರಂಬಾಡಿ

ಬೇರಂಬಾಡಿಯ ಮಾರಿಗುಡಿಯ ಬಳಿ ನೆಟ್ಟಕಲ್ಲು ಶಾಸನದ ಪ್ರಕಾರ ಕ್ರಿ.ಶ.14ನೇ ಶತಮಾನಕ್ಕೆ ಸೇರಿದ ಶಾಸನವಾಗಿದ್ದು, ಎಂಟು ಸಾಲುಗಳಿವೆ. ಇದರಲ್ಲಿ ಓಂ ನಮೋ ಅರ್ಹತೇ, ಭಗತೇ, ಚಂದ್ರೋಗ್ರಪಾರಿಶ್ರ್ವನಾಥಾಯ ಧರಣೇಂದ್ರ ಪದ್ಮಾವತಿ ಸಹಿತಾಯ ಸರ್ವ್ವವ್ಯಾಧಿಹರಂ ಅಳಲು ಮೊಗೆ ಲೆಗುರ ನಾನಾಯ ಶ್ರೀ ಪಂಚಪರಮೇಷ್ಠಿಪಾದ ಎಂಬುದಾಗಿದೆ. ಪ್ರಾಯಶಃ ಜೈನರ ಬಸದಿಯೊಂದಿದ್ದು, ಜೈನ ಧರಣೇಂದ್ರ ಮತ್ತೊಂದು ಪದ್ಮಾವತಿಯ ಹೆಸರುಗಳನ್ನು ಪ್ರಸ್ತಾಪಿಸಿರುವುದರಿಂದ ಇಲ್ಲಿ ಜೈನ ನೆಲೆಯಾಗಿತ್ತೆಂದು ತಿಳಿಯಬಹುದಾಗಿದೆ.[33]

### ಸಂಪಿಗೆಪುರ

ಸಂಪಿಗೆಪುರಕ್ಕೂ ಕಬ್ಬಳಿಗೂ ಮಧ್ಯ ತೋಟವೊಂದರಲ್ಲಿ ಅರ್ಕೇಶ್ವರ ದೇವಾಲಯ ಇದೆ. ಈ ದೇವಾಲಯದ ಹಿಂದೆ ಗೋಡೆಗೆ ಒರಗಿಸಿರುವ ಕ್ರಿ.ಶ.9ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ ಬಸದಿಯ ಬಗ್ಗೆ ತಿಳಿದುಬರುತ್ತದೆ. ಆದಕಾರಣ ಅಂದಿನ ಕಾಲಕ್ಕೆ ಒಂದು ಬಸದಿ ಇತ್ತೆಂದು ತಿಳಿಯಬಹುದಾಗಿದೆ.[34]

### ಹಂಗಳ

ಹಂಗಳದಲ್ಲಿ ಭೂಮಿಯಲ್ಲಿ ದೊರೆತ ಚಾವೀಸ ತೀರ್ಥಂಕರರ ಲೋಹಬಿಂಬದ ಪೀಠದ ಹಿಂಭಾಗದಲ್ಲಿ ಸಾಲುಗಳಿರುವ ಒಂದು ಶಾಸನದಲ್ಲಿ ಜೈನ ಧರ್ಮೀಯರಾದ ಚಿಕ್ಕಜೋಗಬ್ಬೆಗಳ ತಾಯಿ ಮಾಕಬ್ಬೆ ಕನ್ತಿಯರು ಶ್ರೀ ಮದ್ದಾಮಣಿರ ಭಟ್ಟಾರಕರ ಬಗ್ಗೆ ತಿಳಿದುಬರುತ್ತದೆ.[35] ಅದೇ ಸ್ಥಳದಲ್ಲಿ ಭೂಮಿಯಲ್ಲಿ ದೊರೆತ ನಾಲ್ಕು ದೀಪಸ್ತಂಭಗಳು ಮತ್ತು ಒಂದು ದೊಡ್ಡ ಘಂಟೆಯ ಮೇಲೆ ಶ್ರೀ ಮದ್ದಾಮಣನ್ದಿ ಭಟಾರಕ ಗುಡ್ಡಿ ಚಿಕ್ಕ ಜೋಗಬ್ಬೆ ಎಂದು ತಿಳಿದುಬರುತ್ತದೆ.[36] ಅದೇ ಸ್ಥಳದಲ್ಲಿ ದೊರೆತ ಐದು ಸಣ್ಣ ಮುಕ್ಕಾಲು ಪೀಠಗಳು ಐದು, ಸಣ್ಣ ಗಿಂಡಿಗಳು ಒಂದು ಸಣ್ಣ

ದೀಪಸ್ತಂಭ ಮತ್ತು ಒಂದು ಸಣ್ಣ ಘಂಟೆಯ ಮೇಲೆ ಚಿಕ್ಕ ಜೋಗಬ್ಬೆ ಎಂದು ಹೆಸರು ತಿಳಿದುಬಂದಿರುವುದರಿಂದ ಈ ನೆಲೆಯು ಒಂದು ಜೈನರ ನೆಲೆಯಾಗಿದ್ದು, ಇಲ್ಲಿ ಒಂದು ಬಸದಿ ಇದ್ದಿರಬೇಕು. ನಂತರ ಕಾಲದಲ್ಲಿ ಬಸದಿಯು ನಾಶವಾಗಿ ದೊರೆತಿರುವ ಅನೇಕ ಬಗೆಯ ದೀಪಸ್ತಂಭಗಳು ಹಾಗೂ ಘಂಟೆಗಳಿಂದ ಬಸದಿ ಇತ್ತೆಂದು ತಿಳಿಯಬಹುದಾಗಿದೆ. ಅಲ್ಲದೆ ಜೈನರ ಹೆಸರುಗಳನ್ನು ಸೂಚಿಸುತ್ತದೆ.[37]

## ಜೈನರ ಸಲ್ಲೇಖನ ಆಚರಣೆಗಳು

ಧಾರ್ಮಿಕವಾಗಿ ದೇಹತ್ಯಾಗ ಮಾಡುವುದು ಜೈನರಲ್ಲಿಅಧರ್ಮದಲ್ಲಿ ವಿಶೇಷವಾಗಿದೆ. ಈ ರೀತಿಯ ಸಲ್ಲೇಖನ ಆಚರಣೆ ಜೈನಧರ್ಮದ ವೈಶಿಷ್ಠವು ಆಗಿದೆ. ಸಲ್ಲೇಖನವನ್ನು ಸಮಾಧಿ ಮರಣಗಳೆಂದು ಅಥವಾ ಸಲ್ಲೇಖನ ವ್ರತ್ತಗಳೆಂದು ಕರೆಯುವ ವಾಡಿಕೆ ಇದೆ. ಸಮಾಧಿ ಮರಣವನ್ನು ಹೊಂದಿರುವ ನೂರಾರು ಹೆಸರುಗಳನ್ನು ಶ್ರವಣ ಬೆಳಗೊಳದಲ್ಲಿ ಕಾಣಬಹುದು. ಅದೇ ಮಾದರಿಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಕೆಲಸೂರಿನ ಬಸದಿಯ ಪರಿಸರದಲ್ಲಿ ಸಲ್ಲೇಖನ ನೀಡಿದ ಗುರುತುಗಳಿವೆ. ಇವುಗಳಿಗೆ 'ನಿಷೇಧಿಗಲ್ಲು' ಎಂದು ಕರೆಯುತ್ತಾರೆ. ಸಲ್ಲೇಖನ ವ್ರತ್ತವನ್ನು ಕೈಗೊಳ್ಳುವುದರ ಉದ್ದೇಶವೂ ಹಿಂದುಗಳು ಧಾರ್ಮಿಕ ದೇಹತ್ಯಾಗ ಮಾಡುವ ಉದ್ದೇಶವೂ ಒಂದೇ. ಒಬ್ಬ ವ್ಯಕ್ತಿಯ ಜೀವವು ಅಶಾಶ್ವತವೆಂದು ಕಂಡುಬಂದರೆ ಕ್ಷಮಿಸಬೇಕಾದ ತನ್ನ ಕರ್ಮದ ಹೊರೆ ದೊಡ್ಡದು ಎಂದು ಅನಿಸಿದರೆ, ಅಪರಿಹಾರ್ಯವಾದ ಮಹಾರೋಗದಿಂದ ಪೀಡಿತನಾದರೆ ಆಗ ವ್ಯಕ್ತಿಯು ಯಾವ ಜೀವವೂ ಆಹಾರವನ್ನು ತೊರೆದು ಮೃತಧಾರಿಯಾಗುತ್ತಿದ್ದರು. ಸಮಾಧಿ ಮರಣದ ವ್ರತವನ್ನು ನಡೆಸಲು ಬೇಕಾದಷ್ಟು ನಿಯಮಗಳನ್ನು ಹಾಕಿದ್ದಾರೆ. ಅಲ್ಲದೆ ಆ ವ್ರತದಲ್ಲಿ ಹಲವು ಪ್ರಭೇದಗಳಿವೆ. ಆ ವ್ರತವನ್ನು ತಾಳಿ ದೇಹತ್ಯಾಗವನ್ನು ಮಾಡಿದವರ ಸ್ಮಾರಕವಾಗಿ ಅವರು ಯಾವ ಸ್ಥಳದಲ್ಲಿ ಕುಳಿತು ದೇಹತ್ಯಾಗ ಮಾಡಿದರೋ ಅಲ್ಲಿ ಆ ವ್ಯಕ್ತಿಯ ಗುಣಗಾನ ಮಾಡುವ ಶಾಸನಗಳನ್ನು ಬರೆಸುತ್ತಿದ್ದರು. ಇವುಗಳನ್ನೇ ನಿಷೇಧಿತ ನಿಷೇಧಿಗಲ್ಲು ಎಂದು ಕರೆದಿರುವರು. ಈ ನಿಷಧಿಕಲ್ಲುಗಳು ಪವಿತ್ರವೆಂದು ಜೈನರು ಪೂಜಿಸುತ್ತಾರೆ. ಅದೇ ಪದ್ಧತಿಯನ್ನು ಕೆಲಸೂರಿನಲ್ಲಿಯೂ ಸಹ ಕಾಣಬಹುದಾಗಿದೆ.

## ಜೈನರ ಹಬ್ಬ ಆಚರಣೆಗಳು

ಗುಂಡ್ಲುಪೇಟೆ ತಾಲ್ಲೂಕಿನ ಕೆಲಸೂರಿನಲ್ಲಿ ಜೈನರು ಅನೇಕ ಹಿಂದೂ ಹಬ್ಬಗಳ ಸಂದರ್ಭಗಳಲ್ಲಿ ತಮ್ಮ ಜೈನ ಸಂಪ್ರದಾಯಕ್ಕೆ ಅನುಗುಣವಾಗಿ ವಿಶಿಷ್ಠಮಾದರಿಯಲ್ಲಿ

ಆಚರಿಸುತ್ತಾರೆ. ಚೈತ್ರ ಯುಗಾದಿಯನುನು ಆದಿ ತೀರ್ಥಂಕರನಾದ ವೃಷಭದೇವ ಅಥವಾ ಆದಿನಾಥನ ಮಗನಾದ ಭರತನ ವಿಜಯ ದಿನವೆಂದು ಆಚರಿಸುತ್ತಾರೆ. ಚೈತ್ರ ಶುದ್ಧ ತ್ರಯೋದಶಿಯಂದು ಮಹಾವೀರ ಜಯಂತಿಯನ್ನು ಆಚರಿಸುತ್ತಾರೆ. ವೈಶಾಖ ಶುದ್ಧ ಅಕ್ಷಯ ತೃತೀಯ ದಿನ ಶ್ರೇಯಸ್ ಅರಸನು ಆದಿನಾಥ ತೀರ್ಥಂಕರನಿಗೆ ದೀರ್ಘ ಉಪವಾಸದ ಪಾರಣೆಗೆ ಆಹಾರ ದಾನ ಮಾಡಿದ್ದರ ನೆನಪಿಗಾಗಿ ದಾನಗಳನ್ನು ಮಾಡುವರು. ಭಾದ್ರಪದದಲ್ಲಿ ಬರುವ ಗೌರಿಹಬ್ಬವನ್ನು ಹಿಂದೂಗಳಂತೆ ಇವರು ಆಚರಿಸುತ್ತಾರೆ. ಗೌರಿಯು ಹನ್ನೊಂದನೆಯ ತೀರ್ಥಂಕರನ ಯಕ್ಷಿಯೆಂದು ಜೈನರಿಗೆ ಪೂಜ್ಯಳು, ಜೈನಧರ್ಮೀಯರು ಭಾದ್ರಪದ ಶುದ್ಧ ಪಂಚಮಿಯಿಂದ ಚತುರ್ದಶಿಯವರೆಗೆ ಸುಮಾರು 10 ದಿನಗಳು ದಶಲಕ್ಷಣ ಸರ್ವಕಾಲವೆಂದು ಆಚರಿಸುತ್ತಾರೆ. ಆ ಅವಧಿಯು ಜೈನರಿಗೆ ಧಾರ್ಮಿಕ ಆಚರಣೆಯ ಮಹತ್ವದ ದಿವಸಗಳಾಗಿದ್ದು, ಇವರ ಮನೆಗಳಲ್ಲೂ ಜಿನ ಮಂದಿರಗಳಲ್ಲೂ ವಿಶೇಷ ಪೂಜೆ ಉಪನ್ಯಾಸಗಳು ನಡೆಯುತ್ತವೆ. ನವರಾತ್ರಿಯ ಅಷ್ಟಮಿಯನ್ನು ಜೀವದಯಾಷ್ಟಮಿ ಎಂದು ಕರೆದು ಉಪವಾಸ ಕೈಗೊಂಡು ಪ್ರಾಣಿಗಳಲ್ಲಿ ದಯೆ ಹಾಗೂ ಅಹಿಂಸೆಯ ಆಚರಣೆಯ ಪುರಾಣ ಕಥೆಗಳನ್ನು ಹೇಳುವರು. ಮಹಾನವಮಿಯು ಯಕ್ಷಿ ಪದ್ಮಾವತಿ ದೇವಿಗೆ ಮೀಸಲಾದ ಪೂಜಾ ದಿನವಾಗಿರುತ್ತದೆ. ವಿಜಯದಶಮಿಯಂದು ಭರತನು ಸೀಮೋಲ್ಲಂಘನ ಮಾಡಿದ ನೆನಪಿಗಾಗಿ ಹಬ್ಬವನ್ನು ಆಚರಿಸಿ ಬಡವರಿಗೆ ದಾನಧರ್ಮ ಮಾಡುವರು. ದೀಪಾವಳಿಯನ್ನು ಮಹಾವೀರನ ಮಹಾನಿರ್ವಾಣದ ದಿನವೆಂದು ಆಚರಿಸುತ್ತಾರೆ. ಅಲ್ಲದೆ ಲಕ್ಷ್ಮಿದೇವಿಯನ್ನು ಪೂಜಿಸುತ್ತಾರೆ. ಶಿವರಾತ್ರಿಯನ್ನು ಜಿನರಾತ್ರಿಯೆಂದು ಕರೆದು ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬಗಳಲ್ಲದೆ ಇನ್ನೂ ಅನೇಕ ಉಪವಾಸ ವ್ರತಗಳನ್ನು ಜೈನರು ಈ ಭಾಗದಲ್ಲಿಯೂ ಆಚರಿಸುವುದು ತಿಳಿದುಬರುತ್ತದೆ.[38]

## ಅಡಿಟಿಪ್ಪಣಿಗಳು

1. ಎಂ.ಚಿದಾನಂದಮೂರ್ತಿ– ಕ.ಶಾ.ಸಾಂ., ಸಂಪುಟ–1, 2002, ಪು.354.
2. ಆರ್.ಆರ್.ದಿವಾಕರ್ – ಕರ್ನಾಟಕ ಪರಂಪರೆ, ಸಂಪುಟ–1, ಪು.354.
3. ಹಂಪನಾಗರಾಜಯ್ಯ – ಯಕ್ಷ, ಯಕ್ಷಿಯರು ಚಂದ್ರಸಾಗರವರ್ಣಿ, ಗ್ರಂಥಮಾಲೆ, 1079, 5 ವಿಭಾಗ, ರಾಮನಗರ, ಬೆಂಗಳೂರು, 1976, ಪು.43, 44.
4. ಬಿ.ಷೇಕ್ ಅಲಿ – ಹಿಸ್ಟರಿ ಆಫ್ ದಿ ವೆಸ್ಟ್ರನ್ ಗಂಗಾಸ್, 1976, ಪು.331.
5. ಕನ್ನಡ ವಿಷಯ ವಿಶ್ವಕೋಶ, ಸಂಪುಟ–5, ಮೈಸೂರು ವಿವಿ ಪ್ರಸಾರಂಗ ಪ್ರಸಾರಾಂಗ, ಪ್ರಕಟಣೆ, ಪು.397.
6. ಎ.ಕ.ಸಂಪುಟ–4, ಕೊಳ್ಳೇಗಾಲ ಶಾಸನ ಸಂಖ್ಯೆ–91.
7. ಎ.ಕ.ಸಂಪುಟ–4, ಕೊಳ್ಳೇಗಾಲ ಶಾಸನ ಸಂಖ್ಯೆ–92.
8. ಎಫಿಗ್ರಾಫಿಯ ಕರ್ನಾಟಕ, ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಂಡುಬರುವ ಜೈನಶಾಸನಗಳ ಪ್ರಕಾರ ಗಮನಿಸಲಾಗಿದೆ.
9. ಅದೇ
10. ಕೆಲಸೂರು ಜೈನ ಅರ್ಚಕರು, ಕೆ.ಪಿ.ಧರಣೇಂದ್ರಯ್ಯ, ಫೋನ್ ನಂ.9008234269 ರವರಿಂದ ಮಾಹಿತಿಯನ್ನು ಪಡೆಯಲಾಗಿದೆ.
11. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–3, (ಎ.ಕ.4, ಎ.ಕ.14 ಗುಂಡ್ಲುಪೇಟೆ 27)
12. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–4 (ಎ.ಕ.4 ಗು.ಪೇ.28)
13. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–92.
14. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–100. (ಎ.ಕ.4, ಗು.ಪೇ.18)
15. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–101. (ಎ.ಕ.4, ಗು.ಪೇ.19)
16. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–102. (ಎ.ಕ.4, ಗು.ಪೇ.20)
17. ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ, ಪು.233.

18. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-103.
19. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-123.(ಎಂ.ಎ.ಆರ್.1934-41)
20. ಮಲೆಯೂರು ಗುರುಸ್ವಾಮಿ (ಸಂ)- ಹೊನ್ನುಹೊಳೆ (ಚಾಮರಾಜನಗರ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2007, ಪು.487.
21. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-203.
22. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-204, 205.
23. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-218 (ಎ.ಕ.4, ಗು.ಪೇ.96)
24. ಕೆಲಸೂರು ಚಂದ್ರನಾಥ ಬಸದಿಯ ಅರ್ಚಕರಾದ ಕೆ.ಪಿ.ಧರಣೇಂದ್ರಯ್ಯರವರ ಮಾಹಿತಿಯನ್ನು ಪಡೆಯಲಾಗಿದೆ.
25. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-102.
26. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-100.
27. ಡಾ.ಪಳನಿಸ್ವಾಮಿ – ಗುಂಡ್ಲುಪೇಟೆ ತಾಲ್ಲೂಕು, ಒಂದು ಸಾಂಸ್ಕೃತಿಕ ಅಧ್ಯಯನ- ಸ್ಕಂದಶ್ರೀ ಪ್ರಕಾಶನ, ಮೂಡಗೂರು 2011, ಪು.108, 109.
28. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆಗಳು (3 ಮತ್ತು 4)
29. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-39.
30. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-123.
31. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-3.
32. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-4.
33. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-218.

34. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-92.

35. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-203.

36. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-204.

37. ಎಫಿಗ್ರಾಫಿಯ ಕರ್ನಾಟಕ ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-205.

38. ಚಾಮರಾಜನಗರ ಜಿಲ್ಲೆಯ ಕನಕಗಿರಿ ಜೈನ ಕ್ಷೇತ್ರದ ಜೈನ ಸನ್ಯಾಸಿ ಶ್ರಿಶ್ರೀ ಭುವನಾಚಾರ್ಯರು ಕೀರ್ತಿ ಸ್ವಾಮಿಗಳು ರವರಿಂದ ಮಾಹಿತಿಗಳನ್ನು ಪಡೆಯಲಾಗಿದೆ.

## ಗುಂಡ್ಲುಪೇಟೆ ತಾಲ್ಲೂಕಿನ ಜೈನಬಸದಿ

1. ಕೆಲಸೂರು – ಜೈನಬಸದಿ
2. ತೆರಕಣಾಂಬಿ – ಪಾರ್ಶ್ವನಾಥ ಶಿಲ್ಪ

## ಶಾಸನೋಕ್ತ ಜೈನ ಬಸದಿಗಳು

1. ತೆರಕಣಾಂಬಿ
2. ಗುಂಡ್ಲುಪೇಟೆ
3. ಬೇರಂಬಾಡಿ
4. ಸಂಪಿಗೆಪುರ
5. ಹಂಗಳ
6. ತಗ್ಗಲೂರು
7. ಬೇಗೂರು
8. ರಾಘವಪುರ

# ಅಧ್ಯಾಯ-6

# ಗುಂಡ್ಲುಪೇಟೆ ತಾಲ್ಲೂಕಿನ ಇತರ ಪಂಥದ ದೇವಾಲಯಗಳು

## 6.1. ಶಕ್ತಿಪ್ರಧಾನವಾದ ದೇವಾಲಯಗಳು

### ಪೀಠಿಕೆ

ಹಿಂದೂ ವೈಧಿಕ ಸಂಸ್ಕೃತಿಯ ಪರಂಪರೆಯಲ್ಲಿ ಭಕ್ತಿ ಪೂರ್ವಕವಾಗಿ ಶಕ್ತಿ ಪ್ರಧಾನ ದೇವತೆಗಳನ್ನು ಪ್ರಾಚೀನ ಕಾಲದಿಂದಲೂ ಪೂಜೆ-ಪುನಸ್ಕಾರ, ಆರಾಧನೆಯನ್ನು ಮಾಡುತ್ತಿರುವುದು ತಿಳಿದುಬರುತ್ತದೆ. ಶಕ್ತಿದೇವತೆಯನ್ನು ವರ್ಷಕ್ಕೆ ಒಂದು ಬಾರಿ ಆರಾಧಿಸುವ ಪರಿಪಾಠ ಇದೆ. ಇಂತಹ ಶಕ್ತಿ ದೇವತೆಗಳ ಹಬ್ಬಗಳನ್ನು ನಡೆಸುತ್ತಿರುವುದರಿಂದ, ಮುಂದಿನ ದಿನಗಳಲ್ಲಿ ಗ್ರಾಮಕ್ಕೆ ಒಳ್ಳೆಯದು ಆಗುತ್ತದೆ ಎಂಬ ನಂಬಿಕೆ ಇದೆ. ಆದಕಾರಣ ಕೆಲವೊಂದು ಶಕ್ತಿದೇವತೆಯ ಹಬ್ಬದ ಸಂದರ್ಭದಲ್ಲಿ ಪ್ರಾಣಿಪಕ್ಷಿಗಳನ್ನು ದೇವರಿಗೆ ಬಲಿಕೊಡುವ ಪರಂಪರೆಯೂ ಕೂಡ ಇದೆ.[1]

ಮಾರಿಯರು (ಮಾರಮ್ಮರವರು) ಆಯಾ ಗ್ರಾಮಕ್ಕೆ ಶಕ್ತಿದೇವತೆಯಾಗಿರುತ್ತಾರೆ. ಶಕ್ತಿದೇವತೆಗಳನ್ನು ಚೌಡೇಶ್ವರಿ, ಭದ್ರಕಾಳಿ, ಮಾರಿಯಮ್ಮ, ಶೂಲದಮ್ಮ, ದೇವಿ, ದುರ್ಗಾ, ಕಾಳಿ, ಸಪ್ತಮಾತೃಕೆಯರು, ಯಕ್ಷ-ಯಕ್ಷಿಯರನ್ನು ಸಹ ಶಕ್ತಿ ದೇವತೆಯ ಗುಂಪಿಗೆ ಸೇರಿಸಲಾಗಿದೆ. ಸಪ್ತಮಾತೃಕೆಯರಲ್ಲಿ ಬ್ರಾಹ್ಮೀ, ಮಹೇಶ್ವರಿ, ವೈಷ್ಣವೀ, ಕೌಮಾರಿ, ಇಂದ್ರಾಣಿ, ವರಾಹಿ ಮತ್ತು ಚಾಮುಂಡಿ ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ಶಕ್ತಿ ದೇವತೆಯ ಹಬ್ಬದಲ್ಲಿಯೂ ಸಹ ಅನೇಕ ರೀತಿಯ ಆಧ್ಯಾತ್ಮಿಕತೆ, ಧಾರ್ಮಿಕತೆಯ, ಆರಾಧನೆ, ದೇವರ ಉತ್ಸವಗಳು, ಜಾತ್ರೆಗಳು ನಡೆಯುತ್ತವೆ.[2]

ಪುರಾಣಗಳಲ್ಲಿ ಮತ್ತು ಇನ್ನಿತರ ಗ್ರಂಥಗಳಲ್ಲಿ ಸಪ್ತಮಾತೃಕೆಯರ ವಿಚಾರಗಳು ಅಲ್ಲದೆ ಸಪ್ತಮಾತೃಕೆಯರ ವರ್ಣನೆಯು ಕೂಡ ಇದೆ. ಬ್ರಾಹ್ಮಿ, ಮಹೇಶ್ವರಿ, ಕೌಮಾರೀ, ವೈಷ್ಣವಿ, ವರಾಹಿ, ಇಂದ್ರಾಣಿ ಮತ್ತು ಚಾಮುಂಡಿ ಇವರೇ ಸಪ್ತಮಾತೃಕೆಯರು ಸಾಮಾನ್ಯವಾಗಿ ಸ್ತ್ರೀದೇವತೆಗಳನ್ನು ಶಕ್ತಿ ದೇವತೆಗಳೆಂದು ಕರೆಯುತ್ತಾರೆ. ಇವರು ಒಂದೊಂದು ದೈವದ ಶಕ್ತಿ ಎಂದು ಕರೆಯುತ್ತಾರೆ. ಸಪ್ತಮಾತೃಕೆಯರ ಶಿಲ್ಪಗಳನ್ನು ದೇವಾಲಯ ನವರಂಗದಲ್ಲಿ ಒಂದು ಭಾಗದ ಪಟ್ಟಿಕೆಗಳಲ್ಲಿ ಇರಿಸಲಾಗಿರುತ್ತದೆ. ಆದರೆ 'ಕೆಲಸೂರಿ'ನಲ್ಲಿ ಒಂದು ದೇವಾಲಯವೇ ಇದೆ. ಕೆಲವು ಕಡೆ ಗಣಪತಿ ಮತ್ತು ಭೈರವನನ್ನು ಅಥವಾ ವೀಣಾಧಾರಿಯಾದ ಶಿವನನ್ನು

ಇರಿಸಲಾಗಿದೆ. ವಾಸ್ತು ವಿದ್ಯಾಗ್ರಂಥದಲ್ಲಿ ಸೂರ್ಯ ಮತ್ತು ಶಕ್ತಿ ದೇವತೆಗಳಗೆ ಈ ದೇವಿಯರು ಶ್ರೀಯೊಡನೆ ನಾಲ್ಕು ದಿಕ್ಕುಗಳು ಬಾಗಿಲು ಕಾಯುವವರಾಗಿದ್ದಾರೆ. ಇವರಲ್ಲಿ ಬ್ರಾಹ್ಮಿ ಮತ್ತು ಮಹೇಶ್ವರಿಯರು ಪಶ್ಚಿಮ ಬಾಗಿಲಲ್ಲೂ ಕೌಮಾರೀ ಮತ್ತು ವೈಷ್ಣವಿಯರು ಉತ್ತರದ ಬಾಗಿಲಲ್ಲೂ ವರಾಹಿ ಮತ್ತು ಇಂದ್ರಾಣಿಯರು ಪೂರ್ವದ ಬಾಗಿಲಲ್ಲೂ ಚಾಮುಂಡಿ ಮತ್ತು ಶ್ರೀಯರು ದಕ್ಷಿಣದ ಬಾಗಿಲಲ್ಲೂ ಇರಬೇಕೆಂದು ತಿಳದುಬರುತ್ತದೆ.

## ಬ್ರಾಹ್ಮಿ

ಬ್ರಾಹ್ಮಿಯು ಹಂಸ ವಾಹನದ ಮೇಲೆ ಇರುತ್ತಾಳೆ. ಈಕೆ ಬ್ರಹ್ಮನ ಶಕ್ತಿದೇವತೆ ಬ್ರಹ್ಮನ ರೀತಿಯಲ್ಲಿ ನಾಲ್ಕು ಮುಖ, ಆರು ಕೈಗಳನ್ನು ಹೊಂದಿರುತ್ತಾಳೆ. ಮೂರು ಬಲ ಕೈಗಳಲ್ಲಿ ವರಮುದ್ರೆ, ಪಾಶ, ಸ್ರುವಸಿದ್ದು, ಮೂರು ಎಡಕೈಗಳಲ್ಲಿ ಅಭಯಮುದ್ರೆ ಪುಸ್ತಕ, ಕಮಂಡಲವನ್ನು ಹಿಡಿದಿರುತ್ತಾಳೆ.[3]

## ಮಹೇಶ್ವರಿ

ಈಕೆ ಮಹೇಶ್ವರಿ ಶಕ್ತಿದೇವತೆ ಇವಳ ವಾಹನ ವೃಷಭ, ಇವಳು ಐದು ಮುಖ ಮೂರು ಕಣ್ಣು ಹಾಗೂ ಹತ್ತು ಕೈಗಳನ್ನು ಹೊಂದಿದ್ದು, ಬಾಲಚಂದ್ರ ಭೂಳಗಣಗಳಾಗಿದ್ದಾಳೆ, ಐದು ಬಲಕೈಗಳಲ್ಲಿ ಅಭಯಮುದ್ರೆ, ಕೊಡಲಿ, ಶೂಲ, ವಜ್ರ, ಖಡ್ಗವನ್ನು ಐದು ಎಡಕೈಗಳಲ್ಲಿ ವರಮುದ್ರೆ, ಅಂಕುಶ, ನಾಗ, ಘಂಟೆ ಮತ್ತು ಪಾಶವನ್ನು ಹಿಡಿದಿದ್ದಾಳೆ.

## ಕೌಮಾರಿ

ಕೌಮಾರಿಯು ಸಾಮಾನ್ಯವಾಗಿ ಆರು ತಲೆ ಹಾಗೂ ಹನ್ನೆರಡು ಕೈಗಳನ್ನು ಹೊಂದಿರುತ್ತಾಳೆ. ಆರು ಬಲಕೈಗಳಲ್ಲಿ ವರಮುದ್ರೆ, ಶಕ್ತಿ, ಪತಾಕೆ, ದಂಡ, ಪಾತ್ರೆ, ಬಾಣವನ್ನು ಆರು ಎಡಕೈಗಳಲ್ಲಿ, ಅಭಯಮುದ್ರೆ, ಕೊಡಲಿ ಕುಕ್ಕುಟ, ಕಮಲ, ಬಿಲ್ಲು ಮತ್ತು ಗಂಟೆಯನ್ನು ಹೊಂದಿರುತ್ತಾಳೆ. ಇವಳ ವಾಹನ ನವಿಲು ಈಕೆ ಕುಮಾರನ ಶಕ್ತಿದೇವತೆ.

## ವೈಷ್ಣವಿ

ವೈಷ್ಣವಿಯು ಆರು ಕೈಗಳನ್ನು ಹೊಂದಿದ್ದು, ಎಡಕೈಗಳಲ್ಲಿ ಚಕ್ರ, ಶಂಖವನ್ನು ಕೆಲವು ಸಂದರ್ಭಗಳಲ್ಲಿ ವಿಶೇಷವಾಗಿ ವರ್ಣಮಾಲೆಯನ್ನು ಹೊಂದಿರುತ್ತಾಳೆ. ಬಲಕೈಗಳಲ್ಲಿ ವರಮುದ್ರೆ,

ಗದ, ಪದ್ಮವಿದ್ದು, ಎಡಕೈಗಳಲ್ಲಿ ಅಭಯಮುದ್ರೆ, ಚಕ್ರ ಮತ್ತು ಶಂಖವನ್ನು ಹೊಂದಿರುತ್ತಾಳೆ. ಈಕೆಯ ವಾಹನ ಗರುಡ, ಈಕೆ ವಿಷ್ಣುವಿನ ಶಕ್ತಿದೇವತೆಯಾಗಿದ್ದಾಳೆ.

**ವರಾಹಿ**

ವರಾಹಿಯು ವರಾಹದ ಮುಖವನ್ನು ಹೊಂದಿದ್ದಾಳೆ. ದೊಡ್ಡದಾದ ಹೊಟ್ಟೆಯನ್ನು ಹೊಂದಿದ್ದಾಳೆ. ಈಕೆಯು ಆರು ಕೈಗಳನ್ನು ಹೊಂದಿದ್ದು, ಬಲಕೈಗಳಲ್ಲಿ ವರದಹಸ್ತ, ಖಡ್ಗ, ದಂಡವಿದ್ದು, ಎಡಕೈಗಳಲ್ಲಿ ಅಭಯಮುದ್ರೆ, ಖೇಟಕ ಮತ್ತು ಪಾತ್ರೆಯನ್ನು ಹೊಂದಿದ್ದಾಳೆ ಹಾಗೂ ಇವಳ ವಾಹನ ಗರುಡ. ಈಕೆ ವರಾಹದ ಶಕ್ತಿದೇವತೆ.

**ಇಂದ್ರಾಣಿ**

ಇಂದ್ರಾಣಿಯು ಇಂದ್ರನ ರೀತಿಯಲ್ಲಿ ಸಾವಿರ ಕಣ್ಣುಗಳನ್ನು ಹೊಂದಿರುತ್ತಾಳೆ. ಆರು ಕೈಗಳನ್ನು ಹೊಂದಿದ್ದು, ಬಲಕೈಗಳಲ್ಲಿ ವರಮುದ್ರೆ, ಸೂತ್ರ, ವಜ್ರ ಎಡಕೈಗಳಲ್ಲಿ ಅಭಯಮುದ್ರೆ, ಪಾತ್ರೆ ಮತ್ತು ಪದ್ಮವನ್ನು ಹೊಂದಿರುತ್ತಾಳೆ. ಇವಳ ವಾಹನ ಆನೆ, ಈಕೆ ಇಂದ್ರನ ಶಕ್ತಿದೇವತೆ, ಈಕೆಯು ಸಹ ಸುಪ್ತಮಾತೃಕೆಯರಲ್ಲಿ ಪ್ರಮುಖವಾದ ದೇವತೆಯಾಗಿದ್ದಾಳೆ.

**ಚಾಮುಂಡಿ**

ಚಾಮುಂಡಿ ಕಪ್ಪನೆಯ ಶರೀರ ಕಾಂತಿಯ ಉಗ್ರದೇವತೆಯಾಗಿದ್ದು, ಈಕೆಯು ಸರ್ಪಗಳನ್ನು ಭೂಷಣವಾಗಿ ಪಡೆದು ಕೋರೆಹಲ್ಲುಗಳಿಂದಲೂ, ದೊಡ್ಡದಾದ, ಶರೀರದಿಂದಲೂ ಕೂಡಿದವಳಾಗಿ ಕಾಮರೂಪಿಣಿಯಾಗಿ ಕೊರಳಿಗೆ ರುಂಡಮಾಲೆಯನ್ನು ಧರಿಸಿರುತ್ತಾಳೆ. ಇವಳನ್ನು ಹಲವು ಕಡೆ ದುರ್ಗಿ ಎಂದು ಕರೆಯುವುದುಂಟು. ಈಕೆಯು ಹತ್ತು ಕೈಗಳನ್ನು ಹೊಂದಿದ್ದು, ಬಲಕೈಗಳಲ್ಲಿ ಖೇಟ, ಪಾಶ, ದಂಡ, ಕೊಡಲಿ ಮತ್ತು ಬಿಲ್ಲುಗಳನ್ನು ಹೊಂದಿರುತ್ತಾಳೆ. ಇವಳ ವಾಹನ ಸಿಂಹ, ಈಕೆ ಯಮನ ಶಕ್ತಿದೇವತೆಯಾಗಿದ್ದಾಳೆ. ಚಾಮುಂಡಿಯನ್ನು ಬಿಟ್ಟು ಉಳಿದವರಿಗೆ ಎಷ್ಟು ಕೈಗಳಿರಬೇಕೆಂಬ ಬಗೆಗೆ ನಿಯಮವಿಲ್ಲ. ಚಾಮುಂಡಿಗೆ 8 ರಿಂದ 10 ಕೈಗಳನ್ನು ಉಳಿದವರಿಗೆ 2 ರಿಂದ 6 ಕೈಗಳನ್ನು ಕೆತ್ತಲಾಗಿದೆ. ಆಯುಧಗಳ ಸಂಖ್ಯೆಯ ವಿಚಾರದಲ್ಲೂ ಇದೇ ರೀತಿಯಿರುತ್ತದೆ. ಮೇಲೆ ತಿಳಿಸಿದಂತೆ ಎಲ್ಲಾ ದೇವತೆಗಳು ವಿಶಿಷ್ಠ ಲಕ್ಷಣಗಳನ್ನು ಹೊಂದಿದ್ದರೂ, ಕೂಡ ಎಲ್ಲಾ ಶಿಲ್ಪಗಳನ್ನು ಶಕ್ತಿದೇವತೆಗಳೆಂದು ಕರೆಯುವ ವಾಡಿಕೆ ಇದೆ. (ಚಿತ್ರಸಂಖ್ಯೆ-109)

**ಪಾರ್ವತಿ**

ಪಾರ್ವತಿಯು ವಿಘಟನೆಯ ಹಾಗೂ ಸರ್ವನಾಶದ ದೇವರಾದ ಶಿವರಾದ ಪತ್ನಿ ಹಾಗೂ ಶಕ್ತಿ ದೇವತೆಯಾಗಿದ್ದಾಳೆ. ಹಿಂದೂ ಧರ್ಮದಲ್ಲಿರುವ ದೈವೀ ಪ್ರಕಾರಗಳಲ್ಲಿ ಅಚ್ಚರಿಯೆನಿಸುವಷ್ಟು ಅಧಿಕ ಸಂಖ್ಯೆಯಲ್ಲಿ ಪಾರ್ವತಿಯ ಅಂಶಗಳು ಕಾಣಬರುತ್ತವೆ. ವಿವಿಧ ಮುಖಗಳು ಅವಳು ಪೂಜೆಗೊಳ್ಳುವ, ಆರಾಧಿಸಲ್ಪಡುವ ಹೆಸರುಗಳು ಹೇಳ ಮುಗಿಸಲಾರದಷ್ಟು ಅಧಿಕಾರವಾಗಿರುವುದು, ಪಾರ್ವತಿ, ಹೈಮವತೀ, ಗಿರಿಜಾ, ದಾಕ್ಷಾಯಿಣಿ ಇತ್ಯಾದಿ ಹೆಸರುಗಳು ಹಿಮಾಲಯದ ಪಾರ್ವತಿಯ ಮೂಲವನ್ನು ತಿಳಿಸುತ್ತದೆ. ಅಲ್ಲದೆ ಮೃದಾನೀ, ರುದ್ರಾಣಿ, ಶರ್ವಾಣಿ ಇನ್ನೂ ಮೊದಲಾದ ಹೆಸರುಗಳಿಂದ ಕರೆಯುವ ವಾಡಿಕೆ ಇದೆ.

**ದುರ್ಗಾ**

ಬಹುಶಃ ದುರ್ಗಾ ಅತ್ಯಂತ ಹೆಚ್ಚು ಪೂಜಿಸಲ್ಪಡುವ ಶಕ್ತಿಯ ರೂಪ. ದೈವೀ ಭಾಗವತವೆಂಬ ಒಂದು ಇಡಿಯ ಪುರಾಣವೇ ಅವಳಿಗಾಗಿ ಮುಡಿದಾಗಿದೆ. ಜನರಿಗೆ ಹೆಚ್ಚು ಪರಿಚಿತವಾಗಿರುವ ದೈವೀ ಮಹಾತ್ಮವೆಂಬ ಇನ್ನೊಂದು ಕೃತಿಯಲ್ಲಿ ದುರ್ಗೆಯ ವಿಚಾರ ತಿಳಿದುಬರುತ್ತದೆ. ದುರ್ಗಾಸಪ್ತಶತೀ ಅಥವಾ ಚಂಡೀ ಎಂದು ಹೆಸರು ಜನರಿಗೆ ಇದರ ಮೇಲೆ ಅದೆಷ್ಟು ಭಕ್ತಿ ಎಂದರೆ ಇದರ ಒಂದೊಂದು ಶ್ಲೋಕವನ್ನು ದೇವಿಯ ಮೇಲಿನ ಒಂದು ಮಂತ್ರವೆಂದು ಭಾವಿಸುವರು. ಈಕೆಯನ್ನು ಚಾಮುಂಡಿ ಎಂದು ಸಹ ಕರೆಯುತ್ತಾರೆ.

**ಮಹಿಷಾಮರ್ದಿನಿ**

ಮಹಿಷಾಸುರನೆಂಬ ರಾಕ್ಷಸನೆಂಬ ರಾಕ್ಷಸ ದೇವತೆಗಳನ್ನು ಕಾಡುತ್ತಿದ್ದಾಗ ಅವರೆಲ್ಲರ ಶಕ್ತಿಗಳನ್ನು ಒಗ್ಗೂಡಿಸಿದ ಫಲವಾಗಿ ರೂಪುಗೊಂಡವಳು. ಮಹಿಷಾಸುರನ ದುಷ್ಕೃತ್ಯಗಳಿಂದ ಕೆರಳಿದ ವಿಷ್ಣು, ಶಿವ, ಬ್ರಹ್ಮರ ಹಾಗೂ ಇನ್ನುಳಿದ ದೇವತೆಗಳ ಕೋಪದ ಫಲವಾಗಿ ದೇವಿಯು ಹುಟ್ಟಿದಳು.

**ಚೌಡೇಶ್ವರಿ ದೇವಾಲಯ–ಕೆಲಸೂರು**

ಗುಂಡ್ಲುಪೇಟೆ ತಾಲ್ಲೂಕಿನ ಕೆಲಸೂರು ಒಂದು ಪ್ರಾಚೀನ ಕಾಲದ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಅನೇಕ ಪ್ರಾಚೀನ ಅವಶೇಷಗಳಿವೆ.

ಇಲ್ಲಿಯ ಚೌಡೇಶ್ವರಿ ದೇವಾಲಯವಿದೆ. ಈ ದೇವಾಲಯ ಮಲ್ಲೇಶ್ವರ ದೇವಾಲಯಕ್ಕೆ ಸೇರಿಕೊಂಡಂತಿದೆ. ಇಲ್ಲಿ ಬ್ರಾಹ್ಮೀ, ಮಾಹೇಶ್ವರಿ ಇನ್ನೂ ಮೊದಲಾದ ಸಪ್ತಮಾತೃಕೆಯರ ಶಿಲ್ಪಗಳಿವೆ. ಇಲ್ಲಿರುವ ಚಾಮುಂಡೇಶ್ವರಿಯ ಎದುರಿಗೆ ಉತ್ತರಕ್ಕೆ ಮುಖ ಮಾಡಿದ ಪ್ರವೇಶದ್ವಾರ ಇದೆ. ಚಾಮುಂಡೇಶ್ವರಿ ಶಿಲ್ಪಕ್ಕೆ ಅಗ್ರಪೂಜೆ ಸಲ್ಲುತ್ತಿದೆ. ಈ ಶಿಲ್ಪ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಶಿಲ್ಪದ ಲಕ್ಷಣವನ್ನು ಹೊಂದಿದೆ. ಚೌಕಾಕಾರದ ಉದ್ದವಾದ ಮಂಚದಂತಹ ಪೀಠದ ಮೇಲೆ ಸಾಲಾಗಿ ಇರುವ ಶಿಲ್ಪಗಳು ಬಲಗಾಲನ್ನು ಮಡಚಿ, ಎಡಗಾಲನ್ನು ಇಳಿಬಿಟ್ಟು ಕುಳಿತಿರುವ ಮಾದರಿಯಲ್ಲಿ ಕೆತ್ತಲಾಗಿದೆ.[5] ಚತುರ್ಭುಜವನ್ನು ಹೊಂದಿದೆ. ಇಲ್ಲಿ ಸೂರ್ಯಶಿಲ್ಪ, ಗಣಪತಿ ಶಿಲ್ಪ ಸಹ ಇದೆ. ಅಲ್ಲದೆ ಎಲ್ಲೆಡೆ ಆರಂಭದಲ್ಲಿ ಕಾಣಬರುವ ವೀಣಾಧರ ಶಿವನ ಶಿಲ್ಪವು ಈ ದೇವಾಲಯದಲ್ಲಿ ಕಾಣುತ್ತಿಲ್ಲ. ಈ ದೇವಾಲಯದ ಬಾಗಿಲುವಾಡವು ಸುಂದರವಾದ ಕೆತ್ತನೆಯಿಂದ ಕೂಡಿದೆ ಹಾಗೂ ಬಳ್ಳಿ ಸುರುಳಿ ಕೆತ್ತನೆಯಿಂದ ಆವೃತವಾಗಿದೆ. ದ್ವಾರದ ಇಕ್ಕೆಲದ ಕೆಳಭಾಗದಲ್ಲಿ ಬಿಡಿಸಲಾಗಿರುವ ದ್ವಾರಪಾಲಕರು ವಿಸ್ಮಯ ಹಸ್ತವುಳ್ಳವರಾಗಿರುತ್ತಾರೆ. ಚೌಡೇಶ್ವರಿ ದೇವಾಲಯ ಉತ್ತರಾಭಿಮುಖವಾಗಿದೆ. ಅದಕ್ಕೆ ಹೊಂದಿಕೊಂಡಿರುವ ಮಲ್ಲೇಶ್ವರ ದೇವಾಲಯ ಪೂರ್ವಾಭಿಮುಖವಾಗಿದೆ. ಆದರೆ ಇವೆರಡು ದೇವಾಲಯಗಳು ಒಂದಕ್ಕೊಂದು ಸೇರಿಕೊಂಡಿರುವುದು ಒಂದು ವಿಶೇಷತೆಯನ್ನು ವ್ಯಕ್ತಪಡಿಸುತ್ತದೆ.[6]

ಚೌಡೇಶ್ವರಿ ಮತ್ತು ಮಲ್ಲೇಶ್ವರ ದೇವಾಲಯದ ಮುಂದೆ ದುಃಸ್ಥಿತಿಯಲ್ಲಿ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಕಂಬ ಇದೆ. ಆದಕಾರಣ ಚೌಡೇಶ್ವರಿ ದೇವಾಲಯ ಮತ್ತು ಮಲ್ಲೇಶ್ವರ ದೇವಾಲಯ ತಲಕಾಡಿನ ಗಂಗರ ಕಾಲಕ್ಕೆ ನಿರ್ಮಾಣಗೊಂಡಿರಬೇಕು. ಕಾಲಾನಂತರ ಹಲವಾರು ಬಾರಿ ಜೀರ್ಣೋದ್ಧಾರವಾಗಿ ಪ್ರಸ್ತುತ ಮೇಲೆ ತಿಳಿಸಲಾಗಿರುವ ವಾಸ್ತು ಮಾದರಿಯಲ್ಲಿದೆ.[7] (ಚಿತ್ರಸಂಖ್ಯೆ-110)

ಗ್ರಾಮದ ಒಳಗೆ ಮಾರಮ್ಮ ದೇವಾಲಯ ಇದೆ. ಆದರೆ ಮಾರಮ್ಮನ ತಲೆಯ ನಾಶವಾಗಿದೆ. ಮಾರಮ್ಮನ ದೇವಾಲಯವು ಸಹ ನಾಶವಾಗಿದ್ದು, ಅಲ್ಲಿರುವ ಅವಶೇಷಗಳಿಂದ ಹಾಗೂ ಗ್ರಾಮದವರ ಮಾಹಿತಿ ಮೇರೆಗೆ ಇದು ಮಾರಮ್ಮನ ದೇವಾಲಯವೆಂದು ಕರೆಯುವ ವಾಡಿಕೆ ಇದೆ. ಇಲ್ಲಿಯು ಸಹ ಗಂಗರ ಕಾಲಕ್ಕೆ ಸೇರಿದ ದುಃಸ್ಥಿತಿಯಲ್ಲಿರುವ ಕಂಬ ಇದೆ.

## ಗದ್ದೆಮಾರಮ್ಮ ಮತ್ತು ಚೌಡೇಶ್ವರಿ ದೇವಾಲಯ-ಕೆಲಸೂರು

ಕೆಲಸೂರಿನಲ್ಲಿ ಗ್ರಾಮದಿಂದ ಹೊರಗೆ ಪೂರ್ವ ದಿಕ್ಕಿಗೆ ಒಂದು ಪ್ರಾಚೀನ ದೇವಾಲಯ ಇದೆ. ಇದನ್ನು ನೋಡಿದರೆ ವಿಜಯನಗರ ಅಥವಾ ಮೈಸೂರು ಒಡೆಯರ್ ಕಾಲಕ್ಕೆ

ನಿರ್ಮಾಣವಾದ ದೇವಾಲಯವೆಂದು ಕರೆಯಬಹುದಾಗಿದೆ. ಈ ದೇವಾಲಯ ಪೂರ್ವಾಭಿಮುಖವಾಗಿದೆ. ಈ ದೇವಾಲಯದಲ್ಲಿ ಎರಡು ಮಹಿಷಮರ್ದಿನಿ ಶಿಲ್ಪ, ಬ್ರಹ್ಮಿಣಿ ಶಿಲ್ಪ, ಅಲ್ಲದೆ ಸಪ್ತಮಾತೃಕೆಯರ ಶಿಲ್ಪಗಳಿವೆ. ಒಂದು ಗಣಪತಿ ಶಿಲ್ಪ ಸಹ ಇದೆ. ಆದಕಾರಣ ಮಾರಮ್ಮನ ದೇವಾಲಯವೆಂದೂ ಅಲ್ಲದೆ ಗದ್ದೆಯಲ್ಲಿರುವುದರಿಂದ ಗದ್ದೆಮಾರಮ್ಮನ ದೇವಾಲಯವೆಂದು ಕರೆಯುತ್ತಾರೆ.

ಕೆಲಸೂರನ್ನು ಶಾಸನವೊಂದರಲ್ಲಿ 'ಕೆಲ್ಲಿ ಪೂಸೂರ್' ಎಂದು ಕರೆಯಲಾಗಿದೆ. ಅಲ್ಲದೆ ಹಿಂದೆ 'ಉದ್ಯೋಗಪುರ' ಎಂದು ಕರೆಯುತ್ತಿದ್ದರು. ಕೆಲಸೂರಿನ ಚೌಡೇಶ್ವರಿ ದೇವಿಯು ಸಪ್ತಮಾತೃಕೆಯರಲ್ಲಿ ಒಬ್ಬಳಾಗಿದ್ದಾಳೆ. ಸಪ್ತಮಾತೃಕೆಯರಾದ ಸರ್ವಭೂಷಣಿಯಾಗಿದ್ದಾಳೆ. ಸಣ್ಣದಾದ ಹೊಟ್ಟೆ, ದೊಡ್ಡಶರೀರ, ಕೋರೆಹಲ್ಲು, ಕಾಮರೂಪಿಣಿಯಾಗಿ ಎಂಟು ಅಥವಾ ಹತ್ತು ಕೈಗಳನ್ನು ಹೊಂದಿದ್ದಾಳೆ. ಬಲಗೈಯಲ್ಲಿ ಒನಕೆ, ಖಡ್ಗ, ಚಕ್ರ ಮತ್ತು ಚಾಮರಗಳನ್ನು ಹಿಡಿದಿದ್ದಾಳೆ.

ಕೆಲಸೂರಿನಲ್ಲಿ 'ಚೌಡೇಶ್ವರಿಯ ಅಮ್ಮರವರ ಜಾತ್ರೆ' ಮೂರು ವರ್ಷಕ್ಕೆ ಒಂದು ಬಾರಿ ನಡೆಯುತ್ತದೆ. ಅದು ಶಿವರಾತ್ರಿಯ ಹಬ್ಬವಾದ ಸುಮಾರು ಹದಿನೈದು ದಿನದಂದು ನಡೆಯುತ್ತದೆ. ಫಾಲ್ಗುಣ ಮಾಸದಲ್ಲಿ ನಡೆಯುತ್ತದೆ. ಈ ಹಬ್ಬಕ್ಕೆ 'ಸಾಲುಮರಿ ಹಬ್ಬ' ಎಂದು ಕರೆಯುತ್ತಾರೆ. ಏಕೆಂದರೆ ಸಾಲಾಗಿ ೩೦ ಮರಿಗಳನ್ನು ನಿಲ್ಲಿಸಿ, ದೇವತೆಗೆ ಬಲಿಕೊಡುವ ಸಂಪ್ರದಾಯ ಇದೆ. ಈ ಹಬ್ಬವಾದರೆ, ಚೌಡೇಶ್ವರಿ ಜಾತ್ರೆ ನಡೆಯುತ್ತದೆ. ಈ ಜಾತ್ರೆ ಸುಮಾರು ಒಂದು ವಾರ ಕಾಲ ನಡೆಯುತ್ತದೆ. ಇದೊಂದು ಸಾಂಸ್ಕೃತಿಕ ಕ್ಷೇತ್ರಕ್ಕೆ ಪೂರಕವಾದ ಹಬ್ಬವಾಗಿರುತ್ತದೆ. ಈ ಹಬ್ಬಕ್ಕೆ ಪ್ರತಿಯೊಂದು ಜಾತಿಯವರು ತಮ್ಮದೇ ಆದ ಕೆಲಸ ಕಾರ್ಯದಲ್ಲಿ ತೊಡಗಿರುವುದು ಒಂದು ವಿಶೇಷತೆಯೇ ಆಗಿದೆ. (ಚಿತ್ರಸಂಖ್ಯೆ-111)

ಮೊದಲಿಗೆ ಕೆಲಸೂರುಪುರ ಹತ್ತಿರವಿರುವ ಮಳೆಯಮ್ಮನ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸುವುದು. ನಂತರ ಹಳೇಹುಂಡಿ, ಬಾಡುಹುಂಡಿ, ಬೇವಿನ ಮರದಹುಂಡಿ, ಮತ್ತು ಸಂಗೇಗೌಡನಹುಂಡಿಯ ಜನರು ನಾಲ್ಕು ಬಿದಿರು ಬೊಂಬುಗಳನ್ನು ತರಿದು ತರುವ ಸಂಪ್ರದಾಯ ಇದೆ. ತಳವಾರಿಯು ಕುರಿಯ ಕುತ್ತಿಗೆಯನ್ನು ಕೊಯ್ದು ಬೀದಿಗಳಲ್ಲಿ ರಕ್ತಸಮೇತ ಎಳೆಯುತ್ತಾನೆ. ದೇವರಮನೆಯಲ್ಲಿ ಆರು ಗೊಂಬೆಗಳನ್ನಿಟ್ಟು, ಅಕ್ಕಿಯನ್ನು ಪೂಜಿಸುವ ವಾಡಿಕೆ.

ವಿಶ್ವಕರ್ಮ ಜನಾಂಗದವರು ಮುಖವಾಡ ಧರಿಸಿಕೊಂಡು ಊಲವ್ವನ ದೇವಾಲಯವನ್ನು ಪ್ರದಕ್ಷಿಣೆ ಮಾಡುತ್ತಾನೆ. ಉಪ್ಪಾರಶೆಟ್ಟರು, ಆದಿಕರ್ನಾಟಕದವರು ದಲಿತರು (ಹರಿಜನರು) ಊಲವ್ವನ ದೇವಾಲಯದಲ್ಲಿ ಮಡೆ ಹುಯ್ಯುತ್ತಾರೆ. ನಾಗನಾಯಕನ ಮನೆತನಕ್ಕೆ

ಸೇರಿದವರು, ತಂಪಿನ ಪೂಜೆ ನಡೆಸುತ್ತಾರೆ. ಆದಿಕರ್ನಾಟಕದವರು ಮೂರು ಜನ ತೆರಕಣಾಂಬಿಗೆ ಹೋಗಿ ಕುಂಬಾರ ಹತ್ತಿರ ಮಡಿಕೆ, ಕುಡಿಕೆ, ಗುಂಬಗಳನ್ನು ತರುವ ಪರಂಪರೆ ಇದೆ. ಕೆಲವರು ಚೌಡೇಶ್ವರಿ ದೇವಾಲಯವನ್ನು ಸುಣ್ಣಬಣ್ಣದಿಂದ ತಳಿರು ತೋರಣ, ಹೂವಿನ ಅಲಂಕಾರ ಮಾಡುತ್ತಾರೆ. ತಂಪಿನ ಪೂಜೆಯನ್ನು ಚೌಡೇಶ್ವರಿ ದೇವಿಗೆ ಅರ್ಪಿಸುತ್ತಾರೆ. ಅನಂತರ ಅರ್ಚಕರು, ಗಾಣಿಗ, ಕೇಲಗ, ಕೋಳವಾಡರು (ಶೆಟ್ಟರು) ಈ ಐದು ಜನರು ಸೇರಿಕೊಂಡು ದೇವಾಲಯದಲ್ಲಿ ಪೂಜೆಯನ್ನು ಮಾಡಿ ಮರಿಯನ್ನು ದೇವರಿಗೆ ಒಪ್ಪಿಸುತ್ತಾರೆ. ಅಂದು ಹೆಬ್ಬರದವರು ಐದು ಜನರು, ಆದಿಕರ್ನಾಟಕದವರು ಒಬ್ಬರು, ಗಾಣಿಗೆ ಶೆಟ್ಟಿ ಒಬ್ಬರು, ವಿಶ್ವಕರ್ಮ ಜನಾಂಗದವರು ಒಬ್ಬರು ಅಂದು ಉಪವಾಸ ಇರಲೇಬೇಕು. ಇದು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ನಂತರ ದಿನದಂದು ಹಾಲರವೆಯನ್ನು ಹೊತ್ತ ಹೆಂಗಳೆಯರು ವಾದ್ಯ, ಸತ್ತಿಗೆ, ಸುರಪಾಣಿ ಜೊತೆಯಲ್ಲಿ ದೇವರನ್ನು ಬಿಜ್ಜ ಮಾಡಿಕೊಂಡು ಚೌಡೇಶ್ವರಿ ದೇವಾಲಯಕ್ಕೆ ಹೋಗಿ ಅಲ್ಲಿ ಹಾಲರವಿಯನ್ನು ಇಡುತ್ತಾರೆ. ದೇವರಿಗೆ ಒಡವೆ ಧರಿಸುವುದು, ದೇವರ ವಿಗ್ರಹವನ್ನು ವಾದ್ಯ ಸಮೇತ ಊರಿಗೆ ಬಂದು ಮೆರವಣಿಗೆ ಮಾಡುವುದು ತಿಳಿದುಬರುತ್ತದೆ. ಹೀಗೆ ಸೊಮವಾರದಿಂದ ಶುಕ್ರವಾರದವರೆಗೆ ಚೌಡೇಶ್ವರಿ ಜಾತ್ರೆ ಕೆಲಸೂರು ಗ್ರಾಮದಲ್ಲಿ ನಡೆಯುವ ಸಂಪ್ರದಾಯವಿದೆ. ಇದೊಂದು ಸಾಂಸ್ಕೃತಿಕ ಹಿನ್ನೆಲೆಯಿಂದ ಹಾಗೂ ಸಾಮಾಜಿಕ ಜೀವನದ ಎಲ್ಲಾ ಬಗೆಯ ಆಯಾಮವನ್ನು ತಿಳಿಸುವುದರಲ್ಲಿ ಕೆಲಸೂರಿನ ಚೌಡೇಶ್ವರಿ ಜಾತ್ರೆ ಹೆಸರುವಾಸಿಯಾಗಿದೆ.[8]

### ಮಾರಮ್ಮನ ಜಾತ್ರೆ – ಪಡಗೂರು

ಶಕ್ತಿ ಪ್ರಧಾನವಾದ ದೇವತೆಗಳಲ್ಲಿ ಪಡಗೂರಿನ ಮಾರಮ್ಮನ ಜಾತ್ರೆಯು ಸಹ ಒಂದಾಗಿದೆ. ದೈವಿಕ ಸ್ವರೂಪಳಾದ ಗ್ರಾಮ ದೇವತೆಯಾದ ಶೂಲದ ಮಾರಮ್ಮಳನ್ನು ಪಡಗೂರು, ಅಂದರೆ ಪ್ರತಿಯೊಂದು ಜನಾಂಗವು ಸೇರಿ ಆಚರಿಸುವ ಹಬ್ಬವೇ ಪಡಗೂರು ಶೂಲದ ಮಾರಮ್ಮನ ಹಬ್ಬ, ಈ ಗ್ರಾಮದಲ್ಲಿ ಈ ಹಬ್ಬದ ಸಂದರ್ಭದಲ್ಲಿ ಪ್ರತಿಯೊಂದು ಜಾತಿ ಜನರೂ ಒಂದೊಂದು ಕೆಲಸದಲ್ಲಿ ಬಾಗಿಯಾಗಲೇಬೇಕು. ಅಂದು ದೇವರ ಭಕ್ತಿಯೊಂದಿಗೆ ಅನೇಕ ರೀತಿಯ ಮನರಂಜನೆ ಕಾರ್ಯಕ್ರಮಗಳು ಇರುತ್ತದೆ. ಕಡ್ಡಿವರಸೆ, ದೊಣ್ಣೆವರಸೆ, ವೀರಮಕ್ಕಳ ಕುಣಿತ ನಡೆಯುತ್ತದೆ. ಶೂಲದ ಮಾರಮ್ಮ ಎಂಬ ನಾಮಕರಣವಾಗಬೇಕಾದರೆ, ಪಡಗೂರಿನವರು ಜಾತ್ರೆಯ ಸಮಯದಲ್ಲಿ ಬಾಳೆಕಂಬ ತರುವುದಕ್ಕೆ ನೆರೆಯ ಗ್ರಾಮದ ನಲ್ಲೂರಿಗೆ ಹೋಗುತ್ತಾರೆ. ಪಡಗೂರಿನವರಿಗೆ ನಲ್ಲೂರು ತೋಟದ ಯಜಮಾನ ಇಬ್ಬರಿಗೂ ಕತ್ತುಕೊಯ್ದು ಇನ್ನೊಬ್ಬರಿಗೆ ಅಡಿಕೆ ದಸಿ ಚುಚ್ಚಿ ಪ್ರಾಣ ತೆಗೆದಿದ್ದ, ಇದನ್ನು ತಿಳಿದ ಪಡಗೂರಿನವರು ಊರಿನ

ಮಾರಮ್ಮ ಅಲ್ಲದೆ ಅಕ್ಕಪಕ್ಕದ ಮಾರಿದೇವತೆಗಳಾದ ದಂಡಿನ ಮಾರಿ, ಪರಮಾಪುರದ ಮಾರಿ, ಮಠದ ಮಾರಿ, ಕೊತ್ತಲಮಾರಿ, ಮಾರಿಗುಡಿ ಮುಂದೆ ಕೋಳಿ–ಮರಿ, ಕುರಿ ಮುಂತಾದವನ್ನು ಒಳಗೊಂಡ ಹಾಗೂ ಊರಿನ ಎಲ್ಲಾ ಜನಾಂಗದವರೊಂದಿಗೆ ಕುದುರೆ ಮೇಲೆ ಕುಳಿತು ದಂಡೆತ್ತಿ ಹೋಗಿ ನಲ್ಲೂರು ಹಾಳು ಮಾಡಿ ಆ ಗ್ರಾಮದ ಮಾರಿಯ ರುಂಡಮುಂಡೆಗಳನ್ನು ಬೇರೆ ಬೇರೆ ಮಾಡಿ, ಆ ತೋಟದಲ್ಲಿ ಕೊಂದಿದ್ದ, ಪಡಗೂರು ಉಪಾರರಿಗೆ, ಆದಿಕರ್ನಾಟಕದವರಿಗೆ ಜೀವಕಳೆಯನ್ನು ನೀಡಿ ಗ್ರಾಮಕ್ಕೆ ಕರೆದುಕೊಂಡು ಬರುತ್ತಾರೆ. ಇದರ ಸಂಕೇತವಾಗಿಯೇ ಪಡಗೂರಿನಲ್ಲಿ ಶೂಲಕ್ಕೆ ಬೀಳುವ ಪದ್ಧತಿ ಇದೆ. ಇದನ್ನೇ ಶೂಲ ಮಾರಮ್ಮನ ಹಬ್ಬ ಅಥವಾ ಜಾತ್ರೆಯಾಗಿ ನಡೆಸುವ ಪರಂಪರೆ ಇದೆ. ಪಡಗೂರು ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ತನ್ನದೇ ಆದ ಇತಿಹಾಸವನ್ನು ಹೊಂದಿರುವ ಗ್ರಾಮ. ಈ ಗ್ರಾಮದಲ್ಲಿ ಅಡವಿ ಮಠವಿದೆ. ಪಡುಗೂರಿನಲ್ಲಿ ನಡೆಯುವ ಪ್ರಮುಖ ಹಬ್ಬಗಳಲ್ಲಿ ಶೂಲದ ಮಾರಮ್ಮನ ಜಾತ್ರೆಯು ಒಂದು, ಮೇಲೆ ತಿಳಿಸಿರುವಂತೆ ಇದು ಶೂಲಕ್ಕೆ ಹಾಸುವ ಹಬ್ಬವಾಗಿದೆ. ಈ ಹಬ್ಬ ಸರಿಸುಮಾರು ೮ ರಿಂದ ೯ ದಿನಗಳವರೆಗೆ ನಡೆಯುವಂತಹ ಹಬ್ಬವಾಗಿದೆ. ಈ ಊರಿನ ಪ್ರತಿ ಜಾತಿ ಜನಾಂಗವು ಪೂಜೆ ಪುನಸ್ಕಾರದಲ್ಲಿ ಭಾಗಿಯಾಗುವ ಪದ್ಧತಿ ಇದೆ. ಈ ಹಬ್ಬ ಈ ಮೊದಲಿಗೆ ಮಂಗಳವಾರದಂದು ಪ್ರಾರಂಭವಾಗುತ್ತದೆ. ಮೊದಲನೆಯ ದಿನವೇ ಮಾರಿಯನ್ನು ಅಡವಿ ಮಠದ ಮುಂಭಾಗದಲ್ಲಿರುವ ದಂಡಿನ ಮಾರಿ ದೇವಾಲಯದಿಂದ ದೇವರನ್ನು ತರುವ ಸಂಪ್ರದಾಯ ಇದೆ.

ಪಡುಗೂರಿನಿಂದ (ತಮ್ಮಡಪ್ಪ) ಶಿವಾರ್ಚಕರು ಪರಮಾಪುರಕ್ಕೆ ಹೋಗಿ ಅಲ್ಲಿಂದ ದೇವರನ್ನು ತರುವುದು. ಈ ಹಬ್ಬ ಪಡಗೂರು ಮತ್ತು ಪರಮಾಪುರ ಇವೆರಡು ದತ್ತು ಗ್ರಾಮಗಳೆಂದು ಹಿರಿಯರ ಅಭಿಪ್ರಾಯ. ಆದಕಾರಣ ಅಂದಿನ ಪರಂಪರೆಯನ್ನು ಚಾಚುತಪ್ಪದೇ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಜಾತ್ರೆ ಸಮಯದಲ್ಲಿ ಸತ್ತಿಗೆ ಸುರಪಾನಿ, ಡೋಲು, ವಾದ್ಯಗಳ ಮೂಲಕ ಪರಮಾಪುರದ ಮಂಟಪದ ಸಹಿತ ಪಡಗೂರಿಗೆ ಬಂದು ಬೀದಿ ಬೀದಿಗಳಲ್ಲಿ ಮೆರವಣಿಗೆಯನ್ನು ನಡೆಸುತ್ತಾರೆ. ಹೀಗೆ ಅನೇಕ ಕಾರ್ಯಕ್ರಮಗಳು ಪಡಗೂರಿನಲ್ಲಿ ಜರುಗುತ್ತವೆ.

ಪಡಗೂರಿನಲ್ಲಿ ಇತ್ತೀಚಿನ ಕಾಲದಲ್ಲಿ ಹೊಸದಾಗಿ ಶೂಲದ ಮಾರಮ್ಮ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಅಂದರೆ ದಿನಾಂಕ: 3–5–2012 ರಲ್ಲಿ ಈ ಕಾರ್ಯವಾಗಿದೆ. ಆ ಸಮಯದಲ್ಲಿ ದಿವ್ಯಸಾನಿಧ್ಯವನ್ನು ಸುತ್ತೂರು ಜಗದ್ಗುರು ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ವಹಿಸಿದ್ದರು. ನೇತೃತ್ವವನ್ನು ಪಡಗೂರು ಅಡವಿಮಠದ ಶ್ರೀ ನಿ ಪ್ರ ಸ್ವ ಶ್ರೀ ಶಿವಲಿಂಗೇಂದ್ರ

ಸ್ವಾಮಿಗಳು, ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮಿಗಳು ಸೋಮಹಳ್ಳಿ ಮಠದ ಸಿದ್ಧಮಲ್ಲಿಸ್ವಾಮಿಗಳು ಮುಡಗೂರು ಮಠದ ಇಮ್ಮಡಿ ಉದ್ದನ ಸ್ವಾಮಿಗಳು, ಚಿಕ್ಕ ತುಪ್ಪೂರಿನ ಶಿವ ಪೂಜಾ ಮಠದ ಶ್ರೀ ಚನ್ನವೀರಸ್ವಾಮಿಗಳು ಮತ್ತು ಹರಗುರು ಚರಮೂರ್ತಿಗಳು ಆಗಮಿಸಿದ್ದರು ಎಂಬುದು ತಿಳಿದುಬಂದಿದೆ. ಪಡಗೂರಿನಲ್ಲಿ ಹಳ್ಳವ್ವ ದೇವತೆ ಗುಡಿ, ದಂಡಿನ ಮಾರಮ್ಮ, ಪಟ್ಟಲದಮ್ಮ, ಕೊತ್ತಲಮಾರಮ್ಮರವರ ಚಿಕ್ಕ ಚಿಕ್ಕ ದೇವಾಲಯಗಳಿವೆ. ಈ ದೇವಾಲಯದಲ್ಲಿರುವ ದೇವತೆಗಳೆಲ್ಲರೂ ಶಕ್ತಿ ಪ್ರಧಾನವಾದ ದೇವತೆಯರೇ ಅಗಿದ್ದಾರೆ. ಈ ದೇವಾಲಯಗಳಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತವೆ.[೨]

## ಮಾರಮ್ಮ (ಕೊತ್ತಲ ಮಾರಮ್ಮ) ದೇವಾಲಯ – ತೆರಕಣಾಂಬಿ

ತೆರಕಣಾಂಬಿಯಲ್ಲಿ ಮಾರಮ್ಮ ಅಥವಾ ಕೊತ್ತಲ ಮಾರಮ್ಮ ದೇವಾಲಯ ಇದೆ. ತೆರಕಣಾಂಬಿಯ ಗ್ರಾಮದ ಮಧ್ಯಭಾಗದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಮೀಪದಲ್ಲಿದೆ. ಸ್ಥಳೀಯರ ಪ್ರಕಾರ ವಿಜಯನಗರದ ಅರಸರ ಕಾಲದ ಲಕ್ಷ್ಮಿದೇವಮ್ಮನೆಂದು ಕರೆಯುವ ವಾಡಿಕೆ ಇದೆ. ಈ ದೇವತೆ ಈ ಗ್ರಾಮದ ರಕ್ಷಣೆಗಾಗಿ ಇರುವವಳೆಂದು ಭಾವಿಸಿದ್ದಾರೆ. ಅದು ಅಲ್ಲದೆ ಕೊತ್ತಲ ಮಾರಮ್ಮನೆಂದು ಕರೆಯುತ್ತಾರೆ. ಅಂದಿನ ಕಾಲದಿಂದ ಪ್ರಸ್ತುತ ಈಗಿನ ಕಾಲದಲ್ಲಿಯೂ ಅನೇಕ ರೀತಿಯಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತಿವೆ. ವರ್ಷಕ್ಕೆ ಒಂದು ಸಾರಿ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ.

## ಮಾರಿಯಮ್ಮ ದೇವಾಲಯ–ತ್ರಿಯಂಬಕಪುರ

ತ್ರಿಯಂಬಕಪುರದಲ್ಲಿ ಉತ್ತರಾಭಿಮುಖವಾಗಿ ಮತ್ತೊಂದು ದೇವಾಲಯವಿದೆ. ಈ ದೇವಾಲಯವನ್ನು ನೋಡಿದರೆ ಅದು ಕೂಡ ಪ್ರಾಚೀನ ದೇವಾಲಯ, ಆದರೆ ಇತ್ತೀಚಿನ ವರ್ಷಗಳ ಹಿಂದೆ ಜೀರ್ಣೋದ್ಧಾರವಾಗಿದೆ. ಇದೊಂದು ಶಕ್ತಿದೇವತೆಯ ದೇವಾಲಯ, ಮೂಲಗರ್ಭಗುಡಿಯಲ್ಲಿ ಕುದುರೆ ಮೇಲೆ ಕುಳಿತ ಸ್ತ್ರೀ ದೇವತೆ ಅಥವಾ ಶಕ್ತಿ ದೇವತೆಯನ್ನು ಕಾಣಬಹುದಾಗಿದೆ. ಸ್ಥಳೀಯರ ಪ್ರಕಾರ ಕೂಡ ಇದೊಂದು ಶಕ್ತಿದೇವತೆಯಾಗಿದ್ದಾಳೆ. ದೇವಾಲಯದ ಮೇಲ್ಭಾಗದ ಕೋಷ್ಠಗುಡಿಯಲ್ಲಿಯೂ ಕೂಡ ಕುದುರೆ ಮೇಲೆ ಕುಳಿತ ಗಾರೆಯಿಂದ ಮಾಡಿದ ಶಿಲ್ಪವನ್ನು ಕಾಣಬಹುದು. ಇದು 'ತಮಿಳು ಸಂಸ್ಕೃತಿ ಮತ್ತು ಪರಂಪರೆ' ಎನ್ನಬಹುದು. ದೇವಾಲಯದ ಮೇಲೆ ನಾಲ್ಕು ಮೂಲೆಯಲ್ಲಿ ಸಿಂಹಗಳನ್ನು ಕೆತ್ತಲಾಗಿದೆ.

ಅಲ್ಲದೆ ದೇವಾಲಯದ ಸುತ್ತ ನಾಲ್ಕು ಕಂಬಗಳಿವೆ. 2 ಕಂಬಗಳು ಚೋಳರ ವಾಸ್ತು ರಚನೆಯ ದಿಂಡುಗಳನ್ನು ಹೊಂದಿದ್ದರೆ, ಇನ್ನೆರಡು ಕಂಬಗಳು ಗಂಗರ ಕಾಲದ ದಿಂಡಿನ ವಾಸ್ತು

ರಚನೆಯನ್ನು ಹೊಂದಿದೆ. ಆದಕಾರಣ ಇದೊಂದು ಪ್ರಾಚೀನ ದೇವಾಲಯವೆನ್ನುವುದರಲ್ಲಿ ಯಾವುದೇ ಅನುಮಾನ ಇಲ್ಲ. ತಮಿಳು ಸಂಸ್ಕೃತಿಯಲ್ಲಿ ತಮಿಳರು ಹೆಚ್ಚಾಗಿ ದೇವತೆಗಳನ್ನು ಕುದುರೆ ಮೇಲೆ ಇಟ್ಟು ಪೂಜಿಸುವ ಪರಿಪಾಠ ಇದೆ. ಆದಕಾರಣ ತ್ರಿಯಂಬಕಪುರ ತಮಿಳುನಾಡಿನ ಗಡಿಯಲ್ಲಿರುವುದರಿಂದ ತಮಿಳು ಪ್ರಭಾವ ಇದೆ ಎಂಬುದು ವ್ಯಕ್ತವಾಗುತ್ತದೆ. ಈ ಭಾಗದಲ್ಲಿ ನೆಲೆಸಿರುವ ತಮಿಳು ಭಾಷಿಕರು ಈ ಭಾಗದ ಜನರಿಂದ ಜಮೀನುಗಳನ್ನು ಪಡೆದುಕೊಂಡು ಅಥವಾ ಕೆಲವರು ಗುತ್ತಿಗೆಗೆ ಪಡೆದು ಈ ಭಾಗದಲ್ಲಿಯೂ ವ್ಯಾಪಾರ, ವ್ಯವಹಾರ ಇನ್ನಿತರ ಕೆಲಸ ಕಾರ್ಯದಲ್ಲಿ ನಿರಂತರರಾಗಿರುವುದು ತಿಳಿದುಬರುತ್ತದೆ. ತಮಿಳರು ತಮ್ಮ ನಾಡಿನಲ್ಲಿ ಆಚರಣೆಯಲ್ಲಿರುವ ಹಬ್ಬಗಳಾದ ಸಂಕ್ರಾಂತಿ, ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ. ಅದೇ ಮಾದರಿಯಲ್ಲಿ ಕರ್ನಾಟಕದ ಆಚರಣೆಯಲ್ಲಿರುವ ಯುಗಾದಿ, ಗೌರಿ, ಶಿವರಾತ್ರಿ, ಸ್ಥಳೀಯ ಆಚರಣೆಗಳಾದ ಮಾರಿಹಬ್ಬಗಳನ್ನು ಆಚರಿಸುವುದಿಲ್ಲ. ಆದರೂ ಕೂಡ ಶಕ್ತಿ ಪ್ರಧಾನವಾದ ದೇವಾಲಯಗಳಲ್ಲಿ ಪೂಜೆ ಕಾರ್ಯದಲ್ಲಿ ಭಾಗಿಯಾಗಿರುವುದು ತಿಳಿದುಬರುತ್ತದೆ. ಅಂತಹ ಸಂದರ್ಭದಲ್ಲಿ ಶಕ್ತಿದೇವತೆಗೆ ರಕ್ತಾಭಿಷೇಕವನ್ನು ನೀಡುವ ಹಿನ್ನೆಲೆಯಲ್ಲಿ ಅನೇಕ ಪ್ರಾಣಿ ಪಕ್ಷಿಗಳನ್ನು ಬಲಿಕೊಡುವ ಸಂಪ್ರದಾಯವಿದೆ. (ಚಿತ್ರಸಂಖ್ಯೆ-112)

## ಮಾದೇವಮ್ಮ ದೇವಾಲಯ-ನಿಟ್ರೆ

ನಿಟ್ರೆ ಗ್ರಾಮದಲ್ಲಿ ಊರಿನಿಂದ ಹೊರಗೆ ಪೂರ್ವಾಭಿಮುಖವಾಗಿ ನಿರ್ಮಾಣವಾಗಿರುವ ಮಾದೇವಮ್ಮ ದೇವಾಲಯ ಇದೆ. ಈ ದೇವಾಲಯವನ್ನು ನೋಡಿದರೆ ಮೈಸೂರು ಒಡೆಯರ್ ಕಾಲಕ್ಕೆ ಸೇರಿಸಬಹುದಾಗಿದೆ. ಈ ಮಹದೇವಮ್ಮ ದೇವಾಲಯವು ಗರ್ಭಗೃಹ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಮೂಲಗರ್ಭಗುಡಿಯಲ್ಲಿ ಶಕ್ತಿ ಪ್ರಧಾನವಾದ ಸಪ್ತಮಾತೃಕೆಯರ ಶಿಲ್ಪಗಳಿವೆ. ನವರಂಗವು ವಿಶಾಲವಾಗಿದ್ದು, ದಕ್ಷಿಣ ದಿಕ್ಕಿಗೆ ಒಂದು ಕೋಷ್ಠ ಗುಡಿ ಇದೆ. ಮುಖಮಂಟಪದಲ್ಲಿ ಗೋಡೆಗೆ ಸೇರಿದಂತೆ ನಾಲ್ಕು ಕಂಬಗಳು ಹಾಗೂ ಮುಂಭಾಗದಲ್ಲಿ ನಾಲ್ಕು ಕಂಬಗಳಿವೆ. ಪ್ರವೇಶದ್ವಾರ ಇಕ್ಕೆಲಗಳಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳಿವೆ. ಅಲ್ಲದೆ ಲಲಾಟ ಬಿಂಬದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಗಜಲಕ್ಷ್ಮಿಯ ಉಬ್ಬುಶಿಲ್ಪ ಇದೆ. ಇಕ್ಕೆಲಗಳಲ್ಲಿ ಚಾಮರಧಾರೆಯರು ಸಹ ಇದ್ದಾರೆ. ದೇವಾಲಯದಲ್ಲಿ ದಕ್ಷಿಣ ದಿಕ್ಕಿಗೆ ಗೋಡೆಯ ಭಿತ್ತಿಯ ಭಾಗದಲ್ಲಿ ಸ್ತ್ರೀಯು ಕುಳಿತಿದ್ದು, ಇದನ್ನು ಹೆರಿಗೆ ಮಾಡಿಕೊಳ್ಳುವುದಕ್ಕೆ ಕುಳಿತಿರುವ ಮಾದರಿಯಲ್ಲಿ ಕೆತ್ತನೆ ಮಾಡಲಾಗಿದೆ. ಆದರೆ ಇದೊಂದು ಶಕ್ತಿ ಪ್ರಧಾನ ದೇವತೆಗಾಗಿಯೇ ನಿರ್ಮಿಸಿರುವ ಆಲಯವಾಗಿದೆ.

ಅಲ್ಲದೆ ಇನ್ನೊಂದು ಅಲ್ಲಹಳ್ಳಿ ಮಾರಮ್ಮ ದೇವಾಲಯವಿದ್ದು, ಇಲ್ಲಿ ಹಸುಗೂಲಿಯ ಮಾದರಿಯಲ್ಲಿಯೇ ಜಾತ್ರೆ ನಡೆಯುತ್ತದೆ ಎಂಬ ಹೇಳಿಕೆಗಳಿವೆ. ಹಿಂದೆ ನಿಟ್ರೆ ಗ್ರಾಮದ ಪೂರ್ವಿಕರು ಪ್ರತಿವರ್ಷ ಹಸುಗೂಲಿ ಜಾತ್ರೆಗೆ ಹೋಗಿ ಅಲ್ಲಿಯ ದೇವರಿಗೆ ಪೂಜೆ ಸಲ್ಲಿಸಿ ಬರುತ್ತಿದ್ದರು. ಒಂದು ಸಾರಿ ವಿವಾದ ಸೃಷ್ಟಿಯಾಗಿ ನಿಟ್ರೆ ಜನರು ಹಸುಗೂಲಿಗೆ ಹೋಗುವುದನ್ನು ನಿಲ್ಲಿಸಿದರು. ತದನಂತರ ನಿಟ್ರೆಯಲ್ಲಿಯೇ  ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಅಲ್ಲಹಳ್ಳಿ ಮಾರಮ್ಮನ ಜಗುಲಿಯನ್ನು ನಿರ್ಮಿಸುತ್ತಾರೆ. ಸುಮಾರು 165 ವರ್ಷಗಳಿಂದಲೂ ಅಲ್ಲಹಳ್ಳಿ ಮಾರಮ್ಮನ ಜಾತ್ರೆಯನ್ನು ನಿಟ್ರೆ ಗ್ರಾಮದವರು ನಡೆಸಿಕೊಂಡು ಬರುತ್ತಿದ್ದಾರೆ.

ಪ್ರತಿ ವರ್ಷವು ಮಹಾಲಯ ಅಮಾವಾಸ್ಯೆ ಪ್ರಾರಂಭವಾಗುವುದಕ್ಕೆ ಮೊದಲೇ ಜಾತ್ರೆ ಆರಂಭವಾಗುತ್ತದೆ. ಈ ಹಿನ್ನೆಲೆಯಿಂದ ಈ ಗ್ರಾಮದಲ್ಲಿ ಸಾವಿರ ಸಂಖ್ಯೆಯಲ್ಲಿ ಜನ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಜನರ ಬಾಯಿಗೆ ಬೀಗವನ್ನು ಹಾಕಿಕೊಳ್ಳುವರು. ದನಗಳಿಗೆ ದೀವಟಿಗೆ ಸೇವೆ ಮಾಡುವರು. ವಾದ್ಯ, ಸತ್ತಿಗೆ, ಸುರಪಾನಿ, ಕಂಸಾಳೆ ಕುಣಿತ, ಬಿರುದು ಬಾವಲಿಗಳೊಡನೆ ಹತ್ತು ನಂದಿ ಕಂಬಗಳ ಜೊತೆ ಬೀದಿಯಲ್ಲಿ ಮೆರವಣಿಗೆ ನಡೆಯುತ್ತದೆ. ಈ ದೆವರಿಗೆ ಹರಕೆ ಹೊತ್ತ ಭಕ್ತರು ದೇವರಿಗೆ ತಾಳಿ ಮತ್ತು ಚಿನ್ನದ ಸರ ಮೊದಲಾದವುಗಳನ್ನು ದೇವತೆಗೆ ಅರ್ಪಿಸುತ್ತಾರೆ. ಹೀಗೆ ಜಾತ್ರೆಯ ಕಾರ್ಯಕ್ರಮಗಳು ನಿಟ್ರೆ ಊರಿನಲ್ಲಿ ಜರುಗುತ್ತದೆ. (ಚಿತ್ರಸಂಖ್ಯೆ-113)

## ಪಟ್ಟಲದಮ್ಮನ ಹಬ್ಬ-ರಾಘವಪುರ

ರಾಘವಪುರದಲ್ಲಿ ಶಕ್ತಿ ಪ್ರಧಾನವಾದ ದೇವತೆಯಾಗಿದ್ದಾಳೆ. ಈಕೆಯು ರಾಘವಪುರದ ಗ್ರಾಮದೇವತೆಗಳಾಗಿದ್ದಾಳೆ. ಈ ಗ್ರಾಮದ ಪೂರ್ವ ದಿಕ್ಕಿಗೆ 'ಲಕ್ಷ್ಮಣ ಸಮುದ್ರ' ಎಂಬ ಕೆರೆಯ ಹತ್ತಿರದಲ್ಲಿದೆ. ವರ್ಷಕ್ಕೆ ಒಂದು ಬಾರಿ ಪಟ್ಟಲದಮ್ಮನ ಜಾತ್ರೆಯು ನಡೆಯುತ್ತದೆ. ಆ ಸಂದರ್ಭದಲ್ಲಿ ರಥದ ತೇರು ಉತ್ಸವ ಕಾರ್ಯ ನಡೆಯುತ್ತದೆ. ತೇರನ್ನು ಸ್ಥಳೀಯ ಗ್ರಾಮದ ಮಹಿಳೆಯರೇ ಎಳೆಯುವ ಸಂಪ್ರದಾಯ ಇದೆ. ಇದು ಅಂದಿನ ಕಾಲದಿಂದ ಪ್ರಸ್ತುತ ಕಾಲದವರೆಗೂ ನಡೆದು ಬಂದಿದೆ. ಈ ಸಂಪ್ರದಾಯ ವಿಶೇಷವಾಗಿ ರಾಘವಪುರವನ್ನು ಬಿಟ್ಟರೆ ಇನ್ನೆಲ್ಲೂ ಕಾಣಬರುವುದಿಲ್ಲ. ಇನ್ನೊಂದು ವಿಶೇಷವೇನೆಂದರೆ, ಗ್ರಾಮದ ಎಲ್ಲಾ ಜಾತಿ-ಜನಾಂಗದವರು ದೇವರ ಕಾರ್ಯದಲ್ಲಿ ಭಾಗಿಯಾಗುತ್ತಾರೆ.

ಉದಾಹರಣೆಗೆ ದಲಿತರು, ಬಿದಿರು ತಟ್ಟೆಗಳನ್ನು ತರುವ ಕೆಲಸ ಕಾರ್ಯದಲ್ಲಿ ತೊಡಗಿರುತ್ತಾರೆ.

ಕಣಿಯರು-ತೇರನ್ನು ಎಳೆಯುವುದಕ್ಕೆ ಹಗ್ಗ ಮತ್ತು ಅಚ್ಚೆಗಳನ್ನು ಕಟ್ಟುವಂತಹ ಕೆಲಸದಲ್ಲಿ ಬಾಗಿಯಾಗಿರುತ್ತಾರೆ.

ಮೇಲು ಸಕ್ಕರೆ ಶೆಟ್ಟರು-ತೇರಿನ ಕಟ್ಟಡದ ನಿರ್ಮಾಣದ ತಯಾರಿಕೆಯಲ್ಲಿ ಭಾಗಿಯಾಗಿರುತ್ತಾರೆ.

ಕುರುಬರು-ದೇವಾಲಯಕ್ಕೆ ಬಣ್ಣ ಹಚ್ಚುವ ಕೆಲಸ ಕಾರ್ಯದಲ್ಲಿ ತೊಡಗಿರುತ್ತಾರೆ.

ನಯನ ಕ್ಷತ್ರಿಯರು – ದೇವಾಲಯದ ಹಾಗೂ ತೇರಿನ ಕಳಶವನ್ನು ಅಂದವಾಗಿ ಕಾಣುವಂತೆ ಮಾಡಲು ಶುಚಿಗೊಳಿಸುವ ಕಾರ್ಯದಲ್ಲಿ ಭಾಗಿಯಾಗಿರುತ್ತಾರೆ.

ಮಡಿವಾಳ ಶೆಟ್ಟರು-ಮಡಿ ಹಾಕುವಂತಹ ಕೆಲಸ ಕಾರ್ಯದಲ್ಲಿ ಭಾಗಿಯಾಗಿರುತ್ತಾರೆ.

ಲಿಂಗಾಯಿತರು-ಬಲಿ ನಡೆಸುವ ಹಿನ್ನೆಲೆಯಲ್ಲಿ ಅನ್ನವನ್ನು ಊರಿನ ಪ್ರಮುಖರಾದ ಗೌಡಿಕೆಯವರ ಮನೆಯಿಂದ ತರುವಂತಹ ಕೆಲಸ ಕಾರ್ಯದಲ್ಲಿ ಭಾಗಿಯಾಗಿರುತ್ತಾರೆ.

ಬ್ರಾಹ್ಮಣರು-ಹಬ್ಬದ ದಿನದಂದು ವಿಶೇಷ ಪೂಜೆ ಪುನಸ್ಕಾರಗಳಲ್ಲಿ ಭಾಗಿಯಾಗುತ್ತಾರೆ ಹಾಗೂ ಸರ್ವರಿಗೂ ದೇವರ ಕೃಪೆಯನ್ನು ನೀಡಲು ಸಹಕಾರಿಯಾಗಿರುತ್ತಾರೆ.

ಕೆಲವೊಂದು ಐತಿಹ್ಯದ ಪ್ರಕಾರ ಹೇಳುವುದಾದರೆ, ಈ ರಾಘವಪುರದ ಶಕ್ತಿಪ್ರಧಾನವಾದ ದೇವತೆಗೆ ಆರು ಜನ ಸಹೋದರಿಯರು ಇದ್ದಾರೆ ಎಂಬ ನಂಬಿಕೆ ಇದೆ. ಅವರುಗಳು ಬೇರೆ ಬೇರೆ ಗ್ರಾಮಗಳಲ್ಲಿ ಪಟ್ಟಲದಮ್ಮನ ರೀತಿಯಲ್ಲಿಯೇ ನೆಲೆಸಿರುತ್ತಾರೆಂಬ ನಂಬಿಕೆ ಇದೆ. ಉದಾಹರಣೆಗೆ ಗುಂಡ್ಲುಪೇಟೆ ಪಟ್ಟಣದಲ್ಲಿ ಬೊಮ್ಮಲಾಪುರ, ಪುತ್ತನಪುರ ಅಲ್ಲದೆ ಬೇರೆ ತಾಲ್ಲೂಕಾದ ನಂಜನಗೂಡು ತಾಲ್ಲೂಕಿನ ದೇಬೂರು ಗ್ರಾಮದಲ್ಲಿ ನೆಲೆಸಿದ್ದಾರೆ ಎಂಬ ಹಿರಿಯರ ಹೇಳಿಕೆಗಳಿವೆ. ರಾಘವಪುರದ ಮಾದರಿಯಲ್ಲಿಯೇ ಗುಂಡ್ಲುಪೇಟೆ, ಬೊಮ್ಮಲಾಪುರ ಮತ್ತು ಪುತ್ತನಪುರಗಳಲ್ಲಿ ಈ ಪಟ್ಟಲದಮ್ಮನ ಜಾತ್ರೆ ಕಾರ್ಯಗಳು ನಡೆಯುತ್ತವೆ.

ಈ ಗ್ರಾಮದಲ್ಲಿ ಮೊದಲು ಪುರುಷರು ತೇರನ್ನು ಎಳೆದು ನಂತರ ಮಹಿಳೆಯರು ತೇರನ್ನು ಎಳೆಯುವುದಕ್ಕಾಗಿಯೇ ಸಂಭ್ರಮದಿಂದ ಸಡಗರದಿಂದ ತೇರನ್ನು ಎಳೆಯುತ್ತಾರೆ. ತೇರನ್ನು ಎಳೆಯುವ ಸಮಯದಲ್ಲಿ ವಾದ್ಯದೊಂದಿಗೆ ಸತ್ತಿಗೆ, ಸುರಪಾನಿ, ಬಿರುದು ಬಾವಲಿಗಳೊಡನೆ ರಥವನ್ನು ಇಲ್ಲಿಯ ಮಹದೇಶ್ವರ ದೇವಾಲಯದ ಹತ್ತಿರ ಎಳೆದುಕೊಂಡು ಬರುತ್ತಾರೆ. ರಾಘವಪುರದ ಪಟ್ಟಲದಮ್ಮ ಹಬ್ಬ ಮತ್ತು ಜಾತ್ರೆ ಮಹೋತ್ಸವವು ಒಂದು ವಿಶೇಷವಾದ ಶಕ್ತಿ ಪ್ರಧಾನವಾದ ದೇವತೆಯ ಹಬ್ಬವಾಗಿ ಪರಿಣಮಿಸಿದೆ. (ಚಿತ್ರಸಂಖ್ಯೆ-157)

## ನಡುಹೊಲದಮ್ಮ-ಚೆನ್ನಮಲ್ಲಿಪುರ

ಚೆನ್ನಮಲ್ಲಿಪುರ ಗುಂಡ್ಲುಪೇಟೆಯಿಂದ ಸುಮಾರು 16 ಕಿಲೋಮೀಟರ್ ದೂರದಲ್ಲಿದೆ. ಈ ಗ್ರಾಮದಲ್ಲಿ ಚೆನ್ನಮಲ್ಲದೇವರು ಎಂಬ ಸ್ವಾಮೀಜಿ ನೆಲೆಸಿದ್ದನೆಂದು ವಾಡಿಕೆ ಇದೆ. ಹಿಂದೆ ಈ ಗ್ರಾಮ ಬೇಚರಾಕ್ ಆಗಿತ್ತು. ಪ್ರಸ್ತುತ ಈ ಗ್ರಾಮದಲ್ಲಿ ಜೈನ ವಸತಿ ಇದೆ. ಚೆನ್ನಮಲ್ಲ ದೇವರ ಹೆಸರಿನಿಂದ ನಾಮಾಂಕಿತವಾಗಿ ಮೊದಲಿಗೆ 'ಚನ್ನಮಲ್ಲಪುರ' ಎಂಬ ನಾಮಕರಣವಿತ್ತೆಂದು ಹಿರಿಯರ ಹೇಳಿಕೆಗಳಿವೆ. ಈ ಊರಿನಲ್ಲಿ 18-02-2010ರಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ ಸ್ಥಾಪನೆಯಾಗಿದೆ. ಈ ಗ್ರಾಮದಲ್ಲಿ ಇತ್ತೀಚಿನ ಕಾಲದ ದೇವಾಲಯಗಳಿವೆ. ಆದರೆ ಪ್ರಾಚೀನ ದೇವಾಲಯ ನಡುಹೊಲದಮ್ಮ ಪ್ರಾರಂಭದಲ್ಲಿ ಈ ದೇವತೆಗೆ ಗೌಡಲತ್ತೂರಮ್ಮ ಎಂದು ಕರೆಯುತ್ತಾರೆಂದು ಹೇಳಿಕೆಗಳಿವೆ. ಇದಕ್ಕೆ ಕಾರಣವೇನೆಂದರೆ, ಇಲ್ಲಿಯ ದೇವಿಯು ಕೇರಳ ರಾಜ್ಯ ಗೌಡಲತ್ತೂರಿನಲ್ಲಿ ನೆಲೆಸಿದ್ದಳೆಂದು, ತದನಂತರ ದೇವಿಯು ಚನ್ನಮಲ್ಲಪುರದ ಹತ್ತಿರ ಇರುವ ಹೊಂಗಳ್ಳಿ ಸಿದ್ದಲಿಂಗನವರ ಜಮೀನಿನ ಮಧ್ಯ ಬಂದು ನೆಲೆಸಿದ್ದಾಳೆಂದು ತಿಳಿದುಬರುತ್ತದೆ. ಆದಕಾರಣ ಈ ದೇವಿಯನ್ನು ನಡುಹೊಲದಮ್ಮ ಎಂದು ಕರೆಯುವ ಪರಂಪರೆ ಇದೆ. ಅಲ್ಲದೆ ಈ ಊರಿನ ಬೆಟ್ಟದ ಗುಹೆಯಲ್ಲಿ ಕದಗಾರಪ್ಪನ ದೇವರಿದ್ದಾನೆ ಎಂದು ತಿಳಿದುಬರುತ್ತದೆ. ಕದಗಾರಪ್ಪನು ಸಹ ಕೇರಳದಿಂದ ಬಂದವನೆಂದು ತಿಳಿದುಬರುತ್ತದೆ. ನಂತರದ ಕಾಲದಲ್ಲಿ ಕದಗಾರಪ್ಪ ಇಲ್ಲಿಂದ ಮುಂದೆ ಬೇರಂಬಾಡಿಯಲ್ಲಿ ನೆಲೆಗೊಂಡನು ಎಂಬ ನಂಬಿಕೆ ಇದೆ. ಆತನಿಗಾಗಿಯೇ ದೇವಾಲಯ ನಿರ್ಮಾಣವಾಗಿದೆ. ಅಲ್ಲಿಯೂ ಸಹ ಪ್ರತಿ ವರ್ಷ ಕದೆಗಾರಪ್ಪನ ಜಾತ್ರೆ ನಡೆಯುತ್ತದೆ. ಹೀಗೆ ಶಕ್ತಿ ಪ್ರಧಾನವಾದ ದೇವತೆ ಮತ್ತು ದೇವರನ್ನು ಪೂಜಿಸುವ ಕಾರ್ಯ ನಡೆಯುತ್ತದೆ.[10]

## ಹಸುಗೂಲಿ ಮಾರಮ್ಮ (ಪಾರ್ವತಮ್ಮ ಜಾತ್ರೆ)

ಹಸುಗೂಲಿಯಲ್ಲಿ ಪಾರ್ವತಾಂಬ ಜಾತ್ರೆ ನಡೆಯುತ್ತದೆ. ಈ ಜಾತ್ರೆ ತಲತಲಾಂತರದಿಂದ ಬಂದಿದೆ ಎಂಬ ಅಭಿಪ್ರಾಯ ಇದೆ.[21] ಈ ಊರಿನಲ್ಲಿ ಪ್ರತಿವರ್ಷ ಒಂದು ಸಾರಿ ಜಾತ್ರೆ ನಡೆಯುತ್ತದೆ. ಈ ಜಾತ್ರೆಯ ವಿಶೇಷತೆ ಹಾಗೂ ನಂಬಿಕೆ ಏನೆಂದರೆ, ಪ್ರತಿದಿನ ಮಲೆಯಪ್ಪನ ಮನೆತನದ ಹಸುಗಳು ಜಂಗಲಿಗೆ ಮೇಯಲು ಹೋಗುತ್ತಿದ್ದವು. ಒಂದು ಹಸು ಬಹಳ ತಡವಾಗಿ ಮನೆಗೆ ಬರುತ್ತಿತ್ತು. ನಂತರ ಈ ಹಸುವಿನಿಂದ ಹಾಲು ಕರೆದರೆ ರಕ್ತ ಬರುತ್ತಿತ್ತು. ಇದನ್ನು ತಿಳಿಯುವುದಕ್ಕೆ ಕಾಡಿಗೆ ಹೋದ ಹಸುವನ್ನು ಹಿಂಬಾಲಿಸಿಕೊಂಡು ಹೋಗಿ ನೋಡುತ್ತಾರೆ. ಕಾಡಿನಲ್ಲಿರುವ ಒಂದು ಪೊದೆಯಲ್ಲಿ ಉದ್ಭವಿಸಿದ ಲಿಂಗಕ್ಕೆ ಹಾಲು ಕರೆಯುತ್ತಿತ್ತು. ಅದನ್ನು ನೋಡಿ ಹಸುಗೂಲಿ ಜನರು ಬೆಳಗಾಗುವುದರೊಳಗೆ ಒಂದು ಅಂಕಣ ದೇವಸ್ಥಾನವನ್ನು

ಕಟ್ಟುತ್ತಾರೆ. ಆದರೂ ಕೂಡ ಈ ದೇವಾಲಯ ಪೂರ್ಣವಾಗುವುದಿಲ್ಲ. ಪ್ರತಿ ಸೋಮವಾರ ಮತ್ತು ಶುಕ್ರವಾರ ಈ ದೇವರ ಮನೆತನದವರು ಪೂಜೆ ಮಾಡುತ್ತಾರೆ. ಹಿಂದೆ ಗೌರಿಹಬ್ಬದ ಸಮಯದಲ್ಲಿ ಜಾತ್ರೆ ನಡೆಯುತ್ತಿತ್ತು. ದೀಪಾವಳ ಮತ್ತು ಕಾರ್ತಿಕ ಸೋಮವಾರ ಜಾತ್ರೆ ನಡೆಯುತ್ತಿತ್ತು. ಸುಮಾರು 15 ಕಿಲೋಮೀಟರ್ ದೂರದಲ್ಲಿರುವ ಅಲ್ಲಹಳ್ಳಿ ಪಾರ್ವತಾಂಬೆ ದೇವಾಲಯಕ್ಕೆ ಹೋಗಿ ಹಿಡುಗಾಯಿ ಒಡೆದ ನಂತರ ಆ ದಿನ ರಾತ್ರಿ ಎಲ್ಲಾ ಭಕ್ತರು ಅಲ್ಲಿಯೇ ಮಲಗಿ ಪೂಜೆ ಪುನಸ್ಕಾರಗಳಲ್ಲಿ ಭಾಗಿಯಾಗುತ್ತಾರೆ. ಎಲ್ಲಾ ಜನಾಂಗದವರು ಭಾಗಿಯಾಗುತ್ತಾರೆ. ಮಂಗಳವಾರ ಬೆಳಗ್ಗೆ 9 ಗಂಟೆಗೆ ಆಲತ್ತೂರು, ಶೆಟ್ಟಿಹಳ್ಳಿ ಮಾರ್ಗವಾಗಿ ಹಸುಗೂಲಿಗೆ ಬರುತ್ತಾರೆ. ಹಸುಗೂಲಿ ಊರಿಗೆ ಬಂದು ಪಾರ್ವತಾಂಬೆಯ ದೇವಾಲಯದ ಜಂಗಲಿಯ ಹತ್ತಿರ ಪೂಜೆ ಮಾಡಿ ಮಂಟಪಕ್ಕೆ ದೇವರನ್ನು ಇಡುತ್ತಾರೆ. ಎರಡು ಮೂರು ಟನ್ ಸೇವಂತಿಗೆ ಹೂವಿನಿಂದ ತೇರಿನ ಅಲಂಕಾರ, ಹೂವಿನ ಅಲಂಕಾರ, ವಾದ್ಯ, ತಮಟೆ, ಡೋಲು ಮೊದಲಾದ ವಾದ್ಯ ವೃಂದಗಳೊಂದಿಗೆ ಛತ್ರಿ, ಚಾಮರ, ಬಿರುದು ಬಾವಲಿಗಳೊಂದಿಗೆ ಸತ್ತಿಗೆ, ಸೂರಪಾನಿ, ಸಮೇತ ಹರಕೆ ಹೊತ್ತ ಭಕ್ತರ ಸಮೂಹದೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಉತ್ಸವ ಪ್ರಾರಂಭವಾಗುತ್ತದೆ. ಉತ್ಸವಕ್ಕೆ ಹೋಗುವಾಗ ಹರಕೆ ಹೊತ್ತವರು ಪೂಜೆ ಸಲ್ಲಿಸುತ್ತಾರೆ. ಅನಂತರ ಊರಿನವರು ಪದ್ಧತಿಯಂತೆ ಕಜ್ಜಾಯ ಮತ್ತು ಬಾಳೆಹಣ್ಣನ್ನು ಸೂರೆ ಬಿಡುತ್ತಾರೆ. ಈ ಜಾತ್ರೆಗೆ, ಮೈಸೂರು, ಚಾಮರಾಜನಗರ, ಹೆಗ್ಗಡದೇವನಕೋಟೆ, ನಂಜನಗೂಡು ತಾಲ್ಲೂಕುಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಪದ್ಧತಿ ಇದೆ.[11]

ದನಗಳಿಗೆ ಏನಾದರೂ ತೊಂದರೆಯಾದರೆ ಹಸುಗೂಲಿ ಪಾರ್ವತಾಂಬೆಗೆ ಹರಕೆ ಹೊತ್ತುಕೊಳ್ಳುವ ಪರಿಪಾಠವಿದೆ. ಇಲ್ಲಿ ದನಗಳ ಜಾತ್ರೆ ನಡೆಯುತ್ತದೆ. ದನಗಳ ಕೊಂಬಿಗೆ ಪಂಜನ್ನು ಕಟ್ಟಿ ಉರಿಸುವ ಪದ್ಧತಿ ಇದೆ. ತುಪ್ಪದ ಹರಕೆ, ಹೆಂಗಸರು ಬಾಯಿಬೀಗ ಚುಚ್ಚಿಸಿಕೊಂಡು ದೇವರ ಹರಕೆ ತೀರಿಸುತ್ತಾರೆ. ಹೀಗೆ ಹಸುಗೂಲಿ ಊರಿನಲ್ಲಿ ಪ್ರಾಚೀನ ಕಾಲದಿಂದಲೂ ಪಾರ್ವತಾಂಬೆ ಹಾಗೂ ದನಗಳ ಜಾತ್ರೆಯು ಒಂದು ವಿಶೇಷ ರೀತಿಯಲ್ಲಿ ನಡೆಯುತ್ತದೆ. ಈ ದೇವರಿಗೆ ಹರಕೆ ಹೊತ್ತ ಭಕ್ತರು ದೇವರಿಗೆ ಚಿನ್ನದ ತಾಳಿ, ಸರ, ಕರಡಿಗೆ, ಬೆಳ್ಳಿ, ಒಡವೆಗಳನ್ನು ದೇವರಿಗೆ ಅರ್ಪಿಸುತ್ತಾರೆ. ಈ ದೇವತೆಯು ಭಕ್ತರ ಹರಕೆಯನ್ನು ತೀರಿಸುತ್ತಾಳೆ ಎಂಬ ನಂಬಿಕೆ ಈ ಊರಿನ ಜನರುಗಳಿಗೆ ಇದೆ.[22] (ಚಿತ್ರಸಂಖ್ಯೆ-114)

## ಕಸಕಲಪುರದಮ್ಮ-ಬರಗಿ

ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ಗ್ರಾಮ ಬರಗಿ. ಇದು ಗುಂಡ್ಲುಪೇಟೆ ನಗರ ವ್ಯಾಪ್ತಿಯಿಂದ ಸುಮಾರು 15 ಕಿಲೋಮೀಟರ್ ದೂರದ ಕಾಡಂಚಿನಲ್ಲಿದೆ. ವರ್ಷಕ್ಕೆ ಒಂದು

ಸಾರಿ ಕಸಕಲುಪುರದ ಮಾರಮ್ಮನ ಜಾತ್ರೆ ನಡೆಯುತ್ತದೆ. ದೇವಾಲಯ ಬರಗಿಯಿಂದ ಸುಮಾರು 7 ಕಿಲೋಮೀಟರ್ ದೂರದ ಕಾಡಿನ ಒಳಗೆ ಇದೆ. ಆದರೂ ಕೂಡ ಬರಗಿ ಮಾರಮ್ಮನೆಂದು ಕರೆಯುವ ವಾಡಿಕೆ ಇದೆ. ಮೊದಲಿಗೆ ಬರಗಿ ಗ್ರಾಮದಲ್ಲಿ ಪ್ರಮುಖ ಬೀದಿಗಳಲ್ಲಿ ದೇವಿಯ ಮೆರವಣಿಗೆ ಮಾಡಿ ತದನಂತರ ಅಭಯ ಅರಣ್ಯದಲ್ಲಿರುವ ದೇವಸ್ಥಾನಕ್ಕೆ ದೇವರನ್ನು ಕರೆದುಕೊಂಡು ಹೋಗಲಾಗುತ್ತದೆ. ಈ ನೆಲೆ ಜನಸಾಮಾನ್ಯರು ಎತ್ತಿನಗಾಡಿ ಮೂಲಕ ಅಥವಾ ಕಾಲು ನಡಿಗೆ ಹೋಗುವ ಸಂಪ್ರದಾಯ ಇದೆ. ಕಸಕಲಪುರದಮ್ಮನನ್ನು ಬರಗಿಯ ಹತ್ತಿರ ಸುತ್ತಮುತ್ತಲಿರುವ ಊರಿನವರು ಆದಂತಹ ಹಸುಗೂಲಿ, ಅಗತಗೌಡನಹಳ್ಳಿ, ಹೆಗ್ಗಡಹಳ್ಳಿಯ ಗ್ರಾಮದವರು ಸಹ ಈ ದೇವತೆಯನ್ನು ಆರಾಧಿಸುವ ಪರಿಪಾಠವಿದ್ದು, ಹಸುಗೂಲಿಯಲ್ಲಿ ಮಾರಮ್ಮ ಪಾರ್ವತಾಂಬ ದೇವತೆಗಳಂತೆ ಕಸಕಲಪುರದಲ್ಲಿಯೇ ಇದೇ ದೇವತೆಯನ್ನು ಪೂಜಿಸುವ ಸಂಸ್ಕೃತಿ ಬೆಳೆದು ಬಂದಿದೆ. ಈ ಜಾತ್ರೆ ವಿಶೇಷತೆ ಆಷಾಡ ಮಾಸದಲ್ಲಿ ಜಾತ್ರೆ ನಡೆಯುತ್ತದೆ.[12]

## ಪ್ಲೇಗ್ ಮಾರಮ್ಮ – ಗುಂಡ್ಲುಪೇಟೆ

ಗುಂಡ್ಲುಪೇಟೆ ನಗರದಲ್ಲಿಯೇ ಬಸ್ ನಿಲ್ದಾಣದಿಂದ ಪೂರ್ವ ದಿಕ್ಕಿಗೆ ಪ್ಲೇಗ್ ಮಾರಮ್ಮನ ದೇವಾಲಯ ಇದೆ. ಮೊದಲಿಗೆ ಇದೊಂದು ಖಾಲಿ ಇರುವ ಜಮೀನಾಗಿತ್ತು ಎಂಬ ಹೇಳಿಕೆಗಳಿವೆ. ಮೊದಲಿಗೆ ಇಲ್ಲಿ ಚಪ್ಪರದ ಕೆಳಗೆ ದೇವರನ್ನು ಪೂಜಿಸುತ್ತಿದ್ದರು. ಈಗ ಒಂದು ದೇವಾಲಯವನ್ನು ನಿರ್ಮಿಸಲಾಗಿದೆ. ಈ ಸಂಸ್ಕೃತಿಯನ್ನು ನೋಡಿದರೆ ತಮಿಳು ಸಂಸ್ಕೃತಿ ಆಗಿದೆ. ಪ್ರಸ್ತುತ ತಮಿಳರೇ ಈ ದೇವಾಲಯದ ಬಳಿ ಇದ್ದಾರೆ. ತಮಿಳರೇ ದೇವರ ಕಾರ್ಯ, ಪೂಜೆ, ಪುನಸ್ಕಾರಗಳಲ್ಲಿ ಭಾಗಿಯಾಗುತ್ತಿದ್ದಾರೆ. ಈ ಮಾದರಿಯನ್ನು ನೋಡಬಹುದಾಗಿದೆ. ಹಾಗೆಯೇ ತಮಿಳುನಾಡಿನ ನಾನಾ ಭಾಗಗಳಲ್ಲಿ ಈ ಸಂಸ್ಕೃತಿ ಇದೆ. ಆದಕಾರಣ ಇದು ತಮಿಳು ಸಂಸ್ಕೃತಿಯಿಂದ ಬಂದದ್ದು, ಎಂದು ಹೇಳಲಾಗಿದೆ. ಇಲ್ಲಿ ಅನೇಕ ವೀರಗಲ್ಲುಗಳಿವೆ. ಕುದುರೆ ಮೇಲೆ ಕುಳಿತ ರಾಜರ ಹಾಗೂ ದೇವರ ಚಿತ್ರವನ್ನು ತೋರಿಸಲಾಗಿದೆ. ಈ ದೇವಾಲಯವು ಬೋವಿ ಜನರಿಗೆ ಪರಮ ದೇವತೆಯಾದರೂ ಕೂಡ, ಸ್ಥಳೀಯ ನಗರದ ಎಲ್ಲಾ ಜನಸಾಮಾನ್ಯರ ಪೂಜೆ ಪುನಸ್ಕಾರಗಳಲ್ಲಿ ಭಾಗಿಯಾಗುತ್ತಿದ್ದಾರೆ.

ಈ ಭಾಗದಲ್ಲಿ ಪ್ಲೇಗ್ ಬಂದು ನೂರಾರು ಜನರು ಸಾವಿಗೆ ಕಾರಣರಾದರು. ಈ ಸಮಯದಲ್ಲಿ ಇಲ್ಲಿಯ ಭಕ್ತರು ಮಾರಮ್ಮನನ್ನು ಪೂಜಿಸಿ ಹರಕೆ ಹೊತ್ತುಕೊಂಡು ದೇವಿಯನ್ನು ಪ್ರಾರ್ಥಿಸಿದಂತೆ, ತದನಂತರ ಪ್ಲೇಗ್ ಕಡಿಮೆಯಾಯಿತೆಂದು ತಿಳಿದುಬರುತ್ತದೆ. ಈ ಪ್ಲೇಗ್ ಮಾರಮ್ಮ ದೇವಾಲಯವು ಉತ್ತರಾಭಿಮುಖವಾಗಿದೆ. ಪ್ರತಿವರ್ಷ ಮಾರ್ಚ್ ಅಥವಾ ಏಪ್ರಿಲ್

ತಿಂಗಳಲ್ಲಿ ಪ್ಲೇಗ್ ಮಾರಮ್ಮನ ಜಾತ್ರೆ ನಡೆಯುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಾದ್ಯಂತ ಇದು ಪ್ಲೇಗ್ ಮಾರಮ್ಮನ ಜಾತ್ರೆ ಎಂದೇ ಕರೆಯುವ ವಾಡಿಕೆ ಇದೆ. ಪ್ಲೇಗ್ ಮಾರಮ್ಮನ ಜಾತ್ರೆ ಒಂದು ವಾರ ಕಾಲ ನಡೆಯುತ್ತದೆ. ಈ ದೇವರಿಗೆ ಅನೇಕ ಧಾರ್ಮಿಕ ವಿಧಿವಿಧಾನದ ಪ್ರಕಾರ ತಮಿಳು ಸಂಸ್ಕೃತಿಯ ಪ್ರಕಾರ ಪೂಜೆ ಪುನಸ್ಕಾರಗಳು ಜರುಗುತ್ತವೆ.

ಈ ಹಬ್ಬ ಶುಕ್ರವಾರದಿಂದ ಪ್ರಾರಂಭವಾಗಿ ಮುಂದಿನ ಶುಕ್ರವಾರವೇ ಮುಗಿಯುತ್ತದೆ. ಪ್ರಾರಂಭದಲ್ಲಿ ಮುಹೂರ್ತ ಮಾಡಿ ಮುಹೂರ್ತ ಕಂಬವನ್ನು ನಿಲ್ಲಿಸುವುದು. ಆ ದಿನವೇ ಹಬ್ಬ ಪ್ರಾರಂಭ, ತದನಂತರ ಊರಿನ ಕಲ್ಯಾಣಿಯಿಂದ ದೇವರನ್ನು ಶುದ್ಧಿಗೊಳಿಸಿ, ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡುವುದು, ಬೆಂಕಿ ಹಾಕಿ ಕೊಂಡವನ್ನು ಹಾಯುವುದು, ತಂಪಿನ ಪೂಜೆ, ಮಡೆ ಹುಯ್ಯುವುದು, ನಂತರ ಮಾರಮ್ಮನ ನಮಗೆ ಎಲ್ಲಾ ರೀತಿಯ ಆರೋಗ್ಯ ಭಾಗ್ಯ ದೊರಕಲಿ ಎಂಬುದನ್ನು ಕುರಿತು ತಾಯಿಯನ್ನು ಬೇಡುವುದು. ಮುಂದಿನ ಶುಕ್ರವಾರದ ತನಕ ಹಬ್ಬ ಜರುಗಿ ಕೊನೆಯಲ್ಲಿ ಹರಿಸಿನ ಓಕುಳಿ ಪೂಜೆಯನ್ನು ಮಾಡುತ್ತಾರೆ. ಈ ಹಬ್ಬಕ್ಕೆ ಪಕ್ಕದ ತಮಿಳು ನಾಡಿನಿಂದಲೂ ಈ ದೇವತೆಯ ಭಕ್ತರು ಬರುತ್ತಾರೆ. ಆದಕಾರಣ ಇದೊಂದು ವಿಶೇಷವಾದ ದೇವತೆಯಾಗಿದ್ದು, ತಮಿಳು ಸಂಸ್ಕೃತಿಯ ಪ್ರತೀಕವಾಗಿ ಇಲ್ಲಿ ಪೂಜೆ, ಪುನಸ್ಕಾರಗಳು ನಡೆದುಕೊಂಡು ಬರುತ್ತಿದೆ. ಈ ದೇವಾಲಯದಲ್ಲಿ ಪ್ರತಿ ಮಂಗಳವಾರ, ಶುಕ್ರವಾರ, ಅಮವಾಸ್ಯೆ, ಪೂರ್ಣಿಮೆ, ಭೀಮನ ಅಮವಾಸ್ಯೆ, ಮಹಾಲಯ ಅಮವಾಸ್ಯೆಗಳಂದು ವಿಶೇಷ ಪೂಜಾಕಾರ್ಯಗಳು ನಡೆಯುತ್ತದೆ. ಈ ದೇವತೆಗೆ ಕುರಿ, ಕೋಳಿಗಳನ್ನು ಬಲಿ ಕೊಡುವ ಪದ್ಧತಿ ಇದೆ. (ಚಿತ್ರಸಂಖ್ಯೆ-115)

### ಮಾಲಾರಸಮ್ಮ-ಕಬ್ಬಹಳ್ಳಿ

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಆಚರಿಸುವ ಶಕ್ತಿ ದೇವತೆಗಳನ್ನು ಮಾಲಾರಸಮ್ಮ ಅತ್ಯಂತ ಶಕ್ತಿ ದೇವತೆಗಳಲ್ಲಿ ಒಬ್ಬಳಾಗಿದ್ದಾಳೆ. ಮಾಲಾರಸಮ್ಮ ದೇವಿಯು ಕಬ್ಬಹಳ್ಳಿಯಲ್ಲಿ ನೆಲೆಸಿದ್ದಾಳೆ. ಕಬ್ಬಹಳ್ಳಿ ಹಾಲುಮತದ, ಕುರುಬ ಸಮುದಾಯದ ಆರಾಧ್ಯ ದೇವತೆಯಾಗಿದ್ದಾಳೆ. ಮಾಲಾರಸಮ್ಮನ ಜಾತ್ರೆ/ಹಬ್ಬವು ಸುಮಾರು 5, 10, 15, 1 ವರ್ಷಕ್ಕೆ ಅಂತರದಲ್ಲಿ ನಡೆಯುತ್ತದೆ. ಇದಕ್ಕೆ ಪ್ರಮುಖ ಕಾರಣವೇನೆಂದರೆ, ಮಾಲಾರಸಮ್ಮ ದೇವಿಗೆ ಬಲಿ ಕೊಡುವ ಕುರಿ 7 ಬಣ್ಣಗಳಿಂದ ಇರಬೇಕು ಎಂಬ ನಿಯಮ, ಸಂಪ್ರದಾಯ ಇದೆ. ಈ ದೇವತೆಯನ್ನು ಪೂಜಿಸುವ ಅರ್ಚಕರ ಕನಸಿನಲ್ಲಿ ಬಂದು 7 ಬಣ್ಣದ ಮರಿ ಜನಿಸಿದ ಬಗ್ಗೆ ಮಾಹಿತಿಯು ದೊರೆಯುತ್ತದೆ. ಆಗ ಈ ಸಮುದಾಯದವರು ಮರಿ ಇರುವ ನೆಲೆಯನ್ನು ಹುಡುಕಿ ನಂತರ ಗ್ರಾಮದ ಎಲ್ಲಾ ಸಮುದಾಯದವರೊಂದಿಗೆ ಸಭೆ ನಡೆಸಿ, ಮಾಲಾರಸಮ್ಮನ ಹಬ್ಬಕ್ಕೆ ಚಾಲನೆ ನೀಡುವ

ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಆದಕಾರಣ ಇದೊಂದು ವಿಶೇಷವಾದ ಹಬ್ಬವೆಂದೇ ಹೇಳಬೇಕಾಗುತ್ತದೆ.

## ಪಟ್ಟಲದಮ್ಮ-ಗುಂಡ್ಲುಪೇಟೆ

ಗುಂಡ್ಲುಪೇಟೆ ನಗರ ಪಟ್ಟಣದಲ್ಲಿ ಸ್ಥಳೀಯ ದೇವತೆಯಾದ ಪಟ್ಟಲದಮ್ಮ ಶಕ್ತಿಯುತ ದೇವತೆಯಾಗಿದ್ದಾಳೆ. ಈ ದೇವತೆಯ ಹೆಸರಿನಲ್ಲಿ ಮೇ ತಿಂಗಳು ಅಥವಾ ಜೂನ್ ತಿಂಗಳ ಸಮಯದಲ್ಲಿ ಪಟ್ಟಲದಮ್ಮನ ವಿಶೇಷ ರೀತಿಯಲ್ಲಿ ಹಬ್ಬ ಜೊತೆಯಲ್ಲಿ ಜಾತ್ರೆಯು ಸಹ ನಡೆಯುತ್ತದೆ. ಇದು ನಾಯಕ ಜನಾಂಗದವರಿಗೆ ಸೀಮಿತವಾಗಿದ್ದರೂ ಕೂಡ ಜನಸಮುದಾಯದವರು ಭಾಗವಹಿಸುವ ಸಂದರ್ಭ ಇದೆ. ಪಟ್ಟಲದಮ್ಮನ ಹಬ್ಬ ಪ್ರಾರಂಭವಾಗುವುದಕ್ಕೆ 15 ದಿನ ಮೊದಲೇ ನಾಯಕ ಜನಾಂಗದ ಹಿರಿಯರು ಈ ಪರಿಸರದಲ್ಲಿರುವ ಮಂಟೇಸ್ವಾಮಿ ದೇವಾಲಯದಲ್ಲಿ ಸಭೆ ನಡೆಸಿ ಅನೇಕ ರೀತಿಯ ತೀರ್ಮಾನಗಳನ್ನು ಪಡೆದುಕೊಂಡು ಪಟ್ಟಲದಮ್ಮನ ಜಾತ್ರೆ ಯಾವ ರೀತಿ ನಡೆಯಬೇಕು ಎಂದು ಒಬ್ಬೊಬ್ಬರ ಅಭಿಪ್ರಾಯವನ್ನು ಪಡೆದುಕೊಂಡು ನಂತರ ಸ್ಥಳೀಯ ಜನಸಾಮಾನ್ಯರಿಂದ ಚಂದಾ (ಹಣ) ವಸೂಲಿ ಮಾಡಿ ಪ್ರತಿಯೊಂದು ಕುಟುಂಬವು 50 ರೂಪಾಯಿ ಕೊಡಬೇಕು. ಈ ಹಣ ಪಟ್ಟಲದಮ್ಮನ ಹಬ್ಬದ ಜಾತ್ರೆಗೆ ಮಾತ್ರ ನಿಗಧಿಯಾಗಿರುತ್ತದೆ. ಈ ಜಾತ್ರೆಗೆ ಗುಂಡ್ಲುಪೇಟೆ ತಾಲ್ಲೂಕಿನ 33 ಹಳ್ಳಿಯ ನಾಯಕ ಜನಾಂಗಕ್ಕೆ ವಿಳ್ಯ ನೀಡುವ ಮೂಲಕ ತಪ್ಪದೇ ದೇವಿಯ ಆರಾಧನೆಯಲ್ಲಿ ಭಾಗವಹಿಸಬೇಕೆಂದು ಕೋರಲಾಗುತ್ತದೆ. ಈ ಜಾತ್ರೆಗೆ ಜಾತ್ರೆಯ ಹಿಂದಿನ ದಿನವೇ ಸತ್ತಿಗೆ, ಸುರಪಾನಿಗಳ ಸಮೇತ ಬೇರೆ ಬೇರೆ ಹಳ್ಳಿಗಳಿಂದ ಬರುವ ಪದ್ಧತಿ ಇದೆ. ಪ್ರತಿವರ್ಷವೂ ಜಾತ್ರೆಯು ಶುಕ್ರವಾರದಂದು ಆರಂಭವಾಗುತ್ತದೆ. ಪೇಟೆಗೆ ಬಂದ ಪ್ರತಿಯೊಂದು ಹಳ್ಳಿಯ ಯಜಮಾನರು ಮತ್ತು ನಾಯಕ ಜನಾಂಗದ ಕುಲಸ್ಥರೆಲ್ಲರನ್ನು ಗುಂಡ್ಲುಪೇಟೆಯ ಟೋಲ್‌ಗೇಟ್ ಹತ್ತಿರ ಸ್ವಾಗತಿಸಲಾಗುವುದು. ಅವರಿಗೆ ವೀಳ್ಯ ಕೊಡುವ ಪರಂಪರೆ ಇದೆ. ಅವರನ್ನು ವಾದ್ಯ ಸಮೇತ ಮೆರವಣಿಗೆಯಲ್ಲಿ ಮಂಟೇಸ್ವಾಮಿ ದೇವಾಲಯಕ್ಕೆ ಕರೆದು ಹೋಗುತ್ತಾರೆ.

ಅಂದು ಅಲ್ಲಿ ನಾಯಕ ಜನಾಂಗದವರು ಔತಣ ಕೂಟ ಏರ್ಪಡಿಸುವ ವಾಡಿಕೆ ಇದೆ. ಸಾಯಂಕಾಲ ಗ್ರಾಮದ ಯಜಮಾನರ ಜೊತೆ ಪಟ್ಟಲದಮ್ಮ ದೇವಾಲಯಕ್ಕೆ ಹೋಗುತ್ತಾರೆ. ಈ ಹಬ್ಬದಲ್ಲಿ ಹೆಂಗಸರು ವಾದ್ಯದೊಡನೆ ಸತ್ತಿಗೆ ಸುರಪಾನಿ ಜೊತೆ ತಮ್ಮ ತಮ್ಮ ಮನೆಗಳಿಗೆ ಹೋಗುತ್ತಾರೆ. ನಂತರ ಶನಿವಾರ ಬೆಳಗ್ಗೆ 7.30 ಗಂಟೆಗೆ ದೇವರನ್ನು ತರುವುದಕ್ಕೆ ಕಲ್ಯಾಣಿ

ಕೊಳದ ಹತ್ತಿರ ಹೋಗುತ್ತಾರೆ. ನಂತರ ೯ ಗಂಟೆಗೆ ಹರಕೆಯನ್ನು ಮಾಡಿಕೊಂಡು ಪಟ್ಟಲದಮ್ಮನ ಭಕ್ತರು ಬಾಯಿ ಬೀಗ ಚುಚ್ಚಿಕೊಳ್ಳುವ ಸಂಪ್ರದಾಯ ಇದೆ.

ಪುಟ್ಟ ಮಕ್ಕಳು ಕನ್ನಡಿಯ ಜೊತೆ ಕಳಶವನ್ನು ತಲೆಯ ಮೇಲೆ ಇಟ್ಟುಕೊಂಡು ಪಟ್ಟಲದಮ್ಮ ದೇವಾಲಯಕ್ಕೆ ತೆರಳುತ್ತಾರೆ. ಇನ್ನೊಂದು ವಿಶೇಷವೇನೆಂದರೆ, ಇದನ್ನು ನೆರವೇರಿಸುವವರು ಪಟ್ಟಲದಮ್ಮದವರ ವಂಶಸ್ಥರೇ ಆಗಿರುತ್ತಾರೆ. ಈ ಹಬ್ಬದ ಸಂದರ್ಭದಲ್ಲಿ ಕಂಸಾಳೆ, ಕರಡಿ ವರಸೆ, ಗೊರವರ ಕುಣಿತ, ವೀರಗಾಸೆ, ಡೊಳ್ಳು ಕುಣಿತ, ಕರಗ, ಬ್ಯಾಂಡ್ ಸೆಟ್, ಅಲ್ಲದೆ ಕೇರಳದಿಂದ ವಾದ್ಯಗೋಷ್ಠಿ, ಮಂಡ್ಯದಿಂದ ಕರಗ, ಗಂಡು ಮತ್ತು ಹೆಣ್ಣು ವೇಷ ಧರಿಸಿ ವಾದ್ಯದ ತಾಳಕ್ಕೆ ಕುಣಿಯುತ್ತಾರೆ. ವಿವಿಧ ರೀತಿಯ ವೇಷ ಧರಿಸಿ ವಾಲ್ಮೀಕಿ, ಮಹಾ ಋಷಿ, ವೀರಮದಕರಿ ನಾಯಕ, ಮಹಾಪಾಳೇಗಾರರು, ರಾಕ್ಷಸ ವೇಶಧಾರಿ ಇನ್ನೂ ಮೊದಲಾದ ಕಲಾ ತಂಡದವರು ಪಟ್ಟಲದಮ್ಮನ ಹಬ್ಬದಲ್ಲಿ ಭಾಗವಹಿಸುತ್ತಾರೆ. ಹೀಗೆ ಪಟ್ಟಲದಮ್ಮನ ಪೂಜೆ ಪುನಸ್ಕಾರಗಳು ನಡೆಯುತ್ತದೆ. ನಾಯಕ ಜನಾಂಗದವರಿಗೆ ಇದೊಂದು ಹೃದಯ ಸ್ಪರ್ಶಿ ಹಬ್ಬವಾಗಿ ಪರಿಣಮಿಸಿದೆ. ಈ ಹಬ್ಬವನ್ನು ನಾಯಕ ಜನಾಂಗದವರು ಭಕ್ತಿಭಾವದಿಂದ ನಡೆಸುವ ಮೂಲಕ ದೇವಿಯ ಕೃಪೆಗೆ ಪಾತ್ರರಾಗಿರುತ್ತಾರೆ. (ಚಿತ್ರಸಂಖ್ಯೆ-116)

## ಅಡಿಟಿಪ್ಪಣಿಗಳು


1. ಡಾ.ಎಚ್.ತಿಪ್ಪೇರುದ್ರಸ್ವಾಮಿ – ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿವಿಕೆ ಮೂರ್ತಿ ಪ್ರಕಾಶಕರು ಮೈಸೂರು, 1968 ರಿಂದ 2010 ಪ್ರಕಟಣೆಗಳು, ಪು.ಸಂ.624, 641.
2. ಡಾ.ಸಿ.ಯು.ಮಂಜುನಾಥ್ - ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ (ಕ್ರಿ.ಶ.1150–1340) ಚಿತ್ಕಲಾ ಪ್ರಕಾಶನ, ಕುಪ್ಪಂ, 2012, ಪು.ಸಂ.147 ರಿಂದ 156.
3. ಡಾ.ಹೆಚ್.ರಾಮಚಂದ್ರಸ್ವಾಮಿ – ಕನ್ನಡ ಅನುವಾದ, ಹಿಂದೂ ದೇವದೇವಿಯರು ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು, 2009, ಗ್ರಂಥವನ್ನು ಅಧ್ಯಯನ ಮಾಡಲಾಗಿದೆ. 1 ರಿಂದ 157 ಪುಟಗಳನ್ನು ಅಲ್ಲದೆ ಹಲವಾರು ಶಿಲ್ಪಗಳನ್ನು ಒಳಗೊಂಡಿದೆ.
4. ಕನ್ನಡ ವಿಷಯ ವಿಶ್ವಕೋಶ – ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 2009, ಪು.ಸಂ.1025, 1026.
5. ಡಾ.ದೇವರಕೊಂಡಾರೆಡ್ಡಿ–ತಲಕಾಡಿನ ಗಂಗರ ದೇವಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 1994, ಪು.ಸಂ.143.
6. ಎಫಿಗ್ರಾಫಿಯ ಕರ್ನಾಟಕ, ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–102.
7. ಡಾ.ಬಿ.ಬಸವರಾಜು ತಗರಪುರ–ಚೋಳರ ಮತ್ತು ವಾಸ್ತುಶಿಲ್ಪ, ನಂದಿ ಬುಕ್ ಹೌಸ್, ನಂದಿ ಎಫ್–3, 18ನೇ ಕ್ರಾಸ್, ರಾಮಾನುಜಾರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು, 2008, ಪು.221, 222.
8. ಪಿ.ಸಿ.ರಾಜಶೇಖರ–ಗುಂಡ್ಲುಪೇಟೆ ತಾಲ್ಲೂಕಿನ ಜಾತ್ರೆಗಳು, ರಾಜೇಶ್ವರಿ ಪ್ರಕಾಶನ, ಪಡಗೂರು, ಗುಂಡ್ಲುಪೇಟೆ ತಾಲ್ಲೂಕು, 2012, ಪು.ಸಂ.73 ರಿಂದ 76.
9. ಅದೇ ಪು.ಸಂ.61 ರಿಂದ 65.
10. ಡಾ.ಪಳನಿಸ್ವಾಮಿ – ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ, ಸ್ಕಂದಶ್ರೀ ಪ್ರಕಾಶನ ಮೂಡಗೂರು, 2011 ಗ್ರಂಥವನ್ನು ಅಧ್ಯಯನ ಮಾಡಲಾಗಿದೆ.
11. ವಿಜಯ ಕರ್ನಾಟಕ ಪತ್ರಿಕೆ – 14/11/2016 ರ ದಿನಪತ್ರಿಕೆ.
12. ವಿಜಯ ಕರ್ನಾಟಕ ಪತ್ರಿಕೆ - 6/7/2016 ರ ದಿನಪತ್ರಿಕೆ.

## 6.2. ಗುಂಡ್ಲುಪೇಟೆ ತಾಲ್ಲೂಕಿನ ನಾಗದೇವತೆ ಆರಾಧನೆ

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ನಾಗಪೂಜೆ ನಾಗಾರಾಧನೆ ಒಂದಲ್ಲ ಒಂದು ರೀತಿಯಲ್ಲಿ ಕಾಣಬರುತ್ತದೆ. ಅದೇ ಮಾದರಿಯಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಇದೆ. ಈ ಪರಂಪರೆಯನ್ನು ಶೈವಧರ್ಮ ವೈಷ್ಣವ ಧರ್ಮ, ಜೈನಧರ್ಮ, ಮತ್ತು ಬೌದ್ಧ ಧರ್ಮಗಳಲ್ಲಿಯೂ ಇದೆ. ಈ ಧರ್ಮಗಳು ತಮ್ಮದೇ ಆದ ಧಾರ್ಮಿಕ ವ್ಯವಸ್ಥೆಗಳಲ್ಲಿ ಸರ್ಪವನ್ನು ಒಂದು ಅಧೀನ ಶಕ್ತಿಯಾಗಿ ಮಾಡಿಕೊಂಡಿದ್ದಾರೆ. ನಾಗಪ್ರತಿಮೆಯ ಪ್ರತಿಷ್ಠೆ ಮತ್ತು ಪೂಜೆಗೆ ಸಂತಾನಪೇಕ್ಷೆಯೇ ಮೂಲವೆಂಬ ಅಭಿಪ್ರಾಯವಿದೆ. ಅಂದಿನ ಪ್ರಾಚೀನ ಕಾಲಕ್ಕೆ ನಾಗಪೂಜೆಗಳು ನಡೆಯುವ ಸ್ಥಳಗಳು ಸಾಮಾನ್ಯವಾಗಿ ದಟ್ಟವಾದ ಕಾಡುಗಳು ಮತ್ತು ನದಿಗಳು ಹರಿಯುವ ಬೆಟ್ಟಗಳ ತಪ್ಪಲುಗಳಾದ್ದರಿಂದ, ಕೃಷಿ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಾಗಾರಾಧನೆ ರೂಢಿಗೆ ಬಂದಿರಬೇಕು. ಇಲಿ, ಹೆಗ್ಗಣಗಳಿಂದ ಫಸಲನ್ನು ರಕ್ಷಿಸಲು ನೆರವಾಗುವಂತೆ ನಾಗ ಅಥವಾ ಸರ್ಪಗಳ ಪೂಜೆ ಆರಂಭವಾಗಿರುವ ಸಾಧ್ಯತೆಗಳಿವೆ. ವಿಷ್ಣುವು ಹಾವಿನ ಹಾಸಿಗೆಯಲ್ಲಿ ಶಯನಿಸಿರುವುದರಿಂದ (ಮಲಗಿರುವುದರಿಂದ) ಆತ ಅನಂತಶಾಯಿ, ಅನಂತಶಯನ ಎಂದು ಕರೆಯುತ್ತೇವೆ. ಆಗಮಗಳಲ್ಲಿ ನಾಗಗಳು ಎಂಟುದೇವತೆಗಳ ಜೊತೆಯಲ್ಲಿರುವಂತೆ ಉಲ್ಲೇಖಿಸಿದೆ. ನಾಗನನ್ನು ಶಿವನ ಕೊರಳಲ್ಲಿ ಮೈಮೇಲಿನ ಇತರ ಭಾಗಗಳಲ್ಲಿ ಕಾಣಬಹುದು. ಉದಾಹರಣೆಗೆ ಭೈರವ ಶಿಲ್ಪ, ಇದಲ್ಲದೆ ಹಲವು ದೇವಾಲಯದ ಭಿತ್ತಿಯಲ್ಲಿ, ಭುವನೇಶ್ವರಿಯಲ್ಲಿ ಕಾಳಿಂಗ ಮರ್ಧನ ಶಿಲ್ಪಗಳಿವೆ. ಉದಾಹರಣೆ ಗುಂಡ್ಲುಪೇಟೆಯ ಪರವಾಸುದೇವಾಲಯ, ತೆರಕಣಾಂಬಿಯ ಶೈವದೇವಾಲಯಗಳು ಇನ್ನಿತರ ದೇವಾಲಯಗಳ ಕಂಬಗಳಲ್ಲಿ ನಾಗರ ಶಿಲ್ಪವನ್ನು ಕಾಣಬಹುದು. ನಾಗಬಂಧವನ್ನು ಹಲವು ದೇವಾಲಯಗಳ ಕಂಬಗಳಲ್ಲಿಯೂ ಕಾಣಬಹುದು. ಹುತ್ತ– ಪೂಜಿಸುವ ಪದ್ಧತಿಯೂ ನಾಗಾರಾಧನೆಯ ಹಿನ್ನೆಲೆಯಲ್ಲಿಯೇ ಬಂದಿರುವಂತಹ ಒಂದು ಸಂಪ್ರದಾಯ ಹಾಗೂ ಪರಂಪರೆಯಾಗಿದೆ. ನಾಗಾರಾಧನೆ ಜೈನ ಧರ್ಮದಲ್ಲಿಯೂ ಕಂಡುಬರುತ್ತದೆ. ಪಾರ್ಶ್ವನಾಥನ ತಲೆಯ ಮೇಲೆ ಐದು, ಏಳು, ಒಂಭತ್ತು ಹೆಡೆಗಳ ಸರ್ಪ ಸರ್ವೇ ಸಾಮಾನ್ಯವಾಗಿ ಇರುವಂತೆ ಶಿಲ್ಪಿಸಲಾಗಿರುತ್ತದೆ. ಉದಾಹರಣೆಗೆ ಕೆಲಸೂರಿನ ಜೈನ ಬಸದಿಯಲ್ಲಿ ಕಾಣುತ್ತೇವೆ. ಅಲ್ಲದೆ ಆಗಮಶಾಸ್ತ್ರದಲ್ಲಿಯೂ ಈ ವಿಚಾರ ತಿಳಿದುಬರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನ ಸಾಕಷ್ಟು ಊರುಗಳಲ್ಲಿ ಬಿಡಿ ನಾಗಶಿಲ್ಪಗಳಿವೆ. ಕೆಲವೊಂದು ಶಿಲ್ಪಗಳು ಪ್ರಾಚೀನ ಕಾಲಕ್ಕೆ ಸೇರಿವೆ. ಮತ್ತೆ ಕೆಲವು ಇತ್ತೀಚಿನ ಕಾಲದ ನಾಗದೇವತೆ ಶಿಲ್ಪಗಳಿವೆ.

ಹಿಂದಿನ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳಲ್ಲಿ ಶಿಲ್ಪಿಸಿರುವ ನಾಗಶಿಲ್ಪಗಳು ನಾಗಬಂಧಗಳೇ ನಾಗಶಿಲ್ಪದ ಪ್ರಾಧಾನ್ಯತೆಗೆ ಸಾಕ್ಷಿಗಳಾಗಿವೆ. ತದನಂತರ ಕಾಲದಲ್ಲಿ ಇದಕ್ಕೆ ಗಂಡು ಮತ್ತು ಹೆಣ್ಣಿನ ರೂಪವನ್ನು ಕೊಟ್ಟು ನಾಗ, ನಾಗಿಣಿ ಎಂದು ಪೂಜಿಸತೊಡಗಿದರು. ಆಯಾ ಊರಿನಲ್ಲಿ ನಾಗ-ನಾಗಿಣಿಯ ಬಿಡಿಶಿಲ್ಪವನ್ನು ಗುರುತಿಸಬಹುದು. ಇತ್ತೀಚಿನ ಕಾಲದಲ್ಲಿ ನಾಗದೇವತೆಗಾಗಿ ಪ್ರತ್ಯೇಕವಾದ ಸುಬ್ರಹ್ಮಣ್ಯಸ್ವಾಮಿ ದೇವಾಲಯವನ್ನು ನಿರ್ಮಿಸುವುದು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಾಣಬರುತ್ತದೆ.

ನಾಗಪಂಚಮಿಯನ್ನು ಈ ಭಾಗದ ಪ್ರತಿಯೊಂದು ಊರಿನಲ್ಲಿಯೂ ಆಚರಿಸುವ ಪರಿಪಾಠ ಇದೆ. ನಾಗಪಂಚಮಿಯು ಶ್ರಾವಣ ಮಾಸದಲ್ಲಿ ಶುಕ್ಲಪಕ್ಷದ ನಾಲ್ಕನೇ ದಿನ ಬರುತ್ತದೆ. ನಾಲ್ಕನೇ ದಿನವನ್ನು ನಾಗಚೌತಿ ಎಂತಲೂ, ಐದನೇ ದಿನವನ್ನು ನಾಗಪಂಚಮೀ ಎಂತಲೂ ಕರೆಯುತ್ತಾರೆ. ನಾಗರಪಂಚಮಿ ದಿನ ಹಿಂದೂಗಳು ಹಾವಿನ ಹುತ್ತವನ್ನು ಪೂಜಿಸುವುದು, ಹಾವಿಗೆ ಹಾಲೆರೆಯುವುದು, ಪ್ರಾಚೀನ ಕಾಲದಿಂದಲೂ ನಿರಂತರವಾಗಿ ನಡೆದುಬಂದಿದೆ. ಅಲ್ಲದೆ ಇದು ಒಂದು ಧಾರ್ಮಿಕ ಪದ್ಧತಿಯಾಗಿದೆ. ಇದನ್ನು ಭಾರತದಾದ್ಯಂತ ಆಚರಿಸುವ ಒಂದು ಹಬ್ಬವೂ ಹೌದು. ಹಿಂದೂ ಹಬ್ಬಗಳಲ್ಲಿ ನಾಗರಪಂಚಮಿಯು ಒಂದು ಸರ್ಪವನ್ನು ಪೂಜಿಸುವುದೇ ಹಬ್ಬದ ವಿಶೇಷವಾಗಿದೆ. ಹಾಗೆಯೇ ಷಷ್ಠಿ ಹಬ್ಬದ ಸಮಯದಲ್ಲೂ ತಾಲ್ಲೂಕಿನ ಜನರು ಹುತ್ತಕ್ಕೆ ಹಾಲು, ಮೊಟ್ಟೆ, ವಡ್ಡೆ, ಬೆಣ್ಣೆಗಳನ್ನು ಹಾಕಿ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಪೂರ್ವದಲ್ಲಿ ಸರ್ಪಗಳು ತುಂಬಾ ಕ್ರೂರವಾಗಿ ನಡೆದುಕೊಳ್ಳುತ್ತಿದ್ದವು. ಅವು ಕೂಡ ಕಂಡವರನ್ನು ಕಚ್ಚಿ ಕೊಲ್ಲುತ್ತಿದ್ದವು. ಇದರಿಂದ ಕೋಪಗೊಂಡಿದ್ದ ಬ್ರಹ್ಮನು ನೀವು ನಿಮ್ಮ ತಾಯಿಯಾದ ಕದ್ರುವಿನ ಶಾಪದಿಂದಲೇ ನಾಶ ಹೊಂದುವಿರಿ ಎಂದು ಶಾಪ ಹಾಕಿದ್ದ, ಇದರಿಂದ ಪಶ್ಚಾತ್ತಾಪಗೊಂಡ ಸರ್ಪಗಳು ತಮ್ಮನ್ನು ಕ್ಷಮಿಸು ತಮ್ಮನ್ನು ಶಾಪದಿಂದ ಮುಕ್ತರನ್ನಾಗಿ ಮಾಡು ತಮ್ಮ ವಂಶವನ್ನು ರಕ್ಷಿಸು ಎಂದು ಬ್ರಹ್ಮದೇವನಲ್ಲಿ ಬೇಡಿಕೊಂಡರು. ಆಗ ಬ್ರಹ್ಮದೇವನು ಇನ್ನೂ ಮುಂದೆ ನೀವು ಆಯುಷ್ಯ ತೀರಿದವರನ್ನು ಮಾತ್ರ ಕಚ್ಚಬಹುದು. ಬೇಕು ಬೇಕಾದವರನ್ನು ಕಚ್ಚಬಾರದು ಎಂದು ಎಚ್ಚರಿಸಿದ ಬ್ರಹ್ಮದೇವನ ಅಭಯವಚನದಿಂದ ಸರ್ಪಗಳಿಗೆ ಸಂತೋಷವಾಯಿತು. ಈ ಘಟನೆ ನಡೆದದ್ದು ಪಂಚಮಿಯ ದಿನವಾದ್ದುದರಿಂದ ಆ ದಿನವನ್ನು ನಾಗಪಂಚಮಿ ಎಂದು ಕರೆದು ನಾಗಪೂಜೆಯನ್ನು ಆಚರಣೆಗೆ ತಂದರು. ಉತ್ತರ ಕರ್ನಾಟಕದವರು ಈ ಹಬವನ್ನು ತುಂಬಾ ವೈಬಾವದಿಂದ ಮದುವೆಯಾದ ಹೆಣ್ಣು ಮಕ್ಕಳನ್ನು, ಅಕ್ಕ, ತಂಗಿಯರು, ಅಣ್ಣ ತಮ್ಮಂದಿರಿಗೆ ಬೆನ್ನು ತೊಳೆದು ಅವರಿಂದ ಉಡುಗೊರೆಗಳನ್ನು ಸ್ವೀಕರಿಸುವರು.

ಭಾರತ ದೇಶದಲ್ಲಿ ನಾಗರ ಪೂಜೆಯು ಸಂಪ್ರದಾಯ ಬಹುಪ್ರಾಚೀನವಾಗಿದ್ದು, ನಾಗರ ಹಾವಿನ ಕಚ್ಚುವಿಕೆಯಿಂದ ಅದರಲ್ಲೂ ವಿಶೇಷವಾಗಿ ಮಳೆಗಾಲದಲ್ಲಿ ಉಂಟಾಗುವ ಪ್ರಾಣಾಪಯವೇ ನಾಗಪಂಚಮಿಯ ಆಚರಣೆಯ ವ್ಯಾಪಕತ್ವಕ್ಕೆ ಮೂಲಕಾರಣವಿರಬೇಕು. ಆ ದಿನವು ಅಕ್ಷಯ ತೃತೀಯಾ ದಿನದಷ್ಟೇ ಪವಿತ್ರವಾದುದೆಂದು ನಂಬಲಾಗಿದೆ. ಪೌರಾಣಿಕ ನಾಗರಗಳಾದ ವಸುಕಿ, ತಕ್ಷಕ, ಕಾಳಿಯ, ಮಣಿಭದ್ರ, ಧೃತರಾಷ್ಟ್ರ, ಕಾರ್ಕೋಟಕ, ಧನಂಜಯ ಇವರ ಪ್ರತಿಮೆಗಳಿಗೆ ಕ್ಷೀರಾಭಿಷೇಕ ಮಾಡಿದವರ ನಾಗರ ವಿಷದಿಂದ ಪ್ರಾಣಹಾನಿಯಾಗುವ ಭಯ ನೀಗುತ್ತದೆ ಎಂಬ ನಂಬಿಕೆಯಿಂದ ಮನೆಯ ಮುಖ್ಯದ್ವಾರದ ಎರಡು ಕಡೆ ಗೋಮಯದಿಂದ ನಾಗರ ಚಿತ್ರಗಳನ್ನು ಬರೆದು ಪೂಜಿಸುವುದು ಉಂಟು. ಈ ಚಿತ್ರಗಳನ್ನು ಹಲಗೆಗಳ ಮೇಲೆ ರಕ್ತಚಂದನದಿಂದ ರಚಿಸಿ ಪೂಜಿಸುವ ವಾಡಿಕೆ. ಅಭಿಷೇಕ ಮಾಡುವ ನಾಗರ ಪ್ರತಿಮೆಗಳನ್ನು ಲೋಹದಿಂದ ಅಥವಾ ಜೇಡಿಮಣ್ಣಿನಿಂದ ಮಾಡಬಹುದು. ಪೂಜೆಯ ಅಂಗವಾಗಿ ಕರವೀರ ಪುಷ್ಪಗಳ ಗಂಧದ ಭಿತ್ತಿಗಳ ಬಳಕೆ, ಪಾಯಸದ ನೈವೇದ್ಯಗಳು ಇವೆ. ಕೆಲವು ಕಡೆ ಹವಾಡಿಗರನ್ನು ಕರೆಸಿ ಅವರ ಹಾವುಗಳಿಗೆ ಹಾಲು ಉಣಿಸುವುದು ಸಾಮಾನ್ಯ ಆಚರಣೆಯಾಗಿದೆ. ಮಾರ್ಗಶಿರ ಶುಕ್ಲಪಂಚಮಿಯಂದು ಬರುವ ಶ್ರೀ ಪಂಚಮಿ ವ್ರತ ಅಥವಾ ಲಕ್ಷ್ಮೀ ಪೂಜೆಗಾಗಿ ಮೀಸಲು ದೇವಿಯಲೋಹ ಅಥವಾ ಮೃತ್ತಿಕಾಮೂರ್ತಿಗೆ ಚಿತ್ರಪಟಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ಈ ವ್ರತಾಚರಣೆಯಲ್ಲಿ ಮುತ್ತೈದೆಯರಿಗೆ ಮರ್ಯಾದೆ, ಸತ್ಪಾತ್ರರಿಗೆ ಗೋದಾನ ಇವು ಪ್ರಶಸ್ತ್ಯವಾದ ಕಾರ್ಯಗಳು, ವರ್ಷದ ಪ್ರತಿ ತಿಂಗಳು ಶುಕ್ಲ ಪಂಚಮಿಯಂದು ಇದನ್ನು ಇಡೀ ವರ್ಷ ಆಚರಿಸಬಹುದು. ಚತುರ್ವರ್ಣದವರೆಲ್ಲಾ ಈ ವ್ರತವನ್ನಾಚರಿಸಬಹುದು. ಸಪ್ತ ಮಹರ್ಷಿಗಳ ಮೂರ್ತಿಗಳಿಗೆ ಪೂಜೆ ಸಲ್ಲಿಸುವುದರೊಂದಿಗೆ ಸಸ್ಯಾಹಾರ, ಬ್ರಹ್ಮಚರ್ಯ ನಿಷ್ಠೆ ಈ ವ್ರತಾಚರಣೆಯಲ್ಲಿ ಅತಿಮುಖ್ಯ. ವ್ರತದ ಉದ್ದೇಶ ಪಾಪ ಹಾಗೂ ಸಂಕಷ್ಟಗಳ ನಿವಾರಣೆ ಸುಕೃತದ ಪ್ರಾಪ್ತಿ ಮಹಿಳೆಯರಿಗೆ ಈ ವ್ರತಾಚಣೆಯಿಂದ ದೇಹದಾರ್ಢ್ಯ ಸೌಂದರ್ಯ, ನೆಮ್ಮದಿ, ಉತ್ತಮ ಸಂತಾನ ಲಭಿಸುವುದೆಂಬ ಭರವಸೆ ಇಟ್ಟುಕೊಂಡಿರುವವರು ರೂಢಿಸಂಪ್ರದಾಯವಾಗಿದೆ. ಸಪ್ತರ್ಷಿಗಳ ಮೂರ್ತಿಗಳ ಜೊತೆಗೆ ಸಪ್ತಕಲಶಗಳನ್ನು ಪೂಜಿಸುತ್ತಾರೆ. ನಂತರ ಬ್ರಾಹ್ಮಣರಿಗೆ ದಾನ ನೀಡುತ್ತಾರೆ. ಋಷಿ ಪಂಚಮಿ ವ್ರತದ ಆಚರಣೆ ಸಪ್ತರ್ಷಿಗಳ ಪೂಜೆಗಾಗಿ ಕಶ್ಯಪ, ಅತ್ರಿ, ಭರದ್ವಜ, ವಿಶ್ವಾಮಿತ್ರ, ಗೋತಮ, ಜಮದಗ್ನಿ, ವಶಿಷ್ಟ ಇವರೇ ಸಪ್ತರ್ಷಿಗಳು ಹೀಗೆ ವೇದಮಂತ್ರಗಳ ಮೂಲಕ ಆಧ್ಯಾತ್ಮಿಕ ಜ್ಞಾನವನ್ನು ನೀಡಿದ ಅವರಿಗೆ ನಾವು ಚಿರಋಣಿಗಳು, ಹಿಂದೂಗಳು ನಾಗಗಳನ್ನು ದೇವತೆಗಳೆಂದು ಭಾವಿಸಿ ಅದಕ್ಕೆ ಪೂಜ್ಯ ಸ್ಥಾನ ನೀಡಿದ್ದಾರೆ. ಆದುದರಿಂದ ಆ ದಿನಗಳಲ್ಲಿ ಜನ ಕಲ್ಲು, ತಾಮ್ರ ಬೆಳ್ಳಿ, ಪಂಚಲೋಹ, ಮುಂತಾದ ಧಾತುಗಳಂದ ಮಾಡಿದ ಸರ್ಪಗಳನ್ನು

ಭಕ್ತಿಯಿಂದ ಪೂಜಿಸುತ್ತಾರೆ. ನಿಜವಾದ ಸರ್ಪಗಳನ್ನು ತರಿಸಿ ಪೂಜಿಸುವವರೂ ಇದ್ದಾರೆ. ಇನ್ನೂ ಕೆಲವರು ಹಾವಿನ ಹುತ್ತಗಳಿರುವ ಸ್ಥಳಕ್ಕೆ ಹೋಗಿ ಪೂಜಿಸಿ ಬರುತ್ತಾರೆ.

ಚೌತಿಯ ದಿನ ಮಂಗಳಸ್ನಾನ ಮಾಡುತ್ತಾರೆ. ಬೆಳ್ಳಿ ತಾಮ್ರ ಅಥವಾ ಪಂಚಲೋಹದ ನಾಗಸರ್ಪಗಳನ್ನು ದೇವರ ಗೂಡಲ್ಲಿ ಇಟ್ಟು ಅವನ್ನು ನೀರು ಮತ್ತು ಹಾಲಿನಿಂದ ಅಭಿಷೇಕ ಮಾಡುತ್ತಾರೆ. ಅನಂತರ ಭಕ್ತಿಯಿಂದ ಪೂಜಿಸುತ್ತಾರೆ. ಇದು ಪ್ರತಿವರ್ಷ ನಡೆಯುತ್ತದೆ. ಪಾರ್ವತಿ ಬೆಟ್ಟದಲ್ಲಿ ನಾಗಸರ್ಪ ಕಲ್ಲು ಇದೆ. ವೀರದೇವನಪುರದಲ್ಲಿ ನಾಗದೇವತ ಶಿಲ್ಪ ಇದೆ. ಪಂಜನಹಳ್ಳಿ ಸುಮಾರು ಮೂರು ನಾಗದೇವತೆ ಶಿಲ್ಪಗಳಿವೆ. ಗುಂಡ್ಲುಪೇಟೆಯ ಶ್ರೀರಾಮನಾಥ ದೇವಾಲಯದಲ್ಲಿ ನಾಗಶಿಲ್ಪಗಳಿವೆ. ಊರಿನ ಒಳಗೆ ಇರುವ ರಾಮೇಶ್ವರ ದೇವಾಲಯದಲ್ಲಿ ಶಿಲ್ಪ ಇದೆ. ಬೊಮ್ಮಲಾಪುರದ ಬೊಮ್ಮದೇವರಗುಡಿಯ ಪರಿಸರದಲ್ಲಿ ನಾಗರಶಿಲ್ಪಗಳಿವೆ. ಹೊನ್ನೇಗೌಡನಹಳ್ಳಿಯಲ್ಲಿ ನಾಗದೇವತೆ ಆರಾಧನೆ ಇದೆ. ಶಿವಪುರದಲ್ಲಿ ಈಶ್ವರ ದೇವಾಲಯದ ನಾಲ್ಕು ಕಂಬಗಳಲ್ಲಿ ನೆಲೆಯಲ್ಲಿಯೂ ಸರ್ಪಕಲ್ಲುಗಳಿವೆ. ಕಣ್ಣೇಗಾಲದಲ್ಲಿ ಎರಡು ಸರ್ಪಕಲ್ಲುಗಳಿವೆ. ಇವುಗಳಲ್ಲದೆ ಇನ್ನೂ ಹಲವಾರು ಗ್ರಾಮಗಳಲ್ಲಿ ನಾಗದೇವರ ಆರಾಧನೆಯು ಕಂಡುಬರುತ್ತದೆ. (ಚಿತ್ರಸಂಖ್ಯೆ-117)

## ೬.೩. ಸೂರ್ಯಗ್ರಹಣ

ತಗ್ಗಲೂರು ಶಾಸನದ ಪ್ರಕಾರ ಹೊಯ್ಸಳ ದೊರೆಯಾದ ವೀರಬಲ್ಲಾಳ ದೇವನು ಆಳ್ವಿಕೆ ಮಾಡುತ್ತಿದ್ದ ಸಂದರ್ಭದಲ್ಲಿ ಅಂದರೆ ಶಕವರ್ಷ ೧೨೪೮ನೆಯ ದುಂದುಭಿ ಸಂವತ್ಸರದ ಮಾರ್ಗಶಿರ ಬ ೩೦ ಸೋಮವಾರ ದಿನದಂದು ಸೂರ್ಯಗ್ರಹಣವಾದ ಪುಣ್ಯ ಕಾಲದಲ್ಲೂ ಧರ್ಮಚಿತ್ತರಾಗಿ ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ.[1]

ಸೋಮಹಳ್ಳಿ ಗ್ರಾಮದ ಬ್ರಾಹ್ಮಣರ ವೃತ್ತಿಯ ತಾಮ್ರಶಾಸನದಲ್ಲಿ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೩೪೪ನೇ ಸಂದ ವರ್ತಮಾನವಾಗಿ ನಡೆದು ಬರುವ ಶೋಭಕೃತುಸಂವತ್ಸರದ ಶ್ರಾವಣ ಶು 15 ಸೋಮವಾರ ಸೋಮಗ್ರಹಣ ಪುಣ್ಯಕಾಲದಲ್ಲೂ ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ.[2] ಲಕ್ಕೂರು ಗ್ರಾಮದ ಚಾವಡಿಯ ಮುಂದೆ ನಿಂತಿರುವ ಶಾಸನವು ಕ್ರಿ.ಶ.೧೬೬೫ಕ್ಕೆ ಸೇರಿದ್ದು ೩೪ ಸಾಲುಗಳಿರುವ ಶಾಸನವಾಗಿದೆ. ಇದೊಂದು ಧಾರ್ಮಿಕ ಶಾಸನವಾಗಿದ್ದು, ಪೌಷೇ ದೇಶೇ ಶನಿಗ್ರಹೇ ಎಂಬುದಾಗಿ ತಿಳಿಸಲಾಗಿದೆ. ಆದಕಾರಣ ಶನಿಗ್ರಹಣವನ್ನು ಇಲ್ಲಿ ತಿಳಿಸಲಾಗಿದೆ.[3]

ಕೋಡಿಹಳ್ಳಿ ಮಾರಿಗುಡಿ ಬಳಿ ಬಿದ್ದಿರುವ ಕಲ್ಲಿನಲ್ಲಿ ಸುಮಾರು 22 ಸಾಲುಗಳಿರುವ ಶಾಸನವಾಗಿದ್ದು, ಈ ಶಾಸನವನ್ನು ಶಕವರುಷ 1444, ಅಂದರೆ ಕ್ರಿ.ಶ.1521 ಡಿಸೆಂಬರ್ ಶನಿವಾರ 28 ರಂದು ಶಾಸನವನ್ನು ಬರೆಸಲಾಗಿದೆ. ಇದೊಂದು ಧಾರ್ಮಿಕ ಹಿನ್ನೆಲೆಯನ್ನು ಹೊಂದಿರುವ ಶಾಸನವಾಗಿದ್ದು, ಸೂರ್ಯಗ್ರಹಣ ಪುಣ್ಯ ಕಾಲದಲ್ಲೂ ಶ್ರೀ ಮನ್ಮಹಾದೇವದೇವೋತ್ತಮ ಶ್ರೀ ಗುರುಮೂರ್ತಿ ತ್ರಿಯಂಬಕದೇವನ ಅಮೃತಪಡಿ ಅಂಗ, ರಂಗ, ಭೋಗ ವೈಭವದಿಂದ ನಡೆಯಿತು ಎಂಬುದು ತಿಳಿದುಬರುತ್ತದೆ.[4]

ಒಡ್ಡಗೆರೆ ದಕ್ಷಿಣ ದಿಕ್ಕಿನ ಊರ ಬಾಗಿಲ ಬಳಿ ಸುಮಾರು 7 ಸಾಲು ಇರುವ ಶಾಸನವು ಚಂದ್ರಾರ್ಕ ಪಾಲಿಸಿ ಎಂಬುದಾಗಿ ತಿಳಿದುಬಂದಿರುವುದರಿಂದ ಇದು ಚಂದ್ರನ ಸಾಕ್ಷಿಯಾಗಿ ಬರೆಸಿರಬೇಕು.[5] ಇದೇ ಊರಿನ ದಕ್ಷಿಣ ದಿಕ್ಕಿನ ಊರಬಾಗಿಲ ಬಳಿ ಇರುವ ಇನ್ನೊಂದು ಶಾಸನವು 12 ಸಾಲುಗಳಿಂದ ಕೂಡಿದ್ದು, ಆ ಚಂದ್ರಾರ್ಕವಾಗಿ ಕೊಟ್ಟ ಶಿಲಾಶಾಸನ ಎಂದು ತಿಳಿದುಬರುತ್ತದೆ. ಇದು ಸಹ ಚಂದ್ರನ ಸಾಕ್ಷಿಯಾಗಿ ವಿಚಾರವನ್ನು ವ್ಯಕ್ತಪಡಿಸುತ್ತದೆ.[6]

# ಅಡಿಟಿಪ್ಪಣಿಗಳು

1. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕಿನ ಶಾಸನ ಸಂಖ್ಯೆ–41.
2. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕಿನ ಶಾಸನ ಸಂಖ್ಯೆ–78.
3. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕಿನ ಶಾಸನ ಸಂಖ್ಯೆ–112.
4. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕಿನ ಶಾಸನ ಸಂಖ್ಯೆ–156.
5. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕಿನ ಶಾಸನ ಸಂಖ್ಯೆ–180.
6. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕಿನ ಶಾಸನ ಸಂಖ್ಯೆ–181.

## 6.4. ಕುಂತಿಪೂಜೆ

ಕುಂತಿಪೂಜೆಯು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿದೆ. ಪಾಂಡವರು ಈ ಪ್ರದೇಶದಲ್ಲಿ ನೆಲೆಸಿದ್ದರೆಂಬ ಕಾರಣಕ್ಕೆ ಈ ಭಾಗದ ರೈತಾಪಿ ಜನರು ಕಾರ್ತಿಕಮಾಸದ ದೀಪಾವಳಿಯಿಂದ ಆರಂಭವಾಗಿ ಅನುಕೂಲಕ್ಕೆ ತಕ್ಕಂತೆ ಕಾರ್ತಿಕಮಾಸದ ಕೊನೆಯವರೆವಿಗೂ ತಮ್ಮ ಕೈಲಾದಷ್ಟು ದಿನಗಳ ಕಾಲ ಕುಂತಿ ಪೂಜೆಯನ್ನು ಮಾಡುತ್ತಾರೆ. ಗುಂಡುಕಲ್ಲೊಂದನ್ನು ಕೊಂತಿ ಎಂದು ಪ್ರತಿಷ್ಠಾಪಿಸಿ, ಅದಕ್ಕೆ ಪ್ರತಿದಿನ ಸಂಜೆಯ ಸಮಯಕ್ಕೆ ಪೂಜೆ ಮಾಡುತ್ತಾರೆ. ಸಾಮಾನ್ಯವಾಗಿ ಕಡೆಯ ಕಾರ್ತಿಕ ಸೋಮವಾರ ಅಥವಾ ಸುಬ್ರಹ್ಮಣ್ಯ ಷಷ್ಠಿಯ ದಿವಸ ಕೊಂತಿಯನ್ನು ವಿಸರ್ಜಿಸುತ್ತಾರೆ. ಈ ಸಂದರ್ಭದಲ್ಲಿ ಹೆಂಗಸರು ಹಾಡು ಹೇಳುವುದು, ಹುಡುಗರು ಕೋಲಾಟ ಆಡುವುದು ಹಾಗು ವಿವಿಧ ವೇಷಗಳನ್ನು ಹಾಕಿ ಪ್ರದರ್ಶಿಸುವುದು ಕುಂತಿ ಪೂಜೆಯು ಕತ್ತಲೆಯನ್ನು ತೊರೆದು ಹೊಸ ಬದುಕನ್ನು ದಯಪಾಲಿಸುತ್ತದೆ ಎಂಬ ಭಾವನೆಯಿಂದ ಕುಂತಿ ಪೂಜೆಯನ್ನು ಆಚರಿಸುತ್ತಾರೆ. ಇದಲ್ಲದೆ ಆಯಾ ಗ್ರಾಮಗಳಲ್ಲಿ ಗ್ರಾಮದೇವತೆ ಹಬ್ಬವನ್ನು ಆಚರಿಸುವುದು ಕಂಡುಬರುತ್ತದೆ.

ಇದರ ಬೇರು ಮಹಾಭಾರತ ಕಥೆಯಲ್ಲಿ ಅಡಗಿದೆ. ಗಾಂಧಾರಿ ಒಮ್ಮೆ ನೋಂಪಿ ಹಬ್ಬವನ್ನು ಕಡಲೆ ಹಿಟ್ಟಿನಲ್ಲಿ ಆನೆ ಮಾಡಿಸಿ ಅದಕ್ಕೆ ಜೇನುತುಪ್ಪ ತುಂಬಿ ಊರಿನವರೆಲ್ಲಾ ಕರೆದಳು. ಆದರೆ ತನ್ನ ಅಸೂಯೆಯಿಂದಾಗಿ ಕುಂತಿಯನ್ನು ಕರೆಯದ ಕಾರಣ ಕುಂತಿ ತುಂಬ ಸಂಕಟಪಟ್ಟಳು. ಈ ಅಪಮಾನವನ್ನು ಸಹಿಸಲಾರದೆ ಕುಂತಿ ತನ್ನ ಸುಪುತ್ರರೊಡನೆ ಈ ವಿಷಯ ತಿಳಿಸಲಾಗಿ ಸವ್ಯಸಾಚಿಯಾದ ಅರ್ಜುನನು ದೇವಲೋಕಕ್ಕೆ ಬಾಣವನ್ನು ಬಿಟ್ಟು ಅಲ್ಲಿಂದ ಐರಾವತ, ಕಾಮಧೇನು ಕಲ್ಪವೃಕ್ಷ ಮುಂತಾದವುಗಳನ್ನು ಭೂಲೋಕಕ್ಕೆ ತರಿಸಿದನು. ಆಗ ಕುಂತಿದೇವಿ ವಿಜೃಂಭಣೆಯಿಂದ ಹಬ್ಬವನ್ನು ಆಚರಿಸಿದರು. ಕುಂತಿ ಆಚರಿಸಿದ ಈ ಹಬ್ಬವನ್ನು ಮುಂದುವರೆಸುವ ಮೂಲಕ ಕೊಂತಮ್ಮನನ್ನು ಪೂಜಿಸುತ್ತಾರೆ. ಕುಂತಿ ಆದರ್ಶಸತಿ, ಆದರ್ಶತಾಯಿ ಮಿಗಿಲಾಗಿ ಸುಪುತ್ರರನ್ನು ಪಡೆದ ಅದರ್ಶ ತಾರೀಮಣಿ ಇಂತಹ ಆದರ್ಶ ಗುಣಗಳು ತಮಗೂ ಬರಲೆಂದು ಹಳ್ಳಿಯ ಸ್ತ್ರೀಯರು ಕುಂತಿಯನ್ನು ಇಷ್ಟದೇವತೆ ಎಂದು ಭಾವಿಸಿ ಸಾಂಪ್ರದಾಯಿಕವಾಗಿ ಪೂಜಿಸುತ್ತಾ ಬಂದಿದ್ದಾರೆ. ಕೊಂತಿ ಪೂಜೆಯ ಹಿಂದೆ ಕುಂತಿಯ ಇತಿಹಾಸ ಅಡಗಿರುವುದು ನಿಜಸಂಗತಿಯಾಗಿದೆ.

## ೬.೫. ರಾವಳೇಶ್ವರ ಸಂಸ್ಕೃತಿ

ಹಳೇ ಮೈಸೂರು ಸಂಸ್ಥಾನಕ್ಕೆ ಒಳಪಟ್ಟಂತಹ ಪ್ರದೇಶಗಳಾದ ತೊರೆಯನಾಡಿನ ಸಂಸ್ಕೃತಿಯಲ್ಲಿ ಅಂದರೆ ಕಾವೇರಿ ನದಿ ಕಣಿವೆ ತೀರ ಪ್ರದೇಶದಲ್ಲಿ ಗಂಗರ ಮತ್ತು ಚೋಳರ ಕಾಲಕ್ಕೆ ಸೇರಿದ ನೆಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ಚಾಮರಾಜನಗರ ಜಿಲ್ಲೆ, ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ರಾವಳೇಶ್ವರನ ಸಂಸ್ಕೃತಿಯನ್ನು ಪರಂಪರೆಯನ್ನು ಕಾಣಬಹುದಾಗಿದೆ.[1] ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವಿಭಿನ್ನ ರೀತಿಯ ಶಿಲ್ಪಕಲೆಗಳು ಕಂಡುಬರುತ್ತವೆ. ಕ್ರಿ.ಶ.೯-೧೦ನೇ ಶತಮಾನಕ್ಕೆ ಸೇರಿದ ವಿಶೇಷ ಸ್ತ್ರೀ ಶಿಲ್ಪಗಳು, ರಾಜನ ಶಿಲ್ಪಗಳು, ರಾವಳೇಶ್ವರನ ಶಿಲ್ಪಗಳು ಕಂಡುಬರುತ್ತದೆ. ಈ ಶಿಲ್ಪಗಳನ್ನು ಅವಲೋಕಿಸಿದಾಗ ಶಿಲ್ಪ ಇಲ್ಲಿರುವ ರಾಕಸಮ್ಮ, ರಾವಳೇಶ್ವರ ಶಿಲ್ಪಗಳು ವಿಶೇಷತೆಯನ್ನು ಹೊಂದಿರುವ ಶಿಲ್ಪವಾಗಿದೆ. ಚಾಮರಾಜನಗರ ಜಿಲ್ಲೆಯ ಬಹಳಷ್ಟು ಭಾಗಗಳಲ್ಲಿ ರಾವಳೇಶ್ವರ ಶಿಲ್ಪಗಳು ಕಾಣಬರುತ್ತದೆ. ಅದರಲ್ಲೂ ಚಾಮರಾಜನಗರ ಜಿಲ್ಲೆ ಮತ್ತು ತಮಿಳುನಾಡಿನಲ್ಲೂ ಕಾಣಬರುತ್ತದೆ. ಈ ಹಿನ್ನೆಲೆಯಿಂದ ತಮಿಳು ಸಂಸ್ಕೃತಿ ಮತ್ತು ಕರ್ನಾಟಕದ ಆಗ್ನೇಯ ಭಾಗದ ಸಂಸ್ಕೃತಿಯಲ್ಲಿ ಅಂದರೆ ಮಹಿಷಮಂಡಲ ಪ್ರಾಂತ್ಯದಲ್ಲಿ ರಾವಳೇಶ್ವರ ರಾಕಸಮ್ಮನ ಶಿಲ್ಪಗಳು ಕಂಡುಬರುತ್ತವೆ. ಅಲ್ಲದೆ ಆಯಾ ದೇವಾಲಯಗಳು, ದೇವಾಲಯಗಳಿಗೆ ಸಂಬಂಧಿಸಿದಂತೆ ಕುಲಸ್ಥರು ಕಂಡುಬರುತ್ತಾರೆ. ಈ ಹಿನ್ನೆಲೆಯಿಂದ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಂಶೋಧನೆಯನ್ನು ಕ್ರಿ.ಶ.೯-೧೦ನೇ ಶತಮಾನಕ್ಕೆ ಸೇರಿದ ಶಿಲ್ಪಗಳ ಆಧಾರಿತಕ್ಕೆ ಸೇರಿದ ರಾವಳೇಶ್ವರ ಮತ್ತು ರಾಕಸಮ್ಮನ ಬಗ್ಗೆ ಆಚಾರ-ವಿಚಾರಗಳ ಕುರಿತು ಇಲ್ಲಿಯ ಪರಂಪರೆಯನ್ನು ಕುರಿತು ಚರ್ಚಿಸಲಾಗಿದೆ.[2] ಮೇಲೆ ತಿಳಿಸಿರುವಂತೆ ಹಳೇ ಮೈಸೂರು ಸಂಸ್ಥಾನಕ್ಕೆ ಒಳಪಟ್ಟ ಪ್ರದೇಶಗಳಾದ ತೊರೆಯನಾಡಿನ ಅಂದರೆ ಕಾವೇರಿ ಕಣಿವೆ ಪ್ರಾಂತ್ಯಗಳಲ್ಲಿ ತೊರೆಯರು ಕಂಡುಬರುತ್ತಾರೆ. ತೊರೆಯರು ಎಂದರೆ ನಾಯಕ ಜನಾಂಗ ಎಂಬ ಹೆಸರು ಚಾಮರಾಜನಗರ ಜಿಲ್ಲೆಯ ನಾನಾ ಭಾಗಗಳಲ್ಲಿ ಪ್ರಚಲಿತದಲ್ಲಿದೆ. ಇಂತಹ ತೊರೆಯನಾಡಿನ ಸಂಸ್ಕೃತಿಯಲ್ಲಿ ಪ್ರಾಚೀನ ಪರಂಪರೆಯಲ್ಲಿ ತಲಕಾಡಿನ ಗಂಗರ ಕಾಲದಿಂದ ಮತ್ತು ತಂಜಾವೂರಿನ ಚೋಳರ ಕಾಲದಲ್ಲಿ ವಿಶೇಷವಾಗಿ ರಾವಳೇಶ್ವರ ಮತ್ತು ರಾಕಸಮ್ಮನ ಸಂಸ್ಕೃತಿ ಅಲ್ಲದೆ, ಕುಲಸ್ಥರು ಸಹ ಕಂಡುಬರುತ್ತಾರೆ. ಉದಾಹರಣೆಗೆ ಬಹಳಷ್ಟು ಗ್ರಾಮಗಳಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿಲ್ಪಗಳು ಸಹ ಕಂಡುಬರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನ ನಾನಾ ಊರುಗಳಲ್ಲಿ ರಾವಳೇಶ್ವರನ ಶಿಲ್ಪಗಳು ಕಂಡುಬರುತ್ತವೆ ಮತ್ತು ಈ ಸಂಸ್ಕೃತಿಗೆ ಸೇರಿದ ಜನಾಂಗವು ಸಹ ಇದೆ.[3] ಆಲತ್ತೂರಿನಲ್ಲಿ ರಾವಳೇಶ್ವರ (ರಾವಣೇಶ್ವರ)ನ ಶಿಲ್ಪ ಮತ್ತು ಕುದುರೆ ಮೇಲೆ ಕುಳಿತ ರಾಜನ ಶಿಲ್ಪಗಳಿವೆ. ಸೋಮನಹಳ್ಳಿಯಲ್ಲಿ ಒಂದು ಗುಡಿಯಲ್ಲಿ

ರಾವಳೇಶ್ವರ ಶಿಲ್ಪ ಇದೆ. ಹಿರೇಕಾಟಿಯಲ್ಲಿ ಭೈರವ ಶಿಲ್ಪ ಇದೆ. ಕಮರಹಳ್ಳಿಯಲ್ಲಿ ಕುದುರೆ ಮೇಲೆ ಕುಳಿತರಾಜನ ಶಿಲ್ಪ ಇದೆ. ಕೆಲಸೂರು ಗ್ರಾಮದ ಊರಿನ ಹೊರಗೆ ಬೃಹತ್ ಶಿಲಾಗೋರಿಯಲ್ಲಿ ಭೈರವನ ಶಿಲ್ಪ ಇದೆ. ಪಡಗೂರು ಗ್ರಾಮದಲ್ಲಿ ಕುದುರೆ ಮೇಲೆ ಕುಳಿತ ರಾಜನ ಶಿಲ್ಪ ಇದೆ. ಕುಲಗಾಣದಲ್ಲಿ ಕುದುರೆ ಮೇಲೆ ಕುಳಿತ ರಾಜನ ಎರಡು ಶಿಲ್ಪಗಳಿವೆ.

ಸಿಂಗವಾಡಿಯಲ್ಲಿ ಮೂರು ತಲೆಯ ರಾವಳೇಶ್ವರನ ಶಿಲ್ಪ ಇದೆ. ಸೋಮಹಳ್ಳಿಯ ರಾಮಲಿಂಗೇಶ್ವರ ದೇವಾಲಯದ ಪರಿಸರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ರಾಜನ ಶಿಲ್ಪಗಳಿವೆ. ಬಂಡೀಪುರ ಅರಣ್ಯದ ಪರಿಸರದಲ್ಲಿ ಅಂದರೆ ಜಂಗಲ್ ಕ್ಯಾಂಪಸ್‌ನಲ್ಲಿ ಮೂರು ರಾವಳೇಶ್ವರ ಶಿಲ್ಪಗಳಿವೆ. ಈ ಹಿನ್ನೆಲೆಯಿಂದ ಈ ಭಾಗದಲ್ಲಿಯೂ ರಾವಳೇಶ್ವರನ ಸಂಸ್ಕೃತಿ ಪರಂಪರೆಯನ್ನು ಕಾಣಬಹುದಾಗಿದೆ. ರಾವಳೇಶ್ವರ ಶಿಲ್ಪಕ್ಕೆ ನಾಲ್ಕು ಕೈಗಳು ಇರುವುದರಿಂದ ಸಾಮಾನ್ಯವಾಗಿ ದೇವರು ಎಂಬುದಾಗಿ ಚಿತ್ರದ ಮೂಲಕ ಹೋಲಿಕೆ ಮಾಡಲಾಗಿದೆ. ರಾಜ ಪ್ರತ್ಯಕ್ಷ ದೇವತೆ ಎಂದು ಭಾವಿಸಬಹುದಾಗಿದೆ. ಇದರಲ್ಲಿಯೂ ಸಹ ಶಿಲ್ಪ ರಚನೆ ಇದೆ. ರಾವಳೇಶ್ವರನಿಗೆ ಬಲಗೈಯಲ್ಲಿ ಚಕ್ರ ಮೇಲಿನ ಎಡಗೈಯಲ್ಲಿ ಬಿಲ್ಲು, ಕೆಳಗಿನ ಎಡಕೈಯಲ್ಲಿ ಶಾಂತಮುದ್ರೆಯಿಂದ ಕೂಡಿದ ಗದೆ ಇದೆ. ಮತ್ತೊಂದು ಕೈಯಲ್ಲಿ ವೀರರಾಜ ಗಾಂಭೀರ್ಯದಿಂದ ಇಳಿಬಿಟ್ಟ ಖಡ್ಗ ಕೈ ಸೊಂಟದ ಮೇಲ್ಭಾಗದಲ್ಲಿರುತ್ತದೆ. ವೇಷಭೂಷಣಗಳಲ್ಲಿ ರಾಜನಂತೆಯೂ ಇರುತ್ತದೆ. ಪಾದುಕೆ ಧರಿಸಿರುವುದು ಬಲಭಾಗದಲ್ಲಿ ಚಾಮರ ಹಿಡಿದಿರುವುದು ಕಂಡುಬರುತ್ತದೆ. ಪೀಠದಲ್ಲಿ ಹೋರಾಟದ ಟಗರು ಇರುತ್ತವೆ. ಆಯುಧವು ಹಿಡಿದಿರುವ ಸೈನಿಕರು ಸಹ ಇರುತ್ತಾರೆ. ಈ ರೀತಿಯ ಶಿಲ್ಪಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ, ಶಿಲ್ಪ ಬೇರೆ ಬೇರೆ ಸಂದರ್ಭಕ್ಕೆ ತಕ್ಕಂತೆ ಕಥೆಯನ್ನು ಹೇಳಬಹುದು. ಈ ಮಾದರಿಯ ಶಿಲ್ಪಗಳನ್ನು ರಾವಳೇಶ್ವರ ಶಿಲ್ಪವೂ, ರಾವಣೇಶ್ವರನ ಶಿಲ್ಪವೂ, ವೀರಭದ್ರನ ಶಿಲ್ಪವೂ, ಭೈರವನ ಶಿಲ್ಪವೂ, ಕಾಲಭೈರವನೋ ಎಂಬುದನ್ನು ಸೂಕ್ಷ್ಮವಾಗಿ ನೋಡಬೇಕಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ರಾವಳೇಶ್ವರ ರಾಕಸಮ್ಮ, ಶಿಲ್ಪಗಳು ಕಂಡುಬರುತ್ತವೆ. ಅವುಗಳನ್ನು ಚರ್ಚಿಸಲಾಗಿರುತ್ತದೆ.

ಈ ಭಾಗದಲ್ಲಿ ಸಂಶೋಧನಾ ದೃಷ್ಟಿಯಿಂದ ನೋಡಿದಾಗ ರಾವಳೇಶ್ವರ ಅಥವಾ ರಾವಣೇಶ್ವರನ ಸಾಂಸ್ಕೃತಿಕ ನೆಲೆ ಗಂಗರ ಮತ್ತು ಚೋಳ ರಾಜರ ಕಾಲದಲ್ಲಿ ವೈದಿಕ ಸಂಪ್ರದಾಯದಿಂದ ಈ ಶಿಲ್ಪಗಳ ಪ್ರಾಂತೀಯ ಮನೋಭಾವದಿಂದ ಸಂಸ್ಕೃತಿ ಬೆಳೆದಿರುವಂತೆ ಕಾಣುತ್ತದೆ. ರಾವಳೇಶ್ವರನ ಕುಲದವರು ಎಲ್ಲಾ ಜನಾಂಗದಲ್ಲಿಯೂ ಕಂಡುಬರುತ್ತಾರೆ. ಆದಿಕರ್ನಾಟಕ, ಆದಿಜಾಂಬವ, ನಾಯಕ, ಗಂಗಮತಸ್ಥರು, ಕುರುಬಗೌಡರು, ಗಂಗಡಕಾರ ಗೌಡರು, ವೆಳ್ಳಾಳ್‌ಗೌಡರು, ಕುಂಬಾರರು, ನಯನಜ ಕ್ಷತ್ರಿಯರು, ಮಡಿವಾಳರು,

ಲಿಂಗಾಯಿತರು, ಗಾಣಿಗರು, ಈಡಿಗರು, ಉಪ್ಪಾರರು ಮುಂತಾದವರಲ್ಲಿ ಸ್ವಗೋತ್ರದಲ್ಲಿ ಮದುವೆ ನಿಷೇಧ ಮಾಡಿದ್ದು, ರಾವಳನ ಕುಲಪದ್ಧತಿಯು ಕಂಡುಬರುತ್ತದೆ. ರಾವಳೇಶ್ವರನ ನೆಲೆಯಲ್ಲಿನ ಶಿಲ್ಪಗಳನ್ನು ಮೌಖಿಕ ಶಾಸನದಂತೆ ಪರಿಗಣಿಸಿ ಶಿಲ್ಪಕಥಾ ಆಧಾರದ ಮೇಲೆ ಜಾನಪದ ಇತಿಹಾಸವನ್ನು ರಚಿಸಬಹುದು ಎಂದು ಕಲ್ಲಿನ ಶಿಲ್ಪ ಸತ್ಯವನ್ನು ಕಥಾರೂಪದಲ್ಲಿ ಹೇಳುತ್ತವೆ. ಗಂಗರ, ಚೋಳರ ಕಾಲದಲ್ಲಿ ಹಾಗೂ ಹೊಯ್ಸಳರ ರಾಜ ಕ್ಷೇತ್ರಪಾಲಕನೆಂದು, ರಾಜಪ್ರತ್ಯಕ್ಷ ದೇವತಾ ಎಂದು ದೇವತಾ ಸ್ವರೂಪದಲ್ಲಿ ಪೂಜಿಸಿರುವುದಕ್ಕೆ ತಲಕಾಡಿನ ಕೀರ್ತಿ ನಾರಾಯಣ ದೇವಸ್ಥಾನದ ಈಶಾನ್ಯ ದಿಕ್ಕಿನ ಕಂಬದಲ್ಲಿ ಶಾಸನ ಹಾಕಿಸಿರುವುದು ತಿಳಿದುಬರುತ್ತದೆ. ಈ ಹಿನ್ನೆಲೆಯಿಂದ ಚಾಮರಾಜನಗರ ಜಿಲ್ಲೆಯ ನಾನಾ ಊರುಗಳಲ್ಲಿ ರಾವಳೇಶ್ವರ ಶಿಲ್ಪಗಳನ್ನು ಹಾಗೂ ಕುಲದವರನ್ನು ಗುರುತಿಸಬಹುದಾಗಿದೆ. (ಚಿತ್ರಸಂಖ್ಯೆ-118)

## ಅಡಿಟಿಪ್ಪಣಿಗಳು

1. ಡಾ.ಆರ್.ಗೋಪಾಲ್ (ಸಂ) – ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, 2008, ಪು.ಸಂ.453.
2. ಡಾ.ಬಿ.ಬಸವರಾಜ ತಗರಪುರ – ಮೂಗೂರು ಮತ್ತು ತಗರಪುರದ ಸಾಂಸ್ಕೃತಿಕ ಇತಿಹಾಸ, ವೀರಾಜಸಿ ಎಂಟರ್ ಪ್ರೈಸಸ್, ನಂ.845, 6ನೇ ಕ್ರಾಸ್, ರೆಹಮಾನಿಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು, ಪ್ರಕಟಣೆ 2009, ಪು.ಸಂ.102, 103.
3. ಡಾ.ಬಿ.ಬಸವರಾಜು ತಗರಪುರ – ಐತಿಹ್ಯ ದರ್ಶನ, ಸುನಿಲ್ ಪ್ರಕಾಶನ, ನಂ.907, 1ನೇ ಮಹಡಿ, 3ನೇ ಮುಖ್ಯರಸ್ತೆ, ನ್ಯೂಕಾಂತರಾಜ ಅರಸ್ ರಸ್ತೆ, ಕುವೆಂಪುನಗರ, ಮೈಸೂರು, ಪ್ರಕಟಣೆ 2008, ಪು.ಸಂ.128–133

## 6.6. ರಾಕಸಮ್ಮ (ಸಂಸ್ಕೃತಿ) ತೆರಕಣಾಂಬಿ

ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿಯಲ್ಲಿ ರಾಕಸಮ್ಮ ಸಂಸ್ಕೃತಿಗೆ ಪೂರಕವಾಗಿ ಸ್ಥಳೀಯ ಜನಪದ ಹಿನ್ನೆಲೆಯನ್ನು ಹೊಂದಿರುವ ದೇವಾಲಯ ಇದೆ.

ಈ ರಾಕಸಮ್ಮನ ಸಂಸ್ಕೃತಿಗೆ ತನ್ನದೇ ಆದ ಜನಪದ ಇತಿಹಾಸವನ್ನು ಸ್ಥಳೀಯರು ತಿಳಿಸುತ್ತಾರೆ. ರಾಕಸಮ್ಮನನ್ನು ಕುರಿತು ವಿಚಾರ ಮಾಡಿದಾಗ ಈ ರಾಕಸಮ್ಮ ಎಂಬ ಶಕ್ತಿದೇವತೆಯು ಪಾಂಡವಪುರ ತಾಲ್ಲೂಕಿನ ತೊಣ್ಣೂರು ಗ್ರಾಮದಿಂದ ಬಂದಿದ್ದಾಳೆಂದು ತಿಳಿಸುತ್ತಾರೆ. ಪ್ರಾಯಶಃ ಈ ಶಕ್ತಿದೇವತೆ ಕ್ರಿ.ಶ.15ನೆಯ ಶತಮಾನದಲ್ಲಿ ಮೈಸೂರು ಸಂಸ್ಥಾನದಲ್ಲಿ ಐತಿಹಾಸಿಕವಾಗಿ ಬಂದಿರಬೇಕು. ತೊಣ್ಣೂರು ರಾಕಸಮ್ಮನ ಕಥೆಯು ಶಿವನಿಂದ ಸೃಷ್ಠಿಯಾದದ್ದು ಎಂದು ಸ್ಥಳೀಯ ವ್ಯಕ್ತಿಗಳಿಂದ ತಿಳಿದುಬರುತ್ತದೆ.

ಇತಿಹಾಸದ ಸಂದರ್ಭಗಳು ಸೇರಿಸಲ್ಪಟ್ಟಿವೆ ಎಂಬ ಸತ್ಯಾಂಶ ಕಂಡುಬರುತ್ತದೆ. ಪುರಾಣದಂತೆ ಕೈಲಾಸದಲ್ಲಿ ಶಿವಪಾರ್ವತಿಯ ಏಕಾಂತದಲ್ಲಿ ಗೌಪ್ಯವಾಗಿ ಕಥೆಯನ್ನು ಹೇಳಿಕೊಳುತ್ತಿರುವಾಗ ಪ್ರತಿನಿತ್ಯ ಹೂವು ತರುವ ವ್ಯಕ್ತಿ ಬಾಗಿಲಿನ ಬಳಿ ನಿಂತು ಹೊರಗಡೆ ವಿಷಯವನ್ನು ಕಂಡುಕೇಳಿಕೊಳ್ಳುತ್ತಾನೆ. ಈ ವಿಷಯವು ಶಿವನಿಗೆ ಗೊತ್ತಾಗುತ್ತದೆ. ಹೂವು ತರುವವನು ಈ ಗೌಪ್ಯ ವಿಚಾರವನ್ನು ತನ್ನ ಹೆಂಡತಿಗೆ ಹೇಳಿದನು. ಈ ವಿಷಯವು ಪಾರ್ವತಿ ದೇವಿಗೆ ಶಾಪ ಕೊಡುತ್ತಾರೆ. ಈ ಶಾಪಕ್ಕೆ ಭೂಲೋಕದಲ್ಲಿ ನಿಮ್ಮ ನಡವಳಿಕೆಯಿಂದ ನಿಮ್ಮ ಶಾಪ ವಿಮೋಚನೆಯಾಗುತ್ತದೆ ಎಂದು ಶಿವಪಾರ್ವತಿಯರು ಹೇಳಿರುವಂತೆ ಭೂಲೋಕದಲ್ಲಿ ದಾರಾಪುರದಲ್ಲಿ ಮಾರಭೂಪಾಲನೆಂಬ ರಾಜಪಟ್ಟಾ ರಾಣಿ ಬನಂತಾದೇವಿಯ ಗರ್ಭದಲ್ಲಿ ಗಂಡು ಮಗು ಜನಿಸಿ, ಆತನು ಮುಂದೆ ಕರಿಬಂಟ (ರಾಜ) ನೆಂದು ಹೇಳಿಕೊಳ್ಳುತ್ತಾನೆ. ಇತ್ತ ಕಡೆ ಪುಸ್ಪಕನ ಹೆಂಡತಿಯೂ ಶಾಪಗ್ರಸ್ಥಳಾಗಿ ಭೂಲೋಕದಲ್ಲಿ ತೊಂಡನೂರು ಎಂಬ ಗ್ರಾಮದಲ್ಲಿ ಹುಟ್ಟುತ್ತಾಳೆ. ಇವಳೇ ರಾಕ್ಷಸಿಯಾಗಿ, ರಾಕಸಮ್ಮಳಾಗಿ ಮಾನವರನ್ನು ತಿನ್ನುತ್ತಿದ್ದಳು, ತದನಂತರ ದೇಶವ್ಯಾಪ್ತಿ ತಿರುಗಾಡಿ ಅನೇಕ ನೆಲೆಗಳಲ್ಲಿ ನೆಲೆಸಿದ್ದಾಳೆ ಎಂಬುದು ತಿಳಿದುಬರುತ್ತದೆ. ಈ ರೀತಿಯ ರಾಕಸಮ್ಮ ದೇವಾಲಯಗಳು ತಿರುಮಕೂಡಲು ನರಸೀಪುರದ ತಾಲ್ಲೂಕಿನ ಮೂಗೂರು, ಹೆಮ್ಮಿಗೆ, ಕೊಳ್ಳೇಗಾಲ ಮಾಂಬಳ್ಳಿ, ಕಿನಕಹಳ್ಳಿ ಹಾಗೂ ಪ್ರಸ್ತುತ ಗುಂಡ್ಲುಪೇಟೆಯ ತೆರಕಣಾಂಬಿಯಲ್ಲಿಯೂ ಸಹ ಇರುವುದು ತಿಳಿದುಬರುತ್ತದೆ. ಜಾನಪದ ಹಿನ್ನೆಲೆಯಲ್ಲಿ ಶಕ್ತಿ ಪ್ರಧಾನವಾದ ದೇವತೆಗಳಲ್ಲಿ ರಾಕಸಮ್ಮನು ಒಂದು ದೇವತೆಯಾಗಿ ನೆಲೆಸಿದ್ದಾಳೆ. ಈ ಗ್ರಾಮದಲ್ಲಿ ಶಿವರಾತ್ರಿ ಹಬ್ಬದ ಸಂದರ್ಭದಲ್ಲಿ ನಾಯಕರ ಸಮುದಾಯದ ಜನರು ರಾಕಸಮ್ಮ ಹಬ್ಬವನ್ನು ಆಚರಣೆ ಮಾಡುತ್ತಾರೆ. ಮರಿ, ಕೋಳಿ, ಬಲಿ ಕೊಡುವ ಪದ್ಧತಿಯು ಇದೆ.

## 6.7. ತಮಿಳು ಸಂಸ್ಕೃತಿ

ಗುಂಡ್ಲುಪೇಟೆ ತಾಲ್ಲೂಕಿನ ಸಾಕಷ್ಟು ಗ್ರಾಮಗಳಲ್ಲಿಯೂ ತಮಿಳು ಸಂಸ್ಕೃತಿಯ ಪ್ರಭಾವ ಇರುವುದನ್ನು ಕಾಣಬಹುದಾಗಿದೆ. ಏಕೆಂದರೆ ಇದು ತಮಿಳುನಾಡಿಗೆ ಹೊಂದಿಕೊಂಡಿರುವ ಪ್ರದೇಶವಾಗಿದೆ. ಪ್ರಸ್ತುತ ದಿನಗಳಲ್ಲಿಯೂ ಕೂಡ ತಮಿಳರು ಅನೇಕ ವೃತ್ತಿಪರ ಕೆಲಸ ಕಾರ್ಯಗಳಲ್ಲಿ ತೊಡಗಿರುವುದು ತಿಳಿದುಬರುತ್ತದೆ. ಮೊದಲಿಗೆ ಈ ಭಾಗವನ್ನು ತಲಕಾಡಿನ ಗಂಗರ ರಾಜಕೀಯವಾಗಿ ಆಡಳಿತವನ್ನು ನಡೆಸುತ್ತಾರೆ. ಆಡಳಿತ ವ್ಯವಸ್ಥೆಯಲ್ಲಿ ಚೋಳರು ತಮ್ಮದೇ ಆದ ರೀತಿಯಲ್ಲಿ ಮಾರ್ಪಾಡನ್ನು ಮಾಡಿ ಆ ವ್ಯವಸ್ಥೆಯನ್ನು ಕರ್ನಾಟಕದಲ್ಲೇ ಬಳಕೆಗೆ ತಂದುಕೊಂಡರು. ಅಧಿಕಾರಿಗಳ ಹೆಸರುಗಳನ್ನು ತಮಿಳು ಶೈಲಿಯ ಮಾದರಿಯಲ್ಲಿಯೇ ಕರೆದುಕೊಂಡರು.

ಗ್ರಾಮಾಡಳಿತ ಸಭೆ, ಮಹಾಸಭೆ ಇನ್ನೂ ಮೊದಲಾದ ಆಡಳಿತ ವ್ಯವಸ್ಥೆಗಳು ಬಂದವು. ಗ್ರಾಮ ಆಡಳಿತ ವ್ಯವಸ್ಥೆಯಲ್ಲಿ ವಾರಿಯಂಗಳ ರೂಪಿತಗೊಂಡವು. ತಮಿಳು ಭಾಷೆ ಆಡಳಿತ ಭಾಷೆಯಾಗಿತ್ತು. ಬಹುತೇಕ ಶಾಸನಗಳು ಚೋಳರ ಕಾಲದಲ್ಲಿ ತಮಿಳು ಲಿಪಿ ಮತ್ತು ಮಧ್ಯ ಭಾಷೆಯಲ್ಲಿಯೂ ಬರೆಯಲ್ಪಟ್ಟಿವೆ. ಚೋಳರ ಕಾಲದ ಆಡಳಿತ ಮತ್ತು ಸಂಸ್ಕೃತಿ ಪ್ರಭಾವ ಎಷ್ಟರ ಮಟ್ಟಿಗೆ ಪ್ರಭಾವ ಬೀರಿತ್ತೆಂದರೆ ಚೋಳರನ್ನು ಕರ್ನಾಟಕದಿಂದ ಹೊಯ್ಸಳರು ಹೊಡೆದೋಡಿಸಿದ ಮೇಲೂ ಅನೇಕ ಶತಮಾನಗಳವರೆಗೆ ಈ ಪ್ರದೇಶದಲ್ಲಿ ಶಾಸನಗಳನ್ನು ಬರೆಯುವುದಕ್ಕೆ ತಮಿಳು ಲಿಪಿ ಮತ್ತು ಭಾಷೆಯನ್ನು ಜನ ಬಳಸುತ್ತಿದ್ದರು. ಅದೇ ಸಂಸ್ಕೃತಿ ಈಗಲೂ ಸಹ ಮುಂದುವರೆದಿದೆ. ಈ ಪ್ರದೇಶದ ಜನರು ಕನ್ನಡದಷ್ಟೇ ಸುಲಭವಾಗಿ ತಮಿಳಿನಲ್ಲಿಯೂ ವ್ಯವಹಾರ ಚತುರರಾಗಿದ್ದಾರೆ. ಇಲ್ಲಿ ಗಾಢವಾಗಿ ಚೋಳರು ತಮಿಳು ಸಂಸ್ಕೃತಿಯನ್ನು ತಾವು ಆಕ್ರಮಿಸಿಕೊಂಡಂತಹ ಕರ್ನಾಟಕದ ಆಳ್ವಿಕೆಯ ಆಗ್ನೇಯ ಭಾಗದಲ್ಲಿ ಬೇರೂರುವಂತೆ ಮಾಡಿದರು. ಅದು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿಯೂ ಸಹ ಇದೆ. ಸಮಾಜದ ಎಲ್ಲಾ ಸಾಂಸ್ಕೃತಿಕ ರಾಜಕೀಯ, ಧಾರ್ಮಿಕ, ವಾಣಿಜ್ಯ ವ್ಯವಹಾರಗಳಲ್ಲೂ ತಮಿಳು ಸಂಸ್ಕೃತಿ ಪ್ರಭಾವವಾಗಿ ತನ್ನ ಜಾಲವನ್ನು ಹರಡಿತು. ಇದರಿಂದ ವಾಸ್ತು ಮತ್ತು ಶಿಲ್ಪ ಕಲೆಯಲ್ಲೂ ಸಹ ತಮಿಳು ಸಂಸ್ಕೃತಿಯು ಪ್ರಬಲವಾಗಿ ತನ್ನ ಜಲಾವನ್ನು ಹರಡಿತು.[1]

ಚೋಳ ಸಾರ್ವಭೌಮರು ಈ ಪ್ರದೇಶದ ಮೇಲೆ ನೇರವಾಗಿ ಅಲ್ಲದಿದ್ದರೂ ತಮ್ಮ ನಿಷ್ಠೆ ಅಧಿಕಾರಿಗಳ ಮೂಲಕವಾಗಿ ರಾಜಕೀಯ ಹತೋಟಿಯನ್ನು ಹೊಂದಿದ್ದರು. ಈ ಅಧಿಕಾರಿಗಳು ಅವರ ಪತ್ನಿಯರು, ಸಹೋದ್ಯೋಗಿಗಳು, ಅನುಚರರು ಎಲ್ಲರೂ ಸಹ ಬಹುಪಾಲು ತಮಿಳುನಾಡಿನವರೇ ಆಗಿದ್ದರು. ಈ ತಮಿಳು ಜನಾಂಗದವರು ತಮಿಳು ರಾಜ್ಯದಿಂದ

ಶಿಲ್ಪಿಗಳನ್ನು ಕುಶಲಕರ್ಮಿಗಳನ್ನು ಕರೆತಂದು, ಅವರುಗಳಿಗೆ ಪಾಲನೆ, ಪೋಷಣೆ ನೀಡಿ ಅವರು ಇಲ್ಲಿ ನೆಲೆಸುವಂತೆ ಮಾಡಿ ತಮಿಳುನಾಡು ಶೈಲಿಯಲ್ಲಿ ಮತ್ತು ಸಂಪ್ರದಾಯದಲ್ಲಿ ದೇವಾಲಯಗಳನ್ನು ಕಟ್ಟಿಸಿದರು. ಹೀಗಾಗಿ ಸಂಪೂರ್ಣ ತಮಿಳು ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು, ಧಾರ್ಮಿಕ ವಿಧಿವಿಧಾನಗಳು ಪೂಜೆ ಪುನಸ್ಕಾರಗಳು, ಅನೂಚಾನವಾಗಿ ಕರ್ನಾಟಕದ ಚೋಳಾಕ್ರಮಿತ ಪ್ರದೇಶಗಳಲ್ಲಿ ನಡೆದವು.

ಗಂಗರ ಆಳ್ವಿಕೆಯ ಕೊನೆಯ ಘಟ್ಟದಲ್ಲಿ ತಮಿಳುನಾಡಿನಿಂದ ಬಂದ ಚೋಳರು ಕರ್ನಾಟಕದ ಮೇಲೆ ದಾಳಿ ಮಾಡುವುದರ ಮೂಲಕ ತಮ್ಮ ಅಧಿಪತ್ಯವನ್ನು ಸ್ಥಾಪಿಸಲು ಯತ್ನಿಸಿ ಯಶಸ್ವಿಯಾದರು. ಕ್ರಿ.ಶ.10-11ನೇ ಶತಮಾನದಲ್ಲಿ ತಮಿಳು ಭಾಷಿಕ ಚೋಳರು ಗಂಗರ ಅರಸರುಗಳಾದ ಶಿವಮಾರ ಮತ್ತು ಶ್ರೀಪುರುಷ ಗಂಗರಾಜನ ಕಾಲದ ಕೊನೆಯಲ್ಲಿ ಗಂಗರನ್ನು ಮೂಲೆಗೊತ್ತಿ, ತಲಕಾಡು ಪ್ರದೇಶದಲ್ಲಿ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರು. ಆಗ ಅವರು ಹಾಕಿಸಿದ ಶಾಸನಗಳು ಈ ಭಾಗದಲ್ಲಿವೆ. ಕೆಲವು ತಮಿಳು ಭಾಷೆಯಲ್ಲಿವೆ. ಗಂಗ ಸಾಮ್ರಾಜ್ಯದ ಮೇಲೆ ಚೋಳರು ಆಕ್ರಮಣವೆಸಗಲು ಸೈನ್ಯಕ್ಕೆ ಅಲ್ಲಿ ತೋಟಗಾರಿಕೆ ವೃತ್ತಿಯನ್ನು ಅನುಸರಿಸುತ್ತಿದ್ದ ತಿವುಳ ಮತ್ತು ತಮಿಳು ಜನರನ್ನು ಕರೆತಂದರು ಅನಿರೀಕ್ಷಿತವಾಗಿ ಬಂದ ಚೋಳ ಕೃಷಿಕ ಜನರು ಪ್ರಾಚೀನ ಗಂಗವಾಡಿ ಪ್ರದೇಶದಲ್ಲಿನ ಈ ಭಾಗಗಳಲ್ಲಿ ಕೃಷಿಕ ಜೀವನವನ್ನು ಪ್ರಾರಂಭಿಸಿದರು. ಇಲ್ಲಿಂದ ಪುನಃ ಹಿಂದಿರುಗುವ ಕೆಲಸವನ್ನು ಮಾಡಲಿಲ್ಲ. ತಮಿಳು ಭಾಷಿಕರು, ತೆಂಗು, ಅಡಿಕೆ, ವೀಳ್ಯೆದೆಲೆ, ಹೂ, ತೋಟಗಾರಿಕೆಯ ಮೊದಲಾದ ಕೃಷಿ ಚಟುವಟಿಕೆಗಳನ್ನು ಮಾಡುತ್ತಾ ಇಲ್ಲಿಯೇ ಕನ್ನಡಿಗರ ಜೊತೆಯಲ್ಲಿಯೇ ಜೀವನ ನಡೆಸತೊಡಗಿದರು. ಕಾಲಕ್ರಮೇಣ ಇಲ್ಲಿಯೇ ನೆಲೆಸಿರುವುದು ತಿಳಿದುಬರುತ್ತದೆ.[2]

ಸೀಗೋಡಿ-ಕೊಂಬಿನ ಮಾಳದಲ್ಲಿನ ಕಲ್ಲು ಪ್ರಕಾರ ಕ್ರಿ.ಶ.1244ರ ಶಾಸನದಲ್ಲಿ ತಮಿಳು ಗ್ರಂಥಲಿಪಿ ಇದೆ.[3]

ಬಲ್ಲಹಳ್ಳಿ ವಿಘ್ನೇಶ್ವರ ದೇವಾಲಯದ ದಕ್ಷಿಣಕ್ಕಿರುವ ಶಾಸನದ ಪ್ರಕಾರ ಕ್ರಿ.ಶ.1244-45 ತಮಿಳು ಶಾಸನವಾಗಿದೆ.[4]

ಕೆಲಸೂರು ಬಸದಿಯ ತಳಪಾದಿ ಕಲ್ಲಿನ ಮೇಲೆ ತಮಿಳು ಶಾಸನ ಇದೆ.[5] ಬೆರಟಹಳ್ಳಿ ಊರಿಗೆ ಪೂರ್ವಕ್ಕೆ ಹೊಲವೊಂದರಲ್ಲಿ ಬಿದ್ದಿರುವ ಶಾಸನವು ಕ್ರಿ.ಶ.1188 ರಲ್ಲಿ ಬರೆಸಲಾಗಿದ್ದು, ತಮಿಳು ಲಿಪಿಯನ್ನು ಹೊಂದಿದೆ.[6] ಕಂದಗಾಲ ಗ್ರಾಮದ ಕೆರೆಗೆ ಪಶ್ಚಿಮ ಹೊಲವೊಂದರ ಪಕ್ಕದಲ್ಲಿ ಬಿದ್ದಿರುವ ಕಲ್ಲು ಶಾಸನದಲ್ಲಿ ತಮಿಳು ಲಿಪಿ ಇದೆ.[7] ಅಲ್ಲದೆ ಅದೇ ಊರಿನಲ್ಲಿ ಇನ್ನೊಂದು ಶಾಸನ ಇದೆ. ಇದು ಸಹ ತಮಿಳು ಗ್ರಂಥಲಿಪಿಯನ್ನು ಹೊಂದಿದೆ.[8]

ಬಂಡೀಪುರ ತಾವರೆಕಟ್ಟೆಯ ತೂಬಿನ ಬಳಿ ಬಿದ್ದಿರುವ ಕಲ್ಲು ಶಾಸನವು 1249ರಲ್ಲಿ ಬರೆಸಲಾಗಿದೆ. ಇದು ಸಹ ತಮಿಳು ಗ್ರಂಥಲಿಪಿಯನ್ನು ಹೊಂದಿದೆ.[9] ಅಲ್ಲದೆ ಬಂಡೀಪುರದ ಕಾಡಿನ ಚಿಕ್ಕಾಟಿ ಮುಖದ ವೀರಗುಡಿಯ ಕಲ್ಲಿನಲ್ಲಿ ತಮಿಳು ಗ್ರಂಥಲಿಪಿ ಇದೆ.[10]

ಹಂಗಳದ ವರದರಾಜಸ್ವಾಮಿ ದೇವಾಲಯದ ಉತ್ತರ ದಿಕ್ಕಿನ ಗೋಡೆಯ ತಳಪಾದಿಯಲ್ಲಿ ಕ್ರಿ.ಶ.1275ರ ಕಾಲಕ್ಕೆ ಸೇರಿದ ಹೊಯ್ಸಳ ದೊರೆಯಾದ ಮೂರನೇ ನರಸಿಂಹನ ಆಳ್ವಿಕೆಯ ಕಾಲಕ್ಕೆ ತಮಿಳು ಗ್ರಂಥಲಿಪಿ ಇದೆ.[11]

ಈ ಹಿನ್ನೆಲೆಯಿಂದ ಸುಮಾರು 150 ವರ್ಷಗಳ ಕಾಲ ಚೋಳರು ಈ ಭಾಗದಲ್ಲಿ ಆಳ್ವಿಕೆ ನಡೆಸಿ ಕರ್ನಾಟಕದ ನಾನಾ ಭಾಗಗಳಲ್ಲಿ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ತಮಿಳುನಾಡಿನ ಸಂಸ್ಕೃತಿಯನ್ನು ಹೆಚ್ಚಿಸಿ ರೂಢಿಗೆ ತಂದರು. ಈ ಹಿನ್ನೆಲೆಯಿಂದಲೇ ತಮಿಳು ಶಾಸನಗಳು ಕಾಣಬರುತ್ತವೆ. ಚೋಳರು ಹೊಯ್ಸಳರು ಹಲವು ಪೂರ್ವಾಧಿರಾಯರ ಹಲವು ಶಾಸನಗಳು ತಮಿಳು ಭಾಷೆಯಲ್ಲಿದೆ.

**ಮೊದಲಿಯಾರ್**

ಇವರು ತಮಿಳುನಾಡು ಮೂಲದವರು. ಇವರುಗಳು ನೂರಾರು ವರ್ಷಗಳ ಹಿಂದೆಯೇ ವಲಸೆ ಬಂದಿರುವುದಾಗಿ ತಿಳಿದುಬರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಕ ವರ್ಗದವರಾಗಿದ್ದು, ವೆಲ್ಲಾಳ ಜಾತಿಗೆ ಸೇರಿದವರಾಗಿದ್ದು, ಧರ್ಮಾಚರಣೆಗಳಲ್ಲಿ ಬ್ರಾಹ್ಮಣರು ಪೌರೋಹಿತ್ಯ ವಹಿಸುತ್ತಾರೆ. ಇವರು ಗುಂಡ್ಲುಪೇಟೆ ನಗರದಲ್ಲಿಯೂ ಇದ್ದಾರೆ. ಇವರು ಶೈವ, ವೈಷ್ಣವ ಧರ್ಮಿಯರಿದ್ದು, ಆಂತರಿಕ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಜಾತಿಪಂಚಾಯಿತಿ ಇದ್ದು, ಸತ್ತವರನ್ನು ಸುಡಲಾಗುತ್ತಾದರೂ, ಕೆಲವೊಮ್ಮೆ ಆಸೀನ ಭಂಗಿಯಲ್ಲಿ ಹೂಳಲಾಗುತ್ತದೆ. ಇವರಲ್ಲೂ ಹನ್ನೊಂದನೇ ದಿನ ಹಾಗೂ ವಾರ್ಷಿಕ ಶ್ರಾದ್ಧಗಳನ್ನು ಆಚರಿಸಲಾಗುತ್ತದೆ.

ಇವರು ದೇವಾಲಯಗಳಲ್ಲಿ ಪೂಜೆ ಕಾರ್ಯದಲ್ಲಿ ತೊಡಗುತ್ತಾರೆ. ಉದಾಹರಣೆಗೆ ಹಿಮವದ್ ಗೋಪಾಲಸ್ವಾಮಿ, ಹುಲಗನ ಮುರಡಿಯ ವೆಂಕಟೇಶ್ವರ ದೇವಾಲಯ, ತೆರಕಣಾಂಬಿಯ ವರದರಾಜಸ್ವಾಮಿ ದೇವಾಲಯ, ತೊಂಡವಾಡಿಯ ವರದರಾಜಸ್ವಾಮಿ ದೇವಾಲಯ, ಹಂಗಳದ ವರದರಾಜಸ್ವಾಮಿ ದೇವಾಲಯ, ರಾಘವಪುರದ ಲಕ್ಷ್ಮೀಕಾಂತ ದೇವಾಲಯದಲ್ಲಿ ತಮಿಳು ಭಾಷಿಕರು ಪೂಜೆ ಸಲ್ಲಿಸುವ ಬಗ್ಗೆ ತಿಳಿದುಬರುತ್ತದೆ.

## ಉತ್ಸವ ಮೂರ್ತಿಗಳ ಪರಂಪರೆ

ಚೋಳರ ಕಾಲಕ್ಕೆ ಆಗ್ನೇಯ ಕರ್ನಾಟಕದಲ್ಲಿ ಉತ್ಸವ ಮೂರ್ತಿಗಳ ನಿರ್ಮಾಣ ಸಂಪ್ರದಾಯ ಬಹಳ ಪ್ರಬಲವಾಗಿ ಬೆಳೆದಿತ್ತು. ಮೊದಲಿಗೆ ಉತ್ಸವ ಮೂರ್ತಿಗಳನ್ನು ತಯಾರು ಮಾಡಿ ದೇವಾಲಯದ ಆವರಣದಲ್ಲಿ ಹಾಗೂ ಊರಿನ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯುವ ಸಂಪ್ರದಾಯ ತಮಿಳುನಾಡಿನಲ್ಲಿ ಪ್ರಾರಂಭವಾಗಿ ದಕ್ಷಿಣ ಕರ್ನಾಟಕಕ್ಕೂ ಹರಡಿರುವುದು ತಿಳಿದ ವಿಚಾರವೇ ಆಗಿದೆ. ಚೋಳ ಆಕ್ರಮಿತ ಪ್ರದೇಶಗಳಲ್ಲಿ ಈ ಸಂಪ್ರದಾಯ ಬಹಳ ಸ್ಪಷ್ಟವಾಗಿ ಆಚರಣೆಯಲ್ಲಿತ್ತು. ಹೆಚ್ಚು ಕಡಿಮೆ ಚೋಳರ ಕಾಲದ ದೇವಾಲಯಗಳಲ್ಲಿ ಕಾಣಬಹುದಾಗಿದೆ. ಈ ಹಿನ್ನೆಲೆಯಿಂದ ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳಲ್ಲಿಯೂ ಉತ್ಸವಮೂರ್ತಿಗಳನ್ನು ಗಮನಿಸಬಹುದಾಗಿದೆ. ವಿಜಯ ನಾರಾಯಣ ದೇವಾಲಯ ಗುಂಡ್ಲುಪೇಟೆ ತೆರಕಣಾಂಬಿಯ ವರದರಾಜಸ್ವಾಮಿ ದೇವಾಲಯ, ಹುಲುಗನ ಮುರಡಿ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಉತ್ಸವ ಮೂರ್ತಿಗಳನ್ನು ಅದರ ಬಳಕೆಯನ್ನು ಪ್ರಸ್ತುತ ಕಾಣಬಹುದಾಗಿದೆ. ಇದು ಕೂಡ ತಮಿಳರ ಪ್ರಭಾವ ಎಂದೇ ಹೇಳಬಹುದಾಗಿದೆ.

## ವಾಸ್ತು ಬೆಳವಣಿಗೆಯಲ್ಲಿ ತಮಿಳು ಪ್ರಭಾವ

ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಪಲ್ಲವರ ನಂತರ ಚೋಳರು ಬಲಶಾಲಿಗಳಾಗಿ ಇಡೀ ತಮಿಳುನಾಡಿನ ಮೇಲೆ ಅಧಿಪತ್ಯವನ್ನು ಸ್ಥಾಪಿಸಿ ರಾಜಕೀಯವಾಗಿ ಬೆಳೆದರು. ನಂತರ ಕಾಲಕ್ಕೆ ತಮಿಳುನಾಡಿನ ಮಾದರಿಯಂತೆ ಕರ್ನಾಟಕದಲ್ಲಿಯೂ ದೇವಾಲಯಗಳಲ್ಲಿ ನಿರ್ಮಿಸಿದರು. ಈ ಭಾಗದಲ್ಲಿ ಚೋಳರಿಂದ ಪೋಷಿಸಲ್ಪಟ್ಟ ದ್ರಾವಿಡ ಶೈಲಿ ಮೂಲತಃ ದ್ರಾವಿಡ ಶೈಲಿಯಾದರೂ ಅಲ್ಪಸ್ವಲ್ಪ ಪ್ರಾಂತೀಯ ಪ್ರಭೇದಗಳನ್ನು ಸೇರಿಸಿದರು.

ಚೋಳರ ಕಾಲದ ಹೊತ್ತಿಗೆ ಪ್ರತಿಯೊಂದು ಗ್ರಾಮದಲ್ಲಿ ದೇವಾಲಯ ವಾಸ್ತು ನಿರ್ಮಿಸುವ ಪರಿಪಾಠ ಪ್ರಾರಂಭವಾಯಿತು. ಇದಕ್ಕೆ ಮುಖ್ಯ ಕಾರಣ ವಾಸ್ತು ನಿರ್ಮಾಣದ ತಂತ್ರಜ್ಞಾನದಲ್ಲಿ ಆದಂತಹ ಪ್ರಗತಿಯಾಗಿದೆ. ಆ ಕಾಲದ ಹೊತ್ತಿಗಾಗಲೇ ಪ್ರವರ್ಧಮಾನವಾಗಿ ಬೆಳೆದಿದ್ದ ಹಾಗೂ ಹಿಂದೂ ಪೂಜಾವಿಧಿಗೆ ಎಲ್ಲಾ ರೀತಿಯಲ್ಲಿ ಅನುಕೂಲವಾಗಿದ್ದ ದ್ರಾವಿಡ ದೇವಾಲಯ ಮಾದರಿಯ ಕಲ್ಪನೆ ಸಾಧ್ಯವಾಗಿತ್ತು. ಪ್ರತಿಯೊಬ್ಬರು ಅದರ ಪ್ರಕಾರ ದೇವಾಲಯಗಳನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಾಗಿದ್ದರು. ಚೋಳರ ಆಗಮನದಿಂದಾಗಿ ಈ ಪ್ರಕ್ರಿಯೆಗೆ ಹೆಚ್ಚಿನ ಉತ್ತೇಜನ ದೊರೆಯಿತು.

ಜನರ ಸಮ್ಮತಿಗೆ ಆಗಲೇ ಪಾತ್ರವಾಗಿದ್ದ ದ್ರಾವಿಡ ವಾಸ್ತುಕಲೆಗೆ ಹೆಚ್ಚಿನ ಬದಲಾವಣೆಗಳೇನು ಸಾಧ್ಯವಾಗಿರಲಿಲ್ಲ. ಇದರಿಂದಾಗಿ ಚೋಳರು ತಮ್ಮ ವಾಸ್ತು ಕೃತಿಗಳಿಗೆ ಅನುಗುಣವಾಗುವಂತಹ ರೀತಿಯಲ್ಲಿ ಹಾಗೂ ತಾಂತ್ರಿಕ ಅವಶ್ಯಕತೆಗಳಿಗೆ ಒಪ್ಪುವ ರೀತಿಯಲ್ಲಿ ಪ್ರಚಲಿತ ದ್ರಾವಿಡ ಶೈಲಿಯ ಲಕ್ಷಣಗಳನ್ನು ಬದಲಾಯಿಸದೆ ಸಣ್ಣಪುಟ್ಟ ಬದಲಾವಣೆಗಳನ್ನು ನೋಡಿ ದೇವಾಲಯಗಳನ್ನು ನಿರ್ಮಾಣ ಮಾಡಿದರು ಎಂದು ತಿಳಿದುಬರುತ್ತದೆ.[12] ಪ್ರಸ್ತುತ ಇಂದಿಗೂ ಕೂಡ ದೇವಾಲಯಗಳನ್ನು ನಿರ್ಮಿಸಲು ತಮಿಳುನಾಡಿನವರು ಬಂದು ದೇವಾಲಯಗಳನ್ನು ಈ ಭಾಗದಲ್ಲಿ ನಿರ್ಮಿಸುತ್ತಾರೆ. ಇದು ಅವರ ಸಂಸ್ಕೃತಿ ಪರಂಪರೆಗೆ ಪೂರಕವಾಗಿದೆ. ಈ ಭಾಗದಲ್ಲಿ ಕರುನಾಡು ಎಂಬುದು ತಮಿಳು ಪದ ಇದಕ್ಕೆ ಕನ್ನಡದಲ್ಲಿ ಕರಿಮೀನು ಎಂಬ ಅರ್ಥವನ್ನು ಕಲ್ಪಿಸಲಾಗಿದೆ. ಹಬ್ಬಗಳೆಲ್ಲವು ಮುಗಿದ ಮೇಲೆ ಕಡೆಯ ಒಂದು ದಿನ ಮಾಂಸಹಾರಗಳನ್ನು ಸ್ವೀಕರಿಸುವ ಪದ್ಧತಿ ದ್ರಾವಿಡರಿಗೆ ಪುರಾತನವಾದುದು. ಇಂತಹ ಒಂದು ಪದ್ಧತಿಯನ್ನು ಸೋಲಿಗರಲ್ಲಿ ಕಾಣುತ್ತೇವೆ. ಈ ಭಾಗದ ಸೋಲಿಗರಲ್ಲಿ ತಮಿಳುನಾಡಿನ ಜನರ ಪ್ರಭಾವದಿಂದ ಆಚರಣೆ ಬಂದಿರುವುದು ಒಂದು ಕುತೂಹಲದ ಸಂಗತಿ. ಈ ಹಬ್ಬವನ್ನು ಈ ಭಾಗದ ಸೋಲಿಗರು ನಾನಾ ರೀತಿಯಲ್ಲಿ ಆಚರಣೆ ಮಾಡುವುದು ರೂಢಿಯಲ್ಲಿದೆ.

ಕರುವಾಡಿ ದಿನ ಹೆಸರಿಗೆ ಅನುಗುಣವಾಗಿ ಕರಿಮೀನಿನ ಸಾರನ್ನೇ ಮಾಡುವುದಿಲ್ಲ. ಆ ದಿನದಂದು ಸೋಲಿಗರು ದೇವರ ಹೆಸರು ಹೇಳಿ ಸಾಕಿದ್ದ ಕೋಳಿ ಅಥವಾ ಕುರು, ಮೇಕೆಯನ್ನು ದೇವರಿಗೆ ಬಲಿಕೊಟ್ಟು ಅದರ ಮಾಂಸವನ್ನು ಪಾಲು ಮಾಡಿಕೊಂಡು ಹಬ್ಬವನ್ನು ಆಚರಿಸುತ್ತಾರೆ.[13]

## ಅಡಿಟಿಪ್ಪಣಿಗಳು

1. ಡಾ.ಬಿ.ಬಸವರಾಜು ತಗರಪುರ – ಚೋಳರ ವಾಸ್ತುಮತ್ತು ಶಿಲ್ಪ, ನಂದಿ ಬುಕ್‌ಹೌಸ್, ನಂ.3, 18ನೇ ಕ್ರಾಸ್, ರಾಮಾನುಜರಸ್ತೆ, ಕೆ.ಆರ್.ಮೊಹಲ್ಲ, ಮೈಸೂರು, ಪ್ರಕಟಣೆ 2008, ಪು.ಸಂ.16, 17, 18.
2. ಡಾ.ದೇವರಕೊಂಡಾರೆಡ್ಡಿ (ಸಂ) – ಇತಿಹಾಸ ದರ್ಶನ, ಸಂಪುಟ–31, ಪ್ರಕಟಣೆ 2008, ಪು.ಸಂ.321, 322.
3. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–70.
4. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–73.
5. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–102.
6. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–111.
7. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–153.
8. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–154.
9. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–187.
10. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–188.
11. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–198.
12. ಚಂಚಯ್ಯ – ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ದ್ರಾವಿಡಶೈಲಿಯ ಬೆಳವಣಿಗೆ ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಮಹಾಪ್ರಬಂಧ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಿಂದ ಮಾಹಿತಿಯನ್ನು ಪಡೆಯಲಾಗಿದೆ. ಪು.ಸಂ.120, 121.
13. ಡಾ.ಚಂದ್ರು ಕಾಳೇನಹಳ್ಳಿ – ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು, ಪ್ರಕಟಣೆ 2011, ಪು.ಸಂ.123.

## ೬.೮. ಕಾಡು ಬುಡಕಟ್ಟು ಜನರ ಧಾರ್ಮಿಕತೆಗಳು

ಚಾಮರಾಜನಗರ ಜಿಲ್ಲೆಯೂ ಬುಡಕಟ್ಟು ಸಂಪ್ರದಾಯಕ್ಕೆ ಹೆಸರುವಾಸಿಯಾದ ಜಿಲ್ಲೆಯಾಗಿದೆ. ಭಾರತದ ಸಮಾಜವು ಬಹು ಧರ್ಮ, ಭಾಷೆ, ಜಾತಿ, ಜನಾಂಗ ಮತ್ತು ಬುಡಕಟ್ಟುಗಳಿಂದ ಕೂಡಿದ ಸಮಾಜವಾಗಿದ್ದು, ಸಂಕೀರ್ಣ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಈ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಏಕತೆಗಿಂತಲೂ ಹೆಚ್ಚಾಗಿ ವಿಭಿನ್ನತೆಯನ್ನು ಕಾಣುತ್ತೇವೆ. ಹೋಲಿಕೆಯ ಹಾಗೂ ವಿವಿಧತೆಯ ಅಂಶಗಳು ಒಂದು ವಿಸ್ತೃತ ಸಮಾಜವಾದ ಭಾರತದಲ್ಲಿ ಬೇರೆ ಬೇರೆ ಸಾಮಾಜಿಕ ಗುಂಪುಗಳಲ್ಲಿ ಕಾಣಬರುತ್ತದೆ. ಭಾರತೀಯ ಸಮಾಜದಲ್ಲಿ ನಾವು ನಗರ, ಸಮಾಜ, ಗ್ರಾಮೀಣ ಸಮಾಜ ಎಂಬ ಮತ್ತೊಂದು ಸಮಾಜವನ್ನು ಗುರುತಿಸುತ್ತೇವೆ. ಬುಡಕಟ್ಟು ಸಮಾಜ ಬೇರೆ ಬೇರೆ ಸಮಾಜಕ್ಕಿಂತ ಸರ್ವ ರೀತಿಯಲ್ಲಿಯೂ ಸಹ ಭಿನ್ನವಾಗಿರುತ್ತದೆ. ಬುಡಕಟ್ಟುಗಳ ಇತಿಹಾಸವನ್ನು ನಾವು ಹುಡುಕಿ ಹೊರಟರೆ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ವಿವಿಧ ಮಾನವ ಜನಾಂಗಗಳಿಗೆ ಸೇರಿದ ಬುಡಕಟ್ಟುಗಳು ಕಂಡುಬರುತ್ತದೆ. ಬುಡಕಟ್ಟುಗಳೆಂದು ಕರೆಯಲ್ಪಡುವ ಆದಿವಾಸಿಗಳು ಪ್ರಪಂಚದಾದ್ಯಂತ ಹಂಚಿ ಹೋಗಿದ್ದಾರೆ. ಭಾರತದಲ್ಲಿ ಬುಡಕಟ್ಟುಗಳು ಸಾಮಾನ್ಯವಾಗಿ ಎಲ್ಲಾ ವಲಯಗಳಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ಬೆಟ್ಟಗುಡ್ಡ, ಕಾಡು-ಮೇಡು, ಗಿರಿಶಿಖರ, ಕಣಿವೆ-ಕಾನನ ಹಾಗೂ ಕರಾವಳಿ ತಪ್ಪಲಿನ ನಾನಾ ಭಾಗಗಳಲ್ಲಿ ಬುಡಕಟ್ಟುಗಳು ಹಂಚಿ ಹೋಗಿವೆ.[1]

ಬುಡಕಟ್ಟು ಜನರು ಬೆಟ್ಟಗುಡ್ಡಗಳಲ್ಲಿ ಕಾಡುಗಳಲ್ಲಿ ವಾಸ ಮಾಡುತ್ತಿದ್ದರು. ಈ ಜನ ವ್ಯವಸ್ಥಿತವಾಗಿ ಒಂದೆಡೆ ನಿಂತು ಬದುಕು ಸಾಗಿಸುವವರಲ್ಲ. ವನಗಳಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಾ ಅಲ್ಲಿ ದೊರಕುವ ಹಣ್ಣು ಹಂಪಲುಗಳನ್ನು ಗೆಡ್ಡೆ ಗೆಣಸುಗಳನ್ನು, ಸೊಪ್ಪು ಸೆದೆ, ಜೇನು ಮೊದಲಾದ ವನೋತ್ಪನ್ನಗಳನ್ನು ಸೇವಿಸುತ್ತ, ಅಗತ್ಯಕ್ಕೆ ತಕ್ಕಂತೆ ವನ್ಯ ಮೃಗಗಳನ್ನು ಬೇಟೆಯಾಡುತ್ತಾ ಬದುಕನ್ನು ನಡೆಸುತ್ತಾರೆ.[2]

## ಈ ಭಾಗದ ಬುಡಕಟ್ಟು ಜನರ ಭೌಗೋಳಿಕ ಹಿನ್ನೆಲೆ

ಗುಂಡ್ಲುಪೇಟೆ ತಾಲ್ಲೂಕಿನ ಬುಡಕಟ್ಟು ಜನರು ಬೆಟ್ಟ-ಗುಡ್ಡ, ದಟ್ಟವಾದ ಅರಣ್ಯಗಳ ಮಧ್ಯದಲ್ಲಿ ಇಲ್ಲವೇ ಬಯಲು ಪ್ರದೇಶದಲ್ಲಿ ತಮ್ಮದೇ ಆದ ಹಟ್ಟಿಗಳನ್ನು ನಿರ್ಮಿಸಿಕೊಂಡು ಪ್ರತ್ಯೇಕವಾಗಿ ವಾಸಿಸುತ್ತಾರೆ. ಆದರೆ ಜಾತಿಯ ಸದಸ್ಯರು ಎಲ್ಲಾ ಜಾತಿಯ ಜನರು ವಾಸಿಸುವ ಹಳ್ಳಿಗಳಲ್ಲಿ ಇಲ್ಲವೆ, ನಗರಗಳಲ್ಲಿ ವಾಸಿಸುತ್ತಾರೆ.

ಕೆಲವು ಬುಡಕಟ್ಟು ಜನರು ಜಾತಿಯ ಸದಸ್ಯರು ವಾಸಿಸುವ ಹಳ್ಳಿಗಳಲ್ಲಿ ಎಲ್ಲರಂತೆ ತಮ್ಮ ನೆಲೆ ಹೊಂದಿರುವುದು ಸರ್ವೇಸಾಮಾನ್ಯವಾಗಿದೆ. ಅದರಂತೆ ಕೆಲವು ಜಾತಿಯ ಜನರು ನಾಗರೀಕ ಸಮಾಜದಿಂದ ಬಹುದೂರ ಪ್ರತ್ಯೇಕವಾಗಿ ವಾಸಿಸುವುದನ್ನು ಕಾಣಬಹುದು. ಆದ್ದರಿಂದ ಜಾತಿ ಮತ್ತು ಬುಡಕಟ್ಟನ್ನು ಭೌಗೋಳಿಕ ಪ್ರತ್ಯೇಕತೆಯ ಆಧಾರದ ಮೇಲೆ ಸ್ಪಷ್ಟವಾಗಿ ವಿಭಾಗಿಸುವುದು ಕಷ್ಟಸಾಧ್ಯ. ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆಯ ಪಶ್ಚಿಮದ ಭಾಗದಲ್ಲಿದೆ. ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು, ಉತ್ತರಕ್ಕೆ ಮೈಸೂರು ಮತ್ತು ನಂಜನಗೂಡು, ಪಶ್ಚಿಮದಲ್ಲಿ ಹೆಗ್ಗಡದೇವನಕೋಟೆಯನ್ನು ಸುತ್ತುವರೆದಿದೆ. ಗುಂಡ್ಲುಪೇಟೆ ತಾಲ್ಲೂಕಿನ ದಕ್ಷಿಣ ಹಾಗೂ ಪಶ್ಚಿಮ ಭಾಗಗಳು ಅರಣ್ಯ ಪ್ರದೇಶ ಮತ್ತು ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಬಂಡೀಪುರ ಪ್ರದೇಶವನ್ನು ಒಳಗೊಂಡಿದೆ. ತಾಲ್ಲೂಕಿನ ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಜನವಸತಿ ಹೆಚ್ಚು, ದಕ್ಷಿಣದಿಂದ ಪಶ್ಚಿಮ ಮೇರೆಗೆ ಸಮಾನಾಂತರವಾಗಿ ಹಬ್ಬಿರುವ ಒಂದು ಬೆಟ್ಟದ ಸಾಲಿದೆ. ತಾಲ್ಲೂಕಿನಲ್ಲಿ ಬೆಟ್ಟ ಕುರುಬ, ಜೇನುಕುರುಬ, ಸೋಲಿಗರು ವಾಸಿಸುತ್ತಾರೆ. ಸೋಲಿಗರ ನೆಲೆಗಳಿಗೆ ಭೇಟಿ ನೀಡಿದ್ದೇನೆ. ಸೋಲಿಗರು ತಾಲ್ಲೂಕಿನ ಬಂಡೀಪುರ ಮದ್ದೂರು ಕಾಲೋನಿ, ಮೇಲ್‌ಕಾಮನಹಳ್ಳಿ, ಮುಕ್ತಿ ಕಾಲೋನಿ, ಉಪಕಾರ, ಹೆಗ್ಗಡಹಳ್ಳಿ, ಚೆಲುವರಾಯನಪುರ, ಜಕ್ಕಳ್ಳಿ, ಚಿಕ್ಕಎಲಚೆಟ್ಟಿ, ಹಂಗಳ, ಕಣಿಯನಪುರ, ಮುಂಟಿಪುರ, ಕುನಗಳ್ಳಿ ಇನ್ನೂ ಮೊದಲಾದ ಕಾಲೋನಿಗಳಲ್ಲಿ (ಗ್ರಾಮಗಳಲ್ಲಿ) ಬುಡಕಟ್ಟು ಜನರು ಕಂಡುಬರುತ್ತಾರೆ.

ಸೋಲಿಗರು ಅನುಭವಿಸುತ್ತಿರುವ ಸಮಸ್ಯೆಗಳೆಂದರೆ, ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ, ಋಣಭಾರ, ಅಮಾನವೀಯ ಪದ್ಧತಿಗಳು, ಸ್ಥಳಾಂತರ ಸಮಸ್ಯೆ, ಸಾರಿಗೆ ಸಂಪರ್ಕದ ಕೊರತೆ ಶೋಷಣೆ ಕುಡಿಯುವ ನೀರಿನ ಸಮಸ್ಯೆ ಇನ್ನೂ ಮೊದಲಾದ ಸಮಸ್ಯೆಗಳನ್ನು ಬುಡಕಟ್ಟು ಸೋಲಿಗರು ಅನುಭವಿಸುತ್ತಿದ್ದಾರೆ. ಭಾರತದಲ್ಲಿ ಹಲವಾರು ಚಾರಿತ್ರಿಕ ಮತ್ತು ಸಾಮಾಜಿಕ ಕಾರಣಗಳಿಂದ ಅನೇಕ ಬುಡಕಟ್ಟುಗಳು ಸಮಾನಸ್ಕಂದವಾಗಿ ಬೆಳೆಯಲು ಅವಕಾಶ ಇಲ್ಲದ್ದನ್ನು ಮನಗಂಡು ಭಾರತ ಸಂವಿಧಾನದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಸಂವಿಧಾನದ 341, 342ನೆಯ ಅನುಚ್ಛೇದದಗಳ ಪ್ರಕಾರ ರಾಷ್ಟ್ರಪತಿಯವರು ಅಂಥ ವರ್ಗಗಳನ್ನು ಗುರುತಿಸಿ ಅವುಗಳ ಪಟ್ಟಿಯನ್ನು ಪ್ರಕಟಿಸುತ್ತಾರೆ. ಈ ಭಾಗದ ಸೋಲಿಗರು ನಾಯಕತ್ವದ ಕೊರತೆಯಿಂದಾಗಿ ಇಂದು ಸಮಾಜದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಭೌಗೋಳಿಕವಾಗಿ ಜೀವನದಲ್ಲಿ ಸಮಸ್ಯೆಯ ನಡುವೆ ಬದುಕು ನಡೆಸುತ್ತಿದ್ದಾರೆ ಎನ್ನಬಹುದು.

## ಹಿತರಕ್ಷಣಾ ಸಮಿತಿಗಳು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಜನರ ಮೇಲೆ ನಡೆಯುವ ದೌರ್ಜನ್ಯ ಮತ್ತು ಹಲ್ಲೆಗಳನ್ನು ತಡೆಗಟ್ಟಿ ಅವರಿಗೆ ರಕ್ಷಣೆ ನೀಡಲು ಸರ್ಕಾರವು ತಾಲ್ಲೂಕು ಉಪವಿಭಾಗ ಹಾಗೂ ಜಿಲ್ಲಾಮಟ್ಟದಲ್ಲಿ ಹಿತರಕ್ಷಣಾ ಸಮಿತಿಗಳನ್ನು ರಚಿಸಿದೆ. ಸಮಿತಿಗಳಿಗೆ ಕ್ರಮವಾಗಿ ತಹಶೀಲ್ದಾರ್, ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಇವರು ಆಯಾ ಕಾಲಕ್ಕೆ ಸಭೆ ಸೇರಿ ಆಗಿರುವ ಪ್ರಗತಿ ಕಾನೂನು ಜಾರಿಯಲ್ಲಿ ಇರುವ ತೊಂದರೆಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ನೀಡುತ್ತದೆ. ಬುಡಕಟ್ಟುಗಳು ಅರಣ್ಯದ ಆತ್ಮ ಸ್ವರೂಪಿ ಭಾಗಗಳು, ಅರಣ್ಯ ಮತ್ತು ಅರಣ್ಯವಾಸಿಗಳ ಅನುಸಂಧಾನ ಆಧ್ಯಾತ್ಮಿಕ ರೀತಿಯದು. ಅವೆರಡೂ ತಮ್ಮಷ್ಟಕ್ಕೆ ತಾವು ಪೂರಕ, ಪ್ರೇರಕ ಅವರ ಕುಮ್ರಿ ಬೇಸಾಯದಿಂದ ಎಂದೆಂದಿಗೂ ಕಾಡು ನಾಶವಾಗಿಲ್ಲ.

## ಗಿರಿಜನ ಸಮಾಜ

ಇಂದು ಸಮಾಜ ಅಸಮಾನ ಪರಿಸ್ಥಿತಿಯಲ್ಲಿದೆ. ಅಂದರೆ ತ್ರಿಕೋನಾಕೃತಿಯಂತಿದೆ. ಅಂದರೆ ಮೇಲಿನ ದಕ್ಷರು ಕೆಳಗಿಳಿಸಿ ಶೋಷಿತರನ್ನು ಆಳುವುದು. ಆದರೆ ಆದಿವಾಸಿ ಪದ್ಧತಿ ಸಮಾನ ಪದ್ಧತಿಯಾಗಿತ್ತು. ಇಲ್ಲಿ ಪ್ರತಿಯೊಬ್ಬರೂ ಸಮಾನರು, ಅದರಲ್ಲಿ ಒಬ್ಬ ಯಜಮಾನ ಆಗಿರುತ್ತಾರೆ.

ಆದಿವಾಸಿ ಸಮಾಜ ಎಲ್ಲರ ಒಪ್ಪಿಗೆ ಆಧಾರದಲ್ಲಿ ಒಂದು ನಿರ್ಣಯ ಅದರಂತೆ ನಿರ್ವಹಣೆ ಗಿರಿಜನೇತರ ಸಮಾಜ ನಾಯಕ ಹೇಳಿದಂತೆ ಮಾಡುವ ಪದ್ಧತಿ ಎರಡು ಸಮಾಜಗಳಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಆದಿವಾಸಿಗಳ ಅಧಿಕಾರ ದೈವದತ್ತವಾದುದಲ್ಲ. ವಂಶಪಾರಂಪರ್ಯವಾಗಿ ಅಜ್ಜಯ್ಯನಿಂದ ಬಂದಂಥದ್ದು. ಹಾಗೇ ಬಂದಿದ್ದರೂ ಕುಲ ಪಂಚಾಯಿತಿ ಮೂಲಕ ಕುಲದ ಪ್ರತಿಯೊಬ್ಬರ ಒಪ್ಪಿಗೆ ಪಡೆದೇ ಅಧಿಕಾರ ಪಡೆಯುತ್ತಾರೆ. ಇಲ್ಲಿ ಯಜಮಾನ ಸಮುದಾಯದ ಕೊಡುಗೆಯಾಗಿರುತ್ತಿದ್ದ. ಅವನು ಸತ್ತ ನಂತರ ಮತ್ತೊಬ್ಬ ಹಿರಿಯ ವ್ಯಕ್ತಿ ಆಸ್ಥಾನವನ್ನು ಅಲಂಕರಿಸುತ್ತಿದ್ದ. ಇಲ್ಲಿ ಯಜಮಾನನ ಮಗ ಆ ಸ್ಥಾನವನ್ನು ತುಂಬುತ್ತಿರಲಿಲ್ಲ. ಸುಮಾರು ೫೦೦ ವರ್ಷಗಳ ಹಿಂದಿನ ಇತಿಹಾಸ ಅವರ ಬದುಕಿನ ಚಿತ್ರಣವನ್ನು ಗಮನಿಸಿದಾಗ ಪ್ರಮುಖವಾಗಿ ಅವರ ಆರ್ಥಿಕ, ಸಾಮಾಜಿಕ, ರಾಜಕೀಯ ವಿಚಾರಗಳಾಗಿವೆ. ಸ್ಪರ್ಧಾತ್ಮಕವಲ್ಲದ ವ್ಯವಸ್ಥೆ ಇವರದಾಗಿದ್ದು, ಸಮಾನತೆಯಿಂದ ಕೂಡಿತ್ತು. ಗಿರಿಜನರ ಅಭ್ಯಾಸಗಳ ಬಗ್ಗೆ ಅವಲೋಕಿಸಿದರೆ, ಇಂದಿನಂತೆ ತುಂಡು ಭೂಮಿ ಇರಲಿಲ್ಲ. ಇವರ ವ್ಯವಸಾಯ ಪದ್ಧತಿ ಆಹಾರಕ್ಕೋಸ್ಕರ ಮತ್ತು ಭೂಮಿಯನ್ನು ವ್ಯವಸಾಯ ಸ್ಥಳ ಮತ್ತು

ವಾಸಸ್ಥಳ ಎಂದು ತಿಳಿದಿದ್ದರು. ಸಮುದಾಯದ ವಾಸಸ್ಥಾನ ಎಂದು ತಿಳಿದು ಅದಕ್ಕೆ ತಕ್ಕಂತೆ ಪದ್ಧತಿಗಳನ್ನು ಆಚರಿಸುತ್ತಿದ್ದರು. ಭೂಮಿಯಲ್ಲಿ ಬೆಳೆಯುವ ವಾಸಿಸುವ ಅಂದರೆ, ಕಾಡು, ಜಲ, ಪ್ರಾಣಿ, ಪಕ್ಷಿ ಇವೆಲ್ಲದರ ಆಶ್ರಯದಾತೆ ಎಂದು ತಿಳಿದಿದ್ದರೂ, ಜೊತೆಗೆ ಭೂಮಿ ತಾಯಿಯನ್ನು ಜೀವನೆಲೆ ಸೆಲೆಯಾಗಿ ಪೂಜಿಸುತ್ತಿದ್ದರು.[3]

## ಸಾಮಾಜಿಕ ಸಂಘಟನೆ

ಸಾಮಾಜಿಕ ಸಂಘಟನೆಯ ಮೂಲಕ ಬುಡಕಟ್ಟು ಮತ್ತು ಜಾತಿಯ ನಡುವಿನ ವ್ಯತ್ಯಾಸವನ್ನು ಗುರುತಿಸಬಹುದು. ಬುಡಕಟ್ಟು ಜನರ ವಿವಾಹ, ಬಂಧುತ್ವ, ಕುಟುಂಬ ವ್ಯವಸ್ಥೆ, ಜಾತಿವ್ಯವಸ್ಥೆಗಿಂತ ಭಿನ್ನವಾಗಿರುತ್ತದೆ. ಆದ್ದರಿಂದ ಇವೆರಡು ಭಿನ್ನ ಭಿನ್ನ ಸಮಾಜವನ್ನು ಹೊಂದಿರುತ್ತದೆ.

1. ಜಾತಿಯು ಸಮಾಜದ ಏಣಿ ಶ್ರೇಣಿಯಿಂದ ಅನುವಂಶೀಯತೆಯಿಂದ ಮತ್ತು ಮಡಿಮೈಲಿಗೆಯಿಂದ ಕೂಡಿದ್ದರೆ, ಬುಡಕಟ್ಟು ಈ ವಿಚಾರಗಳಿಂದ ಹೊರತಾಗಿರುತ್ತದೆ.
2. ಜಾತಿಯು ನಾಗರೀಕ ಮತ್ತು ಧಾರ್ಮಿಕ ಅಸಾಮರ್ಥ್ಯತೆಯಿಂದ ಕೂಡಿದ್ದರೆ, ಬುಡಕಟ್ಟು ಈ ಅಂಶಗಳನ್ನು ಹೊಂದಿರುವುದಿಲ್ಲ.
3. ಬುಡಕಟ್ಟು ಸಮಾಜವು ಬಂಧುತ್ವ ಸಂಬಂಧಗಳಿಂದ ರೂಪಿತವಾಗಿದ್ದು, ಸಮಾನತೆಯೇ ಮುಖ್ಯವಾದ ತತ್ವವಾದರೆ ಇದಕ್ಕೆ ತದ್ವಿರುದ್ಧವಾಗಿ ಅಸಮಾನತೆ, ಅವಲಂಬನೆ ಮತ್ತು ಅಧೀನತೆ ಜಾತಿಯ ಸಮಗ್ರ ಲಕ್ಷಣಗಳಾಗಿವೆ.
4. ಜಾತಿಯು ಸದಸ್ಯರಿರುವ ಹಳ್ಳಿಗಳಲ್ಲಿ ಸಾಂಸ್ಕೃತಿಕ ವೈವಿಧ್ಯತೆಯ ಬಹುಮುಖ್ಯ ಆಚರಣೆಗಳು ಕಂಡುಬಂದರೆ ಬುಡಕಟ್ಟಿನ ಆಚರಣೆಗಳಲ್ಲಿ ಸಾಂಸ್ಕೃತಿಕ ಏಕತೆಯು ಕಂಡುಬರುತ್ತದೆ.
5. ಬುಡಕಟ್ಟಿನ ಜನರು ಸಮುದಾಯ ಮನೋಧರ್ಮವನ್ನು ವ್ಯಕ್ತಪಡಿಸಿದರೆ, ಜಾತಿಯ ಜನರಲ್ಲಿ ಇದು ಕಡಿಮೆ ಇರುತ್ತದೆ.
6. ಜಾತಿ ವ್ಯವಸ್ಥೆಯಲ್ಲಿ ಶೋಷಣೆಯನ್ನು ಕಾಣಬಹುದು. ಆದರೆ ಈ ರೀತಿಯ ಶೋಷಣೆಗಳು ಬುಡಕಟ್ಟುಗಳಲ್ಲಿ ಕಡಿಮೆ.
7. ಮೇಲುಕೀಳು ಎಂಬ ಭಾವನೆಗಳನ್ನು ಜಾತಿಗಳಲ್ಲಿ ಕಾಣಬಹುದು. ಆದರೆ ಬುಡಕಟ್ಟುಗಳಲ್ಲಿ ಈ ರೀತಿಯ ಭಾವನೆ ಇರುವುದಿಲ್ಲ.

## ೬.೯. ಬುಡಕಟ್ಟು ಸೋಲಿಗರ ಹಬ್ಬಗಳ ಆಚರಣೆಗಳು

ಹಬ್ಬ ಎಂಬುದು ಸಮಾಜದಲ್ಲಿ ಎಲ್ಲಾ ಸಂಸ್ಕೃತಿಯಲ್ಲಿಯೂ ಒಂದಲ್ಲಾ ಒಂದು ರೀತಿಯಲ್ಲಿ ಆಚರಣೆಯಲ್ಲಿದೆ. ಹಬ್ಬಗಳು ಮನುಷ್ಯನ ಸಂಸ್ಕೃತಿಗೆ ಅಂಟಿಕೊಂಡಿದೆ. ಹಬ್ಬಗಳು ಪ್ರಾಚೀನ ಕಾಲದಿಂದಲೂ ನಿರಂತರವಾಗಿ ಸಾಗಿಬಂದಿದೆ. ಹಬ್ಬಗಳು ಇಡೀ ಮಾನವನ ವರ್ಗದ ಬದುಕನ್ನು ಒಂದು ಋತುಮಾನದಿಂದ ಇನ್ನೊಂದು ಋತುಮಾನಕ್ಕೆ ಸಾಗಿಸುತ್ತಾ ಬಂದಿದೆ.[4]

ಈ ಭಾಗದ ಸೋಲಿಗರು ಕೂಡ ಗೌರಿ, ಯುಗಾದಿ, ದೀಪಾವಳಿ, ಸಂಕ್ರಾಂತಿ ಇನ್ನೂ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಅಲ್ಲದೆ ತಮ್ಮ ಸಂಸ್ಕೃತಿಗೆ ಪೂರಕವಾದ ಕೆಲವು ಹಬ್ಬಗಳನ್ನು ಸಹ ಆಚರಿಸುತ್ತಾರೆ. ಯುಗಾದಿ ಹಬ್ಬದ ಸಂದರ್ಭದಲ್ಲಿ ಸ್ನಾನ ಮಾಡಿದ ನಂತರ ಮನೆಯಲ್ಲಿ ಎಲ್ಲರೂ ಬೇವುಬೆಲ್ಲ ತಿನ್ನುತ್ತಾರೆ.

ಮರುದಿವಸ ಚಂದ್ರನನ್ನು ನೋಡಿ ಆ ವರ್ಷದ ಮಳೆ ಬೆಳೆಯನ್ನು ಬೇಡುತ್ತಾರೆ. ಇದನ್ನು ಎರೆ ನೋಡುವುದು ಎಂದು ಕರೆಯುವ ವಾಡಿಕೆ ಇದೆ. ಇನ್ನೂ ಬೇರೆ ಬೇರೆ ಹಬ್ಬಗಳ ದಿನದಂದು ಸೋಲಿಗ ಬುಡಕಟ್ಟು ಜನರು ಸ್ನಾನ ಮಾಡಿ ಮಡಿಬಟ್ಟೆಗಳನ್ನು ತೊಡುತ್ತಾರೆ. ಮಹಿಳೆಯರು ಅನ್ನ, ಸಾಂಬಾರು, ಜೊತೆಗೆ ಕಜ್ಜಾಯ ಇನ್ನೂ ಮೊದಲಾದ ಸಿಹಿತಿಂಡಿಯನ್ನು ತಯಾರಿಸುತ್ತಾರೆ. ತದನಂತರ ದೇವರಿಗೆ ಪೂಜೆ ಸಲ್ಲಿಸಿ ಎಲ್ಲರೂ ಒಟ್ಟಾಗಿ ಊಟ ಮಾಡುತ್ತಾರೆ. ಹಬ್ಬಗಳ ಸಂದರ್ಭಗಳಲ್ಲಿ ತಮಗೆ ಹತ್ತಿರದ ಸ್ಥಳದೇವತೆಯ ಗುಡಿಗೆ ಇಲ್ಲವೇ ಮಹದೇಶ್ವರ ದೇವಾಲಯಕ್ಕೆ ಅಥವಾ ರಂಗನಾಥಸ್ವಾಮಿ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸುತ್ತಾರೆ.

ಸೋಲಿಗ ಬುಡಕಟ್ಟು ಜನರು ಹೊಸದಾಗಿ ಹಬ್ಬ, ರೊಟ್ಟಿ ಹಬ್ಬ, ಮುನಿ ಮಾಡುವುದು, ಒಂದು ಸ್ಥಳೀಯ ಹಬ್ಬಗಳಾಗಿವೆ.

### ಸಂಕಮ್ಮನ ಹಬ್ಬ

ಗುಂಡ್ಲುಪೇಟೆ ತಾಲ್ಲೂಕಿನ ಸೋಲಿಗ ಬುಡಕಟ್ಟುಗಳಲ್ಲಿ ಸಂಕಮ್ಮನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಸಂಕಮ್ಮನನ್ನು ಸೋಲಿಗರು ತಾಯಿ ಎಂಬ ನಂಬಿಕೆಯಿಂದ ಆಚರಿಸುತ್ತಾರೆ.

ಸಂಕಮ್ಮನ ಹಬ್ಬದ ಸಂದರ್ಭದಲ್ಲಿ ಆ ದಿವಸದಲ್ಲಿ ಎಲ್ಲರೂ ಮನೆಯಲ್ಲಿ ಉಪವಾಸವನ್ನು ನೆರವೇರಿಸುತ್ತಾರೆ. ಅಂದು ಮನೆಯಲ್ಲಿಯೇ ಪವಿತ್ರ ಸ್ನಾನ ಮಾಡಿ ತಮ್ಮ ಮನೆಗಳಿಗೆ ತೋರಣ ಕಟ್ಟುವರು, ತೋರಣ ಕಟ್ಟುವುದಕ್ಕೆ ಮಾವಿನ ಸೊಪ್ಪು, ಬೇವಿನ ಸೊಪ್ಪು, ಉತ್ತರಾಣಿ, ಅಣ್ಣೆ ಹೂ ಇನ್ನೂ ಮೊದಲಾದವುಗಳನ್ನು ಸೇರಿಸಿ ಗುತ್ತಿಯಾಗಿ ಕಟ್ಟಿ ಮನೆಯ ಒಳಗೆ ಮತ್ತು ಹೊರಗೆ

ರಾಗಿಯ ಮೆದೆಗೆ, ಬೇಲಿಯ ಬಾಗಿಲಿಗೆ, ದನದ ಹಟ್ಟಿಯ ಬಾಗಿಲು ಗೊಬ್ಬರದ ಗುಂಡಿಗಳಿಗೆ ಈ ಗುಚ್ಛಗಳನ್ನು ಕಟ್ಟುವರು. ಆ ದಿನ ಸಂಕಮ್ಮ ಮನೆಗೆ ಬರುತ್ತಾಳೆ. ಆದಕಾರಣ ಎಲ್ಲರೂ ಪವಿತ್ರವಾಗಿರಬೇಕು ಎಂಬುದು ಸೋಲಿಗ ಬುಡಕಟ್ಟು ಜನರ ನಂಬಿಕೆ, ಹಬ್ಬದ ದಿನ ಪ್ರತಿ ಮನೆಯಲ್ಲಿಯೂ ಯಾರು ಸಹ ದಿನನಿತ್ಯದ ಕೆಲಸವನ್ನು ಮಾಡುವುದಿಲ್ಲ. ಅಲ್ಲದೇ ಬುಡಕಟ್ಟು ಜನರು ಮಸಣಮ್ಮ ದೇವರನ್ನು ಪೂಜಿಸುತ್ತಾರೆ. ಇವುಗಳಲ್ಲದೆ ಬೆಟ್ಟದ ಚಿಕ್ಕಮ್ಮ, ಬಸವೇಶ್ವರ ಮುಂತಾದ ದೇವತೆಯನ್ನು ಪೂಜಿಸುತ್ತಾರೆ.

**ಸೋಲಿಗ ಬುಡಕಟ್ಟುಗಳಲ್ಲಿ ಸಸ್ಯವೈದ್ಯ ಪರಿಣಿತರಿದ್ದಾರೆ.**

ಈ ಭಾಗದ ಸೋಲಿಗ ಬುಡಕಟ್ಟು ಜನರು ಗಿಡಮೂಲಿಕೆಯ ಕಷಾಯ ಎಂದು ಕರೆಯುತ್ತಾರೆ. ಇವರು ಕೆಲವು ಗಿಡಮೂಲಿಕೆಯ ಔಷಧಿಗಳು ಪ್ರತಿಯೊಂದು ಕುಟುಂಬದ ಸದಸ್ಯರಿಗೂ ತಿಳಿದಿರುತ್ತದೆ. ಇದನ್ನು ಕೆಲವು ಗಿಡಮೂಲಿಕೆಗಳು ಪೋಡಿನಲ್ಲಿನ ಯಾರೋ ಒಬ್ಬ ಪರಿಣಿತನಾಗಿರುವವನಿಗೆ ತಿಳಿದಿರುತ್ತದೆ. ಆತನ ಕೈಗುಣ ಚೆನ್ನಾಗಿವೆ ಎಂಬ ನಂಬಿಕೆ ಜನರಿಗೆ ಮಾಡಿದರೆ ಇದೇ ಮಾನಸಿಕ ಸಂತಸದಲ್ಲಿ ಬಂದಿರುವ ಖಾಯಿಲೆ ವಾಸಿಯಾಗುತ್ತದೆ. ಅದೇ ನಂಬಿಕೆ ಉಳುಕಿದಾಗ ಅವರಲ್ಲಿಯೇ ಪರಿಣಿತರಾದವರು ಮಾತ್ರ ಆಸ್ತಿ ಚಿಕಿತ್ಸೆ ನೀಡುವರು.

**ಸಾಮಾಜಿಕ ಜನಪದ ಆಚರಣೆಗಳು**

ಈ ಭಾಗದ ಸೋಲಿಗರು ಇಂದಿಗೂ ಅವರು ತಮ್ಮ ಧರ್ಮ ಹಾಗೂ ಮಂತ್ರವಿದ್ಯೆಗಳಲ್ಲಿ ಅಪಾರವಾದ ನಂಬಿಕೆ ಇಟ್ಟಿದ್ದಾರೆ. ಸಮಾನತ್ವ ಮಂತ್ರವಿದ್ಯೆ, ಸಂಪರ್ಕ ತತ್ವ ಮಂತ್ರ ವಿದ್ಯೆಗಳು ಇಂದಿಗೂ ಆಚರಣೆಯಲ್ಲಿದೆ. ಸಾರ್ವಜನಿಕ ಮಂತ್ರವಿದ್ಯೆಯ ಆಚರಣೆ ಇಂದಿಗೂ ಇದೆ. ಹುಟ್ಟಿನಿಂದ ಸಾವಿನವರೆಗೆ ಅನೇಕ ಆಚರಣೆಗಳು ಹಾಗೂ ವಿಧಿವಿಧಾನಗಳನ್ನು ಆಚರಿಸುತ್ತಾರೆ. ಈ ಬಗೆಯ ನಂಬಿಕೆಗಳಲ್ಲಿ ಅವರ ಬದುಕು ಒಂದು ಸ್ಥರದಿಂದ ಇನ್ನೊಂದು ಸ್ಥರಕ್ಕೆ ಹೋಗುವಾಗ ಮಗುವಿನಲ್ಲಿ ಆಗುವ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳನ್ನು ಆಚರಣೆಯ ರೂಪದಲ್ಲಿ ಇಂದಿಗೂ ಪ್ರತಿನಿಧಿಸುತ್ತಾರೆ. ಯೌವ್ವನಾಚರಣೆಗಳು, ವಿವಾಹ ಸಂಬಂಧ ಆಚರಣೆಗಳು, ಹೆರಿಗೆ, ಹಾಗೂ ಮಗುವಿನ ಜನನ ಸಂದರ್ಭದಲ್ಲಿ ನಡೆಸುವ ಆಚರಣೆಗಳು ಮರಣ ಸಂಬಂಧ ಆಚರಣೆಗಳು ಇವೂ ಇಂದಿಗೂ ತಮ್ಮ ಮೂಲ ಸ್ವರೂಪದಲ್ಲಿಯೇ ಇದೆ. ಆದರೆ ವಿವಾಹ ಸಂಬಂಧಿ ಆಚರಣೆಯಲ್ಲಿ ಸಣ್ಣಪುಟ್ಟ ಬದಲಾವಣೆಗಳಿವೆ. ಬುಡಕಟ್ಟು ಸೋಲಿಗರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಪರಿವರ್ತನೆಗೊಳಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನೇಕ ವಿಶಿಷ್ಠ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಾ ಬಂದಿದೆ.

## ಅಡಿಟಿಪ್ಪಣಿಗಳು

1. ಡಾ.ಎಂ.ಗುರುಲಿಂಗಯ್ಯ - ಬುಡಕಟ್ಟುಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಪ್ರಕಟಣೆ 2004, ಪು.ಸಂ.1-2.
2. ಡಾ.ಆರ್.ರಾಮಕೃಷ್ಣ – ಕರ್ನಾಟಕ ಬುಡಕಟ್ಟು, ಪ್ರಚಾರ ಪುಸ್ತಕ ಮಾಲೆ, 287, ಪ್ರಸಾರಾಂಗ ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ಪ್ರಕಟಣೆ 2007, ಪು.ಸಂ.5.
3. ಡಾ.ಎನ್.ಸುನಂದಮ್ಮ – ಮೈಸೂರು ಮತು ಚಾಮರಾಜನಗರ ಜಿಲ್ಲೆಗಳಲ್ಲಿ ಸೋಲಿಗ ಬುಡಕಟ್ಟು ಜನಾಂಗಾ ಅಭಿವೃದ್ಧಿಗೆ ಕರ್ನಾಟಕ ಸರ್ಕಾರದ ಕಾರ್ಯಕ್ರಮಗಳು ಒಂದು ಅಧ್ಯಯನ, ಅಭಿರುಚಿ ಪ್ರಕಾಶನ, ನಂ.386, 14ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು, ಪ್ರಕಟಣೆ 2011, ಪು.ಸಂ.402-403.
4. ಡಾ.ಚಂದ್ರು ಕಾಳೇನಹಳ್ಳಿ - ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು, ಪ್ರಕಟಣೆ 2011, ಪು.ಸಂ.112.

## ಇತರ ಪಂಥದ ಪ್ರಮುಖ ದೇವಾಲಯಗಳು

1. ಕೆಲಸೂರು – ಚೌಡೇಶ್ವರಿ ದೇವಾಲಯ
2. ಕೆಲಸೂರು – ಗದ್ದೆ ಮಾರಮ್ಮ
3. ಪಡಗೂರು – ಮಾರಮ್ಮ
4. ತೆರಕಣಾಂಬಿ – ಮಾರಮ್ಮ
5. ತ್ರಿಯಂಬಕಪುರ – ಮಾರಿಯಮ್ಮ (ತಮಿಳು ಸಂಸ್ಕೃತಿ)
6. ನಿಟ್ರೆ – ಮಾದೇವಮ್ಮ
7. ರಾಘವಪುರ – ಪಟ್ಟಲದಮ್ಮ
8. ಚನ್ನಮಲ್ಲಪುರ – ನಡುಹೊಲದಮ್ಮ
9. ಹಸಗೂಲಿ – ಮಾರಮ್ಮ (ಪಾರ್ವತಮ್ಮ)
10. ಬರಗಿ – ಕಸಕಲಪುರದಮ್ಮ
11. ಗುಂಡ್ಲುಪೇಟೆ – ಪ್ಲೇಗ್ ಮಾರಮ್ಮ
12. ಕಬ್ಬಹಳ್ಳಿ – ಮಾಲರಸಮ್ಮ
13. ಗುಂಡ್ಲುಪೇಟೆ – ಪಟ್ಟಲದಮ್ಮ

# ಅಧ್ಯಾಯ-7

# ಗುಂಡ್ಲುಪೇಟೆ ತಾಲ್ಲೂಕಿನ ಬೃಹತ್ ಶಿಲಾಯುಗದ ನೆಲೆಗಳು-ವೀರಗಲ್ಲು- ಮಾಸ್ತಿಕಲ್ಲು- ಇನ್ನಿತರ ಬಿಡಿಶಿಲ್ಪಗಳು

## 7.1. ಬೃಹತ್ ಶಿಲಾಯುಗದ ನೆಲೆಗಳು

**ಪೀಠಿಕೆ**

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳು ಪ್ರಾಚೀನ ಪ್ರಾಗೈತಿಹಾಸ ಮತ್ತು ಇತಿಹಾಸ ಆರಂಭ ಕಾಲದ ಯುಗಕ್ಕೆ ಪೂರಕವಾದ ಕೆಲವೊಂದು ಬೃಹತ್ ಶಿಲಾಯುಗದ ನೆಲೆಗಳನ್ನು ಪತ್ತೆ ಮಾಡಲಾಗಿದೆ. ಗುಂಡ್ಲುಪೇಟೆ ತಾಲ್ಲೂಕು ಹಳೆ ಶಿಲಾಯುಗದ ಕಾಲದಿಂದಲೂ ತನ್ನದೇ ಆದ ಮಹತ್ವವನ್ನು ಪಡೆದ ತಾಲ್ಲೂಕಾಗಿದೆ. ಈ ತಾಲ್ಲೂಕಿನ ಭೌಗೋಳಿಕ ಪರಿಸರವನ್ನು ಗಮನಿಸಿದರೆ ಈ ಪ್ರಾಂತ್ಯ ಪ್ರಾಚೀನ ಕಾಲದಿಂದಲೂ ಮಾನವನ ನೆಲೆಸಿರುವ ಬಗ್ಗೆ ಆತನ ಕಲಾ ಚಟುವಟಿಕೆಗಳಿಗೆ ಸೂಕ್ತವಾದ ಗ್ರಾಮವಾಗಿತ್ತೆಂದು ತಿಳಿಯಬಹುದಾಗಿದೆ. ಪ್ರಾಕೃತಿಕವಾಗಿ ದೊರೆಯುತ್ತಿದ್ದ ನೀರು, ಶಿಲೆಗಳು, ಬಂಡೆ, ಗುಹೆಗಳು ಅಲ್ಲದೆ ಬೇಟೆಗೆ ಅವಶ್ಯಕವಾದ ದಟ್ಟ ಕಾಡು ಇವೆಲ್ಲವನ್ನು ಹೊಂದಿರಬೇಕು. ಆದಕಾರಣ ಗುಂಡ್ಲುಪೇಟೆಯಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನು ತನ್ನ ಜೀವನವನ್ನು ಯಾವ ರೀತಿಯಲ್ಲಿ ನಡೆಸಿರುತ್ತಾನೆಂಬುದನ್ನು ಕಾಣಬಹುದಾಗಿದೆ.

ಮನುಷ್ಯನಿಗೆ ಶಿಲೋಪಕರಣಗಳನ್ನು ತಯಾರಿಸಲು ಬೇಕಾದ ಕಲ್ಲು ನದಿಯ ಪಾತ್ರದಲ್ಲಿ ದೊರೆಯುತ್ತಿದ್ದರಿಂದ ಅವುಗಳನ್ನು ಅವಲಂಬಿಸಿಕೊಂಡು ಅನೇಕ ಉಪಕರಣಗಳನ್ನು ತಯಾರಿಸಿಕೊಂಡು ಬೇಟೆ ಮಾಡಿ ಜೀವನ ನಡೆಸುತ್ತಿದ್ದರೆಂದು ಅನೇಕ ಇತಿಹಾಸ ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೊದಲಿಗೆ ರಾಬರ್ಟ್ ಬ್ರೂಸ್‌ಫೂಟ್‌ರವರು 1881 ರಲ್ಲಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರಾಚೀನ ಮಾನವನ ನೆಲೆಗಳನ್ನು ಪತ್ತೆ ಮಾಡಿದ್ದಾರೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬೃಹತ್ ಶಿಲಾ ನೆಲೆಗಳು ಮತ್ತು ಶಿಲಾ ಗೋರಿಗಳು ಕಂಡುಬಂದಿವೆ. ಇವುಗಳನ್ನು ನನ್ನ ಕ್ಷೇತ್ರ ಕಾರ್ಯದ ಸಮಯದಲ್ಲಿ ಕಂಡುಹಿಡಿಯಲಾಗಿದೆ.[1] ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಎಂ.ಎಸ್.ಕೃಷ್ಣಮೂರ್ತಿ, ಎ.ವಿ.ನರಸಿಂಹಮೂರ್ತಿ, ಎಂ.ಶೇಷಾದ್ರಿ ಇನ್ನೂ ಮೊದಲಾದವರು ಕರ್ನಾಟಕದ ನಾನಾ ಭಾಗಗಳಲ್ಲಿ ಗುರುತಿಸಿದ್ದಾರೆ. ಅಲ್ಲದೆ ಕೆಲವು ಕಡೆ ಬೃಹತ್ ಶಿಲಾಯುಗದ ನೆಲೆಗಳನ್ನು ಉತ್ಖನನ ಮಾಡಿದೆ. ಕಬ್ಬಿಣದ ವಿವಿಧ

ಆಯುಧೋಪಕರಣಗಳನ್ನು ಬಳಸಿದ ಒಂದು ಜನಪದ ಸಾಂಸ್ಕೃತಿಕ ಸಂಸ್ಕೃತಿಯನ್ನು ಬೆಳಕಿಗೆ ತಂದಿದ್ದಾರೆ.[2]

ಬೃಹತ್ ಶಿಲಾಯುಗದ ಜನರ ವಿಶಿಷ್ಠ ಹಾಗೂ ವ್ಯಾಪಕವಾದ ಉದ್ಯಮವೆಂದರೆ ಕಬ್ಬಿಣದ ಅದಿರನ್ನು ಪರಿಷ್ಕರಿಸಿ ಕಮ್ಮಾರಿಕೆಯಿಂದ ವಿವಿಧ ಸಲಕರಣೆ ಆಯುಧೋಪಕರಣಗಳನ್ನು ತಯಾರಿಸುತ್ತಿದ್ದುದು, ಕಬ್ಬಿಣದ ತಂತ್ರಜ್ಞಾನ ಹಾಗೂ ಬಳಕೆಯ ಉದ್ಯಮ ಇತ್ತು ಎಂಬುದು ಬೃಹತ್ ಶಿಲಾ ಸಂಸ್ಕೃತಿಯ ಶಿಲಾಗೋರಿಗಳಲ್ಲಿ ಕಾಣಬಹುದು. ಅಲ್ಲದೆ ಬಹು ಬಗೆಯ ಮಡಿಕೆ ಕುಡಿಕೆಗಳನ್ನು ಬಳಸುತ್ತಿದ್ದ ಕಲಾವಂತ ಜೀವನ ವಿಧಾನ ಅದಾಗಿತ್ತು ಎನ್ನಬಹುದು.[3]

ಕಪ್ಪು–ಕೆಂಪು ಬಣ್ಣದ ಮಡಿಕೆ ವಿವಿಧ ಆಕಾರದ ಬಟ್ಟಲು, ತಪ್ಪಲೆ, ಕೊಡ, ಉಂಗುರಾಕಾರದ ಅಡ್ಡಣಿಗೆ, ಬಾನಿ ಆ ಕಾಲದ ಜನಜೀವನವನ್ನು ಪ್ರತಿಬಿಂಬಿಸುವಂತಹ ಶಿಲಾವರ್ತುಲ ಶಿಲಾ ತೊಟ್ಟಿಗಳಲ್ಲಿ ಕಾಣಬಹುದಾಗಿದೆ. ಈ ಭಾಗದ ಜನರು ಬೃಹತ್ ಶಿಲಾ ಗೋರಿ ಸಂಸ್ಕೃತಿಯ ಜನರು ಹಲವು ಅಲಂಕಾರ ಸಾಧನಗಳನ್ನು ಬಳಸುತ್ತಿದ್ದರು. ಈ ಭಾಗದ ಇತಿಹಾಸವನ್ನು ಕ್ರಿ.ಪೂ. 7–8ನೇ ಶತಮಾನದಿಂದ ಕ್ರಿ.ಶ.1ನೇ ಶತಮಾನದ ಕಾಲದವರೆಗೆ ಬೃಹತ್ ಶಿಲಾ ಗೋರಿಗಳು ಕಾರ್ಯ ನಡೆದಿರಬಹುದು.[4]

ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮೊದಲಾದ ರಾಜ್ಯಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಬಗ್ಗೆ ಸಾಕಷ್ಟು ಕಡೆ ಸಂಶೋಧನೆ ನಡೆಸಿ ಭೂ ಉತ್ಖನನವಾಗಿದೆ. ಕರ್ನಾಟಕದಲ್ಲಿ ಬ್ರಹ್ಮಗಿರಿ, ಚಂದ್ರವಳ್ಳಿ, ಹಳ್ಳೂರು, ತೆಕ್ಕಳಕೋಟೆ, ತಿರುಮಕೂಡಲು ನರಸೀಪುರ, ರಾಜಘಟ್ಟ, ತಲಕಾಡು, ಕೊಪ್ಪ, ಬೂದಿತಿಟ್ಟು, ಬಿಳಿಗಿರಿರಂಗನಬೆಟ್ಟ ಇನ್ನೂ ಮೊದಲಾದ ಕಡೆ ಭೂ ಉತ್ಖನನವಾಗಿದೆ.[5] ಈ ಹಿನ್ನೆಲೆಯಲ್ಲಿ ಅನೇಕ ಗ್ರಂಥಗಳ ಅಧ್ಯಯನದಿಂದ ನಾನು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ನಾನಾ ಗ್ರಾಮಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ನೆಲೆಗಳನ್ನು ಶಿಲಾಗೋರಿಗಳನ್ನು ಹಾಗೂ ವೀರಗುಡಿಗಳನ್ನು ಪತ್ತೆ ಮಾಡಲಾಗಿದೆ.

ಬೃಹತ್ ಶಿಲಾಯುಗ ಕಾಲಗಳ ಜನವಸತಿ ನೆಲೆಗಳು ಈ ಭಾಗದಲ್ಲಿ ಹಲವಾರು ಗ್ರಾಮಗಳಲ್ಲಿ ಗುರುತಿಸಬಹುದಾಗಿದೆ. ಉದಾಹರಣೆಗೆ ಹಸುಗೂಲಿ, ರಾಘವಪುರ, ತೊಂಡವಾಡಿ, ಕೆಲಸೂರು, ಪಡಗೂರು, ಆಲತ್ತೂರು, ಮಸಹಳ್ಳಿ, ಭೀಮನಹಬೀಡು, ಸೋಮಹಳ್ಳಿಯಲ್ಲಿ ಕಾಣಬಹುದಾಗಿದೆ. ಈ ನೆಲೆಗಳು ಬೃಹತ್ ಸಂಸ್ಕೃತಿಯ ಕಾಲಘಟ್ಟದ ಜನಪ್ರಿಯ ವಾಸ್ತವ್ಯದ ಪ್ರದೇಶವಾಗಿತ್ತೆಂಬುದು ಈ ಗ್ರಾಮಗಳ ನೆಲೆಗಳಿಂದ ದೃಢಪಟ್ಟಿದೆ. ದಕ್ಷಿಣ ಭಾರತದಲ್ಲಿ ಕಬ್ಬಿಣಯುಗವು ಬೃಹತ್ ಶಿಲಾಯುಗ ಸಂಸ್ಕೃತಿಯೊಂದಿಗೆ ಮಿಳಿತವಾಗಿದೆ.[6] ಈ ಸಂಸ್ಕೃತಿಯ

ಪ್ರಧಾನ ಲಕ್ಷಣಗಳೆಂದರೆ ಸತ್ತವರಿಗಾಗಿ ಸಮಾಧಿಗಳ ನಿರ್ಮಾಣ ಹಾಗೂ ಕಬ್ಬಿಣದ ಬಳಕೆ ಸಮಾಧಿಗಳ ನಿರ್ಮಾಣಕ್ಕೆ ಕಲ್ಲು ಬಂಡೆಗಳು ಅವಶ್ಯಕತೆ ಇರುವುದರಿಂದ ಈ ಸಂಸ್ಕೃತಿಯ ಹಲವಾರು ನೆಲೆಗಳು ಶಿಲಾ ಸಮಾಧಿಗಳು ಬೆಳಕಿಗೆ ಬಂದಿವೆ.[7] ಈ ಹಿನ್ನೆಲೆಯಿಂದ ನಾನು ನನ್ನ ಸಂಶೋಧನೆಯ ಕ್ಷೇತ್ರ ಕಾರ್ಯದ ಸಮಯದಲ್ಲಿ ಗುರುತಿಸಿ ಅವುಗಳನ್ನು ವಿಶ್ಲೇಷಿಸಲಾಗಿದೆ.

## ತೊಂಡವಾಡಿ ಗ್ರಾಮದಲ್ಲಿ ಪ್ರಾಚೀನ ನೆಲೆ ಶೋಧನೆ

ತೊಂಡವಾಡಿ ಗ್ರಾಮದಲ್ಲಿ ಪ್ರಾಚೀನ ನೆಲೆ ಪತ್ತೆ ಮಾಡಲಾಗಿದೆ. ತೊಂಡವಾಡಿ ಗ್ರಾಮದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳ ಜೊತೆಗೆ, ಗ್ರಾಮದಿಂದ ಹೊರಗೆ ಇರುವ ಶಂಕರೇಶ್ವರ ದೇವಾಲಯದ ಪರಿಸರದಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಕಾಲಕ್ಕೆ ಸೇರಿದ ಅನೇಕ ಬಗೆಯ ಮಡಿಕೆ ಚೂರುಗಳು ಮಾಸಲು ಬೂದುಬಣ್ಣದ ಹೊದಿಕೆ, ಸುಟ್ಟ ಬಣ್ಣದ ಹೊದಿಕೆ ಮತ್ತು ಬೂದು ಮಿಶ್ರಿತ ಸುಟ್ಟ ಬಣ್ಣದ ಹೊದಿಕೆ ಹಾಗೂ ಬೇರೆ ಬೇರೆ ಬಣ್ಣದ ಹೊದಿಕೆ ಇರುವ ಕಪ್ಪು ಬಣ್ಣದ ಹೊದಿಕೆ ಇರುವ ಮಡಿಕೆಗಳನ್ನು ಪತ್ತೆ ಮಾಡಲಾಗಿದೆ.[8] ಬೃಹತ್ ಶಿಲಾಯುಗ ಅಥವಾ ಕಬ್ಬಿಣ ಯುಗದ ಮಡಿಕೆ ಚೂರುಗಳು ಕಪ್ಪು ಮತ್ತು ಕೆಂಪು ಬಣ್ಣದ ಹೊದಿಕೆ, ಕಪ್ಪು ಬಣ್ಣದವುಗಳಾಗಿರುತ್ತವೆ. ಅಲ್ಲದೆ ಬಿಳಿಯ ಮತ್ತು ಕಪ್ಪು ಬಣ್ಣದವುಗಳು ಕೂಡ ಕಬ್ಬಿಣ ಯುಗಕ್ಕೆ ಸಂಬಂಧಿಸಿದ್ದವು. ಆದಕಾರಣ ಗುಂಡ್ಲುಪೇಟೆ ತಾಲ್ಲೂಕು ತೊಂಡವಾಡಿ ಗ್ರಾಮದಲ್ಲಿ ಪ್ರಾಚೀನ ಕಾಲದ ಬೃಹತ್ ಶಿಲಾಗೋರಿ ಅವಶೇಷಗಳು ಹಾಗೂ ಮಡಿಕೆ ಚೂರುಗಳನ್ನು ಪತ್ತೆ ಮಾಡಿರುವುದರಿಂದ ತೊಂಡವಾಡಿ ಗ್ರಾಮವು ಪ್ರಾಚೀನ ಕಾಲದಲ್ಲಿ ನೆಲೆಯಾಗಿತ್ತು ಎಂಬುದನ್ನು ಈ ನನ್ನ ಸಂಶೋಧನೆಯ ಮೂಲಕ ಹೊಸ ವಿಚಾರಗಳನ್ನು ತಿಳಿಸಿದಂತೆ ಆಗಿದೆ. (ಚಿತ್ರಸಂಖ್ಯೆ-119)

ಈ ಭಾಗದಲ್ಲಿ ಇಲ್ಲಿಯ ಇತಿಹಾಸ ಆರಂಭ ಸಂಸ್ಕೃತಿ ಅಂದರೆ ಮನೆ ಕಟ್ಟುವುದು, ವ್ಯವಸಾಯ ಮೊದಲಾದ ಕಾರಣಗಳಿಂದಾಗಿ ಈ ಸಂಸ್ಕೃತಿಯ ನೆಲೆಗಳು ಬಹಳಷ್ಟು ಮಟ್ಟಿಗೆ ಹಾಳಾಗಿವೆ. ಆದರೂ ಕೂಡ ಕೆಲವು ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಬ್ರಹ್ಮಗಿರಿ, ಚಂದ್ರವಳ್ಳಿ, ಮಸ್ಕಿ, ತಿರುಮಕೂಡಲು ನರಸೀಪುರ, ರಾಜಘಟ್ಟ, ಕೊಪ್ಪ, ಬನವಾಸಿ, ಪಿಕ್ಲಿಹಾಳ ಇನ್ನೂ ಮೊದಲಾದ ಕಡೆ ಬೃಹತ್ ಶಿಲಾ ಸಂಸ್ಕೃತಿಯ ನೆಲೆಗಳನ್ನು ಪತ್ತೆ ಮಾಡಿರುವುದನ್ನು ಅಧ್ಯಯನ ಮಾಡಲಾಗಿದೆ. ತಿರುಮಕೂಡಲು ನರಸೀಪುರ ಕ್ರಿ.ಪೂ.2ನೇ ಸಹಸ್ರಮಾನದಿಂದ ಪ್ರಾರಂಭವಾಗಿ ಕ್ರಿ.ಶ.ದ ಶತಮಾನದ ಪ್ರಾರಂಭದವರೆವಿಗೂ ಮಾನವನ ಚಟುವಟಿಕೆಯ ಕೇಂದ್ರವಾಗಿದ್ದಿತೆಂದು ತಿಳಿದುಬಂದಿದೆ. ಅದೇ ಸಂಸ್ಕೃತಿಯನ್ನು ಗುಂಡ್ಲುಪೇಟೆ

ತಾಲ್ಲೂಕಿನಲ್ಲಿಯೂ ಸಹ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಬೃಹತ್ ಶಿಲಾ ಸಮಾಧಿಯನ್ನು ಪಟ್ಟಿ ಮಾಡಿ ತಿಳಿಸಲಾಗಿದೆ.

## ಹಸುಗೂಲಿಯ ಬೃಹತ್ ಶಿಲಾಯುಗದ ಅವಶೇಷಗಳು

ಹಸುಗೂಲಿ ಗ್ರಾಮದಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ಅವಶೇಷಗಳಿವೆ. ಇಲ್ಲಿರುವ ಸಿದ್ಧರಾಮೇಶ್ವರ ದೇವಾಲಯದ ಮುಂದೆ ಎರಡು ಬೃಹತ್ ಶಿಲಾಸಂಸ್ಕೃತಿಗೆ ಸೇರಿದ ಸಮಾಧಿಗಳು ಇತ್ತೆಂದು ಗುರುತಿಸಬಹುದಾಗಿದೆ. ಆದರೆ ಈವಾಗ ಸಂಪೂರ್ಣವಾಗಿ ನಾಶವಾಗಿವೆ. ಈ ಅವಶೇಷಗಳ ಮಧ್ಯದಲ್ಲಿ ವೀರಗಲ್ಲುಗಳಿವೆ. ಇಲ್ಲಿಯ ಜನರು ವೀರಗುಡಿಗಳೆಂದು ಕರೆಯುವ ವಾಡಿಕೆ ಇದೆ. ಆದರೆ ಇದೊಂದು ಪ್ರಾಚೀನ ಕಾಲಕ್ಕೆ ಸೇರಿದ ಒಂದು ಸಮಾಧಿ ಎಂದು ಗುರುತಿಸಲಾಗಿದೆ.

ಅದೇ ರೀತಿ ಗ್ರಾಮದ ಮಧ್ಯದಲ್ಲಿಯೂ ಕೂಡ ಒಂದು ಸಮಾಧಿ ಇದೆ. ಇದಕ್ಕೆ ಕೆಂಪನಪುರಪ್ಪ ದೇವಾಲಯವೆಂದು ಕರೆಯುವ ವಾಡಿಕೆ ಪ್ರಸ್ತುತ ಇದೆ. ಆದರೆ ಇದು ದೇವಾಲಯವಲ್ಲ. ಇದೊಂದು ಪ್ರಾಚೀನ ಕಾಲಕ್ಕೆ ಸೇರಿದ ಸಮಾಧಿ ಎಂದು ಹೇಳಬಹುದಾಗಿದೆ. ಸಮಾಧಿ ಒಳಗೆ ಒಂದು ಶಾಸನ ಕಲ್ಲು ಮತ್ತು ವೀರಗಲ್ಲು ಇದೆ. ಈ ಗ್ರಾಮದ ಮಾದಪ್ಪ ಮತ್ತು ಸಿದ್ಧಮಲ್ಲಪ್ಪರವರುಗಳ ಪ್ರಕಾರ ಹಿಂದೆ ಹಸುಗಳು ಈ ಜಾಗದಲ್ಲಿ ಮರಣ ಹೊಂದಿದ್ದವಂತೆ ಅದಕ್ಕೋಸ್ಕರ ಅವುಗಳನ್ನು ಈ ಜಾಗದಲ್ಲಿಯೇ ಸಮಾಧಿ ಮಾಡಿಸಿದರಂತೆ ಎಂಬ ಹೇಳಿಕೆಗಳನ್ನು ನೀಡುತ್ತಾರೆ. ಆದಕಾರಣ ಇದೊಂದು ಹಸುಗಳ ಸಮಾಧಿ ಅಥವಾ ಜನರುಗಳ ಸಮಾಧಿಯೇ ಎಂಬುದು ತರ್ಕಬದ್ಧ ವಿಚಾರವಾಗಿದೆ. ಆದರೂ ಕೂಡ ಇದೊಂದು ಸಮಾಧಿಯೆ ಆಗಿದೆ ಎಂದು ತಿಳಿಸಲಾಗಿದೆ.

ಇನ್ನೊಂದು ಚಿಕ್ಕದಾದ ಸಮಾಧಿ ಇದೆ. ಈ ಸಮಾಧಿಯ ಒಳಗೆ ಒಬ್ಬ ವೀರನ ಶಿಲ್ಪವನ್ನು ಇಡಲಾಗಿದೆ. ಆದಕಾರಣ ಇದು ಸಹ ಒಂದು ವೀರಗಲ್ಲು ಸಮಾಧಿಯಾಗಿದೆ. ಇವೆಲ್ಲವುಗಳ ಆಧಾರದಿಂದ ಹಸುಗೂಲಿ ಗ್ರಾಮದಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಕೆಲವೊಂದು ಸಮಾಧಿಗಳು ಇದ್ದವೆಂದು ತಿಳಿದುಬರುತ್ತದೆ. (ಚಿತ್ರಸಂಖ್ಯೆ-120)

## ಆಲತ್ತೂರು

ಆಲತ್ತೂರು ಗ್ರಾಮದಲ್ಲಿ ಗ್ರಾಮದಿಂದ ಹೊರಗೆ ಕೆಲವೊಂದು ಅವಶೇಷಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಮಾಸ್ತಿಕಲ್ಲು, ಸಮಾಧಿ ಕಲ್ಲುಗಳು ಹಾಗೂ ಸಮಾಧಿ (ಮಾರಿ)

ಎಂಬ ವಿಚಾರವು ಇದೆ ಎಂಬುದಾಗಿ ಈ ಗ್ರಾಮದ ಲಿಂಗಾಯಿತ ಎಂ.ಎಲ್.ಮಾದೇಗೌಡರವರು ತಿಳಿಸುತ್ತಾರೆ. ಇಲ್ಲಿರುವ ಸಮಾಧಿಗೆ ಬಳಸಿರುವ ಕಲ್ಲುಗಳನ್ನು ಗುರುತಿಸಿದರೆ, ಹಾಗೂ ಸ್ಥಳೀಯರ ಪ್ರಕಾರ ಇಲ್ಲಿ ಸಮಾಧಿ ಮಾರಿ ಎಂದು ಕರೆಯುವುದರಿಂದ, ಈ ನೆಲೆ ಹಿಂದೆ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಒಂದು ನೆಲೆಯಾಗಿತ್ತೆಂಬುದರಲ್ಲಿ ಯಾವುದೇ ತರಹದ ಅನುಮಾನವಿಲ್ಲ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. (ಚಿತ್ರಸಂಖ್ಯೆ-121)

ಆಲತ್ತೂರಿನ ಗ್ರಾಮದಿಂದ ಒಂದೂವರೆ ಕಿಲೋಮೀಟರ್ ದೂರದಲ್ಲಿ ದುಃಸ್ಥಿತಿಯಾಗಿರುವ ಒಂದು ಸಮಾಧಿಯ ಅವಶೇಷಗಳಿವೆ. ಈ ಭಾಗದಲ್ಲಿ ಗಣಪತಿಯ ದೇವಾಲಯ, ಸಿದ್ಧೇಶ್ವರ ದೇವಾಲಯಗಳು ಸಹ ಇವೆ. ಅಂದಿನಿಂದ ಇಂದಿನವರೆಗೂ ಆಲತ್ತೂರಿನ ಜನರು ಈ ದೇವಾಲಯಗಳಿಗೆ ಪೂಜೆಯನ್ನು ಸಲ್ಲಿಸುವ ಪದ್ಧತಿ ಇದೆ. ಇವೆಲ್ಲವುಗಳು ಇರುವ ಪರಿಸರದಲ್ಲಿ ದುಃಸ್ಥಿತಿಯಾಗಿರುವ ಸಮಾಧಿಯ ಅವಶೇಷಗಳಿವೆ.

**ರಾಘವಪುರ**

ರಾಘವಪುರದಲ್ಲಿ ಲಕ್ಷ್ಮೀನಾರಾಯಣ, ರಾಮಲಿಂಗೇಶ್ವರ ದೇವಾಲಯ, ಪಟ್ಟಲದಮ್ಮ, ಮಹದೇಶ್ವರ, ಸಿದ್ದಪ್ಪಾಜಿ, ಮಾರಿಗುಡಿಯ ದೇವಾಲಯಗಳಿವೆ. ಈ ಗ್ರಾಮ ಪ್ರಾಚೀನ ಕಾಲದಿಂದಲೂ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಈ ಗ್ರಾಮದಲ್ಲಿ ವೀರಗಲ್ಲುಗಳು, ಮಾಸ್ತಿಕಲ್ಲುಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಈ ವೀರಗಲ್ಲುಗಳ ಜೊತೆಯಲ್ಲಿಯೇ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಶಿಲಾ ಸಮಾಧಿಗೆ ಬಳಸಲಾಗಿದ್ದ, ಕಲ್ಲುಚಪ್ಪಡಿಗಳ ಅವಶೇಷಗಳಿವೆ. ಆದಕಾರಣ ರಾಘವಪುರದಲ್ಲಿ ಬೃಹತ್ ಶಿಲಾಸಂಸ್ಕೃತಿಗೆ ಸೇರಿದ ಅವಶೇಷಗಳನ್ನು ಗುರುತಿಸಲಾಗಿದೆ. (ಚಿತ್ರಸಂಖ್ಯೆ-122)

**ಹಿರೀಕಾಟಿ**

ಹಿರೀಕಾಟಿ ಒಂದು ಪ್ರಾಕೃತಿಕ ನೆಲೆಯಾಗಿತ್ತು. ಈಗ ಈ ಗ್ರಾಮ ಕಲ್ಲುಗಣಿಗಳಿಂದ ಹಾಳಾಗಿದೆ. ಇಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಸಮಾಧಿಯನ್ನು ಪತ್ತೆ ಮಾಡಲಾಗಿದೆ. ಅಲ್ಲದೆ ಈ ನೆಲೆಯಲ್ಲಿ ವೀರಗಲ್ಲುಗಳು ಸಹ ಇವೆ. ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಶಾಸನ ಹಾಗೂ ಚಂದ್ರಮೌಳೇಶ್ವರ ದೇವಾಲಯ ಇದೆ. ಈ ಪರಿಸರದಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಬಳಕೆಯ ಸಮಾಧಿಯ ಅವಶೇಷಗಳನ್ನು ಗುರುತಿಸಲಾಗಿದೆ.

## ಕೆಲಸೂರು

ಕೆಲಸೂರು ಜೈನಧರ್ಮದ ಒಂದು ಪ್ರಾಚೀನ ನೆಲೆ ಹಾಗೆಯೇ ಶಕ್ತಿಪ್ರಧಾನವಾದ ಹಿಂದೂ ದೇವಾಲಯಗಳು ಸಹ ಇವೆ. ಈ ಗ್ರಾಮದಲ್ಲಿ ಹಲವಾರು ರೀತಿಯಲ್ಲಿರುವ ಬೃಹತ್ ಶಿಲಾ ಸಮಾಧಿಗಳನ್ನು ಸಮಾಧಿಗೆ ಬಳಸಲಾಗಿರುವ ಅವಶೇಷಗಳನ್ನು ಗುರುತಿಸಲಾಗಿದೆ. ಕೆಲಸೂರಿನ ಗ್ರಾಮದ ಮಧ್ಯದಲ್ಲಿ ಮಾರಮ್ಮನ ದೇವಾಲಯದ ಪರಿಸರದಲ್ಲಿ ಅನೇಕ ತರಹದ ಅವಶೇಷಗಳಿವೆ. ಅವುಗಳಲ್ಲಿ ಮಾರಮ್ಮನ ಶಿಲ್ಪ, ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಕಂಬ, ಎರಡು ಸಮಾಧಿ ಅವಶೇಷಗಳು ತಮಿಳು ಶಾಸನಗಳ ಚಪ್ಪಡಿ, ಆನೆ ಇರುವ ಚಪ್ಪಡಿ ಇವೆ. ಗ್ರಾಮದಿಂದ ಪೂರ್ವ ದಿಕ್ಕಿಗೆ ಇರುವ ಗದ್ದೆಮಾರಮ್ಮನ ದೇವಾಲಯ ಅಥವಾ ಸಪ್ತಮಾತೃಕೆಯರ ದೇವಾಲಯ ಇದೆ. ಈ ದೇವಾಲಯದ ಮುಂದೆ ಒಂದು ವಿಶಾಲವಾದ ಸಮಾಧಿ ಇದೆ. ಇದನ್ನು ಬೃಹತ್ ಶಿಲಾ ಸಂಸ್ಕೃತಿಗೆ ಸೇರಿಸಬಹುದಾಗಿದೆ. ಈ ಸಮಾಧಿ ದಕ್ಷಿಣಾಭಿಮುಖವಾಗಿದ್ದು, ಒಳಗೆ ಒಬ್ಬ ವೀರನನ್ನು ನಿಲ್ಲಿಸಲಾಗಿದೆ. ಆದಕಾರಣ ಈತನು ಅಂದಿನ ಕಾಲಕ್ಕೆ ರಾಜ ಅಥವಾ ಪ್ರಮುಖ ವ್ಯಕ್ತಿಯಾಗಿದ್ದು, ಈತನ ಮರಣವಾದ ನಂತರ ಆತನ ನೆನಪಿಗಾಗಿ ಈ ಬೃಹತ್ ಶಿಲಾ ಸಮಾಧಿಯನ್ನು ನಿರ್ಮಿಸಬೇಕು ಎಂಬುದು ನನ್ನ ಸಂಶೋಧನೆಯ ಅನ್ವೇಷಣೆಯಾಗಿದೆ. ಅದೇ ಮಾದರಿಯಲ್ಲಿ ಇದೇ ಗ್ರಾಮದ ಮಹಾಲಿಂಗೇಶ್ವರ ದೇವಾಲಯದ ಮುಂದೆ ಇದೇ ಮಾದರಿಯ ವಿಶಾಲವಾದ ವೀರಸಮಾಧಿಯನ್ನು ಕಾಣಬಹುದಾಗಿದೆ. ಸಮಾಧಿ ಒಳಗೆ ಪದ್ಮಾಸನದಲ್ಲಿ ಕುಳಿತ ಭಂಗಿಯಲ್ಲಿ ವೀರನ ಶಿಲ್ಪ ಇದೆ. ಆದಕಾರಣ ಈತನು ಸಹ ಅಂದಿನ ಕಾಲದ ಪ್ರಮುಖ ವ್ಯಕ್ತಿಯಾಗಿದ್ದಾನೆ.

ಇವರಿಬ್ಬರ ನೆನಪಿಗಾಗಿಯೇ ಕೆಲಸೂರಿನಲ್ಲಿ ಅದರಲ್ಲೂ ದೇವಾಲಯದ ಮುಂದೆಯೇ ಸಮಾಧಿಯನ್ನು ನಿರ್ಮಿಸಿರುವುದು ಈ ಗ್ರಾಮದ ಇತಿಹಾಸವನ್ನು ವ್ಯಕ್ತಪಡಿಸುತ್ತದೆ. ಈ ಸಮಾಧಿಯ ಮುಂದೆ ಎರಡು ವೀರಗಲ್ಲುಗಳು ಸಹ ಇವೆ. ಆದಕಾರಣ ಇವೆಲ್ಲವುದರ ಅನ್ವೇಷಣೆಗಳಿಂದ ಕೆಲಸೂರು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಅನೇಕ ಬಗೆಯ ಸಂಸ್ಕೃತಿಯನ್ನು ಅವಲಂಬಿಸಿಕೊಂಡಿದೆ ಎಂಬುದು ತಿಳಿದುಬರುತ್ತದೆ. (ಚಿತ್ರಸಂಖ್ಯೆ–123)

## ಕುಲಗಾಣ

ಕುಲಗಾಣದಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ದುಃಸ್ಥಿತಿಯಾಗಿರುವ ಒಂದು ಸಮಾಧಿ ಇದೆ. ಈ ಸಮಾಧಿಗೆ ಬೊಮ್ಮಪ್ಪನ ಸಮಾಧಿ ಎಂದು ಕರೆಯುವ ವಾಡಿಕೆ ಇದೆ. ಈ

ಸ್ಥಳದಲ್ಲಿ ಕೆಲವೊಂದು ವೀರಗಲ್ಲುಗಳು ಮತ್ತು ಕುದುರೆ ಮೇಲೆ ಕುಳಿತ ವೀರ ರಾಜನ ಶಿಲ್ಪ ಇದೆ. ಆದಕಾರಣ ಇದೊಂದು ಪ್ರಮುಖವಾದ ಸಮಾಧಿ ಎಂದೇ ಪರಿಗಣಿಸಬಹುದಾಗಿದೆ. ಕುಲಗಾಣದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿಯೂ ಕೂಡ ಸಾಕಷ್ಟು ಸಂಖ್ಯೆಯಲ್ಲಿ ವೀರಗಲ್ಲುಗಳು ಮಾಸ್ತಿಕಲ್ಲುಗಳಿವೆ. ಆದಕಾರಣ ಕುಲಗಾಣ ಬೃಹತ್ ಶಿಲಾಸಂಸ್ಕೃತಿ ಕಾಲದಿಂದ ಹಿಡಿದು ಪ್ರಸ್ತುತ ಕಾಲದವರೆಗೂ ತನ್ನದೇ ಇತಿಹಾಸವನ್ನು ಸೃಷ್ಠಿಸಿಕೊಂಡಿದೆ. (ಚಿತ್ರಸಂಖ್ಯೆ–124)

## ಸೋಮಹಳ್ಳಿ

ಸೋಮಹಳ್ಳಿಯಲ್ಲಿ ಎರಡು ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಸಮಾಧಿಗಳಿವೆ. ಒಂದು ಸಮಾಧಿಯಲ್ಲಿ ರಾವಳೇಶ್ವರನ ಶಿಲ್ಪವನ್ನು ಇರಿಸಲಾಗಿದೆ. ರಾವಳೇಶ್ವರನು ಸಹ ಒಬ್ಬ ರಾಜನೆಂದು ಹಿರಿಯ ಸಂಶೋಧಕರು ವ್ಯಕ್ತಪಡಿಸಿದ್ದಾರೆ. ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಬದನಗುಪ್ಪೆಯಲ್ಲಿ ಇದೇ ಮಾದರಿಯ ಸಮಾಧಿಯನ್ನು ಡಾ.ಬಿ.ಬಸವರಾಜು ತಗರಪುರರವರು ಗುರುತಿಸಿ ಕರ್ನಾಟಕ ಇತಿಹಾಸ ಅಕಾಡೆಮಿ ವತಿಯಿಂದ ಇತಿಹಾಸ ದರ್ಶನ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಈ ಹಿನ್ನೆಲೆಯಿಂದ ನಾನು ಗುಂಡ್ಲುಪೇಟೆ ತಾಲ್ಲೂಕಿನ ನಾನಾ ಗ್ರಾಮದಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಸಮಾಧಿಗಳನ್ನು ಪತ್ತೆ ಮಾಡಲಾಗಿದ್ದು, ಇದೊಂದು ವಿಶೇಷವಾದ ರೀತಿಯ ಸಮಾಧಿಯಾಗಿದೆ. ಇದು ಸಮಾಧಿಯೇ ಹೊರತು, ದೇವಾಲಯವಲ್ಲ. ಕೆಲವು ಇತಿಹಾಸ ಚಿಂತಕರು ಈ ರೀತಿಯ ಗುಡಿಗಳನ್ನು ವೀರರ ಗುಡಿಗಳೆಂದು ಕರೆದಿದ್ದಾರೆ. ಆದಕಾರಣ ಈ ರಾವಳೇಶ್ವರನನ್ನು ವೀರನಾಗಿ, ರಾಜನಾಗಿರುವುದರಿಂದ ಸಮಾಧಿ ಮಾಡಿರುವುದು ಈ ಗ್ರಾಮದ ಒಂದು ಕೊಡುಗೆಯನ್ನು ವ್ಯಕ್ತಪಡಿಸಿದೆ. ಸೋಮಹಳ್ಳಿಯಲ್ಲಿ ಮತ್ತೊಂದು ವೀರಗುಡಿ ಇದೆ. ಇಲ್ಲಿ ಒಂದು ವೀರಗಲ್ಲನ್ನು ಮಾತ್ರ ನಿಲ್ಲಿಸಲಾಗಿದೆ. ಇವೆಲ್ಲವುದರ ಬೆಳವಣಿಗೆಯಿಂದ ಗುಂಡ್ಲುಪೇಟೆ ತಾಲ್ಲೂಕಿನ ಸಾಕಷ್ಟು ಪ್ರಾಚೀನ ಕಾಲದ ಗ್ರಾಮದಲ್ಲಿ ಬೃಹತ್ ಸಂಸ್ಕೃತಿಗೆ ಸೇರಿದ ಸಮಾಧಿಯ ಅವಶೇಷಗಳನ್ನು ವೀರಗುಡಿಗಳನ್ನು ಪತ್ತೆ ಮಾಡಲಾಗಿದೆ. ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದಂತೆ ಇಲ್ಲಿಯ ತನಕ ಯಾರು ಸಹ ಈ ರೀತಿಯ ಅನ್ವೇಷಣೆಯನ್ನು ಮಾಡಿಲ್ಲ. ಇದೊಂದು ಹೊಸ ಅನ್ವೇಷಣೆಯಾಗಿದೆ.

## ಪಡಗೂರು

ಪಡಗೂರು ಅತ್ಯಂತ ಪ್ರಾಚೀನವಾದ ಗ್ರಾಮವಾಗಿದ್ದು, ಈ ಗ್ರಾಮ ತನ್ನದೇ ಆದ ಸಾಕಷ್ಟು ಪರಂಪರೆಯನ್ನು ಪಡೆದುಕೊಂಡಿದೆ. ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ

ಪಡಗೂರಿನಲ್ಲಿಯೂ ಒಂದು ಬೃಹತ್ ಶಿಲಾ ಸಮಾಧಿಯನ್ನು ಪತ್ತೆ ಮಾಡಲಾಗಿದೆ. ಪ್ರಸ್ತುತ ದುಃಸ್ಥಿತಿಯಾಗಿದ್ದರೂ ಕೂಡ, ಇದೊಂದು ಪ್ರಾಚೀನ ಸಮಾಧಿ ಎಂದು ಪರಿಗಣಿಸಲಾಗಿದೆ. ಸಮಾಧಿಯ ಒಳಗೆ ವೀರಗಲ್ಲುಗಳನ್ನು ನಿಲ್ಲಿಸಿದ್ದಾರೆ. ಕೆಲವು ಹಿರಿಯ ವಿದ್ವಾಂಸರು ಈ ರೀತಿಯ ಗುಡಿಗಳನ್ನು ವೀರಗುಡಿ ಎಂದೂ ಸಹ ಕರೆದಿದ್ದಾರೆ. ನನ್ನ ಪ್ರಕಾರ ಇದೊಂದು ಪ್ರಾಚೀನ ಸಮಾಧಿಯಾಗಿದೆ. (ಚಿತ್ರಸಂಖ್ಯೆ–125)

## ವೀರನಪುರ

ವೀರನಪುರದಲ್ಲಿ ವೀರಭದ್ರೇಶ್ವರ ದೇವಾಲಯದ ಪರಿಸರದಲ್ಲಿ ನಾಲ್ಕು ದೇವಾಲಯಗಳಿದ್ದು, ಈ ದೇವಾಲಯಗಳ ಸಮೀಪದಲ್ಲಿಯೇ ಹಲವಾರು ಅವಶೇಷಗಳು ದೊರೆತಿವೆ. ಅವುಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಕಲ್ಲುಚಪ್ಪಡಿಗಳಿವೆ. ಈ ಚಪ್ಪಡಿಗಳು ಅಲ್ಲಲ್ಲಿ ಬಿದ್ದಿವೆ. ಮೊದಲಿಗೆ ಈ  ಊರಿನಿಂದ ಹೊರಗೆ ಇತ್ತೆಂದು ತಿಳಿಯಬಹುದಾದರೂ ಈಗ ಈ ಗ್ರಾಮದ ಮಧ್ಯದಲ್ಲಿ ಈ ದೇವಾಲಯಗಳಿವೆ. ಬೃಹತ್ ಶಿಲಾಗೋರಿ ಪಕ್ಕದಲ್ಲಿ ಒಂದು ಒರಲು ಕಲ್ಲು ಸಹ ಇದೆ. ಎರಡು ಮಾಸ್ತಿಕಲ್ಲಿನ ಶಾಸನವೂ ಇರುವುದರಿಂದ ಮೊದಲಿಗೆ ಶಿಲಾ ಸಮಾಧಿ ಇದ್ದಂತಹ ಕುರುಹು ಕಾಣಬರುವುದರಿಂದ ಇದೊಂದು ಪ್ರಾಚೀನ ಕಾಲಕ್ಕೆ ಸೇರಿದ ಗ್ರಾಮವಾಗಿತ್ತೆಂದು ತಿಳಿಯಬಹುದಾಗಿದೆ. ಈ ಗ್ರಾಮದಲ್ಲಿ ಕಲ್ಲಿನ ಸಮಾಧಿಯು ಸಹ ಇತ್ತು ಎಂದು ಇಲ್ಲಿರುವ ಅಳಿದುಳಿದು ಅಲ್ಲಲ್ಲಿ ಬಿದ್ದಿರುವ ಚಪ್ಪಡಿಗಳಿಂದ ಗುರುತಿಸಬಹುದಾಗಿದೆ.

## ಪಂಜನ ಹಳ್ಳಿ

ಪಂಜನಹಳ್ಳಿಯಲ್ಲಿ ಗ್ರಾಮದ ಮಧ್ಯದಲ್ಲಿ ಪ್ರಾಚೀನ ಕಾಲಕ್ಕೆ ಸೇರಿಸಬಹುದಾದಂತಹ ದೇವಾಲಯದ ಸಮೀಪದಲ್ಲಿಯೇ ಒಂದು ಶಿಲಾ ಸಮಾಧಿ ಇದೆ. ಈ ಶಿಲಾ ಸಮಾಧಿಯು ಪೂರ್ವಾಭಿಮುಖವಾಗಿದ್ದು, ಗುಡಿಯ ಒಳಗೆ ಒಂದು ವೀರಗಲ್ಲನ್ನು ಸಹ ನಿಲ್ಲಿಸಿದ್ದಾರೆ. ಈ ಊರಿನವರ ಪ್ರಕಾರ ಇದೊಂದು ದೇವರ ಗುಡಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆದರೆ ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಇದನ್ನು ಪತ್ತೆ ಮಾಡಿ ಇದೊಂದು ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಸಮಾಧಿಯೇ ಎಂದು ಪರಿಗಣಿಸಿದ್ದೇನೆ. ಹಿರಿಯ ವಿದ್ವಾಂಸರ ಪ್ರಕಾರ ಈ ರೀತಿಯ ಗುಡಿಗಳನ್ನು ಬೃಹತ್ ಶಿಲಾಗೋರಿ ಅಥವಾ ದೇವರಗುಡಿ ಎಂದು ಪರಿಗಣಿಸಿದ್ದಾರೆ. ಈ ಹಿನ್ನೆಲೆಯಿಂದ ಹಾಗೂ ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಇಲ್ಲಿ ದೊರೆತ ಅನೇಕ ಅವಶೇಷಗಳಿಂದ ಇದೇ ಸ್ಥಳದಲ್ಲಿ 5 ವೀರ ವನಿತೆಯರು ಯುದ್ಧ ಮಾಡುತ್ತಿರುವ ವೀರಗಲ್ಲು ಇರುವುದರಿಂದ ಇದೊಂದು ಸಮಾಧಿಯೇ ಎಂದು ಭಾವಿಸಿದ್ದೇನೆ. (ಚಿತ್ರಸಂಖ್ಯೆ–126)

**ಬೊಮ್ಮಲಾಪುರ**

ಬೊಮ್ಮಲಾಪುರ ಗ್ರಾಮದಲ್ಲಿ ಬೃಹತ್ ಶಿಲಾ ಸಮಾಧಿಯ ಅವಶೇಷಗಳನ್ನು ಪತ್ತೆ ಮಾಡಲಾಗಿದೆ. ಈ ಸಮಾಧಿಯ ಹತ್ತಿರದಲ್ಲಿ ಸಾಕಷ್ಟು ಬಿಡಿಶಿಲ್ಪಗಳು ಬಂದಿವೆ. ಕೆಲವೊಂದು ಯೋಧನ ಶಿಲ್ಪಗಳಿವೆ. ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆ ಈ ನೆಲೆಯಲ್ಲಿ ಸಮಾಧಿಯನ್ನು ನಿರ್ಮಿಸಿದ್ದಾರೆಂದು ತಿಳಿಯಬಹುದಾಗಿದೆ.

**ಶಿವಪುರ**

ಶಿವಪುರದಲ್ಲಿಯೂ ಒಂದು ಬೃಹತ್ ಶಿಲಾಸಮಾಧಿಯನ್ನು ಪತ್ತೆ ಮಾಡಲಾಗಿದೆ. ಶಿಲಾಗೋರಿಯು ದುಃಸ್ಥಿತಿಯಾಗಿದ್ದು, ಅದರ ಪಕ್ಕದಲ್ಲಿ ಮಾಸ್ತಿಕಲ್ಲು ಇದೆ. ಇಲ್ಲಿಯ ಗ್ರಾಮದ ಜನರು ಇದನ್ನು ದೇವರ ಗುಡಿಯೆಂದು ಕರೆಯುತ್ತಾರೆ. ಏಕೆಂದರೆ ಮರಣ ಹೊಂದಿದ ವ್ಯಕ್ತಿಯನ್ನು ಸಮಾಧಿ ಮಾಡಿ ಪೂಜಿಸುತ್ತಿದ್ದುದರಿಂದ ಅದು ಮುಂದೆ ದೇವರ ಗುಡಿಗಳಾಗಿವೆ. ಆದಕಾರಣ ಈ ರೀತಿಯ ಸಮಾಧಿಗಳನ್ನು ದೇವರ ಗುಡಿಗಳೆಂದು ಕರೆಯುವ ವಾಡಿಕೆ ಇದೆ.

**ಮಸಹಳ್ಳಿ ಕಟ್ಟೆ**

ಗ್ರಾಮದಿಂದ ಹೊರಗೆ ನಾಶವಾಗಿರುವ ಪ್ರದೇಶವನ್ನು ಗುರುತಿಸಲಾಗಿದೆ. ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ನೆಲೆಯಾಗಿತ್ತೆಂಬುದಕ್ಕೆ ಇಲ್ಲಿನ ಸುತ್ತಮುತ್ತಲು ದೊರೆತಿರುವ ಪ್ರಾಗೈತಿಹಾಸಿಕ ಕುರುಹುಗಳೇ ಸಾಕ್ಷಿಯಾಗಿವೆ. ಈ ನೆಲೆಯಲ್ಲಿ ಸಮಾಧಿ ಶಿಲ್ಪಗಳು, ನಿಲುಸುಗಲ್ಲುಗಳು, ಅಲ್ಲದೆ ಶಿಲಾ ವೃತ್ತಗಳಿವೆ. ಇಲ್ಲಿಯ ಸಮಾಧಿ ದಿನ್ನೆಗಳು ಹಾಗೂ ಸಮಾಧಿ ದಿಬ್ಬಗಳಿರುವುದರಿಂದ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಪ್ರಮುಖವಾದ ನೆಲೆಯಾಗಿದೆ. ಒಂದು ಗುಡಿಯಲ್ಲಿ ಕೆಲವೊಂದು ದೇವರ ಕಲ್ಲುಗಳನ್ನು ಇಟ್ಟಿದ್ದಾರೆ. ಇದರ ಪರಿಸರದಲ್ಲಿ ಸಾಕಷ್ಟು ಕಲ್ಲಿನ ಅವಶೇಷಗಳಿವೆ. ಕೆಲವೊಂದು ಸಂದರ್ಭದಲ್ಲಿ ಮರಣ ಹೊಂದಿದ ಮೇಲೆ ದೇಹವನ್ನು ಭೂಮಿಯಲ್ಲಿಟ್ಟು ಅದರ ಸುತ್ತಲೂ ಕಲ್ಲುಗಳನ್ನು ಇಡುತ್ತಿದ್ದರು. ಅದನ್ನು ಈ ಪ್ರದೇಶದಲ್ಲಿ ಗುರುತಿಸಲಾಗಿದೆ. ಈ ನೆಲೆಯಲ್ಲಿ ಅನೇಕ ಬಿಡಿಶಿಲ್ಪಗಳಿವೆ. ರಾವಳೇಶ್ವರ ಶಿಲ್ಪಗಳಿವೆ. ಇಲ್ಲಿರುವ ಶಿಲ್ಪಗಳನ್ನು ಕ್ರಿ.ಶ.10ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಅಲ್ಲದೆ ಪಾಣಿಪೀಠಗಳು ಸಹ ಕಂಡುಬಂದಿವೆ. ಈ ಎಲ್ಲಾ ಬೆಳವಣಿಗೆಯಿಂದ ಮಸಹಳ್ಳಿ ಕಟ್ಟೆ ಒಂದು ಪ್ರಾಚೀನ ನೆಲೆ ಎಂಬುದರಲ್ಲಿ ಯಾವುದೇ ತರಹದ ಸಂದೇಹವಿಲ್ಲ. ಈ ಭಾಗದ ಸುತ್ತಮುತ್ತಲಿನ ಕ್ಷೇತ್ರಾಧ್ಯಾಯನದಿಂದ ತಿಳಿದು ಬಂದ ಮಾಹಿತಿ ಎಂದರೆ ಅನೇಕ ಬೃಹತ್ ಶಿಲಾ ಸಮಾಧಿಯ ಕುರುಹುಗಳು ಅಲ್ಲಲ್ಲಿ ಚದುರಿರುವುದನ್ನು ನೋಡಿದರೆ ಈ ಪರಿಸರದಲ್ಲಿ ಇನ್ನೂ ಸಾಕಷ್ಟು

ಅವಶೇಷಗಳು ಭೂಮಿಯಲ್ಲಿ ಮುಚ್ಚಿ ಹೋಗಿವೆ. ಮನುಷ್ಯನ ಕಾರ್ಯ ಚಟುವಟಿಕೆಗಳಿಂದಾಗಿ ಇಂತಹ ಅತ್ಯಮೂಲ್ಯ ಸಂಸ್ಕೃತಿಯ ಕುರುಹುಗಳು ನಾಶವಾಗಿದೆ. ಇರುವ ಕೆಲವೇ ಕೆಲವು ಅಮೂಲ್ಯ ಸಮಾಧಿಗಳ ಸಂಶೋಧನೆ ಹಾಗೂ ಆಳವಾದ ಅಧ್ಯಯನದ ಅಗತ್ಯತೆಯೂ ಕೂಡ ಇದೆ. (ಚಿತ್ರಸಂಖ್ಯೆ-127)

**ಭೀಮನಬೀಡು**

ಗುಂಡ್ಲುಪೇಟೆ ತಾಲ್ಲೂಕಿನ ಭೀಮನಬೀಡು ಗ್ರಾಮದ ಹೊರವಲಯದಲ್ಲಿ ಪ್ರಾಗೈತಿಹಾಸಿಕ ಸಂಸ್ಕೃತಿಯ ನೆಲೆಗಳಾದ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಶಿಲಾವೃತ್ತಗಳುಗಳನ್ನು ಪತ್ತೆ ಮಾಡಲಾಗಿದೆ.

ನವಶಿಲಾಯುಗದ ಜನರು ಬೃಹದಾಕಾರದ ಕಲ್ಲು ಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ನಿರ್ಮಿಸುತ್ತಿದ್ದರಿಂದ ಈ ಯುಗವನ್ನು ಬೃಹತ್ ಶಿಲಾಯುಗ ಎಂದು ಕರೆಯುತ್ತಾರೆ. ಈಗಾಗಲೇ ಗುಂಡ್ಲುಪೇಟೆ ತಾಲ್ಲೂಕಿನಾದ್ಯಂತ ಸಾಕಷ್ಟು ಬೃಹತ್ ಶಿಲಾ ಗೋರಿಗಳನ್ನು ಪತ್ತೆ ಮಾಡಲಾಗಿದೆ. ಪುರಾತತ್ವ ಅಧ್ಯಯನದ ದೃಷ್ಟಿಯಿಂದ ಇನ್ನೂ ತುಂಬಾ ದೂರವೇ ಉಳಿದಿರುವ ಸಾಕಷ್ಟು ನೆಲೆಗಳು ಇರುವ ಸಾಧ್ಯತೆ ಇದೆ. ಆದರೆ ಅವುಗಳೆಲ್ಲ ಕಾಲ ಮತ್ತು ವ್ಯವಸಾಯದ ದೃಷ್ಟಿಯಿಂದ ನೆಲೆಗಳು ಹಾಳಾಗಿವೆ. ಈ ಭಾಗದಲ್ಲಿ ಆ ಜನರು ಬಳಸಿರುವ ವಿವಿಧ ಬಗೆಯ ವಸ್ತುಗಳಾದ ಮಡಿಕೆ ಕುಡಿಕೆ, ಇನ್ನಿತರ ಕರಕುಶಲ ವಸ್ತುಗಳು ಹಾಗೂ ಕಲ್ಲಿನ ಆಯುಧಗಳು ಪತ್ತೆಯಾಗಿವೆ. ಅಲ್ಲದೆ ಈ ಪರಿಸರದಲ್ಲಿ ಅನೇಕ ಬಿಡಿಶಿಲ್ಪಗಳಿವೆ. ಈ ಹಿನ್ನೆಲೆಯಿಂದ ಇದೊಂದು ಪ್ರಮುಖವಾದ ನೆಲೆಯಾಗಿದ್ದು, ಅಂದಿನ ಕಾಲಕ್ಕೆ ಹೆಸರುವಾಸಿಯಾದ ಪ್ರದೇಶವೂ ಸಹ ಆಗಿತ್ತೆಂದು ಸಂಶೋಧನೆಯಿಂದ ಪರಿಗಣಿಸಬಹುದಾಗಿದೆ. ಈ ಭಾಗದ ಜನರು ಮೊದಲಿಗೆ ಇದೊಂದು ವಾಸಸ್ಥಾನವಾಗಿತ್ತೆಂದು ಹೇಳುತ್ತಾರೆ. ಇಲ್ಲಿ ನವಶಿಲಾಯುಗ ಕಾಲದಿಂದಲೂ ಮಾನವನ ಅಸ್ತಿತ್ವವನ್ನು ಗುರುತಿಸಬಹುದಾಗಿದೆ. ಅಲ್ಲದೆ ಅದಿ ಇತಿಹಾಸ ಕಾಲದ ವಸ್ತು ಅವಶೇಷಗಳು ದೊರೆತಿವೆ. ಆದಕಾರಣ ಇದೊಂದು ಮಹತ್ವಪೂರ್ಣವಾದ ನೆಲೆಯಾಗಿದ್ದು, ಪ್ರಾಗೈತಿಹಾಸದ ಅಧ್ಯಯನ ವ್ಯಾಪ್ತಿಯನ್ನು ವಿಸ್ತರಿಸಿದೆ. ಅಲ್ಲದೆ ಮುಂದಿನ ಹೆಚ್ಚಿನ ಶೋಧನೆಗಳಿಗೂ ಅನುವು ಮಾಡಿಕೊಟ್ಟಿದೆ ಎಂದರೆ ತಪ್ಪಾಗಲಾರದು.

ಈ ಗುಂಡ್ಲುಪೇಟೆ ತಾಲ್ಲೂಕಿನ ಬೃಹತ್ ಶಿಲಾ ಸಮಾಧಿಗಳನ್ನು ನೋಡಿದರೆ, ಬೃಹತ್ ಶಿಲಾ ಸಂಸ್ಕೃತಿಯ ಕಾಲದ ಕ್ರಿ.ಪೂ. ಸುಮಾರು (1200-200) ಜನರ ಜೀವನಕ್ರಮ ಸಾಕಷ್ಟು

ಸುಧಾರಿಸಿತ್ತು. ಕಬ್ಬಿಣದ ಬಳಕೆಯನ್ನು ಕಂಡುಕೊಂಡವರು ಇವರೇ ಮೊದಲು ಈ ಜನರ ಸಂಸ್ಕೃತಿಯು ಇದರ ಹಿಂದಿನ ನೂತನ ಶಿಲಾಯುಗದ ಜನರಂತೆ ಗ್ರಾಮ ಜೀವನ ಪದ್ಧತಿ ಇದ್ದರೂ ಕೂಡ ನಾಗರೀಕ ಸಾಂಸ್ಕೃತಿಕ ಪೀಠಿಕೆ ಹಾಕಿದವರು ಇವರೇ ಇದಕ್ಕೆ ಮುಖ್ಯ ಕಾರಣ. ಇವರು ಉಪಯೋಗಿಸುತ್ತಿದ್ದ ಕಬ್ಬಿಣ ಉಪಕರಣಗಳು ಮತ್ತು ಆಯುಧಗಳು ಅಷ್ಟೇ ಅಲ್ಲ. ಕಬ್ಬಿಣ ಉಪಕರಣಗಳ ಬಳಕೆಯಿಂದ ಕ್ರಮೇಣವಾಗಿ ಕಲ್ಲಿನ ಉಪಕರಣಗಳನ್ನು ಮಾಡುವ ಅವಶ್ಯಕತೆ ಇಲ್ಲದಂತಾಗಿ ಶಿಲಾಯುಗ ಕೊನೆಗೊಂಡಿತ್ತು. ವಾಸಕ್ಕೆ ಗುಡಿಸಲುಗಳ ನಿರ್ಮಾಣ, ಸುಟ್ಟ ಮಣ್ಣಿನ ಪಾತ್ರೆಗಳ ಉಪಯೋಗ ಆಭರಣಗಳ ಉಪಯೋಗ, ತಾಂತ್ರಿಕ ಗಮನಾರ್ಹವೆನಿಸುವ ಶಿಲಾ ಸಮಾಧಿಗಳ ಶಿಲಾ ಕೋಣೆಗಳ ನಿರ್ಮಾಣ ಈ ಸಂಸ್ಕೃತಿಯ ಜೀವನ ಕ್ರಮವಾಗಿದ್ದು, ಇವುಗಳ ಜೊತೆಗೆ ಗರ್ಭಿಣಿ ಸ್ತ್ರೀಯ ಹೊಟ್ಟೆಯಲ್ಲಿ ಶಿಸ್ತು ಇರುವ ಮತ್ತು ಪ್ರಸವವ ಸಂದರ್ಭದಲ್ಲಿ ಅದು ತಲೆ ಕೆಳಗಾಗುತ್ತದೆ ಎಂಬ ಅತ್ಯಂತ ಸೂಕ್ಷ್ಮ ಸಂಗತಿಗಳನ್ನು ಬಲ್ಲವರಾಗಿದ್ದರೆಂಬ ಈ ಸಂಗತಿಯನ್ನು ಪ್ರಸ್ತುತ ಅನೇಕ ಅವಶೇಷಗಳು ತಿಳಸುತ್ತದೆ. ಈ ಹಿನ್ನೆಲೆಯಿಂದ ಬೃಹತ್ ಶಿಲಾಯುಗದ ಜನರ ಬೌದ್ಧಿಕ ವಿಕಾಸದ ಬಗೆಗೆ ಮತ್ತಷ್ಟು ಚಿಂತನೆ ನಡೆಸಬೇಕಾಗುತ್ತದೆ ಎಂದು ತೋರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಗುಂಡ್ಲುಪೇಟೆ ತಾಲ್ಲೂಕಿನ ಅತ್ಯಂತ ಮಹತ್ವದ ವಿಚಾರವನ್ನು ತಿಳಸಲಾಗಿರುತ್ತದೆ. (ಚಿತ್ರಸಂಖ್ಯೆ-128)

## ಅಡಿಟಿಪ್ಪಣಿಗಳು

1. ಫೂಟ್ ಆರ್.ಜೆ. – ದಿ ಫೂಟ್ ಕಲೆಕ್ಷನ್ ಆಫ್ ಇಂಡಿಯನ್ ಫ್ರೀ ಹಿಸ್ಟಾರಿಕ್ ಅಂಡ್ ಪ್ರೊ ಹಿಸ್ಟಾರಿಕ್ ಆಂಟಿಕ್ವಿಟೀಸ್, ಪು.ಸಂ.66–67.
2. ಡಾ.ದೇವರಾಜು (ಸಂ) – ತಲಕಾಡು ಉತ್ಖನನ ವರದಿ 1996 ಪ್ರಕಟಣೆ ಕರ್ನಾಟಕ ಸರ್ಕಾರ ಮತ್ತು ಮೈಸೂರು ವಿಶ್ವವಿದ್ಯಾನಿಲಯ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, 1996.
3. ಶೇಷಾದ್ರಿ ಎಂ. – ಎ ರಿಪೋರ್ಟ್ ಆನ್ ದಿ ಎಕ್ಸ್‌ಕವೇಶನ್ಸ್ ಅಟ್ ಟಿ. ನರಸೀಪುರ, 1971 ಗ್ರಂಥವನ್ನು ಅಧ್ಯಯನ ಮಾಡಲಾಗಿದೆ.
4. ಡಾ.ಆರ್.ಸುಂದರ್ – ಹಿರಿಯ ವಿದ್ವಾಂಸರು ರವರಿಂದ ಮಾಹಿತಿಯನ್ನು ಪಡೆಯಲಾಗಿದೆ.
5. ಕನ್ನಡ ವಿಷಯ ವಿಶ್ವಕೋಶ –ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 200 (ಸುವರ್ಣ ಕರ್ನಾಟಕ ವರ್ಷದ ನೆನಹು) ಪು.ಸಂ.671–672
6. B.K.Gururaja Rao – 1972, The Megalithic Culture in South India, pp 140-142, (Prasaranga, Mysore University)
7. M.S. Mudhol – A Technical Study of Megalithic metal object, Directorate of Archeology and Museum in Karnataka, Mysore, 1997.
8. ದಿನಾಂಕ: 26.12.2016 ರಂದು ವಿಜಯ ಕರ್ನಾಟಕ, ಇನ್ನಿತರ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

## ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು

### 7.2. ವೀರಗಲ್ಲುಗಳು

ವೀರನ ಸ್ಮಾರಕವಾಗಿ ನಿರ್ಮಿಸಿದ ಸ್ಮಾರಕಗಳನ್ನು ವೀರಗಲ್ಲು ಎಂದು ಕರೆಯುವ ವಾಡಿಕೆ ಇದೆ.[1] ರಾಜ-ಮಹಾರಾಜರುಗಳ ಕಾಲದಿಂದ ಕಾಲಕ್ಕೆ ಒಂದೊಂದು ರೀತಿಯಲ್ಲಿ ಆಡಳಿತವನ್ನು ನಡೆಸಿರುವುದು ಇತಿಹಾಸ ಪುಟಗಳಿಂದ ತಿಳಿದುಬಂದಿದೆ. ಅಂದಿನ ಕಾಲದ ಮಹಾಜನತೆ, ಜನಸಾಮಾನ್ಯರು, ಬದುಕಿ ಬಾಳಿದ ರೀತಿ, ಅವರುಗಳು ಅನುಸರಿಸಿದ ಧರ್ಮ, ಬೆಳೆಸಿದ ಕಲೆ, ಅವರ ಜೀವನದ ಸಮಸ್ಯೆಗಳು ಇವುಗಳನ್ನು ನಾವು ಗಮನಿಸಿದ್ದೇನೆ.[2] ಈ ರೀತಿಯ ಇತಿಹಾಸವನ್ನು ತಿಳಿಸುವ ನಿಟ್ಟಿನಲ್ಲಿ ವೀರಗಲ್ಲುಗಳು ಪ್ರಮುಖವಾಗಿವೆ. ರಾಜನು, ಸೈನಿಕರು, ಮಂತ್ರಿಗಳು ಇನ್ನಿತರರು ಯುದ್ಧದಲ್ಲಿ ಹೋರಾಡಿ ಮಡಿದವರ ನೆನಪಿಗಾಗಿ ವೀರಗಲ್ಲುಗಳನ್ನು ನಿಲ್ಲಿಸುತ್ತಿದರು ಅಥವಾ ಹಸುಗಳನ್ನು ಸಾಕು ಪ್ರಾಣಿಗಳನ್ನು ಕಳ್ಳರು ಕದ್ದೊಯ್ಯುವಾಗ ಹೋರಾಡುತ್ತಿದ್ದರು ಅಥವಾ ಸ್ತ್ರೀಯರ ಮಾನಭಂಗಕ್ಕೆ ಯಾರಾದರೂ ಪ್ರಯತ್ನಿಸುವಾಗ ಅವರನ್ನು ಆ ಸಮಯದಲ್ಲಿ ರಕ್ಷಿಸುವ ಸಲುವಾಗಿ ಹೋರಾಡಿ ವೀರಮರಣವನ್ನು ಪಡೆಯುತ್ತಿದ್ದರು. ಇಂತಹವರ ಹೆಸರಿಗೆ ವೀರರ ಸ್ಮಾರಕ ಶಿಲೆಯನ್ನು ವೀರಗಲ್ಲು ಎಂದು ಕರೆಯಲಾಗುತ್ತದೆ. ಕೆಲವೊಂದು ವೀರಗಲ್ಲಿನಲ್ಲಿ ಶಾಸನ ಇವೆ. ಕೆಲವೊಂದು ವೀರಗಲ್ಲಿನಲ್ಲಿ ಶಾಸನಗಳಿಲ್ಲ. ಆದಕಾರಣ ಶಾಸನ ಸಹಿತ ಸಹಿತವಾದ ವೀರಗಲ್ಲುಗಳು, ಶಾಸನ ರಹಿತವಾದ ವೀರಗಲ್ಲು ಸಹ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಂಡುಬಂದಿವೆ.

ಸಾಮಾನ್ಯವಾಗಿ ಆಯಾ ರಾಷ್ಟ್ರದಲ್ಲಿ ಧರ್ಮ, ನಂಬಿಕೆ, ಸಾಮಾಜಿಕ ಬದುಕು ಪ್ರತಿಷ್ಠೆಗಳನ್ನು ಅನುಸರಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಈ ರೀತಿಯ ವೀರಗಲ್ಲುಗಳನ್ನು ನಾವು ಪ್ರಪಂಚದಾದ್ಯಂತ ತಮ್ಮದೇ ಆದ ಸ್ಮಾರಕಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ.[3] ವೀರರು ತಮ್ಮ ಸ್ವಾರ್ಥಕ್ಕಾಗಿ ಮರಣ ಹೊಂದದೆ, ಸಮಾಜದ ಒಳಿತಿಗಾಗಿ, ಪ್ರಾಣತ್ಯಾಗ ಮಾಡಿಕೊಳ್ಳುತ್ತಿದ್ದರಿಂದ ಅವರ ಜ್ಞಾಪನಾರ್ಥವಾಗಿ ನಿಲ್ಲಿಸಿರುವ ಕಲ್ಲುಗಳೇ ವೀರಗಲ್ಲುಗಳು.[4] ಅವರು ಮಾಡಿದ ಹೋರಾಟ ನಮ್ಮ ದೃಷ್ಟಿಯಲ್ಲಿ ಏನಾದರೂ ಆಗಿರಲಿ, ಅವರು ಸಮಾಜದ ಸುಧಾರಣೆಗಾಗಿ, ಒಳ್ಳೆಯದಕ್ಕಾಗಿ ಜೀವನದ ಬದುಕನ್ನೇ ತೊರೆದು ಅವರ ಧೀಮಂತಿಕೆಯನ್ನು ಊಹಿಸಲಸಾಧ್ಯವಾದುದು, ಅವರ ಹೋರಾಟವು ಸಾಮಾಜಿಕ ನಿಷ್ಠೆ, ಸ್ವಾಮಿ ನಿಷ್ಠೆ, ಸ್ವಾಭಿಮಾನಗಳಿಂದಲೇ ಇರುತ್ತಿತ್ತು.

ಯುದ್ಧದಲ್ಲಿ ಗೆದ್ದರೆ ಲಕ್ಷ್ಮಿ ದೊರಕುವಳು ಸತ್ತರೆ ಸ್ವರ್ಗದಲ್ಲಿ ಸುರಾಂಗನೆಯರು ದೊರಕುವರು ಎಂಬ ನಂಬಿಕೆ, ಅಂದಿನ ಕಾಲದ ನಂಬಿಕೆಯಾಗಿತ್ತು. ಈ ನಂಬಿಕೆಯ ಪ್ರಕಾರ ರಣರಂಗದಲ್ಲಿ ಸತ್ತ ವೀರನಿಗಾಗಿ ದೇವಲೋಕದಲ್ಲಿ ದೇವಕನ್ಯೆಯರು ಕಾದು ಕೊಂಡಿರುತ್ತಿದ್ದರಷ್ಟೆ ಅಲ್ಲ, ಆತನನ್ನು ಪಡೆಯಲು ಅವರಲ್ಲಿಯೇ ಪೈಪೋಟಿಯು ಸಹ ನಡೆಯುತ್ತಿತ್ತು. ಅವನನ್ನು ದೇವಾಂಗನೆಯರು ಸ್ವರ್ಗಕ್ಕೂ, ಶಿವನೋಲಗಕ್ಕೂ ಕೊಂಡೊಯ್ಯುತ್ತಾರೆ ಎಂದು ಅಂದಿನ ಜನರು ನಂಬಿದ್ದರು. ಯುದ್ಧದಲ್ಲಿ ಗೆದ್ದು ಹಿಂದಕ್ಕೆ ಬರುವುದು ಅಥವಾ ಸೋತು ಪ್ರಾಣ ಬಿಡುವುದು ಎರಡಕ್ಕೂ ಸಮಾನವಾದ ಗೌರವವಿದೆ. ಸೋತು ಹಿಂದಕ್ಕೆ ಬರುವುದು, ಸಾವಿಗಿಂತ ಕಡೆಯಾದದ್ದು ಎಂಬ ನಂಬಿಕೆ ಸಮಾಜದಲ್ಲಿತ್ತು. ಆದರೆ ಯುದ್ಧದಲ್ಲಿ ಪ್ರಾಣತ್ಯಾಗವನ್ನು ಮಾಡಿದ ವೀರರ ಹೆಸರು ಈ ಲೋಕದಲ್ಲಿ ಮಾತ್ರವಲ್ಲ, ಪರಲೋಕದಲ್ಲಿಯೂ ಪ್ರಶಂಸೆಗೊಳಗಾಗುತ್ತಿತ್ತು. ಆದುದರಿಂದಲೇ ವೀರನನ್ನು ಕುರಿತು ಕಥೆಗಳು ಹುಟ್ಟಿಕೊಳ್ಳುವುದು. ಈ ಕಾರಣದಿಂದಲೇ ಕರ್ನಾಟಕದಾದ್ಯಂತ ವೀರ ಕಾವ್ಯಗಳೆಂಬ ಶಿಷ್ಠ ಮತ್ತು ಜನಪದ ಸಾಹಿತ್ಯ ಪ್ರಕಾರಗಳು ಬೆಳೆದುಕೊಂಡು ಬಂದಿವೆ.[6]

ವೀರಗಲ್ಲುಗಳಲ್ಲಿ ಒಂದು ಹಂತದ ಶಿಲ್ಪವನ್ನು ಹೊಂದಿರುವ ವೀರಗಲ್ಲು, ಎರಡು ಹಂತವನ್ನು ವೀರಗಲ್ಲು, ಎರಡು ಹಂತವನ್ನು ವೀರಗಲ್ಲು, ಮೂರು ಹಂತವನ್ನು ಹೊಂದಿರುವ ವೀರಗಲ್ಲು, ನಾಲ್ಕು ಹಂತವನ್ನು ಹೊಂದಿರುವ ವೀರಗಲ್ಲು, ಎಂಟು ಹಂತವನ್ನು ಹೊಂದಿರುವ ವೀರಗಲ್ಲು ಹೊಂದಿರುವ ಶಿಲ್ಪಗಳು ಕಂಡುಬರುತ್ತವೆ. ವೀರಗಲ್ಲುಗಳನ್ನು ಹಲವಾರು ದೃಷ್ಟಿಕೋನಗಳಿಂದ ಗುರುತಿಸಬಹುದಾಗಿದೆ. ವೀರಗಲ್ಲು, ತುರುಗೋಳ್ ವೀರಗಲ್ಲು, ಪೆಣ್ಣುಯಲ್ ವೀರಗಲ್ಲು, ವೀರ ಮಾಸ್ತಿಕಲ್ಲು, ವೀರ ನಿಸದಿಕಲ್ಲು ಎಂಬೆಲ್ಲಾ ಹೆಸರಿನ ವೀರಗಲ್ಲುಗಳು ಇರುವುದಾಗಿ ತಿಳಿದುಬರುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ 55ಕ್ಕೂ ಹೆಚ್ಚು ವೀರಗಲ್ಲುಗಳನ್ನು ಪತ್ತೆಮಾಡಲಾಗಿದೆ. ಆದರೆ ಶಾಸನಗಳಿರುವ ವೀರಗಲ್ಲುಗಳು 18ಕ್ಕೂ ಹೆಚ್ಚು ವೀರಗಲ್ಲುಗಳು ಕಂಡುಬಂದಿವೆ. ಇವುಗಳಲ್ಲಿ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಎರಡು ವೀರಗಲ್ಲುಗಳು ಮತ್ತು ಹೊಯ್ಸಳರಿಗೆ ಸೇರಿದ ಮೂರು ವೀರಗಲ್ಲುಗಳು ಇವೆ. ಉಳಿದವುಗಳನ್ನು ನಿರ್ದಿಷ್ಟ ರಾಜಮನೆತನಕ್ಕೆ ಸೇರಿಸಲು ಸಾಧ್ಯವಾಗಿಲ್ಲ. ಆದಕಾರಣ ಈ ವೀರಗಲ್ಲುಗಳನ್ನು ಇನ್ನಿತರ ಗುಂಪಿಗೆ ಸೇರಿಸಲಾಗಿದೆ.

ಅಂದಿನ ಕಾಲಕ್ಕೆ ರಾಜರುಗಳು, ದಂಡನಾಯಕರು, ಸೇವಕರು, ರಾಣಿಯರು, ಇನ್ನಿತರರು ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿ ಜಯಗಳಿಸಿದ ಅಥವಾ ಯುದ್ಧದಲ್ಲಿ

ಮರಣ ಹೊಂದಿದ್ದ ವೀರನಿಗೆ ವೀರಗಲ್ಲುಗಳು ಒಂದು ವರ್ಗವಾದರೆ ಆಯಾ ಊರುಗಳಲ್ಲಿ ವೀರರ ಗುಂಪು ಅಥವಾ ವೀರನೊಬ್ಬ ಊರ ರಕ್ಷಣೆಗಾಗಿ ಮಹಿಳೆಯರ ರಕ್ಷಣೆಗಾಗಿ ಹೋರಾಡಿ ವೀರಮರಣ ಹೊಂದಿದ್ದರೆ, ವೀರಗಲ್ಲುಗಳನ್ನು ನಿಲ್ಲಿಸಲಾಗುತ್ತಿತ್ತು. ಅದು ಅಲ್ಲದೆ, ಊರ ಯುದ್ಧ ಗಡಿಯುದ್ಧ, ಕೋಟೆ ಕಾಳಗ, ನೌಕಾಯುದ್ಧ, ತುರುಗೋಳ್, ಪೆಣ್ಣುಯ್ಯಲ್, ಬೇಟೆಯುದ್ಧಗಳು, ಸಹ ನಡೆದಿರುವುದು ಶಿಲ್ಪ ಲಕ್ಷಣಗಳಂದ ತಿಳದುಬರುತ್ತದೆ. ಮೇಲೆ ತಿಳಿಸಿರುವಂತೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ರಾಜನ ಹೆಸರುಗಳನ್ನು ಹೊಂದಿರುವ ವೀರಗಲ್ಲುಗಳು ದೊರೆತಿವೆ.[7]

ಗಂಗರ ದೊರೆಯಾದ ಶ್ರೀ ಪುರುಷನ ಕಾಲಕ್ಕೆ ಸೇರಿದ ನಳೂರ್ ಶಾಸನ ಪ್ರಕಾರ ಸಿಜ್ಞವೆ (ಮ್ಮ) ರಸ ಹೋರಾಡಿ ಮಡಿದ ವಿಚಾರ ತಿಳದುಬರುತ್ತದೆ.[8] ಇದೇ ರಾಜಮನೆತನಕ್ಕೆ ಸೇರಿದ ಇನ್ನೊಂದು ಶಾಸನದಲ್ಲಿ ಅಂದರೆ ದೇವರಹಳ್ಳಿಯಲ್ಲಿ ದೊರೆತ ಶಾಸನದಲ್ಲಿ ದುರ್ವಿನೀತ ಎರೆಯಪ್ಪನು ಕೊಸರು ಪುಳ್ಳಿಯನ್ನು ಮುತ್ತಿದಾಗ 70 ಜನ ಸೈನಿಕರು ಉಪಗೋಳದಲ್ಲಿ ಯುದ್ಧದಲ್ಲಿ ಹೋರಾಡಿ ಜಯವನ್ನು ಪಡೆದಿರುವ ಬಗ್ಗೆ ತಿಳದುಬರುತ್ತದೆ.[9] ಕ್ರಿ.ಶ.1230ರ ಕಾಲದಲ್ಲಿ ಹುಲ್ಯೊಡನೆ ವೀರನು ಹೋರಾಡಿದ ವಿಚಾರ ತಿಳದುಬರುತ್ತದೆ. ಇದು ಹೊಯ್ಸಳ ದೊರೆಯಾದ ನರಸಿಂಹನ ಆಡಳತದ ಕಾಲಕ್ಕೆ ಸೇರಿರುವ ಶಾಸನವಾಗಿದೆ.[10] ನಂತರ ಹೊಯ್ಸಳ ರಾಜನಾದ ಸೋಮೇಶ್ವರ ದೇವನ ರಾಜಕೀಯ ಆಡಳತ ಕಾಲಕ್ಕೆ ಸೇರಿದ ತಮಿಳು ಶಾಸನದಲ್ಲಿ ಧನಂಜಯ್ ಎಂಬುವವನು ಮರಣ ಹೊಂದಿದ ಕಾರಣ, ವೀರಗಲ್ಲನ್ನು ಎಂಬುದು ತಿಳದುಬರುತ್ತದೆ. ಹೊಯ್ಸಳರ ಆಡಳತದ ಕಾಲಕ್ಕೆ ಸೇರಿದ ಇನ್ನೊಂದು ವೀರಗಲ್ಲು ಶಾಸನದಲ್ಲಿ ಮೊದಲನೆಯ ವೀರನರಸಿಂಹನ ವಿಚಾರ ಕುರಿತು ತಿಳದುಬರುತ್ತದೆ. ಕೊಂಗುನಾಡಿನ ಮಹಾಪ್ರಸಾಯ್ತ ವಾಮಣ ಮಲ್ಲಣನು ಇಂಗುಳವಾಡಿಯ ಮೇಲೆ ಆಕ್ರಮಣ ನಡೆಸಿದಾಗ ರಣಮಂಚಿಗ ಎಂಬಾತನು ಮರಣವನ್ನು ಹೊಂದಿರುವುದಾಗಿ ತಿಳದುಬರುತ್ತದೆ.[11] ಅಲ್ಲದೆ ಕೆಲಸೂರು ಗ್ರಾಮದಲ್ಲಿರುವ ಶಾಸನದ ಪ್ರಕಾರ ಚಾಮಣ್ಣ ಎಂಬಾತನು ಕಾಳಗದಲ್ಲಿ ಮರಣ ಹೊಂದಿರುವ ವಿಚಾರ ತಿಳದುಬರುತ್ತದೆ.[12] ತುರುಗಳನ್ನು ರಕ್ಷಿಸುವ ಉದ್ದೇಶವಾಗಿ ಯುದ್ಧದಲ್ಲಿ ಹೋರಾಡಿರುವ ವಿಚಾರವನ್ನು ತಿಳಸುವಂತಹ ಶಾಸನಗಳು ಇವೆ.

ಕ್ರಿ.ಶ.9ನೇ ಶತಮಾನದ ಅವಧಿಯಲ್ಲಿ ಒಂದು ವೀರಗಲ್ಲಿನ ಪ್ರಕಾರ ಕರಿಯ ಗಂಗಿಸೆಟ್ಟಿಯ ಮಗನಾದ ತಿಪ್ಪಣ್ಣನು ತುರುಗಾಳಗದಲ್ಲಿ ಮರಣ ಹೊಂದಿರುವುದಾಗಿ ತಿಳದುಬರುತ್ತದೆ.[13] ಅದೇ ಊರಿನಲ್ಲಿ ಪತ್ತೆಯಾಗಿರುವ ಇನ್ನೊಂದು ವೀರಗಲ್ಲುವ ಪ್ರಕಾರ ಬಪ್ಪಸೆಟ್ಟಿಯ ಮಗನು ತುರುಗಾಳಗದಲ್ಲಿ ಮರಣ ಹೊಂದಿರುವುದಾಗಿ ತಿಳದುಬರುತ್ತದೆ.[14]

ತೇರದಲಿಯ ಎಂಬ ವೀರನು ದನಗಳ ಅಪಹರಣವಾಗುತ್ತಿದ್ದಾಗ ತುರುಗೊಳಲ್ ಕಾದಿ ಮರಣ ಪಡೆದವನು ಎಂಬ ವಿಚಾರ ಸ್ಪಷ್ಟವಾಗಿ ತಿಳಿದುಬರುತ್ತದೆ.[15]

ಕ್ರಿ.ಶ.10ನೇ ಶತಮಾನಕ್ಕೆ ಸೇರಿದ ಒಂದು ವೀರಗಲ್ಲಿನಲ್ಲಿ ಪೊಸೆವೂರ ದನಗಳನ್ನು ಕಳ್ಳರು ಕದ್ದೊಯ್ಯುತ್ತಿದ್ದಾಗ ಕೊಳ್ಳಯ (ಣ್ಣ)ನು ಹೋರಾಡಿ ಮರಣ ಹೊಂದುತ್ತಾರೆ.[16] ಇದೇ ಕಾಲಕ್ಕೆ ಸೇರಿದ ಮತ್ತೊಂದು ಎರೆಯೂರು ಶಾಸನ ಕಾಡಿಗಾವುಣ್ಣ ಎಂಬಾತನು ಹೋರಾಡಿ ಮಡಿದ ಸಂಗತಿಯನ್ನು ತಿಳಿಸುತ್ತದೆ.[17] ಸುಕಗವುಡ ಎಂಬಾತನು ಹೋರಾಡಿ ಮಡಿದ ಸಂಗತಿಯನ್ನು ತಿಳಿಸುತ್ತದೆ.[17] ಸುಕಗವುಡ ಎಂಬಾತನು ತುರುವನು ರಕ್ಷಣೆ ಮಾಡಿದ ಸಂಬಂಧ ವೀರಗಲ್ಲನ್ನು ನಡೆಸಿರುವ ವಿಚಾರವು ಬೇರಂಬಾಡಿ ಗ್ರಾಮದಲ್ಲಿ ದೊರೆತಿರುವ ಶಾಸನದಿಂದ ತಿಳಿದುಬಂದಿದೆ.[18] ಗೋವುಗಳ ರಕ್ಷಣೆಗಾಗಿ ತುರುಗಾಳಗಗಳು, ನಡೆದಂತೆಯೆ ಮಹಿಳೆಯ ರಕ್ಷಣೆಗಾಗಿ ಪೆಣ್ಬುಯ್ಯಲುಗಳು ನಡೆಯುತ್ತಿದ್ದ ವಿಚಾರಗಳು ಶಾಸನಗಳಲ್ಲಿ ಉಲ್ಲೇಖಿತಗೊಂಡಿವೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಪೆಣ್ಬುಯ್ಯಲ್‌ಗೆ ಸಂಬಂಧಿಸಿದ ಒಂದೇ ಒಂದು ವೀರಗಲ್ಲು ಬೇರಂಬಾಡಿ ಊರಿನಲ್ಲಿ ಪತ್ತೆಯಾಗಿದೆ. ಈ ವೀರಗಲ್ಲು ಶಾಸನದ ಪ್ರಸಾರ ಚಾವುಣ್ಡ ಪೆರ್ಮ್ಮನಡಿಗಳ ಪಟ್ಟಂಗಟ್ಟಿದ ಎಟನೆಯ ಏರಿಸದನ್ನು ಬಯಲ್ನಾಡ ಬನ್ದು ಆಲತೂರ ನಿಳಿದು ತೆಯುಬ್ಬಿಲ್ ಅಳಗೆಯರ ಲಕ್ಕಣಯ್ಯ ಕದಿಸತ್ತ ಎಂಬುದಾಗಿ ತಿಳಿದುಬಂದಿದ್ದು, ಇದು ಯುದ್ಧನಂತರ ಮಾನಭಂಗಕ್ಕೆ ನಡೆಸಿದ ಪ್ರಯತ್ನದ ವಿಚಾರವನ್ನು ತಿಳಿಸುತ್ತದೆ.[19]

ತುರುಗಾಳಗ ಮತ್ತು ಪೆಣ್ಬಯ್ಯಲ್‌ನಂತೆ ಚೀಟಿಯನ್ನು ಕುರಿತಾದ ವಿಷಯಗಳನ್ನು ಹೊಂದಿರುವ ಶಾಸನಗಳು ಇರುವುದನ್ನು ಸಹ ಗಮನಿಸಬಹುದಾಗಿದೆ. ಜೀವನ ನಿರ್ವಹಣೆಗಾಗಿ ಅಥವಾ ಸ್ವರಕ್ಷಣೆಗಾಗಿ ಬೇಟೆಯಾಡುತ್ತಿದ್ದುದು ಒಂದು ಕಾರಣವಾದರೆ, ರಾಜನ ಮನೆತನದವರು ತಮ್ಮ ವೈಯಕ್ತಿಕ ಸಂತೋಷಕ್ಕಾಗಿ ವಿಹಾರಾರ್ಥವಾಗಿ ಬೇಟೆಯಾಡುತ್ತಿದ್ದರೆಂದು ತಿಳಿದುಬರುತ್ತದೆ. ಅಂದಿನ ಕಾಲದ ಪ್ರಾಚೀನ ಜನರು ಬೇಟೆಯನ್ನು ಮಿಗಪಿಂಟೆ, ಪಕ್ಕಿಪೀಂಟೆ ಎಂದು ಆಯಾ ಪ್ರಾಣಿ ವರ್ಗದ ಹೆಸರುಗಳನ್ನು ಕರೆಯಲಾಗಿದೆ.

ಹುಲಿಯೊಡನೆ ಹೋರಾಡಿ ವೀರಮರಣವನ್ನೊಂದಿದ ವಿಚಾರವನ್ನು ಕುರಿತು ಗುಂಡ್ಲುಪೇಟೆ ತಾಲ್ಲೂಕಿನ ಎರಡು ಶಾಸನಗಳಿವೆ. ಆಲತ್ತೂರು ಶಾಸನದ ಪ್ರಕಾರ ಕುಡುಗನಾಡ ಅಲತ್ತೂರ ಕೆಂಪಗ ಉಡನ ಮಗ ಸಿಂ(ಗ) ಗ ಉಂಡನ ವೊಲೆಯಸಾಅ – ಮಾ ಅಯು ಹುಲಿಯನು ಹಿಡಿದುಕೊಂಡು ಸ್ವರ್ಗಕ್ಕೆ ಸಂದನು ಎಂಬುದಾಗಿ ತಿಳಿದುಬರುತ್ತದೆ.[20]

ಕಲ್ಲಹಳ್ಳಿ ಊರಿನಲ್ಲಿ ಪತ್ತೆಯಾಗಿರುವ ವೀರಗಲ್ಲು ಹರದಗೌಡನ ಸುಪುತ್ರ ಹುಲಿಯನಿರಿದು ಸಂದನು ಎಂಬ ವಿಚಾರವನ್ನು ವ್ಯಕ್ತಪಡಿಸುತ್ತದೆ.[21] ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಪತ್ತೆಯಾಗಿರುವ ವೀರಗಲ್ಲುಗಳ ವರ್ಗಕ್ಕೆ ಸೇರಿಸಬಹುದಾದ ಶಾಸನಗಳಲ್ಲಿ ವೀರನ ಹೆಸರು ಇರುವ ಶಾಸನಗಳು 59, 99 ಮತ್ತು 209ನೇ ನಂಬರ್ ಶಾಸನಗಳು ಹಾಗೆಯೇ ವೀರನ ತಂದೆಯ ಹೆಸರು ಇರುವ ಶಾಸನದ ಸಂಖ್ಯೆ 90, ಅದು ಅಲ್ಲದೆ ಯಾವ ಕಾರಣಕ್ಕಾಗಿ ಮರಣ ಹೊಂದಿದರು ಎಂಬ ಶಾಸನಗಳು 59, 99, 188, 209, 224 ಶಾಸನಗಳಾಗಿವೆ.

ರಾಜಕೀಯ ಯುದ್ಧಗಳ ಸಮಯದಲ್ಲಿ ಯುದ್ಧದಲ್ಲಿ ಹೋರಾಡಿ ವೀರಮರಣ ಹೊಂದಿದ ವೀರರಿಗೆ ರಾಜರು, ಇನ್ನಿತರ ಅಧಿಕಾರಿ ವರ್ಗಗಳು ವೀರಗಲ್ಲುಗಳನ್ನು ಹಾಕಿಸಿರುವುದು ತಿಳಿದುಬರುತ್ತದೆ. ಇದು ಒಂದು ರೀತಿಯ ಪರಂಪರೆ ಎನ್ನಬಹುದಾಗಿದೆ. ಅದು ಅಲ್ಲದೆ ವೀರಗಲ್ಲುಗಳನ್ನು ಸಂಬಂಧಿಗಳಾದ ತಂದೆ, ತಾಯಿ, ಅಣ್ಣ, ತಮ್ಮ, ತಂಗಿ, ಮಗಳು, ಹೆಂಡತಿ, ಚಿಕ್ಕಪ್ಪ, ಮಾವ, ಅಳಿಯ ಇನ್ನಿತರರು ವೀರಗಲ್ಲನ್ನು ಹಾಕಿಸಿರುವ ಬಗ್ಗೆ ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ನಂತರ ವೀರನಿಗೆ ಕೃತಜ್ಞತೆ ಸಲ್ಲಿಸುವ ಹಿನ್ನೆಲೆಯಿಂದ ಹಾಗೂ ವಿಶ್ವಾಸದಿಂದ ಪ್ರೀತಿಗೌರವಗಳಿಂದ ತಾವಾಗಿಯೇ ಸ್ವಇಚ್ಛೇ ಮೇರೆಗೆ ರಕ್ತ ಸಂಬಂಧಗಳಲ್ಲದವರು ಕೂಡ ವೀರಗಲ್ಲುಗಳನ್ನು ಹಾಕಿಸಿರುವುದು ತಿಳಿದುಬರುತ್ತದೆ.[22] ಆದಕಾರಣ ಅಂದಿನ ಕಾಲಕ್ಕೂ ಪ್ರಸ್ತುತ ಕಾಲಕ್ಕೂ ಸಂಬಂಧಿಗಳು ಅಥವಾ ಹಿತೈಷಿಗಳು ಹಾಕಿಸಿರುವ ವೀರಗಲ್ಲುಗಳು ರಾಜಕೀಯೇತರ ವೀರಗಲ್ಲುಗಳೆಂದು ಪರಿಗಣಿಸಬಹುದಾಗಿದೆ. ಆಲತ್ತೂರು ಊರಿನ ಶಾಸನದ ಪ್ರಕಾರ ಕವಿಯ ಗಂಗಿಸೆಟ್ಟಿಯ ಮಗ ತಿಪ್ಪಣ್ಣಂ ಅಮ್ಮಣ ಸೆಟ್ಟಿಯ – ತುರುಗೊಳಳ್ಸತ್ತಂ ಅವರ ಭಾವಂ ಪಿಟ್ಟಮ್ಮಂ ನಿರಿಸಿದಂ ಕಲ್ಲಂ ಎಂಬುದಾಗಿ ತಿಳಿದುಬರುತ್ತದೆ.[23] ಇದೇ ಊರಿನ ಇನ್ನೊಂದು ಶಾಸನದ ಪ್ರಕಾರ ಅಣ್ಣನು ತುರುಗಾಳಗ ಮರಣ ಹೊಂದಿದ ಕಾರಣ ತಮ್ಮನ್ನು ವೀರಗಲ್ಲನ್ನು ಹಾಕಿಸಿದ ವಿಚಾರ ತಿಳಿದುಬರುತ್ತದೆ.[24] ತೇರ ಕಿಲಿಯ ಎಂಬುವವನು ತುರುಗೊಳಲ್ ಮರಣದಿಂದ ಆತನ ಮಗಳು ವೀರಗಲ್ಲನ್ನು ನೆಡಿಸಿರುವ ವಿಚಾರವನ್ನು ತಿಳಿಸಿದೆ.[25] ಇದೇ ರೀತಿ ಕೋಟೆಕೆರೆ ಗ್ರಾಮದಲ್ಲಿ ಪತ್ತೆಯಾಗಿರುವ ವೀರಗಲ್ಲು, ಪೊಸವೂರ ದನಗಳನ್ನು ರಕ್ಷಿಸಿದ ಸಲುವಾಗಿ ಕೊಳ್ಳಿಯ (ಣ್ಣ) ನು ಹೋರಾಡಿ ವೀರ ಮರಣ ಪಡೆದಿರುವ ಕಾರಣ ಆತನ ಮಗ ಸಾನ್ತಣ್ಣನು ವೀರಗಲ್ಲನ್ನು ನೆಡಿಸಿದ್ದನು ಎಂಬದು ತಿಳಿದುಬರುತ್ತದೆ.[26]

ಗುಂಡ್ಲುಪೇಟೆ ತಾಲ್ಲೂಕಿನಲಿರುವ ದೊರೆತಿರುವ ಒಂದು (ವೀರಗಲ್ಲು) ಶಾಸನದಲ್ಲಿ ಭೂವಗಣ್ಡನು ಚಿಗ್ಗಣ್ಣನು ಬೀರಗಣ್ಡನು ನಿರ್ಮಿಸಿದ ಕೆರೆ ಮತ್ತು ದೇವಾಲಯ ಎಂದು

ತಿಳಿದುಬಂದಿದೆ. ಇದನ್ನು ವೀರರ ನೆನಪಿಗಾಗಿ ಕೆರೆಯನ್ನು ನಿರ್ಮಿಸಿದೆ ಮತ್ತು ದೇವಾಲಯವನ್ನು ಕಟ್ಟಿಸಿದ ವಿಚಾರ ಶಾಸನ ಪಾಠದಿಂದ ತಿಳಿದುಬರುತ್ತದೆ. ಕೆಲವು ಊರುಗಳಲ್ಲಿ ಒಂದಕ್ಕಿಂತ ಹೆಚ್ಚಾಗಿ ವೀರಗಲ್ಲುಗಳನ್ನು ನೆಡಲಾಗಿದೆ. ಕೆಲವು ಕಡೆ ವೀರರ ಗುಡಿಗಳು ಸಹ ಇವೆ. ವೀರರ ಗುಡಿಗಳು ಹೊಲಗದ್ದೆಗಳಲ್ಲಿ, ಊರ ಬಾಗಿಲ ಮುಂದೆ ಅಲ್ಲದೆ ಮನೆಯ ಹಿಂಭಾಗದ ಹಿತ್ತಲಿನಲ್ಲಿ ಇರುವುದನ್ನು ಗಮನಿಸಬಹುದಾಗಿದೆ.

ಅಂದಿನ ಕಾಲದಲ್ಲಿಯೇ ವೀರನ ಹೆಸರು ಸ್ಥಿರಸ್ಥಾಯಿಯಾಗಿ ಉಳಿಯಬೇಕು ಎನ್ನುವ ದೃಷ್ಟಿಯಿಂದ ಆತನು ದೇವರಿಗೆ ಸಮಾನನೆಂದು ತಿಳಿದು ವೀರರ ಗುಡಿಗಳಿಗೆ ಅಂದರೆ ವೀರಗಲ್ಲಿಗೆ ಪೂಜೆ ಮಾಡುವ ಪದ್ಧತಿ ಇತ್ತು. ಆದಕಾರಣವೇ ಗುಂಡ್ಲುಪೇಟೆ ತಾಲ್ಲೂಕಿನ ಹಲವಾರು ಊರುಗಳಲ್ಲಿ ವೀರಗುಡಿಗಳಿಗೆ ಪೂಜೆ ಸಲ್ಲಿಸುವ ಪರಿಪಾಠವಿದೆ.

ಉದಾಹರಣೆಗೆ ಕೆಲಸೂರು ಗ್ರಾಮದಲ್ಲಿ ಊರಿಂದ ಹೊರಗೆ ಇರುವ ಸಪ್ತಮಾತೃಕೆಯರ ದೇವಾಲಯದ ಮುಂದೆ ವೀರಗುಡಿ ಇದೆ. ಅದೇ ಮಾದರಿಯಲ್ಲಿ ಮಹಾಲಿಂಗೇಶ್ವರ ದೇವಾಲಯದ ಮುಂದೆ ಒಂದು ವೀರಗುಡಿ ಇದೆ. ಇವೆರಡನ್ನು ವೀರಸಮಾಧಿ ಎಂದು ಪರಿಗಣಿಸಲಾಗಿದೆ. ವೀರ ಸಮಾಧಿ ಅಥವಾ ಬೃಹತ್ ಶಿಲಾಸಮಾಧಿ ಎರಡು ಒಂದೇ ನಾಣ್ಯದ ಮುಖವಿದ್ದಂತೆ, ಕೆಲವರು ಈ ರೀತಿಯ ಸಮಾಧಿಗಳನ್ನು ದೇವರ ಗುಡಿಗಳೆಂದು ಕರೆಯುವ ಪರಿಪಾಠ ಇದೆ. ಯಾವುದೇ ವ್ಯಕ್ತಿ ವೀರಮರಣ ಹೊಂದಿದ ಮೇಲೆ ಆತನನ್ನು ಸಮಾಧಿ ಮಾಡುತ್ತಾರೆ. ಆತನ ಹೆಸರಿನಲ್ಲಿ ಸಮಾಧಿಯನ್ನು ನಿರ್ಮಿಸುತ್ತಾರೆ. ಮರಣ ಹೊಂದಿದ ಮೇಲೆ ಆತನನ್ನು ದೇವರ ಸಮಾನ ಎಂಬ ಕಲ್ಪನೆಯಿಂದ ನೋಡುವ ಪ್ರವೃತ್ತಿ ಇದೆ. ಈ ಬೆಳವಣಿಗೆಯನ್ನು ಗಮನಿಸಿದರೆ ಈ ರೀತಿಯ ವೀರಗುಡಿಗಳು ಸಮಾಧಿಗಳೇ ಹೊರತು, ಬೇರೆ ಅಲ್ಲ ಎಂಬುದು ನನ್ನ ಭಾವನೆಯಾಗಿದೆ. ಈ ಹಿನ್ನೆಲೆಯಲ್ಲಿ ಅನೇಕ ಬೃಹತ್ ಶಿಲಾ ಸಮಾಧಿಗಳನ್ನು, ಬೃಹತ್ ವೀರಗುಡಿಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಗುಂಡ್ಲುಪೇಟೆ ಪಟ್ಟಲದಮ್ಮರವರ ದೇವಾಲಯದ ಪರಿಸರದಲ್ಲಿರುವ ವೀರಗಲ್ಲುಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಒಂದು ವೀರಗಲ್ಲಿನಲ್ಲಿ ವೀರರು ವೀರಾವೇಶದಿಂದ ಹೋರಾಡುವ ದೃಶ್ಯವನ್ನು ಕಾಣಬಹುದು. (ಚಿತ್ರಸಂಖ್ಯೆ-129) ಎರಡನೆಯ ಅಂತಸ್ತಿನಲ್ಲಿ ಮಡಿದ ವೀರನನ್ನು ದೇವಲೋಕಕ್ಕೆ ದೇವ ಸೇವಕರು ಕರೆದುಕೊಂಡು ಹೋಗುತ್ತಿರುವುದನ್ನು ಮೂರನೇ ಅಂತಸ್ತಿನಲ್ಲಿ ಶಿವಭಕ್ತನಾಗಿ ಶಿವಲಿಂಗದ ಮುಂದೆ ಕುಳ್ಳಿರಿಸಿ, ಶಿವಭಕ್ತವಾಗುವಂತೆ ಕೆತ್ತಿರುವ ಒಂದು ದೃಶ್ಯವನ್ನು ಕಾಣಬಹುದು. ಲಿಂಗ ಮತ್ತು ನಂದಿ ಶಿಲ್ಪಗಳಿದ್ದು, ಅರ್ಚಕನು ಪೂಜೆ ಸಲ್ಲಿಸುವ ಒಂದು ಕಾಯಕದಲ್ಲಿದ್ದಾನೆ. ಈ ಕಲ್ಪನೆ ಯಾವುದೇ ವ್ಯಕ್ತಿ ವೀರಮರಣ ಹೊಂದಿದ್ದರೆ,

ಆತನಿಗೆ ದೇವಲೋಕದಲ್ಲಿ ಮುಕ್ತಿ ದೊರೆಯಲಿ ಎಂಬ ಪರಿಕಲ್ಪನೆಯಿಂದ ಈ ರೀತಿ ಒಂದು ಪದ್ಧತಿ ಇತ್ತು. ಅದಕ್ಕೋಸ್ಕರವೇ ವೀರನ ನೆನಪಿಗೋಸ್ಕರ ಆತನ ಹೆಸರಿನಲ್ಲಿ ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ಅಲ್ಲದೆ ಈ ಪರಿಸರದಲ್ಲಿ ವೀರ ಬಿಡಿಶಿಲ್ಪಗಳಿವೆ. ಒಂದು ರಾವಳೇಶ್ವರ ಶಿಲ್ಪವೂ ಸಹ ಇದೆ. ಈ ರೀತಿಯ ಶಿಲ್ಪಗಳು ಚಾಮರಾಜನಗರ ಜಿಲ್ಲೆಯ ಸಾಕಷ್ಟು ಊರುಗಳಲ್ಲಿ ದೊರೆತಿವೆ. ಡಾ.ಬಿ.ಬಸವರಾಜು ತಗರಪುರ ರವರು ಮತ್ತು ರಘು ಆರ್. ಎಂಬುವವರು ರಾವಳೇಶ್ವರ ಶಿಲ್ಪದ ಸಾಕಷ್ಟು ಲೇಖನ ರಚಿಸಿದ್ದಾರೆ. ಅವರು ರಾವಳೇಶ್ವರನನ್ನು ರಾಜನೆಂದೂ ಹಾಗೂ ಕ್ರಿ.ಶ.10-11ನೇ ಶತಮಾನಕ್ಕೆ ಸೇರಿದ ಶಿಲ್ಪವೆಂದು ಪರಿಗಣಿಸಿದ್ದಾರೆ. ಈ ಹಿನ್ನೆಲೆಯಿಂದ ಈತನು ರಾಜನೂ ಹೌದು ಹಾಗೂ ವೀರನು ಹೌದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತೇನೆ.

### ಕಗ್ಗಳ

ಕಗ್ಗಳ ಊರಿನಲ್ಲಿ ಮೂರು ವೀರಗಲ್ಲುಗಳಿವೆ. ಈ ಮೂರು ವೀರಗಲ್ಲು ಸಹ ಶೈವ ಪರಂಪರೆಗೆ ಸೇರಿದ ವೀರಗಲ್ಲುಗಳಾಗಿವೆ. ಈ ವೀರಗಲ್ಲುಗಳು ಒಂದೇ ಮಾದರಿಯಲ್ಲಿವೆ. ಇವುಗಳು ಮೂರು ಅಂತಸ್ತಿನಿಂದ ಕೂಡಿದ್ದು, ಕೆಳಭಾಗದಲ್ಲಿ ವೀರರು ವೀರಾವೇಶದಿಂದ ಹೋರಾಟ ಮಾಡುತ್ತಿದ್ದು, ಮಡಿದ ವೀರನನ್ನು ಚಾಮರಧಾರಿಯರು ಸ್ವರ್ಗಕ್ಕೆ ಅಂದರೆ ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಮೇಲ್ಭಾಗದಲ್ಲಿ ಶಿವದೀಕ್ಷೆಯನ್ನು ನೀಡುತ್ತಿರುವ ಮಾದರಿಯಲ್ಲಿ ಶಿಲ್ಪವನ್ನು ಕಡೆಯಲಾಗಿದೆ. (ಚಿತ್ರಸಂಖ್ಯೆ-130)

### ತೊಂಡವಾಡಿ

ತೊಂಡವಾಡಿ ಊರಿನ ಹೊರಭಾಗದಲ್ಲಿ ಸಾಕಷ್ಟು ಅವಶೇಷಗಳಿದ್ದು, ಈ ಭಾಗದಲ್ಲಿ ವೀರಗಲ್ಲುಗಳು ಮಾಸ್ತಿಕಲ್ಲುಗಳು ಹಾಗೂ ದುಃಸ್ಥಿತಿಯಾಗಿರುವ ಬೃಹತ್ ಶಿಲಾ ಸಮಾಧಿಗೆ ಬಳಸಲಾಗಿರುವ ಕಲ್ಲುಚಪ್ಪಡಿಗಳನ್ನು ಗುರುತಿಸಲಾಗಿದೆ. ತೊಂಡವಾಡಿ ಇತಿಹಾಸ ಆರಂಭ ಕಾಲದಿಂದಲೂ ಇರುವಂತಹ ಊರಾಗಿದ್ದು, ಈ ಊರಿನ ಹೊರವಲಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಡಿಕೆ ಚೂರುಗಳನ್ನು ಪತ್ತೆ ಮಾಡಲಾಗಿದೆ. ಪ್ರಾಚೀನ ನೆಲೆಯಲ್ಲಿ ತಲಕಾಡಿನ ಗಂಗರ ಕಾಲಕ್ಕೆ ಸೇರಿದೆ. ದುಃಸ್ಥಿತಿಯಲ್ಲಿರುವ ದೇವಾಲಯವಿದೆ. ಆದರೆ ಊರಿಗೆ ಹೊಂದಿಕೊಂಡಂತೆ ಊರಿನ ಹೊರಗೆ ಇರುವ ವೀರಗಲ್ಲುಗಳಲ್ಲಿ ಎರಡು ವೀರಗಲ್ಲನ್ನು ಸೂಕ್ಷ್ಮವಾಗಿ ಗುರುತಿಸಬಹುದಾಗಿದೆ. ಒಂದು ಶೈವ ಪರಂಪರೆಗೆ ಸೇರಿದ ವೀರಗಲ್ಲಾಗಿದ್ದರೆ ಮತ್ತೊಂದು ವೈಷ್ಣವ ಪರಂಪರೆಗೆ ಸೇರಿದ ವೀರಗಲ್ಲಾಗಿದೆ. (ಚಿತ್ರಸಂಖ್ಯೆ-131)

ಶೈವಪರಂಪರೆಗೆ ಸೇರಿದ ವೀರಗಲ್ಲನ್ನು ಗಮನಿಸಿದರೆ ತುಂಬಾ ಸುಂದರ ಕೆತ್ತನೆಯಿಂದ ಕೂಡಿದ ವೀರಗಲ್ಲಾಗಿದ್ದು, ಕೆಳಭಾಗದಲ್ಲಿ ಐದು ಜನರು ಖಡ್ಗ, ಗುರಾಣಿಗಳನ್ನು ಹಿಡಿದು ಹೋರಾಟ ಮಾಡುತ್ತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಮಧ್ಯದ ಅಂತಸ್ತಿನಲ್ಲಿ ಇಬ್ಬರು ವೀರರನ್ನು ಒಬ್ಬ ಮಹಿಳೆಯನ್ನು ಮತ್ತು ಇಬ್ಬರು ಚಾಮರಾಧಾರಿಗಳು ಕರೆದುಕೊಂಡು ಹೋಗುತ್ತಿರುವಂತೆ ಕೆತ್ತನೆ ಇದೆ. ಮೇಲ್ಭಾಗದಲ್ಲಿ ಇಬ್ಬರು ಪದ್ಮಾಸನದಲ್ಲಿ ಕುಳಿತಿದ್ದು, ಅರ್ಚಕನು ಶಿವಲಿಂಗಕ್ಕೆ ಮತ್ತು ನಂದಿಗೆ ಪೂಜೆ ಸಲ್ಲಿಸುತ್ತಿರುವ ಮಾದರಿಯಲ್ಲಿ ಕೆತ್ತನೆ ಇದೆ. ಈ ಹಿನ್ನೆಲೆಯಿಂದ ಶೈವ ಪರಂಪರೆ ಪೂರಕವಾಗಿ ಪೂಜೆ-ಪುನಸ್ಕಾರಗಳ ಮೂಲಕವೇ ಆರಾಧನೆಯನ್ನು ನಡೆಸುತ್ತಿರುವುದು ತಿಳಿದುಬರುತ್ತದೆ. ಇವರುಗಳು ಕೂಡ ಅದೇ ಧರ್ಮಕ್ಕೆ ಸೇರಿದವರು ಸಹ ಆಗಿರಬೇಕು. ಈ ಹಿನ್ನೆಲೆಯಿಂದ ಇದೊಂದು ಶಿಲ್ಪಕಲೆಯಲ್ಲಿ ವಿವಿಧ ಸಾಂಸ್ಕೃತಿಕ ಹಿನ್ನೆಲೆಯನ್ನು ವ್ಯಕ್ತಪಡಿಸುತ್ತದೆ. ಒಟ್ಟಾರೆ ಅಂದಿನ ಕಾಲದ ಜನಜೀವನ ಪದ್ಧತಿ, ಪ್ರಸ್ತುತ ದಿನದ ಜನಜೀವನದ ಪದ್ಧತಿ ಒಂದಕ್ಕೊಂದು ಪೂರಕವಾಗಿ ನಿರಂತರವಾಗಿ ಬೆಸೆದುಕೊಂಡು ಬಂದಿದೆ ಎಂಬುದು ಈ ವೀರಗಲ್ಲಿನಿಂದ ತಿಳಿಯಬಹುದಾಗಿದೆ. ಇಲ್ಲಿ ಅನೇಕ ವೀರಗಲ್ಲು ಶಿಲ್ಪಗಳನ್ನು ಕಾಣಬಹುದಾಗಿದೆ. (ಚಿತ್ರಸಂಖ್ಯೆ-132)

## ವೈಷ್ಣವ ಧರ್ಮಕ್ಕೆ ಸೇರಿದ ವೀರಗಲ್ಲು

ವೈಷ್ಣವ ಧರ್ಮಕ್ಕೆ ಸೇರಿದ ವೀರಗಲ್ಲು ತೊಂಡವಾಡಿಯಲ್ಲಿದೆ. ಇದು ಕಪ್ಪು ಗ್ರಾನೈಟ್ ಕಲ್ಲಿನಿಂದ ಕೂಡಿದೆ. ಈ ವೀರಗಲ್ಲು ಮೂರು ಅಂತಸ್ತಿನಿಂದ ಕೂಡಿದ್ದು, ಕೆಳಭಾಗದಲ್ಲಿ ಯುದ್ಧದಲ್ಲಿ ನಿರಂತರವಾಗಿರುವ ದೃಶ್ಯವನ್ನು ಕಾಣುತ್ತೇವೆ. ಮಧ್ಯದಲ್ಲಿ ಮರಣ ಹೊಂದಿದ ವೀರನನ್ನು ಇಬ್ಬರು ಚಾಮರಧಾರಿಣಿಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ಮಾದರಿಯಲ್ಲಿದ್ದು, ಮೇಲ್ಭಾಗದಲ್ಲಿ ಶ್ರೀ ಕೃಷ್ಣನು ಕೊಳಲು ನುಡಿಸುತ್ತಿದ್ದು, ಪಕ್ಕದಲ್ಲಿ ಹಸು ಇರುವುದನ್ನು ಹಾಗೂ ಭಕ್ತ ಪದ್ಮಾಸನದಲ್ಲಿ ಕುಳಿತುಕೊಂಡು ದೇವರಿಗೆ ಭಕ್ತಿ ಗೌರವದಿಂದ ಕೈಮುಗಿಯುತ್ತಿರುವುದನ್ನು ಶಿಲ್ಪದಲ್ಲಿ ಕಾಣಬಹುದಾಗಿದೆ. ಈ ಹಿನ್ನೆಲೆಯಿಂದ ಕಲಾವಿದನ ಕಲ್ಪನೆ ಅತ್ಯಂತ ಮಹತ್ವಪೂರ್ಣವಾಗಿದೆ. ಆಯಾ ಧರ್ಮಕ್ಕೆ ಪೂರಕವಾಗಿ ವೀರಗಲ್ಲನ್ನು ಹಾಕಿಸಿರುವುದು ಕೂಡ ಒಂದು ವಿಶೇಷತೆಯನ್ನು ತೊಂಡವಾಡಿ ಊರಿನಲ್ಲಿ ಗಮನಿಸುತ್ತೇವೆ. ಪ್ರಸ್ತುತ ದಿನಗಳಲ್ಲಿ ಈ ಊರಿನಲ್ಲಿ ಶೈವ, ವೈಷ್ಣವ ಮತ್ತು ಶಕ್ತಿ ಪ್ರಧಾನವಾದ ದೇವಾಲಯಗಳಿವೆ.

## ಕಂದೇಗಾಲ

ಪಾರ್ವತಿ ಬೆಟ್ಟದ ತಪ್ಪಲು ಪ್ರದೇಶದ ಕೆಳಗೆ ರಸ್ತೆಯ ಇಕ್ಕೆಲದಲ್ಲಿ ಸುಮಾರು ಒಂಭತ್ತು ವೀರಗಲ್ಲುಗಳು ಇವೆ. ಪ್ರಾಯಶಃ ಈ ವೀರಗಲ್ಲುಗಳೆಲ್ಲವು ಹೆಚ್ಚಿನ ಸಂಖ್ಯೆಯಲ್ಲಿ ವನಿತೆಯರೆ (ಮಹಿಳೆಯರೇ) ಇದ್ದಾರೆ. ಅಲ್ಲದೆ ಒಂದು ಚಿಕ್ಕದಾದ ಕಲ್ಲಿನಲ್ಲಿ 10 ತಲೆ ಇರುವ ರಾವಣನ ಶಿಲ್ಪವನ್ನು ಸಹ ಕಾಣಬಹುದಾಗಿದೆ. ಈ ವೀರಗಲ್ಲು ಶೈವ ಪರಂಪರೆಗೆ ಸೇರಿದ ವೀರಗಲ್ಲಾಗಿದೆ. ವೀರಗಲ್ಲಿನ ಮೊದಲನೆಯ ಅಂತದಲ್ಲಿ ಆರು ಜನರು ಬಿಲ್ಲುಬಾಣ, ಖಡ್ಗ, ಗುರಾಣಿಗಳನ್ನು ಹಿಡಿದುಕೊಂಡು ಯುದ್ಧದಲ್ಲಿ ಭಾಗಿಯಾಗಿರುವುದನ್ನು ಕಾಣಬಹುದಾಗಿದೆ. ಮಧ್ಯ ಹಂತದಲ್ಲಿ ಮಡಿದವರನ್ನು ದೇವಲೋಕಕ್ಕೆ ಕರೆದುಕೊಂಡು ಹೋಗುವುದನ್ನು ತುಂಬಾ ಸೊಗಸಾಗಿ ಕೆತ್ತನೆ ಮಾಡಿದ್ದಾರೆ. ಮೇಲ್ಭಾಗದಲ್ಲಿ ಕೋಷ್ಠಗುಡಿಯಲ್ಲಿ ಶಿವಲಿಂಗವನ್ನು ಇರಿಸಲಾಗಿದೆ ಮತ್ತು ನಂದಿಶಿಲ್ಪವನ್ನು ಇರಿಸಲಾಗಿದೆ. ಅರ್ಚಕನು ಪೂಜೆ-ಪುನಸ್ಕಾರದಲ್ಲಿ ತೊಡಗಿರುವುದು, ವೀರಭಕ್ತನು ಪದ್ಮಾಸನದಲ್ಲಿ ಕುಳಿತು ದೇವರಲ್ಲಿ ಭಕ್ತಿ ಪೂರಕವಾಗಿ ದೇವರನ್ನು ಬೇಡುವುದನ್ನು ಅಲ್ಲದೆ ಸೇವಕಿಯನ್ನು ಸಹ ಕಾಣಬಹುದಾಗಿದೆ. ಅಲ್ಲದೆ ಪಕ್ಕದ ವೀರಗಲ್ಲಿನಲ್ಲಿ ಯುದ್ಧದಲ್ಲಿ ತಲ್ಲೀನನಾಗಿರುವ ಭಂಗಿಯನ್ನು ಕಾಣಬಹುದಾಗಿದೆ. ಮಧ್ಯದಲ್ಲಿ ವೀರನನ್ನು ಇಬ್ಬರು ವನಿತೆಯರು ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಿರುವುದನ್ನು ಮೇಲ್ಭಾಗದಲ್ಲಿ ಛಾಮರಧಾರಣಿಯರ ಜೊತೆಗೆ ಇರುವುದನ್ನು ಗುರುತಿಸಬಹುದಾಗಿದೆ. ಮತ್ತೊಂದು ವೀರಗಲ್ಲಿನಲ್ಲಿ ಕೆಳಭಾಗದಲ್ಲಿ ವೀರರು ಬಿಲ್ಲುಬಾಣಗಳನ್ನು ಹಿಡಿದು ಯುದ್ಧ ಮಾಡುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ. ಪಕ್ಕದಲ್ಲಿ ಸೇವಕ ಯೋಧರ ರೀತಿಯಲ್ಲಿರುವ ಸೇವಕರು ಸಹ ಇದ್ದಾರೆ. ಮಧ್ಯದ ಭಾಗಗದಲ್ಲಿಯೂ ಯುದ್ಧದಲ್ಲಿ ತಲ್ಲೀನವಾಗಿರುವುದು ಕಾಣಬರುತ್ತದೆ.

ಪಕ್ಕದ ವೀರಗಲ್ಲಿನಲ್ಲಿ ಇಬ್ಬರು ವನಿತೆಯರು ಯುದ್ಧದಲ್ಲಿ ಹೋರಾಡಿ ಜಯದ ಸಂಕೇತವನ್ನು ತಿಳಿಸುವಂತಹ ಶಿಲ್ಪವಾಗಿದೆ. ಇನ್ನೊಂದು ವೀರಗಲ್ಲನ್ನು ಗಮನಿಸಿದರೆ ವನಿತೆಯರು ದುಃಖ ಪರಿಸ್ಥಿತಿಯಲ್ಲಿರುವುದನ್ನು ಗಮನಿಸಬಹುದು. ಏಕೆಂದರೆ ಈ ವನಿತೆಯ ಗಂಡ ಯಾವುದೇ ಯುದ್ಧದಲ್ಲಿ ಮರಣ ಹೊಂದಿರಬೇಕು. ಆತನ ನೆನಪಿನಲ್ಲಿಯೇ ಆಕೆಯು ಸಹ ಮರಣವನ್ನು ಹೊಂದಿರಬೇಕು. ಆದಕಾರಣ ಈಕೆಯನ್ನು ಇಬ್ಬರು ದೇವಲೋಕದ ಸುಂದರಿಯರು ಆಕೆಯನ್ನು ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಮೇಲ್ಭಾಗದಲ್ಲಿ ಆಕೆಯನ್ನು ಒಂದು ಪೀಠದ ಮೇಲೆ ಕುಳ್ಳಿರಿಸಿದ್ದಾರೆ. ಆಕೆಯ ಸೊಂಟದಲ್ಲಿ ಒಂದು ಮಗುವನ್ನು ಸಹ ಕಾಣಬಹುದಾಗಿದೆ. ಇಕ್ಕೆಲಗಳಲ್ಲಿ ಇಬ್ಬರು ಛಾಮರಧಾರಣಿಯರನ್ನು ಸಹ ಕಾಣಬಹುದಾಗಿದೆ. ಈ ಹಿನ್ನೆಲೆಯಿಂದ ಇದೊಂದು ಪ್ರಮುಖವಾದ ವೀರವನಿತೆ ಶಿಲ್ಪವೆಂದು

ಪರಿಗಣಿಸಬಹುದಾಗಿದೆ. ಇದರ ಮೂಲ ಉದ್ದೇಶವೇನೆಂದರೆ, ಗಂಡನ ಮರಣದಿಂದ ನೊಂದು ಆಕೆಯು ಕೂಡ ವೀರಮರಣ ಹೊಂದಿರುವುದು ತಿಳಿದುಬರುವುದಲ್ಲದೆ, ಆಕೆ ಒಂದು ಸಣ್ಣ ಮಗು ಇರುವುದಾಗಿ ತಿಳಿದುಬರುತ್ತದೆ. (ಚಿತ್ರಸಂಖ್ಯೆ-133)

### ಹಸುಗೂಲಿ

ಹಸುಗೂಲಿ ಊರಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳಿವೆ. ಅವುಗಳಲ್ಲಿ ಕೆಲವೇ ಕೆಲವು ಪ್ರಮುಖ ವೀರಗಲ್ಲುಗಳ ಬಗ್ಗೆ ಚರ್ಚಿಸಲಾಗಿದೆ.

ಹಸುಗೂಲಿ ಗ್ರಾಮದ ಮಧ್ಯದಲ್ಲಿರುವ ಒಂದು ವೀರಗಲ್ಲಿನ ಪ್ರಕಾರ ನೋಡುವುದಾದರೆ, ವೀರವನಿತೆಯರು ಪ್ರಮುಖ ಯುದ್ಧದಲ್ಲಿ ಭಾಗಿಯಾಗಿರುವುದನ್ನು ಕಾಣಬಹುದಾಗಿದೆ. ವೀರಗಲ್ಲು ಸುಮಾರು 6 ಅಡಿ ಎತ್ತರ 5 ಅಡಿ ಅಗಲವನ್ನು ಹೊಂದಿದೆ. ಇದೊಂದು ಕಪ್ಪು, ಬಿಳಿಪಿನಿಂದ ಕೂಡಿದ ಗ್ರಾನೈಟ್ ಕಲ್ಲಿನಿಂದ ಕೂಡಿದ್ದು, ಇದು ಮೂರು ಅಂತಸ್ತಿನಿಂದ ಕೂಡಿದೆ. ಕೆಳಭಾಗದ ಅಂತಸ್ತಿನಲ್ಲಿ ಐದು ಜನ ವನಿತೆಯರು ಅನೇಕ ರೀತಿಯ ಖಡ್ಗಗಳನ್ನು ಹಿಡಿದು ಯುದ್ಧ ಮಾಡುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ. ಎರಡನೆಯ ಅಂತಸ್ತಿನಲ್ಲಿ ಐದು ಜನರು ಸ್ವರ್ಗಕ್ಕೆ ಹೋಗುತ್ತಿರುವ ಮಾದರಿಯಲ್ಲಿ ಇದೆ. ಮೇಲ್ಭಾಗದಲ್ಲಿ ಶಿವಲಿಂಗ ಅರ್ಚಕ, ನಂದಿಶಿಲ್ಪ ಮತ್ತು ಇಬ್ಬರು ವನಿತೆಯರು ದೇವರಿಗೆ ಕೈಮುಗಿದು ಕುಳಿತಿರುವುದನ್ನು ಕಾಣಬಹುದಾಗಿದೆ. ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರ ಸಾಕ್ಷಿಯಾಗಿ ವೀರಗಲ್ಲನ್ನು ನಿಲ್ಲಿಸಲಾಗಿದೆ. ಇದೊಂದು ಪ್ರಮುಖ ವೀರ ವನಿತೆಯರು ಯುದ್ಧದಲ್ಲಿ ಭಾಗಿಯಾಗಿರುವ ಒಂದು ವೀರಗಲ್ಲಾಗಿದೆ.

ಹಸುಗೂಲಿಯಲ್ಲಿ ಮತ್ತೊಂದು ವೀರಗಲ್ಲು ಸಹ ವನಿತೆಯರೇ ಆಗಿದ್ದು, ಕೆಳಭಾಗದಲ್ಲಿ ಒಬ್ಬ ವನಿತೆ ಖಡ್ಗ ಹಿಡಿದು ಯುದ್ಧಕ್ಕೆ ಸಿದ್ಧವಾಗಿರುವುದು ಕಾಣಬರುತ್ತದೆ. ಪಕ್ಕದಲ್ಲಿ ಛಾಮರಧಾರಣಿಯು ಇದ್ದಾಳೆ. ಈಕೆಯ ಸೇವಕಿಯು ಸಹ ಯುದ್ಧದಲ್ಲಿ ತೊಡಗಿದ್ದಾಳೆ. ಎರಡನೆಯ ಅಂತಸ್ತಿನಲ್ಲಿ ವಿಶೇಷವಾದ ಭಂಗಿಯಲ್ಲಿರುವುದು ಕಾಣಬರುತ್ತದೆ. ಯುದ್ಧದಲ್ಲಿ ಮಡಿದ ವನಿತೆಯನ್ನು ಇಬ್ಬರು ಛಾಮರಧಾರಣಿಯರು ಒಂದೊಂದು ಕೈಗಳನ್ನು ಹಿಡಿದುಕೊಂಡು ಒಂದೊಂದು ಕಾಲುಗಳನ್ನು ತಮ್ಮ ತಮ್ಮ ಕಾಲುಗಳ ಮೇಲೆ ಇರಿಸಿಕೊಂಡು ಕರೆದುಕೊಂಡು ಹೋಗುತ್ತಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಮೇಲ್ಭಾಗದಲ್ಲಿ ಶಿವಲಿಂಗ, ನಂದಿ ಶಿಲ್ಪಗಳನ್ನು ತೋರಿಸಲಾಗಿದ್ದು, ಅರ್ಚಕನು ಶಿವಪೂಜೆಯಲ್ಲಿ ತೊಡಗಿದ್ದಾನೆ. ಪಕ್ಕದಲ್ಲಿ ವೀರ ವನಿತೆಯನ್ನು ಪದ್ಮಾಸನದಲ್ಲಿ ಕುಳ್ಳಿರಿಸಿ ದೇವರಿಗೆ ಭಕ್ತಿಪೂರ್ವಕವಾಗಿ ಕೈಮುಗಿಯುತ್ತಿರುವುದನ್ನು, ಅಲ್ಲದೆ ಸೇವಕಿಯು ವನಿತೆಗೆ ಸಹಾಯಕವಾಗಿ, ತಲೆಯ ಮೇಲೆ

ಕೈಯಿಟ್ಟು ಸುಧಾರಣೆಯನ್ನು ಮಾಡುವ ಮೂಲಕ ಶಿಲ್ಪವನ್ನು ಬಿಡಿಸಲಾಗಿದೆ. ಆದಕಾರಣ ಇದೊಂದು ವಿಶೇಷವಾದ ವನಿತೆಯರಿಗೆ ಸಂಬಂಧಿಸಿದ ವೀರಗಲ್ಲಾಗಿದೆ. (ಚಿತ್ರಸಂಖ್ಯೆ-134)

ಹಸುಗೂಲಿಯಲ್ಲಿ ಮತ್ತೊಂದು ಕಡೆ ಅನೇಕ ವೀರಗಲ್ಲುಗಳನ್ನು ಗುರುತಿಸಲಾಗಿದೆ. ಹಸುಗೂಲಿಯ ಪರಿಶಿಷ್ಠ ಜಾತಿ ಮನೆ ಹಿಂಭಾಗದಲ್ಲಿ ಒಂದು ಖಾಲಿ ಜಾಗವಿದ್ದು, ಈ ಜಾಗದಲ್ಲಿ ಹಲವಾರು ಪ್ರಾಚೀನ ಅವಶೇಷಗಳಿವೆ. ಈ ಊರಿನವರು ಈ ಜಾಗವನ್ನು ದೇವರ ಜಾಗ ಎಂದು ಕರೆಯುವ ವಾಡಿಕೆ ಇದೆ.

ಇಲ್ಲೊಂದು ವಿಶೇಷವಾದ ವೀರಗಲ್ಲಿನಲ್ಲಿ ಹಸುಗಳನ್ನು ಹಿಡಿದು ಹೋಗುವ ಇಬ್ಬರು ವ್ಯಕ್ತಿಗಳನ್ನು ಕಾಣಬಹುದಾಗಿದೆ. ಪ್ರಾಯಶಃ ಈ ಊರಿಗೆ ಹಸು ಮತ್ತು ಗೂಳಿ ಕಥೆಯಿಂದ ಹಸುಗೂಳಿಯಾಗಿದೆ ಎಂಬ ವಿಚಾರವನ್ನು ಈಗಾಗಲೇ ಚರ್ಚಿಸಲಾಗಿದೆ. ಆದರೂ ಕೂಡ ಈ ಶಿಲ್ಪವನ್ನು ಗಮನಿಸಿದರೆ, ಕಳ್ಳರು ಹಸುಗಳನ್ನು ಕರೆದುಕೊಂಡು ಹೋಗಬಹುದು ಅಥವಾ ಕಳ್ಳರಿಂದ ಹಸುಗಳನ್ನು ಮತ್ತೆ ಪಡೆದು ಕರೆದುಕೊಂಡು ಬರಬಹುದು ಎಂಬ ವಿಚಾರವನ್ನು ಸಹ ಹೇಳಬೇಕಾಗುತ್ತದೆ. ಒಟ್ಟಾರೆಯಾಗಿ ಇದೊಂದು ವೀರಗಲ್ಲು ಎಂದೇ ತಿಳಿಯಬಹುದಾಗಿದೆ. ಅದು ಅಲ್ಲದೆ ಈ ನೆಲೆಯಲ್ಲಿ ಇನ್ನಿತರ ವೀರರು ನಿಂತಿರುವ ಬಗ್ಗೆ ವೀರಗಲ್ಲುಗಳಿವೆ. ಈ ಊರಿನ ಇತಿಹಾಸ ಕ್ರಿ.ಶ.10ನೇ ಶತಮಾನಕ್ಕೆ ಚೋಳರ ಕಾಲಕ್ಕೆ ಹೆಸರುವಾಸಿಯಾದ ಒಂದು ಊರಾಗಿತ್ತು. ಗಂಗರ ಕಾಲಕ್ಕೂ ಸಹ ಆಧಾರಗಳಿವೆ. ಅದಕ್ಕಿಂತ ಹೆಚ್ಚಾಗಿ ಹಸುಗೂಲಿಯಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಅವಶೇಷಗಳಿರುವುದರಿಂದ ಹಸುಗೂಲಿ ತನ್ನದೇ ಆದ ಇತಿಹಾಸವನ್ನು ಹೊಂದಿದೆ.

## ಆಲತ್ತೂರು

ಆಲತ್ತೂರಿನಲ್ಲಿ ಕೆಲವು ವೀರಗಲ್ಲುಗಳಿವೆ. ಆದರೆ ಅಧ್ಯಯನಕ್ಕೆ ಎರಡೇ ಎರಡು ವೀರಗಲ್ಲುಗಳನ್ನು ಮಾತ್ರ ತೆಗೆದುಕೊಳ್ಳಲಾಗಿದೆ. ಎರಡು ವೀರಗಲ್ಲುಗಳ ಶೈವ ಪರಂಪರೆ ಪೂರಕವಾದ ವೀರಗಲ್ಲುಗಳಾಗಿವೆ.

ಒಂದು ವೀರಗಲ್ಲಿನಲ್ಲಿ ಯೋಧರು ಕತ್ತಿ, ಗುರಾಣಿಗಳನ್ನು ಹಿಡಿದುಕೊಂಡು ವೀರಾವೇಶದಿಂದ ಹೋರಾಡುತ್ತಿರುವುದನ್ನು ಕಾಣಬಹುದಾಗಿದೆ. ಒಂದು ಕಡೆ ಗಂಡ ಹೆಂಡತಿ ಹೋರಾಟ ಮಾಡುತ್ತಿದ್ದರೆ, ಇನ್ನೊಂದು ಕಡೆ ಕೂಡ ಗಂಡ ಹೆಂಡತಿ ಮತ್ತು ಇನ್ನೊಬ್ಬಳು ಯೋಧ ಒಬ್ಬರಿಗೊಬ್ಬರು ಯುದ್ಧದಲ್ಲಿ ತಲ್ಲೀನರಾಗಿದ್ದಾರೆ ಎಂಬುದು ತಿಳಿದುಬರುತ್ತದೆ. ಎರಡನೆಯ ಅಂತಸ್ತಿನಲ್ಲಿ ಮಹಿಳೆಯು ಮರಣ ಹೊಂದಿರಬೇಕು. ಆಕೆಯನ್ನು ನಾಲ್ಕು ಜನರು

ಕರೆದುಕೊಂಡು ಮೇಲೆ ಹೋಗುತ್ತಿದ್ದಾರೆ. ಮೇಲ್ಭಾಗವನ್ನು ಗಮನಿಸಿದರೆ ಇಬ್ಬರು ವನಿತೆಯರು ಕೈಮುಗಿದು ಪದ್ಮಾಸನದಲ್ಲಿ ಕುಳಿತಿರುವುದು ಕಾಣಬರುತ್ತದೆ. ಈ ಹಿನ್ನೆಲೆಯಿಂದ ಈ ಯುದ್ಧದಲ್ಲಿ ಇಬ್ಬರು ಮಹಿಳೆಯರು ವೀರ ಮರಣವನ್ನು ಹೊಂದಿರಬೇಕು. ಶೈವ ಪರಂಪರೆಗೆ ಪೂರಕವಾಗಿ ಶಿವಲಿಂಗ, ನಂದಿ, ಮತ್ತು ಶಿವ ಅರ್ಚಕರನ್ನು ತೋರಿಸಲಾಗಿದೆ.

ಅದೇ ಸ್ಥಳದಲ್ಲಿ ಇನ್ನೊಂದು ವೀರಗಲ್ಲು ಇದೆ. ಇದು ಸಹ ವಿಶೇಷವಾದ ವೀರಗಲ್ಲಾಗಿದೆ. ಏಕೆಂದರೆ ಒಂದು ಕಡೆ ವೀರ ಯೋಧ ಖಡ್ಗ ಗುರಾಣಿಯನ್ನು ಹಿಡಿದುಕೊಂಡು ಯುದ್ಧ ಮಾಡಿದರೆ, ಇನ್ನೊಂದು ಕಡೆ ಎದುರಾಗಿ ಕುದುರೆ ಮೇಲೆ ಕುಳಿತ ರಾಜನು ಯುದ್ಧದಲ್ಲಿ ತೊಡಗಿರುವುದು ಕಾಣಬರುತ್ತದೆ. ಈ ಯುದ್ಧದಲ್ಲಿ ಒಬ್ಬನು ವೀರಮರಣವನ್ನು ಪಡೆದು ಕುದುರೆಯ ಕಾಲುಗಳ ಮಧ್ಯದಲ್ಲಿ ಬಿದ್ದಿರುವುದು ಕಾಣಬರುತ್ತದೆ.

ಮಧ್ಯದಲ್ಲಿ ಅಂತಸ್ತಿನಲ್ಲಿ ಮಡಿದ ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವುದು, ಇಕ್ಕೆಲಗಳಲ್ಲಿ ನಾಲ್ಕು ಜನ ವನಿತೆಯರು ಇದ್ದಾರೆ. ಮರಣ ಹೊಂದಿದ ವೀರ ಶಕ್ತಿಶಾಲಿಯಾಗಿದ್ದರೂ ಕೂಡ ಮರಣ ಹೊಂದಿದ್ದಾನೆ. ಈತನು ಮೇಲ್ಭಾಗದಲ್ಲಿ ಕುಳಿತ ಭಂಗಿಯನ್ನು ನೋಡಿದರೆ ಗೊತ್ತಾಗುತ್ತದೆ, ಈತನ ದೇಹವು ದೃಢಕಾಯವಾಗಿದ್ದು, ಆತನು ಬಿಟ್ಟಿರುವ ಮೀಸೆ ಬಲಿಷ್ಠವಾಗಿದೆ ಎನ್ನುವುದು ಗೊತ್ತಾಗುತ್ತದೆ. ಆದರೂ ಕೂಡ ಯುದ್ಧದಲ್ಲಿ ಮರಣ ಹೊಂದಿದ್ದಾನೆ. ಇದರಿಂದ ತಿಳಿಯುತ್ತದೆ ಯುದ್ಧಕ್ಕೆ ದೇಹ ಇದ್ದರೆ ಸಾಕಾಗುವುದಿಲ್ಲ. ಬುದ್ಧಿವಂತಿಕೆಯೂ ಸಹ ಇರಲೇಬೇಕು. ಈ ಹಿನ್ನೆಲೆಯಿಂದ ಇದೊಂದು ಪ್ರಮುಖವಾದ ವೀರಗಲ್ಲಾಗಿದೆ. (ಚಿತ್ರಸಂಖ್ಯೆ-135)

## ಬೇಗೂರು

ಬೇಗೂರಿನಲ್ಲಿ ಆಂಜನೇಯ ದೇವಾಲಯದ ಎದುರು ನಾಲ್ಕು ವೀರಗಲ್ಲುಗಳಿವೆ. ಅದರಲ್ಲಿ ಒಂದೇ ಒಂದು ವೀರಗಲ್ಲನ್ನು ಚರ್ಚಿಸಲಾಗಿದೆ. ಈ ವೀರಗಲ್ಲು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು, ಮೂರು ಅಂತಸ್ತಿನಿಂದ ಕೂಡಿದೆ. ಕೆಳಭಾಗದ ಅಂತಸ್ತಿನಲ್ಲಿ ಮೂವರು ವೀರರು ಖಡ್ಗ, ಗುರಾಣಿ, ಭರ್ಜಿ ಮೊದಲಾದ ಆಯುಧಗಳನ್ನು ಹಿಡಿದು ಹೋರಾಟ ಮಾಡುತ್ತಿರುವ ಸನ್ನಿವೇಶವನ್ನು ಕಾಣಬಹುದಾಗಿದೆ. ಮಧ್ಯದ ಅಂತಸ್ತಿನಲ್ಲಿ ಮರಣ ಹೊಂದಿದ ವೀರನನ್ನು ಇಬ್ಬರು ಛಾಮರಧಾರಣಿಯರು ಕೈಗಳನ್ನು ಹಿಡಿದು ಕರೆದುಕೊಂಡು ಹೋಗುತ್ತಿರುವ ಮಾದರಿಯಲ್ಲಿ ಕಡೆಯಲಾಗಿದೆ. ಮೂರನೇ ಅಂತಸ್ತಿನಲ್ಲಿ ಶಿವಲಿಂಗವನ್ನು ಒಂದು ಗುಡಿಯಲ್ಲಿ ಇರುವಂತೆ ಮಾಡಲಾಗಿದ್ದು, ಅದರ ಎದುರು ನಂದಿಶಿಲ್ಪವನ್ನು ಶಿವಭಕ್ತನಾದ ಪೂಜಾರಿಯನ್ನು

ಹಾಗೂ ವೀರಮರಣ ಹೊಂದಿದ ವ್ಯಕ್ತಿಯನ್ನು ಆತನ ಸೇವಕನನ್ನು ಸಹ ಚಿತ್ರದಲ್ಲಿ ಕಾಣಿಸಲಾಗಿದೆ. (ಚಿತ್ರಸಂಖ್ಯೆ-136)

## ಪಡಗೂರು

ಪಡಗೂರು ಊರಿನಲ್ಲಿ ಕೆಲವೊಂದು ವೀರಗಲ್ಲುಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಎರಡು ವೀರಗಲ್ಲುಗಳು ವಿಶೇಷತೆಯನ್ನು ಹೊಂದಿದೆ. ಒಂದು ವೀರಗಲ್ಲು ವನಿತೆಯರೇ ಯುದ್ಧ ಮಾಡುತ್ತಿದ್ದರೆ, ಇನ್ನೊಂದು ವೀರಗಲ್ಲಿನಲ್ಲಿ ವನಿತೆಯರು ಮತು ಗಂಡಸರು ಇಬ್ಬರು ಭಾಗಿಯಾಗಿರುವುದನ್ನು ಪಡಗೂರಿನಲ್ಲಿ ಕಾಣುತ್ತೇವೆ. ಒಂದು ವೀರಗಲ್ಲಿನಲ್ಲಿ ಹಸುವನ್ನು ಕದ್ದೊಯ್ಯುತ್ತಿದ್ದಾಗ ಅದನ್ನು ಗಮನಿಸಿದ ವನಿತೆಯರು ಹೋರಾಟ ನಡೆಸುವುದನ್ನು ಇಲ್ಲಿ ಕಾಣಬಹುದಾಗಿದೆ. ಇದರಿಂದ ಇಬ್ಬರು ವನಿತೆಯರು ಸಹ ವೀರಮರಣವನ್ನು ಪಡೆಯುತ್ತಾರೆ. ಅದರ ಉದ್ದೇಶವೇ ಈ ವೀರಗಲ್ಲನ್ನು ನಿಲ್ಲಿಸಲಾಗಿದೆ. ಈ ವನಿತೆಯರು ಶೈವ ಧರ್ಮಕ್ಕೆ ಸೇರಿದವರಾಗಿರುತ್ತಾರೆ.

ಪಡಗೂರಿನ ಮತ್ತೊಂದು ವೀರಗಲ್ಲಿನಲ್ಲಿ ವೀರರು ಯುದ್ಧದಲ್ಲಿ ಭಾಗಿಯಾಗಿರುವುದನ್ನು ಕಾಣಬಹುದಾಗಿದೆ. ಇದು ಸಹ ಮೂರು ಅಂತಸ್ತಿನಿಂದ ಕೂಡಿದ್ದು, ಕೆಳ ಅಂತಸ್ತಿನಲ್ಲಿ ಒಂದು ಕಡೆ ಇಬ್ಬರು ವೀರರು ಕತ್ತಿ, ಗುರಾಣಿಗಳನ್ನು ಹಿಡಿದು ಹೋರಾಟ ಮಾಡಿದರೆ ಇನ್ನೊಂದು ಎದುರಾಳಿ ರಾಜ ಕುದುರೆ ಮೇಲೆ ಕುಳಿತು ಭರ್ಜಿಯನ್ನು ತೋರಿಸುವ ಮಾದರಿಯಲ್ಲಿ ಕಾಣಲಾಗಿದೆ. ಈತನ ಸೇವಕನು ಕೂಡ ಹಿಂದೆ ಗುರಾಣಿ, ಕತ್ತಿ ಹಿಡಿದು ಹೋರಾಟ ನಡೆಸುತ್ತಿದ್ದಾನೆ. ಮಧ್ಯದ ಅಂತಸ್ತಿನಲ್ಲಿ ನಾಲ್ಕು ಜನ ಮಹಿಳೆಯರು ವೀರನನ್ನು ಸುರಲೋಕಕ್ಕೆ ಅಂದರೆ ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಮೇಲ್ಭಾಗದಲ್ಲಿ ವೀರನಿಗೆ ಶಿವದೀಕ್ಷೆಯನ್ನು ನೀಡಿ ದೇವರ ಹತ್ತಿರ ಒಪ್ಪಿಸಿಕೊಳ್ಳುತ್ತಾರೆ ಎಂಬ ನಂಬಿಕೆ ಅಂದಿನ ಜನರಿಗೆ ಇತ್ತು. ಆದಕಾರಣ ಈ ರೀತಿಯ ವೀರಗಲ್ಲುಗಳನ್ನು ನಿಲ್ಲಿಸಿದ್ದಾರೆ. (ಚಿತ್ರಸಂಖ್ಯೆ-137)

## ಚಿಕ್ಕಾಟಿ

ಚಿಕ್ಕಾಟಿ ಚಂದ್ರಶೇಖರ ದೇವಾಲಯದ ಪರಿಸರದಲ್ಲಿ ಅಂದರೆ ದೇವಾಲಯದ ಮುಂದೆ ಮೂರು ವೀರಗಲ್ಲುಗಳಿವೆ. ಈ ದೇವಾಲಯ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ದೇವಾಲಯವಾಗಿದೆ. ಇಲ್ಲಿರುವ ವೀರಗಲ್ಲುಗಳು ಸಹ ಪ್ರಾಚೀನತೆಯನ್ನು ಹೊಂದಿದೆ. ಆದರೆ ಇವುಗಳು ಸಾಕಷ್ಟು ಸವೆದು ಹೋಗಿದೆ. ಆದರೂ ಕೂಡ ಪ್ರಾಚೀನ ಕಾಲದ ಚಂದ್ರಶೇಖರ

ದೇವಾಲಯದ ಪರಿಸರದಲ್ಲಿರುವುದರಿಂದ ಈ ವೀರಗಲ್ಲುಗಳನ್ನು ಸಹ ಗಂಗರ ಕಾಲಕ್ಕೆ ಸೇರಿಸಬಹುದಾಗಿದೆ.

**ಹೊರೆಯಾಲ**

ಹೊರೆಯಾಲ ರಂಗನಾಥಸ್ವಾಮಿ ದೇವಾಲಯದ ಪಕ್ಕದಲ್ಲಿ ಒಂದು ವಿಶೇಷವಾದ ವೀರಗಲ್ಲನ್ನು ಕಾಣಬಹುದಾಗಿದೆ. ಈ ವೀರಗಲ್ಲು ಸಹ ಮೂರು ಅಂತಸ್ತಿನಿಂದ ಕೂಡಿದೆ. ಈ ವೀರಗಲ್ಲು ಶಿಲ್ಪಗಳನ್ನು ನೋಡಿದರೆ, ಪ್ರಸ್ತುತ ಭಾರತೀಯ ಸೇನಾದಳವನ್ನು ನೆನಪಿಗೆ ತರುತ್ತದೆ. ಏಕೆಂದರೆ ಈ ಶಿಲ್ಪಗಳನ್ನು ಗಮನಿಸಿದರೆ ಬಹಳ ಸೂಕ್ಷ್ಮವಾಗಿ ಹೋರಾಟದ ಮನೋಭಾವನೆಯನ್ನು ವ್ಯಕ್ತಪಡಿಸುವ ಮಾದರಿಯಲ್ಲಿರುವ ಶಿಲ್ಪಗಳಾಗಿವೆ. ವೀರಗಲ್ಲನ್ನು ನೋಡಿದರೆ, ಯುದ್ಧದಲ್ಲಿ ತಲ್ಲೀನರಾಗಿರುವುದು, ಶಿಸ್ತು, ಗಾಂಭೀರ್ಯವನ್ನು ಸಹ ತಿಳಿಸುವಂತೆ ಇದೆ. ಮಧ್ಯದಲ್ಲಿ ಮಡಿದ ವೀರರನ್ನು ಕರೆದೊಯ್ಯುತ್ತಿರುವುದನ್ನು ನೆನಪಿಗೆ ತರುತ್ತದೆ. ಅದೇ ರೀತಿ ಮೇಲ್ಭಾಗದಲ್ಲಿಯೂ ಕೂಡ ವೀರರು ಕುಳಿತಿರುವ ಭಂಗಿಯೂ ಸಹ ವಿಶೇಷವಾಗಿದೆ. ಆದಕಾರಣ ಹೊರೆಯಾಲದಲ್ಲಿ ದೊರೆತಿರುವ ವೀರಗಲ್ಲು ತನ್ನದೇ ಆದ ವಾಸ್ತುಕೃತಿಯನ್ನು ಪಡೆದುಕೊಂಡಿದೆ. (ಚಿತ್ರಸಂಖ್ಯೆ-138)

**ಕೋಟೆಕೆರೆ**

ಕೋಟೆಕೆರೆ ಒಂದು ಸಾಂಸ್ಕೃತಿಕವಾಗಿ ಹೆಸರು ಮಾಡಿರುವ ಊರು. ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೀರಗಲ್ಲು, ಮಾಸ್ತಿಕಲ್ಲುಗಳಿವೆ ಹಾಗೂ ಸಮಾಧಿಯ ಅವಶೇಷಗಳಿವೆ. ಆದರೆ ವಿಶೇಷವಾದ ವೀರಮಾಸ್ತಿ ಕಲ್ಲುಗಳನ್ನು ಪತ್ತೆ ಮಾಡಲಾಗಿದೆ. ಒಂದು ಕಡೆ ನೋಡಿದರೆ ವೀರಗಲ್ಲು ಮತ್ತೊಂದು ಕಡೆ ನೋಡಿದರೆ ಮಾಸ್ತಿಕಲ್ಲುಗಳು. ಆದಕಾರಣ ಒಂದೇ ಕಲ್ಲಿನಲ್ಲಿ ಎರಡು ಅಂಶಗಳನ್ನು ಕೋಟೆಕೆರೆಯಲ್ಲಿ ದೊರೆತ ವೀರಗಲ್ಲಿನಲ್ಲಿ ಕಾಣಬಹುದಾಗಿದೆ. ಇದೊಂದು ವೀರ ಮಾಸ್ತಿಕಲ್ಲು, ವೀರಯೋಧರು ಮತ್ತು ವನಿತೆಯರು ಇಬ್ಬರು ಸೇರಿ ಮರಣ ಹೊಂದಿರುವುದನ್ನು ತೋರಿಸುವ ಕಲ್ಲಾಗಿದೆ. ಕೆಳಭಾಗದಲ್ಲಿ ಐದು ಜನ ಅನೇಕ ಬಗೆಯ ಖಡ್ಗ, ಗುರಾಣಿ, ಕತ್ತಿ, ಮಚ್ಚು ಮೊದಲಾದ ಆಯುಧಗಳನ್ನು ಹಿಡಿದು ಹೋರಾಟ ಮಾಡುತ್ತಿದ್ದರೆ, ಎರಡನೆಯ ಅಂತಸ್ತಿನಲ್ಲಿ ಐದು ವನಿತೆಯರ ಶಿಲ್ಪಗಳ ಕೆತ್ತನೆ ಇದೆ. ಅದರ ಮೇಲೆ ಮೂರನೇ ಅಂತಸ್ತಿನಲ್ಲಿ ಮಾಸ್ತಿಕಂಬವನ್ನು ನಿಲ್ಲಿಸಿದ್ದು, ಮೂರು ಜನ ವನಿತೆಯರು ಪದ್ಮಾಸನದಲ್ಲಿ ಕುಳಿತು ಕೈಮುಗಿದು ದೇವರನ್ನು ಪ್ರಾರ್ಥಿಸಿಕೊಳ್ಳುವ ರೀತಿಯಲ್ಲಿ ಶಿಲ್ಪಗಳನ್ನು ಕಡೆಯಲಾಗಿದೆ. ಆದಕಾರಣ ಇದೊಂದು ವಿಶೇಷವಾದ ವೀರಗಲ್ಲು ಹಾಗೂ ಮಾಸ್ತಿಕಲ್ಲು ಸಹ ಆಗಿದೆ

ಎಂಬುದನ್ನು ವ್ಯಕ್ತಪಡಿಸುತ್ತೇನೆ. ಅದೇ ಮಾದರಿಯಲ್ಲಿ ಪಕ್ಕದಲ್ಲಿಯೇ ಇನ್ನೊಂದು ವೀರಗಲ್ಲನ್ನು ಸಹ ಕಾಣಬಹುದಾಗಿದೆ.

**ರಾಘವಪುರ**

ರಾಘವಪುರಕ್ಕೆ ತನ್ನದೇ ಆದ ಇತಿಹಾಸ ಸಂಸ್ಕೃತಿಯನ್ನು ಹೊಂದಿರುವ ಊರಾಗಿದೆ. ಈ ಊರಿನ ಅನೇಕ ದೇವಾಲಯಗಳಿವೆ. ಅದೇ ಮಾದರಿಯಲ್ಲಿ ಹಲವಾರು ವೀರಗಲ್ಲು ಸಹ ಇವೆ. ಈ ವೀರಗಲ್ಲುಗಳ ವಿಶೇಷತೆಯನ್ನು ಹೊಂದಿಲ್ಲ. ಆದಕಾರಣ ಅವುಗಳ ವಾಸ್ತುಕೃತಿಯನ್ನು ತಿಳಿಸಿಲ್ಲ. ಈ ಊರಿನಲ್ಲಿ ಪಟ್ಟಲದಮ್ಮನ ಜಾತ್ರೆ ನಡೆಯುತ್ತದೆ. ಅಲ್ಲದೆ ಪಟ್ಟಲದಮ್ಮನ ಜಾತ್ರೆಯಲ್ಲಿ ವನಿತೆಯರೇ ತೇರನ್ನು ಎಳೆಯುತ್ತಾರೆ. ಇದೊಂದು ವಿಶೇಷವಾದ ಸಂಸ್ಕೃತಿಯಾಗಿದೆ.

**ನಿಟ್ರೆ**

ನಿಟ್ರೆ ಊರಿನಲ್ಲಿ ಸುಮಾರು ಐದು ವೀರಗಲ್ಲುಗಳಿವೆ. ಈ ಐದು ವೀರಗಲ್ಲುಗಳು ಸಹ ಶೈವ ಪರಂಪರೆಗೆ ಸೇರಿದವುಗಳಾಗಿವೆ. ಈ ಎಲ್ಲಾ ವೀರಗಲ್ಲುಗಳಲ್ಲಿ ಪುರುಷರಂತೆ ಮಹಿಳೆಯರು ಸಹ ಯುದ್ಧದಲ್ಲಿ ಭಾಗಿಯಾಗಿರುವುದನ್ನು ಕಾಣಬಹುದು. ಈ ವೀರಗಲ್ಲುಗಳಲ್ಲಿ ವಿಶೇಷತೆ ಇಲ್ಲ. ಆದರೆ ಒಂದು ವೀರಗಲ್ಲಿನಲ್ಲಿ ಮೂರು ಜನ ಮಹಿಳೆಯರು ಶಿವಲಿಂಗಕ್ಕೆ ಎದುರಾಗಿ ಕೈಮುಗಿದು ಬೇಡುತ್ತಿರುವ ದೃಶ್ಯ ವಿಶೇಷವಾದದ್ದು ಎಂದು ಹೇಳಬಯಸುತ್ತೇನೆ. ಈ ರೀತಿಯ ಶಿಲ್ಪ ವಿಶೇಷವೆಂದೇ ಹೇಳಬೇಕಾಗುತ್ತದೆ.

**ಕಮರಹಳ್ಳಿ**

ಕಮರಹಳ್ಳಿಯಲ್ಲಿ ಸುಮಾರು 5 ಮಾಸ್ತಿಕಲ್ಲುಗಳು, 3 ವೀರಗಲ್ಲುಗಳು, 2 ಕುದುರೆ ಮೇಲೆ ಕುಳಿತ ರಾಜನ ಶಿಲ್ಪಗಳು, 5 ಬಿಡಿಶಿಲ್ಪಗಳಿವೆ. ಆದರೆ ವಿಶೇಷವಾದ ಒಂದೇ ಒಂದು ವೀರಗಲ್ಲಿನ ಬಗ್ಗೆ ಮಾತ್ರ ಚರ್ಚಿಸಲಾಗಿದೆ. ಈ ವೀರಗಲ್ಲು ಶೈವ ಪರಂಪರೆಗೆ ಸೇರಿದ ವೀರಗಲ್ಲಾಗಿದೆ. ಅಲ್ಲದೆ ಇದೊಂದು ಗಂಡ-ಹೆಂಡತಿ ಹಾಗೂ ಮಕ್ಕಳನ್ನು ವ್ಯಕ್ತಪಡಿಸುವಂತಹ ವೀರಗಲ್ಲಾಗಿದೆ ಅಥವಾ ಒಬ್ಬ ರಾಜನಿಗೆ ಇಬ್ಬರು ಹೆಂಡತಿಯರು ಇರಬೇಕು. ಒಬ್ಬಳು ಪಟ್ಟದರಾಣಿಯರಾಗಿದ್ದರೆ, ಇನ್ನೊಬ್ಬಳು ಎರಡನೆಯ ಹೆಂಡತಿಯಾಗಿರುತ್ತಾಳೆ. ಆದಕಾರಣ ಯುದ್ಧರಾಜ ಅಥವಾ ಊರಿನ ಪ್ರಮುಖ ವ್ಯಕ್ತಿ ಮರಣ ಹೊಂದಿದಾಗ ಆತನೊಂದಿಗೆ ಇಬ್ಬರು ಹೆಂಡತಿಯರು ಸಹ ಸಹಗಮನವನ್ನು ಪಡೆದಿರಬೇಕು. ಆದಕಾರಣ ತುಂಬಾ ಸುಂದರವಾಗಿ ಶಿಲ್ಪದ ಕೆತ್ತನೆಯನ್ನು ಮಾಡಿರಬೇಕು. ಇವರು ಸೂರ್ಯ-ಚಂದ್ರರ ಸಾಕ್ಷಿಯಾಗಿ

ವೀರಮರಣವನ್ನು ಹೊಂದಿರಬೇಕು. ಆದಕಾರಣ ಈ ಊರಿನಲ್ಲಿ ಸುಂದರವಾದ ಒಂದು ವೀರಗಲ್ಲನ್ನು ನಿಲ್ಲಿಸಿದ್ದಾರೆ. ಈ ಶಿಲ್ಪದ ವೈಶಿಷ್ಟ್ಯತೆಯನ್ನು ಗಮನಿಸಿದರೆ ಪ್ರಾಯಶಃ ಕ್ರಿ.ಶ.15–16ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಗಂಡ ಮತ್ತು ಹೆಂಡತಿ ಇಬ್ಬರು ಕೂಡ ಒಳ್ಳೆಯ ವಸ್ತ್ರವನ್ನು ಧರಿಸಿರುವುದು ಸೊಗಸಾಗಿ ಮೂಡಿಬಂದಿದೆ. ಆದಕಾರಣ ಈತನೇ ರಾಜನಿರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ.

**ಸಿಂಗವಾಡಿ**

ಸಿಂಗವಾಡಿಯ ಊರಿನಿಂದ ಹೊರಗೆ ಪೂರ್ವಾಭಿಮುಖವಾಗಿ ಚಿನ್ನರಾಯಸ್ವಾಮಿ ಅಥವಾ ಚಲುವನಾರಾಯಣಸ್ವಾಮಿ ದೇವಾಲಯದ ಮುಂದೆ ಒಂದು ತೆಂಗಿನ ತೋಟಕ್ಕೆ ಹೊಂದಿಕೊಂಡಂತೆ ಸಾಕಷ್ಟು ಸಂಖ್ಯೆಯಲ್ಲಿ ವೀರಗಲ್ಲುಗಳು ಮತ್ತು ಅನೇಕ ಬಿಡಿಶಿಲ್ಪಗಳು ಕಂಡುಬರುತ್ತವೆ. ಆದರೆ ಇಲ್ಲಿರುವ ವೀರಗಲ್ಲುಗಳು ವಿಶೇಷತೆಯನ್ನು ಹೊಂದಿಲ್ಲ. ಆದಕಾರಣ ಅವುಗಳ ಬಗ್ಗೆ ಚರ್ಚೆಯಾಗಿಲ್ಲ. ಇವುಗಳು ಸಹ ಶೈವ ಪರಂಪರೆಗೆ ಪೂರಕವಾದ ಶಿಲ್ಪಗಳೇ ಆಗಿವೆ.

**ಕುಲಗಾಣ**

ಕುಲಗಾಣ ಗ್ರಾಮದಲ್ಲಿರುವ ಶ್ರೀ ನಲ್ಲಿತಾಳ ಬಸವೇಶ್ವರ ದೇವಾಲಯ ಪರಿಸರದಲ್ಲಿ ಪ್ರಾಚೀನ ಕಾಲದ ಒಂದು ಬಾವಿಯ ಪರಿಸರದಲ್ಲಿ ಬಾವಿಯ ಸುತ್ತಲೂ ಸಾಕಷ್ಟು ಸಂಖ್ಯೆಯಲ್ಲಿ ವೀರಗಲ್ಲುಗಳನ್ನು ಗುರುತಿಸಲಾಗಿದೆ.

**ಗುಂಡ್ಲುಪೇಟೆ**

ಗುಂಡ್ಲುಪೇಟೆ ನಗರದಲ್ಲಿರುವ ಶ್ರೀ ಪಟ್ಟಲದಮ್ಮ ದೇವಾಲಯದ ಪರಿಸರದಲ್ಲಿ ಸುಮಾರು ಏಳು ವೀರಗಲ್ಲುಗಳಿವೆ. ಈ ವೀರಗಲ್ಲುಗಳೆಲ್ಲವು ಸಾಧಾರಣವಾಗಿ ಮೇಲೆ ತಿಳಿಸಲಾಗಿರುವ ಮಾದರಿಯಲ್ಲಿಯೇ ಕಾಣಬರುವುದರಿಂದ ಇವುಗಳ ಚರ್ಚೆಯನ್ನು ಮಾಡಲಾಗಿಲ್ಲ.

**ಯರಿಯೂರು**

ಯರಿಯೂರಿನಲ್ಲಿ ಒಂದು ವೀರಗಲ್ಲು, ಅಂಕಹಳ್ಳಿಯಲ್ಲಿ ಒಂದು ವೀರಗಲ್ಲು ಇದೆ. ಅಂಕಹಳ್ಳಿಯ ವೀರಗಲ್ಲಿನ ಕೆಳಭಾಗದಲ್ಲಿ ಹುಲಿಯನ್ನು ಬೇಟೆ ಮಾಡುತ್ತಿರುವ ಶಿಲ್ಪವನ್ನು

ಕೆತ್ತಲಾಗಿದೆ. ಮಧ್ಯದ ಭಾಗದಲ್ಲಿ ಒಬ್ಬ ಪುರುಷ ಇರುವುದಾಗಿ ಚಿತ್ರಿಸಿ ಇಕ್ಕೆಲಗಳಲ್ಲಿ ಒಂದೊಂದು ಕಡೆ ಮೂರರಂತೆ ಒಟ್ಟು ಆರು ಜನ ವನಿತೆಯರ ಶಿಲ್ಪವನ್ನು ಕೆತ್ತಲಾಗಿದೆ.

ಮೇಲ್ಭಾಗದಲ್ಲಿ ವೈಷ್ಣವ ಧರ್ಮಕ್ಕೆ ಪೂರಕವಾಗಿ ಕೃಷ್ಣನು ಕೊಳಲನ್ನು ನುಡಿಸುತ್ತಿರುವ ಮಾದರಿಯಲ್ಲಿ ಕೆತ್ತನೆ ಮಾಡಲಾಗಿದೆ. ಪಕ್ಕದಲ್ಲಿ ರಾಜ ಮತ್ತು ರಾಣಿ ಇಬ್ಬರು ಪದ್ಮಾಸನದಲ್ಲಿ ಕುಳಿತು, ದೇವರನ್ನು ಬೇಡುವ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಇದೊಂದು ರೀತಿಯಲ್ಲಿ ವಿಶೇಷವಾದ ವೀರಗಲ್ಲು ಎಂದು ಹೇಳಬಹುದು. ಏಕೆಂದರೆ ಕೆಳಭಾಗದಲ್ಲಿ ಹುಲಿಬೇಟೆ ತೋರಿಸಿ ಮೇಲ್ಭಾಗದಲ್ಲಿ ಗಂಡ ಹೆಂಡತಿ ಇಬ್ಬರು ಪೂಜಿಸುತ್ತಿರುವುದರಿಂದ ಇಬ್ಬರು ವೀರಮರಣವನ್ನು ಹೊಂದಿದ್ದಾರೆ. ವೀರಗಲ್ಲಿನ ಮಧ್ಯದ ಭಾಗವನ್ನು ವೀರನನ್ನು ಮಾತ್ರ ತೋರಿಸಿದೆ. ಮೇಲೆ ಗಂಡ ಹೆಂಡತಿಯರನ್ನು ತೋರಿಸಲಾಗಿದೆ. ಈ ಹಿನ್ನೆಲೆಯಿಂದ ಗಂಡ ವೀರ ಮರಣ ಹೊಂದಿದ ನಂತರ ಆಕೆಯು ಕೂಡ ಮರಣ ಹೊಂದಿರಬೇಕು ಎಂಬುದನ್ನು ಅಭಿಪ್ರಾಯವಾಗಿದೆ.

**ಬೇರಂಬಾಡಿ**

ಬೇರಂಬಾಡಿ ಗ್ರಾಮದಲ್ಲಿ ಒಂದು ವೀರಗಲ್ಲು ದೊರೆತಿದೆ. ಇದನ್ನು ಮಾಸ್ತಿಕಲ್ಲಿಗೆ ಹೋಲಿಗೆ ಮಾಡಬಹುದಾಗಿದೆ. ಆದರೂ ಕೂಡ ಇದೊಂದು ವೀರಗಲ್ಲು ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ವೀರಗಲ್ಲಿನ ಕೆಳಭಾಗದಲ್ಲಿ ಕುದುರೆ ಮೇಲೆ ಕುಳಿತ ವನಿತೆಯರು ಒಂದು ಕಡೆ ಭರ್ಜಿಯನ್ನು ಹಿಡಿದು ಹೋರಾಟ ನಡೆಸಿದರೆ ಇನ್ನೊಂದು ಕಡೆ ಇವರ ಎದುರು ಬಿಲ್ಲುಬಾಣ ಮತ್ತು ಖಡ್ಗವನ್ನು ಹಿಡಿದು ಹೋರಾಟ ಮಾಡುತ್ತಿರುವುದು ಕಂಡುಬಂದಿದೆ. ಮಧ್ಯದ ಭಾಗದಲ್ಲಿ ಇಬ್ಬರು ಅಪ್ಸರೆಯರು ಅಂದರೆ ದೇವಲೋಕದ ಕನ್ಯೆಯರು ಛಾಮರ ಹಿಡಿದುಕೊಂಡು ವನಿತೆಯನ್ನು ದೇವರ ಲೋಕಕ್ಕೆ ಕರೆದುಕೊಂಡು ಹೋಗುತ್ತಿರುವ ಅಂಶವನ್ನು ಶಿಲ್ಪಕಲೆಯಲ್ಲಿ ತಿಳಿಸಲಾಗಿದೆ. ಮೇಲ್ಭಾಗದಲ್ಲಿ ಶಿವಲಿಂಗದ ಮುಂದೆ ವನಿತೆಯು ಪದ್ಮಾಸನದಲ್ಲಿ ಕುಳಿತು ದೇವರಲ್ಲಿ ಭಕ್ತಿಪೂರ್ವಕವಾಗಿ ಪೂಜೆ ಸಲ್ಲಿಸುತ್ತಿರುವುದನ್ನು ಚಿತ್ರಿಸಲಾಗಿದೆ. ಇದೊಂದು ಮಾಸ್ತಿಕಲ್ಲು ಆಗಿದ್ದರೂ ಕೂಡ, ವೀರಕಲ್ಲು ಎಂದು ಕರೆಯಲಾಗಿದೆ. ಏಕೆಂದರೆ ಹಿರಿಯ ವಿದ್ವಾಂಸರ ಪ್ರಕಾರ ಮಾಸ್ತಿಕಲ್ಲುಗಳಲ್ಲಿ ಒಂದು ಕೈಗಂಭವನ್ನು ತೋರಿಸಲಾಗಿರುತ್ತದೆ. ಅಂತಹವುಗಳನ್ನು ಮಾಸ್ತಿಕಲ್ಲುಗಳೆಂದು ಕರೆಯಲಾಗಿದೆ. ಆದಕಾರಣ ನಾನು ಸಹಿತ ಇದನ್ನು ವೀರವನಿತೆಯನ್ನು ಅವಲೋಕಿಸುವಂತಹ ವೀರಗಲ್ಲು ಎಂದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ.

## ಮಸಹಳ್ಳಿ ಕಟ್ಟೆ

ಮಸಳ್ಳಿಯ ಗ್ರಾಮದಿಂದ ಹೊರಗೆ ಒಂದು ವೀರಗಲ್ಲನ್ನು ಪತ್ತೆ ಮಾಡಲಾಗಿದೆ. ಈ ವೀರಗಲ್ಲು ಗ್ರಾನೈಟ್ ಶಿಲೆಯಿಂದ ಮಾಡಲ್ಪಟ್ಟಿದ್ದು, ಒಂದು ಸಾಧಾರಣ ವೀರಗಲ್ಲಾಗಿದೆ. ಈ ವೀರಗಲ್ಲು ಸಹ ಮೂರು ಅಂತಸ್ತಿನಿಂದ ಕೂಡಿದ್ದು ಕೆಳಭಾಗದಲ್ಲಿ ಇಬ್ಬರು ಯೋಧರು ಯುದ್ಧದಲ್ಲಿ ಭಾಗಿಯಾಗಿದ್ದು, ಇಬ್ಬರಿಗೂ ಕೂಡ ಒಬ್ಬೊಬ್ಬ ಸೇವಕರಿದ್ದಾರೆ.

ಎರಡನೆಯ ಅಂತಸ್ತಿನಲ್ಲಿ ವೀರಮರಣ ಹೊಂದಿದ ವ್ಯಕ್ತಿಯನ್ನು ಇಬ್ಬರು ದೇವಲೋಕದ ಕನ್ಯೆಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ರೀತಿಯಲ್ಲಿ ಕೆತ್ತಲಾಗಿದೆ.

ಮೂರನೆಯ ಅಂತಸ್ತಿನಲ್ಲಿ ವನಿತೆ ಕೈಮುಗಿದು ಕುಳಿತಿರುವ ಮಾದರಿಯಲ್ಲಿ ಕಡೆಯಲಾಗಿದೆ. ಅಲ್ಲದೆ ಶಿವಭಕ್ತ ಶಿವಲಿಂಗ, ಶಿವಲಿಂಗದ ಮುಂದೆ ನಂದಿಶಿಲ್ಪವನ್ನು ಇರಿಸಲಾಗಿದೆ. ಈ ವೀರಗಲ್ಲನ್ನು ಸೂರ್ಯ, ಚಂದ್ರರ ಸಾಕ್ಷಿಯಾಗಿ ಕೆತ್ತಲಾಗಿದೆ. ಇದರ ಅಭಿಪ್ರಾಯವೇನೆಂದರೆ, ಈ ವೀರಗಲ್ಲು ಸೂರ್ಯ ಚಂದ್ರರು ಇರುವ ತನಕವೂ ಇರಬೇಕು ಎಂಬ ಅಭಿಪ್ರಾಯವಿದ್ದಂತೆ ತೋರುತ್ತದೆ. ಈ ಹಿನ್ನೆಲೆಯಲ್ಲಿಯೇ ಸಾಕಷ್ಟು ವೀರಗಲ್ಲು ಮಾಸ್ತಿಕಲ್ಲುಗಳಲ್ಲಿ ಸೂರ್ಯ–ಚಂದ್ರರ ಶಿಲ್ಪಗಳನ್ನು ಕೆತ್ತಲಾಗಿರಬೇಕು ಎಂಬುದು ಕೂಡ ನನ್ನ ಅಭಿಪ್ರಾಯವಾಗಿದೆ.

## ಹೊಂಗಳ್ಳಿ

ಗುಂಡ್ಲುಪೇಟೆ ತಾಲ್ಲೂಕು ಹೊಂಗಳ್ಳಿ ಊರಿನ ಮಾರಿಗುಡಿ ದೇವಾಲಯದ ಪರಿಸರದಲ್ಲಿ ಸಾಕಷ್ಟು ಅವಶೇಷಗಳಿವೆ. ಅವುಗಳಲ್ಲಿ ವೀರಗಲ್ಲು ಸಹ ಒಂದಾಗಿದೆ. ಈ ವೀರಗಲ್ಲಿನಲ್ಲಿಯೂ ಮೂರು ಅಂತಸ್ತಿನಲ್ಲಿ ವೀರರ ಶಿಲ್ಪಗಳಿವೆ. ಅಲ್ಲದೆ ಈ ವೀರಗಲ್ಲಿನ ಪಕ್ಕದಲ್ಲಿಯೇ ಒಂದು ಚಪ್ಪಡಿ ಇದ್ದು, ಶಂಖ, ಚಕ್ರ, ತ್ರಿನಾಮ ಮಾದರಿಯಲ್ಲಿದ್ದು ಸೂರ್ಯ ಚಂದ್ರನನ್ನು ಸಾಕ್ಷೀಕರಿಸಿದ್ದಾರೆ. ಒಟ್ಟಾರೆ ಇದೊಂದು ವೈಷ್ಣವ ಧರ್ಮದ ಸಂಕೇತವನ್ನು ವ್ಯಕ್ತಪಡಿಸುವಂತಹ ಒಂದು ಚಪ್ಪಡಿಯಾಗಿದೆ ಎನ್ನುವುದು ನನ್ನ ಅಭಿಪ್ರಾಯವಿದೆ.

## ಮಲ್ಲಯ್ಯನಪುರ

ಮಲ್ಲಯ್ಯನಪುರದ ಹೊರವಲಯದಲ್ಲಿ ಅಂದರೆ ದೊಡ್ಡಮಾರಮ್ಮನ ದೇವಾಲಯದ ಪರಿಸರದಲ್ಲಿ ಪ್ರಾಚೀನ ಕಾಲಕ್ಕೆ ಸೇರಿದ ಸಾಕಷ್ಟು ಸಂಖ್ಯೆಯಲ್ಲಿ ಅವಶೇಷಗಳನ್ನು ಪತ್ತೆ ಮಾಡಲಾಗಿದೆ. ಅವುಗಳಲ್ಲಿ ವೀರಗಲ್ಲು, ಮಾಸ್ತಿಕಲ್ಲು ಸಹ ಪತ್ತೆಯಾಗಿದೆ.

ವೀರಗಲ್ಲಿನಲ್ಲಿ ಮೇಲೆ ತಿಳಿಸಲಾಗಿರುವ ಮಾದರಿಯಲ್ಲಿಯ ವೀರಗಲ್ಲನ್ನು ಕಡೆಯಲಾಗಿದೆ. ಮತ್ತೊಂದು ವೀರಗಲ್ಲಿನಲ್ಲಿ ವಿಶೇಷವಾದ ಚಿತ್ರಣವನ್ನು ಕಾಣಬಹುದಾಗಿದೆ. ಅದರ ವಿಶೇಷತೆ ಏನೆಂದರೆ ವನಿತೆ ಬೇಟೆ ಮಾಡುತ್ತಿರುವುದು, ಈ ಚಿತ್ರದಲ್ಲಿ ಒಂದು ಹಂದಿಯನ್ನು ತೋರಿಸಲಾಗಿದೆ. ಹಂದಿಯನ್ನು ಒಂದು ನಾಯಿ ಓಡಿಸಿಕೊಂಡು ಹೋಗುತ್ತಿರುವುದು, ಮೇಲ್ಭಾಗದಲ್ಲಿ ಹಂದಿಯನ್ನು ಮತ್ತೊಂದು ಪ್ರಾಣಿ ಬೇಟೆ ಮಾಡುತ್ತಿರುವುದು ಅಥವಾ ಹಂದಿಯನ್ನು ದಾಳಿ ಮಾಡುತ್ತಿರುವುದು, ಪ್ರಾಯಶಃ ಈ ವನಿತೆ ಹಂದಿಗೆ ಸಹಾಯ ಹಸ್ತ ನೀಡಿದ್ದಾಳೆ ಎಂಬ ಅಭಿಪ್ರಾಯವೂ ಇದೆ ಅಥವಾ ಈಕೆ ಹಂದಿಯನ್ನು ಸಾಕಿರಬಹುದು, ಸಾಕು ಹಂದಿಯಾಗಿರುವುದರಿಂದ ಈಕೆ ಇನ್ನಿತರ ಪ್ರಾಣಿಗಳನ್ನು ಎದುರಿಸಲು ಸಿದ್ಧಳಾಗಿರಬಹುದು ಎಂಬುದು ಈ ಶಿಲ್ಪದ ಹಿನ್ನೆಲೆಯಿಂದ ತಿಳಿಯಬಹುದಾಗಿದೆ. (ಚಿತ್ರಸಂಖ್ಯೆ-139)

## ಕಬ್ಬಹಳ್ಳಿಯಲ್ಲಿರುವ ವೀರಗಲ್ಲುಗಳು

### ವೀರಗಲ್ಲು

ಇದು ಗ್ರಾಮದ ಊರ ಹೊರಗಿನ ಕೆರೆಯ ಅಂಗಳದಲ್ಲಿ ಇದೆ. ಸುಮಾರು ಐದು ಅಡಿ ಎತ್ತರ 3 ಅಡಿ ಅಗಲ ಮತ್ತು ನಾಲ್ಕು ಇಂಚು ದಪ್ಪವಾಗಿದ್ದು, ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಮೂರು ಹಂತಗಳಿಂದ ಕೂಡಿದ್ದಾಗಿದೆ. ಮೊದಲನೆಯ ಹಂತದಲ್ಲಿ ಮೂರು ಜನ ವೀರರು ಸಾಲಾಗಿ ನಿಂತು ತಮ್ಮ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಹಾರವಾಗಿ ನಿಂತಿರುವುದು, ಎರಡನೆಯ ಹಂತದಲ್ಲಿ ಮೂರು ಜನರ ಉಬ್ಬು ಶಿಲ್ಪಗಳಿದ್ದು, ಅದರಲ್ಲಿ ಇಬ್ಬರು ದೇವಲೋಕದ ಸುಂದರಿಯರು ಚಾಮರಧಾರಣಿಯರಾಗಿದ್ದು, ಯೋಧನ ಎರಡು ಕೈಗಳನ್ನು ಮೇಲಕ್ಕೆ ಎತ್ತಿ ಹಿಡಿದುಕೊಂಡು ಸ್ವರ್ಗಕ್ಕೆ ಹೋಗುತ್ತಿರುವಂತೆ ಕಡೆಯಲಾಗಿದೆ. ತಲೆಯ ಮೇಲೆ ತುರುಬನ್ನು ಹಾಕಿರುತ್ತಾರೆ. ಮೂರನೇ ಹಂತದಲ್ಲಿ ಶಿವಲಿಂಗ ಮತ್ತು ನಂದಿಯಿದ್ದು, ಇದನ್ನು ಸೂರ್ಯ ಚಂದ್ರ ಸಾಕ್ಷಿಯಾಗಿ ನಿಲ್ಲಿಸಿರುವಂತೆ ಚಿತ್ರದಲ್ಲಿ ಕಾಣಬಹುದಾಗಿದೆ. ಒಟ್ಟಾರೆ ಯಾವುದೋ ಒಂದು ಯುದ್ಧದಲ್ಲಿ ಹೋರಾಡಿ ಹಾರವಾಗಿರುವುದು ಈ ವೀರಗಲ್ಲಿನಲ್ಲಿ ಕಾಣಬಹುದಾಗಿದೆ.

### ವೀರಗಲ್ಲು-2

ಇದು ಸುಮಾರು 3 ಅಡಿ ಎತ್ತರ 5 ಅಡಿ ಅಗಲವಾಗಿದ್ದು, ಸುಮಾರು 5 ಇಂಚು ದಪ್ಪವಾಗಿದೆ. ಈ ಚಿತ್ರದಲ್ಲಿ 4 ಜನರ ಉಬ್ಬು ಶಿಲ್ಪಗಳು ಮೂಡಿಬಂದಿದ್ದು, ಒಂದು ಕಡೆ ವೀರ ಯೋಧ ಕುದುರೆಯ ಮೇಲೆ ಕುಳಿತು ಖಡ್ಗವನ್ನು ಹಿಡಿದು ಹೋರಾಟ ಮಾಡುವ ದೃಶ್ಯ ಮತ್ತು

ಎದುರುಗಡೆ ವೀರಯೋಧ ಕುಟುಂಬ ಸಮೇತರಾಗಿ ಹೋರಾಟದಲ್ಲಿ ತಲ್ಲೀನರಾಗಿರುವುದು ಇದರ ಜೊತೆಗೆ ವೀರನ ಹೆಂಡತಿ ಮತ್ತು ಮಗು ಸಹ ಭಾಗಿಯಾಗಿರುವುದನ್ನು ಚಿತ್ರದಲ್ಲಿ ಕಾಣಬಹುದಾಗಿದೆ. ಒಟ್ಟಾರೆ ಯಾವುದೋ ಒಂದು ಯುದ್ಧದಲ್ಲಿ ಕುಟುಂಬ ಸಮೇತರಾಗಿ ವೀರ ಮರಣವನ್ನು ಹೊಂದಿರಬೇಕು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

**ವೀರಗಲ್ಲು–3**

ವೀರಗಲ್ಲು ಕಬ್ಬಹಳ್ಳಿಯಲ್ಲಿ ಹರಿಜನರ ಬೀದಿಯಲ್ಲಿ ಪ್ರಾಥಮಿಕ ಶಾಲೆಯ ಆವರಣದ ಹಿಂಭಾಗದಲ್ಲಿ ಇದೆ. ಇದು ಸುಮಾರು 5 ಅಡಿ ಎತ್ತರ 4 ಅಡಿ ಅಗಲ ಮತ್ತು 4 ಇಂಚು ದಪ್ಪವಾಗಿದ್ದು, ಮೂರು ಅಂತಸ್ತುಗಳಿಂದ ಕೂಡಿದೆ. ಇದರಲ್ಲಿ ಮೂಡಿಬಂದಿರುವುದು ಮಹಿಳೆಯರ ಚಿತ್ರವಾಗಿದೆ. ಆದರೂ ಕೂಡ ಮಹಿಳೆಯರು ಯುದ್ಧದಲ್ಲಿ ಹೋರಾಡಿದ ಕಾರಣ ವನಿತೆಯರು ಎಂದು ಕರೆಯಬಹುದಾಗಿದೆ. ಮಹಿಳೆಯರು ಕೂಡ ಯುದ್ಧದಲ್ಲಿ ಹೋರಾಡಿದ ಸನ್ನಿವೇಶವನ್ನು ಸಾಕಷ್ಟು ಸಂಖ್ಯೆಯಲ್ಲಿ ವೀರಗಲ್ಲುಗಳಿವೆ. ಮೊದಲನೆಯ ಹಂತದಲ್ಲಿ ನಾಲ್ಕು ಜನ ವ್ಯಕ್ತಿಗಳ ಉಬ್ಬುಶಿಲ್ಪಗಳಿದ್ದು, ಅದರಲ್ಲಿ ಇಬ್ಬರು ಸ್ತ್ರೀಯರು ಮತ್ತು ಇಬ್ಬರು ಪುರುಷರಿದ್ದು, ಒಂದು ಯುದ್ಧದಲ್ಲಿ ಹೋರಾಡಿದ ವೀರರಿಗೆ ಕುಡಿಯುವುದಕ್ಕೆ ನೀರನ್ನು ತೆಗೆದುಕೊಂಡು ಹೋಗುತ್ತಿರುವ ದೃಶ್ಯ ಇದೆ. ಎರಡನೆಯ ಹಂತದಲ್ಲಿ 5 ಜನರು ಉಬ್ಬುಶಿಲ್ಪಗಳಿದ್ದು, ಅವುಗಳಲ್ಲಿ ಇಬ್ಬರು ಸ್ತ್ರೀಯರು ಮತ್ತು ಮೂರು ಜನ ಪುರುಷರಿದ್ದು, ಬಹುಶಃ ಅಂದಿನ ಕಾಲದಲ್ಲಿ ಭಾಗಿಯಾದುದ್ದು ಕಂಡುಬರುತ್ತದೆ. ಮೂರನೇ ಹಂತದಲ್ಲಿ ಪದ್ಮಾಸನದಲ್ಲಿ ಕೈಮುಗಿದು ಕುಳಿತಿರುವ ಶಿಲ್ಪವನ್ನು ಕಡೆಯಲಾಗಿದ್ದು, ಜೊತೆಗೆ ಶಿವಲಿಂಗ ಅದಕ್ಕೆ ಪೂಜೆ ಸಲ್ಲಿಸುತ್ತಿರುವ ಸ್ತ್ರೀಶಿಲ್ಪ ಹಾಗೂ ನಂದಿಯನ್ನು ಕಡೆಯಲಾಗಿದೆ. ಅಂದರೆ ಯಾವುದೋ ಒಂದು ಯುದ್ಧದಲ್ಲಿ ವೀರಮರಣ ಹೊಂದಿದ್ದು, ಆತ ಸ್ವರ್ಗಕ್ಕೆ ಹೋಗಲೆಂದು ದೇವರಲ್ಲಿ ಮೊರೆ ಹೋಗಿ ಆತನ ಪತ್ನಿ ಪೂಜೆಯಲ್ಲಿ ತಲ್ಲೀನರಾಗಿರುವುದನ್ನು ಕಾಣಬಹುದಾಗಿದೆ. ಒಟ್ಟಾರೆ ಹೇಳುವುದಾದರೆ, ಇವರೆಲ್ಲರು ರಾಜನ ಮಡದಿಯರೆ ಹೊರತು, ಬೇರೆ ಅಲ್ಲ ಎಂದು ಈ ಊರಿನಲ್ಲಿರುವ ಶಿಲ್ಪಕಲೆಯಿಂದ ತಿಳಿಯಬಹುದಾಗಿದೆ.

## ಅಡಿಟಿಪ್ಪಣಿಗಳು


1. ಡಾ.ಎಂ.ಜಿ.ಮಂಜುನಾಥ – ಮಾಸ್ತಿಕಲ್ಲು, ವೀರಗಲ್ಲು ಮತ್ತು ನಿಶಧಿ ಶಾಸನಗಳು, ಕನ್ನಡ ಅಧ್ಯಯನ ಸಂಸ್ಥೆ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, 2011, ಪು.ಸಂ.10.
2. ಚಿದಾನಂದಮೂರ್ತಿ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂಪುಟ–1, ಸಪ್ನ ಬುಕ್‌ಹೌಸ್, ಬೆಂಗಳೂರು, ಪು.ಸಂ.1.
3. ಶೇಷಶಾಸ್ತ್ರಿ ಆರ್. – ಕರ್ನಾಟಕದ ವೀರಗಲ್ಲುಗಳು, ಬೆಂಗಳೂರು, 1982, ಪು.ಸಂ.11.
4. ಪರಮಶಿವಮೂರ್ತಿ ಡಿ.ವಿ. – ಕರ್ನಾಟಕ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1999, ಪು.ಸಂ.12.
5. ಶೇಷಶಾಸ್ತ್ರಿ ಆರ್. - ಪೂರ್ವೋಕ್ತ, ಪು.ಸಂ.4.
6. ಚಿದಾನಂದಮೂರ್ತಿ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂಪುಟ–1, ಸಪ್ನ ಬುಕ್‌ಹೌಸ್, ಬೆಂಗಳೂರು, ಪು.ಸಂ.248–249.
7. ಡಾ.ಎಂ.ಜಿ.ಮಂಜುನಾಥ – ಮಾಸ್ತಿಕಲ್ಲು, ವೀರಗಲ್ಲು ಮತ್ತು ನಿಶಧಿ ಶಾಸನಗಳು, ಕನ್ನಡ ಅಧ್ಯಯನ ಸಂಸ್ಥೆ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, 2011, ಪು.ಸಂ.10, 11.
8. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–88.
9. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–207.
10. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–90.
11. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–215.
12. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–108.
13. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–108.
14. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–36.
15. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–36.
16. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–206.
17. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–171.
18. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–220.
19. ಎ.ಕ. ಸಂಪುಟ–3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ–219.

20. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-34.

21. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-90.

22. ಶೇಷಶಾಸ್ತ್ರಿ ಆರ್. – ಕರ್ನಾಟಕದ ವೀರಗಲ್ಲುಗಳು, ಬೆಂಗಳೂರು, 1982, ಪು.ಸಂ.71.

23. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-36.

24. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-206.

25. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-50.

26. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-220.

## 7.3. ಮಾಸ್ತಿಗಲ್ಲುಗಳು

ಪತಿಯೊಂದಿಗೆ ಸಹಗಮನವನ್ನು ಮಾಡಿಕೊಳ್ಳುತ್ತಿದ್ದ ಮಹಿಳೆಯ ಸ್ತ್ರೀಯರ ಸ್ಮಾರಕವನ್ನು ಮಾಸ್ತಿಕಲ್ಲು ಅಥವಾ ಮಹಾಸತಿಕಲ್ಲುಗಳೆಂದು ಕರೆಯುತ್ತಾರೆ. ಸತಿ ಅಥವಾ ಸಹಗಮನ ಪದ್ಧತಿ ಸಾರ್ವತ್ರಿಕವಾಗಿರಲಿಲ್ಲ. ಅಲ್ಲದೆ ಬಲಾತ್ಕಾರವೂ ಸಹ ಆಗಿರಲಿಲ್ಲ. ಅಂದಿನ ಕಾಲದ ಸ್ತ್ರೀಯರು ಗಂಡನೇ ನನ್ನ ಪರದೈವವೆಂಬ ನಂಬಿಕೆಯನ್ನು ರೂಢಿಸಿಕೊಂಡಿದ್ದರು.ಅ ಆದಕಾರಣ ಪತಿಯ ಮರಣವನ್ನು ಸಹಿಸಲಾಗದೆ ಏಕೈಕ ನಿಷ್ಠೆಯಿಂದ ಗಂಡನನ್ನು ಹಿಂಬಾಲಿಸಿ ಸ್ವ-ಸಂತೋಷದಿಂದ ಒಪ್ಪಿ ಸಹಗಮನವನ್ನು ಮಾಡಿಕೊಳ್ಳುತ್ತಿದ್ದರು.[1] ಗುಂಡ್ಲುಪೇಟೆ ತಾಲ್ಲೂಕು 24ಕ್ಕೂ ಅಧಿಕ ಮಾಸ್ತಿಗಲ್ಲುಗಳನ್ನು ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಪತ್ತೆ ಮಾಡಿದ್ದೇನೆ.

ಧರ್ಮಶಾಸ್ತ್ರದಲ್ಲಿಯೂ ಬಲಾತ್ಕಾರದ ಸಹಗಮನಕ್ಕೆ ಯಾವುದೇ ತರಹದ ಒಪ್ಪಿಗೆ ಇಲ್ಲ. ಆದರೂ ಕೂಡ ಕೆಲವು ಕಡೆಗಳಲ್ಲಿ ಅಪರೂಪವಾಗಿ ಹೆಣ್ಣಿಗೆ ಇಷ್ಟವಿಲ್ಲದಿದ್ದರೂ, ಈ ಒಂದು ಕಾರ್ಯ ಆಗಿದೆ. ಕೆಲವೊಂದು ಸಮಯದಲ್ಲಿ ಪತಿಯ ಸಾವನ್ನು ಕೇಳಿದ ತಕ್ಷಣ ಸ್ತ್ರೀಯರು ಸಹಗಮನವನ್ನು ಮಾಡಿಕೊಳ್ಳುತ್ತಿದ್ದರು.[2] ಅಂದಿನ ಕಾಲದ ಜನರುಗಳು ಈ ಲೋಕದಂತಹ ಇನ್ನೊಂದು ಲೋಕವಿದೆಯೆಂದು ನಂಬಿದ್ದರು. ವ್ಯಕ್ತಿ ಮರಣ ಹೊಂದಿದಾಗ ಆತನು ಪರಲೋಕಕ್ಕೆ ಹೋಗುವವನೆಂದು ಅಲ್ಲಿಯೇ ಆತನ ಬೋಗಕ್ಕೆ ಇಲ್ಲಿಂದ ಅವನಿಷ್ಟವಾದ ವಸ್ತುಗಳನ್ನು ಕಳುಹಿಸಬೇಕೆಂದು ನಂಬಿದ್ದರು. ಸತಿ=ಪತಿಗಳಿಬ್ಬರು ಸ್ವರ್ಗ ಪಡೆಯುವ ನಂಬಿಕೆ ಮತ್ತು ಪುನರ್‌ಜನ್ಮದ ನಂಬಿಕೆ ಇತ್ತು ಎಂಬುದು ಕೆಲವರ ವಾದವಾಗಿದೆ.[3] ಕೆಲವೊಂದು ಹೇಳಿಕೆ ಪ್ರಕಾರ ಮಹಾಸತಿ ಪ್ರಶಸ್ತಿಗಳನ್ನು ತಿಳಿಸುವಂತಹ ಶಾಸನಗಳು ಮಾಸ್ತಿಕಲ್ಲುಗಳ ರೂಪದಲ್ಲಿ ಕಂಡುಬರುತ್ತವೆ.[4] ಸಾಮಾನ್ಯವಾಗಿ ಮಾಸ್ತಿಕಲ್ಲುಗಳಲ್ಲಿ ಸ್ತ್ರೀಯರು ತೋಳನ್ನು ಎತ್ತಿರುವ ದೃಶ್ಯ ಶಿಲ್ಪಗಳು ಕಂಡುಬರುತ್ತದೆ. ಅಲ್ಲದೆ ಮಹಿಳೆಯರ ತಲೆಯ ಹಿಂಭಾಗದಲ್ಲಿ ಹೂವಿನ ಗಂಟನ್ನು (ತುರಬ)ನ್ನು ಕೆತ್ತನೆಯಾಗಿರುವುದು ಕಂಡುಬರುತ್ತದೆ. ಕೇವಲ ತೋಳು ಇರುವ ಮಾಸ್ತಿ ಕಲ್ಲುಗಳನ್ನು ವ್ಯಾಸನತೋಳು ಎಂದು ಕರೆಯುತ್ತಾರೆ. ಅಲ್ಲದೆ ಒಂಟಿಕೈ ಮಾಸ್ತಿಕಲ್ಲು ಎಂದು ಕರೆಯುತ್ತಾರೆ. ಎರಡು ಕೈಗಳಿರುವ ಮಾಸ್ತಿಕಲ್ಲುಗಳು ಸಹ ಇವೆ.[5] ಮಹಾಸತಿಯ ಬಲಗೈ ಶುಭದ ಸೌಭಾಗ್ಯದ ಧನ್ಯ ಜೀವನದ ಸಂಕೇತ, ಕೆಲವು ಮಾಸ್ತಿಕಲ್ಲುಗಳ ಮೇಲೆ ಗಂಡ ಮತ್ತು ಆತನ ಹೆಂಡತಿ ಚಿತ್ರಗಳು ಇರುವುದುಂಟು. ಮಹಾಸತಿಯ ಕೈಯಲ್ಲಿ ಒಂದು ನಿಂಬೆಹಣ್ಣು ಇರುತ್ತದೆ. ಇದು ಸರ್ವೆಸಾಮಾನ್ಯ ಈ ಮಹಾಸತಿಯ ಕಲ್ಲಿನ ಬಗ್ಗೆ ಅನೇಕ ಹಿರಿಯ ವಿದ್ವಾಂಸರು ಅಧ್ಯಯನವನ್ನು ನಡೆಸಿದ್ದಾರೆ. ಆದರೆ ನನ್ನ ಕ್ಷೇತ್ರವಾದ ಗುಂಡ್ಲುಪೇಟೆ ತಾಲ್ಲೂಕಿನ

ಬಗ್ಗೆ ಹೆಚ್ಚಿನ ಸಂಶೋಧನೆ ಆಗಿಲ್ಲ. ಆದಕಾರಣ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳ ವಿವರಣೆಯನ್ನು ನೀಡಲಾಗಿರುತ್ತದೆ.

ಬಿ.ಎ.ಸಾಲೆತೊರೆ, ಎಂ.ಚಿದಾನಂದಮೂರ್ತಿ, ಎಚ್.ತಿಪ್ಪೇರುದ್ರಸ್ವಾಮಿ, ಎಂ.ಎಂ.ಕಲಬುರ್ಗಿ, ಬಿ.ಆರ್.ಹಿರೇಮಠ, ಎಂ.ಜಿ.ಮಂಜುನಾಥ ಇನ್ನೂ ಮೊದಲಾದವರು ಮಾಸ್ತಿಕಲ್ಲು, ವೀರಗಲ್ಲು, ನಿಶಧಿಕಲ್ಲುಗಳ ಬಗ್ಗೆ ಸಂಶೋಧನೆಯನ್ನು ನಡೆಸಿದ್ದಾರೆ. ಆದರೆ ಇವರುಗಳಲ್ಲಿ ಯಾರು ಸಹ ಗುಂಡ್ಲುಪೇಟೆ ತಾಲ್ಲೂಕಿನ ಬಗ್ಗೆ ಚರ್ಚಿಸಿಲ್ಲ. ಆದಕಾರಣ ಪ್ರಸ್ತುತ ನಾನು ಈ ಭಾಗದ ಪ್ರಮುಖ ವೀರಗಲ್ಲುಗಳು, ಮಾಸ್ತಿಕಲ್ಲುಗಳ ಬಗ್ಗೆ ಚರ್ಚಿಸಿರುತ್ತೇನೆ.

ಗುಂಡ್ಲುಪೇಟೆ ತಾಲ್ಲೂಕಿನ ಎಫಿಗ್ರಾಫಿಯ ಕರ್ನಾಟಕ ಸಂಪುಟ–3 ರಲ್ಲಿ ಮಾಸ್ತಿಕಲ್ಲುಕುರಿತು ಎರಡು ಮಾಸ್ತಿಕಲ್ಲು ಶಾಸನಗಳಿವೆ. ಎರೆಯೂರು ಅಥವಾ ಯರಿಯೂರು ಎಂಬ ಶಾಸನದಲ್ಲಿ ಗಉಡಪ್ಪುಕಾಮಣನವರು ವಾಯಿರೋಜಂ ನಿಜಿಸಿ ಪ್ರತಿಷ್ಠೆ. . . . . . . ರೋವಿಗಿರಿನಸ್ತಿರವ ಎಂದು ಬರೆಯಲಾಗಿದೆ. ಇಲ್ಲಿ ಯಾರು ಸತಿಯಾದರು. ಯಾವ ಉದ್ದೇಶಕ್ಕಾಗಿ ಎಂಬ ವಿಚಾರ ನಿಖರವಾದ ಮಾಹಿತಿಯನ್ನು ಒದಗಿಸಿಲ್ಲ.[6] ಅಲ್ಲದೆ ಕುಣಗಳ್ಳಿ ಊರಿನಲ್ಲಿ ಪತ್ತೆಯಾಗಿರುವ ಶಾಸನದಲ್ಲಿ ತಿಂಮಲಾವಾಮಂಣನ ಪಣ್ಣತಿ ಮಂಚಾಯಿ ಸತಿಯಾ(ದ)ರು ಮಂಗಳ ಮಹಾ ಶ್ರೀ ಎಂದು ತಿಳಿಸಲಾಗಿರುತ್ತದೆ.[7] ಕ್ಷೇತ್ರಕಾರ್ಯದ ಸಮಯದಲ್ಲಿ ಸಾಕಷ್ಟು ಮಾಸ್ತಿಕಲ್ಲುಗಳನ್ನು ಗುರುತಿಸಲಾಗಿದೆ. ಉದಾಹರಣೆ ಮೂಡಗೂರು, ಹಳ್ಳದಮಾದಹಳ್ಳಿ, ತೆರಕಣಾಂಬಿಹುಂಡಿ, ಹಸುಗೂಲಿ, ಸೋಮಹಳ್ಳಿ, ಮಂಚನಹಳ್ಳಿ, ಗುಂಡ್ಲುಪೇಟೆ ಪಟ್ಟಣ, ಆಲತ್ತೂರು, ರಾಘವಪುರ, ಕೋಟೆಕೆರೆ, ಕಮರಹಳ್ಳಿ ಮುಂತಾದ ಗ್ರಾಮಗಳಲ್ಲಿ ಒಟ್ಟು 24ಕ್ಕೂ ಅಧಿಕ ಮಾಸ್ತಿಗಲ್ಲುಗಳನ್ನು ನನ್ನ ಕ್ಷೇತ್ರ ಕಾರ್ಯದ ಸಮಯದಲ್ಲಿ ಪತ್ತೆ ಮಾಡಿದ್ದೇನೆ.

## ಕಮರಹಳ್ಳಿ

ಕಮರಹಳ್ಳಿಯಲ್ಲಿರುವ ಸರ್ಕಾರಿ ಶಾಲೆಯ ಹಿಂಭಾಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಾಸ್ತಿಕಲ್ಲುಗಳನ್ನು ಒಂದೇ ವೇದಿಕೆಯಲ್ಲಿ ನಿಲ್ಲಿಸಿದ್ದಾರೆ. ಅವುಗಳಲ್ಲಿ ಐದು ಮಾಸ್ತಿಕಲ್ಲುಗಳು, ಮೂರು ವೀರಗಲ್ಲುಗಳು, ಎರಡು ಕುದುರೆ ಮೇಲೆ ಕುಳಿತ ರಾಜನ ಮಾದರಿ ಶಿಲ್ಪಗಳು ಇನ್ನಿತರ ಐದು ಬಿಡಿ ದುಂಡು ಶಿಲ್ಪಗಳಿವೆ. ಈ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ರಾಜರ ಜೊತೆಗೆ ರಾಣಿಯರು ಕೂಡ ಹೋರಾಡಿ ತಮ್ಮ

ಪ್ರಾಣವನ್ನು ಕಳೆದುಕೊಂಡಿರುವ ಸನ್ನಿವೇಶವನ್ನು ವ್ಯಕ್ತಪಡಿಸುವಂತಹ ಶಿಲ್ಪಗಳನ್ನು ಕಾಣಬಹುದಾಗಿದೆ.

ಈ ಐದು ಮಾಸ್ತಿಕಲ್ಲುಗಳಲ್ಲಿಯೂ ಬಲಗೈಯನ್ನು ತೋರಿಸುತ್ತಿರುವುದು ಕಾಣಬರುತ್ತದೆ. ಮೇಲೆ ತಿಳಿಸಿರುವಂತೆ ಬಲಗೈ ಶುಭದ ಸಂಕೇತವಾಗಿದೆ. ಕೆಳಭಾಗದಲ್ಲಿ ಗಂಡ ಮತ್ತು ಹೆಂಡತಿಯ ಕೆತ್ತನೆ ಮಾಡಲಾಗಿದೆ. ಆದಕಾರಣ ಇದು ಅತ್ಯಂತ ಪ್ರಮುಖವಾದ ಊರು ಕಮರಹಳ್ಳಿಯಾಗಿದೆ. ಏಕೆಂದರೆ ಒಂದೇ ಊರಿನಲ್ಲಿ ಹಲವಾರು ಮಾಸ್ತಿಕಲ್ಲು ಅದರ ಜೊತೆಗೆ ಸಾಕಷ್ಟು ಸಂಖ್ಯೆ ವೀರರ ಶಿಲ್ಪಗಳಿರುವುದರಿಂದ, ಈ ಭಾಗದ ಜನರು ಹೋರಾಡಿ ಮಡಿದರೆಂಬುದು ಸ್ಪಷ್ಟವಾಗುತ್ತದೆ. ಕೆಲವೊಂದು ಶಿಲ್ಪದಲ್ಲಿ ಕುದುರೆ ಮೇಲೆ ಕುಳಿತು ವೀರಾವೇಷದಿಂದ ಹೋರಾಡುವ ದೃಶ್ಯವನ್ನು ಸಹ ಶಿಲ್ಪಗಳಲ್ಲಿ ಕಾಣಬಹುದಾಗಿದೆ. ಕೆಲವು ಶಿಲ್ಪಗಳಲ್ಲಿ ತನ್ನ ಗಂಡ-ಹೆಂಡತಿ ಮತ್ತು ಮಕ್ಕಳು ಇರುವ ದೃಶ್ಯವನ್ನು ಸಹ ಕಾಣಬಹುದಾಗಿದೆ. ಹೀಗೆ ಈ ಶಿಲ್ಪಗಳು ಅನೇಕ ಹಿನ್ನೆಲೆಗಳನ್ನು ವ್ಯಕ್ತಪಡಿಸುವಂತಹ ಶಿಲ್ಪಗಳಾಗಿವೆ. ಒಟ್ಟಾರೆಯಾಗಿ ಕಮರಹಳ್ಳಿಯಲ್ಲಿ ಒಂದು ಇತಿಹಾಸವನ್ನು ಗಮನಿಸಿದರೆ ಈ ಊರಿನಲ್ಲಿ ಕ್ರಿ.ಶ. 10 ರಿಂದ 15ನೇ ಶತಮಾನದ ಕಾಲಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಯುದ್ಧಗಳು ಸಂಭವಿಸಿರಬೇಕು ಅಥವಾ ಊರಿನ ಹಿತಕ್ಕಾಗಿ ವೀರ ಮರಣವನ್ನು ಹೊಂದಿರಬೇಕು ಎಂಬುದನ್ನು ಸ್ಪಷ್ಟವಾಗಿ ಇಲ್ಲಿರುವ ಮಾಸ್ತಿಕಲ್ಲುಗಳ ದಾಖಲೆಗಳಿಂದ ವ್ಯಕ್ತಪಡಿಸಬಹುದಾಗಿದೆ. (ಚಿತ್ರಸಂಖ್ಯೆ-140)

ಕೋಟೆಕೆರೆಯಲ್ಲಿ ದೊರೆತ ಮಾಸ್ತಿಕಲ್ಲು ಒಂದು ವಿಶೇಷತೆಯನ್ನು ವ್ಯಕ್ತಪಡಿಸುತ್ತದೆ. ಏನೆಂದರೆ ಎರಡು ಕೈಗಳನ್ನು ಕೆತ್ತಿಸಿ ಒಂದು ಕೈಯನ್ನು ಮಾತ್ರ, ಅದರಲ್ಲೂ ಬಲಗೈಯನ್ನು ಮಾತ್ರ ತೋರಿಸಲಾಗಿದೆ. ಎರಡು ಕೈಗಳಲ್ಲಿನ ಮೇಲ್ಭಾಗದಲ್ಲಿ ಒಂದೊಂದು ಕುಂಭದ ಆಕೃತಿಯನ್ನು ಮಾಡಲಾಗಿದೆ. ಈ ಕುಂಭ ಶುಭದ ಸಂಕೇತ, ಇನ್ನೊಂದು ವಿಚಾರವೇನೆಂದರೆ ಕುಂಭದಲ್ಲಿ ವೀರರನ್ನು ಇಟ್ಟಿರಬಹುದು. ಆದಕಾರಣ ಈ ಮಾದರಿಯಲ್ಲಿದೆ. ಅಲ್ಲದೆ ವೀರಮರಣ ಹೊಂದಿದ ಸಂದರ್ಭದಲ್ಲಿ ಕುಡಿಯಲು ನೀರನ್ನು ಬಳಸುವುದಕ್ಕೋಸ್ಕರವೇ ಈ ರೀತಿ ಮಾಡಿರಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ.

## ಆಲತ್ತೂರು

ಆಲತ್ತೂರು ಗ್ರಾಮದಲ್ಲಿರುವ ಅರಳಿ ಮರದ ಕೆಳಗೆ ಸಾಕಷ್ಟು ಸಂಖ್ಯೆಯಲ್ಲಿ ಪ್ರಾಚೀನ ಅವಶೇಷಗಳಿವೆ. ಅದರಲ್ಲಿ ಮಾಸ್ತಿಕಲ್ಲು ಸಹ ಒಂದಾಗಿದೆ. ಈ ಮಾಸ್ತಿಕಲ್ಲು ಒಂದೇ ಚಪ್ಪಡಿಯಿಂದ ಕೆತ್ತಲಾಗಿದ್ದು, ಒಂದು ಕಡೆ ಕಂಬದ ಮಾದರಿಯಲ್ಲಿ ಕೆತ್ತಲಾಗಿದ್ದರೆ, ಇನ್ನೊಂದು

ಕಡೆ ಕಂಬ ಮತ್ತು ಬಲಕೈಯನ್ನು ತೋರಿಸಲಾಗಿದೆ. ಕಂಬದ ಪೀಠವು ಚೌಕಾಕಾರವಾಗಿದ್ದು, ದುಂಡು ಸಹ ಚೌಕ ಮಾದರಿಯಲ್ಲಿ ಸ್ವಲ್ಪ ವೃತ್ತಾಕಾರವಾಗಿದೆ. ಮೂರು ಕಡೆ ಸರಳವಾದ ಅಲಂಕಾರಿಕ ಕೆತ್ತನೆಯನ್ನು ಮಾಡಲಾಗಿದೆ. ಮೇಲ್ಭಾಗದಲ್ಲಿ ಕುಂಭದ ಮಾದರಿಯನ್ನು ಇಲ್ಲಿಯೂ ಸಹ ನೋಡಬಹುದು. ಮತ್ತೊಂದು ಮಾಸ್ತಿಕಲ್ಲು ಇರುವ ಬಲಗೈಯ ಕಂಬವು ಅಲಂಕಾರಿಕ ಕೆತ್ತನೆಯಿಂದ ಕೂಡಿದ್ದು, ಪೀಠ ಚೌಕಾಕಾರ, ದಿಂಡು ಆಯತಾಕಾರ ಮಧ್ಯದಲ್ಲಿ ಕಮಲದ ಕೆತ್ತನೆ, ಅದರ ಮೇಲೆ ಕಂಬವನ್ನು ತೋರಿಸಿದ್ದು, ತೋಳಿನಲ್ಲಿ ಮಣಿಸರದ ಮಾಲೆಯನ್ನು ಹಾಕಲಾಗಿದೆ. ಶುದ್ಧ ಹಸ್ತವನ್ನು ಹಾಗೂ ಶುದ್ಧ ಐದು ಬೆರಳುಗಳನ್ನು ತೋರಿಸಲಾಗಿದೆ. ಇದೊಂದು ಪರಿಪೂರ್ಣವಾದ ಮಾಸ್ತಿಕಲ್ಲು ಎಂದು ಪರಿಗಣಿಸಬಹುದಾಗಿದೆ. (ಚಿತ್ರಸಂಖ್ಯೆ–141)

**ಹಸುಗೂಲಿ**

ಹಸುಗೂಲಿ ಸಿದ್ಧರಾಮೇಶ್ವರ ದೇವಾಲಯದ ಆವರಣದಲ್ಲಿ ಮಾಸ್ತಿಕಲ್ಲು ಇದೆ. ಈ ಮಾಸ್ತಿಕಲ್ಲು ಕೆಂಪು ಮತ್ತು ಕಪ್ಪು ಮಿಶ್ರಿತ ಗ್ರಾನೈಟ್ ಕಲ್ಲಿನಿಂದ ಕೂಡಿದ ಮಾಸ್ತಿಕಲ್ಲು ಆಗಿದೆ. ಇದು ಸರಳವಾದ ಮಾಸ್ತಿಕಲ್ಲು. ಆದರೆ ಕಲ್ಲು ಚಪ್ಪಡಿಗೆ ಅಲಂಕಾರಿಕ ಕೆತ್ತನೆ ಇದೆ. ಇದು ಸಹ ವೀರಮಹಿಳೆಯು ತನ್ನ ಬಲಗೈಯನ್ನು ತೋರಿಸಿದ್ದಾರೆ. ಕೈಗೆ ಎರಡು ದಾರವನ್ನು ಕಟ್ಟಿರುವ ಮಾದರಿಯಲ್ಲಿದೆ. ಕೆಳಭಾಗದಲ್ಲಿ ಗಂಡ ಮತ್ತು ಹೆಂಡತಿ ಇಬ್ಬರು ಹೋರಾಡುವ ದೃಶ್ಯವನ್ನು ಸುಂದರವಾಗಿ ಕಡೆಯಲಾಗಿದೆ. ಇವರುಗಳು ಊರಿನ ಹಿತಕ್ಕಾಗಿ ಸಮಾಜದ ರಕ್ಷಣೆಗಾಗಿ ವೀರಮರಣವನ್ನು ಹೊಂದಿರಬೇಕು. ಏಕೆಂದರೆ ಶಿಲ್ಪದ ಲಕ್ಷಣವೇ ತಿಳಿಸುತ್ತದೆ. ವೀರಾವೇಷದಿಂದ ಹೋರಾಡುವ ಭಂಗಿಯಲ್ಲಿ ಆಯುಧಗಳನ್ನು ಹಿಡಿದು ಹೋರಾಡುವ ಕಲ್ಪನೆ ಮನಮೋಹಕವಾಗಿದೆ. ಹೀಗೆ ಸಾಕಷ್ಟು ಸಂಖ್ಯೆಯಲ್ಲಿ ಮಾಸ್ತಿಕಲ್ಲು ಗುಂಡ್ಲುಪೇಟೆ ತಾಲ್ಲೂಕಿನಲ್ಲಿವೆ. ಕೇವಲ ಕೆಲವೇ ಕೆಲವು ಮಾಸ್ತಿಕಲ್ಲುಗಳನ್ನು ಉದಾಹರಣೆಯ ಮೂಲಕ ವ್ಯಕ್ತಪಡಿಸಲಾಗಿದೆ. (ಚಿತ್ರಸಂಖ್ಯೆ–142)

**ವೀರನಪುರ**

ವೀರನಪುರದಲ್ಲಿ ಎರಡು ಮಾಸ್ತಿಕಲ್ಲು ಶಾಸನಗಳಿವೆ. ಈ ಕಲ್ಲು ಪ್ರಕಾರ ಹಿರಿಯ ವಿದ್ವಾಂಸರ ಅಭಿಪ್ರಾಯದಂತೆ ಮಾಸ್ತಿಕಲ್ಲುಗಳೇ ಆಗಿವೆ. ಪಂಜನಹಳ್ಳಿಯಲ್ಲಿ ಮಾಸ್ತಿಕಲ್ಲನ್ನು ಗುರುತಿಸಲಾಗಿದೆ. ಈ ಮಾಸ್ತಿಕಲ್ಲಿನಲ್ಲಿ ವಿಶೇಷವಾಗಿ ವನಿತೆಯರು ನಿಂತಿರುವುದು ಅಲ್ಲದೆ, ಇಬ್ಬರು ವನಿತೆಯರನ್ನು ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಿರುವುದನ್ನು ಕೆತ್ತಲಾಗಿದೆ.

ಇದೊಂದು ವೀರಗಲ್ಲಿನ ಮಾಸ್ತಿಕಲ್ಲು ಆಗಿದೆ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಒಂದೇ ಕಲ್ಲಿನಲ್ಲಿ ವೀರಶಿಲ್ಪಗಳು ಹಾಗೂ ಮಾಸ್ತಿಕಲ್ಲು ಮಾದರಿಯಲ್ಲಿ ದೊರೆತಿರುವುದರಿಂದ ಇದೊಂದು ಮಾಸ್ತಿಕಲ್ಲು ಎಂಬುದನ್ನು ಅಭಿಪ್ರಾಯಿಸಿದ್ದೇನೆ.

## ಯರಿಯೂರು

ಗ್ರಾಮದಲ್ಲಿ ವೀರ ಮಾಸ್ತಿಕಲ್ಲು ಮತ್ತು ಶಾಸನವನ್ನು ಪತ್ತೆಮಾಡಲಾಗಿದೆ. ಇದರಲ್ಲಿ ಶಾಸನ ಇರುವುದನ್ನು ಗುರುತಿಸಲಾಗಿದೆ. ಶಿವಪುರದಲ್ಲಿಯೂ ಒಂದು ಮಾಸ್ತಿಕಲ್ಲು ದೊರೆತಿದೆ. ಹೊನ್ನೇಗೌಡನ ಹಳ್ಳಿಯ ಊರಿನ ಹೊರಗೆ ಮಾಸ್ತಿಕಲ್ಲನ್ನು ಪತ್ತೆ ಮಾಡಲಾಗಿದೆ. (ಚಿತ್ರಸಂಖ್ಯೆ-144)

## ಮಲ್ಲಯ್ಯನಪುರ

ಮಲ್ಲಯ್ಯನಪುರದ ಗ್ರಾಮದಿಂದ ಹೊರಗೆ ದೊಡ್ಡಮಾರಮ್ಮನ ದೇವಾಲಯದ ಪರಿಸರದಲ್ಲಿ ಒಂದು ಮಾಸ್ತಿಕಲ್ಲನ್ನು ಪತ್ತೆ ಮಾಡಲಾಯಿತು. ಇದರಲ್ಲಿ ಒಕ್ಕೈಯನ್ ತೋರಿಸಲಾಗಿದ್ದು, ಮಹಿಳೆಯ ಕೈಯನ್ನು ಗುರುತಿಸಬಹುದಾಗಿದೆ. ಹೇಗೆಂದರೆ ಆಸೆಯ ಕೈಖಡ್ಗ ಬಳೆಗಳು ಕಾಣಬರುತ್ತದೆ. ಅಲ್ಲದೆ ಮಾಸ್ತಿಕಂಬದ ಮೇಲೆ ಒಂದು ಎಲೆಯನ್ನು ತೋರಿಸಿ ಅದರ ಮಧ್ಯದಲ್ಲಿ ಸುಂದರವಾದ ಚಿಕ್ಕದಾದ ಒಂದು ವನಿತೆಯ ಉಬ್ಬುಶಿಲ್ಪವನ್ನು ಸಹ ಕೆತ್ತಲಾಗಿದೆ. ಅಲ್ಲದೆ ಅದರ ಮೇಲ್ಭಾಗದಲ್ಲಿ ಒಂದು ನಿಂಬೆಹಣ್ಣನ್ನು ತೋರಿಸಲಾಗಿದೆ. ಆದಕಾರಣ ಇದೊಂದು ಮಾಸ್ತಿಕಲ್ಲಿಗೆ ಒಂದು ಉತ್ತಮ ಉದಾಹರಣೆಯಾಗಿದೆ. (ಚಿತ್ರಸಂಖ್ಯೆ-143)

## 7.4. ಇನ್ನಿತರ ಬಿಡಿಶಿಲ್ಪಗಳು

### ರಾವಳೇಶ್ವರ ಶಿಲ್ಪ

ಕಬ್ಬಹಳ್ಳಿಯಲ್ಲಿ ರಾವಳೇಶ್ವರನ ಶಿಲ್ಪಗಳು ದೊರೆತಿದ್ದು, ಅವುಗಳನ್ನು ಗಮನಿಸಿದರೆ, ಶೈವ ಪರಂಪರೆಗೆ ಸೇರಿದ ಶಿಲ್ಪಗಳಾಗಿವೆ. ಈ ರೀತಿಯ ಶಿಲ್ಪಗಳು ಈ ಭಾಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿವೆ. ಇದನ್ನು ಕೆಲವರು ರಾವಣಶಿಲ್ಪ, ರಾವಳೇಶ್ವರ ಶಿಲ್ಪ ಎಂದು ಕರೆಯುತ್ತಾರೆ. ಅಲ್ಲದೆ ಆಡಿಕೆಯು ಸಹ ಇದೆ. ಈ ಶಿಲ್ಪವು ಪ್ರಸ್ತುತ ಕಬ್ಬಹಳ್ಳಿ ಗ್ರಾಮದ ಹರಿಜನ ಬೀದಿಯಲ್ಲಿರುವ ಪ್ರಾಥಮಿಕ ಶಾಲೆಯ ಆವರಣದ ಹಿಂಭಾಗದಲ್ಲಿ ಕಂಡುಬರುತ್ತದೆ. ಈ ಶಿಲ್ಪವು ಕಪ್ಪುಗ್ರಾನೈಟ್ ಕಲ್ಲಿನಿಂದ ಕೂಡಿದೆ. 2 ಅಡಿ ಎತ್ತರ 2 ಅಡಿ ಅಗಲ ಮತ್ತು 3 ಇಂಚು ದಪ್ಪವಾಗಿದ್ದು, ಮೂರು ತಲೆಗಳನ್ನು ಹೊಂದಿದೆ. ಚತುರ್ಭುಜಾಕೃತಿಯನ್ನು ಹೊಂದಿದೆ. ಮೂರು ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದು, ಅವುಗಳಲ್ಲಿ ತ್ರಿಶೂಲ, ಖಡ್ಗ, ಮತ್ತು ಬಿಲ್ಲುಬಾಣಗಳನ್ನು ಹಿಡಿದಿರುವುದು ಮತ್ತು ಮತ್ತೊಂದು ಕೈಯನ್ನು ಕೆಳಕ್ಕೆ ಇಳಬಿಟ್ಟಿರುವುದು ಕಂಡುಬರುತ್ತದೆ. ಕೊರಳಲ್ಲಿ (ಕಂಠ) ಹಾರ, ರುಂಡಮಾಲೆ, ಅಲ್ಲದೆ ರುದ್ರಾಕ್ಷಿಮಾಲೆ ಹಾಕಿಕೊಂಡಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಸೊಂಟದ ಕೆಳಗೆ ವಸ್ತ್ರವನ್ನು ಧರಿಸಿದ್ದು ಸುಂದರವಾದ ನರಿಗೆಗಳಿಂದ ವಸ್ತ್ರವು ಕೂಡಿದೆ. ಎರಡು ಕಾಲುಗಳಲ್ಲಿ ಕಾಲುಬಂದಿಯನ್ನು ಧರಿಸಿದ್ದಾನೆ. ಈ ಎಲ್ಲಾ ಲಕ್ಷಣಗಳನ್ನು ಗಮನಿಸಿದಾಗ ಈ ಶಿಲ್ಪವು ರಾಜನ ಎಲ್ಲಾ ಲಕ್ಷಣಗಳನ್ನು ಹೊಂದಿರುವುದರಿಂದ ರಾವಳೇಶ್ವರ ಪ್ರತ್ಯಕ್ಷ ದೇವತಾ (ರಾಜ) ಎಂದು ಈ ಭಾಗದಲ್ಲಿ ಕರೆಯುವ ವಾಡಿಕೆ ಇದೆ. ಈ ಶಿಲ್ಪವನ್ನು ದೇವರೆಂದೂ ಇಂದಿಗೂ ಪೂಜಿಸುತ್ತಾರೆ.

ಅದೇ ಸ್ಥಳದಲ್ಲಿ ಇನ್ನೊಂದು ಶಿಲ್ಪ ಕಂಡುಬರುತ್ತದೆ. ಈ ಶಿಲ್ಪವು ಸಹ ಗ್ರಾನೈಟ್ ಕಲ್ಲಿನಿಂದ ಕೂಡಿದ್ದು 2 ಅಡಿ ಎತ್ತರ ಒಂದೂವರೆ ಅಡಿ ಅಗಲವಾಗಿದ್ದು, ಚತುರ್ಭುಜಾಕೃತಿಯಿಂದ ಕೂಡಿದ್ದು, ಮೂರು ತಲೆಯನ್ನು ಹೊಂದಿದೆ. ಬಲಭಾಗದ ಎರಡು ಕೈಗಳಲ್ಲಿ ಡಮರುಗಳನ್ನು ಹಿಡಿದಿದ್ದು, ಎಡಭಾಗದ ಒಂದು ಕೈಯಲ್ಲಿ ತ್ರಿಶೂಲ ಮತ್ತೊಂದು ಕೈಯನ್ನು ಕೆಳಗೆ ಇಳಬಿಟ್ಟಿರುವುದನ್ನು ಕಾಣುತ್ತೇವೆ. ಜೊತೆಗೆ ಒಂದು ಕಾಲನ್ನು ಸಹ ಇಳಬಿಟ್ಟಿರುವುದು ಮತ್ತೊಂದು ಕಾಲನ್ನು ಮಡಚಿರುವಂತಿದೆ. ಇದರಿಂದ ಇದೊಂದು ದೇವತೆಯ ಶಿಲ್ಪವಾಗಿದೆ.

## ಸ್ಮಾರಕ ಶಿಲ್ಪ

ಈ ಶಿಲ್ಪವು ಗ್ರಾನೈಟ್ ಕಲ್ಲಿನದಾಗಿದ್ದು 5 ಅಡಿ ಎತ್ತರ ಒಂದೂವರೆ ಅಡಿ ಅಗಲ ಮತ್ತು 5 ಇಂಚು ದಪ್ಪನಾಗಿದ್ದು, ಇದರಲ್ಲಿ ಯೋಧನನ್ನು ಸ್ಥಳೀಯ ಪ್ರಾಂತ್ಯದವನಾಗಿರಬಹುದಾಗಿದೆ. ಈತ ಒಬ್ಬ ಜಟ್ಟಿಯ ರೀತಿಯಲ್ಲಿ ಪಂಚೆ (ವಸ್ತ್ರ)ವನ್ನು ಅಂದರೆ ಕಚ್ಚೆಯನ್ನು ಕಟ್ಟಿರುವಂತೆ ಸುಂದರವಾಗಿ ಮೂಡಿಬಂದಿದ್ದು, ಈತನು ಕಂಠದಲ್ಲಿ ಸರಮಾಲೆಯನ್ನು ಧರಿಸಿದ್ದು, ಮತ್ತೊಂದು ಕೈಗಳಿಗೆ ತೋಳುಬಂದಿಯನ್ನು ಧರಿಸಿದ್ದು, ತುಂಬಿದ ಅಗಲವಾದ ದಪ್ಪನೆಯ ಮೀಸೆ ಸುಂದರ ಆಕರ್ಷಕ ಕಣ್ಣುಗಳ ಶಿಲ್ಪ ಕಲೆಯಲ್ಲಿ ಕಾಣಬರುತ್ತದೆ. ಈತನ ಕೈಗಳಲ್ಲಿಯೂ ಆಯುಧವನ್ನು ಹಿಡಿದಿದ್ದು, ಯಾವುದೇ ಒಂದು ಯುದ್ಧದಲ್ಲಿ ಹೋರಾಟದ ದೃಶ್ಯದಂತೆ ಚಿತ್ರದಲ್ಲಿ ಮೂಡಿಬಂದಿದೆ. ಈ ಹಿನ್ನೆಲೆಯಿಂದ ಇದೊಂದು ವೀರಯೋಧನ ಶಿಲ್ಪವೆಂದು ಪರಿಗಣಿಸಬಹುದಾಗಿದೆ.

## ಆಲತ್ತೂರು

ಆಲತ್ತೂರಿನಲ್ಲಿ ಒಂದು ಅರಳಿ ಮರದ ಕಟ್ಟೆಯಲ್ಲಿ ನಾಲ್ಕು ಕೈಗಳಿರುವ ರಾವಳೇಶ್ವರ ಅಥವಾ ರಾವಣೇಶ್ವರ ಶಿಲ್ಪ ಇದೆ. ತ್ರಿಶೂಲ, ಖಡ್ಗ, ಬಿಲ್ಲುಬಾಣಗಳನ್ನು ಹಿಡಿದಿದ್ದಾನೆ.

## ಬಂಡೀಪುರ

ಬಂಡೀಪುರದಲ್ಲಿ ನಾಲ್ಕು ರಾವಳೇಶ್ವರನ ಶಿಲ್ಪಗಳು ದೊರೆತಿವೆ. ಅವುಗಳಲ್ಲಿ ಮೂರು ಒಂದೇ ಮಾದರಿಯದ್ದಾಗಿದ್ದರೆ, ಇನ್ನೊಂದು 10 ತಲೆಯನ್ನು ಹೊಂದಿರುವ ಶಿಲ್ಪವಾಗಿದೆ. ಈ ಶಿಲ್ಪಗಳನ್ನು ನೋಡಿದರೆ ಒಂದೇ ಕಾಲಘಟ್ಟದಲ್ಲಿ ಆಗಿವೆ ಎನ್ನಬಹುದು. ಶಿಲ್ಪಕಲೆಯಲ್ಲಿ ವ್ಯತ್ಯಾಸಗಳಿದ್ದರೂ ವಾಸ್ತುಶೈಲಿಯ ದೃಷ್ಟಿಯಿಂದ ಒಂದೇ ಆಗಿವೆ. ಆದರೆ ತಲೆಯ ಮೇಲ್ಭಾಗದಲ್ಲಿರುವ ಛತ್ರಿ (ಕೊಡೆ) ಯಿಂದ ವ್ಯತ್ಯಾಸವನ್ನು ಕಾಣಬಹುದಾಗಿದೆ. ಸೂಕ್ಷ್ಮವಾಗಿ ಗಮನಿಸಿದರೆ ಒಬ್ಬನೇ ವ್ಯಕ್ತಿಯಾಗಿದ್ದಾನೆ ಎನ್ನಬಹುದು. ರಾವಳೇಶ್ವರನು ಚತುರ್ಭುಜಧಾರಿಯಾಗಿದ್ದು, ಒಂದು ಕೈಯಲ್ಲಿ ಚಕ್ರ, ಒಂದು ಕೈಯಲ್ಲಿ ಖಡ್ಗ, ಒಂದು ಕೈಯಲ್ಲಿ ಬಿಲ್ಲುಬಾಣ, ಇನ್ನೊಂದು ಕೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ. ಸೊಂಟದಲ್ಲಿ ವಸ್ತ್ರವನ್ನು ಧರಿಸಿದ್ದಾನೆ. ವಸ್ತುವು ವಿಭಿನ್ನ ಮಾದರಿಯಲ್ಲಿ ಅಲಂಕೃತವಾಗಿದೆ. ಕಾಲಿಗೆ ಮಣಿಸರ ಅಥವಾ ಗೆಜ್ಜೆ, ತೋಳಿನಲ್ಲಿ ತೋಳ್‌ಬಂದಿ, ಕೈಖಡಗ, ಕಂಠದಲ್ಲಿ ಆಭರಣಗಳನ್ನು ಕಿವಿಯಲ್ಲಿ ಕರ್ಣಕುಂಡಲಗಳನ್ನು ತಲೆಯ ಮೇಲೆ ಕಿರೀಟವನ್ನು ಧರಿಸಿದ್ದಾನೆ. ಅದರ ಮೇಲ್ಭಾಗದಲ್ಲಿ ಛತ್ರಿಯನ್ನು ಕಡೆಯಲಾಗಿದೆ. ಆದಕಾರಣ ಇದು ರಾಜನಶಿಲ್ಪವೇ ಆಗಿದೆ.

ಬಂಡೀಪುರದಲ್ಲಿ ಮತ್ತೊಂದು ರಾವಳೇಶ್ವರ ಶಿಲ್ಪ ದೊರೆತಿದ್ದು, ಇದು 10 ತಲೆಯನ್ನು ಹೊಂದಿರುವ ಶಿಲ್ಪವಾಗಿದೆ. ಈ ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದರೆ ರಾವಣನ ಮಾದರಿಯನ್ನು ಹೊಂದಿದೆ ಎಂದು ಹೇಳಬಹುದು. ಆದರೆ ಈ ರೀತಿಯ ಶಿಲ್ಪಗಳನ್ನು ಚಾಮರಾಜನಗರ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಡಾ.ಬಿ.ಬಸವರಾಜು ತಗರಪುರ ಹಾಗೂ ಚಿತ್ರಕಲಾ ಶಿಕ್ಷಕ ಆರ್.ರಘುರವರು ಸಾಕಷ್ಟು ಶಿಲ್ಪಗಳನ್ನು ಪತ್ತೆ ಮಾಡಿ ಅನೇಕ ಸಂಚಿಕೆಗಳಲ್ಲಿ ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಹಿನ್ನೆಲೆಯಿಂದ ನಾನು ಸಹಿತ ಈ ಶಿಲ್ಪವನ್ನು ರಾವಳೇಶ್ವರ ಅಥವಾ ರಾವಣೇಶ್ವರ ಶಿಲ್ಪವೆಂದೇ ಗುರುತಿಸಿರುತ್ತೇನೆ.

ಈ ಶಿಲ್ಪವು ಬಿಳುಪು ಹಾಗೂ ಕಪ್ಪು ಮಿಶ್ರಣ ಗ್ರಾನೈಟ್ ಕಲ್ಲಿನಿಂದ ಕೆತ್ತಲಾಗಿದ್ದು, ರಾಜನು ಎರಡು ಕಾಲ್ಕು, ನಾಲ್ಕು ಕೈಗಳು ಹಾಗೂ ಹತ್ತು ತಲೆಗಳನ್ನು ಹೊಂದಿರುವ ಶಿಲ್ಪವಾಗಿದೆ. ಇದರ ಉದ್ದೇಶವೇನೆಂದರೆ, ಈತನು ಅತ್ಯಂತ ಪರಾಕ್ರಮವನ್ನು ಹೊಂದಿದ್ದಾನೆ ಎಂಬುದನ್ನು ತಿಳಿಯಲು ಈ ರೀತಿ ಕೆತ್ತಲಾಗಿರಬಹುದು ಅಥವಾ ರಾವಣ್ಣನ ಪ್ರತಿರೂಪವನ್ನು ಶಿಲ್ಪಕಲೆ ಮೂಡಿಸಿರಬಹುದು. ವಾಸ್ತುಶಿಲ್ಪ ಲಕ್ಷಣವನ್ನು ಸಹ ಗಮನಿಸಬಹುದಾಗಿದೆ. ಮಧ್ಯದಲ್ಲಿರುವ ತಲೆಯೂ ಸೊಗಸಾಗಿ ಕಿರೀಟವನ್ನು ಕೆತ್ತಲಾಗಿದೆ. ಅಲ್ಲದೆ ಕಂಠದಲ್ಲಿಯೂ ಸರಮಾಲೆಯನ್ನು ಧರಿಸಿದ್ದಾನೆ. ಇನ್ನುಳಿದ ತಲೆಗಳ ಮೇಲೆ ಈ ರೀತಿ ಕಾಣಬರುವುದಿಲ್ಲ. ಒಟ್ಟಾರೆ ಇದೊಂದು ರಾವಳೇಶ್ವರ ಶಿಲ್ಪವೆನ್ನಬಹುದು. ಹತ್ತು ತಲೆಯ ರಾವಳೇಶ್ವರ ಶಿಲ್ಪವು ಕೊಳ್ಳೇಗಾಲ ತಾಲ್ಲೂಕು ಕಾಮಗೆರೆಯಲ್ಲಿ ಸುಮಾರು ಎಂಟು, ಒಂಭತ್ತು ವರ್ಷಗಳ ಹಿಂದೆಯೇ ಪತ್ತೆಯಾಗಿದೆ. ಕೆಲವರು ಈ ರೀತಿಯ ಶಿಲ್ಪಗಳನ್ನು ಚೋಳರ ಕಾಲಕ್ಕೆ ಸೇರಿಸಿದ್ದಾರೆ. ಏಕೆಂದರೆ ಈ ರೀತಿಯ ಶಿಲ್ಪಗಳು ಚೋಳರು ಆಳ್ವಿಕೆ ನಡೆಸಿರುವ ಸ್ಥಳಗಳಲ್ಲಿ ಮಾತ್ರ ಕಂಡುಬಂದಿವೆ. ಈ ಎಲ್ಲಾ ಬೆಳವಣಿಗೆಯಿಂದ ನಾನು ಸಹಿತ ಈ ಶಿಲ್ಪವನ್ನು ಕ್ರಿ.ಶ.10 ರಿಂದ 11ನೇ ಶತಮಾನಕ್ಕೆ ಸೇರಿಸುವುದಕ್ಕೆ ಪ್ರಯತ್ನಿಸಿದ್ದೇನೆ.

**ಮಸಹಳ್ಳಿ**

ಗುಂಡ್ಲುಪೇಟೆ ತಾಲ್ಲೂಕು ಮಸಹಳ್ಳಿ ಎಂಬ ಊರಿನ ಹೊರವಲಯದಲ್ಲಿ ಒಂದು ದಿಣ್ಣೆಯ ಸುಮಾರು 30ಕ್ಕೂ ಶಿಲ್ಪಗಳಿವೆ. ಅವುಗಳಲ್ಲಿ ನಾಲ್ಕು ರಾವಳೇಶ್ವರನ ಶಿಲ್ಪಗಳನ್ನು ಸಹ ಪತ್ತೆ ಮಾಡಲಾಗಿದೆ. ಈ ಪರಿಸರದಲ್ಲಿ ಸಾಕಷ್ಟು ಶಿಲ್ಪಗಳು ಭೂಮಿಯಲ್ಲಿ ಮುಚ್ಚಿ ಹೋಗಿವೆ. ಆದರೂ ಸಹ ನಾಲ್ಕು ರಾವಳೇಶ್ವರನ ಶಿಲ್ಪಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಒಂದು ರಾವಳೇಶ್ವರನ ಶಿಲ್ಪವು ವೀರಾವೇಶದಿಂದ ನಿಂತಿದ್ದಾನೆ ಎಂಬುದು ಗೋಚರವಾಗುತ್ತದೆ. ಅವನು ಕೂಡ ಎರಡು ಸಾಲುಗಳು, ನಾಲ್ಕು ಕೈಗಳನ್ನು ಹೊಂದಿದ್ದಾನೆ. ರಾಜಾವೇಷದಿಂದಲೂ ಇದ್ದಾನೆ.

ಒಂದು ಕೈಯಲ್ಲಿ ಖಡ್ಗವನ್ನು ಹಿಡಿದಿರುವುದು ರೋಮಾಂಚನಕಾರಿ ಅಂಶವನ್ನು ವ್ಯಕ್ತಪಡಿಸುತ್ತದೆ. ಇನ್ನುಳಿದ ರಾವಳೇಶ್ವರ ಶಿಲ್ಪಗಳು ಅದೇ ಮಾದರಿಯಲ್ಲಿವೆ.

**ಕೊಡಸೋಗೆ**

ಗುಂಡ್ಲುಪೇಟೆ ತಾಲ್ಲೂಕಿನ ಕೊಡಸೋಗೆ ಗ್ರಾಮದಲ್ಲಿರುವ ಚನ್ನಮಲ್ಲಿಕಾರ್ಜುನ ದೇವಾಲಯದ ಪರಿಸರದಲ್ಲಿ ಸಾಕಷ್ಟು ಬಿಡಿಶಿಲ್ಪಗಳಿದ್ದು, ಅವುಗಳಲ್ಲಿ ಒಂದು ರಾವಳೇಶ್ವರನ ಶಿಲ್ಪವೂ ಸಹ ಇದೆ. ಈ ಶಿಲ್ಪವೂ ಸಹ ಮೇಲೆ ತಿಳಿಸಲಾಗಿರುವ ವಾಸ್ತು ಲಕ್ಷಣಗಳನ್ನು ಹೊಂದಿದೆ ಎಂದು ತಿಳಿದುಬಂದಿದೆ.

**ಯರಿಯೂರು**

ಯರಿಯೂರು ಗ್ರಾಮವು ಅತ್ಯಂತ ಪ್ರಾಚೀನವಾದ ನೆಲೆಯಾಗಿದ್ದು, ಈ ನೆಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಿಲ್ಪಗಳನ್ನು ಪತ್ತೆ ಮಾಡಲಾಗಿದೆ. ಈ ಊರಿನಲ್ಲಿ ಬೃಹತ್ ಶಿಲಾಸಮಾಧಿಯನ್ನು ಸಹ ಗುರುತಿಸಲಾಗಿದೆ. ಇನ್ನಿತರ ರಾಜನ ಮಾದರಿಯ ಶಿಲ್ಪಗಳಿವೆ. ಆದರೆ ಒಂದು ಶಿಲ್ಪದಲ್ಲಿ ರಾವಳೇಶ್ವರನ ಹೋಲಿಕೆಯನ್ನು ವ್ಯಕ್ತಪಡಿಸುವಂತಹ ಶಿಲ್ಪ ಇದೆ. ಇದು ಕೃಷ್ಣನ ಮಾದರಿಯ ಹೋಲಿಕೆಯು ಆಗಿದೆ. ನನ್ನ ದೃಷ್ಟಿಯಲ್ಲಿ ಇದೊಂದು ವಿಶೇಷತೆಯನ್ನು ಹೊಂದಿದೆ. ಏಕೆಂದರೆ ಐದು ರಾವಳೇಶ್ವರನ ಶಿಲ್ಪಕಲೆ ಹಾಗೂ ಕೃಷ್ಣನ ಹೋಲಿಕೆ ಇರುವುದರಿಂದ ಒಂದು ಹಿನ್ನೆಲೆಯಿಂದ ಬಂದಿದೆ ಎಂದು ಪರಿಗಣಿಸಬಹುದಾಗಿದೆ.

**ಸೋಮಹಳ್ಳಿ**

ಗುಂಡ್ಲುಪೇಟೆ ತಾಲ್ಲೂಕು ಸೋಮಹಳ್ಳಿ ಗ್ರಾಮದ ಮಧ್ಯದಲ್ಲಿರುವ ಒಂದು ಬೃಹತ್ ಶಿಲಾಸಮಾಧಿಯ ಒಳಗೆ ಒಂದು ರಾವಳೇಶ್ವರನ ಶಿಲ್ಪ ಇದೆ. ಈ ರೀತಿಯ ಬೃಹತ್ ಶಿಲಾಸಮಾಧಿಯನ್ನು ಚಾಮರಾಜನಗರ ತಾಲ್ಲೂಕಿನ ಬದನಗುಪ್ಪೆ ಊರಿನ ಕೊಳದ ಪಕ್ಕದ ದಂಡೆಯಲ್ಲಿದೆ. ಅಲ್ಲಿಯೂ ಕೂಡ ಇದೇ ಶಿಲ್ಪದ ಮಾದರಿಯನ್ನು ಗಮನಿಸಬಹುದಾಗಿದೆ.

ಸೋಮಹಳ್ಳಿಯಲ್ಲಿರುವ ರಾವಳೇಶ್ವರ ಶಿಲ್ಪವು ತುಂಬಾ ಸೊಗಸಾಗಿ ಮೂಡಿಬಂದಿದೆ. ಈ ಶಿಲ್ಪವು ಚತುರ್ಭುಜಧಾರಿಯಾಗಿದ್ದು, ಎರಡು ಕಾಲುಗಳನ್ನು ಹೊಂದಿದ್ದಾನೆ. ಪಾದಕ್ಕೆ ಪಾದುಕೆಯನ್ನು ಧರಿಸಿದ್ದಾನೆ. ಕಾಲಿಗೆ ಗೆಜ್ಜೆಯನ್ನು ಧರಿಸಿದ್ದಾನೆ. ತೋಳಿಗೆ ತೋಳ್ಬಂದಿ ಕೈಯಲ್ಲಿ ಖಡ್ಗ, ಕಾಲುಮುರಿ, ಕಂಠಭರಣ, ತಲೆಯ ಮೇಲೆ ಕಿರೀಟವನ್ನು ಧರಿಸಿದ್ದಾನೆ.

ಒಟ್ಟಾರೆ ಹೇಳುವುದಾದರೆ ಗುಂಡ್ಲುಪೇಟೆ ತಾಲ್ಲೂಕಿನ ಕೆಲವೊಂದು ಗ್ರಾಮಗಳಲ್ಲಿ ರಾವಳೇಶ್ವರ ಒಕ್ಕಲಿನ ಜನರು ವಾಸಿಸುತ್ತಾರೆ. ಈ ದೇವರನ್ನು ಆರಾಧಿಸುವಂತಹ ಪರಿಪಾಠ ಇದೆ. ಹಿರಿಯರ ಹೇಳಿಕೆಗಳ ಪ್ರಕಾರ ಇದೊಂದು ಕ್ರಿ.ಶ.10ನೇ ಶತಮಾನಕ್ಕೆ ಹೆಚ್ಚು ಪರಿಣಾಮಕಾರಿಯಾಗಿ ಬೆಳೆದಿತ್ತೆಂಬುದು ತಿಳಿದುಬರುತ್ತದೆ.

## ಪಂಜನಹಳ್ಳಿ

ಪಂಜನಹಳ್ಳಿಯಲ್ಲಿ ಒಂದು ರಾವಳೇಶ್ವರ ಶಿಲ್ಪವನ್ನು ಪತ್ತೆಮಾಡಲಾಗಿದೆ. ಪಂಜನಹಳ್ಳಿಯ ಗ್ರಾಮದ ಮಧ್ಯದಲ್ಲಿ ದುಃಸ್ಥಿತಿಯಾಗಿರುವ ಒಂದು ದೇವಾಲಯದ ಪರಿಸರದಲ್ಲಿ ಬೃಹತ್ ಶಿಲಾಸಮಾಧಿ ಅಥವಾ ದೇವರಗುಡಿಯನ್ನು ಪತ್ತೆ ಮಾಡಲಾಗಿದ್ದು, ಇದರ ಪಕ್ಕದಲ್ಲಿಯೇ ಒಂದು ರಾವಳೇಶ್ವರನ ಶಿಲ್ಪವನ್ನು ಸಹ ಪತ್ತೆ ಮಾಡಲಾಗಿದೆ. ಈ ಊರಿನಲ್ಲಿ ರಾವಳೇಶ್ವರ ಸಂಸ್ಕೃತಿಗೆ ಪೂರಕವಾಗಿ ಹಿಂದೆ ಪೂಜೆ ನಡೆಯುತ್ತಿತ್ತೆಂದು ತಿಳಿದುಬಂದಿದೆ. ರಾವಳೇಶ್ವರ ಶಿಲ್ಪವು ಸೊಗಸಾಗಿ ಕೆತ್ತಲಾಗಿದ್ದು, ಇದು ಸಹ ಈ ಮೇಲೆ ಚರ್ಚಿಸಲಾಗಿರುವ ಮಾದರಿಯಲ್ಲಿಯೇ ಕಾಣಬರುತ್ತದೆ.

## ಶಿಲ್ಪಗಳು

ಹಿಂದೂಧರ್ಮದಲ್ಲಿ 330 ಕೋಟಿ ದೇವಾತೆಗಳಿದ್ದಾರೆಂದು ಪ್ರತೀತಿ ಇದೆ. ವೈದಿಕ ಸಾಹಿತ್ಯದಲ್ಲಿ ಪಂಡಿತರು 33 ಮಂದಿ ಅಷ್ಟೇ, ಉಳಿದ ದೇವತೆಗಳು ವೈದಿಕವಲ್ಲದ ಇನ್ನೊಂದು ಸಂಪ್ರದಾಯಕ್ಕೆ ಸೇರಿದವರು, ಇವರಲ್ಲಿ ಕೆಲವರು ಮನುಷ್ಯರಾಗಿದ್ದು, ತಮ್ಮ ವಿದ್ಯೆಯಿಂದಲೂ ಚಾತುರ್ಯದಿಂದಲೂ, ತಪಸ್ಸಿನಿಂದಲೂ ದೇವತೆಗಳೆಂಬ ಸ್ಥಾನದಲ್ಲಿ ಪರಿಣಿತರಾದರು. ಕೆಲವರು ವಿಚಿತ್ರ ಸಂದರ್ಭಗಳಿಂದ ದೇವತೆಗಳ ನೆಲೆಯನ್ನು ಪಡೆದವರು ಈ ದೇವತೆಗಳಲ್ಲದೆ ಗ್ರಾಮ ಗ್ರಾಮಗಳಲ್ಲಿ ವಿಶಿಷ್ಠ ದೇವತೆಗಳು ಎಣಿಕೆ ಇಲ್ಲದಷ್ಟು ಇವರನ್ನು ಗ್ರಾಮದೇವತೆಗಳೆಂದು ಒಟ್ಟಾಗಿ ಕರೆಯುವ ವಾಡಿಕೆ ಇದೆ. ಮನುಷ್ಯರೇ ಆಗಿದ್ದರೂ ದೇವತೆಗಳೆಂದು ಪೂಜೆಗೊಳ್ಳುತ್ತಿರುವುದು ಹೊಸ ವಿಚಾರವೇನಲ್ಲ. ಗ್ರಾಮಗಳಲ್ಲಿ ಪೂಜೆಗೊಳ್ಳುವ ಹೆಣ್ಣು, ಗಂಡು ದೇವತೆಗಳಂತೂ ತಮ್ಮ ಬದುಕಿನಲ್ಲಿ ಹಿರಿಮೆಯನ್ನು ಗಳಿಸಿಕೊಂಡು ದೇವತೆಗಳೆಂದು ಮಾರ್ಪಟ್ಟ ಕಥೆಗಳನ್ನು ಕಲ್ಲಿನಲ್ಲಿ ಈಡೇರಿಸಿದ ಪ್ರತಿಮೆಗಳನ್ನು ಗ್ರಾಮಗಳಲ್ಲಿ ಮಾಡಿಸಿ ಕಾಲಕಾಲಕ್ಕೆ ನೆನಪಿಸಿಕೊಳ್ಳುತ್ತಾ, ಗೌರವ ಸಲ್ಲಿಸುತ್ತಿದ್ದರು. ಬಹುಮಟ್ಟಿಗೆ ಮಾಸ್ತಿಕಲ್ಲು, ವೀರಗಲ್ಲು, ನಿಷಧಿಕಲ್ಲುಗಳು ಈ ಸಂಪ್ರದಾಯಕ್ಕೆ ಸೇರಿದವುಗಳಾಗಿವೆ. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ

ಸಮಗ್ರ ಹಳ್ಳಿಗಳ ಅನ್ವೇಷಣೆಯಲ್ಲಿ ಕಾಣಿಸಿದ ಶಿಲ್ಪ, ಮೂರ್ತಿಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಅದರಲ್ಲಿ ವೈವಿಧ್ಯಮಯ ಅಂಶಗಳಿವೆ.

ಶಿಲ್ಪಗಳ ಶೈಲಿ ಮತ್ತು ಪ್ರತಿಮಾಲಕ್ಷಣದಿಂದ ವಾಸ್ತುಶಿಲ್ಪಕ್ಕಿಂತ ಪ್ರಾಚೀನವಾದ ಇತಿಹಾಸ ಮೂರ್ತಿಶಿಲ್ಪಕ್ಕೆ ಇದೆ. ಕ್ರಿ.ಪೂ.೩೦೦೦ ವರ್ಷಕ್ಕೆ ಮುನ್ನ ಅನೇಕ ಸುಂದರವಾದ ಮಾಹಿತಿಗಳು ಭಾರತದಲ್ಲಿ ಲಭ್ಯವಾಗಿದೆ. ಅವುಗಳಲ್ಲಿ ಶಿವಲಿಂಗ ವೃಷಭ ಮತ್ತು ಇತರೆ ಅನೇಕ ವಿಗ್ರಹಗಳು ಹಿಂದೂ ಸಂಸ್ಕೃತಿಯಲ್ಲಿ ಕಂಡುಬರುತ್ತವೆ. ವೇದಗಳ ಯುಗದಲ್ಲಿ ವಿಗ್ರಹಗಳಿಗೆ ಪ್ರಾಧಾನ್ಯತೆಯಿರಲಿಲ್ಲವೆಂದೂ ಪ್ರಕೃತಿ ಶಕ್ತಿಗಳನ್ನು ಪೂಜಿಸಲಾಗುತ್ತಿತ್ತೆಂದೂ ಹೇಳುವುದುಂಟು. ಆದರೆ ಇಂದ್ರ, ವರುಣ ಮತ್ತು ರುದ್ರ ಮೊದಲಾದ ದೇವತೆಗಳಿಗೆ ಮನುಷ್ಯನಾಕಾರದ ಕಲ್ಪನೆಯನ್ನು ಕೊಟ್ಟಿರುವುದು ಅಲ್ಲಿ ಕಾಣುತ್ತೇವೆ. ಚಾರಿತ್ರಿಕ ಯುಗಕ್ಕೆ ಬಂದರೆ ಅಂತ್ಯತ ಪ್ರಾಚೀನವಾದ ಶಿಲ್ಪಾಕೃತಿಗಳ ಮೌರ್ಯರ ಕಾಲದಿಂದ ಕಂಡುಬರುತ್ತದೆ. ಆದರೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಗಂಗರ ಕಾಲದಿಂದ ಬೆಳವಣಿಗೆಯಾಗಿದೆ.

ಶಿಲ್ಪಶಾಸ್ತ್ರವು ಹುಟ್ಟಿದ ಮೇಲೆ ಭಾವನಾತ್ಮಕ ಶಿಲ್ಪಗಳ ಸಂಖ್ಯೆ ಬಹಳ ಕಡಿಮೆಯಾಗತೊಡಗಿತು. ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣರಾದ ಬ್ರಹ್ಮ, ವಿಷ್ಣು, ಶಿವನ ಶಿಲ್ಪಗಳಲ್ಲಿ ಬೇರೆ ಬೇರೆ ಸಾರಗಳು ಕಾಣಿಸಿಕೊಂಡವು. ನಾಗವೃಕ್ಷ, ಯಕ್ಷ–ಯಕ್ಷಿಣಿ, ನಾಗ–ನರ, ನರ–ಸಿಂಹ, ನಂದಿ–ಬಸವ, ಆನೆ, ಮನುಷ್ಯ ಮೊದಲಾದವುಗಳಲ್ಲಿ ಮೂರ್ತಿಗಳ ಆಕಾರವನ್ನು ಅಳವಡಿಸುವ ಮತ್ತು ಜೋಡಿಸುವ ಪದ್ಧತಿಯನ್ನು ಭಾರತೀಯ ಶಿಲ್ಪಶಾಸ್ತ್ರದಲ್ಲಿ ತುಂಬ ಹಳೆಯ ಪದ್ಧತಿಯಾಗಿರುವುದು ಸಿಂಧೂ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ. ಈ ಬೆಳವಣಿಗೆಯು ಆಯುಧಗಳ ಅಲಂಕರಣೆಯಲ್ಲಿ ಕಾಣುತ್ತೇವೆ. ಇವುಗಳು ವಜ್ರಘಂಟೆ, ತ್ರಿಶೂಲಘಂಟೆ, ಶೂಲ ಪರಶು, ಅಂಕುಶ, ದಂಡ, ಪಾಶ ಮೊದಲಾದ ಸಂಯುಕ್ತಾಭರಣಗಳಾಗಿವೆ.

## ಮುದ್ರೆಗಳು

ಮುದ್ರೆಗಳು ಯಾವಾಗ ಜನ್ಮ ತಳೆದವು ಎಂಬ ವಿಷಯವನ್ನು ಖಚಿತವಾಗಿ ಹೇಳುವುದು ಕಷ್ಟಕರವಾದರೂ ಕನಿಷ್ಠ ಪಕ್ಷ ಸುಮಾರು ಕ್ರಿ.ಶ.1ನೇ ಶತಮಾನದಿಂದೀಚೆಗೆ ದಕ್ಷಿಣ ಭಾರತದ ಮೂರ್ತಿಶಿಲ್ಪಗಳಲ್ಲಿ ವಿಶೇಷವಾಗಿ ಹರಡಿವೆ. ಪ್ರತಿಮೆಗಳ ಕೈ ಮತ್ತು ಬೆರಳುಗಳ ವಿಶೇಷ ಸ್ಥಿತಿಗೆ ಮುದ್ರೆ ಎಂದು ಹೆಸರು. ಇವುಗಳಲ್ಲಿ ಅನೇಕ ವಿಧಗಳಿದ್ದರೂ ಪ್ರಮುಖವಾದವುಗಳೆಂದರೆ, ಅಭಯ, ವರದ, ಕಟಿಕ, ದಂಡ, ವಿಸ್ಮಯ, ಅಂಜಲಿ, ಧ್ಯಾನ, ವ್ಯಾಖ್ಯಾತ, ಕಟಿವಲಂಬಿತ ಹಸ್ತ ಇನ್ನೂ ಕೆಲವು ವಿನ್ಯಾಸಗಳಿಗೆ ಮುದ್ರೆಗಳೆಂದು ಕರೆಯುತ್ತಾರೆ. ಚಿನ್ಮುದ್ರೆ, ಯೋಗಮುದ್ರೆ ಹಾಗೂ

ಭೂಮಿಸ್ಪರ್ಷ ಶಿಲ್ಪಗಳಲ್ಲಿ ಹೆಚ್ಚು ಕಾಣುತ್ತೇವೆ. ಕಟಿಕ ಮತ್ತು ವರದ ಹಸ್ತಗಳನ್ನು ಸ್ತ್ರೀ ಶಿಲ್ಪದಲ್ಲಿ ಹೆಚ್ಚಾಗಿ ಕಾಣಬಹುದು.

## ಭಂಗಿಗಳು

ಸಾಮಾನ್ಯವಾಗಿ ವಿಗ್ರಹಗಳನ್ನು ಸಮಭಂಗಿ ಆಸೀನ ಮತ್ತು ಶಯನ ಭಂಗಿಗಳೆಂದು ವಿಂಗಡಿಸಬಹುದಾಗಿದೆ. ಸೂರ್ಯ, ವಿಷ್ಣು, ಬುದ್ಧ, ಜೈನಶಿಲ್ಪಗಳು ಸಮಭಂಗಿಯಲ್ಲಿರುತ್ತವೆ. ಆಸನಗಳಲ್ಲಿ ಪದ್ಮಾಸನ, ಯೋಗಾಸನ, ವೀರಾಸನ ಮತ್ತು ಲೀನದಾಸನ ಮುಖ್ಯವಾದವುಗಳಾಗಿವೆ. ವಿಷಕಂಠ, ಚಕ್ರಪ್ರಧಾನ, ವೀರಭದ್ರ, ಗಣಪತಿ, ಗಜಲಕ್ಷ್ಮಿ, ಸರಸ್ವತಿ, ಉಮಾಮಹೇಶ್ವರಿ ಶಿಲ್ಪಗಳನ್ನು ಆಸೀನ ಮತ್ತು ಸ್ಥಾನಿಕ ಭಂಗಿಯಲ್ಲಿ ಶಿಲ್ಪಿಸುತ್ತಾರೆ. ಶಯನ ಭಂಗಿಯಲ್ಲಿ ವಿಷ್ಣುವಿನ ಶಿಲ್ಪಗಳು ಕಂಡುಬರುತ್ತದೆ. ಇವುಗಳಲ್ಲಿ ಅನಂತ ಶಯನ ಭೋಗಶಯನ ಇವು ಪ್ರಮುಖವಾದವುಗಳಾಗಿವೆ. ಈ ರೀತಿಯ ಶಿಲ್ಪಗಳು ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ದೊರೆಯುತ್ತದೆ.

## ಆಯುಧಗಳು

ವಿಗ್ರಹಗಳ ಕೈಗಳಲ್ಲಿರುವ ಆಯುಧಗಳ ಬೇರೆ ಬೇರೆ ರೀತಿಯದ್ದಾಗಿರುತ್ತದೆ. ಸಾಮಾನ್ಯವಾಗಿ ಎರಡು ನಾಲ್ಕು, ಎಂಟು, ಹತ್ತು, ಹನ್ನೆರಡು ಕೈಗಳಿರುವ ಶಿಲ್ಪಗಳಿರುತ್ತವೆ. ನಾಲ್ಕು ಕೈಗಳಿರುವ ಶಿಲ್ಪಗಳು ಈ ಭಾಗದಲ್ಲಿ ಹೆಚ್ಚು ಕಂಡುಬರುತ್ತದೆ. ಶಂಖ, ಚಕ್ರ, ಬಾಣ, ಅಂಕುಶ, ಡಮರು, ಪಾಶ, ಗದಾ, ಖಡ್ಗ, ಪರಶು, ಶೂಲ, ವಜ್ರ, ಅಗ್ನಿ, ಪದ್ಮ, ವೀಣೆ ಮುಂತಾದವುಗಳು ಆಯುಧಗಳಲ್ಲಿ ಪ್ರಮುಖವಾದವುಗಳಾಗಿವೆ. ವಿಷ್ಣುವಿನ ಕೈಯಲ್ಲಿ, ಶಂಖ, ಚಕ್ರ, ಗಧಾ, ಪದ್ಮಗಳಿದ್ದರೆ ಶಿವನ ಕೈಯಲ್ಲಿ ಪರಶು ತ್ರಿಶೂಲ, ಡಮರು ಅಗ್ನಿವಿರುತ್ತದೆ. ಗಣಪತಿಯ ಕೈಯಲ್ಲಿ ಪರಶು, ಅಂಕುಶ, ಸರಸ್ವತಿ, ಕೈಯಲ್ಲಿ ವೀಣೆ, ಪುಸ್ತಕ ಗಜಲಕ್ಷ್ಮಿ ಕೈಯಲ್ಲಿ ಪದ್ಮ ಸೂರ್ಯ, ವಿಗ್ರಹ ಕೈಯಲ್ಲಿ ಪದ್ಮವಿರುತ್ತದೆ.

## ವಾಹನಗಳು

ದೇವದೇವತೆಗಳನ್ನು ಅವರ ವಾಹನಗಳ ಸಮೇತ ಶಿಲ್ಪಿಸಿರುತ್ತಾರೆ. ಬ್ರಹ್ಮನಿಗೆ ಹಂಸ, ಶಿವನಿಗೆ ನಂದಿ, ವಿಷ್ಣುವಿಗೆ ಗರುಡ, ದುರ್ಗಿಗೆ, ಷಣ್ಮುಖನಿಗೆ ನವಿಲು, ಗಣಪತಿಗೆ ಮೂಷಿಕ, ಚಾಮುಂಡಿಗೆ ನರಿ ವಾಹನಗಳಾಗಿರುತ್ತದೆ. ಹೀಗೆ ಸೂಚಿತವಾಗಿರುವ ವಾಹನಗಳ ಸಹಾಯದಿಂದ ಆಯಾ ದೇವತೆಗಳನ್ನು ಗುರುತಿಸಬಹುದು.

## ಆಭರಣಗಳು

ಸಾಮಾನ್ಯವಾಗಿ ದೇವತೆಗಳು ಈ ಕೆಳಗೆ ಹೆಸರಿಸಿದ ಆಭರಣಗಳಿಂದ ಅಲಂಕೃತವಾಗಿರುವುದನ್ನು ಕಾಣಬಹುದು. ತಲೆಯಲ್ಲಿ ಕಿರೀಟ ಅಥವಾ ಕೇಶಬಂಧ ಕಿವಿಯಲ್ಲಿ ಕುಂಡಲ, ಕತ್ತಿನಲ್ಲಿ ಹಾರ, ತೋಳಿನಲ್ಲಿ ಕೇಯೂರ, ಕೈಯಲ್ಲಿ ಕಂಕಣ, ಹೊಟ್ಟೆಯ ಸುತ್ತ ಉದರಬಂಧ ಸೊಂಟದಲ್ಲಿ ಕಟಿಬಂಧ, ಯಜ್ಞೋಪವೀತ, ಕಾಲಿನಲ್ಲಿ ನೂಪುರ ಸ್ತ್ರೀ ವಿಗ್ರಹಗಳಿಗೆ ಕುಚಬಂಧ, ಶಿವನಿಗೆ ಭುಜಂಗವಲಯ, ವಿಷ್ಣುವಿಗೆ ವೈಜಯಂತಿ ಇತ್ಯಾದಿ ಆಭರಣಗಳಿಂದ ಶಿಲ್ಪಗಳು ಅಲಂಕೃತವಾಗಿರುತ್ತದೆ. ಸಾಮಾನ್ಯವಾಗಿ ಜೈನ ವಿಗ್ರಹಗಳು ನಗ್ನವಾಗಿದ್ದು, ಈ ಶಿಲ್ಪಗಳಲ್ಲಿ ಯಾವುದೇ ಆಭರಣಗಳ ಅಲಂಕರಣವಿರುವುದಿಲ್ಲ.

## ಶೈವಶಿಲ್ಪಗಳು

ಶಿವನು ಭಾರತೀಯ ದೇವರುಗಳಲ್ಲಿ ಅತ್ಯಂತ ಶ್ರೇಷ್ಠ ದೇವರೆಂದು ಹೆಸರು ವಾಸಿಯಾಗಿದ್ದಾರೆ. ಅಸಂಖ್ಯಾತ ಭಕ್ತರನ್ನು ಹೊಂದಿದ ಶಿವನು ನಾಮಾಂಕಿತಗಳಿಂದ ಗುರುತಿಸಲ್ಪಟ್ಟಿದ್ದಾನೆ. ಅಮರಕೋಶವು ಶಿವನ 48 ಹೆಸರುಗಳನ್ನು ಹೇಳಿದರೆ, ವಾಜಸೇನೆಯ ಸಂಹಿತವು ಶಿವನನ್ನು ಅಗ್ನಿ, ಅಸನಿ, ಪಶುಪತಿ, ಭವ, ಸರ್ವ, ಈಶಾನ್ಯ, ಮಹಾದೇವ, ಉಗ್ರದೇವನೆಂದು ಕರೆಯುತ್ತವೆ. ಶೈವಾಗಮಗಳು ಸೃಷ್ಠಿ, ಸ್ಥಿತಿ, ಲಯ, ಕರ್ತೃ, ಮಹೇಶನೆಂದು ಹೇಳುತ್ತಾ ಮಹೇಶಮೂರ್ತಿಯ ವಿವಿಧ ಲೀಲಾರೂಪಗಳನ್ನು ಭಾವಭಂಗಿಗಳನ್ನು ಹೇಳುತ್ತವೆ. ಆಗಮಗಳು ಶಿವನನ್ನು 25 ಲೀಲಾಮೂರ್ತಿಗಳಲ್ಲಿ ಚಂದ್ರಶೇಖರ, ಉಮಾಮಹೇಶ್ವರ, ವೃಷಭ ವಾಹನ, ನೃತ್ಯಮೂರ್ತಿ, ಕಲ್ಯಾಣ ಸುಂದರಮೂರ್ತಿ, ಭಿಕ್ಷಾಟನ ಮೂರ್ತಿ, ಕಾಮದಹನಮೂರ್ತಿ, ಕಾಲಾಂತರಮೂರ್ತಿ, ತ್ರಿಪುರಸಂಹಾರಮೂರ್ತಿ, ಜಲಂಧರಮೂರ್ತಿ, ಕಿರಾತ, ಕಂಕಳ, ಚಂದೇಶಾನುಗ್ರಹ, ವಿಶಾಪಹರಣ, ಚಕ್ರದಹನ, ವಿಗ್ನೇಶಾನುಗ್ರಹ, ಸೋಮಸ್ಕಂದ, ಏಕಪಾದ, ಸುಖಾಸನ, ದಕ್ಷಿಣಮೂರ್ತಿ ಮತ್ತು ಲಿಂಗೋದ್ಭವ ಮೂರ್ತಿಗಳೆಂದು ವಿಂಗಡಿಸಿ ಹೇಳುತ್ತವೆ. ಈ ಕೆಳಕಂಡಂತೆ ಕೆಲವು ಶಿಲ್ಪಗಳನ್ನು ವಿವರಿಸಲಾಗುವುದು.

## ಮಹಿಷಮರ್ದಿನಿ ಶಿಲ್ಪ

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹಸುಗೂಳಿಯ ರಾಮೇಶ್ವರ ದೇವಾಲಯದಲ್ಲಿ ಮಹಿಷಮರ್ದಿನಿ ಶಿಲ್ಪ ಇದೆ. ದೇವಿಯು ಮಹಿಷನ ತಲೆಯ ಮೇಲೆ ನಿಂತಿದ್ದಾಳೆ. ಇಲ್ಲಿ ಆಕರ್ಷಕವಾದ ಭಂಗಿಯಲ್ಲಿ ದೇವಿಯ ಆಕೃತಿಯನ್ನು ಕಡೆಯಲಾಗಿದೆ. ನಾಲ್ಕು ಕೈಗಳನ್ನು ಹೊಂದಿರುವ ದೇವಿಯು ಸೂಕ್ಷ್ಮವಾಗಿದ್ದಾಳೆ. ಆಕರ್ಷಕವಾದ ಸ್ವಲ್ಪ ನಾಜೂಕಾದ

ದೇಹಾಕೃತಿಯನ್ನು ಹೊಂದಿರುವ ಈ ಶಿಲ್ಪದಲ್ಲಿ ದೊಡ್ಡದಾದ ಮುಖ ಸ್ವಲ್ಪ ಬಾರವೆನಿಸುವ ಕಿರೀಟ, ಕಂಠಹಾರ, ಕುಚಬಂಧ, ಉದರಬಂಧ, ಕಟಿಬಂಧಗಳು, ಯಜ್ಞೋಪವೀತದ ಮಣಿಸರ ಮತ್ತು ಆಕರ್ಷಕವಾಗಿ ಇಳಿಬಿಗಿಯಾದ ಕಟಿವಸ್ತ್ರದ ಗುಚ್ಚಗಳು ಹಾಗೂ ದೇವಿಯು ನಿಂತಿರುವ ಕಾವ್ಯಮಯವಾದ ಮತ್ತು ಲಾಲಿತ್ಯಪೂರ್ಣವಾದ ತ್ರಿಭಂಗ ಶಿಲ್ಪವನ್ನು ಸೌಂದರ್ಯ ದೃಷ್ಟಿಯಲ್ಲಿ ಉನ್ನತವಾಗಿರುತ್ತದೆ. ದೇವಿಯ ಅಂಗಗಳ ಕೆತ್ತನೆ ಅತ್ಯಂತ ಸಹಜವಾಗಿ  ಮೂಡಿಬಂದಿದೆ. ಅಲ್ಲದೆ ದೇವಿಯ ಕಾಲ ಕೆಳಗಡೆ ಇರುವ ಮಹಿಷನ ಮುಖ ಕೂಡ ಅತ್ಯಂತ ವಾಸ್ತವಿಕವಾಗಿ ಮೂಡಿಬಂದಿದೆ. ಮಹಿಷನ ಕೊಂಬುಗಳು ಅರ್ಧವೃತ್ತಾಕೃತಿಯಲ್ಲಿ ಬಿಡಿಸಿದ್ದು ಅವುಗಳು ಕೂಡ ಬಹಳ ಸರಳವಾಗಿ ಕೆತ್ತಲ್ಪಟ್ಟಿವೆ. ಹೀಗೆ ಮಹಿಷಶೂರನ ಶಿಲ್ಪಗಳು, ಹಸುಗೂಳಿ, ಮಂಚಹಳ್ಳಿ, ಪಾರ್ವತಿಬೆಟ್ಟ, ನಿಟ್ರೆ, ಸಂಪಿಗೆಪುರ, ಕೊಡಸೋಗೆ, ಕೆಲಸೂರು ಇನ್ನೂ ಮೊದಲಾದ ಕಡೆ ಮಹಿಷಶೂರನ ಶಿಲ್ಪಗಳು ಕಂಡುಬಂದಿವೆ.

## ಸೂರ್ಯಶಿಲ್ಪ

ಸೂರ್ಯನ ಶಿಲ್ಪಗಳು ಸಾಕಷ್ಟು ಗ್ರಾಮಗಳಲ್ಲಿಯೂ ಕಂಡುಬಂದಿವೆ. ಸೂರ್ಯನ ಶಿಲ್ಪಗಳಲ್ಲಿ ಎರಡು ಕೈಗಳಲ್ಲಿ ಕಮಲದ ಮಗ್ಗನ್ನು ಹಿಡಿದು ನಿಂತಿದ್ದಾನೆ. ಸೂರ್ಯನ ಸುತ್ತಲೂ ಪ್ರಭಾವಳಿಯಿದ್ದು, ಈ ಭಾಗದ ಸೂರ್ಯನ ಶಿಲ್ಪಗಳಲ್ಲಿ, ಕೈಗಳು ಸೂರ್ಯನ ಶರೀರದ ಅಂದವನ್ನು ದ್ವಿಗುಣಗೊಳಿಸುತ್ತದೆ. ಇದಕ್ಕೆ ಮೆರುಗು ನೀಡಿದಂತೆ ಇರುವ ಅಲಂಕಾರಿಕ ಕಿರೀಟ ಮಕರ ಕುಂಡಲಗಳು, ಮಣಿಸರಗಳು, ಯಜ್ಞೋಪವೀತ, ಉದರಬಂಧ, ಭುಜ ಸರಗಳು ಸಿಂಹಮುಖದಿಂದ ಕೂಡಿದ ಮುಖ ಹಾಗೂ ಮಾಲಾಂತರ ಮತ್ತು ನೆರಿಗೆಗಳಿಂದ ಕೂಡಿದ ಬಿಗಿಯಾದ ಕಿರಿದಾದ ಅರ್ಧ ಪಂಚೆ ಹಾಗೂ ಆಕರ್ಷಕವಾದ ಕಲಾತ್ಮಕವಾಗಿ ಗಂಟುಗಳನ್ನುಳ್ಳ ಕಟಿವಸ್ತ್ರ ಮತ್ತು ವಸ್ತ್ರದ ಗುಚ್ಚಗಳು ಶಿಲ್ಪದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಈ ರೀತಿಯ ಸೂರ್ಯನ ಶಿಲ್ಪಗಳು ಹಸುಗೂಳಿ, ರಾಘವಪುರ, ಪಾರ್ವತಿಬೆಟ್ಟ, ಸಂಪಿಗೆಪುರ, ಹಳ್ಳದಮಾದಹಳ್ಳಿ, ಮಸಳ್ಳಿ ಇನ್ನೂ ಮೊದಲಾದ ಕಡೆ ಸೂರ್ಯನ ಶಿಲ್ಪಗಳು ದೊರೆತಿವೆ. (ಚಿತ್ರಸಂಖ್ಯೆ–145)

## ಗಣಪತಿ ಶಿಲ್ಪಗಳು

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಗಣಪತಿ ಮೂರ್ತಿಶಿಲ್ಪಗಳಲ್ಲಿ ಹಲವಾರು ಪ್ರಭೇದಗಳು ಕಾಣಬರುತ್ತವೆ. ಬಾಣಗಣಪತಿ, ತರುಣಗಣಪತಿ, ಭಕ್ತಿ ವಿಘ್ನೇಶ್ವರ ಶಕ್ತಿಗಣೇಶ, ವೀರಗಣಪತಿ, ಪ್ರಸನ್ನ ಗಣಪತಿ, ಧ್ವಜಗಣಪತಿ, ಉಮ್ಮತ್ತೋಜ್ಯೇಷ್ಠಗಣಪತಿ, ವಿಘ್ನ ರಾಜಗಣಪತಿ, ಭುವನೇಶ

ಗಣಪತಿ, ನೃತ್ಯ ಗಣಪತಿ, ಹರಿದ್ರಾ ಗಣಪತಿ, ಬಾಲಚಂದ್ರ ಗಣಪತಿ, ಶೋರ್ಷಿಕ ಗಣಪತಿ, ವಿಕಚಲಿತ ಗಣಪತಿ ಹೀಗೆ ಅನೇಕ ರೀತಿಯ ಹೆಸರನ್ನು ಉಲ್ಲೇಖಿಸುವ ಗಣಪತಿ ಶಿಲ್ಪಗಳು ಕಾಣಬರುತ್ತವೆ. ಮಂಚಹಳ್ಳಿ, ಆಲತ್ತೂರು, ಕೋಟಕೆರೆ, ಪಾರ್ವತಿಬೆಟ್ಟ, ಕೆಲಸೂರು, ತೆರಕಣಾಂಬಿ, ಅರೇಪುರ, ನಿಟ್ರೆ, ಕುಣಗಾಲ, ಕಬ್ಬಳ್ಳಿ, ಗುಂಡ್ಲುಪೇಟೆ ಗ್ರಾಮಗಳ ದೇವಾಲಯಗಳಲ್ಲಿ ಗಣಪತಿ ಶಿಲ್ಪಗಳು ಕಾಣಬರುತ್ತವೆ.

## ಸಪ್ತಮಾತೃಕೆಯರು

ಸಪ್ತಮಾತೃಕೆಯರು ಸುಮಾರು 7 ಜನ ಇರುತ್ತಾರೆ. ಇವರನ್ನು ಬ್ರಾಹ್ಮಿ, ವೈಷ್ಣವಿ, ಮಹೇಶ್ವರಿ, ಕೌಮಾರಿ, ಇಂದ್ರಿ, ವಾರುಣಿ ಮತ್ತು ಚಾಮುಂಡಿ ಎಂದು ತಿಳಿಸಿದ್ದಾರೆ. ಈ ಎಲ್ಲಾ ಶಕ್ತಿಯರು ತಮ್ಮ ಗಂಡಂದಿರ ಹೆಸರುಗಳನ್ನು ಧರಿಸಿದ್ದಾರೆ. ಮಾರ್ಕಂಡೇಯ ಪುರಾಣದಲ್ಲಿ ತಿಳಿಸಿರುವಂತೆ ಬ್ರಾಹ್ಮಿ ಶಿವ ಕಾರ್ತಿಕೇಯ, ವಿಷ್ಣು ಹಾಗೂ ಇಂದ್ರರ ಶಕ್ತಿಯರು ದೇವಿಯ ಆತುರದೊಂದಿಗೆ ಹೋರಾಡುವಾಗ ಸಹಾಯ ಮಾಡುತ್ತಾರೆಂದು ತಿಳಿದುಬಂದಿದೆ. ಅಲ್ಲದೆ ಮಾತೃಕೆಯರ ನಡುವೆ ವೀರಭದ್ರ ಹಾಗೂ ಕೊನೆಯಲ್ಲಿ ಗಣಪತಿಯ ಶಿಲ್ಪಗಳಿರುತ್ತವೆ. ಇವರು ಸಪ್ತಮಾತೃಕೆಯರ ರಕ್ಷಕರೆಂದು ಭಾವಿಸಲಾಗಿದೆ.

ಗ್ರಂಥರೂಪ ಕಾವ್ಯದಲ್ಲಿ

ಬ್ರಾಹ್ಮಿ ಮಾಹೇಶ್ವರಿ ಚೈವ ಕೌಮಾರೀ ವೈಷ್ಣವೀತಥಾ।

ವಾರಾಹಿ ಚತಥೇಂದ್ರಾಣಿ ಚಾಮುಂಡಾ ಸಪ್ತಮಾತರಂ॥

ಎಂಬುದಾಗಿ ತಿಳಿಸಲಾಗಿದೆ. ಪಂಜನಹಳ್ಳಿ ಮತ್ತು ಭೀಮನಬೀಡು ಗ್ರಾಮದಲ್ಲಿ ದೊರೆತಿರುವ ಎರಡು ಶಿಲ್ಪಗಳಲ್ಲಿ ತಾಯಿ ಮತ್ತು ಮಗುವಿನ ಶಿಲ್ಪವನ್ನು ಕಾಣುತ್ತೇವೆ. ಈ ಶಿಲ್ಪಗಳು ಅರ್ಧಪರ್ಯಂಕ ಭಂಗಿಯಲ್ಲಿ ಕುಳಿತಿದ್ದು, ಆಕೆಯ ಆಸನದ ಪೀಠವಿದೆ. ಎಡಮುಂದಿನ ಕೈ ವ್ಯಾಖ್ಯಾನ ಮುದ್ರೆಯಲ್ಲಿದೆ. ಆಕೆಯ ಎಡತೊಡೆಯ ಮೇಲೆ ಮಗುವಿದೆ. ಎಡಮುಂದಿನ ಕೈ ಮಗವನ್ನು ಹಿಡಿದಿದೆ. ಉಳಿದೆರಡು ಕೈಗಳು ಆಭರಣಗಳು ಸರಿಯಾಗಿ ಗೋಚರವಾಗುತ್ತಿಲ್ಲ. ಅವುಗಳು ಬಹುಶಃ ಸ್ಮೃತಿ ಹಾಗೂ ಹಸ್ತಪ್ರತಿ ಇಲ್ಲವೇ ಮೂರ್ತಿ ಇರಬಹುದು. ಆದರೆ ಪವಿತ್ರವಾದ ಹಾಗೂ ಜಟಾಮುಕುಟಗಳನ್ನು ಪ್ರಧಾನವಾಗಿ, ತೋರಿಸಲಾಗಿದೆ. ಭೀಮನಬಿಡು ಊರಿನ ಹೊರವಲಯದಲ್ಲಿ ಸಪ್ತಮಾತೃಕೆಯರ ಶಿಲ್ಪದಲ್ಲಿ ಈ ರೀತಿಯ ತಾಯಿ ಮಗುವಿನ ಶಿಲ್ಪ ಇದೆ. ಅದೇ ಮಾದರಿಯಲ್ಲಿ ಪಂಜನಹಳ್ಳಿಯಲ್ಲಿಯೂ ಒಂದು ಶಿಲ್ಪ ಇದೆ. (ಚಿತ್ರಸಂಖ್ಯೆ-146)

## ವೀರಭದ್ರ ಶಿಲ್ಪಗಳು

ನಿಂತ ಭಂಗಿಯಲ್ಲಿರುತ್ತವೆ ಅಥವಾ ಕುಳಿತ ಭಂಗಿಯಲ್ಲಿರುತ್ತವೆ. ಚತುರ್ಭುಜ, ಬಲಗೈಯಲ್ಲಿ ಅಂಕುಶ, ಮುಂಗೈಯಲ್ಲಿ ಖಡ್ಗ, ಎಡ ಹಿಂಗೈಯಲ್ಲಿ ಬಿಲ್ಲು, ಮುಂಗೈಯಲ್ಲಿ ಗುರಾಣಿ, ಕಿರೀಟ, ಕರ್ಣ ಕುಂಡಲ, ಕಂಠೀಹಾರ, ಕೈಕಾಲು, ಕಡಗಗಳು ಪ್ರಭಾವ ಕೀರ್ತಿಮುಖಗಳಂದ ಅಲಂಕೃತವಾಗಿ ಸುಂದರವಾಗಿರುತ್ತದೆ. ಮಂಚಹಳ್ಳಿ ಪಾರ್ವತಿಬೆಟ್ಟ, ವೀರನಪುರ, ತೆರಕಣಾಂಬಿ ಮೊದಲಾದ ಗ್ರಾಮಗಳಲ್ಲಿ ವೀರಭದ್ರನ ಶಿಲ್ಪಗಳನ್ನು ಗುರುತಿಸಲಾಗಿದೆ. (ಚಿತ್ರಸಂಖ್ಯೆ-147)

## ಕುದುರೆ ಮೇಲೆ ಕುಳಿತ ರಾಜ

ಕುದುರೆ ಮೇಲೆ ಕುಳಿತ ರಾಜನ ವೀರನ ಸೈನಿಕರ ಸಾಕಷ್ಟು ಶಿಲ್ಪಗಳು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದೊರೆಯುತ್ತವೆ. ಕುದುರೆ ಮೇಲೆ ರಾಜ ಕುಳಿತಿದ್ದು, ಎಡಗೈಯಲ್ಲಿ ಲಗಾಮು ಹಿಡಿದು ಬಲಗೈಯಲ್ಲಿ ಖಡ್ಗ ಮೇಲೆ ಎತ್ತಿರುವುದು ಅಲ್ಲದೆ ಕುದುರೆಗೆ ಅಲಂಕರಣೆ ಕುದುರೆಯ ಹೊಟ್ಟೆಯ ಕೆಳಭಾಗದಲ್ಲಿ ಸೈನಿಕರ ಚಿಕ್ಕ ಪ್ರಮಾಣದ ಶಿಲ್ಪ ರಚನೆಗಳು ಅಲ್ಲಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಪಡಗೂರು ಕುಣಗಾಣ, ಪಂಚನಹಳ್ಳಿ, ಕರಕಲಮಾದಹಳ್ಳಿ, ಯರಿಯೂರು, ಭೀಮನಬೀಡು, ಮಸಹಳ್ಳಿ, ತೊಂಡವಾಡಿ, ಕೋಟೆಕೆರೆ ಇನ್ನೂ ಮೊದಲಾದ ಗ್ರಾಮಗಳಲ್ಲಿ ಕುದುರೆ ಮೇಲೆ ಕುಳಿತ ರಾಜನ ಮಾದರಿಯ ಶಿಲ್ಪಗಳನ್ನು ಗುರುತಿಸಲಾಗಿದೆ. (ಚಿತ್ರಸಂಖ್ಯೆ-148)

## ಭೈರವ ಶಿಲ್ಪ

ಭೈರವನು ನಾಲ್ಕು ಕೈಗಳನ್ನು ಹೊಂದಿದ್ದಾನೆ. ಬಲ ಮುಂದಿನ ಕೈ ನಿಲ್ಲಿಸಿದ ಗಧೆಯ ಮೇಲೆ ಊರಿರುತ್ತಾನೆ. ಹಿಂದಿನ ಕೈಯಲ್ಲಿ ತ್ರಿಶೂಲ, ಎಡ ಹಿಂದಿನ ಕೈಯಲ್ಲಿ ಡಮರು ಹಾಗೂ ಮುಂದಿನ ಕೈಯಲ್ಲಿ ಕಟ್ಟಿ ಅವಲಂಬಿತ ತಲೆಯ ಮೇಲೆ ಕರಂಡ-ಮುಕುಟ ತೋಳ್ಬಂದಿ ಕಾಲಬಂದಿ ಇದ್ದು, ಜಡೆಗಳನ್ನು ಭುಜದ ಮೇಲೆ ಹರಡಿರುತ್ತಾನೆ. ಶೈವ ಪ್ರತಿಮೆಗಳಲ್ಲಿ ದೇವಾಲಯಗಳಲ್ಲಿ ಭೈರವ ಮತ್ತು ವೀರಭದ್ರನ ಹಾಗೂ ನಂದಿಯ ಶಿಲ್ಪಗಳು ಹೆಚ್ಚಾಗಿ ಕಾಣಬರುತ್ತವೆ. (ಚಿತ್ರಸಂಖ್ಯೆ-149)

## ಶಿವಲಿಂಗಗಳು

ತ್ರಿಮೂರ್ತಿಗಳಲ್ಲಿ ಶಿವ ಪ್ರಭಾವ ಅತ್ಯಂತ ಹೆಚ್ಚಿನದು, ಶಿವನನ್ನು ಪ್ರಾಚೀನ ಹಾಗೂ ಮಧ್ಯಯುಗೀನ ಗ್ರಂಥಗಳಲ್ಲಿ ವೈವಿಧ್ಯಮಯ ಕಲೆಗಳ ಜನರ ಹಾಗೂ ಸಾಧನೆ ಸಿದ್ಧಿಗಳ ಹರಿಕಾರನೆಂದು ಬಣ್ಣಿಸಲಾಗಿದೆ. ಶೈವ ಪ್ರತಿಮೆಗಳನ್ನು ಶೈವರು ಆರಾಧಿಸುತ್ತಾರೆ. ಸಿಂಧೂ ಸಂಸ್ಕೃತಿಯ ಪಶುಪತಿಯನ್ನು ಶಿವನೆಂದು ಅನೇಕ ವಿದ್ವಾಂಸರು ತಿಳಿಸಿದ್ದಾರೆ. ಮಹಾಕಾವ್ಯಗಳು, ಪುರಾಣ ಕಾಲದ ಶಿವವೇದ ಪೂರ್ವದಲ್ಲೂ ತನ್ನ ಮೂಲರೂಪ ಹೊಂದಿದ್ದಾನೆ. ವಾಜಸೇನೆಯ ಸಂಹಿತೆಯ ಭಾಗದಲ್ಲಿ ಶಿವನಿಗೆ 100 ಹೆಸರುಗಳಿವೆ. ಶಿವ, ರುದ್ರ, ಮಹಾದೇವ, ಮಹೇಶ್ವರ, ಈಶ ಇನ್ನೂ ಮೊದಲಾದ ಹೆಸರುಗಳಿವೆ. ಪುರಾಣ ಕಾಲಕ್ಕೆ ಶಂಭು ಹಾಗೂ ಶಂಕರನೆಂಬ ಹೆಸರು ಬಂದವು. ಶೈವ ಪ್ರತಿಮೆಗಳನ್ನು ಶೈವರು ಆರಾಧಿಸುತ್ತಿದ್ದರು. ಸಿಂಧೂ ಸಂಸ್ಕೃತಿಯ ಪರಂಪರೆಯನ್ನು ಶಿವನೆಂದು ಅನೇಕರು ತಿಳಿಸಿದ್ದಾರೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಾಕಷ್ಟು ಶೈವ ದೇವಾಲಯಗಳಿವೆ. ಶೈವರು ಶಿವಲಿಂಗವನ್ನೆ ಹೆಚ್ಚಾಗಿ ಪೂಜಿಸುತ್ತಾರೆ. ಲಿಂಗವನ್ನು ಬ್ರಹ್ಮಭಾಗ, ವಿಷ್ಣುಭಾಗ, ರುದ್ರಭಾಗವೆಂದು ಕರೆಯಲಾಗಿದೆ. ರುದ್ರಭಾಗವನ್ನು ಪೂಜಾ ಭಾಗವೆಂದೂ ಕರೆಯುತ್ತಾರೆ. ರುದ್ರಭಾಗದ ಮೇಲೆ ನಿರ್ದಿಷ್ಟವಾಗಿ ಗೆರೆಗಳನ್ನು ಕೆತ್ತುವ ವಿವರಣೆ ಇದೆ. ಇವುಗಳನ್ನು ಬ್ರಹ್ಮಸೂತ್ರಗಳೆಂದು ಕರೆಯುವರು.

## ನಂದಿಶಿಲ್ಪ

ನಂದಿಯ ಶಿಲ್ಪಗಳು ಅಪಾರ ಸಂಖ್ಯೆಯಲ್ಲಿವೆ. ಇದು ಈಶ್ವರನ ವಾಹನವಾದ ವೃಷಭ ಶಿವ ದೇವಾಲಯಗಳಲ್ಲಿ ಲಿಂಗದ ಎದುರಿನ ನಂದಿಯ ಶಿಲ್ಪ ಇರುತ್ತದೆ. ನಂದಿಯ ಶಿಲ್ಪಗಳನೇಕವು ಮಾನವ ಹಾಗೂ ವೃಷಭದ ಶಿರ ಹೊಂದಿರುವುದು.

## ವೈಷ್ಣವ ಶಿಲ್ಪಗಳು

ಭಾಗವತ ಪುರಾಣವು 22 ಅವತಾರಗಳನ್ನು ತಿಳಿಸಿದೆ.

ಹಯಗ್ರೀ ಅವನ್ನು ಹರಿ ಮತ್ಸ್ಯಾವತಾರ ತಾಳಿದ ಹಯಗ್ರೀವ, ಈ ಮೂರ್ತಿಗೆ ಸಾಮಾನ್ಯವಾಗಿ ನಾಲ್ಕು ಕೈಗಳಿರುತ್ತವೆ. ಎರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಉಳಿದೆರಡು ಕೈಗಳಲ್ಲಿ ಅಭಯ ಮತ್ತು ವರದ ಮುದ್ರೆಯಲ್ಲಿರುತ್ತದೆ. ತಲೆ ಮೇಲೆ ಕಿರೀಟ, ಮುಕುಟ ಇರುತ್ತದೆ. ಅಲ್ಲದೆ ಆಭರಣಗಳಿರುತ್ತವೆ.

### ಕೂರ್ಮಾವತಾರ

ಸಮುದ್ರವನ್ನು ಪಡೆಯಲು ನೆರವಾಗಲು ವಿಷ್ಣು ಈ ಅವತಾರ ತಾಳಿದೆ. ಈ ಮೂರ್ತಿಯ ಕೆಳಭಾಗ ಆಮೆಯದು, ಮೇಲ್ಭಾಗ ಮನುಷ್ಯನದು. ನಾಲ್ಕು ಕೈಗಳಿದ್ದು, ಶಂಖ, ಚಕ್ರ, ವರದ ಮತ್ತು ಅಭಯ ಮುದ್ರೆಯಲ್ಲಿರುತ್ತವೆ. ಕಿರೀಟ ಮುಕುಟ ಇರುತ್ತದೆ. ದೇಹದ ಮೇಲೆ ಆಭರಣಗಳಿರುತ್ತವೆ.

### ವರಹಾವತಾರ

ಭೂಮಿಯನ್ನು ಅದರ ಕೆಳಸ್ತರ ಎಂದೆ ಎತ್ತಲು ವಿಷ್ಣು, ಈ ಅವತಾರ ಎತ್ತಿದ. ತ್ರೈತ್ಯರೀಯ ಅರಣ್ಯಕದಲ್ಲಿ ಹೇಳಿರುವಂತೆ ಭೂಮಿ, ಕಪ್ಪು ಗಂಡು ಹಂದಿಯಿಂದ (ನೂರು ಕೈಗಳ ಹರವಿ) ಎತ್ತಲ್ಪಟ್ಟಿತು. ವರಾಹ ಭೂಮಿಯನ್ನು ಸಮುದ್ರದಿಂದ ಎತ್ತಿದ ಎಂದು ಹೇಳಲಾಗುತ್ತದೆ. ವರಾಹದಲ್ಲಿ ಭೂವರಾಹ, ಆದಿವರಾಹ ಅಥವಾ ನೈಪರಾಹ, ಯಜ್ಞವರಾಹ, ಪ್ರಳಯ ವರಾಹರಿದ್ದಾರೆ.

### ನರಸಿಂಹ ಅವತಾರ

ಪ್ರಹ್ಲಾದನನ್ನು ರಕ್ಷಿಸಲು ವಿಷ್ಣು ಈ ಅವತಾರವೆತ್ತಿದೆ. ಹಿರಣ್ಯಾಕ್ಷ್ಯ ಮತ್ತು ಹಿರಣ್ಯ ಕಶ್ಯಪುವಿನ ಮೊದಲ ಜನ್ಮದಲ್ಲಿ ವಿಷೂವಿನ ದ್ವಾರಪಾಲಕರಾಗಿ ಜಯ-ವಿಜಯರೆಂಬ ಹೆಸರು ಹೊಂದಿದ್ದರು. ನರಸಿಂಹವತಾರದಲ್ಲಿ ಗಿರಿಜಾ, ನರಸಿಂಹ ಮತ್ತು ಸ್ಥಾಣ ನರಸಿಂಹರೆಂದು ಎರಡು ವಿಧ. ಇನ್ನೊಂದು ಕೇವಲ ನರಸಿಂಹನೆಂದೂ ಇದೆ. ಗಿರಿಜಾ ನರಸಿಂಹ ಸಿಂಹಾಸನದ ಮೇಲೆ ಕುಳಿತಿದ್ದಾನೆ. ಎಡಗಾಲು ಮಡಚಿದ್ದು, ಬಲಗಾಲು ಇಳಿಬಿಟ್ಟಿರುತ್ತದೆ. ನಾಲ್ಕು ಕೈಗಳಿಂದ ಹಿಂದಿನ ಬಲ ಮತ್ತು ಎಡ ಕೈಗಳ ಶಂಖ-ಚಕ್ರ ಹೊಂದಿರುತ್ತದೆ. ಮುಂದಿನ ಬಲಗೈ, ಅಭಯ ಮುದ್ರೆಯಲ್ಲಿರುತ್ತದೆ. ಎಡ ಮುಂದಿನ ಕೈ ಕಟ್ಯಾವಲಂಬಿತ ಹಸ್ತದಲ್ಲಿರುತ್ತದೆ. ಬಣ್ಣ, ಬಿಳಿ, ಆಭರಣಗಳ ಬಣ್ಣ ಕೆಂಪಿರಬೇಕು. ಕರಂಡ ಮುಕುಟವಿರಬೇಕು. ಬಲಕೈ ಲಕ್ಷ್ಮೀ ಹಾಗೂ ಎಡಕ್ಕೆ ಭೂಮಿದೇವಿಯರಿರಬೇಕು. ಬಲಕ್ಕೆ ಲಕ್ಷ್ಮಿ ಎಡಕ್ಕೆ ಭೂದೇವಿಯರಿರಬೇಕು. ಲಕ್ಷ್ಮಿಯ ಬಣ್ಣ, ಬಂಗಾರದ ಬಣ್ಣವಾಗಿದ್ದರೆ ಭೂದೇವಿ ಕಪ್ಪಾಗಿರಬೇಕು. ಎರಡು ದೇವತೆಗಳೂ ತಕ್ಕಷ್ಟು ಆಭರಣ ಹೊಂದಿರಬೇಕು. ಸ್ಥಾಣ ನರಸಿಂಹ ನಾಲ್ಕು ಕೈಗಳನ್ನು ಹೊಂದಿರುವ ಮೂರ್ತಿ ಈತನ ಬಣ್ಣ ಬಿಳಿಯಿರಬೇಕು. ಆಭರಣಗಳು ಕೆಂಪಿರಬೇಕು. ಚೂಪಾದ ಬಾಗಿದ ಹಲ್ಲುಗಳ ಬಾಯಿಯಲ್ಲಿರಬೇಕು. ವೈಖಾನಸಾಗಮಗ ಎರಡನೇ ಹಸ್ತ ಪ್ರತಿಯಲ್ಲಿ ಸ್ಥಾಣ ನರಸಿಂಹನ

ವಿವರಣೆ ಬೇರೆ ರೀತಿ ಇದೆ. ಲಕ್ಷ್ಮಿನರಸಿಂಹ ಶಿಲ್ಪದಲ್ಲಿ ನರಸಿಂಹ ತೊಡೆಯ ಮೇಲೆ ಲಕ್ಷ್ಮಿ ಆಸೀನಳಾಗಿರುತ್ತಾಳೆ. ಅವನು ಪದ್ಮಾಸನದಲ್ಲಿ ಕುಳಿತಿರುತ್ತಾನೆ.

**ವಾಮನ ಅವತಾರ ಮತ್ತು ತ್ರಿವಿಕ್ರಮ ಅವತಾರ**

ವಿಷ್ಣುವು ರಾಕ್ಷಸ ದೊರೆ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತನ್ನಪಾದದಿಂದ ನೂಕಲು ಸಂಚು ಮಾಡಿ ಬ್ರಾಹ್ಮಣ ಬ್ರಹ್ಮಚಾರಿಯಂತೆ ಒಂದು ಬಲಿಯನ್ನು ಮೋಸಗೊಳಿಸಿದ ವಿಷ್ಣುವಿನ ಪರಮ ಭಕ್ತನಾದ ಬಲಿ ಶುಕ್ರಾಚಾರ್ಯರ ಎಚ್ಚರಿಕೆಯನ್ನು ಲೆಕ್ಕಿಸದೆ ವಿಷ್ಣುವಿಗೆ ವಚನಕೊಟ್ಟು ಮೋಸಹೋದ. ಇದ್ದನಿಗೆ ಸಹಾಯ ಮಾಡಲು ವಿಷ್ಣು ಈ ವಾಮನ ಅವತಾರದಲ್ಲಿ ಬಂದಿದ್ದ. ವಾಮನಮೂರ್ತಿ ಶಿಲ್ಪಲಕ್ಷಣಗಳು ಹೇಗಿರಬೇಕು. ಇವನ ಅಳತೆ ಪಾಂಚತಾಲಮಾನನಕ್ಕೆ ಅನುಗುಣವಾಗಿರಬೇಕು. ಎರಡು ಕೈಗಳಿದ್ದು, ಒಂದರಲ್ಲಿ ಕಮಂಡಲ ಹಾಗೂ ಇನ್ನೊಂದರಲ್ಲಿ ಛತ್ರಿ ಇರಬೇಕು. ತಲೆಯ ಮೇಲೆ ಜಟ್ಟೆಯಿರಬೇಕು. ಕಿವಿಗಳಲ್ಲಿ ಕುಂಡಲಗಳು ಇದ್ದು, ಜಿಂಕೆ ಚರ್ಮವನ್ನು ಒಡವೀತ ಮಾದರಿಯಲ್ಲಿ ಹೊಂದಿರಬೇಕು. ಪವಿತ್ರಹಾರ (ಯಜ್ಞೋಪವೀತ) ನಡುಕಟ್ಟು ಕೊಪಿಪನ ಇರಬೇಕು. ವಾಮನನ ಮೂರನೇ ಬೆರಳಿನಲ್ಲಿ ಪವಿತ್ರ ಅಥವಾ ಉಂಗುರವಿರಬೇಕು. ಕೈಯಲ್ಲಿ ಪುಸ್ತಕ ಇರಬೇಕು. ಕೆಲವು ಗ್ರಂಥಗಳು ವೈಖಾನ ಆಗಮಕ್ಕಿಂತ ಬೇರೆಯಾಗಿ ಹೇಳಿದ್ದು, ವಾಮನ ಹುಡುಗವಾಗಿರದೆ ವಯಸ್ಕ (ರೋಗಗ್ರಸ್ಥ) ವಾಗಿರಬೇಕೆಂದಿದೆ. ಇಂತಹ ಎರಡೂ ಪ್ರಕಾರಗಳೂ ಶಿಲ್ಪದಲ್ಲಿ ಕಾಣಬರುತ್ತದೆ.

**ಪರಶುರಾಮ**

ಕ್ಷತ್ರಿಯರ ಹಾವಳಿ ಅತಿಯಾದಾಗ ಬ್ರಾಹ್ಮಣ ಹಾಗೂ ಮನುಕುಲದ ರಕ್ಷಣೆಗಾಗಿ ವಿಷ್ಣು, ಪರಶುರಾಮ ಅವತಾರ ತಾಳಿದನೆಂದು ಅಗ್ನಿಪುರಾಣ ಹೇಳುತ್ತದೆ. ಪರಶುರಾಮ ಭೃಗುವಂಶದ ಜಮದಗ್ನಿ ಹಾಗೂ ರೇಣುಕೆಯರ ಮಗ, ಶಿಲ್ಪಗಳಲ್ಲಿ ಪರಶುರಾಮ ಮಧ್ಯಮ ದಶತಾಲದಲ್ಲಿರಬೇಕು. ಎರಡು ಕೈಗಳಲ್ಲಿ ಇರಬೇಕು. ಬಲಗೈಯಲ್ಲಿ ಪರಶು ಇದ್ದು, ಎಡಗೈ ಸೂಜಿ ಮುದ್ರೆಯಲ್ಲಿರಬೇಕು. ಆಭರಣಗಳು ಇರಬೇಕು. ತಲೆಯ ಮೇಲೆ ಚಿಂತಾಮುಕುಟ ದೇಹದ ಮೇಲೆ ಯಜ್ಞೋಪವೀತ ಇರಬೇಕು. ಬಣ್ಣ ಕೆಂಪಿರಬೇಕು. ಮೈಬಣ್ಣ ಬಟ್ಟೆಗಳು ಬಿಳಿಯಿರಬೇಕು. ಅಗ್ನಿಪುರಾಣ ಹೇಳುವಂತೆ ಪರಶುರಾಮ ನಾಲ್ಕು ಕೈಗಳನ್ನು ಹೊಂದಿದ್ದು, ಪರಶು, ಖಡ್ಗ, ಬಾಣ, ಧನಸ್ಸುಗಳಿರಬೇಕು. ವಿಷ್ಣು ಧರ್ಮೋತ್ತರ ಹೇಳುವಂತೆ ಆತ ಜಿಂಕೆ ಚರ್ಮ ಹೊಂದಿರಬೇಕು.

## ರಾಮ

ಮಹಾಕಾವ್ಯದ ನಾಯಕ ದಶರಥಪುತ್ರ ಸೀತಾಪತಿ ಹಾಗೂ ಲಕ್ಷ್ಮಣನ ಅಣ್ಣನೇ ಈ ರಾಮ, ಶ್ರೀರಾಮ ಅಥವಾ ರಾಮಚಂದ್ರ. ಇವನ ಮೂರ್ತಿಶಿಲ್ಪ ಪರಶುರಾಮನಂತೆಯೇ ಮಧ್ಯ ಮಾದಶಾತಲದಲ್ಲೂ ಕೆತ್ತಲ್ಪಟ್ಟಿರಬೆಕು. ಎರಡು ಕೈಗಳಲ್ಲಿ ಬಿಲ್ಲು ಬಾಣಗಳಿರಬೇಕು. ಮೂರ್ತಿ ನಿಂತಿರಬೇಕು. ತ್ರಿಭಂಗಿಯಲ್ಲಿರಬೇಕು. ಬಲಭಾಗದಲ್ಲಿ ರಾಮ ಇರಬೇಕು. ಎಡಭಾಗದಲ್ಲಿ ಲಕ್ಷ್ಮಣ ಇರಬೇಕು. ರಾಮನ ಬಲಕ್ಕೆ ಸ್ವಲ್ಪ (ಕೊಂಚ) ದೂರದಲ್ಲಿ ಆಂಜನೇಯಸ್ವಾಮಿ ಇರಬೇಕು.

## ಬಲರಾಮ ಅಥವಾ ಬಲಭದ್ರ – ರಾಮ ಮತ್ತು ಕೃಷ್ಣ

ಬಲರಾಮ ಮತ್ತು ಕೃಷ್ಣರು ವಸುಧೆಯ ಹಾಗೂ ದೇವಕಿಯರ ಮಕ್ಕಳು, ಬಲರಾಮನನ್ನು ಸಾಂದರ್ಭಿಕವಾಗಿ ಆರಾಧಿಸಲಾಗುತ್ತದೆ. ಕೃಷ್ಣನ ವೈಭವದೆದುರು ಬಲರಾಮ ಕತ್ತಲೆಗೆ ಒಡ್ಡಲ್ಪಟ್ಟಿದ್ದಾನೆ. ವೈಖಾನಸಾಗಮ ಹೇಳಿದಂತೆ ಬಲರಾಮನ ಮೂರ್ತಿ ಮಧ್ಯಮ ದಶತಾಲಮಾನಕ್ಕೆ ಅನುಗುಣವಾಗಿ ಕೆತ್ತಲ್ಪಡಬೇಕು. ಬಲಗೈಯಲ್ಲಿ ಮಸಲ ಹಾಗೂ ಎಡಗೈಯಲ್ಲಿ ಹಲ ಹೊಂದಿರಬೇಕು. ಬಿಳಿ ಬಣ್ಣವಿದ್ದು, ಬಟ್ಟೆಗಳು ಕೆಂಪಿರಬೇಕು. ತಲೆಯ ನೆತ್ತಿಯಲ್ಲಿ ಕೂದಲು ಗಂಡಿರಬೇಕು. ಬೃಹತ್ ಸಂಹಿತಾ ಹೇಳುವಂತೆ ಕಣ್ಣುಗುಡ್ಡೆ ತಿರುಗುತ್ತಾ ಇರಬೇಕು. ಇದು ಮಧ್ಯ ಸೇವನೆಯಿಂದಾದ ಸ್ಥಿತಿ ಹಾಗೂ ಕಿವಿಯಲ್ಲಿ ಒಂದೇ ಕುಂಡಲವಿರಬೇಕು. ಅಗ್ನಿ ಪುರಾಣ ಹೇಳುವಂತೆ ಬಲರಾಮ ಗಧಾ ಮತ್ತು ಹಲವನ್ನು (ನೇಗಿಲು) ಹಿಡಿದಿರಬೇಕು. ನಾಲ್ಕು ಕೈಗಳಿದ್ದರೆ, ಮಸಲ ಚಕ್ರ, ಹಲ ಮತ್ತು ಶಂಖ ಹೊಂದಿರಬೇಕು. ಬಲರಾಮನ ಬಲಕ್ಕೆ ಆತನ ಹೆಂಡತಿ ದೇವತೆದೇವಿ ಇರಬೇಕು. ಈ ರೀತಿಯ ಶಿಲ್ಪಗಳು ತೆರಕಣಾಂಬಿಯ ಆಂಜನೇಯ ದೇವಾಲಯ, ಹುಲುಗನ ಮುರಡಿ ದೇವಾಲಯದಲ್ಲಿ ಕಾಣುತ್ತೇವೆ.

## ಶ್ರೀ ಕೃಷ್ಣ (ವೈಖಾನ ಸಾಗಮ)

ವೈಖಾನಸಾಗಮ ಹೇಳುವಂತೆ ಕೃಷ್ಣನ ಮಧ್ಯಮ ದಶತಾಲಮಾನದ್ದಾಗಿರಬೇಕು. ಕೃಷ್ಣನ ಬಣ್ಣ, ಕಪ್ಪು ಬಟ್ಟೆಗಳು ಕೆಂಪು ಅನೇಕ ಆಭರಣಗಳಿರಬೇಕು. ಕಿರೀಟವಿರಬೇಕು, ಇಲ್ಲವೇ ತಲೆಮೇಲೆ ಕೂದಲು ಗಂಟಿರಬೇಕು. ಬಲಗೈಯಲ್ಲಿ ಕೊಳಲು ಇರಬೇಕು. ಎಡಗೈ ಎತ್ತಲ್ಪಟ್ಟು ಮೊಣಕೈ ಬಿಳಿ ಬಾಗಿಸಲ್ಪಟ್ಟಿರಬೇಕು. ಈ ಕೈಯಲ್ಲಿ ಶಂಖ ಕೂಡ ಇರಬಹುದು. ಉಳಿದೆಲ್ಲ ವಿಧದಲ್ಲಿ ಕೃಷ್ಣರಾಮನನ್ನು ಹೋಲುತ್ತಾನೆ. ಕೃಷ್ಣನ ಬಲಭಾಗದಲ್ಲಿ ರುಕ್ಮಿಣಿ ಇರಬೇಕು. ಎಡಕ್ಕೆ ಸತ್ಯಭಾಮಾ ಇರಬೇಕು. ಕೃಷ್ಣನ ಮೂರ್ತಿಯು ವಿವಿಧ ಬಗೆಗಳಿಂದ ನವಿತೀತ, ನೃತ್ಯಮೂರ್ತಿ,

ಗಾನಗೋಪಾಲ ಅಥವಾ ವೇಣುಗೋಪಾಲ ಪಾರ್ಥಸಾರಿಥಿ, ಮದನ ಗೋಪಾಲ, ಕಾಳಿಂಗಮರ್ದನ, ಕೃಷ್ಣ ಗೋವರ್ಧನ ಕೃಷ್ಣ ಇರುತ್ತದೆ.

ಹೀಗೆ ಅನೇಕ ಭಂಗಿಗಳಲ್ಲಿ ವಿಷ್ಣುವಿನ ಅವತಾರಗಳನ್ನು ಕಾಣಬಹುದಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯ ಆಂಜನೇಯ ದೇವಾಲಯದಲ್ಲಿರುವ ಕಂಬಗಳಲ್ಲಿ ವಿಷ್ಣುವಿನ ಅವತಾರಗಳನ್ನು ಕಾಣಬಹುದು. ಅಲ್ಲದೆ ಹುಲ್ಲುಗಿನ ಮುರಡಿ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ ವಲಭಿಯಲ್ಲಿ ಗಾರೆ ಶಿಲ್ಪಗಳಲ್ಲಿ ಕೆತ್ತನೆಯನ್ನು ಮಾಡಲಾಗಿದೆ.

**ವರದರಾಜ ಶಿಲ್ಪ – ಆಲತ್ತೂರು**

ಆಲತ್ತೂರು ಗ್ರಾಮದ ವರದರಾಜಸ್ವಾಮಿ ದೇವಾಲಯದಲ್ಲಿರುವ ಶಿಲ್ಪವು ಹೊಯ್ಸಳರ ಕಾಲಕ್ಕೆ ಸೇರಿಸಬಹುದಾಗಿದೆ. ನೀಳವಾದ ದೇಹ, ಅಗಲವಾದ ಭುಜಗಳು, ದುಂಡಾದ ಮುಖ, ಅಗಲವಾದ ಕಣ್ಣುಗಳು, ಚೂಪಾದ ಮೂಗು, ಅಗಲವಾದ ಕಿವಿಗಳು, ಶಿಲ್ಪದ ದೇಹದ ವರ್ಣನೆಯಾಗಿದೆ. ತಲೆಯ ಮೇಲೆ ಕಿರೀಟ, ಕರ್ಣಕುಂಡಲಗಳು, ಕೊರಳಿನಲ್ಲಿ ಸರಗಳು (ಮಣಿಮಾಲೆ) ಉದರಬಂಧ, ಯಜ್ಞೋಪವೀತ, ಕೇಯೂರ, ಕಟಿಬಂಧ ಬಿಗಿಯಾಗಿ ಉಟ್ಟುಕೊಂಡಿರುವ ಧೋತ್ರ ಇವುಗಳು ದೇಹವನ್ನು ಅಲಂಕರಿಸಿದೆ. ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ನಾಲ್ಕು ಕೈಗಳಿವೆ. ಶಂಖ, ಚಕ್ರ, ವರದಮುದ್ರೆ, ಗಧೆಯನ್ನು ಹೊಂದಿದೆ.

ಲಕ್ಷ್ಮೀಕಾಂತ ಶಿಲ್ಪ ರಾಘವಪುರದಲ್ಲಿ ಲಕ್ಷ್ಮೀಕಾಂತ ದೇವಸ್ಥಾನದಲ್ಲಿ ಗರುಡ ಪೀಠದ ಮೇಲೆ ಸುಮಾರು 5 ಅಡಿ ಎತ್ತರವಿರುವ ಲಕ್ಷ್ಮೀಕಾಂತನ ಶಿಲ್ಪವನ್ನು ಇರಿಸಲಾಗಿದೆ. ಇದು ಸಹ ಚತುರ್ಭುಜವನ್ನು ಹೊಂದಿದೆ.

**ವರದರಾಜ ಶಿಲ್ಪ – ತೆರಕಣಾಂಬಿ**

ತೆರಕಣಾಂಬಿಯ ವರದರಾಜಸ್ವಾಮಿಯ ದೇವಾಲಯದಲ್ಲಿ ಗರುಡ ಪೀಠದ ಮೇಲೆ ವರದರಾಜಸ್ವಾಮಿಯನ್ನು ಇರಿಸಲಾಗಿದೆ. ಇದು ಸುಮಾರು ಐದೂವರೆ ಅಡಿ ಎತ್ತರವನ್ನು ಹೊಂದಿದೆ. ಅಲ್ಲದೆ ದ್ವಾರದಲ್ಲಿ ಜಯ–ವಿಜಯ ಶಿಲ್ಪಗಳಿವೆ. ಇವು ಸೊಗಸಾಗಿ ಮೂಡಿಬಂದಿವೆ. ಅದೇ ಗ್ರಾಮದಲ್ಲಿರುವ ಹಂಡೆ ಗೋಪಾಲಸ್ವಾಮಿ ದೇವಾಲಯದಲ್ಲಿ ಸುಮಾರು ಆರು ಅಡಿ ಎತ್ತರವಿರುವ ವೇಣುಗೋಪಾಲನ ಶಿಲ್ಪ ಇದೆ. ಚಿಕ್ಕಾಟಿಯಲ್ಲಿ ನಿಂತಿರುವ ವೇಣುಗೋಪಾಲಸ್ವಾಮಿ ಶಿಲ್ಪ ಇದೆ. ಕುಲಗಾಣದಲ್ಲಿ ಸುಮಾರು ಆರೂವರೆ ಅಡಿ ಎತ್ತರದ

ವಸುದೇವ ಶಿಲ್ಪ ಇದೆ. ಸಿಂಗವಾಡಿಯಲ್ಲಿ ಚೆಲುವ ನಾರಾಯಣಸ್ವಾಮಿ ಶಿಲ್ಪ ಇದೆ. ಕಬ್ಬಳ್ಳಿಯಲ್ಲಿಯೂ ಕೂಡ ಚಲುವನಾರಾಯಣ ಶಿಲ್ಪ ಇದೆ.

ಹಂಗಳದಲ್ಲಿ ಐದು ಅಡಿ ಎತ್ತರದ ವರದರಾಜಸ್ವಾಮಿ ಶಿಲ್ಪವು ವರದರಾಜ ದೇವಾಲಯದಲ್ಲಿದೆ. ಅವುಗಳಲ್ಲದೆ ಆಳ್ವಾರ್, ವಿಷ್ಣು ಶಿಲ್ಪಗಳಿವೆ. ಇವುಗಳೆಲ್ಲವೂ ಶಿಲ್ಪಕಲಾ ದೃಷ್ಟಿಯಿಂದ ಪ್ರಮುಖ ಆಕಾರಗಳಾಗಿವೆ.

## ಮಕರ ತೋರಣದಲ್ಲಿರುವ ವೀರಗಲ್ಲು

ತೆರಕಣಾಂಬಿಯ ವೀರಾಂಜನೇಯಸ್ವಾಮಿ ದೇವಾಲಯದ ಎದುರು ಹಾಗೂ ಒಂದು ಪ್ರಾಚೀನ ಕೊಳದ ದಂಡೆಯಲ್ಲಿ ಒಂದು ವಿಶೇಷ ರೀತಿ ವೀರಗಲ್ಲನ್ನು ಪತ್ತೆ ಮಾಡಲಾಗಿದೆ. ಒಂದು ಕಡೆ ಕುದುರೆ ಮೇಲೆ ಕುಳಿತಿರುವ ವೀರ, ಆತನ ಎದುರು ಒಂದು ಕಡೆ ಆನೆ ಮೇಲೆ ಕುಳಿತು ಯುದ್ಧ ಮಾಡುತ್ತಿರುವುದು ಕಾಣಬರುತ್ತದೆ. ಮತ್ತೊಂದು ಕಡೆ ರಾಜ ಮತ್ತು ರಾಣಿಯರಿಗೆ ಛಾಮರಧಾರಣಿಯರು ಛಾಮರವನ್ನು ಹಿಡಿದುಕೊಂಡಿರುವ ಮಾದರಿಯಲ್ಲಿಯೇ ಕೆತ್ತಿದೆ. ಇದರ ಮೇಲ್ಭಾಗದಲ್ಲಿ ಚೋಳರ ದೇವಾಲಯಗಳಲ್ಲಿ ಕಂಡುಬರುವ ಮಕರತೋರಣದ ಮಾದರಿಯಲ್ಲಿಯೇ ಕಾಣಬರುತ್ತದೆ. ಅದು ಅಲ್ಲದೆ ಇದೇ ಕಲ್ಲುಚಪ್ಪಡಿ ಹಿಂದೆಯೂ ಕೂಡ ಮಕರ ತೋರಣವನ್ನು ಮಾಡಲಾಗಿದ್ದು, ಮಧ್ಯದಲ್ಲಿ ಗಜಲಕ್ಷ್ಮಿಯನ್ನು ಶಿಲ್ಪ ಕೆತ್ತನೆ ಇದೆ. ಗಜಲಕ್ಷ್ಮಿಯ ಉಬ್ಬುಶಿಲ್ಪದ ಇಕ್ಕೆಲಗಳಲ್ಲಿ ಯುದ್ಧ ಮಾಡುತ್ತಿರುವ ದೃಶ್ಯವನ್ನು ಹೊಂದಿರುವ ಕೆತ್ತನೆ ಇದೆ ಮತ್ತು ಮುಂಭಾಗದ ರೀತಿಯಲ್ಲಿಯೇ ಹಿಂಭಾಗದಲ್ಲಿಯೂ ರಾಜರಾಣಿಯರ ಉಬ್ಬುಶಿಲ್ಪದ ಕೆತ್ತನೆ ಇದೆ. ಮಧ್ಯದಲ್ಲೊಂದು ತ್ರಿಸೂಲ ಇದೆ. ಆದಕಾರಣ ಇದೊಂದು ವಿಶೇಷವಾದ ವೀರಗಲ್ಲಾಗಿದ್ದು, ಮಕರ ತೋರಣದ ಹಿನ್ನೆಲೆಯಿಂದ ಇದನ್ನು ಚೋಳರ ಕಾಲಕ್ಕೆ ಸೇರಿಸಬಹುದಾಗಿದೆ. ಬಹುಶಃ ಶಾಸನ ಸಿಕ್ಕಿದಿದ್ದರೆ ಇದರ ಇತಿಹಾಸ ಇನ್ನೂ ಪ್ರಬಂಧವಾಗುತ್ತಿತ್ತು. ಆದರೂ ಕೂಡ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದೊರೆತಿರುವ ವೀರಗಲ್ಲುಗಳಲ್ಲಿ ಇದೊಂದು ವಿಶೇಷತೆಯನ್ನು ಹೊಂದಿರುವ ಒಂದು ವೀರಗಲ್ಲೆಂದು ಪರಿಗಣಿಸಲಾಗಿದೆ. (ಚಿತ್ರಸಂಖ್ಯೆ-150)

## ನರಬಲಿ ಶಿಲ್ಪ

ತೆರಕಣಾಂಬಿಯ ವೀರಾಂಜನೇಯ ದೇವಾಲಯದ ಪಕ್ಕದಲ್ಲಿ ಅಂದರೆ ಕೊಳದ ದಂಡೆಯಲ್ಲಿರುವ ಒಂದು ಕಲ್ಲುಚಪ್ಪಡಿಯಲ್ಲಿ ನರಬಲಿ ಶಿಲ್ಪವನ್ನು ಪತ್ತೆ ಮಾಡಲಾಗಿದೆ. ಇದೊಂದು ವಿಶೇಷವಾದ ನರಬಲಿ ಶಿಲ್ಪವಾಗಿದ್ದು, ಒಂದು ಜೋಡು ಪಾದಗಳ ಸುತ್ತ ನಾಗ

ಸರ್ಪವಿದ್ದು, ಅದರ ಸುತ್ತಲೂ ನರಬಲಿಯ ತಲೆಭಾಗವನ್ನು ಮತ್ತು ದೇಹದ ಭಾಗವನ್ನು ಹೊಂದಿದೆ. ಇಬ್ಬರು ವ್ಯಕ್ತಿಗಳನ್ನು ಬಲಿಯಾಗಿ ನೀಡಿರಬಹುದೆಂದು ನನ್ನ ಅನಿಸಿಕೆಯಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇದೊಂದು ವಿಶೇಷವಾಗಿ ನನ್ನ ಕ್ಷೇತ್ರ ಕಾರ್ಯದಲ್ಲಿ ದೊರೆತಿರುವ ನರಬಲಿ ಶಿಲ್ಪವಾಗಿದೆ. (ಚಿತ್ರಸಂಖ್ಯೆ-151)

**ಭೀಮನಬೀಡು**

ಭೀಮನಬಿಡು ನೆಲೆಯಲ್ಲಿ ಒಂದೇ ಕಡೆ ಆರುಶಿಲ್ಪಗಳನ್ನು ಪತ್ತೆ ಮಾಡಲಾಗಿದೆ. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸಪ್ತಮಾತೃಕೆಯರ ಶಿಲ್ಪಗಳ ಮಾದರಿಯಲ್ಲಿಯೇ ಕಾಣಬರುತ್ತವೆ. ಈ ಶಿಲ್ಪಗಳನ್ನು ಅವಲೋಕಿಸಿದರೆ ಕ್ರಿ.ಶ.8 ರಿಂದ 10ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಇಂದ್ರಾಣಿ, ವೈಷ್ಣವಿ, ಮಾಹೇಶ್ವರಿ, ಕೌಮಾರಿ, ಬ್ರಾಹ್ಮಿ ಶಿಲ್ಪಗಳೆಂದು ನನ್ನ ಅಭಿಪ್ರಾಯವಾಗಿದೆ. ಆದರೆ ಶಿಲ್ಪಗಳ ಪೀಠದಲ್ಲಿರುವ ವಾಹನಗಳು ಸ್ಪಷ್ಟವಾಗಿ ಕಾಣಬರುವುದಿಲ್ಲ. ಆದರೂ ಕೂಡ ಶಿಲ್ಪಕಲೆಯ ಹಿನ್ನೆಲೆಯಿಂದ ಇವುಗಳು ಸಪ್ತಮಾತೃಕೆಯರೇ ಆಗಿದ್ದಾರೆ. ಒಂದು ಶಿಲ್ಪದಲ್ಲಿ ತಾಯಿ ಮಗುವಿಗೆ ಹಾಲು ಕುಡಿಸುತ್ತಿರುವ ಭಂಗಿಯಲ್ಲಿದೆ. ಆದಕಾರಣ ಇದೊಂದು ವಿಶೇಷತೆಯನ್ನು ಹೊಂದಿರುವ ಶಿಲ್ಪವಾಗಿದೆ.

ಅದೇ ಸ್ಥಳದಲ್ಲಿ ಒಂದು ಒರಟುಕಲ್ಲಿನಲ್ಲಿ ಒಂದು ವೀರನ ಶಿಲ್ಪವಿದ್ದು, ಈತನು ವೀರಾವೇಷದಿಂದ ಒಂದು ಭರ್ಜಿಯನ್ನು ಹಿಡಿದುಕೊಂಡು, ಒಂದು ಕೈಯನ್ನು ಸೊಂಟದ ಮೇಲೆ ಹಿಡಿದುಕೊಂಡು ಎದುರು ನೋಡುತ್ತಿರುವಂತೆ ಸೂಕ್ಷ್ಮವಾಗಿ ಕಂಡುಬರುತ್ತದೆ. ಈತನು ಪಂಚೆಯನ್ನು ಸೊಂಟಕ್ಕೆ ಬಿಗಿಯಾಗಿ ಇಳಬಿಟ್ಟಂತೆ ಕಾಣಬರುತ್ತದೆ. ಒಟ್ಟಾರೆ ಇದೊಂದು ವೀರಾವೇಷವನ್ನು ವ್ಯಕ್ತಪಡಿಸುವ ಶಿಲ್ಪವಾಗಿದೆ. (ಚಿತ್ರಸಂಖ್ಯೆ-152)

**ಮಸಹಳ್ಳಿಕಟ್ಟೆ**

ಮಸಹಳ್ಳಿಕಟ್ಟೆಯಲ್ಲಿ ಸುಮಾರು 25ಕ್ಕೂ ಹೆಚ್ಚು ಬಿಡಿಶಿಲ್ಪಗಳು ಭೂಮಿಯಲ್ಲಿ ಅರ್ಧಭಾಗ ಮುಳುಗಿದೆ. ಕೆಲವೊಂದು ಶಿಲ್ಪಗಳು ರಾವಳೇಶ್ವರ ಶಿಲ್ಪದ ಮಾದರಿಯಲ್ಲಿಯೇ ಕಾಣಬರುತ್ತವೆ. ಈ ಶಿಲ್ಪಗಳು ನಾಲ್ಕು ಕೈಗಳನ್ನು ಹೊಂದಿದ್ದು, ಕೆಲವೊಂದು ಆಯುಧಗಳು ಕಾಣಬರುತ್ತದೆ. ಈತನು ಕಂಠಾಭರಣವನ್ನು ಧರಿಸಿದ್ದಾನೆ. ಬಲವಾದ, ಸೊಗಸಾದ ಮೀಸೆಯನ್ನು ಬಿಟ್ಟಿದ್ದಾರೆ. ತಲೆಯ ಮೇಲೆ ವೃತ್ತಾಕಾರ ಕಿರೀಟವನ್ನು ಧರಿಸಿದ್ದಾನೆ. ಮತ್ತೊಂದು ಶಿಲ್ಪವು ಸಹ ರಾವಳೇಶ್ವರನ ಮಾದರಿಯಲ್ಲಿಯೇ ಇದೆ. ಮತ್ತೊಂದು ಶಿಲ್ಪವು ಎರಡು ಕೈಗಳನ್ನು ಹೊಂದಿದ್ದು, ಒಂದು ಕೈಯಲ್ಲಿ ಚಕ್ರವನ್ನು ಮತ್ತೊಂದು ಕೈಯಲ್ಲಿ ದಂಡವನ್ನು ಹಿಡಿದಿದ್ದಾನೆ. ತಲೆಯ ಮೇಲೆ

ಮುಸ್ಲಿಂ ಶೈಲಿಯ ವೃತ್ತಕಾರದ ಕಿರೀಟವನ್ನು ಧರಿಸಿದ್ದಾನೆ. ಕಂಠಾಭರಣ ಕೈಬಳೆ, ಕರ್ಣಕುಂಡಲ, ಸೊಂಟದಲ್ಲಿ ನೆರಿಗೆಯಿಂದ ಕೂಡಿದ ವಸ್ತ್ರವನ್ನು ಧರಿಸಿದ್ದಾನೆ. ಇಕ್ಕೆಲಗಳಲ್ಲಿ ಇಬ್ಬರು ಸೇವಕಿಯರಿದ್ದಾರೆ. ಈ ಹಿನ್ನೆಲೆಯಿಂದ ಈ ಶಿಲ್ಪವು ರಾಜನ ಶಿಲ್ಪವೆಂದೇ ಕರೆಯಬಹುದಾಗಿದೆ. ಮೂರು ಮುಖವಿರುವ ಬ್ರಹ್ಮ, ವಿಷ್ಣು, ಮಹೇಶ್ವರನ ಶಿಲ್ಪವನ್ನು ಸಹ ಕಾಣಬಹುದಾಗಿದೆ. ಈ ಮೂರು ಮುಖಗಳಗೂ ತಲೆಯ ಮೇಲೆ ಒಂದೇ ಮಾದರಿಯ ಕಿರೀಟವನ್ನು ಧರಿಸಿರುವುದು ಕಂಡುಬರುತ್ತದೆ. ಒಂದು ಕೈಯಲ್ಲಿ ಢಮರು ಹಿಡಿದಿರುವುದು ಕಾಣಬರುತ್ತದೆ. ಉಳಿದ ದೇಹ ಭೂಮಿಯಲ್ಲಿ ಮುಚ್ಚಿದೆ. (ಚಿತ್ರಸಂಖ್ಯೆ-153)

## ಪಂಜನಹಳ್ಳಿ ಗ್ರಾಮದಲ್ಲಿ ವಿಶೇಷವಾದ ಮಹಿಳೆ (ತಾಯಿ, ಮಗು) ಬಿಡಿಶಿಲ್ಪ

ಗುಂಡ್ಲುಪೇಟೆ ತಾಲ್ಲೂಕು ಪಂಜನಹಳ್ಳಿ ಗ್ರಾಮದಲ್ಲಿ ವಿಶೇಷವಾದ ಮಹಿಳೆ ಶಿಲ್ಪವು ಸೊಗಸಾಗಿದೆ. ಮಹಿಳೆ ಸೀರೆಯ ಸೆರಗನ್ನು ತೆಗೆದುಕೊಂಡಿರುವ ಮಹಿಳೆಯ ತೊಡೆಯ ಮೇಲೆ ಕುಳತಿರುವ ಮಗು ತನ್ನ ತಾಯಿಯ ಒಂದು ಸ್ತನವನ್ನು ತನ್ನ ಕೈಗಳಂದ ಹಿಡಿದುಕೊಂಡಿರುವ ಅಪರೂಪದ ಬಿಡಿಶಿಲ್ಪ ಅತ್ಯಂತ ರೋಮಾಂಚನಕಾರಿ ಅಂಶವನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ ತನ್ನ ಸೀರೆಯ ಸೆರಗು ನೆಲಕ್ಕೆ ಚಾಚಿರುವಂತೆ ಹಾಗೂ ತನ್ನ ತಲೆಯ ಕೇಶವನ್ನು ಮೇಲೆ ಸೊಗಸಾಗಿ ಚಾಚಿರುವಂತೆ ಕೆತ್ತಲಾಗಿದೆ. ಇವತ್ತಿನ ಸಿನಿಮಾರಂಗದ ಮಾಡೆಲ್‌ಗಳಂತೆ ಅಂದಿನ ಕ್ರಿ.ಶ.12 ರಿಂದ 14ನೇ ಶತಮಾನಕ್ಕೆ ಸೇರಿದ ಬಿಡಿಶಿಲ್ಪದಲ್ಲಿ ಕಾಣಬಹುದಾಗಿದೆ. ಅಂದಿನ ಕಾಲಕ್ಕೆ ಮಗುವಿನ ಸಂಬಂಧದ ಮಮತೆಯನ್ನು ಕಲಾವಿದ ನೈಜವಾಗಿ ಶಿಲ್ಪಕಲೆಯೇ ನಿರೂಪಿಸಿದ್ದಾನೆ. (ಚಿತ್ರಸಂಖ್ಯೆ-154)

## ಅಡಿಟಿಪ್ಪಣಿಗಳು

1. ತಿಪ್ಪೇರುದ್ರಸ್ವಾಮಿ ಎಚ್. – ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು, 1985, ಪು.ಸಂ.250
2. ಶೇಠಿ ಬಿ.ಎಸ್. – ಕರ್ನಾಟಕದಲ್ಲಿ ಸತಿಪದ್ಧತಿ, ಪ್ರಕಟಣೆ, ಬೆಳಗಾವಿ, 1991, ಪು.ಸಂ.11-36.
3. ಕಲಬುರ್ಗಿ ಎಂ.ಎಂ. – ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ಬೆಂಗಳೂರು, 1980, ಪು.ಸಂ.25, 26.
4. ಡಾ. ಪಳನಿಸ್ವಾಮಿ – ಗುಂಡ್ಲುಪೇಟೆ ತಾಲ್ಲೂಕು ಒಂದು ಸಂಸ್ಕೃತಿಕ ಅಧ್ಯಯನ, ಸ್ಕಂದಶ್ರೀ ಪ್ರಕಾಶನ ಮೂಡಾಗೂರು, 2011, ಪು.ಸಂ. 74.
5. ಚಿದಾನಂದಮೂರ್ತಿ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂಪುಟ-1, ಸಪ್ನಬುಕ್‌ಹೌಸ್, ಬೆಂಗಳೂರು, 2002, ಪು.ಸಂ.310
6. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-173.
7. ಎ.ಕ. ಸಂಪುಟ-3, ಗುಂಡ್ಲುಪೇಟೆ ತಾಲ್ಲೂಕು ಶಾಸನ ಸಂಖ್ಯೆ-210.

# ಅಧ್ಯಾಯ–೮

## ಸಮಾರೋಪ

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಗೆ ಬರುವ ಗುಂಡ್ಲುಪೇಟೆ ತಾಲ್ಲೂಕಿನ ಇತಿಹಾಸವು ಹೆಚ್ಚಿನ ಸ್ಥಾನವನ್ನು ಪಡೆದುಕೊಂಡಿದೆ. ಈ ಜಿಲ್ಲೆಯ ಜನಪದ ಕಲಾಸಂಪತ್ತು ತುಂಬಾ ಅಭಿವೃದ್ಧಿಯ ಪತವನ್ನು ಕಾಣುತ್ತಿದೆ. ಈ ತಾಲ್ಲೂಕಿನ ದೇವಾಲಯಗಳು ಮತ್ತು ಅಲ್ಲಿ ನಿರ್ಮಿತವಾದ ಶಿಲ್ಪಗಳನ್ನು ನಾವು ನೋಡಿದಾಗ ಅವುಗಳಲ್ಲಿ ಪ್ರಾದೇಶಿಕತೆಯನ್ನು ಹೆಚ್ಚಾಗಿ ಕಾಣುತ್ತೇವೆ. ಅಂದರೆ ಅವುಗಳು ಪ್ರಾದೇಶಿಕತೆಯನ್ನು ಹೆಚ್ಚಾಗಿ ಒಳಗೊಂಡಿದೆ. ಇದರ ಜೊತೆಗೆ ಅವುಗಳ ನಿರ್ಮಾಣವನ್ನು ಮಾಡಿದ ಸ್ಥಳೀಯ ಕಲಾವಿದರ ಸ್ವಂತಿಕೆ ಗೊತ್ತಾಗುತ್ತದೆ. ಅಂದರೆ ಇಲ್ಲಿಯ ಕಲಾವಿದರು ಇತರೆಡೆಯಲ್ಲಿಯಂತೆ ಶಿಲ್ಪಗಳನ್ನು ನಿರ್ಮಿಸದೇ ತಾವು ಕೆತ್ತಿದ ಶಿಲ್ಪಗಳಲ್ಲಿ ತಮ್ಮ ತನವನ್ನು ತುಂಬಲು ಪ್ರಯತ್ನಿಸಿದ ಕೊಡುಗೆ ಅದರಲ್ಲಿ ಯಶಸ್ವಿಯಾಗಿ ಶಿಲ್ಪಗಳು ನೈಜತೆಯಿಂದ ಕೂಡಿದ ಹಾಗೆ ಭಾಸವಾಗುವಂತೆ ಕೆತ್ತಿದರು. ಈ ಮೂಲಕ ಕನ್ನಡನಾಡಿನ ಬಾಹ್ಯಕಲಾ ಪ್ರಗತಿಗೆ ಗುಂಡ್ಲುಪೇಟೆ ತಾಲ್ಲೂಕು ತನ್ನದೇ ಆದ ಕೊಡುಗೆಯನ್ನು ನೀಡಿದ ಅದರ ವೈಶಿಷ್ಟ್ಯತೆ ಏನೆಂಬುದನ್ನು ತಿಳಯಬಹುದಾಗಿದೆ. ಇವುಗಳಲ್ಲಿ ಪ್ರಾದೇಶಿಕತೆ ಹಾಗೂ ಸ್ವಂತಿಕೆಯ ಸಮ್ಮಿಲವನ್ನು ನಾವು ಪ್ರಮುಖವಾಗಿ ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯ "ಗುಂಡ್ಲುಪೇಟೆ ತಾಲ್ಲೂಕಿನ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯಲ್ಲಿ ಈ ತಾಲ್ಲೂಕಿನ ವಾಸ್ತುಶಿಲ್ಪದ ಕಲಾ ವೈಶಿಷ್ಟ್ಯವನ್ನು ತಿಳಿಯುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಸ್ಥಳೀಯ ಇತಿಹಾಸವನ್ನು ಪುನಃರಚಿಸಲು ಮೂಲ ಆಕರಗಳು ಅತ್ಯಾವಶ್ಯಕ. ಆದಕಾರಣ ಪ್ರಚಲಿತವಿರುವ ಪುರಾತನ ಕಾಲದ ದಂತಕಥೆಗಳು, ಸ್ಮಾರಕಗಳು, ಶಾಸನ, ಜನಪದ ಹಾಡುಗಳು, ಪ್ರಾಚೀನ ಕಾಲದಲ್ಲಿ ಬೆಳೆದುಬಂದ ಸಾಹಿತ್ಯ ಭಾಷೆ ಮಹತ್ವವಾದದ್ದು, ವಿವಿಧ ಜನವರ್ಗಗಳು ಪ್ರಾಚೀನ ಕಾಲದಲ್ಲಿ ವಿವಿಧ ಭಾಗಗಳಲ್ಲಿ ನೆಲೆಸಿ ಆಯಾ ದಿನಬಳಕೆಯ ವಸ್ತು ಅವಶೇಷಗಳು ಉಪಯೋಗಿಸಿದ ನಿರ್ಮಿತಿಗಳು ತಮ್ಮ ತಮ್ಮ ನೆಲೆಗಳಲ್ಲಿ ಮಹತ್ವದ್ದಾಗಿದೆ. ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಎಲ್ಲಾ ಆಕರಗಳು ಆಯಾ ಪ್ರದೇಶದ ಇತಿಹಾಸವನ್ನು ಕುರಿತು ಪುನಃರಚನೆಯಲ್ಲಿ ಮಹತ್ವದ ಸಹಾಯವನ್ನು ಒದಗಿಸುತ್ತದೆ. ಆದ್ದರಿಂದ ಈ ಭಾಗದ ಬೆಳವಣಿಗೆಯು ಚಿತ್ರಣದ ಕಲ್ಪನೆಯನ್ನು ನಮ್ಮ ಮುಂದೆ ಮೂಡಿಸುವುದಲ್ಲದೇ ಅಂದಿನ ಬೆಳವಣಿಗೆಯನ್ನು ಮಹತ್ತರವಾಗಿ ತಿಳಸುವುವು, ಕ್ಷೇತ್ರಕಾರ್ಯವನ್ನು ಆಧರಿಸಿ ಅದರಂತೆ ಗುಂಡ್ಲುಪೇಟೆ ತಾಲ್ಲೂಕಿನ ಇತಿಹಾಸವನ್ನು

ಪುನಃರಚಿಸುವಲ್ಲಿ ದೊರೆತ ಆಕರಗಳೇ ನನ್ನ ಸಂಶೋಧನೆಯ ಹೊಸ ಹೊಸ ಮೂಲ ಆಕರಗಳಾಗಿವೆ.

ಕನ್ನಡ ನಾಡು ವಾಸ್ತುಶಿಲ್ಪಕ್ಕೆ ಅತೀ ಪ್ರಸಿದ್ಧವಾದುದ್ದು. ಈ ಭಾರತ ದೇಶದಲ್ಲಿ ಅನೇಕ ರಾಜ್ಯಗಳು ಹುಟ್ಟಿಬೆಳೆದು ಕಲೆ ಮತ್ತು ಸಾಹಿತ್ಯ ಮೊದಲಾದವುಗಳಿಗೆ ಪ್ರೋತ್ಸಾಹವನ್ನು ನೀಡಿದವು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಅನೇಕ ರಾಜವಂಶಸ್ಥರು ಆಳ್ವಿಕೆ ನಡೆಸಿದ್ದಾರೆ. ರಾಜರು ತಮ್ಮ ತಮ್ಮ ಆಳ್ವಿಕೆಯಲ್ಲಿ ಈ ಭಾಗದಲ್ಲೂ ಸುಂದರವಾದ ಅನೇಕ ದೇವಾಲಯಗಳನ್ನು ಕಟ್ಟಿಸಿ ತಮ್ಮದೇಯಾದ ಕೊಡುಗೆ ನೀಡಿದ್ದಾರೆ.

ಸುಮಾರು ಕ್ರಿ.ಶ. ಆರಂಭ ಕಾಲದಿಂದಲೂ ರಾಜಕೀಯವಾಗಿ, ಐತಿಹಾಸಿಕವಾಗಿ, ಧಾರ್ಮಿಕವಾಗಿ ಬೆಳವಣಿಗೆಯ ಸ್ಪಷ್ಟ ಚಿತ್ರಗಳು ದೊರೆತ ವಾಸ್ತುಶಿಲ್ಪಗಳಿಂದ ತಿಳಿದುಬರುತ್ತದೆ. ಇವುಗಳನ್ನು ನಮಗೆ ತಿಳಿಸುವಲ್ಲಿ ಅನೇಕ ವಿದ್ವಾಂಸರು ಸಂಶೋಧಕರು ಅಧ್ಯಯನವನ್ನು ನಡೆಸಿದ್ದಾರೆ. ಆದರೆ ಅವರು ಭಾಗದ ಇತಿಹಾಸವನ್ನು ಸರಿಯಾದ ಪ್ರಮಾಣದಲ್ಲಿ ನಡೆಸಿಲ್ಲ. ಕಾರಣ ನನ್ನ ಕ್ಷೇತಕಾರ್ಯದ ಸಂದರ್ಭದಲ್ಲಿ ಸಾಕಷ್ಟು ನೆಲೆಗಳನ್ನು ಬೃಹತ್ ಶಿಲಾಸಂಸ್ಕೃತಿಯನ್ನು, ವಿವಿಧ ಮಾದರಿಯ ಶಿಲ್ಪಗಳನು ಹೊಸದಾಗಿ ಪತ್ತೆ ಮಾಡಿದ್ದೇನೆ. ಆದಕಾರಣ ಇದೊಂದು ಪರಿಪೂರ್ಣವಾದ ಸಂಶೋಧನೆಯಾಗಿದೆ. ಅಲ್ಲದೆ ಗುಂಡ್ಲುಪೇಟೆ ತಾಲ್ಲೂಕಿನ ಪ್ರತಿಯೊಂದು ಗ್ರಾಮಕ್ಕೂ ಹೋಗಿ ಕ್ಷೇತ್ರಕಾರ್ಯ ನಡೆಸಿದ್ದೇನೆ. ಚಾಮರಾಜನಗರ ಜಿಲ್ಲೆಯ ಸಂಸ್ಕೃತಿಯು ಬಹಳ ಶ್ರೀಮಂತವಾದುದಾಗಿದೆ. ಅದರಲ್ಲಿಯೂ ವಿಶೇಷವಾಗಿ ಗುಂಡ್ಲುಪೇಟೆ ತಾಲ್ಲೂಕು ಪುರಾತನ ಕಾಲದಿಂದಲೂ ಐತಿಹಾಸಿಕ ಮಹತ್ವ ಪಡೆದ ನೆಲೆಯಾಗಿದೆ. ಇದು ಹಲವಾರು ರಾಜಮನೆತನಗಳ ಆಳ್ವಿಕೆಗೊಳಪಟ್ಟು ಸುದೀರ್ಘ ಕಾಲದ ಪರಂಪರೆಯನ್ನು ಹೊಂದಿ ಸರ್ವಧರ್ಮಗಳ ಸಮನ್ವಯ ಸಾಧಿಸಿದೆ.

ಇಲ್ಲಿಯ ಪ್ರತಿಯೊಂದು ಹಳ್ಳಿಗಳು ಪ್ರಾಚ್ಯವಶೇಷಗಳಿಂದ ಕೂಡಿದ್ದು, ಅವುಗಳಲ್ಲಿ ಕೆಲವೊಂದು ಗ್ರಾಮಗಳು ಅತ್ಯಂತ ಪ್ರಮುಖವೆನಿಸಿವೆ. ಕರ್ನಾಟಕದ ಪ್ರತಿಯೊಂದು ಹಳ್ಳಿಗಳ ಸಮಗ್ರ ಅಧ್ಯಯನವಾಗಿಲ್ಲ. ಹೀಗಾಗಿ ಮಹತ್ವದ ಸಂಗತಿಗಳು ಇನ್ನೂ ಇತಿಹಾಸದ ಗರ್ಭದಲ್ಲಿಯೇ ಉಳಿದುಕೊಂಡಿದೆ. ಅನ್ವೇಷಣೆ ಮತ್ತು ಉತ್ಖನನವೆಂಬ ವೈಜ್ಞಾನಿಕ ಪದ್ಧತಿಯಿಂದ ಪ್ರತಿ ಗ್ರಾಮ, ಪಟ್ಟಣಗಳ ಇತಿಹಾಸವನ್ನು ಹೊರ ತೆಗೆಯುವಂತಹ ಪ್ರಯತ್ನ ವ್ಯಾಪಕವಾಗಿ ನಡೆಯುತ್ತದೆ. ಈ ನಿಟ್ಟಿನಲ್ಲಿ ನಾನು ಗುಂಡ್ಲುಪೇಟೆ ತಾಲ್ಲೂಕಿನ ಸ್ಥಳೀಯ ನಿವಾಸಿಯಾಗಿದ್ದ, ನನ್ನದೊಂದು ಅಳಿಲು ಸೇವೆ ಮುಖಾಂತರ ಸಂಶೋಧನೆಯನ್ನು ನಡೆಸಿದ್ದೇನೆ. ಪ್ರಸ್ತುತ

ಅಧ್ಯಯನವು ಗುಂಡ್ಲುಪೇಟೆ ತಾಲ್ಲೂಕಿನ ಪ್ರದೇಶವನ್ನು ಕ್ಷೇತ್ರಕಾರ್ಯಕ್ಕೆ ಒಳಪಡಿಸಿ ದೊರೆತ ಮಾಹಿತಿಗಳನ್ನು ದಾಖಲಿಸುವ ವ್ಯವಸ್ಥಿತವಾಗಿ ಪರಾಮರ್ಶಿಸುವ ಪ್ರಯತ್ನವಾಗಿದೆ. ಈ ತಾಲ್ಲೂಕಿನ ಎಲ್ಲಾ ಗ್ರಾಮಗಳಗೂ ಸ್ವತಃ ಭೇಟಿ ಕೊಟ್ಟು ಅಲ್ಲಿರುವ ಶಾಸನಗಳು ದೇವಾಲಯಗಳು, ಕೆರೆಕಟ್ಟೆ, ಮಠ ಮೂರ್ತಿಶಿಲ್ಪಗಳು ಬೃಹತ್ ಶಿಲಾಸಮಾಧಿ ಮುಂತಾದವುಗಳನ್ನು ದಾಖಲು ಮಾಡಿ ಇಲ್ಲಿ ಪರಾಮರ್ಶಿಸಲಾಗಿದೆ. ಆಯಾ ಅಧ್ಯಯನದಿಂದ ಕಂಡುಬಂದ ವಿಷಯಗಳನ್ನು ಈ ಕೆಳಗಿನಂತೆ ವಿವಿಧ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

**ಒಂದನೆಯ ಅಧ್ಯಾಯವು** ಸುಮಾರು ಹತ್ತು ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಮೊದಲಿಗೆ ಪೀಠಿಕೆ ರೂಪದಲ್ಲಿ ನೀಡಲಾಗಿದೆ. ಇದೊಂದು ತಮಿಳುನಾಡು, ಕೇರಳ ಮತ್ತು ಕರ್ನಾಟಕ ಈ ಮೂರು ರಾಜ್ಯಗಳು ಸೇರುವಂತಹ ಗಡಿಭಾಗವಾಗಿದ್ದು, ಕ್ರಿ.ಶ.1887ರಿಂದಲೂ ಗುಂಡ್ಲುಪೇಟೆ ಒಂದು ತಾಲ್ಲೂಕು ಕೇಂದ್ರವಾಗಿ ಮೈಸೂರು ಜಿಲ್ಲೆಗೆ ಸೇರಿತ್ತೆಂದು, ತದನಂತರ 1997ರಲ್ಲಿ ಮೈಸೂರು ಜಿಲ್ಲೆಯಿಂದ ಬೇರೆಯಾಗಿ ಚಾಮರಾಜನಗರ ಜಿಲ್ಲೆಗೆ ಸೇರಿದೆ. ಈ ಗುಂಡ್ಲುಪೇಟೆಯನ್ನು ಕಾಲಕಾಲಕ್ಕೆ ವಿವಿಧ ಹೆಸರುಗಳಿಂದ ಕರೆಯಲಾಗಿದೆ. ಈ ಗುಂಡ್ಲುಪೇಟೆಯನ್ನು ಕ್ರಿ.ಶ.10ನೇ ಶತಮಾನಕ್ಕೆ ಕುಡುಗುನಾಡು, ಕ್ರಿ.ಶ.12-13ನೇ ಶತಮಾನಕ್ಕೆ ಪ್ರಸನ್ನ ವಿಜಯಪುರವೆಂದೂ, ಕ್ರಿ.ಶ.17ನೇ ಶತಮಾನಕ್ಕೆ ದೇವನಗಿರಿ ಎಂದು ಕರೆಯಲಾಗಿದೆ. ಕ್ರಿ.ಶ.1751ರ ಕಾಲಕ್ಕೆ ಗುಂಡಲು (ಕೌಂಡಿನ್ಯ) ನದಿ ತೀರದಲ್ಲಿ ಈ ನೆಲೆ ಅಂದರೆ ಗುಂಡ್ಲುಪೇಟೆ ಬೆಳೆದು, ಗುಂಡ್ಲುಪೇಟೆ ಎಂಬ ಹೆಸರು ಬಂದಿದೆ ಎಂದು ಕಥೆಯು ಸಹ ಇದೆ. ಈ ಎಲ್ಲಾ ಬೆಳವಣಿಗೆಯನ್ನು ರಾಜರುಗಳ ಹಿನ್ನೆಲೆಯನ್ನು ಸಹ ಪೀಠಿಕೆಯಲ್ಲಿ ನೀಡಲಾಗಿರುತ್ತದೆ.

**ಭೌಗೋಳಿಕ ಲಕ್ಷಣ**ಗಳನ್ನು ಸಹ ತಿಳಿಸಲಾಗಿರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನ ಶಿಲೆಗಳು, ಖನಿಜಗಳು, ಮಣ್ಣುಗಳು, ಭೂ, ಜಲಗಳು, ಸಾರಿಗೆ ಸಂಪತ್ತು, ಅರಣ್ಯಗಳ ವಿವರಣೆಯನ್ನು ಸಹ ತಿಳಿಸಲಾಗಿದೆ. ಈ ಭಾಗದ ಭೂ, ಜಲಸಂಪತ್ತು, ವಾಯುಗುಣ, ಮಳೆ, ನದಿಗಳು, ಸಸ್ಯವರ್ಗ, ನೀರಾವರಿ, ವ್ಯವಸಾಯ, ಆಹಾರದ ಬೆಳೆಗಳು, ಜಾನುವಾರುಗಳು ಮತ್ತು ವನ್ಯ ಜೀವಿಗಳು ಇನ್ನೂ ಮೊದಲಾದ ವಿಚಾರಗಳ ಕುರಿತು ಮಾಹಿತಿಯನ್ನು ನೀಡಲಾಗಿದೆ.

ಅಧ್ಯಯನದ ಉದ್ದೇಶದಲ್ಲಿ ದೇವಾಲಯಗಳ ಪ್ರಮುಖ ಅಂಶಗಳನ್ನು ಗಮನಿಸಿಕೊಂಡು ಪ್ರಸ್ತುತ ಅಧ್ಯಯನದ ವಿಶ್ಲೇಷಣೆಯನ್ನು ನೀಡಲಾಗಿದೆ. ದೇವಾಲಯಗಳ ಸಮಸ್ತ ನಾಗರೀಕರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕೇಂದ್ರಗಳಾಗಿ ನಿರ್ವಹಿಸಿದ ಪಾತ್ರ ಎಂತದು ಎಂಬ ವಿಚಾರಗಳನ್ನು ಕೂಡಾ ಚರ್ಚಿಸಲಾಗಿದೆ. ಈ ತಾಲ್ಲೂಕಿನಲ್ಲಿ ಆಯಾ ಮತಧರ್ಮಗಳು ಹಾಗೂ ಗ್ರಾಮಗಳಲ್ಲಿ ಅದು ಪಡೆದುಕೊಂಡ ಸ್ಥಾನ ಆ ಮೂಲಕ ಆಯಾ ಧರ್ಮಕ್ಕೆ ಪೂರಕವಾಗಿ

ದೇವಸ್ಥಾನಗಳು, ಬಸದಿಗಳು ನಿರ್ಮಾಣವಾಗಿರುವುದು ಮುಖ್ಯ. ಈ ನಾಡಿಗೆ ಸಂಸ್ಕೃತಿಗೆ ಯಾವುದೇ ಒಂದು ನಿರ್ದಿಷ್ಟ ಧರ್ಮವೇ ಮುಖ್ಯವೆಂದೆನಿಸಲಾರದು. ಇದಕ್ಕೆ ಬದಲಾಗಿ ಈ ಪ್ರಾಂತ್ಯಕ್ಕೆ ಒಳ್ಳೆಯದನ್ನು ಬಯಸುವ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಯಾವುದೇ ಧರ್ಮ ಜನಜೀವನದಲ್ಲಿ ಬೆಳೆಯುತ್ತದೆ. ಅದರಂತೆ ಈ ಭಾಗದ ಎಲ್ಲಾ ಧರ್ಮಕ್ಕೆ ಸೇರಿದ ದೇವಾಲಯಗಳು ಸಹ ಬೆಳೆದಿವೆ. ಅಂದಿನ ಕಾಲಕ್ಕೆ ವಿಜಯೋತ್ಸವ, ಕೌಟುಂಬಿಕ ಕಾರಣಗಳು, ವ್ಯಕ್ತಿಗತ ಮನೋಭಿಲಾಶೆ, ರಾಜಪರಿವಾರದವರ, ಅಧಿಕಾರ ವರ್ಗದವರ ಅಲ್ಲದೆ ಇನ್ನಿತರ ಸಮಯದಲ್ಲಿ ವಿಸ್ತಾರವಾದಂತಹ ವಿಶೇಷ ಸಂದರ್ಭಗಳಲ್ಲಿಯೂ ದೇವಾಲಯಗಳು ನಿರ್ಮಾಣಗೊಂಡಿರುವುದು ಕಂಡುಬರುತ್ತದೆ. ಈ ಎಲ್ಲಾ ಬೆಳವಣಿಗೆಯಿಂದ ಈ ಗುಂಡ್ಲುಪೇಟೆ ತಾಲ್ಲೂಕಿನ ಎಲ್ಲಾ ದೇವಾಲಯಗಳ ಬಗೆಗೆ ಒಂದು ಸಾಂಸ್ಕೃತಿಕ ಹಿನ್ನೆಲೆಯ ನೋಟವನ್ನು ಪ್ರಸ್ತುತ ನೀಡುವುದೇ ನನ್ನ ಈ ಸಂಶೋಧನೆಯ ಮೂಲ ಉದ್ದೇಶವಾಗಿದೆ.

**ಅಧ್ಯಯನದ ವ್ಯಾಪ್ತಿ** ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿಗೆ ಮಾತ್ರ ಸೀಮಿತವಾಗಿದೆ. ಈ ಭಾಗದ ಎಲ್ಲಾ ದೇವಾಲಯಗಳನ್ನು ಗ್ರಾಮಗಳನ್ನು ಸಂದರ್ಶಿಸಿ ಕ್ಷೇತ್ರಕಾರ್ಯದ ಮೂಲಕ ವಿವಿಧ ಮಾದರಿಯ ವಿವರಗಳನ್ನು ಪಡೆದು ಈ ಭಾಗದ ದೇವಸ್ಥಾನಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಪ್ರಾಗೈತಿಹಾಸಿಕ ಮಾನವನ ನೆಲೆಗಳಿಂದ ಹಿಡಿದು ಇಲ್ಲಿಯ ತನಕ ದೇವಾಲಯಗಳು, ಶಾಸನಗಳು, ಮೂರ್ತಿಶಿಲ್ಪಗಳು, ಸ್ಮಾರಕ ಶಿಲ್ಪಗಳು ಅಲ್ಲದೆ ಭೌಗೋಳಿಕ ಪರಿಸರದ ವ್ಯಾಪ್ತಿ ಕಾಲದ ಮಿತಿ ಅಧ್ಯಯನದ ವಿಸ್ತಾರವನ್ನು ಗಮನಿಸಿಕೊಂಡು ಸಮಗ್ರ ದೇವಾಲಯಗಳನ್ನು, ವೀರಗಲ್ಲುಗಳನ್ನು, ಮಾಸ್ತಿಕಲ್ಲುಗಳನ್ನು, ಇನ್ನಿತರ ಶಿಲ್ಪಗಳನ್ನು ಅವಲೋಕಿಸಿ ಅಧ್ಯಯನವನ್ನು ಮಾಡಲಾಗಿರುತ್ತದೆ.

**ಅಧ್ಯಯನದ ಸ್ವರೂಪ**ವನ್ನು ಕುರಿತು ಚರ್ಚಿಸಲಾಗಿದೆ. ಅಂದಿನ ಕಾಲದ ರಾಜರಿಂದ ಹಿಡಿದು ಇಂದಿನ ಕಾಲದ ಜನಸಾಮಾನ್ಯರು ಸಹ ಸ್ಥಳೀಯವಾಗಿ ತನ್ನದೇ ಆದ ಧರ್ಮ, ಸಂಸ್ಕೃತಿ, ಸಾಹಿತ್ಯ ಮತ್ತು ಕಲೆಗಳನ್ನು ಪ್ರೋತ್ಸಾಹಿಸಿರುವುದು ಬೆಳೆಸಿರುವುದು ಕಂಡುಬರುತ್ತದೆ. ಇವುಗಳನ್ನು ಆಯಾ ನೆಲೆಗಳಲ್ಲಿ ಅಧ್ಯಯನವನ್ನು ನಡೆಸಲಾಗಿದೆ.

ಅಧ್ಯಯನದ ವಿಧಾನವನ್ನು ನೀಡಲಾಗಿದೆ. ಈ ಭಾಗದ ಶಾಸನಗಳ ಹಿನ್ನೆಲೆಯಲ್ಲಿ ನಿರ್ಮಾಣವಾದ ದೇವಾಲಯಗಳು ಜೀರ್ಣೋದ್ಧಾರ ಹೊಂದಿದೆ. ದಾನದತ್ತಿಗಳನ್ನು ಪಡೆದ ದೇವಾಲಯಗಳು ಅಲ್ಲದೆ ಅವುಗಳೆಲ್ಲವುಗಳಿಗೆ ದೊರೆತ ದಾನದತ್ತಿಗಳ ಪರಿಚಯ ಮಾಡಿಕೊಳ್ಳುವಾಗ ತಿಳಿದುಬಂದಿರುವ ಸಾಂಸ್ಕೃತಿಕ ಮಹತ್ವವನ್ನು ನೀಡಲಾಗಿರುತ್ತದೆ. ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಯಿಂದ ದೇವಸ್ಥಾನಗಳ ಕುರಿತು ಮಾಹಿತಿಯನ್ನು ಪಡೆದು

ಕ್ಷೇತ್ರಕಾರ್ಯ ಮಾಡಬೇಕಾದ ಸ್ಥಳಗಳನ್ನು ಖಚಿತಪಡಿಸಿಕೊಳ್ಳಲಾಗಿದೆ. ಆಯಾ ಗ್ರಾಮದ ದೇವಾಲಯಗಳಿಗೆ ಹೋಗಿ ಅದನ್ನು ಅಧ್ಯಯನ ನಡೆಸಿ ಅದರ ಜೊತೆಗೆ ಛಾಯಾಚಿತ್ರಗಳನ್ನು ತೆಗೆದು ಅಧ್ಯಯನವನ್ನು ನಡೆಸಲಾಗಿರುತ್ತದೆ.

ಅಧ್ಯಯನದ ಮಹತ್ವವನ್ನು ಸಹ ತಿಳಿಸಲಾಗಿದೆ. ಐತಿಹಾಸಿಕ ಹಿನ್ನೆಲೆಯನ್ನು ನೀಡಲಾಗಿರುತ್ತದೆ. ಗುಂಡ್ಲುಪೇಟೆ ಪ್ರದೇಶವು ಪುರಾತತ್ವ ಅಧ್ಯಯನದ ದೃಷ್ಟಿಯಿಂದ ಅಲ್ಲದೆ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ ದೃಷ್ಟಿಯಿಂದ ಹಿಂದುಳಿದಿರುವ ಪ್ರದೇಶವಾಗಿದೆ. ಈ ತಾಲ್ಲೂಕು ಪ್ರಾಗೈತಿಹಾಸಿಕ ಕಾಲದಿಂದ ಇತಿಹಾಸ ಕಾಲದವರೆವಿಗೂ ಐತಿಹಾಸಿಕ ದೃಷ್ಟಿಯಿಂದ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಐತಿಹಾಸಿಕ ಇರಬಹುದು ಅಥವಾ ರಾಜಕೀಯ ಇರಬಹುದು. ಇದನ್ನು ನಾವು ಗುಂಡ್ಲುಪೇಟೆ ತಾಲ್ಲೂಕಿಗೆ ಮಾತ್ರ ಸೀಮಿತಪಡಿಸುವಂತಿಲ್ಲ. ಅದು ಇಡೀ ದಕ್ಷಿಣ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಎಲ್ಲಾ ರಾಜಮನೆತನಗಳು ಅಂದಿನ ಮಹಿಷಮಂಡಲ ಪ್ರಾಂತ್ಯಕ್ಕೆ ಸೇರಿದ ಗುಂಡ್ಲುಪೇಟೆ ಭಾಗದಲ್ಲಿಯೂ ತಮ್ಮ ಹತೋಟಿಯನ್ನು ಹೊಂದಿದ್ದರು. ಇದರಿಂದ ಈ ಭಾಗದಲ್ಲಿ ದೊರೆತಿರುವ ಚಾರಿತ್ರಿಕ ಹಿನ್ನೆಲೆಯ ಆಧಾರಗಳಿಂದ ನಡೆದಿರುವ ವಿಚಾರವನ್ನು ಸವಿವರವಾಗಿ ಚರ್ಚಿಸಲಾಗಿದೆ.

ಅಲ್ಲದೆ ಇದುವರೆವಿಗೂ ನಡೆದಿರುವ ಸಂಶೋಧನಾ ಅಧ್ಯಯನಗಳ ಸಮೀಕ್ಷೆಯನ್ನು ಸಹ ನೀಡಲಾಗಿರುತ್ತದೆ. ನಂತರ ಭಾಗದಲ್ಲಿ ಸಾಹಿತ್ಯ ಸಮೀಕ್ಷೆಯನ್ನು ಸಹ ನೀಡಲಾಗಿರುತ್ತದೆ.

**ಎರಡನೆಯ ಅಧ್ಯಾಯದಲ್ಲಿ** ಈ ಭಾಗದ ದೇವಾಲಯಗಳ ಉಗಮ ಮತ್ತು ಬೆಳವಣಿಗೆ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಹಿನ್ನೆಲೆಯನ್ನು ನೀಡಲಾಗಿರುತ್ತದೆ. ಮಾನವನು ಅನಾದಿ ಕಾಲದಿಂದಲೂ ದೇವರ ಶಕ್ತಿಯನ್ನು ರೂಪಿಸಿಕೊಂಡು ಅದರಲ್ಲಿ ನಂಬಿಕೆ ಭಕ್ತಿ, ಭಯ ಹೀಗೆ ಹಲವು ಭಾವನೆಗಳನ್ನು ಉಳ್ಳವರಾಗಿ ಬದುಕುತ್ತಾ ಜೀವನ ಸಾಗಿಸುತ್ತಿದ್ದಾರೆ. ಕ್ರಿ,ಪೂ.4ನೇ ಸಹಸ್ರಮಾನದಷ್ಟು ಹಿಂದಕ್ಕೆ ಜನರ ಜೀವನವನ್ನು ಗುರುತಿಸಬಹುದಾಗಿದೆ. ಕ್ರಿ.ಶ.2ನೆ ಶತಮಾನದಿಂದ ದೇವಾಲಯಗಳ ಉಗಮವಾಗಿ ಕಾಲಕ್ರಮೇಣ ಬೆಳೆಯುತ್ತಾ, ತದನಂತರ ಕಾಲಕ್ಕೆ ವಿಭಿನ್ನ ಮಾದರಿಯ ಪ್ರಯೋಗಗಳು ನಡೆದು ಕೆಲವೊಂದು ಮಾರ್ಪಾಡುಗಳನ್ನು ಸೇರಿಸಿಕೊಂಡು ಅಂದಿನ ಸಮಾಜದ ಎಲ್ಲಾ ಚಟುವಟಿಕೆಗಳಿಗೂ ಕೇಂದ್ರವಾಗಿ ರೂಪುಗೊಂಡಿದೆ. ಅಂದಿನ ಕಾಲಕ್ಕೆ ಜನಸಾಮಾನ್ಯರು ಸೂರ್ಯ, ಚಂದ್ರ, ನೀರು, ಭೂಮಿ, ವೃಕ್ಷಗಳನ್ನು ಪೂಜಿಸುತ್ತಿದ್ದರು ಎಂಬ ಪರಿಕಲ್ಪನೆ ಇರುವುದರಿಂದ ಇವರಿಗೆ ದೇವರ ಬಗ್ಗೆ, ದೇವಾಲಯಗಳ ಬಗ್ಗೆ ಜ್ಞಾನವಿತ್ತೆಂದು ತಿಳಿಯಬಹುದಾಗಿದೆ. ಈ ಹಿನ್ನೆಲೆಯಿಂದ ಅಂದಿನ ಕಾಲದ ಪ್ರಾಚೀನ ದೇವಾಲಯಗಳನ್ನು ಉದಾಹರಣೆ ಸಹಿತ ನೀಡಲಾಗಿದ್ದು, ಆಯಾ ಕಾಲದ ರಾಜವಂಶಸ್ಥರ

ಕುರಿತು ಅವರು ನಿರ್ಮಿಸಿದ ದೇವಾಲಯಗಳ ವಾಸ್ತುರಚನೆಯನ್ನು ಸಹ ತಿಳಿಸಲಾಗಿದೆ. ಆದರೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ತಲಕಾಡಿನ ಗಂಗರ ಕಾಲದಿಂದ ದೇವಾಲಯಗಳ ಬೆಳವಣಿಗೆಯಾಗಿದೆ ಎನ್ನಬಹುದಾಗಿದೆ. ಈ ಭಾಗದ ಗಂಗರ ಕಾಲದ ದೇವಾಲಯಗಳನ್ನು ತಿಳಿಸಲಾಗಿದೆ. ಚೋಳರ ಕಾಲದಲ್ಲಿ ಆದಂತಹ ವಾಸ್ತುಶಿಲ್ಪ ಅವಿಷ್ಕಾರ ಮತ್ತು ವಾಸ್ತು ಬದಲಾವಣೆಗಳಿಂದ ಮೊದಲಿಗೆ ಪಲ್ಲವರ ವಾಸ್ತು ಸಂಪ್ರದಾಯವನ್ನು ತಿಳಿಸಲಾಗಿದೆ. ಚೋಳರ ಕಾಲದ ದೇವಾಲಯಗಳಲ್ಲಿ ಕೋಷ್ಠಗಳ ನಿರೂಪಣೆ, ಚಾಚುಪೀಠಗಳ ಅಲಂಕರಣೆ, ಕೂಡುಗಳ ನಿರೂಪಣೆ, ಸ್ತಂಭಗಳ ವಿನ್ಯಾಸ ಇವುಗಳು ವಿಶೇಷವಾಗಿರುತ್ತದೆ. ಅವುಗಳನ್ನು ಈ ಭಾಗದಲ್ಲಿ ಗುರುತಿಸಬಹುದಾಗಿದೆ. ಉದಾಹರಣೆಗೆ ಹಸುಗೂಲಿ ಗ್ರಾಮದಲ್ಲಿ ಕಂಡುಬರುವ ಈಶ್ವರ ದೇವಾಲಯವಾಗಿದೆ.

ಹೊಯ್ಸಳರ ಕಾಲಕ್ಕೆ ಪೂರಕವಾಗಿ ದೇವಾಲಯಗಳ ಬೆಳವಣಿಗೆಯಲ್ಲಿ ತನ್ನದೇ ಆದ ವಿಶೇಷ ವಾಸ್ತು ಲಕ್ಷಣಗಳನ್ನು ತಿಳಿಸಲಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಹೊಯ್ಸಳರ ಕಾಲಕ್ಕೆ ಸೇರಿದ ದೇವಾಲಯವನ್ನು ಶಾಸನಗಳ ಆಧಾರಗಳಿಂದ ನಿರ್ಧರಿಸಿದ್ದು, ಅವುಗಳ ವಾಸ್ತುಶೈಲಿಯನ್ನು ಸಹ ತಿಳಿಸಲಾಗಿರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವಿಜಯನಗರ ಅರಸರ ವಾಸ್ತುಶಿಲ್ಪ ಬೆಳವಣಿಗೆಯನ್ನು ಸಹ ಕಾಣಬಹುದಾಗಿದೆ. ವಿಜಯನಗರ ಅರಸರ ಕಾಲದ ಶಿಲ್ಪಗಳ ಒಂದು ವಿಶೇಷವೇನೆಂದರೆ, ಶಿಲ್ಪಗಳು ಸಮಕಾಲೀನ ಸಮಾಜದ ಸ್ಥಿತಿಗತಿಗಳನ್ನು, ನಂಬಿಕೆಗಳನ್ನು, ಆಚರಣೆಗಳನ್ನು ಹಬ್ಬ ಹರಿದಿನಗಳನ್ನು, ಮನರಂಜನೆಗಳನ್ನು ಹಾಗೂ ರಾಜನ ಆಸ್ಥಾನ, ಸಂಗೀತಗಾರರು, ವಾದ್ಯಗಳು, ನರ್ತನಕಾರರು, ಬೇಟೆಗಾರರು, ಯಕ್ಷಿಣಿಗಾರರು, ದೊಂಬರಾಟ, ಕೋಲಾಟ, ರಂಗಿನಾಟ, ವ್ಯಾಪಾರ, ವ್ಯವಹಾರ, ವಾಣಿಜ್ಯ ಇನ್ನೂ ಮೊದಲಾದವುಗಳನ್ನು ಉಬ್ಬುಶಿಲ್ಪದ ರೂಪಗಳಲ್ಲಿ ದೇವಾಲಯಗಳ ಭಿತ್ತಿಯ ಮೇಲೆ, ಪ್ರಾಕಾರದ ಗೋಡೆಯ ಮೇಲೆ, ಕಂಬಗಳ ಮೇಲೆ ಕೆತ್ತಲಾಗಿರುವುದು ತಿಳಿದುಬರುತ್ತದೆ. ಅಲ್ಲದೆ ದೇವಾಲಯಗಳು ಸಾಂಸ್ಕೃತಿಕ ಇತಿಹಾಸಕ್ಕೆ ಯಾವ ರೀತಿಯಲ್ಲಿ ಪೂರಕವಾಗಿವೆ ಎಂಬುದನ್ನು ಸವಿವರವಾಗಿ ಚರ್ಚಿಸಲಾಗಿದೆ.

ಧರ್ಮ ಮತ್ತು ದೇವಸ್ಥಾನಗಳ ಸಂಬಂಧವು ಅವಿನಾಭಾವವಾದುದು. ಇವೆರಡರ ಸಂಬಂಧ ಬೆಳೆದಂತೆ ದೇವಸ್ಥಾನಗಳು ಬೆಳೆದಿವೆ ಎಂಬುದನ್ನು ಗಮನಿಸಬಹುದಾಗಿದೆ. ದೇವಾಲಯಗಳು ಪ್ರಾಚೀನ ಕಾಲದಿಂದಲೂ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಅಂದಿನ ಕಾಲದ ಸಮಾಜದ ಸಾಂಸ್ಕೃತಿಕ ಪರಿಸರದ ಪ್ರತಿನಿಧಿಯಾಗಿ ದೇವಸ್ಥಾನಗಳು ಗೋಚರಿಸುತ್ತದೆ. ಕಾರಣವೇನೆಂದರೆ ಆಯಾ ಕಾಲದ ಜನಜೀವನದ ಧಾರ್ಮಿಕತೆ

ಗೋಚರಿಸುತ್ತಿರುವ ದೇವಸ್ಥಾನಗಳು ಅಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ ಇತಿಹಾಸವನ್ನು ಹೊರಚೆಲ್ಲುತ್ತದೆ. ಹೀಗಾಗಿ ಗತಕಾಲದ ಚರಿತ್ರೆಯನ್ನು ತಿಳಿಯುವಲ್ಲಿ ದೇವಾಲಯಗಳು ಮೂಲ ಆಕರಗಳಾಗಿವೆ. ನಂತರದ ಭಾಗದಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದೊರೆಯುವ ಆಯಾ ಧರ್ಮಕ್ಕೆ ಸೇರಿರುವ ಶಾಸನಗಳ ಸಂಖ್ಯೆಯನ್ನು ತಿಳಿಸಲಾಗಿದೆ. ಶೈವ, ವೈಷ್ಣವ, ಜೈನ, ವೀರಶೈವ, ಬಸವೇಶ್ವರ, ಮಾರಮ್ಮ ದೇವಾಲಯ, ವೀರಗಲ್ಲು, ಬಿರುದು ಬಾವಲಿ, ತಾಮ್ರಶಾಸನಗಳು, ದಾನಕ್ಕೆ ದತ್ತಿಗೆ ಪೂರಕವಾದ ಶಾಸನಗಳು, ಧಾರ್ಮಿಕ ಶಾಸನಗಳು, ತಮಿಳು ಲಿಪಿ ಶಾಸನಗಳು, ಸಂಸ್ಕೃತ ಶಾಸನಗಳು, ನಾಗರಲಿಪಿ, ಕನ್ನಡ ಲಿಪಿಶಾಸನಗಳನ್ನು ಕುರಿತು ಪಟ್ಟಿಯನ್ನು ಮಾಡಲಾಗಿದೆ. ಅಲ್ಲದೆ ಆಯಾ ವಿಭಾಗಕ್ಕೆ ಸೇರಿದ ಶಾಸನಗಳ ಸಂಖ್ಯೆಯನ್ನು ತಿಳಿಸಲಾಗಿರುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಹಿನ್ನೆಲೆಯನ್ನು ತಿಳಿಸಲಾಗಿದೆ. ಇಲ್ಲಿ ಸುಮಾರು 224 ಶಾಸನಗಳಿವೆ. ಇವುಗಳನ್ನು ಎಪಿಗ್ರಾಫಿಯ ಕರ್ನಾಟಕ ಸಂಪುಟ-3 ರಲ್ಲಿ ಕಾಣಬಹುದಾಗಿದೆ. ಇವುಗಳಲ್ಲಿ ಈ ಪ್ರಾಂತ್ಯವನ್ನಾಳಿದ ಗಂಗ-ಚೋಳ, ಹೊಯ್ಸಳ, ವಿಜಯನಗರದ ಅರಸರು, ಉಮ್ಮತ್ತೂರು ಪಾಳೇಗಾರರು, ಮೈಸೂರು ಒಡೆಯರಿಗೆ ಸೇರಿದ ಶಾಸನಗಳು ದೊರೆತಿವೆ. ಹಾಗೆಯೇ ಇತರೆ ಅನೇಕ ಖಾಸಗಿ ವ್ಯಕ್ತಿಗಳಿಗೆ ಸೇರಿರುವ ದಾನಶಾಸನಗಳಿವೆ. ಇವುಗಳನ್ನು ಸಹ ಇಲ್ಲಿ ತಿಳಿಸಲಾಗಿದೆ. ಅಲ್ಲದೆ ಶಾಸನದ ಅರ್ಥ ಮತ್ತು ಸ್ವರೂಪವನ್ನು ಚರ್ಚಿಸಲಾಗಿದೆ.

**ಮೂರನೆಯ ಅಧ್ಯಾಯವು** ಗುಂಡ್ಲುಪೇಟೆ ತಾಲ್ಲೂಕಿನ ಶೈವ ದೇವಾಲಯಗಳು, ಶೈವ ಧರ್ಮದ ಬೆಳವಣಿಗೆಯಲ್ಲಿ ಧಾರ್ಮಿಕ ವ್ಯವಸ್ಥೆಯನ್ನು ಕುರಿತು ಚರ್ಚಿಸಲಾಗಿದೆ. ಶೈವ ಪರಂಪರೆಯ ಉಗಮ ಬೆಳವಣಿಗೆಯೂ ಕೂಡ, ಶೃತಿ, ಸ್ಮೃತಿ, ಪುರಾಣ, ಆಗಮ, ಉಪನಿಷತ್ತುಗಳು, ಆಧಾರದ ಮೇಲೆಯೇ ಆದುದಾಗಿದೆ ಎಂಬುದನ್ನು ಮರೆಯಲಾಗದು. ಆರಂಭದಲ್ಲಿ ಶೈವ ಧರ್ಮದಲ್ಲಿ ಲಾಕುಳ, ಪಾಶುಪತ, ಕಾಳಮುಖ, ಕಾಪಾಲಿಕ, ಕಾಶ್ಮೀರ ಶೈವ, ಶ್ರೀಕಂಠಮತ ಮತ್ತು ನಾಥಪಂಥಗಳು ಅಸ್ತಿತ್ವದಲ್ಲಿದ್ದು, ಹನ್ನೆರಡನೆಯ ಶತಮಾನದವರೆಗೆ ಉಳಿದುಬಂದಿದ್ದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಕೆಲವೊಂದು ಉದಾಹರಣೆಗಳ ಸಹಿತ ಶೈವ ಬೆಳವಣಿಗೆಯನ್ನು ತಿಳಿಸಲಾಗಿದೆ. ಶೈವ ಧರ್ಮ ಅಥವಾ ಪಂಥವನ್ನು ಕುರಿತು ಚರ್ಚಿಸಲಾಗಿದೆ.

ಕಾಳಾಮುಖರು, ಪಾಶುಪತ (ಲಕುಲೀಶ) ಪರಂಪರೆಯನ್ನು ಕುರಿತು ಚರ್ಚಿಸಲಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನ ಶೈವ ದೇವಾಲಯಗಳು ಕುರಿತು ಚರ್ಚಿಸಲಾಗಿದೆ. ಶೈವ ಧರ್ಮದ

ಬೆಳವಣಿಗೆಯ ದೇವಾಲಯಗಳು ಸಾಕಷ್ಟು ಸಂಖ್ಯೆಯಲ್ಲಿ ಗುಂಡ್ಲುಪೇಟೆ ಪ್ರದೇಶದಲ್ಲಿ ಗಂಗರ ಕಾಲದಿಂದ ಮೈಸೂರು ಒಡೆಯರ್ ಕಾಲದವರೆಗೂ ಅನೇಕ ದೇವಾಲಯಗಳು ನಿರ್ಮಾಣವಾಗಿದೆ. ಇಂತಹ ಶೈವ ದೇವಾಲಯಗಳ ಜೀರ್ಣೋದ್ಧಾರವಾಗಿದೆ. ಅಷ್ಟೇ ಅಲ್ಲದೆ ಕೆಲವೊಂದು ದೇವಾಲಯಗಳು ಕೇವಲ ಶಾಸನೋಕ್ತವಾದ ದಾಖಲೆಯಿಂದ ಕೂಡಿದೆ. ಲಭ್ಯವಿರುವ ಕೆಲವೊಂದನ್ನು ಸ್ಥಳೀಯರ ಮಾಹಿತಿಗಳ ಆಧಾರದಿಂದ ಕ್ಷೇತ್ರಕಾರ್ಯ ಕೈಗೊಂಡು ಸ್ಥಳದಲ್ಲಿಯೇ ವಾಸ್ತುಶಿಲ್ಪದ ಸಾಂಸ್ಕೃತಿಕ ಹಿನ್ನೆಲೆಯ ಬಗ್ಗೆ, ಹಬ್ಬ ಹರಿದಿನಗಳ ಬಗ್ಗೆ, ಸ್ಥಳೀಯ ಜಾತ್ರೆಯ ಬಗ್ಗೆ ಒಟ್ಟಾರೆ ಸಾಮಾಜಿಕ ಜನಜೀವನದ ಒಂದು ಸಾಂಸ್ಕೃತಿಕ ಚಿತ್ರಣವನ್ನು ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸುಮಾರು 48 ದೇವಾಲಯಗಳನ್ನು ಕುರಿತು ಚರ್ಚಿಸಲಾಗಿದೆ.

ಈ ದೇವಾಲಯಗಳು ಹಾಗೂ ಶಿಲ್ಪಗಳನ್ನು ಕುರಿತು ಅಲ್ಲಿನ ದಾನದತ್ತಿಗಳನ್ನು ಕುರಿತು ಚರ್ಚಿಸಲಾಗಿದೆ. ಶೈವಪಂಥಕ್ಕೆ ಸೇರಿದ ರಾಚಪ್ಪಾಜಿ, ಸಿದ್ದಪ್ಪಾಜಿ, ದೊಡ್ಡಮ್ಮತಾಯಿ, ಮಾದೇಶ್ವರ, ದೇವರಗುಡ್ಡರ ದೀಕ್ಷೆಗಳನ್ನು ಕುರಿತು ಅದು ಅಲ್ಲದೆ, ಈ ಭಾಗದ ವೀರಶೈವ ಮಠಗಳನ್ನು ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವು 'ಗುಂಡ್ಲುಪೇಟೆ ತಾಲ್ಲೂಕಿನ ವೈಷ್ಣವ ದೇವಾಲಯಗಳು' ಎಂಬ ವಿಚಾರಕ್ಕೆ ಪೂರಕವಾಗಿ ಚರ್ಚಿಸಲಾಗಿದೆ. ಮೊದಲಿಗೆ ವೈಷ್ಣವ ಧರ್ಮದ ಹಿನ್ನೆಲೆಯನ್ನು ತಿಳಿಸುತ್ತಾ, ವಿಷ್ಣುವಿನ ಆರಾಧಕರಲ್ಲಿ ಎರಡು ಪಂಗಡಗಳನ್ನು ವಿವರಿಸಲಾಗಿದೆ. ಮಧ್ವಾಚಾರ್ಯರಿಂದ ಸ್ಥಾಪಿತವಾದ ಪಂಥವನ್ನು ವೈಷ್ಣವರೆಂದೂ, ರಾಮಾನುಜಾಚಾರ್ಯರಿಂದ ಸ್ಥಾಪಿತವಾದ ಪಂಥವನ್ನು ಶ್ರೀವೈಷ್ಣವರೆಂದು ಕರೆದಿರುವುದನ್ನು ತಿಳಿಸಲಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸುಮಾರು 22 ಗ್ರಾಮಗಳಲ್ಲಿ ವೈಷ್ಣವ ದೇವಾಲಯಗಳಿವೆ. ಇವುಗಳು ಸರಿಸುಮಾರು 11 ರಿಂದ 17ನೇ ಶತಮಾನಕ್ಕೆ ಸೇರಿದ ದೇವಾಲಯಗಳಾಗಿವೆ. ಆದಕಾರಣ ಈ ಭಾಗದಲ್ಲಿ ಶೈವ ಪರಂಪರೆಯ ನಂತರ ವೈಷ್ಣವ ಧರ್ಮ ಈ ಭಾಗದಲ್ಲಿ ಬೆಳವಣಿಗೆಯಾಗಿದೆ. ಆಳ್ವಾರ್‌ಗಳನ್ನು ಕುರಿತು ಚರ್ಚಿಸಲಾಗಿದೆ. ಈ ಭಾಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದಾಸಕೂಟದವರು ನೆಲೆಸಿರುವುದು ತಿಳಿದುಬರುತ್ತದೆ. ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ದಾಸರು ಹಿಮವದ್ ಗೋಪಾಲಸ್ವಾಮಿ ಬೆಟ್ಟ ಮತ್ತು ಹುಲುಗಿನ ಮುರಡಿ, ತೆರಕಣಾಂಬಿಯ ವೈಷ್ಣವ ದೇವಾಲಯಗಳಲ್ಲಿ ದಾಸಯ್ಯರವರು ಇದ್ದಾರೆ. ದಾಸಯ್ಯರವರನ್ನು ಕುರಿತು ಚರ್ಚಿಸಲಾಗಿದೆ. ವೈಷ್ಣವ ಧರ್ಮದ ಪೂಜೆ ಪುನಸ್ಕಾರಗಳನ್ನು ಕುರಿತು ಚರ್ಚಿಸಲಾಗಿದೆ. ಸಾಕಷ್ಟು ವೈಷ್ಣವ ದೇವಾಲಯಗಳು ನಾಶವಾಗಿವೆ. ಪ್ರಸ್ತುತ ದಿನಗಳಲ್ಲಿ ಅವುಗಳನ್ನು ಸಂರಕ್ಷಿಸುವಂತಹ

ಕೆಲಸವಾಗಬೇಕಾಗಿದೆ. ಅಲ್ಲದೆ ವೈಷ್ಣವ ದೇವಾಲಯಗಳಲ್ಲಿ ಪೂಜೆ ಮಾಡುತ್ತಿದ್ದ ಬ್ರಾಹ್ಮಣರ ಸಂಖ್ಯೆಯು ಕಡಿಮೆಯಾಗಿದೆ. ಅಲ್ಲದೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಾಕಷ್ಟು ಅಗ್ರಹಾರಗಳಿದ್ದ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ಪ್ರಸ್ತುತ ದಿನಗಳಲ್ಲಿ ಅಗ್ರಹಾರಗಳು ಕಂಡುಬರುವುದಿಲ್ಲ. ಬ್ರಾಹ್ಮಣರ ಸಂಖ್ಯೆ ವಿರಳವಾಗಿದೆ. ಈ ಎಲ್ಲಾ ಬೆಳವಣಿಗೆಯಿಂದ ಮುಂದಿನ ದಿನಗಳಲ್ಲಿ ಪ್ರಾಚೀನ ಸಂಸ್ಕೃತಿ ಪರಂಪರೆ ಮುಂದುವರೆಯಬೇಕಾದರೆ ಸಮಾಜದಲ್ಲಿ ಎಲ್ಲಾ ಜನರಿಗೂ ಸರ್ಕಾರಗಳು ಸಹಾಯ ಹಸ್ತವನ್ನು ನೀಡಬೇಕಾಗಿದೆ. ಪ್ರಾಚೀನ ಪರಂಪರೆಯು ಬೆಳೆಯಬೇಕಾದರೆ ಮೊದಲಿಗೆ ಬ್ರಾಹ್ಮಣರಿಗೆ ಆದ್ಯತೆಯನ್ನು ನೀಡಬೇಕು. ಈ ನಿಟ್ಟಿನಲ್ಲಿ ದೇವಾಲಯಗಳು ಪೂಜೆಗೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಈ ಎಲ್ಲಾ ಬೆಳವಣಿಗೆಯನ್ನು ವೈಷ್ಣವ ಧರ್ಮದ ದೇವಾಲಯಗಳಲ್ಲಿ ಕಾಣಬಹುದಾಗಿದೆ. ನಾನು ಸಹಿತ ವೈಷ್ಣವ ದೇವಾಲಯಗಳನ್ನು ಕುರಿತು ಸವಿವರವಾಗಿ ಚರ್ಚಿಸಿದ್ದೇನೆ.

**ಐದನೆಯ ಅಧ್ಯಾಯವು** ಶಾಸನೋಕ್ತ ಜೈನಬಸದಿಗಳ ಹಿನ್ನೆಲೆಯನ್ನು ಕುರಿತು ಚರ್ಚಿಸಲಾಗಿದೆ. ಕ್ರಿ.ಪೂ.2ನೇ ಶತಮಾನದಿಂದ ಕ್ರಿ.ಶ.10ನೇ ಶತಮಾನದವರೆಗೂ ದೇಶದ ನಾನಾ ಭಾಗಗಳಲ್ಲಿ ಜೈನಯತಿಗಳು ವಾಸಕ್ಕಾಗಿಯೇ ಅಥವಾ ಜೈನ ಮಂದಿರಗಳಾಗಿಯೇ ಗುಹೆಗಳನ್ನು ಕೊರೆದು ಅಲ್ಲದೆ ಸ್ವಾಭಾವಿಕವಾಗಿ ಜೈನ ಮಂದಿರಗಳನ್ನು ತೆರೆದಿರುವುದು ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅನೇಕ ರಾಜ ಮನೆತನಗಳು ನೀಡಿದ ಪ್ರೋತ್ಸಾಹದಿಂದ ಜೈನ ಧರ್ಮ ಬೆಳೆಯಲು ಸಹಕಾರಿಯಾಗಿತ್ತು. ಆದರೆ ಪ್ರಸ್ತುತ ದಿನಗಳಲ್ಲಿ ಸಾಕಷ್ಟು ಗ್ರಾಮಗಳಲ್ಲಿ ಜೈನಬಸದಿಗಳು ಸಂಪೂರ್ಣವಾಗಿ ನಾಶವಾಗಿದೆ. ಈ ಹಿನ್ನೆಲೆಯಲ್ಲಿ ಶಾಸನಗಳ ಆಧಾರದಿಂದ ಜೈನಬಸದಿಗಳ ಮಾಹಿತಿಗಳನ್ನು ಪಡೆಯಲಾಗಿದೆ. ಉದಾಹರಣೆಗೆ ತೆರಕಣಾಂಬಿ, ಗುಂಡ್ಲುಪೇಟೆ, ಬೇರಂಬಾಡಿ, ಸಂಪಿಗೆಪುರ, ಹಂಗಳ ಗ್ರಾಮಗಳಲ್ಲಿ ಜೈನರ ಕುರಿತು ಶಾಸನಗಳಿವೆ. ಆದರೆ ಬಸದಿಗಳೇ ಇಲ್ಲವಾಗಿವೆ. ಆದರೆ ಕೆಲಸೂರಿನಲ್ಲಿ ಪ್ರಾಚೀನ ಕಾಲದ ಜೈನಬಸದಿಯು ಜೀರ್ಣೋದ್ಧಾರವಾಗಿದೆ. ಇಲ್ಲಿ ಅಂದಿನ ಕಾಲದ ಧಾರ್ಮಿಕ ಆಚರಣೆಗಳು ನಡೆಯುತ್ತಿದೆ. ಆದಕಾರಣ ಜೈನರ ಹಬ್ಬ ಆಚರಣೆಗಳನ್ನು ಕುರಿತು ಚರ್ಚಿಸಲಾಗಿದೆ. ಈ ಭಾಗದ ಜೈನ ಸಾಹಿತಿಗಳನ್ನು ತಿಳಿಸಲಾಗಿದೆ.

**ಆರನೆಯ ಅಧ್ಯಾಯದಲ್ಲಿ** ಗುಂಡ್ಲುಪೇಟೆ ತಾಲ್ಲೂಕಿನ ಇತರ ದೇವಾಲಯಗಳನ್ನು ಕುರಿತು ಚರ್ಚಿಸಲಾಗಿರುತ್ತದೆ. ಅವುಗಳಲ್ಲಿ ಶಕ್ತಿ ಪ್ರಧಾನವಾದ ದೇವತೆಗಳನ್ನು ಕುರಿತು ತಿಳಿಸಲಾಗಿದೆ. ಶಕ್ತಿದೇವತೆಗಳಲ್ಲಿ ಸಪ್ತಮಾತೃಕೆಯರನ್ನು ಕುರಿತು ಚರ್ಚಿಸಲಾಗಿದೆ.

ಶಕ್ತಿದೇವತೆಗಳಾದ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಹಿ, ಇಂದ್ರಾಣಿ, ಚಾಮುಂಡಿ, ಪಾರ್ವತಿ, ದುರ್ಗಿ ಅಥವಾ ದುರ್ಗಾ, ಮಹಿಷಮರ್ದಿನಿ ಕುರಿತು ಚರ್ಚಿಸಲಾಗಿದೆ.

ಕೆಲವೊಂದು ಗ್ರಾಮಗಳಲ್ಲಿರುವ ಶಕ್ತಿ ದೇವತೆಗಳಾದ ಗದ್ದೆಮಾರಮ್ಮ ಕೆಲಸೂರು, ಮಾರಮ್ಮನ ಜಾತ್ರೆ ಪಡಗೂರು, ನಿಟ್ರೆ ಮಾದೇವಮ್ಮ, ಪಟ್ಟಲದಮ್ಮನ ಹಬ್ಬ, ರಾಘವಪುರ ನಡುಹೊಲದಮ್ಮ, ಚನ್ನಮಲ್ಲಿಪುರ, ಕಸಕಲದಮ್ಮ, ಬರಗಿ, ಹಸಗೂಲಿ ಮಾರಮ್ಮ, ಪ್ಲೇಗ್ ಮಾರಮ್ಮ, ಗುಂಡ್ಲುಪೇಟೆ, ಮಾಲಾರಮ್ಮ ಕಬ್ಬಳ್ಳಿ, ಪಟ್ಟಲದಮ್ಮ, ಗುಂಡ್ಲುಪೇಟೆ ಇನ್ನೂ ಮೊದಲಾದ ಮಾರಿಗಳ ವಿಚಾರಗಳನ್ನು ಕುರಿತು ಚರ್ಚಿಸಲಾಗಿದೆ. ಅಲ್ಲದೆ ಗುಂಡ್ಲುಪೇಟೆ ತಾಲ್ಲೂಕಿನ ನಾಗದೇವತಾರಾಧನೆ, ಸೂರ್ಯಗ್ರಹಣ ಹಿನ್ನೆಲೆಯನ್ನು ಕುಂತಿಪೂಜೆ, ರಾವಳೇಶ್ವರನ ಪರಂಪರೆಯನ್ನು ಚರ್ಚಿಸಲಾಗಿದೆ. ರಾಕಸಮ್ಮ ಸಂಸ್ಕೃತಿ, ತಮಿಳು ಸಂಸ್ಕೃತಿ, ಉತ್ಸವಮೂರ್ತಿಗಳ ಪರಂಪರೆ ಕಾಡುಬುಡಕಟ್ಟು ಜನರ ಧಾರ್ಮಿಕತೆಗಳು, ಬುಡಕಟ್ಟು ಸೋಲಿಗರ ಹಬ್ಬಗಳ ಆಚರಣೆಗಳು ಮೊದಲಾದವನ್ನು ಕುರಿತು ಚರ್ಚಿಸಲಾಗಿದೆ.

**ಏಳನೆಯ ಅಧ್ಯಾಯದಲ್ಲಿ** ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಂಡುಬರುವ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು, ವೀರಗಲ್ಲು, ಮಾಸ್ತಿಕಲ್ಲು ಇನ್ನಿತರ ಬಿಡಿಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಪ್ರಾರಂಭದಲ್ಲಿ ಬೃಹತ್ ಶಿಲಾಗೋರಿಗಳನ್ನು ಕುರಿತು ತಿಳಿಸಲಾಗಿದೆ. ಮೊದಲ ಬಾರಿಗೆ ರಾಬರ್ಟ್ ಬ್ರೂಸ್‌ಫೂಟ್‌ರವರು 1881 ರಲ್ಲಿಯೇ ಕರ್ನಾಟಕದ ಹಲವಾರು ಪ್ರಾಂತ್ಯಗಳಲ್ಲಿ ಪ್ರಾಚೀನ ಮಾನವನ ನೆಲೆಗಳನ್ನು ಪತ್ತೆ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕರುಗಳಾದ ಪ್ರೊ.ಎ.ವಿ.ನರಸಿಂಹಮೂರ್ತಿ, ಪ್ರೊ.ಎಂ.ಶೇಷಾದ್ರಿ. ಪ್ರೊ.ಎಂ.ಎಸ್.ಕೃಷ್ಣಮೂರ್ತಿ, ಡಾ.ಡಿ.ವಿ.ದೇವರಾಜು ಇನ್ನೂ ಮೊದಲಾದವರು ಈ ರೀತಿಯ ನೆಲೆಗಳನ್ನು ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಸಹಿತ ಗುಂಡ್ಲುಪೇಟೆ ತಾಲ್ಲೂಕಿನ ನಾನಾ ಗ್ರಾಮಗಳಲ್ಲಿ ಬೃಹತ್ ಶಿಲಾಗೋರಿಗಳನ್ನು ಗುರುತಿಸಿರುತ್ತೇನೆ. ಉದಾಹರಣೆಗೆ ಹೊಸದಾಗಿ ನಾನು ಕ್ಷೇತ್ರಕಾರ್ಯದಲ್ಲಿ ಹಸುಗೂಲಿ, ಆಲತ್ತೂರು, ರಾಘವಪುರ, ಹಿರೇಕಾಟಿ, ಕೆಲಸೂರು, ಕುಲಗಾಣ, ಸೋಮಹಳ್ಳಿ, ವೀರನಪುರ, ಪಂಜನಹಳ್ಳಿ, ಬೊಮ್ಮಲಾಪುರ, ಪಡಗೂರು, ಶಿವಪುರ, ಮಸಹಳ್ಳಿ ಕಟ್ಟೆ, ಭೀಮನ ಬೀಡು ಗ್ರಾಮಗಳಲ್ಲಿ ಬೃಹತ್ ಶಿಲಾ ಸಮಾಧಿಗಳನ್ನು ಪತ್ತೆ ಮಾಡಲಾಗಿದೆ. ಇದೊಂದು ಮಹತ್ತರವಾದ ಸಂಶೋಧನೆಯಾಗಿದೆ.

ನಂತರ ಭಾಗದಲ್ಲಿ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳನ್ನು ಕುರಿತು ಚರ್ಚಿಸಲಾಗಿದೆ. ಅಂದಿನ ಕಾಲದ ಮಹಾಜನತೆ, ಜನಸಾಮಾನ್ಯರು, ಬದುಕಿದ ರೀತಿ ಅವರುಗಳು ಅನುಸರಿಸಿದ

ಧರ್ಮ, ಬೆಳೆಸಿದ ಕಲೆ, ಅವರ ಜೀವನದ ಸಮಸ್ಯೆಗಳು ಇವುಗಳನ್ನು ನಾವು ಅನೇಕ ವೀರಗಲ್ಲುಗಳಲ್ಲಿ ಕಾಣಬಹುದಾಗಿದೆ. ಅಂದಿನ ಕಾಲಕ್ಕೆ ರಾಜರು, ಸೈನಿಕರು, ಮಂತ್ರಿಗಳು, ಇನ್ನಿತರರು ಯುದ್ಧದಲ್ಲಿ ಹೋರಾಡಿ ಮಡಿದವರ ನೆನಪಿಗಾಗಿ ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ಅಲ್ಲದೆ ಮಹಿಳೆಯರನ್ನು ಮಾನಭಂಗಕ್ಕೆ ಯಾರಾದರೂ ಪ್ರಯತ್ನಿಸಿದಾಗ ಅವರನ್ನು ಆ ಸಮಯದಲ್ಲಿ ರಕ್ಷಿಸುವ ಸಲುವಾಗಿ ಹೋರಾಡಿ ವೀರಮರಣವನ್ನು ಹೊಂದುತ್ತಿದ್ದರು. ಇಂತಹವರ ಹೆಸರಿಗೆ ವೀರರ ಸ್ಮಾರಕ ಶಿಲೆಯನ್ನು ವೀರಗಲ್ಲು ಎಂದು ಕರೆಯಲಾಗುತ್ತದೆ. ಕೆಲವೊಂದು ವೀರಗಲ್ಲಿನಲ್ಲಿ ಶಾಸನ ಇದೆ.

ಕೆಲವೊಂದು ವೀರಗಲ್ಲಿನಲ್ಲಿ ಶಾಸನಗಳಿಲ್ಲ. ಆದಕಾರಣ ಶಾಸನ ಸಹಿತವಾದ ವೀರಗಲ್ಲುಗಳು ಶಾಸನರಹಿತವಾದ ವೀರಗಲ್ಲು ಸಹ ಗುಂಡ್ಲುಪೇಟೆ ತಾಲ್ಲೂಕಿನಲ್ಲಿದೆ. ಇವುಗಳನ್ನು ಅಧ್ಯಯನ ನಡೆಸಲಾಗಿದೆ. ಗುಂಡ್ಲುಪೇಟೆ ತಾಲ್ಲೂಕನ್ನು ನಾನು ಕ್ಷೇತ್ರ ಕಾರ್ಯ ಸಮಯದಲ್ಲಿ 55 ಹೆಚ್ಚು ವೀರಗಲ್ಲುಗಳನ್ನು ಪತ್ತೆ ಮಾಡಿದ್ದೇನೆ. ಉದಾಹರಣೆಗೆ ಕಗ್ಗಳ, ತೊಂಡವಾಡಿ, ಕಂದೇಗಾಲ, ಹಸುಗೂಲಿ, ಆಲತ್ತೂರು, ಬೇಗೂರು, ಪಡಗೂರು, ಚಿಕ್ಕಾಟಿ, ಹೊರೆಯಾಲ, ಕೋಟೆಕೆರೆ, ರಾಘವಪುರ, ನಿಟ್ರೆ, ಕಮರಹಳ್ಳಿ, ಸಿಂಗವಾಡಿ, ಕುಲಗಾಣ, ಗುಂಡ್ಲುಪೇಟೆ, ಯರಿಯೂರು, ಬೇರಂಬಾಡಿ, ಮಸಹಳ್ಳಿ, ಹೊಂಗಳ್ಳಿ, ಮಲ್ಲಯ್ಯನಪುರ ಇನ್ನೂ ಮೊದಲಾದ ಗ್ರಾಮಗಳಲ್ಲಿ ಕಂಡುಬರುವ ವೀರಗಲ್ಲುಗಳನ್ನು ಚರ್ಚಿಸಲಾಗಿದೆ. ಹಾಗೆಯೇ ಮಾಸ್ತಿಕಲ್ಲುಗಳನ್ನು ಕುರಿತು ಚರ್ಚಿಸಲಾಗಿದೆ. ಪತಿಯೊಂದಿಗೆ ಸಹಗಮನವನ್ನು ಮಾಡಿಕೊಳ್ಳುತ್ತಿದ್ದ ಮಹಿಳೆಯ ಸ್ಮಾರಕವನ್ನು ಮಾಸ್ತಿಕಲ್ಲು ಅಥವಾ ಮಹಾಸತಿಕಲ್ಲುಗಳೆಂದು ಕರೆಯುತ್ತಾರೆ. ಈ ರೀತಿಯ ಮಹಾಸತಿ ಕಲ್ಲುಗಳನ್ನು ಪತ್ತೆ ಮಾಡಲಾಗಿದೆ. ಇದೊಂದು ಹೊಸ ಶೋಧನೆಯಾಗಿದೆ.

ಗುಂಡ್ಲುಪೇಟೆ ತಾಲ್ಲೂಕಿನ ಕುರಿತು ಎಫಿಗ್ರಾಫಿಯ ಕರ್ನಾಟಕ ಸಂಪುಟ-3 ರಲ್ಲಿ ಮಾಸ್ತಿಕಲ್ಲು ಕುರಿತು ಎರಡು ಮಾಸ್ತಿಕಲ್ಲುಗಳಿವೆ. ಉದಾಹರಣೆಗೆ ಯರಿಯೂರು, ಮತ್ತು ಕುಣಹಳ್ಳಿಯಲ್ಲಿ ಕಂಡುಬಂದಿದೆ. ನಾನು ಕ್ಷೇತ್ರ ಕಾರ್ಯ ಸಂದರ್ಭದಲ್ಲಿ 23ಕ್ಕೂ ಹೆಚ್ಚು ಮಾಸ್ತಿಕಲ್ಲುಗಳನ್ನು ಪತ್ತೆ ಮಾಡಿದ್ದೇನೆ.

ಅಲ್ಲದೆ ಕಮರಹಳ್ಳಿ, ಆಲತ್ತೂರು, ಹಸುಗೂಲಿ, ವೀರನಪುರ, ಯರಿಯೂರು, ಕಂದೇಗಾಲ, ಹೊನ್ನೇಗೌಡಹಳ್ಳಿ, ಮಲ್ಲಯ್ಯನಪುರ ಗ್ರಾಮಗಳಲ್ಲಿ ಮಾಸ್ತಿಕಲ್ಲುಗಳನ್ನು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪತ್ತೆ ಮಾಡಲಾಗಿದೆ. ಇದೊಂದು ಹೊಸ ಶೋಧನೆಯಾಗಿದೆ.

ಬಿಡಿಶಿಲ್ಪಗಳಲ್ಲಿ ರಾವಳೇಶ್ವರನ ಶಿಲ್ಪಗಳನ್ನು ಪತ್ತೆ ಮಾಡಲಾಗಿದೆ. ರಾವಳೇಶ್ವರ ಶಿಲ್ಪಗಳು ಕ್ರಿ.ಶ.10–11ನೇ ಶತಮಾನಕ್ಕೆ ಸೇರಿವೆ ಎಂದು ಹಿರಿಯ ಸಂಶೋಧಕರು ಗುರುತಿಸಿದ್ದಾರೆ. ಈ ಹಿನ್ನೆಲೆಯಿಂದ ನಾನು ಸಹಿತ ಈ ರೀತಿಯ ರಾವಳೇಶ್ವರ ಶಿಲ್ಪವನ್ನು ಗುಂಡ್ಲುಪೇಟೆ ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಸ್ವಪ್ರಯತ್ನದಿಂದ ಕ್ಷೇತ್ರಕಾರ್ಯದ ಸಮಯದಲ್ಲಿ ಪತ್ತೆ ಮಾಡಿರುತ್ತೇನೆ. ಇದು ಸಹ ವಿಶೇಷ ಶೋಧನೆಯಾಗಿದೆ.

ಆಲತ್ತೂರು, ಬಂಡೀಪುರ, ಮಸಹಳ್ಳಿ, ಕೊಡಸೋಗೆ, ಯರಿಯೂರು, ಸೋಮಹಳ್ಳಿ, ಕಂದೇಗಾಲ, ಪಂಜನಹಳ್ಳಿ ಗ್ರಾಮಗಳಲ್ಲಿ ರಾವಳೇಶ್ವರನ ಶಿಲ್ಪಗಳನ್ನು ಪತ್ತೆ ಮಾಡಲಾಗಿದೆ. ಅಲ್ಲದೆ ಇನ್ನಿತರ ಬಿಡಿಶಿಲ್ಪಗಳನ್ನು ಸಹ ಪತ್ತೆ ಮಾಡಿ ಅವುಗಳ ವಾಸ್ತು ಲಕ್ಷಣಗಳನ್ನು ಚರ್ಚಿಸಲಾಗಿದೆ. ಶಿಲ್ಪಗಳ ಶೈಲಿ ಮತ್ತು ಪ್ರತಿಮಾಲಕ್ಷಣದಿಂದ ಶಿಲ್ಪಗಳನ್ನು ನೋಡಲಾಗಿದೆ. ಶಿಲ್ಪಗಳಲ್ಲಿ ಮುದ್ರೆಗಳು, ಶಿಲ್ಪಗಳು, ಭಂಗಿಗಳು, ಆಯುಧಗಳು, ವಾಹನಗಳು, ಆಭರಣಗಳು, ಶೈವ ಶಿಲ್ಪ, ಮಹಿಷಮರ್ದಿನಿ, ಸೂರ್ಯಶಿಲ್ಪ, ಗಣಪತಿ ಶಿಲ್ಪ, ಸಪ್ತಮಾತೃಕೆಯರು, ವೀರಭದ್ರ ಶಿಲ್ಪಗಳು, ಕುದುರೆ ಮೇಲೆ ಕುಳಿತ ರಾಜ, ಭೈರವಶಿಲ್ಪ, ಶಿವಲಿಂಗಗಳು, ನಂದಿಶಿಲ್ಪ, ಕೂರ್ಮಾವತಾರ, ವರಹಾವತಾರ, ನರಸಿಂಹಾವತಾರ, ವಾಮನ ಅವತಾರ ಮತ್ತು ತ್ರಿವಿಕ್ರಮನ ಅವತಾರ, ಪರಶುರಾಮ, ರಾಮ, ಬಲರಾಮ ಮತ್ತು ಬಲಭದ್ರ, ಶ್ರೀಕೃಷ್ಣ, ವರದರಾಜಶಿಲ್ಪ ಇನ್ನಿತರ ಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಇದೊಂದು ಮಹತ್ವದ ಶೋಧನೆಯಾಗಿದೆ.

**ಎಂಟನೆಯ ಅಧ್ಯಾಯವು** ಕೊನೆಯ ಅಧ್ಯಾಯವಾಗಿದ್ದು, ಉಪಸಂಹಾರವಾಗಿದೆ. ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿಗೆ ಸಂಬಂಧಿಸಿದಂತೆ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯಲ್ಲಿ ದೇವಾಲಯಗಳ ವಾಸ್ತು ಮತ್ತು ಶಿಲ್ಪಕಲೆಯ ವಿವರಣೆಯ ಜೊತೆಗೆ ಸಾಂಸ್ಕೃತಿಕವಾಗಿ ಪ್ರತಿ ಇತಿಹಾಸದ ಬೆಳವಣಿಗೆಯನ್ನು ನೀಡಲಾಗಿದೆ. ಈ ಅಧ್ಯಯನದ ಆಧಾರದಿಂದ ತಿಳಿಯಬಹುದಾದ ಒಂದು ಮಹತ್ವದ ವಿಚಾರವೇನೆಂದರೆ, ಸಾಂಸ್ಕೃತಿಕವಾಗಿ ಕರ್ನಾಟಕದ ಪರಂಪರೆಗೆ ಆಯಾ ರಾಜಮನೆತನದ ಕೊಡುಗೆಗಳು ಅಪಾರವಾಗಿವೆ. ಆಯಾ ರಾಜವಂಶಸ್ಥರ ಆಕ್ರಮಣದ ಫಲಿತಾಂಶವು ಬಹಳ ಸ್ಪಷ್ಟವಾಗಿ ಈ ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಇದೆ ಎಂಬುದನ್ನು ನನ್ನ ಸಂಶೋಧನೆಯ ಮುಖಾಂತರ ಪ್ರತಿಯೊಂದು ಅಧ್ಯಯನದ ಫಲಿತಾಂಶವನ್ನು ನೀಡಲಾಗಿದೆ.

ಕೊನೆಯಲ್ಲಿ ಅನುಬಂಧದಲ್ಲಿ ಹಲವಾರು ಗ್ರಂಥಸೂಚಿಯನ್ನು ಈ ಭಾಗದ ನಕ್ಷೆಗಳನ್ನು ಕೊನೆಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಸಂಬಂಧಿಸಿದ ಛಾಯಾಚಿತ್ರಗಳನ್ನು ಸಹ ನೀಡಲಾಗಿರುತ್ತದೆ. ಛಾಯಾಚಿತ್ರಗಳ ಹಿನ್ನೆಲೆಯಲ್ಲಿ ಇದುವರೆಗೂ ಈ ಭಾಗದಲ್ಲಿ ಯಾರು ಪತ್ತೆ

ಮಾಡಲಾಗಿರುವಂತಹ ಶಿಲ್ಪಗಳನ್ನು ರಾವಳೇಶ್ವರ ಶಿಲ್ಪಗಳನ್ನು ಬೃಹತ್ ಶಿಲಾಸಂಸ್ಕೃತಿಗೆ ಬೃಹತ್ ಶಿಲಾಸಮಾಧಿಗಳನ್ನು ಪ್ರಾಚೀನ ನೆಲೆಗಳನ್ನು ವಿಶೇಷವಾಗಿ ಶೋಧನೆ ಮಾಡಲಾಗಿದೆ. ಒಟ್ಟಾರೆ ಈ ಭಾಗದ ದೇವಾಲಯಗಳ ಹಿನ್ನೆಲೆಯಲ್ಲಿ ಪ್ರತಿಯೊಂದು ಹಂತದ ಪರಂಪರೆಯನ್ನು ಕ್ಷೇತ್ರಕಾರ್ಯದ ಮುಖಾಂತರ ಸಂಶೋಧನೆಯನ್ನು ನಡೆಸಿ ಮಹಾಪ್ರಬಂಧವನ್ನು ರಚಿಸಲಾಗಿದೆ.

# ಗ್ರಂಥಸೂಚಿ (BIBLIOGRAPHY)

## English Original Source


1. Annual Report of the Archaeological Survey of India, 1887 onwards.
2. Annual Report on Epigraphy-1887 onwards.
3. Annual Report on Kannada Research in Bombay, Province.
4. Annual Report of the Mysore Archaeological Department, 1906
5. Epigraphia Carnatica, Vols. 1 – XVII onwards
6. Epigraphia Indica, Vols. 1 – XXXVII onwards
7. Hyderabad Archaeological Series 1915 onwards
8. Karnataka Inscriptions Vols. 1 –VI, Dharwad, 1941-73 Onwards.
9. South Indian Inscriptions series, 1890 onwards.


### ಗೆಜೆಟಿಯರ್


1. ಕರ್ನಾಟಕ ರಾಜ್ಯ ಗೆಜೆಟಿಯರ್ – ಭಾಗ–1 (ಸಂ) ಸೂರ್ಯನಾಥ ಕಾಮತ್–1984.
2. ಕರ್ನಾಟಕ ರಾಜ್ಯ ಗೆಜೆಟಿಯರ್ – ಭಾಗ–2 (ಸಂ) ಸೂರ್ಯನಾಥ ಕಾಮತ್–1985.
3. ಕರ್ನಾಟಕ ರಾಜ್ಯ ಗೆಜೆಟಿಯರ್ ಇಲಾಖೆ ಕಪಿಡಿ, ಕರ್ನಾಟಕ ಸರ್ಕಾರ, 1996.
4. ಕರ್ನಾಟಕ ರಾಜ್ಯ ಗೆಜೆಟಿಯರ್ – ಭಾಗ–3 (ಸಂ) ಸೂರ್ಯನಾಥ ಕಾಮತ್–1986.
5. ಚಾಮರಾಜನಗರ ಜಿಲ್ಲಾ ಗೆಜೆಟಿಯರ್, ಇತೇಶ್ ಮುಲ್‌ಹಕ್, ಮುಖ್ಯ ಸಂಪಾದಕರು, ಕರ್ನಾಟಕ ಗೆಜೆಟಿಯರ್ ಇಲಾಖೆ, ಸರ್ಕಾರದ ಪ್ರಕಟಣೆ 2015–16


### ವಿಶ್ವಕೋಶ


1. ಕನ್ನಡ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಪ್ರಸಾರಾಂಗ, ಮೈಸೂರು (ಸಂಬಂಧಪಟ್ಟ ಸಂಪುಟಗಳು)
2. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಪ್ರಸಾರಂಗ, ಮೈಸೂರು–1979.


### ನಿಘಂಟುಗಳು


1. ಕನ್ನಡ ನಿಘಂಟು

# ಕನ್ನಡ ಗ್ರಂಥಗಳು


1. ಅಣ್ಣಿಗೇರಿ ಎಂ.ಎಂ. : ಶಾಸನಗಳ ಸಂಗ್ರಹ–1975
2. ಅಪರ್ಣ ಕೂ.ಸ. : ದೇವಾಲಯ ವಾಸ್ತುಶಿಲ್ಪ ಪರಿಚಯ, ಹಂಪಿ, 1999.
3. ಆಲೂರು ವೆಂಕಟರಾಯರು : ಕರ್ನಾಟಕ ವೀರರತ್ನಗಳು, 1920
4. ಆಚಾರ್ ಕೆ.ವಿ. : ಕರ್ನಾಟಕ ರಂಗಭೂಮಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1985
5. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂಪುಟ–1, ಬೆಂಗಳೂರು 2002, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಬೆಂಗಳೂರು, ಐ.ಬಿಹೆಚ್., 1982.

   ಜನ–ಜನಪದ, ಜಾನಪದ, ಸಂಪುಟ–2, ಮೈಸೂರು 2002.
6. ಚನ್ನಬಸಪ್ಪ ಎನ್. ಪಾಟೀಲ : ಕರ್ನಾಟಕ ಶಿಲ್ಪಗಳಲ್ಲಿ ಪಂಚತಂತ್ರ, ಮೈಸೂರು, 1994
7. ಚೆನ್ನಕ್ಕ ಎಲಿಗಾರ : ಮಾಸ್ತಿಕಲ್ಲುಗಳು, ಧಾರವಾಡ, 1977
8. ದೇವರ ಕೊಂಡಾರೆಡ್ಡಿ : ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಬೆಂಗಳೂರು, 1994.
9. ದೇಸಾಯಿ ಪಿ.ಬಿ. ಮತ್ತು ಸಾಲೆತೊರೆ ಬಿ.ಎ. : ಕನ್ನಡನಾಡಿನ ಚರಿತ್ರೆ, ಬೆಂಗಳೂರು, 1975
10. ದಿವಾಕರ್ ಆರ್.ಆರ್. : ಕರ್ನಾಟಕದ ಪರಂಪರೆ ಸಂಪುಟ–1 ಮತ್ತು 2, ಬೆಂಗಳೂರು, 1970
11. ದೇವುಡು ಎನ್.ಎಸ್. : ಕರ್ನಾಟಕ ಸಂಸ್ಕೃತಿ, ಬೆಂಗಳೂರು, 1961
12. ದೇರೆಬೈಲು ಮುರಳಿಧರ್ ರಾವ್ : ವಾಸ್ತುಶಿಲ್ಪ ಮತ್ತು ಭಾರತೀಯ ಸಂಪ್ರದಾಯ ಅಮೂಲ್ಯ ರತ್ನಗಳು, ಮೈಸೂರು, 1996
13. ಗೋಪಾಲ ಬಾ.ರಾ. (ಸಂ) : ಕರ್ನಾಟಕ ಕಲೆ ವಾಸ್ತು (ನಾಲ್ಕನೆಯ ಸಂಪುಟ) ಬೆಂಗಳೂರು, 1993.
14. ಗೋಪಾಲ ಬಾ.ರಾ. : ಕರ್ನಾಟಕದಲ್ಲಿ ರಾಮಾನುಜಾಚಾರ್ಯರು, ಮೈಸೂರು, 1984
15. ಹಂಪನಾಗರಾಜಯ್ಯ : ಯಕ್ಷ–ಯಕ್ಷಿಯರು, ಬೆಂಗಳೂರು, 1976
16. ಹಿರೇಮಠ ಬಿ.ಆರ್. : ವೀರಗಲ್ಲುಗಳು, ಧಾರವಾಡ, 1976

17. ಜ್ಞಾನಾನಂದ ಜಿ. : ಶಿಲ್ಪದರ್ಶನ, ಸಂಪುಟ–1 ಮತ್ತು 2, ಹಂಪಿ, 2002.

18. ಕರೀಂಖಾನ್ ಎಸ್.ಎ. (ಪ್ರ.ಸಂ.) : ಜಾನಪದ ಗಂಗೋತ್ರಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1989

19. ಕೃಷ್ಣರಾವ್ ಎಂ.ಹೆಚ್. : ಕನ್ನಡನಾಡಿನ ಚರಿತ್ರೆ, ಕರ್ನಾಟಕ ಕಲೆ, ಬೆಂಗಳೂರು, 1976

20. ಕೃಷ್ಣಮೂರ್ತಿ ಸಿ.ಪಿ. : ಶಾಸನಶಾಸ್ತ್ರ ಪ್ರವೇಶ, 2002

21. ಕಾರಂತ ಶಿವರಾಮ : ಕರ್ನಾಟಕ ಚಿತ್ರಕಲೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1971

22. ಕುಮಾರಸ್ವಾಮಿ ಕೆ.ಎಸ್. : ಪ್ರಾಚೀನ ಕರ್ನಾಟಕದ ಶಿಲ್ಪಾಚಾರ್ಯರು, ಬೆಂಗಳೂರು

23. ಕೃಷ್ಣರಾವ್ ಅ.ನ. (ಸಂ) : ಭಾರತೀಯ ಕಲಾದರ್ಶನ, ಬೆಂಗಳೂರು, 1964

24. ಕೃಷ್ಣಶರ್ಮ ಬೆಟಗೇರಿ : ಕರ್ನಾಟಕದ ಜನಜೀವನ, ಧಾರವಾಡ, 1963

25. ಕಲಬುರ್ಗಿ ಎಂ.ಎಂ. : ಸಮಾಧಿ ಬಲಿದಾನ, ವೀರಮರಣ, ಸ್ಮಾರಕಗಳು, ಬೆಂಗಳೂರು, 1980

26. ಕೃಷ್ಣರಾವ್ ಎಂ.ವಿ. ಹಾಗೂ ಕೇಶವ ಭಟ್ಟ : ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, 1970

27. ಮಂಜುನಾಥ ಎಂ.ಜೆ. ಮತ್ತು ದೇವರಾಜಸ್ವಾಮಿ ಜಿ.ಕೆ. : ಕನ್ನಡಲಿಪಿಯ ವಿಕಾಸ, 2004

28. ನಾಗೇಗೌಡ ಹೆಚ್.ಎಲ್. : ಪ್ರವಾಸಿ ಕಂಡ ಇಂಡಿಯಾ, ಸಂಪುಟ–1 ರಿಂದ 7, ಬೆಂಗಳೂರು

29. ನರಸಿಂಹಮೂರ್ತಿ ಎ.ವಿ. : ಕನ್ನಡ ಲಿಪಿಯ ಉಗಮ ಮತ್ತು ವಿಕಾಸ, ಮೈಸೂರು, 1968.

ಭಾರತೀಯ ನಾಣ್ಯ ಪರಂಪರೆ, 2008.

30. ನಂದೀಮಠ ಎಸ್.ಹೆಚ್. : ಕನ್ನಡನಾಡಿನ ಚರಿತ್ರೆ, ಬೆಂಗಳೂರು, 1975

31. ಪರಶಿವಮೂರ್ತಿ ಡಿ.ವಿ. : ಕನ್ನಡ ಶಾಸನ ಶಿಲ್ಪ, ಹಂಪಿ, 1999.

32. ಪದ್ಮ ಎಂ.ಬಿ ಮತ್ತು ವೆಂಕಟರತ್ನಂ ಎ.ವಿ. : ಇತಿಹಾಸ ಸಂಶೋಧನಾ ಮಾರ್ಗ, 1999.

33. ರಮೇಶ್ ಕೆ.ವಿ. : ಕರ್ನಾಟಕ ಶಾಸನ ಸಮೀಕ್ಷೆ, ಬೆಂಗಳೂರು–1971.

34. ರಂಗಸ್ವಾಮಿ ಎಸ್. : ಕರ್ನಾಟಕದ ದೇವಾಲಯಗಳು, ಬೆಂಗಳೂರು, 1994.

35. ರಘುನಾಥ ಭಟ್ ಹೆಚ್.ಆರ್. : ಕರ್ನಾಟಕ ಶಾಸನ ಕಲೆ, ಮೈಸೂರು, 1977.

36. ಶ್ರೀಕಂಠಶಾಸ್ತ್ರಿ ಎಸ್. : ಹೊಯ್ಸಳ ವಾಸ್ತುಶಿಲ್ಪ, ಮೈಸೂರು, 1965,
ಭಾರತೀಯ ಸಂಸ್ಕೃತಿ, ಮೈಸೂರು, 1954

37. ಶೇಠ ಬಿ.ಎಸ್. : ಕರ್ನಾಟಕದಲ್ಲಿ ಸತಿಪದ್ಧತಿ, ಬೆಂಗಳೂರು, 1991

38. ಶ್ರೀನಿವಾಸ ವಿ. ಪಾಡಿಗಾರ್ : ಭಾರತೀಯ ಶಾಸನ ಆಕರಗಳು, 2004,
ಪುರಾತತ್ವ ಪರಿಚಯ, 1997.
ಬಾದಾಮಿ ಚಾಲುಕ್ಯರ ಶಾಸನಗಳು ಮತ್ತು ಶಿಲ್ಪಕಲೆ, 2008.

39. ಶಾರದ ಪ್ರಸಾದ್ ಎನ್.ಎಸ್. : ಭಾರತದ ಪ್ರೌಢ ಇತಿಹಾಸ, 2003.

40. ಶ್ರೀನಿವಾಸನ್ ಪಿ.ಆರ್. : ದಕ್ಷಿಣ ಭಾರತದ ದೇವಾಲಯಗಳು, ಮೈಸೂರು 1959.

41. ಶ್ರೀನಿವಾಸಮೂರ್ತಿ ಎಚ್.ವಿ. : ಇತಿಹಾಸ ಸಂಶೋಧನ ಸಮೀಕ್ಷೆ, 2000

42. ಸೂರ್ಯನಾಥ್ ಕಾಮತ್ : ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಬೆಂಗಳೂರು,1 973.

43. ಸಿಂದಗಿ ರಾಜಶೇಖರ್ : ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ,ದ್ ಹಾರವಾಡ, 1988.

44. ತಿಪ್ಪೇರುದ್ರಸ್ವಾಮಿ ಹೆಚ್. : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು, 1985

45. ವೆಂಕೋಬರಾವ್ ಎಚ್. : ಮೈಸೂರು ದೇಶದ ವಾಸ್ತುಶಿಲ್ಪ, ಬೆಂಗಳೂರು, 1928.

## ಇತ್ಯಾದಿ

1. ಇತಿಹಾಸ ದರ್ಶನ ಸಂಪುಟಗಳು – ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.
2. ಮಾನವಿಕ ಕರ್ನಾಟಕ ಸಂಪುಟಗಳು–ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಮೈಸೂರು.
3. ಪ್ರಬುದ್ಧ ಕರ್ನಾಟಕ ಸಂಪುಟಗಳು– ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

## ENGLISH BOOKS


1 Altekar A.S. :
- History of Village Communities in Western India Bombay, 1927.
- Position of Women in Hindu Civilisation Banaras, 1956
- Rashtrakutas and their Tirnes, Poona, 1967

2 Annigeri A.M. : A Guide to the Kannada Inscriptions, 1958.

3 Appadorai H. : Economic Conditions in South India Vol1 &2, (AD 1000 to 1500) Madras 1936.

4 Ayingar : Sources of Vijayanagara History, Delhi, 1986

5 Acharya P.K. :
- Indian Architecture according to manasara Silpa, Sestra, Madras, 1927.
- Architecture of Manasara of Ford, 1933.
- An Encyclopeadia of Hindu Architecture, London, 1946.
- A Dictionary of Hindu Architrecture, oxford, 1927

6 Alain Denielou : Hindu Polythesism, New york, 1964.

7 Balasubramanya S.R. :
- The Early chola Art, Bombay 1966.
- The Chola Art, Asian Publishing House, Bombay, 1966.

8 Buhler G. : Indian Peleography Culcutta India Studies past & Present 1959.

9 Briggs Matin S. : Concise Encyclpedia of Architecture, London 1959.

10 Bhandarkar R.G. : Vaishnavism, Saivism and Minor Religious System (collected works 4) Varanasi, 1965

11 Basavaraju K.R. : History of Culture of Karnataka, Dharwad, 1984.

12 Bharath Iyer : India Art - A Short Introduction, Bombay, 1958.

| | | | |
|---|---|---|---|
| 13 | Bhattacharya B.C. | : | Jaina Iconography, Lahore, 1939. |
| 14 | Bhattacharya Haridasa | : | The Cultural Heritage of India Vol. IV, Calcutta, 1956. |
| | | : | |
| 15 | Burnell A.C. | : | Elements of South Indian Paleography, Indological Book house, Varanasi, 1957. |
| 16 | Derett J.M. | : | The Hoysala Oxford Univesity, Print Madras, 1957. |
| 17 | Dayalan O.OL. | | Early Temples of South India Art, ASI, New Delhi, 1992. |
| 18 | Desai P.B. | | A History of Karnataka, Dharwad, 1970 |
| 19 | Desai P.B. | | Jainism in South India and some jaina epigraphy sholapura, 1957. |
| 20 | Dikshith G.S. | | Local Self Government in Medival Karnataka, Dhwarwad, 1964. |
| 21 | Divakar R.R. | | Karnataka Through Age Bangalore, 1968. |
| 22 | Dhakya M.A. | | Encyclopedia of Indian Temple Architecture Volume-I, Part-3, South India Upper<br>Encyclopedia of India Temple Architecture, Volume II, Part-3, North India 2 Volumes, 1998. |
| 23 | Gopal B.R. | | Minor Dynasty of South India Karnataka, Madras, 1981. |
| 24 | Gurutaj Rao B.K. | | The Megalithic Culture in South India, Mysore, 1972. |
| 25 | Ghosh A. | | Jaina Art and Architecture Vol.I,II, New Delhi, 1975. |
| 26 | George Michael | | Encyclopedia of Indian Temple Architecture South India, Dravidadisa Later, Phase, Delhi, 2001. |
| 27 | Ismail K. | | Karnataka Temples, Delhi, 1984. |
| 28 | Jouvern Debriel U | | Dravidian Architecture (Ed. SK Krishnaswamy Iyengar) New Delhi, 1984. |

| | | |
|---|---|---|
| 29 | Kalaghatg T.G. | Jainism in Karnataka, A Study Mysore, 1976. |
| 30 | Krishna Shastry H. | South India Images of Gods and Goddesses, Madras, 1916. |
| 31 | Krishna Rao M.V. | The Gangas of Talakad, Madras, 1936. |
| 32 | Krishna Swamy Iyengar | - Dravidian Architecture, Varanasi, 1984.<br>- Early History of Vaishnavism in South India, 1920<br>- Ancient India and South Indian history and Culture, 1941. |
| 33 | Kramrish Stella | Indian Sculpture, Delhi, 1981. |
| 34 | Kuppaswamy G.R. | Economic condition in Karnatakas, Dharwad, 1975. |
| 35 | Mugali R.S. | The Heritage of Karnataka, Bangalore, 1946. |
| 36 | Mahalingam T.V | The South India Temple Complex, Dharwad, 1970.<br>The South India Polity, Madras, 1955. |
| 37 | Michel George | The Hindu Temples, Bombay, 1977 |
| 38 | Neelakanta Shastry K.H. | South India History, 1954.<br>Aspects of Indian History and Culture, New Delhi, 1974. |
| 39 | Narasimha Murthy A.v. | - Archeology of Karnataka, 1978.<br>- The currency of Karnataka, 1997.<br>- The Coins of Karnataka, Mysore, 1975.<br>- |
| 40 | Panchamukhi R.S. | Archaeology of Karnataka, Dharwad, 1953. |
| 41 | Percy Brown | Indian Architecture, Bombay, 1942. |
| 42 | Rajashekhar | Karnatataka Architecture, Dharwad, 1985. |
| 43 | Ramesh K.V. | Corpus of Gangas Inscriptions, Delhi, 1984. |
| 44 | Rangaraju N.S. | Hoysala Temple in Mandya & Tumkur Dist. Myhsore, 1998. |

45 Rice B.L. — Mysore and Coorg from Inscription, London, 1909

46 Ramasharma M.H. — The History of the Vijayanagara empire, Bombay, 1985

47 Ramachandra Rao S.K. — Indian Temple a Background, Bangalore, 1980

48 Rea Alexander — Chalukyam Architecture, Delhi, 1970.

49 Saletore B.A. — Vijayanagara Art, Delhi, 1982.

50 Settar S.
- Hoysala Temple, Bangalore, 1992.
- Hoysala Sculpture in National Museaum Copenhagen, 1975

51 Sheik Ali B.
- History of the Western Ganga, 1976.
- Inscription of the western Gangas, 1984.

52 Sharma I.K. — Temple of the Gangas of Karnataka, Delhi, 1993.

53 Sharma S.R. — Jainism and Karnataka Culture, Dharwad, 1940.

54 Saletore B.A.
- Vijayanagar Art, 1982.
- Social and Political life in Vijayanagara Empire, Madras, 1934.
- Ancient Karnataka, Vol.1, 1936.

55 Srikanta Shastry S. — Sources of Karnataka, Vol.1 & 5, Mysore 1940

56 Suryanath Kamath — A coins History of Karnataka, Bangalore, 2002

57 Venkatesha Iyengar M. — Popular Culture in Karnataka, Bangalore, 1937.

# JOURNALS

## English


1. Annual of the Bhandarkar oriental Research institute Poona.
2. Bharatiya Vidya, Bombay
3. Half yearly journal of the Mysore University (Arts) Mysore.
4. Indian antiquary Bombay.
5. Journal of the Indian History, Trivandrum
6. Journal of the Karnataka University, Dharwad.
7. Journal of the Madras University, Madras,
8. Journal of the Oriented Research, Madras.
9. Proceedings of the Indian History Congress.
10. Proceedings of the Karnataka History, Congress.
11. Quarterly journal of the Mythic Society, Bnagalore.

# ನಕ್ಷೆಗಳು

## ಕರ್ನಾಟಕದ ನಕ್ಷೆ



**ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು**



# ಛಾಯಾಚಿತ್ರಗಳು



ತ್ರಿಯಂಬಕೇಶ್ವರ ದೇವಾಲಯ ಮುಂಭಾಗದ ಮಂಟಪ (ಚಿತ್ರಸಂಖ್ಯೆ–1)



ತ್ರಿಯಂಬಕೇಶ್ವರ ದೇವಾಲಯದಲ್ಲಿರುವ ಶಾಸನಗಳು (ಚಿತ್ರಸಂಖ್ಯೆ–2)



ತ್ರಿಯಂಬಕೇಶ್ವರ ದೇವಾಲಯದ ಗರ್ಭಗುಡಿ ಮತ್ತು ನವರಂಗ (ಚಿತ್ರಸಂಖ್ಯೆ–3)



ತ್ರಿಯಂಬಕೇಶ್ವರ ದೇವಾಲಯದಲ್ಲಿರುವ
ಷಣ್ಮುಖ (ಚಿತ್ರಸಂಖ್ಯೆ–4)



ತ್ರಿಯಂಬಕೇಶ್ವರ ದೇವಾಲಯದ
ಮುಂಭಾಗದಲ್ಲಿರುವ ದೀಪಸ್ತಂಭ
(ಚಿತ್ರಸಂಖ್ಯೆ–5)



ತ್ರಿಯಂಬಕೇಶ್ವರ ದೇವಾಲಯದಲ್ಲಿರುವ ಕಲ್ಲಿನಮಂಟಪ (ಚಿತ್ರಸಂಖ್ಯೆ–6)



ತ್ರಿಯಂಬಕಪುರದ ಪಾರ್ವತಮ್ಮ ದೇವಾಲಯದ ನವರಂಗ (ಚಿತ್ರಸಂಖ್ಯೆ–7)



ಹಸಗೂಲಿ ಶಾಸನ (ಚಿತ್ರಸಂಖ್ಯೆ–೮)




ಹಸಗೂಲಿ ಸಿದ್ಧರಾಮೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–೯)



ಹಸಗೂಲಿ ಸಿದ್ಧರಾಮೇಶ್ವರ ದೇವಾಲಯದ ನವರಂಗದ ಮಂಟಪ (ಚಿತ್ರಸಂಖ್ಯೆ-10)



ಹಸಗೂಲಿ ಸಿದ್ಧರಾಮೇಶ್ವರ ದೇವಾಲಯದ ಮಹಿಷಮರ್ದಿನಿ ಶಿಲ್ಪ (ಚಿತ್ರಸಂಖ್ಯೆ-11)



ಹಸಗೂಲಿ ಸಿದ್ಧರಾಮೇಶ್ವರ ದೇವಾಲಯದಲ್ಲಿರುವ ಉಮಾಮಹೇಶ್ವರ ಶಿಲ್ಪ (ಚಿತ್ರಸಂಖ್ಯೆ-12)





ಹಸಗೂಲಿ ಸಿದ್ಧರಾಮೇಶ್ವರ ದೇವಾಲಯದ ಸೂರ್ಯಶಿಲ್ಪ (ಚಿತ್ರಸಂಖ್ಯೆ-13)

ಹಸಗೂಲಿ ಸಿದ್ಧರಾಮೇಶ್ವರ ದೇವಾಲಯದ ಶಂಕರನಾರಾಯಣ ಶಿಲ್ಪ (ಚಿತ್ರಸಂಖ್ಯೆ-14)






ಮಳವಳ್ಳಿ ಬಸವೇಶ್ವರ ದೇವಾಲಯ (ಚಿತ್ರಸಂಖ್ಯೆ-15)

ಮಳವಳ್ಳಿ ಶಾಸನ (ಚಿತ್ರಸಂಖ್ಯೆ-16)



ಮಂಚಹಳ್ಳಿ ನಾಗಲಿಂಗಸ್ವಾಮಿ ಗವಿ (ಚಿತ್ರಸಂಖ್ಯೆ-17)




ಮಂಚಹಳ್ಳಿ ದೇವಾಲಯದ ಶಿಲ್ಪಗಳು (ಚಿತ್ರಸಂಖ್ಯೆ-18)



ಮಂಚಹಳ್ಳಿ ಕೆರೆದಂಡೆಯಲ್ಲಿರುವ ಬೀರೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-19)



ರಾಘವಪುರ ಶಾಸನ (ಚಿತ್ರಸಂಖ್ಯೆ-20)



ರಾಘವಪುರ ರಾಮೇಶ್ವರ ದೇವಾಲಯ (ಚಿತ್ರಸಂಖ್ಯೆ-21)



ಹಿರಿಕಾಟಿ ಚಂದ್ರಮೌಳೇಶ್ವರ ದೇವಾಲಯ (ಚಿತ್ರಸಂಖ್ಯೆ-22)



ಹಿರಿಕಾಟಿ ಭೈರವ ಶಿಲ್ಪ ಮತ್ತು ಇತರ ಶಿಲ್ಪಗಳು (ಚಿತ್ರಸಂಖ್ಯೆ-23)



ಚಿಕ್ಕಾಟಿ ಚಂದ್ರಮೌಳೇಶ್ವರ ದೇವಾಲಯದ ನವರಂಗ (ಚಿತ್ರಸಂಖ್ಯೆ-24)




ಚಿಕ್ಕಾಟಿ ಚಂದ್ರಮೌಳೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-25)



ತೊಂಡವಾಡಿಯಲ್ಲಿರುವ ಶಂಕರೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–26)



ತೊಂಡವಾಡಿಯಲ್ಲಿರುವ ಶಂಕರೇಶ್ವರ ದೇವಾಲಯದ ನವರಂಗ (ಚಿತ್ರಸಂಖ್ಯೆ–27)



ಕಂದೇಗಾಲ ಸೋಮೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–28)



ಸಪ್ತಮಾತೃಕೆಯ ಶಿಲ್ಪ – ಕಂದೇಗಾಲ (ಚಿತ್ರಸಂಖ್ಯೆ-29)



ಕಂದೇಗಾಲ ಸೋಮೇಶ್ವರ ದೇವಾಲಯದಲ್ಲಿರುವ ಬಿಡಿಶಿಲ್ಪಗಳು (ಚಿತ್ರಸಂಖ್ಯೆ-30)



ಕಂದೇಗಾಲ ಸೋಮೇಶ್ವರ ದೇವಾಲಯದ ನವರಂಗ (ಚಿತ್ರಸಂಖ್ಯೆ-31)



ಕಂದೇಗಾಲ ಸೋಮೇಶ್ವರ ದೇವಾಲಯದ ತಪ್ಪಲಿನಲ್ಲಿರುವ ಕಲ್ಲಿನಮಂಟಪ (ಚಿತ್ರಸಂಖ್ಯೆ-32)



ಕಂದೇಗಾಲ ಸೋಮೇಶ್ವರ ದೇವಾಲಯದ ರಥೋತ್ಸವ (ಚಿತ್ರಸಂಖ್ಯೆ-33)



ಕಂದೇಗಾಲ ಸೋಮೇಶ್ವರ ದೇವಾಲಯದ ರಥೋತ್ಸವ (ಚಿತ್ರಸಂಖ್ಯೆ-33ಎ)



**ಕೆಲಸೂರು ಮಹಾಲಿಂಗೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–34)**



**ತೆರಕಣಾಂಬಿ ಮೂಲಸ್ಥಾನೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–35)**



**ತೆರಕಣಾಂಬಿ ವೀರಭದ್ರೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–36)**



**ಅರೆಪುರ ಮಲೆಮಹದೇಶ್ವರ ದೇವಾಲಯ (ಚಿತ್ರಸಂಖ್ಯೆ-37)**



**ನಿಟ್ರೆ ಮಲ್ಲಿಕಾರ್ಜುನ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-38)**



**ನಿಟ್ರೆ ಮಲ್ಲಿಕಾರ್ಜುನ ದೇವಾಲಯದ ಒಳನೋಟ (ಚಿತ್ರಸಂಖ್ಯೆ-39)**



ಕುಣಗಾಲ ಶ್ರೀನಲ್ಲಿತಾಳ ಬಸವೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-40)



ಸೋಮಹಳ್ಳಿ ರಾಮಲಿಂಗೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-41)



ಕಬ್ಬಹಳ್ಳಿ ಶಿವಾಲಯ (ಚಿತ್ರಸಂಖ್ಯೆ-42)



**ಕಬ್ಬಹಳ್ಳಿ ಬಸವೇಶ್ವರ ದೇವಾಲಯ (ಚಿತ್ರಸಂಖ್ಯೆ–43)**




**ಸಂಪಿಗೆಪುರ ಅರ್ಕೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–44)**



**ಸಂಪಿಗೆಪುರ ಅರ್ಕೆಶ್ವರ ದೇವಾಲಯದಲ್ಲಿರುವ ಸಪ್ತಮಾತೃಕೆಯರ ಶಿಲ್ಪ (ಚಿತ್ರಸಂಖ್ಯೆ–45)**



ಹಳ್ಳದಮಾದಹಳ್ಳಿ ಸೋಮೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-46)



ಹಳ್ಳದಮಾದಹಳ್ಳಿ ಸೋಮೇಶ್ವರ ದೇವಾಲಯದ ನವರಂಗ (ಚಿತ್ರಸಂಖ್ಯೆ-47)



ಹಂಗಳ ಬಸವೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-48)




ವೀರನಪುರ ವೀರಭದ್ರೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–49)



ವೀರನಪುರ ಕೆರೆಯ ಹತ್ತಿರುವಿರುವ ಮಂಟಪ (ಚಿತ್ರಸಂಖ್ಯೆ–50)



ಗುಂಡ್ಲುಪೇಟೆ ಪಟ್ಟಣದಲ್ಲಿರುವ ಈಶ್ವರ ದೇವಾಲಯ (ಚಿತ್ರಸಂಖ್ಯೆ–51)



**ಗುಂಡ್ಲುಪೇಟೆ ಪಟ್ಟಣದ ರುದ್ರಭೂಮಿ ಹತ್ತಿರವಿರುವ ನಂದಿಮಂಟಪ (ಚಿತ್ರಸಂಖ್ಯೆ–52)**



**ಹೆಗ್ಗವಾಡಿ ಶಿವಶಂಕರ ದೇವಾಲಯ (ಚಿತ್ರಸಂಖ್ಯೆ–53)**



**ಬೊಮ್ಮಲಾಪುರ ಪಟ್ಟದರಾಣಿ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–54)**



**ಶಿವಪುರ – ಶಿವಾಲಯ (ಚಿತ್ರಸಂಖ್ಯೆ–55)**



**ಶಿವಪುರ – ನಂದಿಮಂಟಪ**
**(ಚಿತ್ರಸಂಖ್ಯೆ–55ಎ)**



**ಕೋಡಹಳ್ಳಿ ಮಲೆಮಹದೇಶ್ವರ ದೇವಾಲಯ**
**(ಚಿತ್ರಸಂಖ್ಯೆ–56)**



ಹೊನ್ನೇಗೌಡನಹಳ್ಳ ರಾಮಲಿಂಗೇಶ್ವರ ದೇವಾಲಯ (ಚಿತ್ರಸಂಖ್ಯೆ-57)




ಚನ್ನಮಲ್ಲಿಪುರ – ಶಿವದೇವಾಲಯ (ಚಿತ್ರಸಂಖ್ಯೆ-58)



ಗುಂಡ್ಲುಪೇಟೆ ರಾಮೇಶ್ವರ ದೇವಾಲಯದ ನವರಂಗದ ಮಂಟಪ (ಚಿತ್ರಸಂಖ್ಯೆ-60)



**ಗುಂಡ್ಲುಪೇಟೆ ರಾಮೇಶ್ವರ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-61)**



**ತೆರಕಣಾಂಬಿ ಲಕ್ಷ್ಮೀ ವರದರಾಜ ದೇವಾಲಯದಲ್ಲಿರುವ ಆಳ್ವಾರರ ಶಿಲ್ಪಗಳು (ಚಿತ್ರಸಂಖ್ಯೆ-62)**




**ಗುಂಡ್ಲುಪೇಟೆ ವಿಜಯನಾರಾಯಣ ದೇವಾಲಯದಲ್ಲಿರುವ ಆಳ್ವಾರರ ಶಿಲ್ಪಗಳು (ಚಿತ್ರಸಂಖ್ಯೆ-62ಎ)**



ಗುಂಡ್ಲುಪೇಟೆ ವಿಜಯನಾರಾಯಣ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-63)



ಗುಂಡ್ಲುಪೇಟೆ ವಿಜಯನಾರಾಯಣ ಶಿಲ್ಪ (ಚಿತ್ರಸಂಖ್ಯೆ-64)



ಗುಂಡ್ಲುಪೇಟೆ ವಿಜಯನಾರಾಯಣ ದೇವಾಲಯದ ಆಳ್ವಾರರ ಶಿಲ್ಪಗಳು (ಚಿತ್ರಸಂಖ್ಯೆ-65)



ಗುಂಡ್ಲುಪೇಟೆ ವಿಜಯನಾರಾಯಣ ದೇವಾಲಯದ ರಥಸಪ್ತಮಿ ರಥೋತ್ಸವ (ಚಿತ್ರಸಂಖ್ಯೆ-66)



ಗುಂಡ್ಲುಪೇಟೆ ಪರವಾಸು ದೇವಾಲಯದ ಹೊರನೋಟ (ಚಿತ್ರಸಂಖ್ಯೆ-67)



ಗುಂಡ್ಲುಪೇಟೆ ಪರವಾಸು ದೇವಾಲಯದ ನವರಂಗದ ಮಂಟಪ (ಚಿತ್ರಸಂಖ್ಯೆ-68)



**ಗುಂಡ್ಲುಪೇಟೆ ಪರವಾಸು ದೇವಾಲಯದ ಮುಂದಿರುವ ಕಲ್ಲಿನ ಮಂಟಪ (ಚಿತ್ರಸಂಖ್ಯೆ-69)**



**ಗುಂಡ್ಲುಪೇಟೆ ಪರವಾಸು ದೇವಾಲಯದ ಮುಂಭಾಗದಲ್ಲಿರುವ ಕಲ್ಯಾಣಿ (ಚಿತ್ರಸಂಖ್ಯೆ-69ಎ)**



**ಕಮಲವಲ್ಲಿ ದೇವಾಲಯ – ಗುಂಡ್ಲುಪೇಟೆ (ಚಿತ್ರಸಂಖ್ಯೆ-70)**



ತೆರಕಣಾಂಬಿ ಲಕ್ಷ್ಮೀ ವರದರಾಜಸ್ವಾಮಿ ದೇವಾಲಯದ ಮುಂಭಾಗದ ಮಂಟಪ (ಚಿತ್ರಸಂಖ್ಯೆ–71)



ತೆರಕಣಾಂಬಿ ಲಕ್ಷ್ಮೀ ವರದರಾಜಸ್ವಾಮಿ ದೇವಾಲಯದಲ್ಲಿರುವ ಆಳ್ವಾರರ ಶಿಲ್ಪ (ಚಿತ್ರಸಂಖ್ಯೆ–72)



ತೆರಕಣಾಂಬಿ ಶ್ರೀ ವರದರಾಜಸ್ವಾಮಿ ದೇವಾಲಯದ ಮುಂಭಾಗದಲ್ಲಿರುವ ಗರುಡಗಂಬ (ಚಿತ್ರಸಂಖ್ಯೆ–73)



ತೆರಕಣಾಂಬಿ ಲಕ್ಷ್ಮೀ ವರದರಾಜಸ್ವಾಮಿ ರಥೋತ್ಸವ (ಚಿತ್ರಸಂಖ್ಯೆ–74)





**ತೆರಕಣಾಂಬಿ ಕಂಠೀರವ ಆಂಜನೇಯ ಸ್ವಾಮಿ (ಚಿತ್ರಸಂಖ್ಯೆ–75)**

**ಹುಲಗನ ಮುರಡಿ ವೆಂಕಟರಮಣಸ್ವಾಮಿ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–76)**



**ಹುಲಗನ ಮುರಡಿ ವೆಂಕಟರಮಣಸ್ವಾಮಿ ದೇವಾಲಯದ ನವರಂಗ (ಚಿತ್ರಸಂಖ್ಯೆ–77)**



**ಹುಲಗನ ಮುರಡಿ ವೆಂಕಟರಮಣಸ್ವಾಮಿ ದೇವಾಲಯದ ಆಳ್ವಾರರ ಶಿಲ್ಪ (ಚಿತ್ರಸಂಖ್ಯೆ–78)**



ಹುಲಗನ ಮುರಡಿ ವೆಂಕಟರಮಣಸ್ವಾಮಿ ದೇವಾಲಯದಲ್ಲಿರುವ ವಿಷ್ಣುವಿನ ಹಲವಾರು ಅವತಾರಗಳ ಗಾರೆಶಿಲ್ಪಗಳು (ಚಿತ್ರಸಂಖ್ಯೆ–79)



ಹುಲಗನ ಮುರಡಿ ವೆಂಕಟರಮಣಸ್ವಾಮಿ ದೇವಾಲಯದ ದ್ವಾರಮಂಟಪ (ಚಿತ್ರಸಂಖ್ಯೆ–80)



ಹುಲಗನ ಮುರಡಿ ವೆಂಕಟರಮಣಸ್ವಾಮಿ ದೇವಾಲಯದ ರಥೋತ್ಸವ (ಚಿತ್ರಸಂಖ್ಯೆ–81)



ತೆರಕಣಾಂಬಿ ವೀರಾಂಜನೇಯಸ್ವಾಮಿ ದೇವಾಲಯ (ಚಿತ್ರಸಂಖ್ಯೆ–82)



ತೆರಕಣಾಂಬಿ ಹಂಡೆಗೋಪಾಲಸ್ವಾಮಿ ದೇವಾಲಯ (ಚಿತ್ರಸಂಖ್ಯೆ–83)



ತೊಂಡವಾಡಿ ವರದರಾಜಸ್ವಾಮಿ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-84)



ಕಮರಹಳ್ಳಿ ವೆಂಕಟರಮಣಸ್ವಾಮಿ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-85)



ಪಡಗೂರು ವೀರಾಂಜನೇಯಸ್ವಾಮಿ
(ಚಿತ್ರಸಂಖ್ಯೆ-86)



ಹೊರೆಯಾಲ ರಂಗನಾಥಸ್ವಾಮಿ
(ಚಿತ್ರಸಂಖ್ಯೆ-87)



**ನಿಟ್ರೆ ಲಕ್ಷ್ಮೀ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–೮೮)**



**ಕುಲಗಾಣದ ವಾಸುದೇವಾಲಯದ ಹೊರನೋಟ (ಚಿತ್ರಸಂಖ್ಯೆ–೮೯)**




**ಸೀಗವಾಡಿ ಚನ್ನಿಗರಾಯ ಅಥವಾ ಚಲುವನಾರಾಯಣ ಸ್ವಾಮಿ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–೯೦)**



**ಕಬ್ಬಹಳ್ಳಿ ಚಲುವನಾರಾಯಣಸ್ವಾಮಿ ದೇವಾಲಯದ ನವರಂಗ (ಚಿತ್ರಸಂಖ್ಯೆ–91)**





**ಹಂಗಳ ವರದರಾಜಸ್ವಾಮಿ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–92)**



**ಹಂಗಳ ವರದರಾಜಸ್ವಾಮಿ ದೇವಾಲಯದ ನವರಂಗ (ಚಿತ್ರಸಂಖ್ಯೆ–93)**



ಹಿಮವದ್ ಗೋಪಾಲಸ್ವಾಮಿ ಜಾತ್ರೆ (ಚಿತ್ರಸಂಖ್ಯೆ-94)



ರಾಘವಪುರ – ಲಕ್ಷ್ಮೀಕಾಂತ ದೇವಾಲಯದ ಹೊರನೋಟ (ಚಿತ್ರಸಂಖ್ಯೆ-95)



ಕೋಟೆಕೆರೆ ತ್ರಿಕೂಟ ದೇವಾಲಯ (ಚಿತ್ರಸಂಖ್ಯೆ-96)



ಕಗ್ಗಳ–ವೈಷ್ಣವ ಸಂಕೇತ ದೇವಾಲಯ
(ಚಿತ್ರಸಂಖ್ಯೆ–97)



ಪಂಜನಹಳ್ಳಿ – ವೈಷ್ಣವ ಸಂಕೇತ ದೇವಾಲಯ
(ಚಿತ್ರಸಂಖ್ಯೆ–98)



ಗುಂಡ್ಲುಪೇಟೆ ಶ್ರೀರಾಮ ದೇವಾಲಯ
(ಚಿತ್ರಸಂಖ್ಯೆ–99)



ಗುಂಡ್ಲುಪೇಟೆ ವೀರಾಂಜನೇಯ
(ಚಿತ್ರಸಂಖ್ಯೆ–100)




**ಕೊಡಸೋಗೆ – ಚಲುವನಾರಾಯಣಸ್ವಾಮಿ ದೇವಾಲಯದ ಹೊರನೋಟ (ಚಿತ್ರಸಂಖ್ಯೆ–101)**



**ಭೀಮನಬೀಡು – ರಾಮಸ್ವಾಮಿ ದೇವಾಲಯ (ಚಿತ್ರಸಂಖ್ಯೆ–102)**



**ಮಲ್ಲಯ್ಯನಪುರ – ಲಕ್ಷ್ಮೀಕಾಂತ ದೇವಾಲಯ (ಚಿತ್ರಸಂಖ್ಯೆ–103)**




ಕೆಲಸೂರು ಜೈನ ಬಸದಿ ಹೊರನೋಟ (ಚಿತ್ರಸಂಖ್ಯೆ-104)




ಕೆಲಸೂರು ಜೈನ ಬಸದಿಯ ನವರಂಗದ ಮಂಟಪ (ಚಿತ್ರಸಂಖ್ಯೆ-105)



ಕೆಲಸೂರು ಜೈನ ಬಸದಿ
ಮೂರ್ತಿ ಆದಿನಾಥ ಶಿಲ್ಪ
(ಚಿತ್ರಸಂಖ್ಯೆ-106)



ಕೆಲಸೂರು ಜೈನ ಬಸದಿಯಲ್ಲಿರುವ ನಿಶಿಧಿ ಶಾಸನ ಕಲ್ಲುಗಳು
(ಚಿತ್ರಸಂಖ್ಯೆ-107)





ಕೆಲಸೂರು ಪಾರ್ಶ್ವನಾಥ ಶಿಲ್ಪ (ಚಿತ್ರಸಂಖ್ಯೆ-108)

ಸಪ್ತಮಾತೃಕೆಯ ಶಿಲ್ಪ-ಕಂದೇಗಾಲ (ಚಿತ್ರಸಂಖ್ಯೆ-109)



ಸಪ್ತಮಾತೃಕೆಯರ ಶಿಲ್ಪ – ನಿಟ್ರೆ (ಚಿತ್ರಸಂಖ್ಯೆ-109ಎ)



ಕೆಲಸೂರು ಚೌಡೇಶ್ವರಿ ದೇವಾಲಯ (ಚಿತ್ರಸಂಖ್ಯೆ-110)



ಕೆಲಸೂರು ಚೌಡೇಶ್ವರಿ ರಥೋತ್ಸವ (ಚಿತ್ರಸಂಖ್ಯೆ-110ಎ)



ಕೆಲಸೂರು ಚೌಡೇಶ್ವರಿ ದೇವಿಗೆ ಬಿಟ್ಟಿರುವ ಹರಕೆ ಕುರಿಮರಿಗಳು (ಚಿತ್ರಸಂಖ್ಯೆ-110ಬಿ)




ಕೆಲಸೂರು ಚೌಡೇಶ್ವರಿ ದೇವಿಗೆ ಹರಕೆ ಕುರಿಮರಿಗಳನ್ನು ಬಲಿಕೊಡುತ್ತಿರುವುದು (ಚಿತ್ರಸಂಖ್ಯೆ-110ಸಿ)



ಕೆಲಸೂರು ಗದ್ದೆಮಾರಮ್ಮ (ಚಿತ್ರಸಂಖ್ಯೆ-111)





ತ್ರಿಯಂಬಕಪುರ ತಮಿಳು ಸಂಸ್ಕೃತಿ ಮಾರಮ್ಮ (ಚಿತ್ರಸಂಖ್ಯೆ–112)



ನಿಟ್ರೆ ಮಹದೇವಮ್ಮನ ದೇವಾಲಯ (ಚಿತ್ರಸಂಖ್ಯೆ–113)



ನಿಟ್ರೆ ಮಹದೇವಮ್ಮನ ದೇವಾಲಯ (ಚಿತ್ರಸಂಖ್ಯೆ–113ಎ)



ಹಸಗೂಲಿ ಮಾರಮ್ಮ ಜಾತ್ರೆ
(ಚಿತ್ರಸಂಖ್ಯೆ–114)



ಗುಂಡ್ಲುಪೇಟೆ ಪ್ಲೇಗ್ ಮಾರಮ್ಮನ ಜಾತ್ರೆ (ಚಿತ್ರಸಂಖ್ಯೆ–115)




ಪ್ಲೇಗ್ ಮಾರಮ್ಮ ಜಾತ್ರೆಯಲ್ಲಿ ಕೊಂಡ
(ಚಿತ್ರಸಂಖ್ಯೆ–115ಎ)



ಗುಂಡ್ಲುಪೇಟೆ ಪಟ್ಟಲದಮ್ಮ
(ಚಿತ್ರಸಂಖ್ಯೆ–116)



ಗುಂಡ್ಲುಪೇಟೆ ಪಟ್ಟಲದಮ್ಮ ಜಾತ್ರೆಯ ಕಳಸ ಉತ್ಸವ
(ಚಿತ್ರಸಂಖ್ಯೆ-116ಎ)



ನಾಗದೇವತೆ



ನಾಗದೇವತೆ ಆಚರಣೆ (ಚಿತ್ರಸಂಖ್ಯೆ-117)



ಬಂಡೀಪುರದಲ್ಲಿ ಕಂಡುಬಂದಿರುವ ರಾವಳೇಶ್ವರ ಶಿಲ್ಪಗಳು (ಚಿತ್ರಸಂಖ್ಯೆ-118)



ಬಂಡೀಪುರದಲ್ಲಿ ಕಂಡುಬಂದಿರುವ
ಹತ್ತು ತಲೆಯುಳ್ಳ ರಾವಳೇಶ್ವರ
ಶಿಲ್ಪ (ಚಿತ್ರಸಂಖ್ಯೆ–118ಎ)



ತೊಂಡವಾಡಿ ಗ್ರಾಮದಲ್ಲಿ ಕಂಡುಬರುವ ಬೃಹತ್
ಶಿಲಾಸಂಸ್ಕೃತಿಗೆ ಸಂಬಂಧಪಟ್ಟಂತೆ ಅವಶೇಷಗಳು
(ಚಿತ್ರಸಂಖ್ಯೆ–119)



ಹಸಗೂಲಿ ಶಿಲಾಸಮಾಧಿ (ಚಿತ್ರಸಂಖ್ಯೆ–120)



ಆಲತ್ತೂರು ಶಿಲಾಸಮಾಧಿ (ಚಿತ್ರಸಂಖ್ಯೆ–121)



**ರಾಘವಪುರ ಶಿಲಾಸಮಾಧಿಗಳು (ಚಿತ್ರಸಂಖ್ಯೆ-122)**



**ರಾಘವಪುರ ಶಿಲಾಸಮಾಧಿಗಳು (ಚಿತ್ರಸಂಖ್ಯೆ-122ಎ)**



**ಕೆಲಸೂರು ಬೃಹತ್ ಶಿಲಾಸಮಾಧಿ (ಚಿತ್ರಸಂಖ್ಯೆ-123)**




ಕುಲಗಾಣ ಗ್ರಾಮದಲ್ಲಿ ಕಂಡುಬರುವ ಪ್ರಾಚೀನ ಅವಶೇಷ (ಚಿತ್ರಸಂಖ್ಯೆ-124)



ಪಡಗೂರು ಬೃಹತ್ ಶಿಲಾಸಮಾಧಿ (ಚಿತ್ರಸಂಖ್ಯೆ-125)



ಪಂಜನಹಳ್ಳಿಯಲ್ಲಿ ಕಂಡುಬರುವ ಪ್ರಾಚೀನ ಅವಶೇಷಗಳು (ಚಿತ್ರಸಂಖ್ಯೆ-126)



ಮಸಹಳ್ಳಿ ಗ್ರಾಮದಲ್ಲಿ ಕಂಡುಬರುವ ವೀರಗಲ್ಲು ಮತ್ತು ಇತರೆ ಬಿಡಿಶಿಲ್ಪಗಳು (ಚಿತ್ರಸಂಖ್ಯೆ–127)



ಮಸಹಳ್ಳಿ ಗ್ರಾಮದಲ್ಲಿ ಕಂಡುಬರುವ ವೀರಗಲ್ಲು ಮತ್ತು ಇತರೆ ಬಿಡಿಶಿಲ್ಪಗಳು (ಚಿತ್ರಸಂಖ್ಯೆ–127ಎ)



ಭೀಮನಬೀಡು ಗ್ರಾಮದಲ್ಲಿ ಕಂಡುಬರುವ ಬಿಡಿಶಿಲ್ಪಗಳು (ಚಿತ್ರಸಂಖ್ಯೆ–128)



ಗುಂಡ್ಲುಪೇಟೆ ಪಟ್ಟಣದ ಪಟ್ಟಲದಮ್ಮ ದೇವಸ್ಥಾನದ ಬಳಿ ಕಂಡುಬರುವ ವೀರಗಲ್ಲುಗಳು
(ಚಿತ್ರಸಂಖ್ಯೆ–129)



ತೊಂಡವಾಡಿಗ್ರಾಮದಲ್ಲಿ ಕಂಡುಬರುವ ವೀರಗಲ್ಲುಗಳು (ಚಿತ್ರಸಂಖ್ಯೆ–131)



ಕಂದೇಗಾಲ ಗ್ರಾಮದಲ್ಲಿ ಕಂಡುಬರುವ ವೀರಗಲ್ಲು, ಮಾಸ್ತಿಗಲ್ಲು ಇತರೆ ಬಿಡಿಶಿಲ್ಪಗಳು
(ಚಿತ್ರಸಂಖ್ಯೆ–132)



ಹಸಗೂಲಿ ಗ್ರಾಮದಲ್ಲಿರುವ ವೀರಗಲ್ಲು (ಚಿತ್ರಸಂಖ್ಯೆ-133)



ಹಸಗೂಲಿ ಗ್ರಾಮದಲ್ಲಿರುವ ವೀರಗಲ್ಲು (ಚಿತ್ರಸಂಖ್ಯೆ-133ಎ)



ಆಲತ್ತೂರು ವೀರಗಲ್ಲು (ಚಿತ್ರಸಂಖ್ಯೆ-134)



ಬೇಗೂರು ವೀರಗಲ್ಲು (ಚಿತ್ರಸಂಖ್ಯೆ-135)





ಪಡಗೂರು ವೀರಗಲ್ಲು (ಚಿತ್ರಸಂಖ್ಯೆ-136)

ಹೊರೆಯಾಲ ವೀರಗಲ್ಲು
(ಚಿತ್ರಸಂಖ್ಯೆ-137)



ಕೋಟೆಕೆರೆ ವೀರಗಲ್ಲು (ಚಿತ್ರಸಂಖ್ಯೆ-138)





ಮಲ್ಲಯ್ಯನಪುರ ಗ್ರಾಮದ ಮಹಿಳೆ
ಪ್ರಾಣಿಗಳನ್ನು ಬೇಟೆಯಾಡುತ್ತಿರುವ ಶಿಲ್ಪ
(ಚಿತ್ರಸಂಖ್ಯೆ-139)

ಮಲ್ಲಯ್ಯನಪುರ ಗ್ರಾಮದ ವೀರಗಲ್ಲು
(ಚಿತ್ರಸಂಖ್ಯೆ-139ಎ)



ಕಮರಹಳ್ಳಿ ಗ್ರಾಮದಲ್ಲಿ ಕಂಡುಬರುವ ವೀರಗಲ್ಲು ಮತ್ತು ಇತರ ಬಿಡಿಶಿಲ್ಪಗಳು (ಚಿತ್ರಸಂಖ್ಯೆ–140)



ಆಲತ್ತೂರು ಮಾಸ್ತಿಗಲ್ಲು (ಚಿತ್ರಸಂಖ್ಯೆ–141)



ಹಸಗೂಲಿ ಮಾಸ್ತಿಗಲ್ಲು (ಚಿತ್ರಸಂಖ್ಯೆ–142)



ಮಲ್ಲಯ್ಯನಪುರ ಮಾಸ್ತಿಗಲ್ಲು (ಚಿತ್ರಸಂಖ್ಯೆ–143)



ಯರಿಯೂರು ಮಾಸ್ತಿಗಲ್ಲು (ಚಿತ್ರಸಂಖ್ಯೆ–144)





ಯರಿಯೂರು ಗ್ರಾಮದಲ್ಲಿ ಕಂಡುಬರುವ ಇತರೆ ಬಿಡಿಶಿಲ್ಪಗಳು (ಚಿತ್ರಸಂಖ್ಯೆ–144ಎ)

ಸೂರ್ಯಶಿಲ್ಪ (ಚಿತ್ರಸಂಖ್ಯೆ–145)



ಸಪ್ತಮಾತೃಕೆಯರ ಶಿಲ್ಪ (ಚಿತ್ರಸಂಖ್ಯೆ–146)



ಮಕರತೋರಣ ವೀರಗಲ್ಲು – ತೆರಕಣಾಂಬಿ (ಚಿತ್ರಸಂಖ್ಯೆ–150)



**ಮಕರತೋರಣ ವೀರಗಲ್ಲು – ತೆರಕಣಾಂಬಿ (ಚಿತ್ರಸಂಖ್ಯೆ-150ಎ)**



**ನರಬಲಿ ಶಿಲ್ಪ – ತೆರಕಣಾಂಬಿ (ಚಿತ್ರಸಂಖ್ಯೆ-151)**



**ಭೀಮನಬೀಡು ಬಿಡಿಶಿಲ್ಪಗಳು (ಚಿತ್ರಸಂಖ್ಯೆ-152)**



ಪಂಜನಹಳ್ಳಿ–ವಿಶೇಷ ತಾಯಿ ಮಗು ಶಿಲ್ಪ (ಚಿತ್ರಸಂಖ್ಯೆ–154)



ಅಂಕಹಳ್ಳಿ – ಪ್ರಾಚೀನ ಶಿಲ್ಪಗಳು (ಚಿತ್ರಸಂಖ್ಯೆ–155)



ವಣಕನಪುರ ಜಾತ್ರೆ (ಚಿತ್ರಸಂಖ್ಯೆ–156)



ರಾಘವಪುರ ಪಟ್ಟಲದಮ್ಮನ ಜಾತ್ರೆ (ಚಿತ್ರಸಂಖ್ಯೆ–157)



ದೊಡ್ಡತೊಪ್ಪೂರು – ಶಿವಾಲಯ (ಚಿತ್ರಸಂಖ್ಯೆ–158)



ಗುಂಡ್ಲುಪೇಟೆ ಪಟ್ಟಣದ ಶಿವಾಲಯದಲ್ಲಿ
ಶಿವಲಿಂಗಕ್ಕೆ ವಿಶೇಷ ಅಲಂಕಾರ



ಕುಲಗಾಣ ಗ್ರಾಮದಲ್ಲಿ ಕಂಡುಬರುವ ವೀರಗಲ್ಲುಗಳು



ಕುಲಗಾಣ ಗ್ರಾಮದಲ್ಲಿ ಕಂಡುಬರುವ ಪ್ರಾಚೀನ ಅವಶೇಷಗಳು

* * * * * * * * * * * * * *